ಶ್ರೀಮದ್ವಾಲ್ಮೀಕಿರಾಮಾಯಣ

ಭಾರತ ದರ್ಶನ ಪ್ರಕಾಶನ

ಶ್ರೀ ರಾಮಃ ಶರಣಂ ಮಮ

ಶ್ರೀ ರಾಮಃ ಶರಣಂ ಮಮ

ತಪಃಸ್ವಾಧ್ಯಾಯನಿರತಂ ತಪಸ್ವೀ ವಾಗ್ವಿದಾಂ ವರಮ್।
ನಾರದಂ ಪರಿಪಪ್ರಚ್ಛ ವಾಲ್ಮೀಕಿರ್ಮುನಿಪುಙ್ಗವಮ್॥

ಬಾಲಕಾಂಡ

ಸಂಪುಟ ೧

ಭಾರತ ದರ್ಶನ ಪ್ರಕಾಶನ

ಶ್ರೀಮದ್ವಾಲ್ಮೀಕಿರಾಮಾಯಣ

ವಾಲ್ಮೀಕಿಗಿರಿಸಂಭೂತಾ
ರಾಮಸಾಗರಗಾಮಿನೀ ।
ಪುನಾತು ಭುವನಂ ಪುಣ್ಯಾ
ರಾಮಾಯಣಮಹಾನದೀ ॥

ಸಂಪುಟ 1

ಮುದ್ರಕರು:

ಭಾರತ ದರ್ಶನ ಮುದ್ರಣಾಲಯ

163, ಮಂಜುನಾಥ ರಸ್ತೆ, 2ನೇ ಬ್ಲಾಕ್, ತ್ಯಾಗರಾಜನಗರ,
ಬೆಂಗಳೂರು - 560 028
ದೂರವಾಣಿ: **080-26765381**

ಪ್ರಥಮ ಇ-ಮುದ್ರಣ ಜನವರಿ ೨೦೧೪

ಆದಿ ಅಧ್ಯಕ್ಷರು:

ಪರಮಪೂಜ್ಯ ಶ್ರೀ ಶ್ರೀ ರಂಗಪ್ರಿಯಮಹಾದೇಶಿಕಸ್ವಾಮಿಗಳವರು

ಆದಿ ವ್ಯವಸ್ಥಾಪಕ ಸಂಪಾದಕರು:

ದಿ|| ಕೆ.ಎಸ್. ಕೌಶಿಕ್ ('ವಿಶ್ವಾಮಿತ್ರ')

ಆದಿ ಸಂಪಾದಕರು:

ದಿ|| ವಿದ್ವಾನ್ ಹೆಚ್.ಎನ್. ರಂಗಸ್ವಾಮೀ

ಆದಿ ಸಂಪಾದಕರು:

ದಿ|| ವಿದ್ವಾನ್ ರಾಮೇಶ್ವರಾವಧಾನೀ

ಸಂಪಾದಕ ಮಂಡಲಿ:

ಶ್ರೀ ಶ್ರೀಹರಿ

ಶ್ರೀ ನೆ.ವೆಂ. ಶ್ರೀನಿವಾಸರಾಯ

ಶ್ರೀ ವಿ. ಸೂರ್ಯನಾರಾಯಣ್,M.A. B.Com., B.L.,

ಕೋಶಾಧ್ಯಕ್ಷರು

ವಿನಮ್ರವಚನಗಳು

ಪರಮಾತ್ಮನ ದಯೆಯಿಂದಲೂ ಗುರುಭಗವಂತನ ಆಶೀರ್ವಾದಗಳಿಂದಲೂ, ಸತ್ಪುರುಷರ ಸಹಕಾರ-ಸದಾಶಯಗಳಿಂದಲೂ ಶ್ರೀಮದ್ವಾಲ್ಮೀಕಿ ರಾಮಾಯಣದ ಪ್ರಥಮ ಕುಸುಮವನ್ನು ಭಗವಂತನ ಪಾದಾರವಿಂದಗಳಲ್ಲಿ ಅರ್ಪಿಸಿ ಪ್ರಸಾದರೂಪವಾದ ಈ ಪುಷ್ಪವನ್ನು ಗ್ರಾಹಕರ ಅಂಜಲಿಪುಟಗಳಲ್ಲಿಡುತ್ತಿದ್ದೇವೆ.

1965ರಲ್ಲಿಯೇ ರಾಮಾಯಣದ ಪ್ರಕಟಣೆಯನ್ನು ಪ್ರಾರಂಭಿಸಿದ್ದೆವು. ಏಳು ಸಂಪುಟಗಳನ್ನು ಹೊರತಂದು ಅಯೋಧ್ಯಾಕಾಂಡವನ್ನು ಮುಗಿಸಿ ವಿಜೃಂಭಣೆಯಿಂದ ಪಾದುಕಾಪಟ್ಟಾಭಿಷೇಕವನ್ನು ಮಾಡಿದ್ದಾಯಿತು. ಆದರೆ ದೈವಿಕವಾದ ಕಾರಣಗಳಿಂದಾಗಿ ಪ್ರಕಟಣೆಯನ್ನು ಮುಂದುವರಿಸಲು ಸಾಧ್ಯವಾಗಲಿಲ್ಲ. ಮಹಾಭಾರತವು ಮುಗಿದನಂತರ ರಾಮಾಯಣವು ಪ್ರಾರಂಭವಾಗಬೇಕೆಂಬುದು ದೈವಸಂಕಲ್ಪವೆಂದು ತೋರುತ್ತದೆ. ಏಕೆಂದರೆ : ಪುನಃ ನಾವು ಕ್ರೋಧನಸಂವತ್ಸರದ ಶ್ರೀರಾಮನವಮಿಯಿಂದ ಪ್ರಾರಂಭಿಸಬೇಕೆಂದು ಯೋಚಿಸಿದ್ದೆವು. ಅದೂ ಸಾಧ್ಯವಾಗಲಿಲ್ಲ. ಕಳೆದ ವರ್ಷ ಮಹಾಭಾರತವು ಮುಗಿದನಂತರವೇ ರಾಮಾಯಣದ ಪ್ರಕಟಣೆಯನ್ನು ಪ್ರಾರಂಭಿಸಲು ಸಾಧ್ಯವಾಯಿತು. ಶ್ರೀರಾಮನವಮಿಯ ದಿವಸವೇ ಈ ಮೊದಲ ಸಂಪುಟವನ್ನು ಪ್ರಕಾಶಿಸಬೇಕೆಂಬ ಹವಣಿಕೆಯಿತ್ತು. ಪರಮಾತ್ಮನ ಸಂಕಲ್ಪದಂತೆ ಇಂದು 26-4-1986ನೇ ಶುಭದಿನ ಈ ಸಂಪುಟವು ಪ್ರಕಾಶನವಾಗಿದೆ. ಈ ಪ್ರಕಟಣೆಯು ನಮ್ಮ ಹಿಂದಿನ ಪ್ರಕಟಣೆಯಂತಿಲ್ಲ. ಮಹಾಭಾರತದ ರೀತಿಯಲ್ಲೇ ರಾಮಾಯಣವೂ ಇರಬೇಕೆಂದು ಅನೇಕ ಗ್ರಾಹಕರು ಅಭಿಪ್ರಾಯಪಟ್ಟುದರಿಂದ ರಾಮಾಯಣವನ್ನು ಮಹಾಭಾರತದ ರೀತಿಯಲ್ಲಿಯೇ ಅನುವಾದಿಸಲಾಗಿದೆ. ರಾಮಾಯಣವು ಪಾರಾಯಣಪ್ರಧಾನವಾದ ಗ್ರಂಥವೂ ಆಗಿರುವುದರಿಂದ ಪಾರಾಯಣಕ್ಕೆ ಅನುಕೂಲವಾಗುವಂತೆ ಮೂಲಶ್ಲೋಕಗಳನ್ನು ಪ್ರತ್ಯೇಕವಾಗಿ ಕೊಡಲಾಗಿದೆ. ವಿಶೇಷವಿಷಯಗಳನ್ನು ಪರಿಶಿಷ್ಟದಲ್ಲಿ ಕೊಡಲಾಗಿದೆ. ಇದು ವಾಚಕರಿಗೆ ಪ್ರಿಯವಾಗುವುದೆಂಬ ಭರವಸೆಯಿದೆ. ಸಂಪಾದಕ ಮಂಡಲಿಯವರು 3-4-1986ನೇ ಶನಿವಾರದಿಂದ 36 ದಿವಸಗಳ ಕಾಲ ಕಾಶಿ ಪ್ರಯಾಗ-ಬದರಿ ಮುಂತಾದ ಪುಣ್ಯಕ್ಷೇತ್ರಗಳಿಗೆ ಹೊರಟಿರುವುದರಿಂದ

2ನೆಯ ಸಂಪುಟವು ಹೊರಬರಲು ಸ್ವಲ್ಪ ಸಾವಕಾಶವಾಗಬಹುದು. ವಾಚಕರು ಬೇಸರಪಡಲಾರರೆಂದು ಭಾವಿಸಿದ್ದೇವೆ.

ಮಹಾಭಾರತದ ಹಿಂದಿನ ಸಂಪುಟಗಳು ಸತತವಾಗಿ ಪುನರ್ಮುದ್ರಣ ವಾಗುತ್ತಿವೆ. 32ನೆಯ ಸಂಪುಟವು ಮುದ್ರಣವಾದನಂತರ 7 ಹಳೆಯ ಸಂಪುಟಗಳು ಪುನರ್ಮುದ್ರಣವಾಗಿವೆ. ಪ್ರಸಕ್ತ 16 ಸಂಪುಟಗಳನ್ನು ಪುನ ರ್ಮುದ್ರಣಮಾಡಬೇಕಾಗಿದೆ. ಇದು ಹೀಗೆಯೇ ಬೆಳೆಯುತ್ತಾ ಹೋಗುತ್ತದೆ. ಪುನರ್ಮುದ್ರಣವೂ ಆಗುತ್ತಲೇ ಇರುತ್ತದೆ. ಗ್ರಾಹಕರ ಸಂಖ್ಯೆಯೂ ಹೆಚ್ಚುತ್ತಿದೆ. ಒಂದು ಲಕ್ಷ ಗ್ರಾಹಕರನ್ನು ಸಂಗ್ರಹಿಸಬೇಕೆನ್ನುವ ನಮ್ಮ ಕನಸು ಪರಮಾತ್ಮನ ದಯೆಯಿಂದ ನನಸಾದೀತು.

ಈ ಹಿಂದೆಯೇ ಸಿಂಡಿಕೇಟ್ ಬ್ಯಾಂಕಿನವರು ಸಾಲದ ಸೌಲಭ್ಯವನ್ನು ನವೀಕರಿಸಿದ್ದರು. ಈಗ ಕೆನರಾ ಬ್ಯಾಂಕಿನವರೂ ಸುಲಭಕಂತುಗಳ ಸಾಲ ಸೌಲಭ್ಯವನ್ನು ನವೀಕರಿಸಿರುತ್ತಾರೆ. ನ್ಯಾಷನಲ್ ಕೋ-ಆಪರೇಟಿವ್ ಬ್ಯಾಂಕ್, ಸರ್. ಎಂ. ವಿಶ್ವೇಶ್ವರಯ್ಯ ಕೋ-ಆಪರೇಟಿವ್ ಬ್ಯಾಂಕ್‌ನವರೂ ಸಹ ಸಾಲ ಸೌಲಭ್ಯವನ್ನು ಮುಂದುವರಿಸಿರುತ್ತಾರೆ. ಇವರೆಲ್ಲರಿಗೂ ನಮ್ಮ ಅಭಿನಂದನೆ ಗಳು. ಕಾರ್ಪೊರೇಷನ್ ಬ್ಯಾಂಕಿನವರು ಸಾಲದ ಸೌಲಭ್ಯವನ್ನು ನವೀಕರಿಸು ವುದಾಗಿ ಭರವಸೆ ನೀಡಿರುತ್ತಾರೆ. ಇಷ್ಟರಲ್ಲಿಯೇ ಅವರು ಇದನ್ನು ಕಾರ್ಯ ಗತಮಾಡುವರೆಂಬ ಭರವಸೆಯಿದೆ. ಕನ್ನಡ ಬಂಧುಗಳೆಲ್ಲರೂ ಪರಮಪವಿತ್ರ ಗ್ರಂಥವಾದ ಮಹಾಭಾರತವನ್ನು ಓದಲು ಪರಮಾತ್ಮನು ಕಲ್ಪಿಸಿಕೊಟ್ಟಿರುವ ಸೌಕರ್ಯವಿದು. ಆದುದರಿಂದ ಪ್ರತಿಯೊಬ್ಬರೂ ಇದರ ಉಪಯೋಗವನ್ನು ಪಡೆದುಕೊಳ್ಳಬೇಕೆಂದು ಕಳಕಳಿಯಿಂದ ಪ್ರಾರ್ಥಿಸುತ್ತೇವೆ.

ಮುದ್ರಣಕಾರ್ಯವನ್ನು ತ್ವರಿತಗೊಳಿಸುವ ಮತ್ತು ಕಾರ್ಯಕ್ಷೇತ್ರವನ್ನು ವಿಸ್ತರಿಸಿಕೊಳ್ಳುವ ಆಶಯದಿಂದ ಭಾರತ ದರ್ಶನಕ್ಕೆ ಪ್ರತ್ಯೇಕವಾದ ಕಾರ್ಯಾಲಯ-ಮುದ್ರಣಾಲಯಗಳನ್ನು ಕೆನರಾ ಬ್ಯಾಂಕ್ ಸಾಲದ ನೆರವಿನಿಂದ ಕಟ್ಟಿಸಲಾಗಿದೆ. ಇದರ ಶುಭಪ್ರವೇಶೋತ್ಸವವು 27-4-1986ನೇ ಭಾನುವಾರ ನಡೆಯಲಿದೆ. ಅಭಿಮಾನಿಗಳೆಲ್ಲರೂ ನೂತನ ಕಾರ್ಯಾಲಯಕ್ಕೆ ಭೇಟಿ ಕೊಟ್ಟು ಪ್ರೋತ್ಸಾಹಿಸಬೇಕಾಗಿ ವಿನಂತಿಸುತ್ತೇವೆ.

ಉದಾರಿಗಳೂ, ನಿಃಸ್ಪೃಹರೂ, ದಯಾಮಯರೂ, ಸರಳರೂ ಆದ ಸಂಪಾದಕಮಂಡಲಿಯ ವಿದ್ವಾಂಸರು ಶ್ರೀಮದ್ವಾಲ್ಮೀಕಿರಾಮಾಯಣವನ್ನು ಸಂಪಾದಿಸಿಕೊಡುವುದಾಗಿ ಒಪ್ಪಿರುವುದು ಕನ್ನಡಿಗರ ಸುಕೃತವೇ ಸರಿ. ಅವರೆಲ್ಲರಿಗೂ ನಮ್ಮ ಹೃತ್ಪೂರ್ವಕ ವಂದನೆಗಳು.

ಭಾರತ ದರ್ಶನ ಪ್ರಕಾಶನದ ಅಧ್ಯಕ್ಷರಾದ ವಿದ್ವಾನ್ ಹೆಚ್. ಎಸ್. ವರದದೇಶಿಕಾಚಾರ್ಯರಂಗಪ್ರಿಯರು ಈ ಸಂಪುಟಕ್ಕೆ ವಿದ್ವತ್ಪೂರ್ಣವಾದ ಮುನ್ನುಡಿಯನ್ನು ಬರೆದುಕೊಟ್ಟು ಉಪಕರಿಸಿರುತ್ತಾರೆ. ಇವರಿಗೂ ನಮ್ಮ ಹೃತ್ಪೂರ್ವಕ ವಂದನೆಗಳು.

ಮಹಾಭಾರತದ ಗ್ರಾಹಕರೆಲ್ಲರೂ ರಾಮಾಯಣಕ್ಕೂ ಗ್ರಾಹಕರಾಗಿ ಪ್ರೋತ್ಸಾಹಿಸಬೇಕಾಗಿ ಪ್ರಾರ್ಥಿಸುತ್ತೇವೆ. ಈ ಗ್ರಾಹಕರ ಸಲುವಾಗಿಯೇ ಪೂರ್ಣಮಾಲೆಯ ಚಂದಾಹಣವನ್ನು ಹೆಚ್ಚಿಸಿರುವುದಿಲ್ಲ. ಕಂತುಗಳಲ್ಲಿ ಹಣ ಪಡೆಯುವುದನ್ನೂ ಇನ್ನೂ ಕೆಲವು ದಿನಗಳು ಮುಂದುವರಿಸಲು ನಿಶ್ಚಯಿಸ ಲಾಗಿದೆ. ಈ ಅವಕಾಶವನ್ನು ಮಹಾಭಾರತದ ಗ್ರಾಹಕರು ಕಳೆದುಕೊಳ್ಳು ವುದಿಲ್ಲವೆಂಬ ವಿಶ್ವಾಸವಿದೆ.

ಮಹಾಭಾರತದ 32ನೆಯ ಹಾಗೂ ಕಡೆಯ ಸಂಪುಟದ ಪ್ರಕಾಶನ ಸಮಾರಂಭವು 1985ನೆಯ ಜುಲೈ 14ರಂದು ಎನ್. ಆರ್. ಕಾಲೋನಿ ಶ್ರೀರಾಮಮಂದಿರದಲ್ಲಿ ಪರಮಾದ್ಭುತವಾಗಿ ನಡೆಯಿತು. ನ್ಯಾಯಮೂರ್ತಿ ಶ್ರೀ ಎಂ. ರಾಮಾಜೋಯಿಸ್‌ರವರು ಸಂಪುಟವನ್ನು ಪ್ರಕಾಶನಗೊಳಿಸಿದರು. ಸಂಪಾದಕಮಂಡಲಿಯ ವಿದ್ವಾಂಸರನ್ನು ಜಗದ್ಗುರು ಶಂಕರಾಚಾರ್ಯ ಶ್ರೀ ಶ್ರೀ ರಾಘವೇಂದ್ರಭಾರತೀ ಸ್ವಾಮಿಗಳವರು–ರಾಮಚಂದ್ರಾಪುರಮಠ ಇವರು ಆಶೀರ್ವಾದಪೂರ್ವಕವಾಗಿ ಕಳುಹಿಸಿಕೊಟ್ಟಿದ್ದ ಸುವರ್ಣಮಂತ್ರಾಕ್ಷತೆಯೊಡನೆ ಸನ್ಮಾನಿಸಲಾಯಿತು. ಹದಿನಾಲ್ಕು ದಿವಸಗಳ ಮಹಾಮಂಗಳ ಮಹೋತ್ಸವವು ಪರಮಾತ್ಮನ ದಯೆಯಿಂದ ಚಿರಸ್ಮರಣೀಯವಾಗಿ ನಡೆಯಿತು.

ಶ್ರೀಮದ್ವಾಲ್ಮೀಕಿರಾಮಾಯಣಕ್ಕೂ ಗ್ರಾಹಕರನ್ನು ಮಾಡಿಕೊಡಲು ಅನೇಕರು ಪ್ರಯತ್ನಿಸುತ್ತಿದ್ದಾರೆ. ಅನೇಕರು ಗ್ರಾಹಕರನ್ನು ಮಾಡಿಕೊಟ್ಟಿದ್ದಾರೆ.

ನಾನಾ ರೀತಿಯಲ್ಲಿ ಭಾರತ ದರ್ಶನ ಸಂಸ್ಥೆಗೆ ಸೇವೆಯನ್ನು ಸಲ್ಲಿಸುತ್ತಿದ್ದಾರೆ. ಇವರೆಲ್ಲರಿಗೂ ಭಗವಂತನು ಆಯುರಾರೋಗ್ಯ-ಐಶ್ವರ್ಯಾದಿಗಳನ್ನಿತ್ತು ಕಾಪಾಡಲೆಂಬ ಪ್ರಾರ್ಥನೆಯೊಡನೆ ವಿರಮಿಸುವೆವು.

–ಪ್ರಕಾಶಕರು.

ದ್ವಿತೀಯಮುದ್ರಣದ ಪ್ರಸ್ತಾವನೆ

ಪರಮಾತ್ಮನ ದಯೆಯಿಂದ ಶ್ರೀಮದ್ವಾಲ್ಮೀಕಿರಾಮಾಯಣದ ಮೊದಲನೆಯ ಸಂಪುಟದ ಎರಡನೆಯ ಮುದ್ರಣವನ್ನು ಮುಗಿಸಿರುತ್ತೇವೆ. ಈ ಪ್ರಸ್ತಾವನೆಯನ್ನು ಬರೆಯುವ ವೇಳೆಗೆ ಸರಿಯಾಗಿ ರಾಮಾಯಣದ 2ನೆಯ ಸಂಪುಟವು ಮುಗಿದಿದೆ. ಮಹಾಭಾರತವನ್ನಾಗಲೀ ರಾಮಾಯಣವನ್ನಾಗಲೀ ಅರೆ-ಕೊರೆಯಾಗಿಯೇ ಕೊಡುವುದು ನಮ್ಮ ಸಂಸ್ಥೆಯ ವೈಶಿಷ್ಟ್ಯ. ಎಲ್ಲ ಸಂಪುಟಗಳನ್ನೂ ಒಟ್ಟಾಗಿ ಗ್ರಾಹಕರಿಗೆ ಒದಗಿಸುವ ದಿನವನ್ನು ಕಾಣುವೆವೋ ಇಲ್ಲವೋ ತಿಳಿಯದು. ಪರಮಾತ್ಮನ ದಯೆಯಿದ್ದರೆ ಆದೀತು. ಪುರುಷ ಪ್ರಯತ್ನದಲ್ಲಂತೂ ಆಗಲಾರದು. ಎಲ್ಲ ಸಂಪುಟಗಳೂ ಒಟ್ಟಾಗಿ ಸಿಕ್ಕಬೇಕಾದರೆ ನಾಲ್ಕಾರು ವರ್ಷಗಳಾದರೂ ಬೇಕಾಗಬಹುದು. ಹೀಗಿದ್ದರೂ ಸಂಸ್ಥೆಯ ಮೇಲೆ ವಿಶ್ವಾಸವಿಟ್ಟು ಗ್ರಾಹಕರಾಗುತ್ತಿದ್ದಾರೆ. ಕೊಟ್ಟ ಸಂಪುಟಗಳನ್ನೇ ತೆಗೆದುಕೊಂಡು ಹೋಗುತ್ತಿದ್ದಾರೆ. ಇದೇ ಪರಮಾತ್ಮನ ದಯೆ.

ಸಂಪಾದಕಮಂಡಲಿಯ ವಿದ್ವಾಂಸರು ಎಂದಿನಂತೆ ಈ ಸಂಪುಟದ ತಪ್ಪು-ಒಪ್ಪುಗಳನ್ನು ಪರಿಶೀಲಿಸಿಕೊಟ್ಟಿರುತ್ತಾರೆ. ಅವರಿಗೆ ನಮ್ಮ ಹೃತ್ಪೂರ್ವಕ ವಂದನೆಗಳು. ಈಗ ಮಹಾಭಾರತದ ಇಪ್ಪತ್ತೆರಡನೆಯ ಮತ್ತು ರಾಮಾಯಣದ ನಾಲ್ಕನೆಯ ಸಂಪುಟದ ಮುದ್ರಣವನ್ನು ಪ್ರಾರಂಭಿಸಲಾಗಿದೆ. ಸಾಧ್ಯವಾದಷ್ಟು ಬೇಗ ಮುಗಿಸಬೇಕೆನ್ನುವ ಆಶಯದಿಂದಿರುತ್ತೇವೆ. ಇದಕ್ಕಾಗಿ ನಾವೆಲ್ಲರೂ ಪರಮಾತ್ಮನನ್ನು ಪ್ರಾರ್ಥಿಸಬೇಕಾಗಿದೆ.

–ಪ್ರಕಾಶಕರು.

॥ಶ್ರೀರಂಗಸದ್ಗುರವೇ ನಮಃ॥
॥ಶ್ರೀರಾಮಚಂದ್ರಪರಬ್ರಹ್ಮಣೇ ನಮಃ॥

ಪೀಠಿಕೆ

ಶ್ರೀಮನ್ಮಹಾಭಾರತದ ಕನ್ನಡ ಅನುವಾದವನ್ನು ಸಮಗ್ರವಾಗಿ ಪ್ರಕಟಪಡಿಸಿ ಯಶಸ್ಸು ಗಳಿಸಿರುವ ಭಾರತ ದರ್ಶನ ಸಂಸ್ಥೆಯು ಈಗ ಶ್ರೀಮದ್ರಾಮಾಯಣದ ಮೂಲಗ್ರಂಥಸಹಿತ ಕನ್ನಡ ಭಾಷಾಂತರವನ್ನು ವ್ಯಾಸ-ವಾಲ್ಮೀಕಿಗಳನ್ನು ಕುರಿತ ಪ್ರಣಾಮ-ಪುಷ್ಪಾಂಜಲಿಗಳೊಡನೆ ಕೈಗೊಂಡು, ಆದಿಮಂಗಲವಾಗಿರುವ ಈ ಬಾಲಕಾಂಡದ ಸಂಪುಟವನ್ನು ಸಮರ್ಪಿಸುತ್ತಿದೆ. ಇದು ತುಂಬಾ ಉಚಿತವಾದ ಕಾರ್ಯ.

ಭಾರತ ದರ್ಶನದ ಎರಡು ಕಣ್ಣುಗಳು

ಶ್ರೀಮದ್ರಾಮಾಯಣ ಮತ್ತು ಶ್ರೀಮನ್ಮಹಾಭಾರತ–ಇವೆರಡೂ ಭಾರತ ದರ್ಶನ ಮಾಡಲು ಸನಾತನ ಆರ್ಯಭಾರತೀಯಮಹರ್ಷಿಗಳು ನಮಗೆ ಕರುಣಿಸಿರುವ ಎರಡು ಕಣ್ಣುಗಳು ; ದಿವ್ಯನೇತ್ರಗಳು. ನೇತ್ರಪಾಟವ ಇರುವವರಿಗೆ ಒಂದೇ ಕಣ್ಣಿನಿಂದ ನೋಡಿದರೂ ದೃಶ್ಯವಸ್ತುವು ಕಾಣುತ್ತದೆ. ಆದರೆ ಎರಡೂ ಕಣ್ಣುಗಳಿಂದ ಅವಲೋಕನಮಾಡಿದರೆ ನೋಟದಲ್ಲಿ ಸೌಲಭ್ಯವುಂಟು ; ರಮಣೀಯತೆಯುಂಟು ; ಪರಿಪೂರ್ಣತೆ ಕೂಡಿಬರುತ್ತದೆ. ಇದಲ್ಲದೇ ಸಂಸ್ಥೆಯು ರಾಮಾಯಣದ ಭಾಷಾಂತರಕಾರ್ಯಕ್ಕೆ ಈ ಮೊದಲೇ ಕೈಹಾಕಿತ್ತು. ಅದನ್ನು ಪೂರ್ಣಗೊಳಿಸುವ ಹೊಣೆಗಾರಿಕೆಯೂ ಇದೆ. ಸನ್ಮಾರ್ಗದಲ್ಲಿ ಆರಂಭಿಸಿದ ಕಾರ್ಯವನ್ನು ಧೀರರು ಮಧ್ಯದಲ್ಲಿ ಕೈಬಿಡಬಾರದು–'ಪ್ರಾರಬ್ಧಮುತ್ತಮಗುಣಾ ನ ಪರಿತ್ಯಜನ್ತಿ!' ಮಂಗಲ ದೇವತೆಗೆ ಮಾಂಗಲ್ಯವಾಗಿರುವ ಶ್ರೀರಾಮಚಂದ್ರನು ಇದಕ್ಕೆ ಸಾಫಲ್ಯ ವನ್ನುಂಟುಮಾಡಲಿ ಎಂದು ನಮ್ಮ ಹಾರೈಕೆ.

ರಾಮಾಯಣ ಮತ್ತು ಮಹಾಭಾರತ–ಇವೆರಡೂ ತೋರುವ ನೋಟ ಒಂದೇ ಎಂದು ನಾವು ಪ್ರತಿಜ್ಞೆಮಾಡಿದೆವು. ಈ ಬಗೆಗೆ ಕೆಲವರು ಹೀಗೆ ಪ್ರಶ್ನಿಸುತ್ತಾರೆ :

'ರಾಮಾಯಣ, ಮಹಾಭಾರತ ಎರಡೂ ವೀರಗಾಥಾಕಾಲದ ಗ್ರಂಥಗಳೇ ಆದರೂ ರಾಮಾಯಣವು ಆರ್ಯಜನಾಂಗದ ಆದರ್ಶವನ್ನು ಸಾರುತ್ತದೆ.

ಮಹಾಭಾರತವು ಆರ್ಯ-ದ್ರಾವಿಡಸಂಗಮದಿಂದ ಬಂದ ಜೀವನದ ಮಾದರಿಯನ್ನು ಮುಂದಿಡುತ್ತದೆ. ರಾಮಾಯಣದ ವಸ್ತುವು ಕಲ್ಪಿತ ಕಥೆ. ಮಹಾಭಾರತವು ವಾಸ್ತವಿಕ ಜೀವನದ ಚಿತ್ರಣ. ರಾಮಾಯಣವು ಕಾವ್ಯ. ಮಹಾಭಾರತವು ಇತಿಹಾಸ. ಮೊದಲನೆಯದು ಕೋಮಲಶೈಲಿಯ ಕಾವ್ಯ. ಎರಡನೆಯದು ರೂಕ್ಷಶೈಲಿಯ ಪ್ರಬಂಧ. ರಾಮಾಯಣವು ಏಕಕರ್ತೃಕ. ಮಹಾಭಾರತವು ನಾನಾಕಾಲಮಾನಗಳಿಗೆ ಸೇರಿದ ಅನೇಕಲೇಖನಗಳ ಸೇರುವೆಯಿಂದ ಸಿದ್ಧವಾಗಿರುವ ಪದಾರ್ಥ. ಗ್ರಂಥದ ಆಕಾರದಲ್ಲಿ ರಾಮಾ ಯಣವು ವಾಮನಮೂರ್ತಿ. ಮಹಾಭಾರತವು ತ್ರಿವಿಕ್ರಮ. ಮೊದಲನೆ ಯದು ಉತ್ತರ ಭಾರತದ ಪೂರ್ವಭಾಗದ ಸಂಸ್ಕೃತಿ-ನಾಗರಿಕತೆಗಳನ್ನು ವರ್ಣಿಸುತ್ತದೆ. ಎರಡನೆಯದು ಪಶ್ಚಿಮಭಾಗದ ಸಂಸ್ಕೃತಿ-ನಾಗರಿಕತೆಗಳನ್ನು ವರ್ಣಿಸುತ್ತದೆ. ರಾಮಾಯಣವು ವರ್ಣಿಸುವುದು ಸೂರ್ಯವಂಶದ ಅರಸರ ಪ್ರತಾಪ-ಪ್ರಭಾವಗಳನ್ನು. ಮಹಾಭಾರತದಲ್ಲಿ ಪ್ರತಿಪಾದಿತವಾಗಿರುವುದು ಚಂದ್ರವಂಶದ ರಾಜರ ಪ್ರತಾಪ-ಪ್ರಭಾವಗಳು. ರಾಮಾಯಣವು ಒಂದು ಕುಟುಂಬ, ಒಂದು ರಾಜ್ಯದ ಕಥೆ. ಮಹಾಭಾರತವು ಒಂದು ವಿಶ್ವಕೋಶ.

ಕೃತಿಗಳಿಗೆ ಹೀಗೆ ಅಜಗಜಾಂತರ ವ್ಯತ್ಯಾಸಗಳು ಇರುವಾಗ ಇವೆರಡೂ ಒಂದೇ ದರ್ಶನವನ್ನು ಹೇಗೆ ಮಾಡಿಸಿಯಾವು?'

ಇದಕ್ಕೆ ನಾವು ಹೀಗೆ ಉತ್ತರಿಸುತ್ತೇವೆ : ಮೇಲ್ಕಂಡ ಹೇಳಿಕೆಗಳಲ್ಲಿ ಒಂದೆರಡು ವಿಷಯಗಳು ಮಾತ್ರ ನಿಜ. ಉಳಿದುವು ಆಳವಾದ ಅಧ್ಯಯನ ಮಾಡದೇ ಇರುವುದರಿಂದಲೋ ಅಥವಾ ಪೂರ್ವಾಗ್ರಹದೋಷವು ದೃಷ್ಟಿ ಯನ್ನು ಮುಸುಕಿರುವುದರಿಂದಲೋ ಉಂಟಾಗಿರುವ ಅನಿಸಿಕೆಗಳು. ಎರಡೂ ಗ್ರಂಥಗಳಲ್ಲಿಯೂ ಪರಸ್ಪರ ಶೈಲೀಭೇದವುಂಟು. ಕಾಲಭೇದವುಂಟು. ಆಕಾರವ್ಯತ್ಯಾಸವೂ ಉಂಟು. ರಾಮಾಯಣವು ಪ್ರಧಾನವಾಗಿ ಕಾವ್ಯ. ಮಹಾಭಾರತವು ಪ್ರಧಾನವಾಗಿ ಇತಿಹಾಸ. ಆದರೆ ಈ ವೈಷಮ್ಯಗಳಿ ಗಿಂತಲೂ ಅವುಗಳ ಸಾಮ್ಯಭಾಗವೇ ಪ್ರಧಾನವಾಗಿ ಒಂದೇ ಸಂಸ್ಕೃತಿಯ ದರ್ಶನವನ್ನೇ ಅವು ಮಾಡಿಸುತ್ತವೆ. ಎರಡೂ ಸತ್ಯಸಾಕ್ಷಾತ್ಕಾರಸಂಪನ್ನ ರಾದ ಋಷಿಗಳ ರಚನೆ ; ಅವರ ಧ್ಯಾನದೃಷ್ಟಿಗೆ ಗೋಚರವಾದ ವಿಷಯ

ಗಳನ್ನು ಆಧರಿಸಿ ಒಳದರ್ಶನದ ಹೊರವಿಕಾಸಗಳಾಗಿವೆ.* ಮಹರ್ಷಿ ಮನೋಧರ್ಮದ ಏಕಸೂತ್ರತೆ ಅವುಗಳಲ್ಲಿ ಸ್ಪಷ್ಟವಾಗಿ ಕಾಣುತ್ತಿದೆ. ಉತ್ತರ-ದಕ್ಷಿಣ-ಪೂರ್ವ-ಪಶ್ಚಿಮ-ಆರ್ಯ-ದ್ರಾವಿಡ ಇತ್ಯಾದಿಗಳು ದೇಶಗಳ ಪ್ರಾಕೃತಿಕ ಭೇದ ಮತ್ತು ಭಾಷಾಭೇದಗಳಿಗೆ ಅನ್ವಯಿಸುತ್ತವೆಯೇ ಹೊರತು ಸಂಸ್ಕೃತಿ, ನಾಗರಿಕತೆ, ಜೀವನದ ಧ್ಯೇಯ-ಧೋರಣೆಗಳ ಬಗೆಗೆ ಇಡೀ ಭಾರತದೇಶದಲ್ಲಿ ಯಾವ ಪ್ರಾಮಾಣಿಕವಾದ ಭೇದವೂ ನಮಗೆ ಕಂಡುಬರುವುದಿಲ್ಲ. ಶ್ರುತಿ, ಸ್ಮೃತಿ, ಪುರಾಣ, ಇತಿಹಾಸ, ಆಗಮಾದಿಗಳ ಮೂಲಕ ಜ್ಞಾನಿ-ವಿಜ್ಞಾನಿಗಳಾದ ಮಹರ್ಷಿಗಳು ಕೊಟ್ಟಿರುವ ಸಂವಿಧಾನವು ಇಡೀ ದೇಶಕ್ಕೇ ಅನ್ವಯಿಸುತ್ತದೆ. ರಾಜರು ಯಾವ ದೇವತಾವಂಶಕ್ಕೆ ಸೇರಿದ್ದರೂ ಅವರು ವರ್ಣಾಶ್ರಮಧರ್ಮಸಂರಕ್ಷಣೆಯ ಧ್ಯೇಯವುಳ್ಳ ಆರ್ಯಕ್ಷತ್ರಿಯರು ತಾನೇ! ಕಾವ್ಯ, ಆಖ್ಯಾನ, ಪುರಾವೃತ್ತ—ಇತ್ಯಾದಿ ಪದಗಳನ್ನು ಎರಡೂ ಗ್ರಂಥಗಳ ವಿಷಯದಲ್ಲಿ ನೋಡುತ್ತೇವೆ.

"ಏವಮೇತತ್ಪುರಾವೃತ್ತಮಾಖ್ಯಾನಂ ಭದ್ರಮಸ್ತು ವಃ" "ಆದಿಕಾವ್ಯಮಿದಂ ಪ್ರೋಕ್ತಂ ಪುರಾ ವಾಲ್ಮೀಕಿನಾ ಕೃತಮ್" ಎಂದು ರಾಮಾಯಣದ ಬಗೆಗೆ ಹೇಳಿದರೆ, "ನ ಚಾಖ್ಯಾನಮಿದಂ ವಿದ್ಯಾತ್ ನೈವ ಸ ಸ್ಯಾದ್ವಿಚಕ್ಷಣಃ" "ಪುರಾಣಪೂರ್ಣಚಂದ್ರೇಣ ಶ್ರುತಿಜ್ಯೋತ್ಸ್ನಾ ಪ್ರಕಾಶಿತಾ" "ಕೃತಂ ಮಯೇದಂ ಭಗವನ್ ಕಾವ್ಯಂ ಪರಮ ಪೂಜಿತಮ್" ಎಂಬ ವಾಕ್ಯಗಳನ್ನು ಮಹಾಭಾರತದ ಬಗೆಗೆ ಕೇಳುತ್ತೇವೆ.

ಭಾರತೀಯ ಜೀವನದ ಆದರ್ಶಗಳಾದ ಪುರುಷಾರ್ಥಗಳ ಬಗೆಗೆ ಪ್ರಾಮಾಣಿಕವಾದ ಸಾಮಗ್ರಿಯನ್ನು ತತ್ತ್ವ, ಉಪದೇಶ ಮತ್ತು ಕಥೋದಾಹರಣರೂಪದಲ್ಲಿ ಎರಡು ಗ್ರಂಥಗಳೂ ಒದಗಿಸುತ್ತವೆ. ನಮ್ಮ ಸಂಸ್ಕೃತಿಗೆ ಮೂಲವಾದ ವೇದಗಳ ಪ್ರತಿರೂಪಗಳೆಂದು ಎರಡು ಗ್ರಂಥಗಳೂ ಮಾನ್ಯವಾಗಿವೆ. "ವೇದಃ ಪ್ರಾಚೇತಸಾದಾಸೀತ್ ಸಾಕ್ಷಾದ್ರಾಮಾಯಣಾತ್ಮನಾ" "ಕಾರ್ಷ್ಣಂ ವೇದಮಿದಂ ಪುಣ್ಯಂ"

---

* 'ಪ್ರವಿಶ್ಯ ಯೋಗಂ ಜ್ಞಾನೇನ ಸೋಽಪಶ್ಯತ್ ಸರ್ವಮನ್ತತಃ' ಮ.ಭಾ. I
'ತತಃ ಪಶ್ಯತಿ ಧರ್ಮಾತ್ಮಾ ತತ್ಸರ್ವಂ ಯೋಗಮಾಸ್ಥಿತಃ' ರಾ.III

ಇವುಗಳಲ್ಲಿ "ಅಗ್ನಿಮೀಳೇ" ಮುಂತಾದ ವೇದವಾಕ್ಯಗಳಿವೆಯೇ? ವೇದಭಾಷಾಶೈಲಿ ಇದೆಯೇ? ಇತ್ಯಾದಿ ಕುಚೋದ್ಯ ಸಲ್ಲ. ವೈದಿಕಯಜ್ಞ ಪ್ರಕ್ರಿಯೆಗಳು, ದೇವತೆಗಳು ಮತ್ತು ಕೆಲವು ವೇದವಾಕ್ಯಪ್ರತಿಬಿಂಬಗಳೂ ಇವುಗಳಲ್ಲಿ ಕಂಡುಬರುತ್ತವೆ. ದೇವಾಸುರಯುದ್ಧ ಮತ್ತು ಧರ್ಮವಿಜಯದ ಕಹಳೆಯನ್ನು ಎರಡೂ ಊದುತ್ತವೆ. ವೇದಗಳು–'ದೇವಾಸುರಾಃ ಸಂಯತ್ತಾ ಆಸನ್ (ದೇವಾಸುರರು ಯುದ್ಧಕ್ಕೆ ಸಿದ್ಧರಾದರು)'–ಎಂದರೆ ರಾಮಾಯಣ-ಮಹಾಭಾರತಗಳಲ್ಲಿ–"ವಾನರ-ರಾಕ್ಷಸರು ಅಥವಾ ಪಾಂಡವ-ಕೌರವರು ಯುದ್ಧಕ್ಕೆ ಸಿದ್ಧರಾದರು" ಎಂಬ ಪದಗಳಿಂದ ಅದೇ ಭಾವವೇ ವ್ಯಕ್ತಪಡುತ್ತದೆ. ವೇದಗಳಲ್ಲಿ ಶಕ್ತಿಗಳ ರೂಪದಲ್ಲಿ ಯಾವುದು ವರ್ಣಿತವಾಗಿದೆಯೋ–ಅದನ್ನೇ ವ್ಯಕ್ತಿಗಳ ರೂಪದಲ್ಲಿ ಈ ಗ್ರಂಥಗಳು ಚಿತ್ರಿಸುತ್ತವೆ. (ವ್ಯಕ್ತಿಗಳ ಮೂಲಕ ಶಕ್ತಿಯ ಭಾವಕ್ಕೆ ಹತ್ತುವುದು ಸುಲಭ.) ವೇದಗಳು ಮತ್ತು ರಾಮಾಯಣ-ಮಹಾಭಾರತಗಳು ಎಲ್ಲವೂ ಪ್ರತಿಪಾದಿಸುವುದು ಧರ್ಮವನ್ನು ಮತ್ತು ಬ್ರಹ್ಮವನ್ನು.

ವೇದೇ ರಾಮಾಯಣೇ ಪುಣ್ಯೇ ಭಾರತೇ ಭರತರ್ಷಭ ।
ಆದೌ ಚಾನ್ತೇ ಚ ಮಧ್ಯೇ ಚ ಹರಿಃ ಸರ್ವತ್ರ ಗೀಯತೇ ॥

ರಾಮಾಯಣ-ಮಹಾಭಾರತಗಳೆರಡೂ ಸಂಸ್ಕೃತ ಮತ್ತು ಪ್ರಾಕೃತ ಭಾಷೆಗಳ ವೈವಿಧ್ಯಪೂರ್ಣವಾದ ಅಸಂಖ್ಯಾತಗ್ರಂಥಗಳಿಗೆ ಅಕ್ಷಯವಾದ ಆಧಾರ-ಆಕರಗಳಾಗಿವೆ. "ಪರಂ ಕವೀನಾಮಾಧಾರಂ" (ರಾಮಾ); "ಇತಿಹಾಸೋತ್ತಮಾದಸ್ಮಾಜ್ಜಾಯನ್ತೇ ಕಾವ್ಯಬುದ್ಧಯಃ" (ಮ. ಭಾ.)

ಇವೆರಡೂ ಸಮಾನಪ್ರಧಾನತೆಯ ಮಟ್ಟದಲ್ಲಿ ನಮ್ಮ ರಾಷ್ಟ್ರೀಯ ಗ್ರಂಥಗಳು. ನಮ್ಮ ಸಂಸ್ಕೃತಿ-ಧರ್ಮಗಳ ಮಣಿದರ್ಪಣಗಳು ಎಂಬುದರಲ್ಲಿ ಸಂಶಯವಿಲ್ಲ. ಎರಡಕ್ಕೂ ಇರುವ ಪರಸ್ಪರ ವ್ಯತ್ಯಾಸವನ್ನು ತಿಳಿಸುವಾಗ ರಾಮಾಯಣವು ವಾಮನಮೂರ್ತಿ, ಮಹಾಭಾರತವು ತ್ರಿವಿಕ್ರಮಮೂರ್ತಿ ಎಂಬ ಹೇಳಿಕೆಯನ್ನು ಕೇಳಿದೆವು. ಇದು ಸರಿಯೇ. ಆದರೆ ಎರಡೂ ಅವತಾರಗಳನ್ನು ಮಾಡಿದ ಮಹಾವಿಷ್ಣುವು ಒಬ್ಬನೇ ಎಂಬ ತತ್ತ್ವವನ್ನು ಮರೆಯಬಾರದು.

II ಆದಿಕಾವ್ಯ

" ಆದಿಕಾವ್ಯಮಿದಂ ಪ್ರೋಕ್ತಂ ಪುರಾ ವಾಲ್ಮೀಕಿನಾ ಕೃತಮ್ "

ಶ್ರೀಮದ್ರಾಮಾಯಣದ ಕರ್ತೃವಾದ ವಾಲ್ಮೀಕಿಮಹರ್ಷಿ 'ಆದಿಕವಿ' ಎಂಬ ಮಾತು ನಮ್ಮ ಇತಿಹಾಸ-ಸಂಪ್ರದಾಯಗಳಲ್ಲಿ ಸುಪ್ರಸಿದ್ಧವಾಗಿದೆ. ಲೌಕಿಕಸಂಸ್ಕೃತದಲ್ಲಿ ವಾಲ್ಮೀಕಿರಾಮಾಯಣಕ್ಕಿಂತಲೂ ಮೊದಲು ರಚಿತ ವಾದುದು ಎಂದು ಹೇಳಲು ಬರುವ ಯಾವ ಕಾವ್ಯವೂ ಇಲ್ಲಿಯವರೆಗೂ ದೊರಕಿಲ್ಲ. ಒಂದು ಪಕ್ಷ ದೊರಕಿದರೂ ತಾತ್ತ್ವಿಕವಾಗಿ ವಾಲ್ಮೀಕಿಯ ಆದಿ ಕವಿತ್ವಕ್ಕೆ ಅಪೋಹವೂ ಇಲ್ಲ. ಏಕೆಂದರೆ : ನಿಜವಾದ ಆದಿಕವಿ ಸೃಷ್ಟಿಕರ್ತನೇ ಆಗಿದ್ದಾನೆ. "**ತೇನೇ ಬ್ರಹ್ಮಹೃದಾ ಯ ಆದಿಕವಯೇ**" ತ್ರಿಗುಣಾ ತ್ಮಕವಾದ ವಿಶ್ವವೇ ಆತನು ರಚಿಸಿದ ಮಹಾಕಾವ್ಯ. "**ಕೃಣ್ವನ್ ವಿಶ್ವಾನಿ ಕಾವ್ಯಂ**" "**ಸ ಕವಿಃ ಕಥ್ಯತೇ ಸ್ರಷ್ಟಾ ರಮತೇ ಯತ್ರ ಭಾರತೀ।**" ಚೇತನಗಳು ತ್ರಿಗುಣಗಳಲ್ಲಿ ಸಂಚರಿಸಿ ಮತ್ತೆ ತ್ರಿಗುಣಾತೀತವಾದ ಪರಮ ಧಾಮಕ್ಕೆ ಬಂದು ಸೇರಬೇಕೆಂಬುದು ಅವನ ಆಶಯ. ಅವನೇ– "**ಮಚ್ಛಂದಾದೇವ ತೇ ಬ್ರಹ್ಮನ್ ಪ್ರವೃತ್ತೇಯಂ ಸರಸ್ವತೀ**" ಎಂಬ ತನ್ನ ವರಪ್ರದಾನದಂತೆ ಅರ್ಥ ಮತ್ತು ವಾಣಿಗಳ ಸಂಪತ್ತನ್ನೂ–ಪ್ರತಿಭೆಯನ್ನೂ ಅನುಗ್ರಹಿಸಿ ಅದನ್ನು ಅವನಿಂದ ಬರೆಯಿಸಿದ. ಹೀಗೆ ಈ ಆದಿಕವಿಯ ಕಾರ್ಯಕ್ಕೆ ದಿವ್ಯಸಾಧನವಾಗಿರುವ ವಾಲ್ಮೀಕಿಯೂ ಆದಿಕವಿಯೇ. ತನ್ನ ಮಧುರವಾಣಿಗಳಿಂದ ಮುಂದಿನ ಕವಿಗಳಿಗೆಲ್ಲಾ ಮಾರ್ಗ ತೋರಿದ ಮಹರ್ಷಿ ಆ ವಾಲ್ಮೀಕಿ. "**ಮಧುಮಯಫಣಿತೀನಾಂ ಮಾರ್ಗದರ್ಶೀ ಮಹರ್ಷಿಃ।**"

'ಕವಿ' ಎಂದರೆ ಯಾರು? ಎಂದು ಕೇಳಿದರೆ : ಲೋಕದಲ್ಲಿ 'ಪದ್ಯ ಕಟ್ಟುವವರೆಲ್ಲಾ ಕವಿಗಳು.' 'ಶಬ್ದ-ಅರ್ಥಗಳಿಗೆ ಸಾಮರಸ್ಯವಿರುವಂತೆ (harmony between sound and sense) ಯಾವುದೇ ಸಾಹಿತ್ಯವನ್ನು, ರಾಜಸ-ತಾಮಸಾದಿ ಯಾವುದೇ ಪ್ರವೃತ್ತಿಯನ್ನಾದರೂ ಸಮರ್ಥವಾಗಿ ಉಂಟುಮಾಡುವ ಸಾಹಿತ್ಯವನ್ನು ಬರೆದವರು ಕವಿಗಳು' ; 'ಸಮಾಜದಲ್ಲಿ ಕ್ರಾಂತಿಯನ್ನುಂಟುಮಾಡಿ ಭುಗಿಲೆಬ್ಬಿಸುವ ಕೃತಿಗಳನ್ನು ಬರೆಯುವವರು ಕವಿಗಳು' ; 'ಓದುಗರ ಅಥವಾ ಶ್ರೋತೃಗಳ ಮನಸ್ಸಿ

ನಲ್ಲಿ ಕಾಮ-ಕ್ರೋಧ–ಮುಂತಾದ ವೇಗಗಳನ್ನು ಕೆರಳಿಸಿ ಅವುಗಳ ಪರಿಣಾಮದ ದರ್ಶನದಿಂದ ಭಯವನ್ನುಂಟುಮಾಡಿ ಅವರ ಮೂಲಕ ವ್ಯಕ್ತಿ-ಸಮಾಜಗಳನ್ನು ಶುದ್ಧಪಡಿಸುವವರು ಕವಿಗಳು'; 'ಯಾವುದೇ ರೀತಿಯಲ್ಲಾದರೂ ಲೋಕೋತ್ತರಸಾಹಿತ್ಯವನ್ನು ನಿರ್ಮಿಸುವವರು ಕವಿಗಳು'–ಇತ್ಯಾದಿ ನಾನಾ ಲಕ್ಷಣ ಮತ್ತು ವಿವರಣೆಗಳನ್ನು ಪ್ರಾಚೀನ ಮತ್ತು ಆಧುನಿಕ ವಿಮರ್ಶಕರು ಕೊಟ್ಟಿದ್ದಾರೆ. ಆದರೆ ಸನಾತನಮಹರ್ಷಿಗಳ ದೃಷ್ಟಿಯಲ್ಲಿ ಕವಿಯು ಜ್ಞಾನಿಯೂ ಋಷಿಯೂ ಆಗಿರಲೇಬೇಕು. "**ನಾನೃಷಿಃ ಕುರುತೇ ಕಾವ್ಯಂ ।**'– ಲೋಕದಲ್ಲೂ ಮಹಾಕವಿಯು, ಆದಿಕವಿಯಾದ ಬ್ರಹ್ಮನೊಡನೆ ತಾದಾತ್ಮ್ಯವನ್ನು ಹೊಂದಿ ಆತನ ತ್ರಿಗುಣಾತ್ಮಕವಾದ ಪ್ರಕೃತಿಯನ್ನು ಅರ್ಥಮಾಡಿಕೊಂಡು ತ್ರಿಗುಣಾತೀತವಾದ ಧಾಮಕ್ಕೆ ಹಿಂದಿರುಗುವ ಸಾಮರ್ಥ್ಯವನ್ನು ಹೊಂದಿರಬೇಕು. ತನ್ನ ಆ ಅನುಭವಕ್ಕೆ ಅನುಗುಣವಾಗಿ ತ್ರಿಗುಣಾತ್ಮಕವಾದ ಕಾವ್ಯಪ್ರಪಂಚವನ್ನು ಅಂದರೆ ಲೋಕಚರಿತವನ್ನು ಯುಕ್ತವಾದ ಶಬ್ದಾರ್ಥಗಳೆಂಬ ಸಾಮಗ್ರಿಗಳಿಂದ ನಿರ್ಮಿಸಬೇಕು. '**ತ್ರೈಗುಣ್ಯೋದ್ಭವ ಮಾತ್ರಲೋಕಚರಿತಂ ನಾನಾರಸಂ ದೃಶ್ಯತೇ** '- ತ್ರಿಗುಣಗಳಿಗೆ ಸಂಬಂಧಪಟ್ಟ ಶೃಂಗಾರ-ವೀರ-ಕರುಣ-ಅದ್ಭುತ-ಹಾಸ್ಯ-ಭಯಾನಕ-ಬೀಭತ್ಸ-ರೌದ್ರಗಳ ಮೂಲಕ ಜನರನ್ನು ಆಕರ್ಷಿಸಿ ಕೊನೆಗೆ ಅವುಗಳಿಗೆ ಅತೀತವಾದ ಪರಮಾನಂದಶಾಂತಿಧಾಮದಲ್ಲಿ ಅವರು ನೆಲೆಸುವಂತಹ ಸಾಹಿತ್ಯವನ್ನು ಸೃಷ್ಟಿಸಬೇಕು. ತ್ರಿಗುಣೋದ್ಭವವಾದ ಲೋಕಚರಿತವನ್ನೇ ಅವನು ಚಿತ್ರಿಸಿದರೂ–ಜನರು ಅದರಲ್ಲಿ ಮುಳುಗಿ ತಮ್ಮ ಮೂಲವನ್ನು ಮರೆಯುವಂತೆ ಮಾಡುವ ಮಾಯಾಮಯಸಾಹಿತ್ಯವನ್ನು ನಿರ್ಮಿಸಬಾರದು. ಹಾಗೆ ತನ್ನ ಮೋಡಿಗೆ ಸಿಕ್ಕಿದವರನ್ನು ಮಾಯೆಯಿಂದ ಪಾರುಮಾಡಿಸುವಂತಹ ರಚನೆಯನ್ನು ಮಾಡಬೇಕು.

ಪಾಶ್ಚಾತ್ಯರ ದೃಷ್ಟಿಯಲ್ಲಿ ಪ್ರೀತಿ-ಅಪ್ರೀತಿ, ವಿಷಾದಮಯವಾದ ರಸ ಗಳೇ ಮನುಷ್ಯನ ನಿಜಸ್ವರೂಪ. ಲೋಕಕ್ಕೆ ಸಂತೋಷವುಂಟಾಗುವಂತೆ ಆ ನಿಜಸ್ವರೂಪದಲ್ಲಿ ಓದುಗರನ್ನು ನಿಲ್ಲಿಸುವುದೇ ಕಾವ್ಯದ ಉದ್ದೇಶ. ಆದರೆ ನಮ್ಮ ದೇಶದ ಮಹರ್ಷಿಗಳ ದೃಷ್ಟಿಯಲ್ಲಿ ಪುರುಷನು ಜ್ಞಾನಾನಂದಸ್ವರೂಪಿ. '**ವಿದ್ಯಾಮಯೋಽಯಂ ಪುರುಷಃ ।**' ಆ ನಿಜಸ್ವರೂಪದಲ್ಲಿ ನೆಲೆಗೊಳಿ

ಸುವುದೇ ಉತ್ತಮಕಾವ್ಯದ ಉದ್ದೇಶ. ಬಣ್ಣ-ಬಣ್ಣದ ಮೋಡಗಳು ತಮ್ಮ ವಿಲಾಸವನ್ನು ತೋರಿಸಿದ ಬಳಿಕ ತಮ್ಮ ಮೂಲವಾದ ಸ್ಥಿರವಾದ ನೀಲಾಕಾಶ ದಲ್ಲಿ ಲಯಹೊಂದುವಂತೆ–ತ್ರಿಗುಣಮಯವಾದ ಶೃಂಗಾರಾದಿ ರಸಗಳು ತಮ್ಮ ವಿಲಾಸವನ್ನು ತೋರಿದ ಬಳಿಕ ತಮಗೆ ಮೂಲವಾದ ಸ್ಥಿರವಾದ ಶಾಂತಪ್ರಕೃತಿಯಲ್ಲಿ ಲಯಹೊಂದಬೇಕು. ಇದಕ್ಕೆ ಅನುಗುಣವಾದ ಕೃತಿ ಯನ್ನು ರಚಿಸಿ ಕಾವ್ಯಸಮಾಧಿಯನ್ನುಂಟುಮಾಡುವವನೇ ಶ್ರೇಷ್ಠಕವಿ. ಅಂತಹ ಕವಿಗಳಲ್ಲಿ ಅಗ್ರಗಣ್ಯನಾದವನು ಆದಿಕವಿ ವಾಲ್ಮೀಕಿ.

ಪಾಶ್ಚಾತ್ಯರ ಸಾಹಿತ್ಯವಿಮರ್ಶೆಯಂತೆಯೂ ರಾಮಾಯಣವು ಉತ್ತಮ ಕಾವ್ಯವೇ ಆಗುತ್ತದೆ. ಅದರ ಪ್ರಕಾರ ಶ್ರೇಷ್ಠವಾದ ಮನೋವಿಶ್ಲೇಷಣೆ ಮತ್ತು ಪಾತ್ರಚಿತ್ರಣವು ಸತ್ಕಾವ್ಯದ ಲಕ್ಷಣ. ಅದು ವಾಲ್ಮೀಕಿಯ ಕೃತಿಯಲ್ಲಿ ಚೆನ್ನಾ ಗಿಯೇ ಮೂಡಿಬಂದಿದೆ. ನಮ್ಮ ದೇಶದ ಸಾಹಿತ್ಯವಿಮರ್ಶಕರ ಅಭಿಪ್ರಾಯ ದಂತೆ ಆತ್ಮಭೂತವಾದ ರಸಧ್ವನಿ ಮತ್ತು ಅದಕ್ಕೆ ಸೊಬಗುತರುವ ಗುಣಾಲಂಕಾರ-ರೀತಿಗಳನ್ನು ಹೊಂದಿರುವುದು ಶ್ರೇಷ್ಠಕಾವ್ಯ. ಶ್ರೀಮದ್ರಾ ಮಾಯಣವು ಈ ಲಕ್ಷಣಕ್ಕೂ ಹೊಂದಿಕೊಳ್ಳುತ್ತದೆ. ಶೃಂಗಾರ ಅಥವಾ ವೀರರಸಗಳಲ್ಲಿ ಒಂದು ಮಾತ್ರ ಕಾವ್ಯದಲ್ಲಿ ಪ್ರಧಾನವಾಗಿರಬೇಕು–ಎಂಬುದು ನಮ್ಮ ಅಲಂಕಾರಿಕರ ಮತ. ಆದರೆ ರಾಮಾಯಣದಲ್ಲಿ ಪ್ರಧಾನವಾಗಿರುವುದು ಕರುಣರಸ. ಲಕ್ಷಣಗ್ರಂಥಗಳು ರಚಿತವಾಗುವುದಕ್ಕೆ ಮೊದಲೇ ರಚಿತವಾಗಿದ್ದ ಆದಿಕಾವ್ಯ ಶ್ರೀಮದ್ರಾಮಾಯಣ. ಅದರಲ್ಲಿ ಶೃಂಗಾರಾದಿ ಅಷ್ಟರಸಗಳನ್ನೂ ತನ್ಮಯರಾಗಿ ನಾವು ಅನುಭವಿಸುತ್ತೇವೆ. ಕರುಣರಸದಲ್ಲಿ ಹೆಚ್ಚಾಗಿ ಕ್ರೀಡಿಸುತ್ತೇವೆ. ಏಕೆಂದರೆ : ಕವಿ ವಾಲ್ಮೀಕಿಗೆ ಕ್ರೌಂಚಪಕ್ಷಿಗಳ ಬಗೆಗೆ ಉಂಟಾದ ಶೋಕವೇ ಶ್ಲೋಕರೂಪವನ್ನು ತಾಳಿ ರಾಮಾಯಣಕ್ಕೆ ನಾಂದಿಯಾಯಿತು. ‘ ಶೋಕಃ ಶ್ಲೋಕತ್ವಮಾಗತಃ’. ಆದರೆ ಎಲ್ಲಕ್ಕೂ ತಳಹದಿಯಾಗಿ ಎಲ್ಲ ರಸಗಳನ್ನೂ ತನ್ನಲ್ಲಿ ಲಯಗೊಳಿಸಿಕೊಳ್ಳುವ ಶಾಂತರಸವೂ ಅದರಲ್ಲಿ ಅಂತರ್ವಾಹಿನಿಯಾಗಿದೆ.

‘ರಸೈಃ ಶೃಂಗಾರಕಾರುಣ್ಯಭೀಮಹಾಸ್ಯಭಯಾನಕೈಃ। ರೌದ್ರಾದಿಭಿಶ್ಚ ಸಂಯುಕ್ತಂ ಸಮಾಪ್ತಂ ಚ ಯಥಾಕ್ರಮಮ್’ ‘ಶಾನ್ತಂ ವಪುಃ ಪಾತು ವಃ।’

ಅದರಲ್ಲಿ ಇಂದ್ರಿಯಭೋಗವೂ ಉಂಟು ; ಆತ್ಮಯೋಗವೂ ಉಂಟು. "ಮನೆಗೆ ಯಾವನಾದರೂ ಅತಿಥಿಯು ಕುದುರೆಗಾಡಿಯಲ್ಲಿ ಬಂದರೆ ಅವನ ಕುದುರೆಗೆ ಬೇಕಾದ ಹುಲ್ಲು, ಹುರುಳಿ ಮುಂತಾದ ಆಹಾರಗಳನ್ನು ಕೊಟ್ಟು ಅವನಿಗೆ ಬೇಕಾದ ಅನ್ನಾದ್ಯಾಹಾರಗಳನ್ನೂ ಕೊಡುತ್ತೇವೆ. ಅಂತೆಯೇ ಮಹಾಕವಿ ಆದಿಕವಿ ವಾಲ್ಮೀಕಿಯು ತನ್ನ ಓದುಗರ ಇಂದ್ರಿಯಾಶ್ವಗಳಿಗೆ ಬೇಕಾದ ಶೃಂಗಾರಾದಿ ರಸಾಹಾರವನ್ನೂ–ಅವರ ಆತ್ಮಕ್ಕೆ ಬೇಕಾದ ಶಾಂತರಸಾ ಹಾರವನ್ನೂ ತಕ್ಕ ಪ್ರಮಾಣದಲ್ಲಿ ಒದಗಿಸುತ್ತಾನೆ. ಕುಶಲೆಯಾದ ಗೃಹಿಣಿಯು ಉಪ್ಪು, ಹುಳಿ, ಕಾರ, ಕಹಿ, ಸಿಹಿ, ಒಗರು–ಎಂಬ ಆರು ರಸಗಳನ್ನೂ ಉಚಿತಪ್ರಮಾಣದಲ್ಲಿ ಸೇರಿಸಿ ಅವುಗಳ ಯೋಗದಿಂದ ಇಂದ್ರಿಯಭೋಗ ಮತ್ತು ಆರೋಗ್ಯ ಎರಡಕ್ಕೂ ಅನುಗುಣವಾಗಿ ಶುಚಿ-ರುಚಿಯಾದ ಔತಣ ವನ್ನು ಅತಿಥಿಗಳಿಗೆ ಬಡಿಸುವಂತೆ–ಮಹಾತ್ಮನಾದ ವಾಲ್ಮೀಕಿಯು ಶೃಂಗಾರಾದಿ ನವರಸಗಳನ್ನು ಉಚಿತಪ್ರಮಾಣದಲ್ಲಿ ಯೋಜನೆಮಾಡಿ ಆತ್ಮಜೀವನ ಮತ್ತು ಲೋಕಜೀವನ ಇವೆರಡಕ್ಕೂ ಹೊಂದಿಕೊಳ್ಳುವ ರಸದೌತಣವನ್ನು ಆದಿಕಾವ್ಯ ದಲ್ಲಿ ನಮಗೆ ಉಣಬಡಿಸಿದ್ದಾನೆ"–ಎಂದು ಶ್ರೀರಂಗಮಹಾಗುರುಗಳು ವ್ಯಾಖ್ಯಾನಿಸುತ್ತಿದ್ದುದನ್ನು ಇಲ್ಲಿ ಸ್ಮರಿಸುತ್ತೇವೆ.

ಕಾವ್ಯದ ನಾಯಕ ಧೀರೋದಾತ್ತನಾಗಿ ಏಕತ್ರ ದುರ್ಲಭವಾಗಿರುವ ಸಮಸ್ತಕಲ್ಯಾಣಗುಣಗಳಿಂದ ಪರಿಪೂರ್ಣನಾಗಿರುವ ಭಗವದವತಾರಪುರುಷ ಶ್ರೀರಾಮಚಂದ್ರ. **ಬಹವೋ ದುರ್ಲಭಾಶ್ಚೈವ ಯೇ ತ್ವಯಾ ಕೀರ್ತಿತಾ ಗುಣಾಃ । ಮುನೇ ವಕ್ಷ್ಯಾಮ್ಯಹಂ ಬುದ್ಧ್ವಾ ತೈರ್ಯುಕ್ತಃ ಶ್ರೂಯತಾಂ ನರಃ ॥** ನಾಯಕಿಯು ಸತ್ಯ, ಧೃತಿ, ಕುಶಲತೆ ಕ್ಷಮೆ, ವಾತ್ಸಲ್ಯಾದಿ ಗುಣಗಳಿಂದ ಅವನಿಗೆ ಸರ್ವಾತ್ಮನಾ ಸಹಧರ್ಮಿಣಿಯಾಗಿರುವ ಸೀತಾದೇವಿ. ಆದ್ದರಿಂದ ವಾಲ್ಮೀಕಿಯ ಕಾವ್ಯವು ರಾಮಾಯಣವಾಗಿರು ವಂತೆಯೇ– **'ಸೀತಾಯಾಶ್ಚರಿತಂ ಮಹತ್'** ಎಂಬಂತೆ 'ಸೀತಾಯನ'ವೂ ಆಗಿದೆ. ಆದರೆ ರಜೋಗುಣ-ತಮೋಗುಣಗಳ ಪ್ರಾಚುರ್ಯದಿಂದ ಶ್ರೀರಾಮ ನಲ್ಲಿ ಅಸೂಯೆಯನ್ನು ತೋರುವ ವಿಮರ್ಶಕರೂ ಉಂಟು. ಇತ್ತೀಚೆಗೆ ಸೀತಾದೇವಿಯಲ್ಲಿ ಕೆಟ್ಟ ಆರೋಪಗಳನ್ನು ಮಾಡುವ ಪ್ರವೃತ್ತಿಯೂ ಕೆಲವರಲ್ಲಿ ಉಂಟಾಗಿದೆ. ರಾಗ-ದ್ವೇಷ-ಅಭಿನಿವೇಶಾದಿರೂಪವಾದ

ಕೆಸರು ವಿವೇಕದಿಂದ ತೊಲಗಿಸಲ್ಪಟ್ಟು ಅವರ ಮನಸ್ಸು ತಿಳಿಯಾದಾಗ ಇಂತಹ ಪ್ರವೃತ್ತಿ ಹೊರಟುಹೋಗುತ್ತದೆ.*

ಅಂತಹ ಮಹಾಪುರುಷನಿಗೆ ಪ್ರತಿನಾಯಕನಾಗಿರುವವನು ಕಳಪೆಯ ಪಾತ್ರವಲ್ಲ. "ಎಂತಹ ರೂಪ! ಎಂತಹ ಧೈರ್ಯ! ಎಂತಹ ಸತ್ತ್ವ! ಎಂತಹ ಕಾಂತಿ! ಅಬ್ಬಾ! ಎಲ್ಲ ಲಕ್ಷಣಗಳಿಂದಲೂ ಸಂಪನ್ನನಾದವನೀರಾಕ್ಷಸರಾಜ. "ಅಹೋ ರೂಪಮಹೋಧೈರ್ಯಮಹೋಸತ್ತ್ವಮಹೋದ್ಯುತಿಃ। ಅಹೋ ರಾಕ್ಷಸರಾಜಸ್ಯ ಸರ್ವಲಕ್ಷಣಯುಕ್ತತಾ (ಸುಂದರಕಾಂಡ-49-17) ಎಂದು ಗುಣಜ್ಞನಾದ ಆಂಜನೇಯನಿಂದ ಹೊಗಳಲ್ಪಟ್ಟ ತೇಜಸ್ವೀಪುರುಷ, ಮೂಜಗವನ್ನೂ ತಲ್ಲಣಗೊಳಿಸಿದ ರಾವಣ. "ರಾಮಾಯಣದಲ್ಲಿ ರಾವಣ ನನ್ನು ಕೇವಲ ದುಷ್ಟನನ್ನಾಗಿ ಚಿತ್ರಿಸಲಾಗಿದೆ. ಅದಕ್ಕಾಗಿ ಅವನಲ್ಲಿ ಸಹಾನು ಭೂತಿ ಉಂಟಾಗುವಂತೆ ರಾಮಾಯಣವನ್ನು ಬದಲಿಸಿ ಬರೆಯುತ್ತೇವೆ'– ಎಂದು ಸಾರುವ ಭೂಪತಿಗಳು ವಾಲ್ಮೀಕಿರಾಮಾಯಣದ ರಾವಣಪಾತ್ರವನ್ನು ಮೂಲಗ್ರಂಥದಲ್ಲಿ ಸಮಗ್ರವಾಗಿ ಅಧ್ಯಯನಮಾಡಿದವರೇ ಅಲ್ಲವೆಂದು ನಮಗೆ ಅನ್ನಿಸುತ್ತದೆ. 'ಪೌಲಸ್ತ್ಯ ವಧೆ' ಎಂಬುದೂ ರಾಮಾಯಣದ ಒಂದು ಹೆಸರು.

ಆದರೆ ಔಚಿತ್ಯಪ್ರತಿಭಾಪೂರ್ಣನಾದ ಕವಿ ವಾಲ್ಮೀಕಿಯು ಯಾವುದ ರಲ್ಲೂ ಮಿತಿಯನ್ನು ಮೀರಿಲ್ಲ. ಪ್ರತಿನಾಯಕನನ್ನು ಕಾರಣಾಂತರದಿಂದ ಅತ್ಯುಜ್ಜ್ವಲಗೊಳಿಸಿ ನಾಯಕನು ಕಳೆಗುಂದುವಂತೆ ಮಾಡಿಲ್ಲ. ಇಂಗ್ಲಿಷ್ ಭಾಷೆಯ ಮಹಾಕಾವ್ಯವಾಗಿರುವ **Paradise Lost** (ಪ್ಯಾರಡೈಸ್ ಲಾಸ್ಟ್) ಎಂಬ ಗ್ರಂಥದಲ್ಲಿ ಕವಿಯು ಎಚ್ಚರದಪ್ಪಿ ಪ್ರತಿನಾಯಕನಾದ ಶೈತಾನನನ್ನು ಮಿತಿಮೀರಿ ಉಜ್ಜ್ವಲಗೊಳಿಸಿಬಿಟ್ಟಿದ್ದಾನೆ. **'He has justified the ways of Satan to man** (ಕವಿಯು ಶೈತಾನನು ನಮ್ಮ ಹೃದಯವನ್ನು ಸೂರೆಗೊಳ್ಳುವಂತೆ ಮಾಡಿ ಅವನ ಮಾರ್ಗಗಳೇ ನ್ಯಾಯಬದ್ಧವೆಂದು ಜನರಿಗೆ ಮನವರಿಕೆಯಾಗುವಂತೆ ಮಾಡಿದ್ದಾನೆ)' ಎಂದು ಕೆಲವರು ಹೇಳುತ್ತಾರೆ. ಸಂಸ್ಕೃತಭಾಷೆಯ ಹಯಗ್ರೀವವಧವೆಂಬ

---

*ವಿದ್ವಾನ್ ರಂಗನಾಥಶರ್ಮರ ಸೀತಾವಿಷಯಕವಾದ ಇತ್ತೀಚಿನ ಲೇಖನಗಳು ಈ ಬಗೆಗೆ ತುಂಬಾ ಓಜಸ್ವಿಯಾಗಿವೆ. ಬೋಧಪ್ರದವಾಗಿವೆ.

ಕಾವ್ಯದಲ್ಲಿಯೂ ಈ ದೋಷವುಂಟೆಂದು ಹೇಳುತ್ತಾರೆ. ಆದರೆ ವಾಲ್ಮೀಕಿರಾಮಾಯಣದ ಮೇಲೆ ಇಂತಹ ಆರೋಪಕ್ಕೆ ಅವಕಾಶವೇ ಇಲ್ಲ. ಮೇಲ್ಕಂಡ ಪ್ರತಿನಾಯಕನು ಕೆಲವು ವಿಷಯಗಳಲ್ಲಿ 'ಎಲ್ಲಾ ಜಾಣ'ನಾಗಿರುವಂತೆಯೇ ಅತಿಮುಖ್ಯವಾದ ಕೆಲವು ವಿಷಯಗಳಲ್ಲಿ 'ತುಸು ಕೋಣ'ನೂ ಆಗಿದ್ದಾನೆ. ಅದೇ ಆಂಜನೇಯನು ಗಮನಿಸುವಂತೆ–"ರಾವಣನು ತನ್ನ ಕ್ರೂರವೂ, ಘಾತಕವೂ, ಕುತ್ಸಿತವೂ ಆದ ಕರ್ಮಗಳಿಂದ ದೇವ-ದಾನವಸಹಿತ ಎಲ್ಲ ಲೋಕಗಳಿಗೂ ಅತ್ಯಂತ ಭೀಕರನಾಗಿದ್ದಾನೆ. ಅಧರ್ಮವೇ ಈತನ ತಕ್ಕಡಿಯಲ್ಲಿ ಭಾರವಾಗಿ ತೂಗುತ್ತಿದೆ. ಇಲ್ಲದಿದ್ದರೆ ಈತ ದೇವಲೋಕಕ್ಕೂ ರಕ್ಷಕನಾಗಲು ಸಮರ್ಥನಾಗುತ್ತಿದ್ದ." **'ಅಸ್ಯ ಕ್ರೂರೈರ್ನೃಶಂಸೈಶ್ಚ ಕರ್ಮಭಿರ್ಲೋಕಕುತ್ಸಿತೈಃ । ಸರ್ವೇ ಬಿಭ್ಯತಿ ಖಲ್ವಸ್ಮಾತ್ ಲೋಕಾಃ ಸಾಮರದಾನವಾಃ । ಯದ್ಯಧರ್ಮೋ ನ ಬಲವಾನ್ ಸ್ಯಾದಯಂ ರಾಕ್ಷಸೇಶ್ವರಃ । ಸ್ಯಾದಯಂ ಸುರಲೋಕಸ್ಯ ಸಶಕ್ರಸ್ಯಾಪಿ ರಕ್ಷಿತಾ ॥'** (ಸುಂದರ-49 18-19)

ನಾಯಕಮಣಿಯಾಗಿರುವ ಶ್ರೀರಾಮನು ಪುರುಷೋತ್ತಮ. ತನ್ನ ಗುಣಾತಿಶಯದಿಂದ ಆತನು ನಿಸ್ಸಮಾಭ್ಯಧಿಕನೇ ಆಗಿದ್ದಾನೆ. ಪ್ರಧಾನವಾಗಿ ಹೃದಯದಲ್ಲಿ ನೆಲೆಸುವ ಪಾತ್ರ. ಉಳಿದ ಎಲ್ಲ ಪಾತ್ರಗಳ ಕರ್ಮಗಳಿಗೂ ಕೇಂದ್ರವಾಗಿರುವ ಪಾತ್ರ ಅವನದೇ. ಅವನು ಸರ್ವರಸಗಳಿಗೂ ಆಶ್ರಯ. ಸೀತಾವಿಲಾಸದಲ್ಲಿ ಶೃಂಗಾರರಸವನ್ನೂ, ಧನುರ್ಭಂಜನದಲ್ಲಿ ವೀರರಸವನ್ನೂ, ಕಾಕಾಸುರನ ವಿಷಯದಲ್ಲಿ ಕರುಣರಸವನ್ನೂ, ಸಮುದ್ರಸೇತು ಸ್ಥಾಪನೆಯಲ್ಲಿ ಅದ್ಭುತರಸವನ್ನೂ, ಶೂರ್ಪಣಖೆಯ ವಿಷಯದಲ್ಲಿ ಹಾಸ್ಯರಸವನ್ನೂ, ಯುದ್ಧರಂಗದಲ್ಲಿ ಬೀಭತ್ಸರಸವನ್ನೂ, ರಾವಣಸಂಹಾರದಲ್ಲಿ ರೌದ್ರರಸವನ್ನೂ ತೋರಿದರೂ–ಮುನಿಜನರ ಹೃದಯದಲ್ಲಿ ಶಾಂತರಸದ ಘನಮೂರ್ತಿಯೇ ಆಗಿರುವ ಲೋಕೋತ್ತರ ಮಹಾಪುರುಷ. ಆದರೂ ಲೋಕಕ್ಕೆ ಆದರ್ಶವಾಗಬಲ್ಲ ಮಹಾಪುರುಷ.

ಶೃಂಗಾರಂ ಕ್ಷಿತಿನಂದಿನೀವಿಹರಣೇ ವೀರಂ ಧನುರ್ಭಂಜನೇ ।
ಕಾರುಣ್ಯಂ ಬಲಿಭುಜ್ಯುಖೇಽದ್ಭುತರಸಂ ಸಿಂಧೌ ಗಿರಿಸ್ಥಾಪನೇ ॥

ಹಾಸ್ಯಂ ಶೂರ್ಪಣಖಾಮುಖೇ ಭಯವಹೇ ಬೀಭತ್ಸಮಾಜೇ
ಮೃಃಖೇ ।
ರೌದ್ರಂ ರಾವಣಭಂಜನೇ ಮುನಿಜನೇ ಶಾನ್ತಂ ವಪುಃ ಪಾತು ವಃ ॥

ಆದರ್ಶಪುತ್ರ, ಸೋದರ, ಪತಿ, ಬಂಧು, ರಾಜನೀತಿಜ್ಞ, ಯೋಧ, ಮಹಾವೀರ, ಮಹಾಧೀರ, ಆದರ್ಶಮಿತ್ರನಾಗಿರುವಂತೆಯೇ ಶತ್ರುವಿದ್ದರೂ ಅವನಂತಹವನೇ ಇರಬೇಕು–ಎಂದು ತ್ರೈಲೋಕ್ಯವೀರನಾದ ರಾವಣನಿಗೆ ಮನವರಿಕೆಯಾಗುವಂತೆ ಮಾಡಿದ ಅತಿಶಯದ ವೀರ.

ಗಚ್ಛಾನುಜಾನಾಮಿ ರಣಾರ್ದಿತಸ್ತ್ವಂ
ಪ್ರವಿಶ್ಯ ರಾತ್ರಿಂಚರರಾಜ ಲಂಕಾಮ್ ।
ಆಶ್ವಾಸ್ಯ ನಿರ್ಯಾಹಿ ರಥೀ ಚ ಧನ್ವೀ
ತದಾ ಬಲಂ ದ್ರಕ್ಷ್ಯಸಿ ಮೇ ರಥಸ್ಥಃ ॥

ಸುಲಭವೂ, ಸರಳವೂ, ದೀರ್ಘಸಮಾಸರಹಿತವೂ ಆದ ಪದಬಂಧಗಳಿಂದಲೂ–ಸಹಜವಾದ ಅರ್ಥಾಲಂಕಾರ-ಶಬ್ದಾಲಂಕಾರಗಳಿಂದಲೂ–ವರ್ಣನೆಗಳಿಂದಲೂ ರಮಣೀಯತಮವಾಗಿರುವ ಈ ಕಾವ್ಯಕುಸುಮವನ್ನು ಸೃಷ್ಟಿಸಿದ ಕವಿಪುಂಗವನನ್ನು–'ಮಧುಮಯವಾದ ಮಾತುಗಳಿಗೆ ಮಾರ್ಗ ತೋರಿಸಿದ ಮಹರ್ಷಿ' **'ಮಧುಮಯಫಣಿತೀನಾಂ ಮಾರ್ಗದರ್ಶೀ ಮಹರ್ಷಿಃ'**–ಎಂದು ಹೊಗಳಿರುವುದು ಅತ್ಯಂತ ಉಚಿತವಾಗಿದೆ. ಬ್ರಹ್ಮದೇವರ ಅನುಗ್ರಹದಿಂದ ವಾಲ್ಮೀಕಿಯ ರಸನೆಯಿಂದ ಸ್ರವಿಸಿದ 'ಮಾ ನಿಷಾದ' ಎಂಬ ಶ್ಲೋಕದ ಮಾದರಿಯನ್ನನುಸರಿಸಿ ಕಾವ್ಯದ ಶ್ಲೋಕಗಳೂ ಬಹುಮಟ್ಟಿಗೆ ಅನುಷ್ಟುಪ್‌ಛಂದಸ್ಸಿನಲ್ಲಿಯೇ ಅಳವಡಿಸಲ್ಪಟ್ಟಿವೆ. ಇದು ಮಧುರಸಂಗೀತಕ್ಕೆ ಅನುಗುಣವಾದ ರಚನೆಯೂ ಆಗಿರುವ ಮಧುರಸಾಹಿತ್ಯ. **'ಪಾಠ್ಯೇ ಗೇಯೇ ಚ ಮಧುರಂ' 'ತದುಪಗತಸಮಾಸ ಸಂಧಿಯೋಗಂ ಸಮಮಧುರೋಪನತಾರ್ಥವಾಕ್ಯಬದ್ಧಮ್'**

ಕಾವ್ಯಕ್ಕೆ ಅಗ್ಗಳಿಕೆ ಬರುವುದು ಅದರ ವಸ್ತುವಿನ ಶ್ರೇಷ್ಠತೆ, ಕರ್ತೃವಿನ ಹಿರಿಮೆ ಮತ್ತು ಅದರಿಂದ ಒಸರುವ ರಸ ಮತ್ತು ಪುರುಷಾರ್ಥಗಳಿಂದ. ಈ ಎಲ್ಲ ದೃಷ್ಟಿಗಳಿಂದಲೂ ಅಗ್ರಸ್ಥಾನದ ಕೃತಿ-ಅಮರಕೃತಿ ಈ ರಾಮಾಯಣ.

ಆಕರಕಾವ್ಯ

ಕವಿತೆಯ ಶಾಖೆಯನ್ನೇರಿ 'ರಾಮ ರಾಮ' ಎಂದು ಪಂಚಮಶ್ರುತಿ ಯಲ್ಲಿ ಗಾನಮಾಡುತ್ತಿರುವ ಈ ವಾಲ್ಮೀಕಿಕೋಕಿಲದ ಇಂಚರದ ಆಕರ್ಷಣೆಗೆ ಒಳಪಡದವರಾರು? ಕೀರ್ತಿಶಿಖರವನ್ನೇರಿದ ಈ ವಾಲ್ಮೀಕಿಯ ಅಮರಕೃತಿ ಯನ್ನಾಧರಿಸಿ ಸಂಸ್ಕೃತದಲ್ಲಿ ಅನೇಕ ರಾಮಾಯಣಗಳು ಅವತಾರಮಾಡಿ ದುವು. ಅಧ್ಯಾತ್ಮರಾಮಾಯಣ, ವಾಸಿಷ್ಠರಾಮಾಯಣ, ಅಗಸ್ತ್ಯರಾಮಾ ಯಣ, ಆನಂದರಾಮಾಯಣ. ಅದ್ಭುತರಾಮಾಯಣ–ಮುಂತಾದುವನ್ನು ಇದಕ್ಕೆ ಉದಾಹರಿಸಬಹುದು. ಅಧ್ಯಾತ್ಮದ ಪ್ರಾಧಾನ್ಯ, ಸೀತಾದೇವಿಗೆ ಪ್ರಾಧಾನ್ಯ ಮುಂತಾದ ವಿಶೇಷಗಳಿಂದ ಇವುಗಳಿಗೆ ಅತಿಶಯವುಂಟು. ಆದರೆ ಕಾವ್ಯಸೌಂದರ್ಯ, ನೀತಿ, ಧರ್ಮ ಮತ್ತು ಜ್ಞಾನಗಳ ಸುಂದರತಮ ಸಂಗಮವುಳ್ಳ ವಾಲ್ಮೀಕಿಯ ರಸವಾಹಿನಿಯು ಸರ್ವೋತ್ತಮವಾಗಿದೆ ಯೆಂಬುದು ನಿರ್ವಿವಾದವಾದ ವಿಷಯ. ಭಾರತದ ದೇಶಭಾಷೆಗಳ ಲ್ಲಿಯೂ–ಕಂಬರಾಮಾಯಣ, ತುಲಸೀರಾಮಾಯಣ, ಕೃತ್ತಿವಾಸರಾಮಾ ಯಣ, ರಂಗನಾಥರಾಮಾಯಣ, ತೊರವೆರಾಮಾಯಣ ಮುಂತಾದ ಕೃತಿರತ್ನಗಳು ರಾಮಾಯಣಾರ್ಣವದಿಂದ ಪ್ರಕಾಶವನ್ನು ಪಡೆದು ಸಂಸ್ಕೃತಿ ದೇವಿಗೆ ಸಮರ್ಪಣೆ ಮಾಡಿವೆ.

ನಮ್ಮ ರಾಷ್ಟ್ರಕವಿ ಕಾಳಿದಾಸನ ಕಾವ್ಯರತ್ನಗಳಾದ ರಘುವಂಶ-ಮೇಘ ದೂತಗಳು, ಭಾಸಮಹಾಕವಿಯ ಪ್ರತಿಮಾ-ಅಭಿಷೇಕನಾಟಕಗಳು, ಭವ ಭೂತಿಯ ಉತ್ತರರಾಮಚರಿತ, ಮುರಾರಿಯ ಅನರ್ಘರಾಘವ, ವಿದರ್ಭ ರಾಜನ ರಾಮಾಯಣಚಂಪೂ, ಶ್ರೀವೆಂಕಟನಾಥರ ಹಂಸಸಂದೇಶ ಇತ್ಯಾದಿ ಗ್ರಂಥಗಳನ್ನು ಅವಲೋಕಿಸಿದಾಗ ನಮ್ಮ ಸಾಹಿತ್ಯದ ಎಲ್ಲ ರೂಪಗಳಿಗೂ ವಾಲ್ಮೀಕಿರಾಮಾಯಣವು ಜೀವಾಳವಾಗಿದೆಯೆಂಬುದು ಸ್ಪಷ್ಟಪಡುತ್ತದೆ. ಜೈನ-ಬೌದ್ಧಕವಿಗಳೂ ತಮ್ಮ ಮತಗಳಿಗನುಗುಣವಾಗಿ ಈ ರಾಮಕಥೆಯನ್ನು ಬಳಸಿ ಗ್ರಂಥರಚನೆ ಮಾಡಿದ್ದಾರೆ.

ಪಾತ್ರಗಳ ವೈವಿಧ್ಯ

ವಾಲ್ಮೀಕಿರಾಮಾಯಣದ ನಾಯಕನು ಸಗುಣಸಾಕಾರವಾದ ಧರ್ಮನೇ ಆಗಿದ್ದಾನೆ–'ರಾಮೋ ವಿಗ್ರಹವಾನ್ ಧರ್ಮಃ' 'ವಿದ್ಧಿ ಮಾಮೃಷಿ-ಭಿಸ್ತುಲ್ಯಂ ಕೇವಲಂ ಧರ್ಮಮಾಸ್ಥಿತಂ.' ನಾಯಕಿಯಾದ ಸೀತಾ

ದೇವಿಯು ಆತನ ಸಹಧರ್ಮಚರೀ. ಇವರ ಎಣೆಯಿಲ್ಲದ ಗುಣಾತಿಶಯ ಸಂಪತ್ತನ್ನು ನಾನಾಪ್ರಸಂಗಗಳಲ್ಲಿ ವಾಲ್ಮೀಕಿಯೇ ಮುಕ್ತಕಂಠದಿಂದ ಹೊಗಳುತ್ತಾನೆ. ಲಕ್ಷ್ಮಣ-ಭರತ-ಶತ್ರುಘ್ನರು ಆತನ ಮಹಾಧರ್ಮದ ಸಾಕ್ಷಾದಂಶಗಳೇ ಆಗಿದ್ದಾರೆ. ಸತ್ಯನಿಷ್ಠೆ-ಸ್ವಾರ್ಥತ್ಯಾಗಗಳೇ ಮುಂತಾದ ಮಾನವೀಯ ಮಹಾಗುಣಗಳಲ್ಲೂ, ಶೌರ್ಯ-ಪರಾಕ್ರಮ-ಧೈರ್ಯ-ಸ್ಥೈರ್ಯ, ಪೀಡಿತರ ರಕ್ಷಣೆಯೇ ಮುಂತಾದ ಕ್ಷತ್ರಧರ್ಮದ ಮಹಾಗುಣ ಗಳಲ್ಲೂ ಅವರು ಶ್ರೀರಾಮನಿಗೆ ಮಾತ್ರವೇ ಎರಡನೆಯವರು. ಅವರು ಕೆಲವೊಮ್ಮೆ ತೋರುವ ಅನಿಷ್ಟವಾದ ಕ್ರೋಧವೇ ಮುಂತಾದುವು ಗಳಿಗೂ ಅವರ ಶ್ರೀರಾಮನಿಷ್ಠಾಧರ್ಮವೇ ಮೂಲ. ಮಹಾತಪಸ್ವಿನಿ ಯಾದ ಕೌಸಲ್ಯೆಯನ್ನೂ, ಆಕೆಯ ಒಡನಾಡಿಯಾದ ಸುಮಿತ್ರೆಯನ್ನೂ, ದುರಭಿಮಾನ-ದುಷ್ಟಹಠಗಳಿಂದ ಅನರ್ಥಕ್ಕೆ ಕಾರಣ ಳಾದರೂ ಸ್ವಭಾವತಃ ವಾತ್ಸಲ್ಯಮಯಿಯಾದ ಕೈಕೇಯಿಯನ್ನೂ, ಆಕೆಯ ಆಪ್ತಕಾರ್ಯದರ್ಶಿನಿ ಯಾದ ಮಂಥರೆಯನ್ನೂ, ಮಂತ್ರಿಸತ್ತಮ ಸುಮಂತ್ರನನ್ನೂ, ಶ್ರೀರಾಮನ ಬಾಲ್ಯಜೀವನವನ್ನು ರೂಪಿಸಿದ ಬ್ರಹ್ಮರ್ಷಿ ವಿಶ್ವಾಮಿತ್ರರನ್ನೂ, ಕುಲಗುರು ವಸಿಷ್ಠರನ್ನೂ, ಸಾರ್ವಭೌಮ ದಶರಥನನ್ನೂ, ರಾಜರ್ಷಿ ಜನಕನನ್ನೂ ಮರೆಯಲಾಗುವುದಿಲ್ಲ. ಈ ನಾಗರೀಕವರ್ಗದಿಂದ ದೂರವಾಗಿ ಅರಣ್ಯದಲ್ಲಿದ್ದ ಮೈತ್ರಿಯ ಮೂರ್ತಿ ಗುಹ, ಗುರುಭಕ್ತಿ-ಆತ್ಮಗುಣ ಸಂಪತ್ತುಗಳಿಂದ ಮೋಕ್ಷಕ್ಕೆ ಅಧಿಕಾರಿಣಿಯಾಗಿದ್ದ ಧರ್ಮನಿಪುಣೆ ಶ್ರಮಣಿ ಶಬರಿ—ಈ ಪಾತ್ರಗಳು ಸದಾಚಾರ-ಸದ್ಗುಣಗಳು ಓದು-ಬರಹ ಬಲ್ಲವರ ಏಕಸ್ವಾಮ್ಯವಲ್ಲ ಎಂಬುದನ್ನು ಸಾರುತ್ತವೆ. ಜಟಾಯುವು ತಿರ್ಯಕ್‌ಪ್ರಾಣಿ ಯಾದರೂ ಶೌರ್ಯದಲ್ಲೂ, ನಿಷ್ಠೆಯಲ್ಲೂ ದೇವಸಮಾನನಾಗಿ ಊರ್ಧ್ವ ಗತಿಯನ್ನೇ ಪಡೆಯುವವನು. ವಾಲಿ-ಸುಗ್ರೀವಾದಿಗಳು ಹುಟ್ಟು-ಆಕಾರ ಗಳಿಂದ ಕಪಿಗಳಾದರೂ ಪರಾಕ್ರಮದಿಂದ ಮನುಷ್ಯರನ್ನು ಹೋಲುತ್ತಾರೆ. ಹಿತೈಷಿಯೂ, ಮನೀಷಿಯೂ, ಜ್ಞಾನವೃದ್ಧನೂ, ವಯೋವೃದ್ಧನೂ ಆಗಿದ್ದ ಜಾಂಬವಂತನೂ ಹೀಗೆಯೇ. ಸೀತಾ-ರಾಮರಿಬ್ಬರಿಂದಲೂ 'ಅದ್ವಿತೀಯ' ಎಂಬ ಪ್ರಮಾಣಪತ್ರವನ್ನು ಪಡೆದವನು ಆಂಜನೇಯ. ಇವರ ಹುಟ್ಟಿಗೆ ಅನುಗುಣವಾದ ಸ್ವಭಾವವೂ ಆಗಾಗ್ಗೆ ಎದ್ದುಕಾಣುತ್ತದೆ. ರಾಕ್ಷಸರಾಜ ರಾವಣನು ಧರ್ಮಾಧರ್ಮಗಳ ಮಿಶ್ರಪ್ರಕೃತಿ. ಆದರೆ ಆಂಜನೇಯನು

ಗಮನಿಸುವಂತೆ ಅವನಲ್ಲಿ ಅಧರ್ಮದ ತೂಕವು ಹೆಚ್ಚು–**'ಯದ್ಯಧರ್ಮೋ ನ ಬಲವಾನ್ ।'** ವಿಭೀಷಣನು ಹುಟ್ಟಿನಿಂದ ರಾಕ್ಷಸನಾದರೂ ಗುಣ- ಶೀಲಗಳಲ್ಲಿ ಆತನು ಧರ್ಮಿಷ್ಠನೇ ಎಂದು ಆತನ ತಂಗಿಯೇ ಹೇಳುತ್ತಾಳೆ. **'ವಿಭೀಷಣಸ್ತು ಧರ್ಮಾತ್ಮಾ ನ ತು ರಾಕ್ಷಸಚೇಷ್ಟಿತಃ ।'** ಮಾರುತಿಯೂ ಇದನ್ನು ಗಮನಿಸುತ್ತಾನೆ. ಮುಂದೆ ರಾಮಪರಿವಾರದ ಇತರರಿಗೂ ಇದು ವಿದಿತವಾಗುವುದು. ಆತನು ಭಗವದ್‌ಭಕ್ತ ; ವಿಷ್ಣುಭಕ್ತಿಯನ್ನೇ ವರವನ್ನಾಗಿ ಪಡೆದವನು ; ಪರಮಭಾಗವತ–ಎಂದೂ ಅನೇಕ ಧರ್ಮಗ್ರಂಥಗಳು ಸಾರುತ್ತವೆ. ಕುಂಭಕರ್ಣನು ಆಹಾರ-ವಿಹಾರಗಳಲ್ಲೂ, ಬಲಾತಿಶಯದಲ್ಲೂ ರಾಕ್ಷಸರಲ್ಲೂ ಮಹಾರಾಕ್ಷಸ. ಆದರೆ ಅಣ್ಣನಿಗೆ ವಿಭೀಷಣನಂತೆಯೇ ಒಳ್ಳೆಯ ಉಪದೇಶವನ್ನು ಮಾಡಿ ಅದು ವ್ಯರ್ಥವಾದಾಗ ಅವನಿಗೋಸ್ಕರ ಯುದ್ಧಮಾಡಿ ಪ್ರಾಣಬಿಡುತ್ತಾನೆ. ತ್ರಿಜಟಾರಾಕ್ಷಸಿಯು ವಿಷವಲ್ಲಿಗಳ ಮಧ್ಯೆ ಬೆಳೆದ ಒಂದು ಅಮೃತವಲ್ಲಿಯಂತೆ ಸೀತೆಯ ಗೆಳತಿಯಾಗುತ್ತಾಳೆ.

ಹೀಗೆ ನರ-ವಾನರ-ಪಕ್ಷಿ-ರಾಕ್ಷಸಪಾತ್ರಗಳಲ್ಲದೇ ದೇವತೆಗಳೂ ಈ ವಿಶ್ವಮಹಾಕಥೆಯಲ್ಲಿ ಪಾತ್ರಧಾರಿಗಳಾಗುತ್ತಾರೆ. ಮಹಾವಿಷ್ಣುವು ಮಹಾ ವಿಷ್ಣುವೇ. ರುದ್ರದೇವರ ಮತ್ತು ಬ್ರಹ್ಮದೇವರ ವಿಷಯದಲ್ಲೂ ಇದೇ ಮಾತು. ಅವರು ದೇವಸಹಾಯಾರ್ಥವಾಗಿ ತ್ರಿಗುಣಗಳಲ್ಲಿ ಓಡಾಡುತ್ತಿರುವಂತೆ ಕಂಡರೂ ತ್ರಿಗುಣಾತೀತರೇ. ಇಂದ್ರಾದಿಗಳು ಮಹಾವಿಭೂತಿಸಂಪನ್ನ ರಾದರೂ ತ್ರಿಗುಣಗಳಿಗೆ ಒಳಪಟ್ಟವರಾದ್ದರಿಂದ ಅಸೂಯೆ, ಸ್ಪರ್ಧೆ ಮುಂತಾದ ದೌರ್ಬಲ್ಯಗಳನ್ನೂ ಅವರಲ್ಲಿ ಕಾಣುತ್ತೇವೆ.

ಹೀಗೆ ವಿಶ್ವದ ವಿವಿಧ ಸ್ಥಾನ, ಗುಣ, ಶೀಲ, ಸಂಪತ್ತು, ಸ್ವಭಾವ, ಅಂತಸ್ತುಗಳ ಎಲ್ಲ ಬಗೆಯ ಜೀವಿಗಳನ್ನೂ ಅವರವರ ನಿಜರೂಪದಲ್ಲಿ ಚಿತ್ರಿಸಿ ವಿಶ್ವವ್ಯಾಪಕವಾದ ಧರ್ಮವನ್ನೂ ಅದಕ್ಕೆ ಪ್ರಭುವಾದ ಬ್ರಹ್ಮವನ್ನೂ ಯಥಾವತ್ತಾಗಿ ಸಹಜಸೌಂದರ್ಯದೊಡನೆ ಚಿತ್ರಿಸಿರುವ ಶ್ರೀಮದ್ರಾಮಾ ಯಣವು ನಿಜಕ್ಕೂ ವಿಶ್ವಕಾವ್ಯವೇ ಆಗಿದೆ.

ನೀತಿ–ಪುರುಷಾರ್ಥಶಾಸ್ತ್ರ

ರಾಮಾಯಣವು ಕಾವ್ಯವಾದ್ದರಿಂದ ಅದು ನೇರವಾಗಿ ಧರ್ಮ-

ಕಾಮಾರ್ಥಗಳನ್ನು ಉಪದೇಶಮಾಡುವುದು ಯುಕ್ತವಲ್ಲ. ನಮ್ಮ ಲಾಕ್ಷಣಿಕರು ಹೇಳುವಂತೆ ಕಾಂತಾಸಮ್ಮಿತವಾಗಿಯೇ ಅದು ತಾನು ಚಿತ್ರಿಸುವ ಪಾತ್ರ-ಸನ್ನಿವೇಶ-ಕ್ರಿಯೆಗಳಿಂದ ಮನೋಜ್ಞವಾಗಿ, ಪ್ರಭಾವಪೂರ್ಣವಾದ ರೀತಿಯಲ್ಲಿ ನೀತಿಧರ್ಮಗಳ ಬಗೆಗೆ ನಮಗೆ ತಿಳಿವಳಿಕೆಯನ್ನು ನೀಡುತ್ತದೆ. ಕೆಲವು ಕಡೆ ಉಪದೇಶಗಳ ಮೂಲಕವೂ ಧರ್ಮ-ನೀತಿಗಳ ಸಂಕ್ರಮಣ ಆಗುತ್ತದೆ. ಮಹರ್ಷಿಗಳು, ಸೀತಾ-ರಾಮರು, ಜಾಂಬವಂತ-ಹನುಮಂತರು ಮುಂತಾದವರು ಧರ್ಮದ ಪ್ರತಿನಿಧಿಗಳಾಗಿ ಮಾತನಾಡುತ್ತಾರೆ. ಇಡೀ ರಾಮಾಯಣವು ಒಂದು ಧರ್ಮಗ್ರಂಥವೇ ಆಗಿದೆಯೆಂದು ಧರ್ಮಾಕೂತ ವೆಂಬ ಗ್ರಂಥವು ತಿಳಿಸುತ್ತದೆ. ಶ್ರೀರಾಮನು 'ಕಚ್ಚಿತ್' ಸರ್ಗದಲ್ಲಿ ಮಾಡುವ ಕುಶಲಪ್ರಶ್ನೆಯು ಧರ್ಮಾರ್ಥ-ಕಾಮಗಳ ಸಂಕ್ಷಿಪ್ತವಾದ ಸಂಹಿತೆಯೇ ಆಗಿದೆ.

ಸುಗ್ರೀವ-ವಿಭೀಷಣರು ಮಹಾತ್ಮರಾದರೂ ಅರ್ಥಾರ್ಥೀ ಭಕ್ತರೇ ಆಗಿದ್ದಾರೆ. ಸೌಭ್ರಾತ್ರಕ್ಕಿಂತಲೂ ಅರ್ಥಪ್ರಾಪ್ತಿಗೆ ಹೆಚ್ಚು ಪ್ರಾಧಾನ್ಯವನ್ನು ಅಥವಾ ಸೌಭ್ರಾತ್ರದಷ್ಟೇ ಪ್ರಾಧಾನ್ಯವನ್ನು ಕೊಡುವವರು ಅವರು. ಈ ಹಿನ್ನೆಲೆಯಲ್ಲಿ ದಶರಥನ ಸುಪುತ್ರರ ಸೌಭ್ರಾತ್ರ, ಸ್ವಾರ್ಥತ್ಯಾಗಗಳು ಪರಮೋಜ್ಜ್ವಲವಾಗಿ ಎದ್ದುಕಾಣುತ್ತವೆ. ಪಿತೃಭಕ್ತಿ, ಆಚಾರ್ಯನಿಷ್ಠೆ, ಸ್ವಾಮಿಭಕ್ತಿ, ಪತಿಭಕ್ತಿ, ರಾಜ ಭಕ್ತಿ ಮುಂತಾದ ಧಾರ್ಮಿಕ-ಸಾಮಾಜಿಕ ಸದ್ಗುಣಗಳಿಗೂ ರಾಮಾಯಣವು ತನ್ನ ನಾನಾಪಾತ್ರಗಳ ಮೂಲಕ ದರ್ಪಣಪ್ರಾಯವಾಗಿದೆ. ಧರ್ಮಶಾಸ್ತ್ರ ದಂತೆಯೇ ಸಮಾಜಶಾಸ್ತ್ರವೂ ಆಗಿದೆ. ಆದರ್ಶರಾಜ್ಯವ್ಯವಸ್ಥೆಯ ವಿಷಯ ದಲ್ಲೂ ರಾಮಾಯಣವು ಪ್ರಮಾಣಗ್ರಂಥವೇ ಆಗಿದೆ. ರಾಮರಾಜ್ಯ ಎನ್ನುವುದು ಆದರ್ಶರಾಜ್ಯ ಎನ್ನುವುದಕ್ಕೆ ಪರ್ಯಾಯಪದ. ದಶರಥ, ಶ್ರೀರಾಮ, ಭರತ, ವಾಲಿ-ಸುಗ್ರೀವರು, ರಾವಣ—ಇವರೆಲ್ಲರೂ ದಕ್ಷರಾದ ರಾಜಶ್ರೇಷ್ಠರೇ.

'ರಾಮಾಯಣದಲ್ಲಿ ಧರ್ಮ-ಅರ್ಥ-ಕಾಮಗಳ ವಿಷಯವೇನೋ ಚೆನ್ನಾಗಿ ಬರುತ್ತದೆ. ಆದರೆ ಅದರಲ್ಲಿ ಮೋಕ್ಷದ ವಿಷಯ ಬರುವುದೇ ಇಲ್ಲ. ಮೋಕ್ಷ ವೆಂಬ ಪುರುಷಾರ್ಥದ ಕಲ್ಪನೆಯೇ ಆ ಕಾಲದಲ್ಲಿ ಇರಲಿಲ್ಲ. ಬೌದ್ಧ ಧರ್ಮ ದಿಂದ ಅಥವಾ ಜೈನಧರ್ಮದಿಂದ ಆ ಪುರುಷಾರ್ಥ ಹಿಂದೂಜನರಿಗೆ ದೊರೆಯಿತು'—ಎಂಬ ಹೊಸ ವಾದವೊಂದು ಇತ್ತೀಚೆಗೆ ತಲೆಹಾಕಿದೆ. ರಾಮಾ

ಯಣದಲ್ಲಿ ಶಬರಿಯು ಆತ್ಮಸಮಾಧಿಯಿಂದ ದೇಹತ್ಯಾಗಮಾಡಿದ ವಿಷಯ, ಸುತೀಕ್ಷ್ಣರು ಅಗ್ನಿಯಲ್ಲಿ ದೇಹತ್ಯಾಗಮಾಡಿ ಬ್ರಹ್ಮಲೋಕವನ್ನು ಪಡೆದ ಪ್ರಕರಣ, ಶ್ರೀರಾಮನು ತನ್ನನ್ನು ನಂಬಿ ಬಂದು ಸರಯೂನದಿಯಲ್ಲಿ ಕೊನೆಯಲ್ಲಿ ಅವಗಾಹನಮಾಡಿದ ಅಯೋಧ್ಯೆಯ ಪೌರರಿಗೆ "ಸಾಂತಾನಿಕ" ದಿವ್ಯಪದವನ್ನು ಕರುಣಿಸಿದ್ದು–ಇತ್ಯಾದಿಗಳನ್ನು ಅವರು ಗಮನಿಸಿಯೇ ಇಲ್ಲ. ಇದಲ್ಲದೇ–"ಪುರುಷಾರ್ಥಗಳಲ್ಲಿ ಮೋಕ್ಷವನ್ನು ಎಲ್ಲಿ ಪ್ರತ್ಯೇಕವಾಗಿ ಹೇಳಿಲ್ಲವೋ ಅಲ್ಲಿ ಧರ್ಮಪದದಿಂದಲೇ ಧರ್ಮ ಮತ್ತು ಮೋಕ್ಷ ಎರಡನ್ನೂ ಗ್ರಹಿಸಬೇಕು. ಏಕೆಂದರೆ : ಅಭ್ಯುದಯ (ಲೌಕಿಕವಾದ ಏಳಿಗೆ) ಮತ್ತು ನಿಃಶ್ರೇಯಸ (ಮುಕ್ತಿ) ಇವೆರಡನ್ನೂ ಕೊಡುವುದು ಧರ್ಮ. **'ಯತೋಽಭ್ಯುದಯ ನಿಃಶ್ರೇಯಸಸಿದ್ಧಿಃ ಸ ಧರ್ಮಃ'** ಎಂಬುದಾಗಿ ಜ್ಞಾನಿಗಳು ಧರ್ಮದ ಲಕ್ಷಣವನ್ನು ಹೇಳುತ್ತಾರೆ"–ಎಂದು ಮಹಾಗುರುದೇವರು ಉಪದೇಶಿಸುತ್ತಾರೆ. ಶಂಕರಭಗವತ್ಪಾದರು, ಭಗವದ್ರಾಮಾನುಜರು, ಶ್ರೀಮದಾನಂದತೀರ್ಥಶ್ರೀಚರಣರು–ಇತ್ಯಾದಿ ಎಲ್ಲ ಆಚಾರ್ಯಶ್ರೇಷ್ಠರಿಗೂ ಸಮ್ಮತವಾದ ಧರ್ಮಲಕ್ಷಣ ಅದು.

ಅಧ್ಯಾತ್ಮಶಾಸ್ತ್ರವೇ?

ವಾಲ್ಮೀಕಿಯ ಶ್ರೀಮದ್ರಾಮಾಯಣವು ಕಾವ್ಯವೂ, ಧರ್ಮಸಂಹಿತೆಯೂ ಆಗಿರುವಂತೆಯೇ ಅಧ್ಯಾತ್ಮಶಾಸ್ತ್ರವೂ ಆಗಿದೆ ಎಂಬುದು ನಮ್ಮ ಸಂಪ್ರದಾಯದ ಚಿರಂತನಕಾಲದ ವಿಶ್ವಾಸ. ಕಾವ್ಯವನ್ನು ಅಧ್ಯಾತ್ಮಗ್ರಂಥ ಎಂದು ಕರೆದರೆ ನಮ್ಮಲ್ಲಿ ಅನೇಕರಿಗೆ ಕಸಿವಿಸಿಯಾಗುತ್ತದೆ. ಪಾಶ್ಚಾತ್ಯರ ಕಾವ್ಯಲಕ್ಷಣವನ್ನು ಅಧ್ಯಯನಮಾಡಿದ ಸಂಸ್ಕಾರಸಂಬಂಧವೇ ಈ ಕಸಿವಿಸಿಗೆ ಕಾರಣ. ಧರ್ಮ, ಅರ್ಥ, ಕಾಮ ಮತ್ತು ಮೋಕ್ಷಗಳಲ್ಲಿ ವಿಚಕ್ಷಣತೆಯನ್ನು ಉಂಟುಮಾಡುತ್ತದೆ ಸತ್ಕಾವ್ಯ.

ಧರ್ಮಾರ್ಥಕಾಮಮೋಕ್ಷೇಷು ವೈಚಕ್ಷಣ್ಯಂ ಕಲಾಸು ಚ ।
ಕರೋತಿ ಕೀರ್ತಿಂ ಪ್ರೀತಿಂ ಚ ಸಾಧುಕಾವ್ಯನಿಷೇವಣಮ್ ॥

ಎಂದು ನಮ್ಮ ದೇಶದ ವಿಮರ್ಶಕರು ಹೇಳಿರುವ ಕಾವ್ಯಪ್ರಯೋಜನ ವ್ಯಾಖ್ಯಾನವನ್ನು ಅವರು ಗಮನಿಸಿಲ್ಲ ಅಥವಾ ಗಮನಿಸಿದ್ದರೂ ಉಪೇಕ್ಷೆ ಮಾಡುತ್ತಾರೆ.

ವಾಲ್ಮೀಕಿಗಳು ಲವ-ಕುಶರಿಗೆ ರಾಮಾಯಣವನ್ನು ಏಕೆ ಹೃದ್ಯವಾಗಿ ಬೋಧಿಸಿದರು? ಎಂದರೆ ವೇದಗಳ ಅರ್ಥವನ್ನು ವಿಶದೀಕರಿಸುವುದಕ್ಕೆ. 'ವೇದೋಪಬೃಂಹಣಾರ್ಥಾಯ ತಾವಗ್ರಾಹಯತ ಪ್ರಭುಃ '–ವೇದಗಳು ವಿಶದೀಕರಿಸುವುದು ಧರ್ಮವನ್ನು ಮತ್ತು ಬ್ರಹ್ಮವನ್ನು. ಅಂದ ಬಳಿಕ ರಾಮಾಯಣವು ಅಧ್ಯಾತ್ಮಶಾಸ್ತ್ರ ಏಕೆ ಆಗುವುದಿಲ್ಲ? ಒಂದೇ ಗ್ರಂಥದಿಂದ ಕಾವ್ಯಸೌಂದರ್ಯ ಮತ್ತು ಅಧ್ಯಾತ್ಮಸೌಂದರ್ಯ ಎರಡನ್ನೂ ಸಮತೂಕದಲ್ಲಿ ಪಡೆಯಲು ಸಾಧ್ಯ ಎಂದು ಶ್ರೀಮದ್ರಾಮಾಯಣವು ತೋರಿಸಿಕೊಡುತ್ತದೆ. "ಮೋಹವೆಂಬ ಸಮುದ್ರವನ್ನು ದಾಟಿ ರಾಗ-ದ್ವೇಷಾದಿ ರಾಕ್ಷಸರನ್ನು ಸಂಹರಿಸಿ ಶಾಂತಿಯೆಂಬ ಸೀತಾದೇವಿಯನ್ನು ಪಡೆದು, ಆತ್ಮನೆಂಬ ರಾಮನು ಆತ್ಮಾರಾಮನಾಗಿ ಬೆಳಗುತ್ತಿದ್ದಾನೆ"–ಎಂದು ರಾಮಾಯಣದ ಅಧ್ಯಾತ್ಮಿಕ ಭಾವಸಾರಾಂಶವನ್ನು ಶ್ರೀಶಂಕರಾಚಾರ್ಯರು ಒಂದು ಕಡೆ ಸಾರುತ್ತಾರೆ.

ತೀರ್ತ್ವಾ ಮೋಹಾರ್ಣವಂ ಹತ್ವಾ ರಾಗದ್ವೇಷಾದಿ ರಾಕ್ಷಸಾನ್ ।
ಶಾಂತಿಸೀತಾಸಮಾಯುಕ್ತಃ ಆತ್ಮಾರಾಮೋ ವಿರಾಜತೇ ॥

ಆಚಾರ್ಯ ಶ್ರೀವೇದಾಂತದೇಶಿಕರು ಕೂಡ ರಾಮಾಯಣದ ಅಧ್ಯಾತ್ಮಿಕಸ್ವಾರಸ್ಯವನ್ನು ಅನುಭವಿಸಿ ಅನೇಕಕಡೆಗಳಲ್ಲಿ ಉಪದೇಶಮಾಡಿದ್ದಾರೆ. ಉದಾಹರಣೆಗೆ : "ದರ್ಪದಿಂದ ಕೊಬ್ಬಿ ಕೆರಳಿರುವ ಇಂದ್ರಿಯಗಳೆಂಬ ಹತ್ತು ಮುಖಗಳುಳ್ಳ ಮನಸ್ಸೆಂಬ ದಶಕಂಠರಾಕ್ಷಸನು ಈ ದೇಹವೆಂಬ ಲಂಕಾನಗರಿಯನ್ನು ಆಕ್ರಮಿಸಿದ್ದಾನೆ. ಇದು ಸಂಸಾರಸಮುದ್ರದಿಂದ ಸುತ್ತುವರಿಯಲ್ಪಟ್ಟಿದೆ. ಇಲ್ಲಿ ಸೆರೆಸಿಕ್ಕಿ ದೈನ್ಯದಿಂದ ಸಂಕಟಪಡುತ್ತಿರುವ ಜೀವವೆಂಬ ಸೀತೆ. ದೇವದೇವನ ಶುಭಸಂದೇಶವನ್ನು ಕೊಡುವ ಗುರು ಶ್ರೀ ಆಂಜನೇಯ. ಆತನಿಗೂ ಪ್ರಭುವಾಗಿ ಭಗವಾನ್ ರಾಮಚಂದ್ರನೆಂಬ ಸರ್ವೇಶ್ವರನು ರಾಕ್ಷಸ ರಾಜನನ್ನು ನಿಗ್ರಹಿಸಿ ತನ್ನ ಸ್ವತ್ತಾಗಿರುವ ಜೀವಸ್ಥಾನದಲ್ಲಿರುವ ಸೀತೆಯನ್ನು ಬಂಧನದಿಂದ ಬಿಡಿಸಿ ಪರಮಾನಂದವನ್ನುಂಟುಮಾಡುತ್ತಾನೆ."

ದರ್ಪೋದಗ್ರದಶೇಂದ್ರಿಯಾನನಮನೋನಕ್ತಂಚರಾಧಿಷ್ಠಿತೇ ।
ದೇಹೇಽಸ್ಮಿನ್ ಭವಸಿಂಧುನಾ ಪರಿಗತೇ ದೀನಾಂ ದಶಾಮಾಸ್ಥಿತಃ ।

ಅದ್ಯತ್ವೇ ಹನುಮತ್ಸಮೇನ ಗುರುಣಾ ಪ್ರಖ್ಯಾಪಿತಾರ್ಥಃ ಪುಮಾನ್ ।
ಲಂಕಾರುದ್ಧವಿದೇಹರಾಜತನಯಾ ನ್ಯಾಯೇನ ಲಾಲಪ್ಯತೇ ॥

ಶ್ರೀರಾಮಚಂದ್ರನನ್ನು ಪರಮಾತ್ಮನೆಂದೂ, ಲಕ್ಷ್ಮಣನನ್ನೂ-ಆಂಜನೇಯನನ್ನೂ ಶೇಷದೇವರ ಮತ್ತು ಪ್ರಾಣದೇವರ ಅವತಾರವೆಂದೂ ಶ್ರೀಮಧ್ವಾಚಾರ್ಯರ ಸಂಪ್ರದಾಯವೂ ಒಪ್ಪುತ್ತದೆ. ಪರಮಾತ್ಮನನ್ನು ನಾಯಕನನ್ನಾಗಿ ಹೊಂದಿರುವ ಮಹಾಕಾವ್ಯದಿಂದ ಪರಮಾತ್ಮತತ್ತ್ವವನ್ನು ಅರಿಯುವುದು ಸಹಜವೇ ಆಗಿದೆ.

ಆದರೆ ಕಾವ್ಯಾಂಶವಿರುವ ಜಾಗದಲ್ಲಿ ಅದನ್ನು ಬದಿಗೊತ್ತಿ ಅದಕ್ಕೆ ಕಷ್ಟಪಟ್ಟು ಅಧ್ಯಾತ್ಮಸಂಬಂಧವಾದ ಅರ್ಥವನ್ನು ಕಲ್ಪಿಸುವ ಮೂರ್ಖ ಸಾಹಸಕ್ಕೆ ನಾವು ಕೈಹಾಕಬಾರದು.

ಕಣ್ಣುಮುಚ್ಚಿಕೊಂಡು ಬರೆದ ಕಥೆ

ರಾಮಾಯಣವು ಕೇವಲ ಪುರಾವೃತ್ತವಾದ ಹಳೆಯ ಚರಿತ್ರೆಯ ಕಾವ್ಯವಾಗಿದ್ದರೆ ಅದರ ನಿರ್ಮಾಣದ ಹಿನ್ನೆಲೆ ಬೇರೆ ರೀತಿಯದಾಗಿರಬೇಕಾಗಿತ್ತು. ಇಂತಹ ಹಳೆಯ ಚರಿತ್ರೆಯ ಅಥವಾ ಕಾವ್ಯದ ಗ್ರಂಥಗಳನ್ನು ಅಧ್ಯಯನ ಮಾಡಿ, ಇಂತಹ ಶಿಲಾಶಾಸನಗಳನ್ನೋ ಅಥವಾ ನಾಣ್ಯಗಳನ್ನೋ ಪರಿಶೀಲಿಸಿ, ತನ್ನ ಪ್ರತಿಭೆಯ ಶಕ್ತಿಯಿಂದ ಈ ಕಾವ್ಯವನ್ನು ಬರೆದ ವಾಲ್ಮೀಕಿ ಎಂಬ ಒಕ್ಕಣೆ ರಾಮಾಯಣದ ಪೀಠಿಕೆಯಲ್ಲಿರಬೇಕಾಗಿತ್ತು. ಆದರೆ ಇದರ ಪೀಠಿಕೆ ವಿಚಿತ್ರವಾಗಿದೆ. ಆಚಮನಮಾಡಿ, ಬದ್ಧಾಂಜಲಿಯಾಗಿ ಪೂರ್ವಾಗ್ರವಾದ ದರ್ಭೆಗಳ ಮೇಲೆ ಕುಳಿತು ಯೋಗದಿಂದ ಹುಡುಕಿದರು ಮುನಿ ವಾಲ್ಮೀಕಿ. ಅನಂತರ ಧರ್ಮಾತ್ಮರಾದ ಅವರು ಯೋಗದೃಷ್ಟಿಯಿಂದ ಅದೆಲ್ಲವನ್ನೂ ಸುಸ್ಪಷ್ಟವಾಗಿ ನೋಡಿ ತಿಳಿದರು.

ಉಪಸ್ಪೃಶ್ಯೋದಕಂ ಸಮ್ಯಙ್ಮುನಿಃ ಸ್ಥಿತ್ವಾ ಕೃತಾಞ್ಜಲಿಃ ।
ಪ್ರಾಚೀನಾಗ್ರೇಷು ದರ್ಭೇಷು ಧರ್ಮೇಣಾನ್ವೇಷತೇ ಗತಿಮ್ ।
ತತಃ ಪಶ್ಯತಿ ಧರ್ಮಾತ್ಮಾ ತತ್ಸರ್ವಂ ಯೋಗಮಾಸ್ಥಿತಃ (ಬಾಲ III)

ಮಹರ್ಷಿಯ ಅಂತರ್ದೃಷ್ಟಿಗೆ ಕಾಣುವುದು ದೇವರು, ಜೀವ, ದೇವತೆಗಳು, ರಾಕ್ಷಸರು ಮುಂತಾದ ತತ್ತ್ವವಿಶೇಷಗಳೇ ಅಲ್ಲವೇ? ಈ ಹಿನ್ನೆಲೆಯಲ್ಲಿ ರಚಿತವಾದ ರಾಮಾಯಣದಲ್ಲಿ ಅಧ್ಯಾತ್ಮಸಂಪತ್ತು ತುಂಬಿರುವುದರಲ್ಲಿ ಅಚ್ಚರಿಯೇನೂ ಇಲ್ಲ. ಆ ದಿವ್ಯಕಾವ್ಯದಲ್ಲಿ ಆಧ್ಯಾತ್ಮಿಕಸತ್ಯ, ಕಾವ್ಯಾಂಶ, ಚರಿತ್ರೆಯ ಅಂಶ–ಎಲ್ಲವೂ ಸುಂದರವಾಗಿ ಸೇರಿಕೊಂಡಿದೆಯೆಂಬುದು ನಮ್ಮ ಅಭಿ

ಪ್ರಾಯ. “ರಾಮಾಯಣವನ್ನು ನಂಬಬೇಡಯ್ಯಾ. ಯಾವನೋ ಕಣ್ಣು ಮುಚ್ಚಿಕೊಂಡು ಬರೆದ ಕಥೆ ಅದು”–ಎಂದು ಯಾರಾದರೂ ಟೀಕೆ ಮಾಡಿದಾಗ–“ಹೌದು. ಅದು ಕಣ್ಣುಮುಚ್ಚಿಕೊಂಡು ಬರೆದ ಕಥೆಯೇ ಆಗಿದೆ. ಆದರೆ ಕಣ್ಣುಮುಚ್ಚಿಕೊಂಡು ಕುಳಿತುಕೊಂಡವನು ಮಹರ್ಷಿ. ಅವನು ಹೊರಗಣ್ಣು ಮುಚ್ಚಿದಾಗ ಅವನ ಒಳಗಣ್ಣು ತೆರೆಯುವುದು. ಆಗ ಕಾಣುವ ಅತೀಂದ್ರಿಯಸತ್ಯಗಳ ಪ್ರಾಮಾಣಿಕವಾದ ಪರಿಚಯವೇ ಶ್ರೀಮದ್ರಾಮಾಯಣ”–ಎಂದು ನಾವು ಸತ್ಯದ ಬಲದ ಮೇಲೆ ಅವರಿಗೆ ಉತ್ತರಿಸುತ್ತೇವೆ.

ರಾಮನು ದೇವನೋ? ಮಾನವನೋ?

ಆದಿಕವಿಯು ಚಿತ್ರಿಸಿರುವ ಶ್ರೀರಾಮನು ದೇವನೋ ಅಥವಾ ಮಾನವನೋ?–ಎಂಬ ಬಗೆಗೆ ವಿದ್ವಾಂಸರು ವಿಪುಲವಾಗಿ ಚರ್ಚೆಮಾಡಿದ್ದಾರೆ. “ಅವನು ತನ್ನ ಸದಾಚಾರ-ತಪಸ್ಸುಗಳಿಂದ ದೇವತ್ವಕ್ಕೆ ಏರಿದ ನರಶ್ರೇಷ್ಠ” ಎಂದು ಕೆಲವರು ಹೇಳುತ್ತಾರೆ. “ಆತನು ತನ್ನ ಸಂಕಲ್ಪದಿಂದ ಮನುಷ್ಯರೂಪದಲ್ಲಿ ಅವತರಿಸಿ ವ್ಯವಹಾರಮಾಡಿದ ನಾರಾಯಣ”–ಎಂದು ಕೆಲವರು ನಂಬುತ್ತಾರೆ. ಆ ವಿಷಯವನ್ನು ಇಲ್ಲಿ ನಾವು ವಿಮರ್ಶಿಸುವುದಿಲ್ಲ. ಆದರೆ ಸನಾತನನಾದ ವಿಷ್ಣುವೇ ಮನುಷ್ಯರೂಪದಲ್ಲಿ ಅವತರಿಸಿದ–ಎಂಬ ಅಭಿಪ್ರಾಯ ವನ್ನು ಶ್ರೀಮದ್ರಾಮಾಯಣವು ಅನೇಕ ಕಡೆ ಹೇಳುತ್ತದೆ. **“ಅರ್ಥಿತೋ ಮಾನುಷೇ ಲೋಕೇ ಜಜ್ಞೇ ವಿಷ್ಣುಸ್ಸನಾತನಃ”** (ಅಯೋಧ್ಯಾ-೧) **“ಪ್ರೀಯತೇ ಸತತಂ ರಾಮಃ ಸ ಹಿ ವಿಷ್ಣುಃ ಸನಾತನಃ”** (ಯುದ್ಧ) **“ ವಿಷ್ಣೋ ಪುತ್ರತ್ವಮಾಗಚ್ಛ ಕೃತ್ವಾತ್ಮಾನಂ ಚತುರ್ವಿಧಂ ”** (ಬಾಲ). ಇವೆಲ್ಲ ವನ್ನೂ ಪ್ರಕ್ಷಿಪ್ತವೆಂದು ಹೇಳಲು ಪ್ರಮಾಣವಿಲ್ಲ. ಅವನನ್ನು ಭಗವಂತನ ಅವತಾರ ಎಂದು ಜ್ಞಾನಿಗಳು ಉದ್ಘೋಷಿಸಿದ್ದಾರೆ. **“ಯೋ ಜಾತಮಸ್ಯ ಮಹತೋ ಮಹಿಬ್ರವಾತ್” “ಪರಮಚ್ಛದೋ ವರ ಆವಿವೇಶ”** ಮುಂತಾದ ಶ್ರುತಿವಾಕ್ಯಗಳು ಭಗವಂತನು ಅವತಾರ ಎತ್ತುವುದುಂಟು ಎಂಬುದನ್ನಿಲ್ಲಿ ಸೂಚಿಸುತ್ತವೆ. ಆದುದರಿಂದ ಶ್ರೀರಾಮನು ವಾಲ್ಮೀಕಿಯ ಅಭಿಪ್ರಾಯದಂತೆ ನಾರಾಯಣನ ಅವತಾರವೇ ಆಗಿದ್ದಾನೆ ಎಂಬುದು ನಮ್ಮ ಅಭಿಪ್ರಾಯ.

‘ಆದರೆ ಮನುಷ್ಯನಾಗಿ ಅವನು ಮಾಡುವ ವ್ಯವಹಾರಗಳೆಲ್ಲವೂ ಕೇವಲ

ಅಭಿನಯ. ಅಪ್ರಾಮಾಣಿಕ'-ಎಂದು ಬಗೆಯುತ್ತಾ ರಾಮಾಯಣವನ್ನು ರಸವಿಹೀನ ಮಾಡಬಾರದು. ಅವನು ಮನುಷ್ಯನೆಂದು ಭಾವಿಸಿಯೇ ಅವನ ಚರಿತ್ರವನ್ನು ಅನುಭವಿಸುವುದೂ ಅವಶ್ಯಕ. ಮಹಾಗುರುಗಳು ಅಪ್ಪಣೆಕೊಡಿಸಿದಂತೆ-"ಶ್ರೀರಾಮನು ಸ್ಥೂಲದೃಷ್ಟಿಗೆ ಮನುಷ್ಯ. ಸೂಕ್ಷ್ಮದೃಷ್ಟಿಗೆ ದೇವತೆ ಮತ್ತು ಪರಾದೃಷ್ಟಿಗೆ ಪರಂಜ್ಯೋತಿ." ಈ ಎಲ್ಲ ಕ್ಷೇತ್ರಗಳ ಲ್ಲಿಯೂ ನಾವು ಶ್ರೀರಾಮನ ವೈಭವವನ್ನು ಅನುಭವಿಸುತ್ತೇವೆ.

ಎಷ್ಟು ಕಾಂಡಗಳು?

'ರಾಮಾಯಣದಲ್ಲಿ ಅಯೋಧ್ಯಾಕಾಂಡದಿಂದಲೇ ಕ್ರಿಯೆ ಪ್ರಾರಂಭ ವಾಗುತ್ತದೆ. ಅದಕ್ಕೆ ಹಿಂದೆ ಇರುವ ಬಾಲಕಾಂಡವೂ ಪ್ರಕ್ಷಿಪ್ತ. ಯುದ್ಧಕಾಂಡದ ನಂತರ ಬರುವ ಉತ್ತರಕಾಂಡವೂ ಪ್ರಕ್ಷಿಪ್ತ'-ಎಂದು ಕೆಲವರು ವಾದಿಸುತ್ತಾರೆ. ರಾಮಾಯಣದಲ್ಲಿ ಅನೇಕ ಪ್ರಕ್ಷಿಪ್ತಶ್ಲೋಕಗಳಿವೆ ಎಂದು ಒಪ್ಪಲೇಬೇಕು. ಏಕೆಂದರೆ : ಸಾಂಪ್ರದಾಯಿಕವಾಗಿ ರಾಮಾಯಣವು ಗಾಯತ್ರಿಯ ವಿಸ್ತಾರ. ಅದರ ಶ್ಲೋಕಸಂಖ್ಯೆ 24,000. ಆದರೆ ಈಗ ದೊರಕಿರುವ ರಾಮಾಯಣಪ್ರತಿಗಳಲ್ಲಿ ಶ್ಲೋಕಸಂಖ್ಯೆ ಇನ್ನೂ ಹೆಚ್ಚಾಗಿದೆ. ಪೂರ್ವಾಪರ ವಿರೋಧ, ಶೈಲಿಯ ವ್ಯತ್ಯಾಸ-ಇತ್ಯಾದಿಗಳು ಎಲ್ಲಿ ಕಂಡುಬರುತ್ತವೆಯೋ ಅವು ಪ್ರಕ್ಷಿಪ್ತವೆಂದು ಪರಿಗಣಿಸಬೇಕು. ಆದರೆ ಬಾಲಕಾಂಡವೆಲ್ಲಾ ಪ್ರಕ್ಷಿಪ್ತವೆಂದು ಭಾವಿಸಿ, ಅಯೋಧ್ಯಾಕಾಂಡದಿಂದಲೇ ಕಥೆಯನ್ನು ಪ್ರಾರಂಭಿಸಿದರೆ ರಾಮಾಯಣದ ಕಥೆಯಲ್ಲಿ-ರಾಮ ಯಾರು? ದಶರಥ ಯಾರು? ಭರತ, ಶತ್ರುಘ್ನ, ಯುಧಾಜಿತ-ಇವರು ಯಾರು? ಎಂಬ ಪೂರ್ವಪರಿಚಯವೇ ಸಿಕ್ಕುವುದಿಲ್ಲ.

'ಉತ್ತರಕಾಂಡವು ಪ್ರಮಾಣವಲ್ಲ. ಏಕೆಂದರೆ : ಅದನ್ನು ಪಾರಾ ಯಣಮಾಡುವ ವಾಡಿಕೆ ಇಲ್ಲ. ಯುದ್ಧಕಾಂಡದ ಶ್ರೀರಾಮಪಟ್ಟಾಭಿಷೇಕ ದಲ್ಲಿಯೇ ಕಥೆಗೆ ಸಹಜವಾದ ಮಂಗಳ'-ಎಂಬುದು ಕೆಲವರ ವಾದ. ಉತ್ತರ ಕಾಂಡದ ಬಹುಭಾಗಗಳು ವಾಲ್ಮೀಕಿಯ ರಚನೆಯೆಂದೇ ನಮ್ಮ ಭಾವನೆ. ಅದನ್ನು ಪಾರಾಯಣಮಾಡದಿರಲು ಕಾರಣ ಅದರ ಕಥಾವಸ್ತು ಸೀತಾಪರಿ ತ್ಯಾಗ ಮತ್ತು ರಾಮನ ಪರಮಪದಪ್ರಾಪ್ತಿ ಆಗಿರುವುದು. ರಾಮಾಯಣ

ದಲ್ಲಿ ಪಟ್ಟಾಭಿಷೇಕವು ಒಂದು ಮುಖ್ಯಘಟ್ಟವಾದ್ದರಿಂದ ಅಲ್ಲಿಗೇ ಮಂಗಳವನ್ನು ಪಾರಾಯಣದಲ್ಲಿ ಮಾಡುತ್ತಾರೆ. ಅದು ಮಂಗಳತಮವಾದ ಘಟನೆ. ಆದುದರಿಂದ ಆಯುಸ್ಸು, ಆರೋಗ್ಯ ಮುಂತಾದ ಲೌಕಿಕಫಲಗಳನ್ನು ಬಯಸುವವರು ಅಲ್ಲಿಯೇ ಮಂಗಳವನ್ನು ಮಾಡುವುದು ಸಹಜವಾಗಿದೆ.

ಆದರೆ ಅವತಾರಮಾಡಿದ ಆದಿಪುರುಷನನ್ನೂ, ಅವನ ಸಹಧರ್ಮ ಚಾರಿಣಿಯನ್ನೂ, ಅವನ ಪರಿವಾರಗಳನ್ನೂ ಆಯಾ ಮೂಲಸ್ಥಾನದಲ್ಲಿ ಸೇರಿಸದಿದ್ದರೆ ತಾತ್ತ್ವಿಕವಾಗಿ ಕಥೆಯು ಪೂರ್ತಿಯಾಗುವುದಿಲ್ಲ. ಆದುದರಿಂದ ಅವುಗಳನ್ನು ಹೇಳುವ ಉತ್ತರಕಾಂಡದ ಕಥೆಯೂ ವಾಲ್ಮೀಕಿಯ ರಚನೆ ಯೆಂದೇ ನಮ್ಮ ಅಭಿಪ್ರಾಯ. "ಏಳು' ಎಂಬ ತಾತ್ತ್ವಿಕವಾದ ಸಂಖ್ಯಾಪರಿಗಣನೆ ರಾಮಾಯಣಕ್ಕೆ ಬರಬೇಕಾದರೂ ಉತ್ತರಕಾಂಡವು ಅವಶ್ಯಕ. ಆದ್ದರಿಂದ ಬಾಲಕಾಂಡ ಮತ್ತು ಉತ್ತರಕಾಂಡಗಳು ಮತ್ತು ಅವುಗಳ ನಡುವೆ ಇರುವ ಐದು ಕಾಂಡಗಳು–ಇವೆಲ್ಲಾ ಒಂದೇ ಕವಿಯ ಕೃತಿ ಎಂದು ನಾವು ಭಾವಿಸುತ್ತೇವೆ.

ಕಾಲ–ಕರ್ತೃ

ಶ್ರೀರಾಮನ ಸಮಕಾಲಿಕ ವಾಲ್ಮೀಕಿಮಹರ್ಷಿ. ಆದ್ದರಿಂದ ರಾಮಾ ಯಣವು ತ್ರೇತಾಯುಗದಲ್ಲಿ ವಿರಚಿತವಾಯಿತು ಎಂಬುದು ನಮ್ಮ ಸಂಪ್ರದಾಯ. ಆದರೆ ಆಧುನಿಕವಿಮರ್ಶಕರ ದೃಷ್ಟಿಯಲ್ಲಿ ರಾಮಾಯಣವು ಕ್ರಿ.ಪೂ. 6ನೆಯ ಶತಮಾನಕ್ಕೆ ಹಿಂದಿನದು ಎಂದಷ್ಟು ಮಾತ್ರ ಖಚಿತ. ಕ್ರಿಸ್ತಪೂರ್ವದ ಜೈನ-ಬೌದ್ಧಗ್ರಂಥಗಳಲ್ಲಿ ಶ್ರೀರಾಮನು ಜೈನ, ಬೌದ್ಧಮತ ಗಳಿಗೆ ಸೇರಿದ ಒಬ್ಬ ಮಹಾಪುರುಷ ಎಂದು ಮಾತ್ರ ಪರಿಗಣಿಸಲ್ಪಟ್ಟಿದ್ದಾನೆ. ರಾಮಾಯಣದ ಕಾಲವು ಯಾವುದು ಎನ್ನುವುದಕ್ಕಿಂತಲೂ ರಾಮಾಯಣದಲ್ಲಿ ಏನಿದೆ? ಎಂಬುದನ್ನು ತಿಳಿದು ಅದನ್ನು ಉಪಯೋಗಿಸಿಕೊಳ್ಳುವುದು ಹೆಚ್ಚು ಅವಶ್ಯಕ. "ಮಾವಿನ ತೋಟಕ್ಕೆ ನುಗ್ಗಿದವನು ಅದರಲ್ಲಿರುವ ಮರಗಳೆಷ್ಟು? ಎಲೆಗಳೆಷ್ಟು?–ಎಂಬ ವಿಮರ್ಶೆಯಲ್ಲಿ ಕಾಲವನ್ನು ಪೋಲು ಮಾಡಿ ಹಣ್ಣುಗಳನ್ನು ತಿನ್ನದೇ ಹಿಂದಿರುಗಿದ ಗಾಂಪನಂತೆ ಆಗಬೇಡ"– ಎಂಬ ಪರಮಹಂಸಸೂಕ್ತಿಯನ್ನು ಇಲ್ಲಿ ಸ್ಮರಿಸುತ್ತೇವೆ.

ರಾಮಾಯಣದ ಕರ್ತೃ ಮಹರ್ಷಿವಾಲ್ಮೀಕಿ. ಈತ ಭೃಗುವಂಶಕ್ಕೆ ಸೇರಿ

ದವನು. ಬಾಲ್ಯದಲ್ಲಿ ತಂದೆ-ತಾಯಿಗಳ ಸಹವಾಸ ತಪ್ಪಿ ಅರಣ್ಯದಲ್ಲಿ ಬೇಡರ ಗುಂಪಿನಲ್ಲಿ "ರೂಕ್ಷ" ಎಂಬ ಹೆಸರಿನಿಂದ ಬೆಳೆದನು. ಕ್ರೂರಕರ್ಮಿಯಾಗಿದ್ದ ಇವನಿಗೆ ಸಪ್ತರ್ಷಿಗಳು ರಾಮಮಂತ್ರೋಪದೇಶವನ್ನು ಮಾಡಿದರು. ಅದನ್ನು ಏಕನಿಷ್ಠೆಯಿಂದ ಜಪಿಸುತ್ತಾ ತಪಸ್ಸುಮಾಡುತ್ತಿದ್ದಾಗ ಇವನ ಮೈಮೇಲೆ ವಲ್ಮೀಕ (ಹುತ್ತ) ಬೆಳೆಯಿತು. ಪ್ರಚೇತನು (ವರುಣನು) ಮಳೆಯನ್ನು ಸುರಿಸಿ ಹುತ್ತವನ್ನು ಕರಗಿಸಿ ಈತನನ್ನು ಬಿಡಿಸಿದ್ದರಿಂದ ಈತನು 'ಪ್ರಾಚೇತಸ' ಎನಿಸಿದ. ವಲ್ಮೀಕದಿಂದ ಹುಟ್ಟಿದ್ದರಿಂದ 'ವಾಲ್ಮೀಕಿ' ಎನಿಸಿದ. ನಾರದರ ಉಪದೇಶ ಮತ್ತು ಬ್ರಹ್ಮದೇವರ ಅನುಗ್ರಹಗಳಿಂದ ಆದಿಕಾವ್ಯ ರಾಮಾಯಣ ವನ್ನು ರಚಿಸಿದ–ಎಂಬ ಉಲ್ಲೇಖವನ್ನು ಪುರಾಣಗಳಲ್ಲಿ ನೋಡುತ್ತೇವೆ. ಇದರಲ್ಲಿ ಅವೈಜ್ಞಾನಿಕವಾದ ಅಂಶ ಯಾವುದೂ ಇಲ್ಲವಾದ್ದರಿಂದಲೂ ಮತ್ತು ಇದು ಸಂಪ್ರದಾಯದಲ್ಲಿ ರೂಢವಾಗಿರುವುದರಿಂದಲೂ ಇದನ್ನು ನಾವು ನಿಜವೆಂದೇ ನಂಬುತ್ತೇವೆ.

ಈ ಆದಿಕಾವ್ಯವನ್ನೂ ಅಮರಕಾವ್ಯವನ್ನೂ ಲೋಕಕ್ಕೆ ಕರುಣಿಸಿದ ವಾಲ್ಮೀಕಿಭಗವಂತನಿಗೂ ಅವನ ಹೃದಯಸ್ವಾಮಿಯಾಗಿರುವ ಶ್ರೀರಾಮ ಚಂದ್ರನಿಗೂ ನಮ್ಮ ನಮೋವಾಕಗಳು. ರಾಮಾಯಣದ ಅರ್ಥಪೂರ್ಣವಾದ ಪಾರಾಯಣದಿಂದ ಆಯುಸ್ಸು, ಆರೋಗ್ಯ, ಐಶ್ವರ್ಯ, ಯಶಸ್ಸು, ಸತ್ಕಾರ್ಯಗಳಲ್ಲಿ ವಿಜಯ, ಉತ್ತಮಭೋಗಗಳೇ ಮುಂತಾದ ಐಹಿಕಫಲ ಗಳೂ ಮತ್ತು ಜನ್ಮ-ವ್ಯಾಧಿ-ಜರಾ-ವಿಪತ್ತಿ-ಮರಣಗಳಿಂದ ರಹಿತವಾದ ಶಾಶ್ವತವಾದ ಪರಮಾನಂದ-ಪರಮಪದಪ್ರಾಪ್ತಿಯೂ ಆಗುವುದೆಂಬುದು ನಮ್ಮ ವಿಶ್ವಾಸ.

ಧನ್ಯಂ ಯಶಸ್ಯಮಾಯುಷ್ಯಂ ರಾಜ್ಞಾಂ ಚ ವಿಜಯಾವಹಮ್ ।
ಇದಂ ಪವಿತ್ರಂ ಪಾಪಘ್ನಂ ಪುಣ್ಯಂ ವೇದೈಶ್ಚ ಸಮ್ಮಿತಮ್
ಆಯುಷ್ಯಮಾರೋಗ್ಯಕರಂ ಯಶಸ್ಯಂ ಸ್ತ್ರಿಯಶ್ಚ ಮುಖ್ಯಾಃ
ಸುಖಮುತ್ತಮಂ ಚ ।
ಯಃ ಕರ್ಣಾಂಜಲಿಸಂಪುಟೈರಹರಹಃ ಸಮ್ಯಕ್ಪಿಬತ್ಯಾದರಾತ್ ।
ವಾಲ್ಮೀಕೇರ್ವದನಾರವಿಂದಗಲಿತಂ ರಾಮಾಯಣಾಖ್ಯಂ ಮಧು ।

ಜನ್ಮವ್ಯಾಧಿಜರಾವಿಪತ್ತಿಮರಣೈರತ್ಯನ್ತಸೋಪದ್ರವಂ ।
ಸಂಸಾರಂ ಸ ವಿಹಾಯ ಗಚ್ಛತಿ ಪುಮಾನ್ವಿಷ್ಣೋಃ ಪದಂ ಶಾಶ್ವತಮ್॥

'ಮಂಗಲಂ'

ಬೆಂಗಳೂರು,
ಚೈತ್ರ ಶುಕ್ಲ ಶ್ರೀರಾಮನವಮಿ
18-4-86

ವರದದೇಶಿಕಾಚಾರ್ಯರಂಗಪ್ರಿಯ
ಅಷ್ಟಾಂಗಯೋಗ ವಿಜ್ಞಾನಮಂದಿರಂ

ಮೂರನೆಯ ಮುದ್ರಣದ ಪ್ರಸ್ತಾವನೆ

ಪರಮಾತ್ಮನ ದಯೆಯಿಂದಲೂ ಗುರುಭಗವಂತನ ಆಶೀರ್ವಾದಗಳಿಂದಲೂ ವಾಲ್ಮೀಕಿರಾಮಾಯಣದ ಪ್ರಥಮ ಸಂಪುಟದ ಮೂರನೆಯ ಮುದ್ರಣವನ್ನು ಮುಗಿಸುತ್ತಿದ್ದೇವೆ. 5-6ನೇ ಸಂಪುಟಗಳನ್ನು ಪುನರ್ಮುದ್ರಣ ಮಾಡಿದನಂತರ ಈ ಸಂಪುಟವನ್ನು ಪುನರ್ಮುದ್ರಿಸಬೇಕಾಗಿದ್ದಿತು. ಆದರೆ ಹೊಸ ಗ್ರಾಹಕರಿಗೆ ಮೊದಲನೆಯ ಸಂಪುಟವೇ ಸಿಗದಿದ್ದರೆ ನಿರಾಶೆಯಾಗುವುದರಿಂದ ಇತ್ತೀಚಿಗೆ ತಾನೇ ಮುಗಿದ ಈ ಪ್ರಥಮಸಂಪುಟದ ಪುನರ್ಮುದ್ರಣಮಾಡಬೇಕಾಯಿತು.

ಈಗ ಭಾಗವತದ ಮೊದಲ ಸಂಪುಟವನ್ನು ಮುದ್ರಿಸಲಾಗುತ್ತಿದೆ. ಸುಮಾರು ದೀಪಾವಳಿಯ ವೇಳೆಗೆ ಪ್ರಕಾಶನವಾಗಬಹುದು. ಅನಂತರ ಪುನಃ ಮಹಾಭಾರತದ ಮತ್ತು ರಾಮಾಯಣದ ಹಿಂದಿನ ಸಂಪುಟಗಳನ್ನು ಪುನರ್ಮುದ್ರಣ ಮಾಡಲಾಗುವುದು. ಗ್ರಾಹಕರು ಸಹಕರಿಸಬೇಕಾಗಿ ವಿನಂತಿಸುತ್ತೇವೆ.

ಹಿಂದಿನಂತೆಯೇ ಸಂಪಾದಕಮಂಡಲಿಯ ವಿದ್ವಾಂಸರು ಈ ಸಂಪುಟದ ತಪ್ಪು-ಒಪ್ಪುಗಳನ್ನು ನೋಡಿಕೊಟ್ಟು ಸಹಕರಿಸಿರುತ್ತಾರೆ. ಅವರೆಲ್ಲರಿಗೂ ನಮ್ಮ ಹೃತ್ಪೂರ್ವಕವಂದನೆಗಳು.

ದಯಾಮಯನಾದ ಪರಮಾತ್ಮನು ಸಮಸ್ತರಿಗೂ ಶಾಂತಿ-ಪುಷ್ಟಿ-ತುಷ್ಟಿಗಳನ್ನಿತ್ತು ಕಾಪಾಡಲಿ.

–ಪ್ರಕಾಶಕರು.

ಶ್ರೀಮದ್ವಾಲ್ಮೀಕಿರಾಮಾಯಣದ ಮಹಿಮೆ
ಸ್ಕಾಂದಪುರಾಣ-ಉತ್ತರಖಂಡ ವಿಷಯಾನುಕ್ರಮಣಿಕೆ

ಸರ್ಗ	ವಿಷಯಗಳು		ಪುಟಸಂಖ್ಯೆ
೧	ಕಲಿಯುಗದ ಸ್ಥಿತಿ : ಕಲಿಯುಗದಲ್ಲಿ ಮಾನವನ ಉದ್ಧಾರದ ಉಪಾಯ : ರಾಮಾಯಣ ಪಾರಾಯಣದ ಮಹಿಮೆ : ರಾಮಾಯಣಶ್ರವಣಕ್ಕೆ ಪ್ರಶಸ್ತವಾದ ಕಾಲ	....	1
೨	ನಾರದ-ಸನತ್ಕುಮಾರರ ಸಂವಾದ : ಸೋಮ ದತ್ತನೆಂಬ ಬ್ರಾಹ್ಮಣನಿಗೆ ರಾಕ್ಷಸತ್ವದ ಪ್ರಾಪ್ತಿ : ರಾಮಾಯಣ ಕಥಾಶ್ರವಣದ ಮೂಲಕ ಅವನ ಉದ್ಧಾರ	....	10
೩	ಮಾಘಮಾಸದಲ್ಲಿ ರಾಮಾಯಣವನ್ನು ಪಾರಾಯಣಮಾಡುವುದರ ಫಲ : ಸುಮತಿ ಮತ್ತು ಸತ್ಯವತಿಯರ ಪೂರ್ವಜನ್ಮೇತಿಹಾಸ	....	19
೪	ಚೈತ್ರಮಾಸದಲ್ಲಿ ರಾಮಾಯಣಪಠನ-ಶ್ರವಣ ಗಳ ಮಹಿಮೆ : ಕಲಿಕೋತ್ತಂಕರ ಕಥೆ	....	26
೫	ರಾಮಾಯಣದ ನವಾಹಶ್ರವಣದ ವಿಧಿ, ಮಹಿಮೆ ಮತ್ತು ಫಲವರ್ಣನೆ	....	32

ಶ್ರೀಮದ್ವಾಲ್ಮೀಕಿರಾಮಾಯಣ-ಒಂದನೆಯ ಸಂಪುಟ
ಬಾಲಕಾಂಡದ ಸರ್ಗಾನುಕ್ರಮಣಿಕೆ ಮತ್ತು ವಿಷಯಾನುಕ್ರಮಣಿಕೆ

(ವಿ.ಸೂ. ಮೊದಲನೆಯದು ಸರ್ಗ ಪುಟಸಂಖ್ಯೆ-ಎರಡನೆಯದು ವಿಷಯ ಪುಟಸಂಖ್ಯೆ)

ಸರ್ಗ	ವಿಷಯಗಳು		ಪುಟಸಂಖ್ಯೆ	ಪುಟಸಂಖ್ಯೆ
೧	ನಾರದರು ವಾಲ್ಮೀಕಿಮಹರ್ಷಿಗಳಿಗೆ ಶ್ರೀರಾಮನ ಕಥೆಯನ್ನು ಸಂಕ್ಷೇಪವಾಗಿ ವಿವರಿಸಿದುದು	....	೧	41
೨	ತಮಸಾನದಿಯ ತೀರದಲ್ಲಿ ಕ್ರೌಂಚವಧೆಯಿಂದ ಸಂತಪ್ತರಾದ ವಾಲ್ಮೀಕಿಮಹರ್ಷಿಗಳ ಶೋಕದ ಮಾತು ಶ್ಲೋಕರೂಪವಾದುದು : ರಾಮಾಯಣ ಕಾವ್ಯವನ್ನು ರಚಿಸಲು ಬ್ರಹ್ಮನಿಂದ ವಾಲ್ಮೀಕಿಗಳಿಗೆ ಆದೇಶ : ರಾಮಾಯಣಕಾವ್ಯದ ಉಪಕ್ರಮ	....	೧೦	62

ಸರ್ಗ	ವಿಷಯಗಳು	ಪುಟಸಂಖ್ಯೆ	ಪುಟಸಂಖ್ಯೆ
೩	ವಾಲ್ಮೀಕಿಮಹರ್ಷಿಗಳಿಂದ ರಚಿಸಲ್ಪಟ್ಟ ರಾಮಾಯಣಕಾವ್ಯದ ಸಂಕ್ಷೇಪ ನಿರೂಪಣೆ	.... ೧೪	70
೪	ವಾಲ್ಮೀಕಿಮಹರ್ಷಿಗಳು ಇಪ್ಪತ್ತುನಾಲ್ಕು ಸಾವಿರ ಶ್ಲೋಕಗಳಲ್ಲಿ ರಾಮಾಯಣವನ್ನು ರಚಿಸಿ ಅದನ್ನು ಲವ-ಕುಶರಿಗೆ ಉಪದೇಶಿಸಿದುದು : ಮುನಿಗಳ ಸಮೂಹದಲ್ಲಿ ಲವ-ಕುಶರು ರಾಮಾಯಣವನ್ನು ತಾಳ-ಲಯಬದ್ಧವಾಗಿ ಹಾಡಿ ಎಲ್ಲರ ಪ್ರಶಂಸೆಗೂ ಪಾತ್ರರಾದುದು : ಶ್ರೀರಾಮನಿಂದಲೂ ಸನ್ಮಾನಿತರಾಗಿ ಶ್ರೀರಾಮನ ಆಸ್ಥಾನದಲ್ಲಿ ರಾಮಾಯಣವನ್ನು ಹಾಡಿದುದು	.... ೧೮	74
೫	ದಶರಥರಾಜನಿಂದ ಆಳಲ್ಪಡುತ್ತಿದ್ದ ಅಯೋಧ್ಯೆಯ ವರ್ಣನೆ	.... ೨೧	82
೬	ದಶರಥರಾಜನ ರಾಜ್ಯಭಾರ ಮತ್ತು ಜನಜೀವನ	.... ೨೩	86
೭	ಅಮಾತ್ಯರ ಗುಣ-ನೀತಿಗಳ ವರ್ಣನೆ	.... ೨೬	91
೮	ದಶರಥನು ಮಕ್ಕಳನ್ನು ಪಡೆಯಲು ಅಶ್ವಮೇಧ ಯಾಗ ಮಾಡುವ ಪ್ರಸ್ತಾಪಮಾಡಿದುದು : ಮಂತ್ರಿಗಳ ಮತ್ತು ಬ್ರಾಹ್ಮಣರ ಅನುಮೋದನೆ	.... ೨೯	95
೯	ಸುಮಂತ್ರನು ದಶರಥನಿಗೆ ಋಷ್ಯಶೃಂಗನನ್ನು ಕರೆತರಲು ಸಲಹೆ ನೀಡಿದುದು : ಋಷ್ಯಶೃಂಗನೊಡನೆ ಶಾಂತಾದೇವಿಯ ವಿವಾಹಪ್ರಸಂಗವನ್ನೂ ವಿವರಿಸಿ ಹೇಳಿದುದು	.... ೩೧	100
೧೦	ಅಂಗದೇಶಕ್ಕೆ ಋಷ್ಯಶೃಂಗನ ಆಗಮನ : ಶಾಂತಾದೇವಿಯೊಡನೆ ವಿವಾಹ	.... ೩೩	103
೧೦	ಸುಮಂತ್ರನಿಂದ ಋಷ್ಯಶೃಂಗನ ಮಹಿಮೆಯನ್ನು ಕೇಳಿ ದಶರಥನು ಸಪರಿವಾರನಾಗಿ ಅಂಗದೇಶಕ್ಕೆ ಹೋಗಿ ಅವನನ್ನು ಕರೆತಂದುದು	.... ೩೬	109

ಸರ್ಗ	ವಿಷಯಗಳು	ಪುಟಸಂಖ್ಯೆ	ಪುಟಸಂಖ್ಯೆ
೧೨	ದಶರಥನು ಋಷಿಗಳೊಡನೆ ಯಜ್ಞಮಾಡುವ ಪ್ರಸ್ತಾಪವನ್ನೆತ್ತಿದುದು : ಋಷಿಗಳು ರಾಜನಿಗೂ ರಾಜನ ಮಂತ್ರಿಗಳಿಗೂ ಯಜ್ಞದ ಸಿದ್ಧತೆಯನ್ನು ಮಾಡುವಂತೆ ನಿರ್ದೇಶಿಸಿದುದು	೩೯	113
೧೩	ಯಜ್ಞವನ್ನು ಮಾಡಿಸುವಂತೆ ದಶರಥನು ವಸಿಷ್ಠರನ್ನು ಪ್ರಾರ್ಥಿಸಿದುದು : ವಸಿಷ್ಠರು ಪರಿವಾರದವರಿಗೆ ಯಜ್ಞದ ಸಿದ್ಧತೆಗಳನ್ನು ಮಾಡುವಂತೆ ಆದೇಶವಿತ್ತುದು : ಸುಮಂತ್ರನು ಎಲ್ಲ ರಾಜರಿಗೂ ಯಜ್ಞಕ್ಕಾಗಿ ಆಹ್ವಾನವಿತ್ತುದು : ಆಗಮಿಸಿದ ರಾಜರಿಗೆ ಸತ್ಕಾರ : ಪತ್ನಿಯರೊಡನೆ ದಶರಥನ ಯಜ್ಞದೀಕ್ಷೆ	೪೦	116
೧೪	ದಶರಥರಾಜನು ಅಶ್ವಮೇಧಯಾಗವನ್ನು ಸಾಂಗೋಪಾಂಗವಾಗಿ ನೆರವೇರಿಸಿದುದು	೪೫	122
೧೫	ಋಷ್ಯಶೃಂಗನು ದಶರಥನಿಂದ ಪುತ್ರಕಾಮೇಷ್ಟಿಯನ್ನು ಮಾಡಿಸಿದುದು : ದೇವತೆಗಳ ಪ್ರಾರ್ಥನೆಯಂತೆ ಬ್ರಹ್ಮನು ರಾವಣನ ವಧೋಪಾಯವನ್ನು ಹೇಳಿದುದು : ಮಹಾವಿಷ್ಣುವು ದೇವತೆಗಳಿಗೆ ಆಶ್ವಾಸನೆಯನ್ನಿತ್ತುದು	೫೧	132
೧೬	ಶ್ರೀಹರಿಯು ರಾವಣನನ್ನು ಸಂಹರಿಸಲು ಮಾನವನಾಗಿ ಅವತರಿಸುವುದಾಗಿ ದೇವತೆಗಳಿಗೆ ಆಶ್ವಾಸನೆಯನ್ನಿತ್ತುದು : ಪುತ್ರಕಾಮೇಷ್ಟಿಯಜ್ಞದ ಅಗ್ನಿಕುಂಡದಿಂದ ಪ್ರಾಜಾಪತ್ಯಪುರುಷನು ಪ್ರಕಟವಾಗಿ ಪಾಯಸವನ್ನು ಕೊಟ್ಟುದು : ಅದನ್ನು ಹಂಚಿಕೊಂಡು ಕುಡಿದ ರಾಣಿಯರು ಗರ್ಭವತಿಯರಾದುದು	೫೪	138
೧೭	ಬ್ರಹ್ಮನ ಆದೇಶದಂತೆ ದೇವತೆಗಳು ತಮ್ಮ ಅಂಶಗಳಿಂದ ಕಪಿನಾಯಕರನ್ನು ಸೃಷ್ಟಿಸಿದುದು	೫೭	143
೧೮	ಋಷ್ಯಶೃಂಗನೂ ರಾಜರೂ ತಮ್ಮ ತಮ್ಮ ದೇಶಗಳಿಗೆ ಪ್ರಯಾಣಮಾಡಿದುದು : ಅಯೋಧ್ಯೆಗೆ ರಾಣಿಯ		

ಸರ್ಗ	ವಿಷಯಗಳು	ಪುಟಸಂಖ್ಯೆ	ಪುಟಸಂಖ್ಯೆ
	ರೊಡನೆ ದಶರಥನ ಪ್ರತ್ಯಾಗಮನ : ರಾಮ-ಲಕ್ಷ್ಮಣ-ಭರತ-ಶತ್ರುಘ್ನರ ಜನನ : ಮಕ್ಕಳ ಶೀಲ-ಸ್ವಭಾವಗಳು ಮತ್ತು ಗುಣಗಳ ವರ್ಣನೆ : ದಶರಥನ ಸಭೆಗೆ ವಿಶ್ವಾಮಿತ್ರರ ಆಗಮನ	.... ೬೧	148
೧೯	ವಿಶ್ವಾಮಿತ್ರರು ರಾಮ-ಲಕ್ಷ್ಮಣರನ್ನು ಕಳುಹಿಸಿ ಕೊಡುವಂತೆ ಕೇಳಿದುದು : ದಶರಥನ ದುಃಖ	.... ೬೬	158
೨೦	ಶ್ರೀರಾಮನನ್ನು ಕಳುಹಿಸಿಕೊಡಲು ದಶರಥನ ಅಸಮ್ಮತಿ : ವಿಶ್ವಾಮಿತ್ರರ ಕೋಪ	.... ೬೮	162
೨೧	ವಿಶ್ವಾಮಿತ್ರರ ರೋಷದ ಮಾತುಗಳು : ವಸಿಷ್ಠರು ದಶರಥನನ್ನು ಸಂತೈಸಿದುದು	.... ೭೧	167
೨೨	ದಶರಥನಿಂದ ರಾಮ-ಲಕ್ಷ್ಮಣರ ಬೀಳ್ಕೊಡುಗೆ : ಮಾರ್ಗದಲ್ಲಿ ವಿಶ್ವಾಮಿತ್ರರಿಂದ ಬಲಾ-ಅತಿಬಲಾ ಎಂಬ ವಿದ್ಯೆಗಳ ಉಪದೇಶ	.... ೭೩	171
೨೩	ವಿಶ್ವಾಮಿತ್ರ-ರಾಮ-ಲಕ್ಷ್ಮಣರು ಸರಯೂ-ಗಂಗಾ ನದಿಗಳ ಸಮೀಪದಲ್ಲಿದ್ದ ಆಶ್ರಮದಲ್ಲಿ ರಾತ್ರಿ ತಂಗಿದುದು	.... ೭೫	175
೨೪	ಗಂಗೆಯನ್ನು ದಾಟುತ್ತಿದ್ದಾಗ ನೀರಿನಿಂದ ಹೊರ ಬರುತ್ತಿದ್ದ ಶಬ್ದದ ವಿಷಯವಾಗಿ ರಾಮ-ಲಕ್ಷ್ಮಣರ ಪ್ರಶ್ನೆ : ವಿಶ್ವಾಮಿತ್ರರಿಂದ ವಿವರಣೆ : ಮಲದ-ಕರೂಷ ಮತ್ತು ತಾಟಕಾವನಗಳ ಪರಿಚಯಮಾಡಿಕೊಡುತ್ತಾ ತಾಟಕಿಯನ್ನು ಸಂಹರಿಸುವಂತೆ ವಿಶ್ವಾಮಿತ್ರರು ಶ್ರೀರಾಮನಿಗೆ ಆಜ್ಞಾಪಿಸಿದುದು	.... ೭೮	178
೨೫	ವಿಶ್ವಾಮಿತ್ರ-ರಾಮರ ಸಂಭಾಷಣೆ : ತಾಟಕಾ-ಮಾರೀಚರ ಜನ್ಮವೃತ್ತಾಂತಕಥನ : ತಾಟಕಿಯ ವಧೆಗೆ ವಿಶ್ವಾಮಿತ್ರರ ಪ್ರೋತ್ಸಾಹ	.... ೮೧	183
೨೬	ಶ್ರೀರಾಮನಿಂದ ತಾಟಕಿಯ ಸಂಹಾರ	.... ೮೩	186

ಸರ್ಗ	ವಿಷಯಗಳು	ಪುಟಸಂಖ್ಯೆ	ಪುಟಸಂಖ್ಯೆ
೨೭	ವಿಶ್ವಾಮಿತ್ರರಿಂದ ಶ್ರೀರಾಮನಿಗೆ ದಿವ್ಯಾಸ್ತ್ರಗಳ ಉಪದೇಶ	.... ೮೬	191
೨೮	ವಿಶ್ವಾಮಿತ್ರರು ರಾಮನಿಗೆ ಪ್ರತ್ಯಸ್ತ್ರಸಂಹಾರಗಳನ್ನೂ ಇನ್ನೂ ಇತರ ಅಸ್ತ್ರಗಳನ್ನೂ ಉಪದೇಶಿಸಿದುದು : ಹಾದಿಯಲ್ಲಿ ಸಿಕ್ಕಿದ ಆಶ್ರಮದ ವಿಷಯವಾಗಿ ಶ್ರೀರಾಮನು ವಿಶ್ವಾಮಿತ್ರರನ್ನು ಪ್ರಶ್ನಿಸಿದುದು	.... ೮೯	193
೨೯	ವಾಮನರೂಪಿಯಾದ ಮಹಾವಿಷ್ಣುವಿನ ಸಿದ್ಧಾಶ್ರಮದರ್ಶನ : ವಿಶ್ವಾಮಿತ್ರರಿಂದ ಸಿದ್ಧಾಶ್ರಮದ ಉಪಾಖ್ಯಾನಕಥನ	.... ೯೧	196
೩೦	ಶ್ರೀರಾಮನಿಂದ ವಿಶ್ವಾಮಿತ್ರರ ಯಜ್ಞದ ರಕ್ಷಣೆ : ರಾಕ್ಷಸರ ಸಂಹಾರ	.... ೯೪	201
೩೧	ಋಷಿಗಳೊಡನೆ ರಾಮ-ಲಕ್ಷ್ಮಣ-ವಿಶ್ವಾಮಿತ್ರರು ಮಿಥಿಲಾಪಟ್ಟಣದ ಕಡೆಗೆ ಪ್ರಯಾಣಮಾಡಿದುದು : ಮಾರ್ಗದಲ್ಲಿ ಶೋಣಾನದಿಯ ತೀರದಲ್ಲಿ ವಿಶ್ರಾಂತಿ	.... ೯೭	205
೩೨	ಬ್ರಹ್ಮಪುತ್ರನಾದ ಕುಶನ ನಾಲ್ಕು ಮಕ್ಕಳ ವಿಚಾರ : ಶೋಣಾನದಿಯ ತೀರಪ್ರದೇಶಕ್ಕೆ ವಸುವಿನ ಭೂಮಿ ಎಂದು ಹೆಸರು ಬರಲು ಕಾರಣ : ವಾಯುವಿನ ಕೋಪದಿಂದ ಕುಶನಾಭನ ನೂರು ಕನ್ಯೆಯರೂ ಕುಬ್ಜೆಯರಾದುದು	.... ೯೯	209
೩೩	ಕುಶನಾಭನು ಕನ್ಯೆಯರಿಗೆ ಧೈರ್ಯಹೇಳಿದುದು : ಕ್ಷಮಾಗುಣದ ಪ್ರಶಂಸೆ : ಬ್ರಹ್ಮದತ್ತನ ಜನ್ಮ: ಅವನೊಡನೆ ಕುಶನಾಭಕನ್ಯೆಯರ ವಿವಾಹ	...೧೦೨	214
೩೪	ಗಾಧಿ-ವಿಶ್ವಾಮಿತ್ರ-ಸತ್ಯವತಿಯರ ಜನ್ಮವೃತ್ತಾಂತ	..೧೦೪	218
೩೫	ರಾಮ-ವಿಶ್ವಾಮಿತ್ರರ ಸಂವಾದ : ಗಂಗೆಯ ಜನ್ಮವೃತ್ತಾಂತವನ್ನು ತಿಳಿಯಲು ರಾಮನ ಕುತೂಹಲ : ವಿಶ್ವಾಮಿತ್ರರಿಂದ ಗಂಗಾ-ಉಮೆಯರ ಜನ್ಮಕಥನ	.... ೧೦೬	222

ಸರ್ಗ	ವಿಷಯಗಳು	ಪುಟಸಂಖ್ಯೆ	ಪುಟಸಂಖ್ಯೆ
೩೬	ದೇವತೆಗಳು ಶಿವ-ಪಾರ್ವತಿಯರನ್ನು ಸುರತಕ್ರೀಡೆ ಯಿಂದ ವಿಮುಖರನ್ನಾಗಿ ಮಾಡಿದುದು : ದೇವತೆಗಳಿಗೂ ಮತ್ತು ಭೂದೇವಿಗೂ ಉಮಾದೇವಿಯ ಶಾಪ	೧೦೯	226
೩೭	ಗಂಗೆಯಿಂದ ಕಾರ್ತಿಕೇಯನ ಉತ್ಪತ್ತಿಪ್ರಸಂಗ	೧೧೧	232
೩೮	ಸಗರನ ಮಕ್ಕಳ ಜನನ : ಯಜ್ಞದ ಸಿದ್ಧತೆ	೧೧೪	237
೩೯	ಸಗರನ ಅಶ್ವಮೇಧಾಶ್ವದ ಅಪಹರಣ : ಸಗರನ ಮಕ್ಕಳು ಕುದುರೆಯನ್ನು ಹುಡುಕಲು ಪೃಥ್ವಿಯನ್ನೇ ಭೇದಿಸಿದುದು : ಸಂಭ್ರಾಂತರಾದ ದೇವತೆಗಳು ಬ್ರಹ್ಮನನ್ನು ಪ್ರಾರ್ಥಿಸಿದುದು	೧೧೭	240
೪೦	ಸಗರಪುತ್ರರು ವಿನಾಶಹೊಂದುವರೆಂಬುದನ್ನು ಸೂಚಿಸಿ ಬ್ರಹ್ಮನು ದೇವತೆಗಳನ್ನು ಸಮಾಧಾನಗೊಳಿಸಿ ದುದು : ಸಗರನ ಮಕ್ಕಳು ಭೂಮಿಯನ್ನು ಅಗೆ ಯುತ್ತಾ ಕಪಿಲಮಹರ್ಷಿಗಳ ಬಳಿಗೆ ಹೋದುದು : ಕಪಿಲರು ಕುಪಿತರಾಗಿ ಸಗರನ ಮಕ್ಕಳನ್ನು ದಹಿಸಿದುದು	೧೧೯	244
೪೧	ಸಗರನ ಆಜ್ಞೆಯಂತೆ ಅಂಶುಮಂತನು ರಸಾತಲಕ್ಕೆ ಹೋಗಿ ಕುದುರೆಯನ್ನು ತಂದುದು : ಮಕ್ಕಳ ನಿಧನ ವಾರ್ತೆಯನ್ನು ತಿಳಿದು ಸಗರನು ಶೋಕಾಕುಲನಾಗಿ ಯಜ್ಞವನ್ನು ಪೂರ್ತಿಮಾಡಿದುದು	೧೨೨	249
೪೨	ಗಂಗೆಯನ್ನು ತರುವ ಸಲುವಾಗಿ ಅಂಶುಮಂತನ ಪ್ರಯತ್ನ : ಭಗೀರಥನ ತಪಸ್ಸಿನಿಂದ ಸುಪ್ರೀತನಾದ ಬ್ರಹ್ಮನು ವರವನ್ನಿತ್ತು ಗಂಗೆಯನ್ನು ಧರಿಸಲು ಈಶ್ವರನನ್ನು ಪ್ರಾರ್ಥಿಸುವಂತೆ ಸಲಹೆಯನ್ನಿತ್ತುದು....	೧೨೫	253
೪೩	ಶ್ರೀಶಂಕರನು ಗಂಗೆಯನ್ನು ಧರಿಸುವುದಾಗಿ ಆಶ್ವಾ ಸನೆಯನ್ನಿತ್ತುದು : ಜಹ್ನುಮಹರ್ಷಿಯ ಕಿವಿಯಿಂದ ಹೊರಬಂದ ಗಂಗಾನದಿಯು ಏಳು ಪ್ರಕಾರವಾಗಿ ಹರಿದು		

ಸರ್ಗ	ವಿಷಯಗಳು	ಪುಟಸಂಖ್ಯೆ	ಪುಟಸಂಖ್ಯೆ
	ಭಗೀರಥನೊಡನೆ ಪಾತಾಳಕ್ಕೆ ಹೋಗಿ ಅವನ ಪ್ರಪಿತಾಮಹರನ್ನು ಉದ್ಧರಿಸಿದುದು	೧೨೭	257
೪೪	ಬ್ರಹ್ಮನು ಭಗೀರಥನನ್ನು ಪ್ರಶಂಸಿಸಿ ಗಂಗಾಜಲದಿಂದ ಪಿತೃಗಳಿಗೆ ತರ್ಪಣವನ್ನೀಯಲು ಅನುಜ್ಞೆಯನ್ನಿತ್ತುದು : ಭಗೀರಥನು ಎಲ್ಲ ಪಿತೃಕಾರ್ಯಗಳನ್ನೂ ಮುಗಿಸಿ ನಗರಪ್ರವೇಶಮಾಡಿದುದು : ಗಂಗಾವತರಣೋಪಾಖ್ಯಾನದ ಮಹಿಮೆ.	೧೩೧	263
೪೫	ದೇವ-ದಾನವರು ಸಮುದ್ರವನ್ನು ಕಡೆದುದು : ರುದ್ರನಿಂದ ಹಾಲಾಹಲವಿಷದ ಪಾನ : ಮಹಾವಿಷ್ಣುವಿನ ಸಹಾಯದಿಂದ ಮಂದರಪರ್ವತವನ್ನು ಮೇಲಕ್ಕೆತ್ತಿದುದು : ಧನ್ವಂತರಿಯೇ ಮೊದಲಾದವರ ಉತ್ಪತ್ತಿ : ದೇವಾಸುರಯುದ್ಧದಲ್ಲಿ ದೈತ್ಯರ ಸಂಹಾರ	೧೩೩	267
೪೬	ಮಕ್ಕಳ ಮರಣದಿಂದ ದುಃಖಿತಳಾದ ದಿತಿಯು ಇಂದ್ರನನ್ನು ಸಂಹರಿಸಲು ಸಮರ್ಥನಾದ ಪುತ್ರನನ್ನು ಪಡೆಯಲು ತಪಸ್ಸನ್ನು ಮಾಡಿದುದು : ಇಂದ್ರನ ಉಪಚಾರ : ದಿತಿಯು ಅಶುಚಿಯಾಗಿದ್ದ ಸಮಯದಲ್ಲಿ ಇಂದ್ರನು ಗರ್ಭವನ್ನು ಛೇದಿಸಿದುದು	೧೩೭	273
೪೭	ದಿತಿಯ ಕೋರಿಕೆಯಂತೆ ಗರ್ಭದ ಏಳು ಭಾಗಗಳೂ ವಾತಸ್ಕಂಧಾಭಿಮಾನಿದೇವತೆಗಳಾಗಲು ಇಂದ್ರನ ಅಂಗೀಕಾರ : ವಿಶಾಲೋತ್ಪತ್ತಿಕಥನ : ಸುಮತಿ-ಕೌಶಿಕರ ಸಮಾಗಮ	೧೪೦	277
೪೮	ಸುಮತಿರಾಜನಿಂದ ಸತ್ಕೃತರಾದ ಕೌಶಿಕ-ರಾಮ-ಲಕ್ಷ್ಮಣರ ಮಿಥಿಲಾಪ್ರಯಾಣ : ಗೌತಮಾಶ್ರಮದ ವಿವರಣೆ : ಇಂದ್ರನ ಅತ್ಯಾಚಾರ : ಇಂದ್ರ-ಅಹಲ್ಯೆಯರಿಗೆ ಗೌತಮರ ಶಾಪ	೧೪೨	280
೪೯	ಪಿತೃದೇವತೆಗಳಿಂದ ಇಂದ್ರನಿಗೆ ಮೇಷವೃಷಣಗಳ		

ಸರ್ಗ	ವಿಷಯಗಳು	ಪುಟಸಂಖ್ಯೆ	ಪುಟಸಂಖ್ಯೆ
	ಸಂಯೋಜನೆ : ಶ್ರೀರಾಮನಿಂದ ಅಹಲ್ಯಾಶಾಪ ವಿಮೋಚನೆ : ಅಹಲ್ಯಾ-ಗೌತಮರಿಂದ ಶ್ರೀರಾಮನಿಗೆ ಸತ್ಕಾರ	.... ೧೮೫	285
೫೦	ಮಿಥಿಲಾಪಟ್ಟಣಕ್ಕೆ ವಿಶ್ವಾಮಿತ್ರರೊಡನೆ ರಾಮ-ಲಕ್ಷ್ಮಣರ ಪ್ರಯಾಣ : ಜನಕನ ಸತ್ಕಾರ : ರಾಜನಿಗೆ ವಿಶ್ವಾಮಿತ್ರರಿಂದ ರಾಜಪುತ್ರರ ಪರಿಚಯ	...೧೮೭	288
೫೧	ಶತಾನಂದನ ಪ್ರಶ್ನೆ : ಶ್ರೀರಾಮನಿಂದಾದ ಅಹಲ್ಯೋದ್ಧಾರವನ್ನು ವಿಶ್ವಾಮಿತ್ರರು ತಿಳಿಸಿದುದು : ಶತಾನಂದನಿಂದ ವಿಶ್ವಾಮಿತ್ರಚರಿತ್ರೆಯ ಕಥನ	.... ೧೫೦	292
೫೨	ವಸಿಷ್ಠ-ವಿಶ್ವಾಮಿತ್ರರ ಕುಶಲಪ್ರಶ್ನೆಗಳು : ಸೈನ್ಯದೊಡನೆ ಬಂದಿರುವ ವಿಶ್ವಾಮಿತ್ರರ ಆತಿಥ್ಯಕ್ಕಾಗಿ ಸಕಲಸಂಭಾರಗಳನ್ನೂ ಸಿದ್ಧಪಡಿಸುವಂತೆ ಶಬಲಾ ಧೇನುವಿಗೆ ವಸಿಷ್ಠರ ಆದೇಶ	.... ೧೫೨	296
೫೩	ಕಾಮಧೇನುವಿನ ಸಹಾಯದಿಂದ ವಸಿಷ್ಠರು ವಿಶ್ವಾಮಿತ್ರರನ್ನೂ ಅವರ ಪರಿವಾರದವರನ್ನೂ ಯಥೋಚಿತವಾಗಿ ಸತ್ಕರಿಸಿದುದು : ವಿಶ್ವಾಮಿತ್ರರು ಕಾಮಧೇನುವನ್ನು ಅಪೇಕ್ಷಿಸಿದುದು : ವಸಿಷ್ಠರ ಅಸಮ್ಮತಿ	.... ೧೫೫	300
೫೪	ಶಬಲೆಯನ್ನು ಬಲಾತ್ಕಾರಪೂರ್ವಕವಾಗಿ ಸೆಳೆದುಕೊಂಡು ಹೋಗಲು ವಿಶ್ವಾಮಿತ್ರರ ಪ್ರಯತ್ನ : ವಸಿಷ್ಠರಲ್ಲಿ ಶಬಲೆಯ ಪ್ರಲಾಪ : ಅವರ ಆಜ್ಞೆಯಂತೆ ಶಬಲೆಯಿಂದ ಶಕ-ಯವನಾದಿಗಳ ಸೃಷ್ಟಿ ಮತ್ತು ವಿಶ್ವಾಮಿತ್ರರ ಸೈನ್ಯದ ಸಂಹಾರ	.... ೧೫೭	304
೫೫	ತನ್ನ ನೂರು ಮಕ್ಕಳೂ ಮತ್ತು ಅಪಾರಸೈನ್ಯವೂ ವಿನಾಶವಾಗಲಾಗಿ ವಿಶ್ವಾಮಿತ್ರರು ತಪಸ್ಸುಮಾಡಿ ದಿವ್ಯಾಸ್ತ್ರಗಳನ್ನು ಪಡೆದು ಪುನಃ ವಸಿಷ್ಠರನ್ನು ಎದುರಿಸಿದುದು : ಆಶ್ರಮವಾಸಿಗಳಿಗೆ ಉಪದ್ರವ	.... ೧೫೯	307

ಸರ್ಗ	ವಿಷಯಗಳು	ಪುಟಸಂಖ್ಯೆ	ಪುಟಸಂಖ್ಯೆ
೫೬	ವಿಶ್ವಾಮಿತ್ರರಿಂದ ವಸಿಷ್ಠರ ಮೇಲೆ ನಾನಾವಿಧ ವಾದ ದಿವ್ಯಾಸ್ತ್ರಗಳ ಪ್ರಯೋಗ : ವಸಿಷ್ಠರ ಬ್ರಹ್ಮ ದಂಡದಿಂದ ಎಲ್ಲ ಮಹಾಸ್ತ್ರಗಳ ಉಪಶಮನ	.... ೧೬೨	311
೫೭	ವಿಶ್ವಾಮಿತ್ರರ ತಪಸ್ಸು : ತ್ರಿಶಂಕುವು ಯಜ್ಞ ಮಾಡಿಸಲು ವಸಿಷ್ಠರನ್ನು ಪ್ರಾರ್ಥಿಸಿದುದು : ಅವರ ಅಸಮ್ಮತಿ : ತ್ರಿಶಂಕುವು ವಸಿಷ್ಠರ ಪುತ್ರರನ್ನು ಶರಣುಹೊಂದಿದುದು	.... ೧೬೪	314
೫೮	ವಸಿಷ್ಠಪುತ್ರರ ಶಾಪದಿಂದ ತ್ರಿಶಂಕುವಿಗೆ ಚಂಡಾಲತ್ವ ಪ್ರಾಪ್ತಿ : ವಿಶ್ವಾಮಿತ್ರರನ್ನು ಶರಣುಹೊಂದಿ ಯಾಗ ವನ್ನು ಮಾಡಿಸುವಂತೆ ತ್ರಿಶಂಕುವಿನ ಪ್ರಾರ್ಥನೆ	.... ೧೬೬	317
೫೯	ತ್ರಿಶಂಕುವಿಗೆ ಯಜ್ಞಮಾಡಿಸಲು ವಿಶ್ವಾಮಿತ್ರರ ಅಂಗೀಕಾರ : ಆಹ್ವಾನವನ್ನು ತಿರಸ್ಕರಿಸಿದ ಮಹೋದಯನಿಗೂ–ವಸಿಷ್ಠರ ಮಕ್ಕಳಿಗೂ ವಿಶ್ವಾಮಿತ್ರರಿಂದ ಶಾಪಪ್ರದಾನ	.... ೧೬೯	320
೬೦	ಹವಿರ್ಭಾಗಗಳನ್ನು ಸ್ವೀಕರಿಸಲು ದೇವತೆಗಳು ಬರದಿರಲು ವಿಶ್ವಾಮಿತ್ರರು ತಪೋಬಲದಿಂದಲೇ ತ್ರಿಶಂಕುವನ್ನು ಸ್ವರ್ಗಕ್ಕೆ ಕಳುಹಿಸಿದುದು : ಇಂದ್ರನು ತ್ರಿಶಂಕುವನ್ನು ಸ್ವರ್ಗದಿಂದ ನೂಕಿದುದು : ಕ್ರುದ್ಧರಾದ ವಿಶ್ವಾಮಿತ್ರರು ನೂತನಸ್ವರ್ಗವನ್ನೇ ನಿರ್ಮಿಸಲು ಪ್ರಯತ್ನಿಸಿದುದು : ದೇವತೆಗಳ ಪ್ರಾರ್ಥನೆಯಂತೆ ನಿಲ್ಲಿಸಿದುದು	.... ೧೭೧	324
೬೧	ಪುಷ್ಕರತೀರ್ಥದ ಸಮೀಪದಲ್ಲಿ ವಿಶ್ವಾಮಿತ್ರರ ತಪಸ್ಸು : ಋಚೀಕನ ನಡುಮಗನಾದ ಶುನಃಶೇಪನನ್ನು ಅಂಬರೀಷನು ಯಜ್ಞಪಶು ವಾಗಿ ಕ್ರಯಕ್ಕೆ ಪಡೆದುದು	.... ೧೭೪	329
೬೨	ವಿಶ್ವಾಮಿತ್ರರಲ್ಲಿ ಶುನಃಶೇಪನ ಶರಣಾಗತಿ : ಮಧುಷ್ಯಂದಾದಿ ಮಕ್ಕಳಿಗೆ ವಿಶ್ವಾಮಿತ್ರರಿಂದ		

ಸರ್ಗ	ವಿಷಯಗಳು	ಪುಟಸಂಖ್ಯೆ	ಪುಟಸಂಖ್ಯೆ
	ಶಾಪಪ್ರದಾನ : ಅಂಬರೀಷನ ಯಜ್ಞಸಮಾಪ್ತಿ : ಶುನಃಶೇಪನಿಗೆ ಇಂದ್ರನಿಂದ ದೀರ್ಘಾಯುಷ್ಯಪ್ರದಾನ	೧೭೬	333
೬೩	ತಪಸ್ಸಿನ ಫಲವಾಗಿ ವಿಶ್ವಾಮಿತ್ರರಿಗೆ ಋಷಿತ್ವ-ಮಹರ್ಷಿತ್ವ ಪ್ರಾಪ್ತಿ : ಮೇನಕೆಯ ಮೂಲಕ ವಿಶ್ವಾಮಿತ್ರರ ತಪೋಭಂಗ : ಬ್ರಹ್ಮರ್ಷಿಗಳಾಗಲು ಘೋರವಾದ ತಪಶ್ಚರಣೆ	.... ೧೭೯	338
೬೪	ವಿಶ್ವಾಮಿತ್ರರು ರಂಭೆಗೆ ಶಾಪಕೊಟ್ಟು ಪುನಃ ತಪಸ್ಸಿನಲ್ಲಿಯೇ ತೊಡಗಿದುದು	.... ೧೮೧	342
೬೫	ವಿಶ್ವಾಮಿತ್ರರ ಘೋರತಪಸ್ಸು : ಬ್ರಹ್ಮರ್ಷಿತ್ವ ಪ್ರಾಪ್ತಿ : ಜನಕನಿಂದ ವಿಶ್ವಾಮಿತ್ರರ ಪ್ರಶಂಸೆ	.... ೧೮೩	346
೬೬	ಜನಕರಾಜನು ವಿಶ್ವಾಮಿತ್ರರನ್ನೂ ರಾಮ-ಲಕ್ಷ್ಮಣರನ್ನೂ ಸತ್ಕರಿಸಿ ಅವರಿಗೆ ತನ್ನ ಅರಮನೆಯಲ್ಲಿದ್ದ ಧನುಸ್ಸಿನ ಇತಿಹಾಸವನ್ನೂ ಸೀತಾಪ್ರಾಪ್ತಿಯ ವಿಷಯವನ್ನೂ ತಿಳಿಸಿ, ರಾಮನು ಧನುಸ್ಸಿನ ಶಿಂಜಿನಿಯನ್ನು ಸೆಳೆದುಕಟ್ಟಿದರೆ ಸೀತೆಯನ್ನು ಕೊಟ್ಟು ವಿವಾಹಮಾಡುವುದಾಗಿ ಹೇಳಿದುದು	.... ೧೮೭	351
೬೭	ಶ್ರೀರಾಮನು ಶಿವಧನುಸ್ಸನ್ನು ಮುರಿದುದು : ಜನಕನು ವಿಶ್ವಾಮಿತ್ರರ ಆಜ್ಞೆಯಂತೆ ದಶರಥನನ್ನು ಕರೆತರಲು ಅಮಾತ್ಯರನ್ನು ಅಯೋಧ್ಯೆಗೆ ಕಳುಹಿಸಿದುದು	.... ೧೮೯	355
೬೮	ಮಂತ್ರಿಗಳು ದಶರಥನಿಗೆ ಜನಕನ ಸಂದೇಶವನ್ನು ತಿಳಿಸಿದುದು : ವಸಿಷ್ಠ-ವಾಮದೇವರ ಸಲಹೆಯಂತೆ ದಶರಥನ ಪ್ರಯಾಣಸನ್ನಾಹ	.... ೧೯೨	360
೬೯	ಚತುರಂಗಬಲದೊಡನೆ ಮಿಥಿಲೆಗೆ ದಶರಥನ ಪ್ರಯಾಣ : ಜನಕನಿಂದ ಆದರದ ಸ್ವಾಗತ	.... ೧೯೪	364

ಸರ್ಗ	ವಿಷಯಗಳು	ಪುಟಸಂಖ್ಯೆ	ಪುಟಸಂಖ್ಯೆ
೭೦	ಜನಕರಾಜನು ಸಾಂಕಾಶ್ಯಾನಗರಿಯಿಂದ ತನ್ನ ತಮ್ಮನನ್ನು ಕರೆಸಿದುದು : ವಸಿಷ್ಠರು ಸೂರ್ಯ ವಂಶದವರ ಪರಿಚಯವನ್ನು ಮಾಡಿಕೊಟ್ಟುದು : ಸೀತೆಯನ್ನು ರಾಮನಿಗೂ ಊರ್ಮಿಳೆಯನ್ನು ಲಕ್ಷ್ಮಣನಿಗೂ ವಸಿಷ್ಠರು ವರಣಮಾಡಿದುದು	೧೯೬	366
೭೧	ಜನಕನು ತನ್ನ ವಂಶವನ್ನು ಪರಿಚಯಮಾಡಿ ಕೊಟ್ಟುದು : ಶ್ರೀರಾಮನಿಗೆ ಸೀತೆಯನ್ನೂ, ಲಕ್ಷ್ಮಣನಿಗೆ ಊರ್ಮಿಳೆಯನ್ನೂ ಮದುವೆಮಾಡಿ ಕೊಡುವುದಾಗಿ ಮಾತುಕೊಟ್ಟುದು	೨೦೦	372
೭೨	ವಿಶ್ವಾಮಿತ್ರರು ಭರತ-ಶತ್ರುಘ್ನರಿಗೆ ಕನ್ಯೆಯರನ್ನು ವರಣಮಾಡಿದುದು : ಜನಕನ ಸಮ್ಮತಿ : ದಶರಥನು ತನ್ನ ಮಕ್ಕಳ ಕಲ್ಯಾಣಕ್ಕಾಗಿ ನಾಂದೀ ಶ್ರಾದ್ಧ-ಸಮಾವರ್ತನ ಮುಂತಾದ ಕರ್ಮಗಳನ್ನು ಮಾಡಿದುದು	೨೦೨	375
೭೩	ಶ್ರೀರಾಮ-ಲಕ್ಷ್ಮಣ-ಭರತ-ಶತ್ರುಘ್ನರ ವಿವಾಹ	೨೦೫	378
೭೪	ವಿಶ್ವಾಮಿತ್ರರು ಆಶ್ರಮಕ್ಕೆ ತೆರಳಿದುದು : ಜನಕನು ಹೆಣ್ಣುಮಕ್ಕಳಿಗೆ ಅಪಾರವಾದ ಬಳುವಳಿಗಳನ್ನು ಕೊಟ್ಟು ದಶರಥನೊಡನೆ ಕಳುಹಿಸಿಕೊಟ್ಟುದು : ಮಾರ್ಗದಲ್ಲಿ ಶುಭಾಶುಭಶಕುನಗಳು : ಪರಶುರಾಮನ ಆಗಮನ	೨೦೯	384
೭೫	ದಶರಥನ ಮಾತನ್ನು ತಿರಸ್ಕರಿಸುತ್ತಾ ಪರಶು ರಾಮನು ಶ್ರೀರಾಮನಿಗೆ ವೈಷ್ಣವಧನುಸ್ಸಿಗೆ ಹೆದೆಯೇರಿಸಲು ಹೇಳಿದುದು	೨೧೧	387
೭೬	ಶ್ರೀರಾಮನು ವೈಷ್ಣವಧನುಸ್ಸಿಗೆ ಹೆದೆಯೇರಿಸಿ ಬಾಣ ವನ್ನು ಅನುಸಂಧಾನಮಾಡಿ ಪರಶುರಾಮನ ತಪಃಫಲ ವನ್ನು ಲಕ್ಷ್ಯವಾಗಿಟ್ಟು ವಿನಾಶಗೊಳಿಸಿದುದು : ಪರಶು ರಾಮನು ಮಹೇಂದ್ರಪರ್ವತಕ್ಕೆ ಹಿಂದಿರುಗಿದುದು	೨೧೪	392

ಸರ್ಗ	ವಿಷಯಗಳು	ಪುಟಸಂಖ್ಯೆ	ಪುಟಸಂಖ್ಯೆ
೭೭	ದಶರಥರಾಜನು ಮಕ್ಕಳೊಡನೆಯೂ, ವಧುಗಳೊಡನೆಯೂ ಅಯೋಧ್ಯಾಪಟ್ಟಣವನ್ನು ಸೇರಿದುದು : ಭರತನು ಶತ್ರುಘ್ನನೊಡನೆ ತನ್ನ ಸೋದರಮಾವನ ಊರಿಗೆ ಪ್ರಯಾಣಮಾಡಿದುದು : ಶ್ರೀರಾಮನ ಸದ್ವ್ಯವಹಾರಗಳಿಂದ ನಾಗರಿಕರ ಸಂತೋಷ : ಸೀತಾ-ರಾಮರ ಪರಸ್ಪರಪ್ರೇಮ	.... ೨೧೬	396
	ಪರಿಶಿಷ್ಟ	....	1

ಶ್ರೀಮದ್ವಾಲ್ಮೀಕಿರಾಮಾಯಣದ ಪಾರಾಯಣಕ್ರಮ

ಶ್ರೀಮದ್ವಾಲ್ಮೀಕಿರಾಮಾಯಣದ ಪಾರಾಯಣಕ್ರಮಗಳು ಅನೇಕವಿವೆ. ಶ್ರೀರಾಮಸೇವಾಗ್ರಂಥ, ಅನುಷ್ಠಾನಪ್ರಕಾಶ, ಸ್ಕಾಂದಪುರಾಣೋಕ್ತ ರಾಮಾಯಣಮಾಹಾತ್ಮ್ಯ, ಬೃಹದ್ಧರ್ಮಪುರಾಣ ಹಾಗೂ ಶಾಂಕರ, ರಾಮಾನುಜ, ಮಾಧ್ವ, ರಾಮಾನಂದ ಮುಂತಾದ ವಿಭಿನ್ನಸಂಪ್ರದಾಯಗಳ ಪ್ರಕಾರ ಬೇರೆ ಬೇರೆ ವಿಧಿಗಳಿವೆ. ಆದರೆ ಇವುಗಳಲ್ಲಿ ಹೇಳಿಕೊಳ್ಳುವ ಅಂತರವಷ್ಟೇನೂ ಇಲ್ಲ. ಇದರಂತೆಯೇ ಇದರ ಸಕಾಮ-ನಿಷ್ಕಾಮಾನುಷ್ಠಾನಗಳಲ್ಲಿಯೂ ಭೇದವಿದೆ. ಇವೆಲ್ಲವುಗಳ ವಿಸ್ತೃತ ವಿಚಾರ ವಿವರಣೆ ಇಲ್ಲಿ ಸಾಧ್ಯವಿಲ್ಲ. ಶ್ರೀಮದ್ವಾಲ್ಮೀಕಿರಾಮಾಯಣದ ಪ್ರಸಿದ್ಧವಾದ ನವಾಹಪಾರಾಯಣವಿಧಿಯನ್ನು ವಿವರಿಸಲಾಗುತ್ತದೆ.

ಚೈತ್ರ, ಮಾಘ ಮತ್ತು ಕಾರ್ತಿಕಮಾಸಗಳಲ್ಲಿ ಶುಕ್ಲ ಪಂಚಮಿಯಿಂದ ಪ್ರಾರಂಭಿಸಿ ತ್ರಯೋದಶಿಯವರೆಗೆ ಒಂಬತ್ತು ದಿನಗಳು ಮಾಡುವ ಪಾರಾಯಣಕ್ಕೆ ನವಾಹಪಾರಾಯಣವೆನ್ನುತ್ತಾರೆ.

ಚೈತ್ರೇ ಮಾಘೇ ಕಾರ್ತಿಕೇ ಚ ಸಿತೇ ಪಕ್ಷೇ ಚ ವಾಚಯೇತ್ ।
ನವಾಹಂ ಸುಮಹಾಪುಣ್ಯಂ ಶ್ರೋತವ್ಯಂ ಚ ಪ್ರಯತ್ನತಃ ॥

ಪಂಚಮ್ಯಾ ದಿನಮಾರಭ್ಯ ರಾಮಾಯಣ ಕಥಾಮೃತಮ್ ।
ನವಾಹಶ್ರವಣೇನೈವ ಸರ್ವಪಾಪೈಃ ಪ್ರಮುಚ್ಯತೇ ॥

(ಶ್ರೀರಾಮಸೇವಾಗ್ರಂಥ)

ಯಾವುದಾದರೂ ಪುಣ್ಯಕ್ಷೇತ್ರ, ಪವಿತ್ರತೀರ್ಥ, ದೇವಾಲಯ ಅಥವಾ ಸ್ವಗೃಹದಲ್ಲಿಯೇ ಶ್ರೀಮನ್ನಾರಾಯಣನ ಮತ್ತು ತುಲಸಿಯ ಪವಿತ್ರಸಾನ್ನಿಧ್ಯ ದಲ್ಲಿ ಶ್ರೀಮದ್ರಾಮಾಯಣವನ್ನು ಪಾರಾಯಣಮಾಡಬೇಕು. ಪಾರಾಯಣ ಮಾಡುವ ಸ್ಥಳವನ್ನು ಸಂಶೋಧನ-ಮಾರ್ಜನ-ಲೇಪನಾದಿಗಳಿಂದ (ಎಂದರೆ ಗುಡಿಸಿ, ಗೋಮಯದಿಂದ ಸಾರಿಸಿ) ಶುದ್ಧಗೊಳಿಸಿ ಸಂಸ್ಕರಿಸಿ, ಬಾಳೆಯ ಕಂಬ, ಧ್ವಜ-ಪತಾಕಾ-ವಿತಾನಾದಿಗಳಿಂದ (ವಿವಿಧ ಬಾವುಟ-ತೋರಣಾದಿ ಗಳಿಂದ) ಸಿಂಗರಿಸಿ ರಂಗವಲ್ಲ್ಯಾದಿಗಳಿಂದ ಅಲಂಕರಿಸಬೇಕು. ಮಂಟಪದ ಸುತ್ತಳತೆಯು ಹದಿನಾರು ಮೊಳಗಳ ಉದ್ದ-ಅಗಲಗಳಿದ್ದು ಮಧ್ಯದಲ್ಲಿ ಸರ್ವತೋಭದ್ರಾಕಾರದ ವೇದಿಯಿರಬೇಕು. ಬೇರೆ ಇತರ ವೇದಿಗಳು, ಕುಂಡ ಮತ್ತು ಸ್ಥಂಡಿಲಾದಿಗಳೂ ಅಲ್ಲಿರಬೇಕು. ಮಂಟಪದ ದಕ್ಷಿಣ ಮತ್ತು ಪಶ್ಚಿಮದಿಕ್ಕುಗಳಲ್ಲಿ ಪಾರಾಯಣಮಾಡುವ ಆಚಾರ್ಯವ್ಯಾಸಪೀಠದ ಮತ್ತು ಶ್ರೋತೃವಿನ ಆಸನಗಳ ವ್ಯವಸ್ಥೆಯನ್ನು ಮಾಡಬೇಕು. ವ್ಯಾಸಾಸನದ ಮುಂಭಾಗದಲ್ಲಿ ಗ್ರಂಥಕ್ಕಾಗಿ ಆಸನವನ್ನು ಅನುಗೊಳಿಸಬೇಕು. ಪ್ರವಚನ ವನ್ನು ಕೇಳುವವರು ಕುಳಿತುಕೊಳ್ಳುವ ಸ್ಥಳವು ವಿಸ್ತಾರವಾಗಿರಬೇಕು. ಆಚಾರ್ಯರ ಆಸನವು ಶ್ರೋತೃಗಳ ಆಸನಗಳಿಗಿಂತಲೂ ಎತ್ತರವಾಗಿರ ಬೇಕು. ಗ್ರಂಥದ ಆಸನವು ವ್ಯಾಸಪೀಠಕ್ಕಿಂತಲೂ ಎತ್ತರದಲ್ಲಿರಬೇಕು. (**ಶ್ರೋತೃಭ್ಯಶ್ಚ ತಥಾ ವಕ್ತುರ್ವ್ಯಾಸಾದ್ ಗ್ರಂಥಸ್ಯ ಚೋಚ್ಚತಾ– ರಾಮಸೇವಾಗ್ರಂಥ**) ಇವೆಲ್ಲ ವ್ಯವಸ್ಥೆಯಾದನಂತರ ಪ್ರಾಯಶ್ಚಿತ್ತಾದಿಗಳನ್ನು ಮಾಡಿಕೊಂಡು ನಿತ್ಯಕರ್ಮಾದಿಗಳನಂತರ ಶ್ರೀರಾಮಚಂದ್ರನ ಪ್ರತಿಮೆಯನ್ನು ಸ್ಥಾಪಿಸಬೇಕು. ಅಥವಾ ಗ್ರಂಥದಲ್ಲಿಯೇ ಸಪರಿಕರ- ಸಪರಿಚ್ಛದ-ಸೀತಾ-ರಾಮಚಂದ್ರರ ಎಂದರೆ ಭಗವಾನ್ ಶ್ರೀರಾಮಚಂದ್ರ, ಭಗವತೀ ಶ್ರೀ ಸೀತಾ, ಲಕ್ಷ್ಮಣ-ಭರತ-ಶತ್ರುಘ್ನ-ಹನುಮಾದಿಗಳನ್ನು ಆವಾಹನೆಮಾಡಬೇಕು. ತದ ನಂತರ ಪಂಚಪಲ್ಲವಾದಿ ಸಮಸ್ತ ಉಪಕರಣಗಳಿಂದ ಅಲಂಕೃತವಾದ ಕಲಶ ವನ್ನು ಸ್ಥಾಪಿಸಿ, ಸಂಪ್ರದಾಯಾನುಸಾರ ಸ್ವಸ್ತ್ಯಯನಪೂರ್ವಕ ಗಣಪತಿ ಪೂಜನ, ಬಟುಕ, ಕ್ಷೇತ್ರಪಾಲ, ಯೋಗಿನೀ, ಮಾತೃಕಾ, ನವಗ್ರಹ, ತುಲಸೀ, ಲೋಕಪಾಲ, ದಿಕ್ಪಾಲ–ಇತ್ಯಾದಿಗಳ ಪೂಜನ, ನಾಂದೀಶ್ರಾದ್ಧಗಳನ್ನು ಮಾಡಿ ಸಪರಿವಾರನಾದ ಶ್ರೀರಾಮಚಂದ್ರನನ್ನು ಪೂಜಿಸಬೇಕು.

ಅನಂತರ ಕಾಲ-ತಿಥಿ-ಗೋತ್ರ-ನಾಮಗಳನ್ನು ಹೇಳಿ–

(ಭೂರ್ಭುವಸ್ಸುವರೋಂ) ಸಂಪ್ರದಾಯಾನುಸಾರ ಸಂಕಲ್ಪಮಾಡಿ– ಶ್ರೀ ಸೀತಾರಾಮಪ್ರೀತ್ಯರ್ಥಂ ಶ್ರೀಸೀತಾ-ಲಕ್ಷ್ಮಣ-ಭರತ-ಶತ್ರುಘ್ನ-ಹನುಮತ್ಸಮೇತ ಶ್ರೀರಾಮಚಂದ್ರಪ್ರಸಾದಸಿದ್ಧ್ಯರ್ಥಂ ರಾಮಚಂದ್ರ ಪ್ರಸಾದೇನ ಸರ್ವಾಭೀಷ್ಟಸಿದ್ಧ್ಯರ್ಥಂ ಶ್ರೀರಾಮಚಂದ್ರಪೂಜನಮಹಂ ಕರಿಷ್ಯೇ । ಶ್ರೀ ವಾಲ್ಮೀಕಿರಾಮಾಯಣಸ್ಯ ಪಾರಾಯಣಂ ಚ ಕರಿಷ್ಯೇ । ತದಂಗಭೂತಂ ಕಲಶಸ್ಥಾಪನಂ, ಸ್ವಸ್ತ್ಯಯನಪಾಠಂ, ಗಣಪತಿಪೂಜನಂ, ವಟುಕ-ಕ್ಷೇತ್ರಪಾಲ- ಯೋಗಿನೀ- ಮಾತೃಕಾ-ನವಗ್ರಹ-ತುಲಸೀ-ಲೋಕಪಾಲ-ದಿಕ್ಪಾಲಾದಿ ಪೂಜನಂ ಚ ಕರಿಷ್ಯೇ । ಸಂಕಲ್ಪಾನಂತರ-ಓಂ ಅಚ್ಯುತಾಯ ನಮಃ, ಅನಂತಾಯ ನಮಃ, ಗೋವಿಂದಾಯ ನಮಃ, ನಾರಾಯಣಾಯ ನಮಃ, ಮಧುಸೂದನಾಯ ನಮಃ, ಹೃಷೀಕೇಶಾಯ ನಮಃ, ಮಾಧವಾಯ ನಮಃ, ತ್ರಿವಿಕ್ರಮಾಯ ನಮಃ, ದಾಮೋದರಾಯ ನಮಃ, ಮುಕುಂದಾಯ ನಮಃ, ವಾಮನಾಯನಮಃ, ಪದ್ಮನಾಭಾಯ ನಮಃ, ಕೇಶವಾಯ ನಮಃ, ವಿಷ್ಣವೇ ನಮಃ, ಶ್ರೀಧರಾಯ ನಮಃ, ಶ್ರೀಸೀತಾರಾಮಾಭ್ಯಾಂ ನಮಃ । ಈ ವಿಧವಾಗಿ ನಮಸ್ಕಾರಗಳನ್ನು ಸಮರ್ಪಿಸಿ ಪೂಜೆಯನ್ನು ಪ್ರಾರಂಭಿಸಬೇಕು.

ಶ್ರೀ ಸೀತಾ - ಲಕ್ಷ್ಮಣ - ಭರತ - ಶತ್ರುಘ್ನ - ಹನುಮತ್ಸಮೇತ ಶ್ರೀ ರಾಮಚಂದ್ರಂ ಧ್ಯಾಯಾಮಿ-ಆವಾಹಯಾಮಿ ಶ್ರೀ ಸೀತಾ-ಲಕ್ಷ್ಮಣ-ಭರತ-ಶತ್ರುಘ್ನ-ಹನುಮತ್ಸಮೇತಾಯ ಶ್ರೀರಾಮಚಂದ್ರಾಯ ನಮಃ–ರತ್ನ ಸಿಂಹಾಸನಂ ಸಮರ್ಪಯಾಮಿ । ಪಾದಯೋಃ ಪಾದ್ಯಂ ಪಾದ್ಯಂ ಸಮರ್ಪ ಯಾಮಿ । ಹಸ್ತಯೋಃ ಅರ್ಘ್ಯಮರ್ಘ್ಯಂ ಸಮರ್ಪಯಾಮಿ । ಮುಖೇ ಆಚಮನೀಯಾಚಮನೀಯಂ ಸಮರ್ಪಯಾಮಿ । ಮಧುಪರ್ಕಂ ಸಮರ್ಪ ಯಾಮಿ । ಸ್ನಾನೀಯಂ ಸಮರ್ಪಯಾಮಿ । ವಸ್ತ್ರೋತ್ತರೀಯಾಣಿ ಸಮರ್ಪ ಯಾಮಿ । ಆಭರಣಾನಿ ಸಮರ್ಪಯಾಮಿ । ದಿವ್ಯಪರಿಮಳಗನ್ಧಾನ್ ಧಾರ ಯಾಮಿ । ಅಕ್ಷತಾನ್ ಸಮರ್ಪಯಾಮಿ ಪುಷ್ಪಾಣಿ ಸಮರ್ಪಯಾಮಿ ।

ಧೂಪಮಾಘ್ರಾಪಯಾಮಿ । ದೀಪಂ ದರ್ಶಯಾಮಿ ಫಲ-ಭಕ್ಷ್ಯ- ಭೋಜ್ಯಾದಿ ನೈವೇದ್ಯಂ ಸಮರ್ಪಯಾಮಿ ತಾಂಬೂಲಂ ಸಮರ್ಪಯಾಮಿ ಕರ್ಪೂರ

ನೀರಾಜನಂ ದರ್ಶಯಾಮಿ । ಮಂತ್ರಪುಷ್ಪಂ ಸಮರ್ಪಯಾಮಿ । ಪ್ರದಕ್ಷಿಣ-ನಮಸ್ಕಾರಾನ್ ಸಮರ್ಪಯಾಮಿ । ಪೂಜಾಂತೇ ಛತ್ರಂ ಧಾರಯಾಮಿ । ಚಾಮರಂ ವೀಜಯಾಮಿ । ಸಮಸ್ತರಾಜೋಪಚಾರಭಕ್ತ್ಯುಪಚಾರ ಪೂಜಾಃ ಸಮರ್ಪಯಾಮಿ ।

ಅನಂತರ ಪಂಚೋಪಚಾರಗಳಿಂದ ಗ್ರಂಥಕ್ಕೆ ಪೂಜೆಯನ್ನು ಸಲ್ಲಿಸುವುದು.

ಸದಾ ಶ್ರವಣಮಾತ್ರೇಣ ಪಾಪಿನಾಂ ಸದ್ಗತಿಪ್ರದೇ ।
ಮಘಾ ಹ್ಯದ್ಯ ಮಹಾಬಾಹೋ ತೃತೀಯೇ ದಿವಸೇ ವಿಭೋ ।
ಫಲ್ಗುನ್ಯಾಮುತ್ತರೇ ರಾಜಂಸ್ತಸ್ಮಿನ್ವೈವಾಹಿಕಂ ಕುರು ।
ರಾಮಲಕ್ಷ್ಮಣಯೋ ರಾಜನ್ದಾನಂ ಕಾರ್ಯಂ ಸುಖೋದಯಮ್ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ವಾಲ್ಮೀಕೀಯೇ ಆದಿಕಾವ್ಯೇ
ಬಾಲಕಾಣ್ಡೇ ಏಕಸಪ್ತತಿತಮಃ ಸರ್ಗಃ

ದ್ವಿಸಪ್ತತಿತಮಃ ಸರ್ಗಃ

ತಮುಕ್ತವನ್ತಂ ವೈದೇಹಂ ವಿಶ್ವಾಮಿತ್ರೋ ಮಹಾಮುನಿಃ ।
ಉವಾಚ ವಚನಂ ವೀರಂ ವಸಿಷ್ಠಸಹಿತೋ ನೃಪಮ್ ॥೧॥

ಅಚಿನ್ತ್ಯಾನ್ಯಪ್ರಮೇಯಾಣಿ ಕುಲಾನಿ ನರಪುಂಗವ ।
ಇಕ್ಷ್ವಾಕೂಣಾಂ ವಿದೇಹಾನಾಂ ನೈಷಾಂ ತುಲ್ಯೋಽಸ್ತಿ ಕಶ್ಚನ ॥೨॥

ಸದೃಶೋ ಧರ್ಮಸಂಬನ್ಧಃ ಸದೃಶೋ ರೂಪಸಂಪದಾ ।
ರಾಮಲಕ್ಷ್ಮಣಯೋ ರಾಜನ್ಸೀತಾ ಚೋರ್ಮಿಲಯಾ ಸಹ ॥೩॥

ವಕ್ತವ್ಯಂ ಚ ನರಶ್ರೇಷ್ಠ ಶ್ರೂಯತಾಂ ವಚನಂ ಮಮ ।
ಭ್ರಾತಾ ಯವೀಯಾನ್ಧರ್ಮಜ್ಞ ಏಷ ರಾಜಾ ಕುಶಧ್ವಜಃ ॥೪॥

ಅಸ್ಯ ಧರ್ಮಾತ್ಮನೋ ರಾಜನ್ರೂಪೇಣಾಪ್ರತಿಮಂ ಭುವಿ ।
ಸುತಾದ್ವಯಂ ನರಶ್ರೇಷ್ಠ ಪತ್ನ್ಯರ್ಥಂ ವರಯಾಮಹೇ ॥೫॥

ಭರತಸ್ಯ ಕುಮಾರಸ್ಯ ಶತ್ರುಘ್ನಸ್ಯ ಚ ಧೀಮತಃ ।
ವರಯಾಮಃ ಸುತೇ ರಾಜಂಸ್ತಯೋರರ್ಥೇ ಮಹಾತ್ಮನೋಃ ॥೬॥

ಪುತ್ರಾ ದಶರಥಸ್ಯೇಮೇ ರೂಪಯೌವನಶಾಲಿನಃ ।
ಲೋಕಪಾಲೋಪಮಾಃ ಸರ್ವೇ ದೇವತುಲ್ಯಪರಾಕ್ರಮಾಃ ॥೭॥

ಉಭಯೋರಪಿ ರಾಜೇನ್ದ್ರ ಸಂಬನ್ಧೋ ಹ್ಯನುಬಧ್ಯತಾಮ್ ।
ಇಕ್ಷ್ವಾಕೋಃ ಕುಲಮವ್ಯಗ್ರಂ ಭವತಃ ಪುಣ್ಯಕರ್ಮಣಃ ॥೮॥

ವಿಶ್ವಾಮಿತ್ರವಚಃ ಶ್ರುತ್ವಾ ವಸಿಷ್ಠಸ್ಯ ಮತೇ ತದಾ ।
ಜನಕಃ ಪ್ರಾಞ್ಜಲಿರ್ವಾಕ್ಯಮುವಾಚ ಮುನಿಪುಂಗವೌ ॥೯॥

ಕುಲಂ ಧನ್ಯಮಿದಂ ಮನ್ಯೇ ಯೇಷಾಂ ನೋ ಮುನಿಪುಂಗವೌ ।
ಸದೃಶಂ ಕುಲಸಂಬನ್ಧಂ ಯದಾಜ್ಞಾಪಯಥಃ ಸ್ವಯಮ್ ॥೧೦॥

ಏವಂ ಭವತು ಭದ್ರಂ ವಃ ಕುಶಧ್ವಜಸುತೇ ಇಮೇ ।
ಪತ್ನ್ಯೌ ಭಜೇತಾಂ ಸಹಿತೌ ಶತ್ರುಘ್ನಭರತಾವುಭೌ ॥೧೧॥

ಏಕಾಹ್ನಾ ರಾಜಪುತ್ರೀಣಾಂ ಚತಸೃಣಾಂ ಮಹಾಮುನೇ ।
ಪಾಣೀನ್ಗೃಹ್ಣನ್ತು ಚತ್ವಾರೋ ರಾಜಪುತ್ರಾ ಮಹಾಬಲಾಃ ॥೧೨॥

ಉತ್ತರೇ ದಿವಸೇ ಬ್ರಹ್ಮನ್ಫಲ್ಗುನೀಭ್ಯಾಂ ಮನೀಷಿಣಃ ।
ವೈವಾಹಿಕಂ ಪ್ರಶಂಸನ್ತಿ ಭಗೋ ಯತ್ರ ಪ್ರಜಾಪತಿಃ ॥೧೩॥

ಏವಮುಕ್ತ್ವಾ ವಚಃ ಸೌಮ್ಯಂ ಪ್ರತ್ಯುತ್ಥಾಯ ಕೃತಾಞ್ಜಲಿಃ ।
ಉಭೌ ಮುನಿವರೌ ರಾಜಾ ಜನಕೋ ವಾಕ್ಯಮಬ್ರವೀತ್ ॥೧೪॥

ಪರೋ ಧರ್ಮಃ ಕೃತೋ ಮಹ್ಯಂ ಶಿಷ್ಯೋಽಸ್ಮಿ ಭವತೋಃ ಸದಾ ।
ಇಮಾನ್ಯಾಸನಮುಖ್ಯಾನಿ ಆಸಾತಾಂ ಮುನಿಪುಂಗವೌ ॥೧೫॥

ಯಥಾ ದಶರಥಸ್ಯೇಯಂ ತಥಾಯೋಧ್ಯಾ ಪುರೀ ಮಮ ।
ಪ್ರಭುತ್ವೇ ನಾಸ್ತಿ ಸಂದೇಹೋ ಯಥಾರ್ಹಂ ಕರ್ತುಮರ್ಹಥ ॥೧೬॥

ತಥಾ ಬ್ರುವತಿ ವೈದೇಹೇ ಜನಕೇ ರಘುನನ್ದನಃ ।
ರಾಜಾ ದಶರಥೋ ಹೃಷ್ಟಃ ಪ್ರತ್ಯುವಾಚ ಮಹೀಪತಿಮ್ ॥೧೭॥

ಯುವಾಮಸಂಖ್ಯೇಯಗುಣೌ ಭ್ರಾತರೌ ಮಿಥಿಲೇಶ್ವರೌ ।
ಋಷಯೋ ರಾಜಸಂಘಾಶ್ಚ ಭವದ್ಭ್ಯಾಮಭಿಪೂಜಿತಾಃ ॥೧೮॥

ಸ್ವಸ್ತಿ ಪ್ರಾಪ್ನುಹಿ ಭದ್ರಂ ತೇ ಗಮಿಷ್ಯಾಮಿ ಸ್ವಮಾಲಯಮ್ ।
ಶ್ರಾದ್ಧಕರ್ಮಾಣಿ ಸರ್ವಾಣಿ ವಿಧಾಸ್ಯಾಮೀತಿ ಚಾಬ್ರವೀತ್ ॥೧೯॥

ತಮಾಪೃಷ್ಟ್ವಾ ನರಪತಿಂ ರಾಜಾ ದಶರಥಸ್ತದಾ ।
ಮುನೀನ್ದ್ರೌ ತೌ ಪುರಸ್ಕೃತ್ಯ ಜಗಾಮಾಶು ಮಹಾಯಶಾಃ ॥೨೦॥

ಸ ಗತ್ವಾ ನಿಲಯಂ ರಾಜಾ ಶ್ರಾದ್ಧಂ ಕೃತ್ವಾ ವಿಧಾನತಃ ।
ಪ್ರಭಾತೇ ಕಾಲ್ಯಮುತ್ಥಾಯ ಚಕ್ರೇ ಗೋದಾನಮುತ್ತಮಮ್ ॥೨೧॥

ಗವಾಂ ಶತಸಹಸ್ರಾಣಿ ಬ್ರಾಹ್ಮಣೇಭ್ಯೋ ನರಾಧಿಪಃ ।
ಏಕೈಕಶೋ ದದೌ ರಾಜಾ ಪುತ್ರಾನುದ್ದಿಶ್ಯ ಧರ್ಮತಃ ॥೨೨॥

ಸುವರ್ಣಶೃಙ್ಗಾಃ ಸಂಪನ್ನಾಃ ಸವತ್ಸಾಃ ಕಾಂಸ್ಯದೋಹನಾಃ ।
ಗವಾಂ ಶತಸಹಸ್ರಾಣಿ ಚತ್ವಾರಿ ಪುರುಷರ್ಷಭಃ ॥೨೩॥

ವಿತ್ತಮನ್ಯಚ್ಚ ಸುಬಹು ದ್ವಿಜೇಭ್ಯೋ ರಘುನನ್ದನಃ ।
ದದೌ ಗೋದಾನಮುದ್ದಿಶ್ಯ ಪುತ್ರಾಣಾಂ ಪುತ್ರವತ್ಸಲಃ ॥೨೪॥

ಸ ಸುತೈಃ ಕೃತಗೋದಾನೈರ್ವೃತಸ್ತು ನೃಪತಿಸ್ತದಾ ।
ಲೋಕಪಾಲೈರಿವಾಭಾತಿ ವೃತಃ ಸೌಮ್ಯಃ ಪ್ರಜಾಪತಿಃ ॥೨೫॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ವಾಲ್ಮೀಕೀಯೇ ಆದಿಕಾವ್ಯೇ
ಬಾಲಕಾಣ್ಡೇ ದ್ವಿಸಪ್ತತಿತಮಃ ಸರ್ಗಃ

ತ್ರಿಸಪ್ತತಿತಮಃ ಸರ್ಗಃ

ಯಸ್ಮಿಂಸ್ತು ದಿವಸೇ ರಾಜಾ ಚಕ್ರೇ ಗೋದಾನಮುತ್ತಮಮ್ ।
ತಸ್ಮಿಂಸ್ತು ದಿವಸೇ ಶೂರೋ ಯುಧಾಜಿತ್ಸಮುಪೇಯಿವಾನ್ ॥೧॥

ಪುತ್ರಃ ಕೇಕಯರಾಜಸ್ಯ ಸಾಕ್ಷಾದ್ಭರತಮಾತುಲಃ ।
ದೃಷ್ಟ್ವಾ ಪೃಷ್ಟ್ವಾ ಚ ಕುಶಲಂ ರಾಜಾನಮಿದಮಬ್ರವೀತ್ ॥೨॥

ಕೇಕಯಾಧಿಪತೀ ರಾಜಾ ಸ್ನೇಹಾತ್ಕುಶಲಮಬ್ರವೀತ್ ।
ಯೇಷಾಂ ಕುಶಲಕಾಮೋಽಸಿ ತೇಷಾಂ ಸಂಪ್ರತ್ಯನಾಮಯಮ್ ॥೩॥

ಸ್ವಸ್ರೀಯಂ ಮಮ ರಾಜೇನ್ದ್ರ ದ್ರಷ್ಟುಕಾಮೋ ಮಹೀಪತಿಃ ।
ತದರ್ಥಮುಪಯಾತೋಽಹಮಯೋಧ್ಯಾಂ ರಘುನನ್ದನ ॥೪॥

ಶ್ರುತ್ವಾ ತ್ವಹಮಯೋಧ್ಯಾಯಾಂ ವಿವಾಹಾರ್ಥಂ ತವಾತ್ಮಜಾನ್ ।
ಮಿಥಿಲಾಮುಪಯಾತಾಂಸ್ತು ತ್ವಯಾ ಸಹ ಮಹೀಪತೇ ।
ತ್ವರಯಾಭ್ಯುಪಯಾತೋಽಹಂ ದ್ರಷ್ಟುಕಾಮಃ ಸ್ವಯಂವರಮ್ ॥೫॥

ಅಥ ರಾಜಾ ದಶರಥಃ ಪ್ರಿಯಾತಿಥಿಮುಪಸ್ಥಿತಮ್ ।
ದೃಷ್ಟ್ವಾ ಪರಮಸತ್ಕಾರೈಃ ಪೂಜನಾರ್ಹಮಪೂಜಯತ್ ॥೬॥

ತತಸ್ತಾಮುಷಿತೋ ರಾತ್ರಿಂ ಸಹ ಪುತ್ರೈರ್ಮಹಾತ್ಮಭಿಃ ।
ಪ್ರಭಾತೇ ಪುನರುತ್ಥಾಯ ಕೃತ್ವಾ ಕರ್ಮಾಣಿ ಕರ್ಮವಿತ್ ।
ಋಷೀಂಸ್ತದಾ ಪುರಸ್ಕೃತ್ಯ ಯಜ್ಞವಾಟಮುಪಾಗಮತ್ ॥೭॥

ಯುಕ್ತೇ ಮುಹೂರ್ತೇ ವಿಜಯೇ ಸರ್ವಾಭರಣಭೂಷಿತೈಃ ।
ಭ್ರಾತೃಭಿಃ ಸಹಿತೋ ರಾಮಃ ಕೃತಕೌತುಕಮಙ್ಗಲಃ ॥೮॥

ವಸಿಷ್ಠಂ ಪುರತಃ ಕೃತ್ವಾ ಮಹರ್ಷೀನಪರಾನಪಿ ।
ಪಿತುಃ ಸಮೀಪಮಾಶ್ರಿತ್ಯ ತಸ್ಥೌ ಭ್ರಾತೃಭಿರಾವೃತಃ ॥೯॥

ವಸಿಷ್ಠೋ ಭಗವಾನೇತ್ಯ ವೈದೇಹಮಿದಮಬ್ರವೀತ್ ॥೧೦॥

ರಾಜಾ ದಶರಥೋ ರಾಜನ್ಕೃತಕೌತುಕಮಙ್ಗಲೈಃ ।
ಪುತ್ರೈರ್ನರವರಶ್ರೇಷ್ಠ ದಾತಾರಮಭಿಕಾಂಕ್ಷತೇ ॥೧೧॥

ದಾತೃಪ್ರತಿಗ್ರಹೀತೃಭ್ಯಾಂ ಸರ್ವಾರ್ಥಾಃ ಪ್ರಭವನ್ತಿ ಹಿ ।
ಸ್ವಧರ್ಮಂ ಪ್ರತಿಪದ್ಯಸ್ವ ಕೃತ್ವಾ ವೈವಾಹ್ಯಮುತ್ತಮಮ್ ॥೧೨॥

ಇತ್ಯುಕ್ತಃ ಪರಮೋದಾರೋ ವಸಿಷ್ಠೇನ ಮಹಾತ್ಮನಾ ।
ಪ್ರತ್ಯುವಾಚ ಮಹಾತೇಜಾ ವಾಕ್ಯಂ ಪರಮಧರ್ಮವಿತ್ ॥೧೩॥

ಕಃ ಸ್ಥಿತಃ ಪ್ರತಿಹಾರೋ ಮೇ ಕಸ್ಯಾಜ್ಞಾ ಸಂಪ್ರತೀಕ್ಷ್ಯತೇ ।
ಸ್ವಗೃಹೇ ಕೋ ವಿಚಾರೋಽಸ್ತಿ ಯಥಾ ರಾಜ್ಯಮಿದಂ ತವ ॥೧೪।

ಕೃತಕೌತುಕಸರ್ವಸ್ವಾ ವೇದಿಮೂಲಮುಪಾಗತಾಃ ।
ಮಮ ಕನ್ಯಾ ಮುನಿಶ್ರೇಷ್ಠ ದೀಪ್ತಾ ವಹ್ನೇರಿವಾರ್ಚಿಷಃ ॥೧೫॥

ಸಜ್ಜೋಽಹಂ ತ್ವತ್ಪ್ರತೀಕ್ಷೋಽಸ್ಮಿ ವೇದ್ಯಾಮಸ್ಯಾಂ ಪ್ರತಿಷ್ಠಿತಃ ।
ಅವಿಘ್ನಂ ಕ್ರಿಯತಾಂ ಸರ್ವಂ ಕಿಮರ್ಥಂ ಹಿ ವಿಲಮ್ಬ್ಯತೇ ॥೧೬॥

ತದ್ವಾಕ್ಯಂ ಜನಕೇನೋಕ್ತಂ ಶ್ರುತ್ವಾ ದಶರಥಸ್ತದಾ ।
ಪ್ರವೇಶಯಾಮಾಸ ಸುತಾನ್ಸರ್ವಾನೃಷಿಗಣಾನಪಿ ॥೧೭॥

ತತೋ ರಾಜಾ ವಿದೇಹಾನಾಂ ವಸಿಷ್ಠಮಿದಮಬ್ರವೀತ್ ।
ಕಾರಯಸ್ವ ಋಷೇ ಸರ್ವಮೃಷಿಭಿಃ ಸಹ ಧಾರ್ಮಿಕೈಃ ।
ರಾಮಸ್ಯ ಲೋಕರಾಮಸ್ಯ ಕ್ರಿಯಾಂ ವೈವಾಹಿಕೀಂ ಪ್ರಭೋ ॥೧೮॥

ತಥೇತ್ಯುಕ್ತ್ವಾ ತು ಜನಕಂ ವಸಿಷ್ಠೋ ಭಗವಾನೃಷಿಃ ।
ವಿಶ್ವಾಮಿತ್ರಂ ಪುರಸ್ಕೃತ್ಯ ಶತಾನನ್ದಂ ಚ ಧಾರ್ಮಿಕಮ್ ॥೧೯॥

ಪ್ರಪಾಮಧ್ಯೇ ತು ವಿಧಿವದ್ವೇದಿಂ ಕೃತ್ವಾ ಮಹಾತಪಾಃ ।
ಅಲಂಚಕಾರ ತಾಂ ವೇದಿಂ ಗನ್ಧಪುಷ್ಪೈಃ ಸಮನ್ತತಃ ॥೨೦॥

ಸುವರ್ಣಪಾಲಿಕಾಭಿಶ್ಚ ಚಿತ್ರಕುಮ್ಭೈಶ್ಚ ಸಾಙ್ಕುರೈಃ ।
ಅಙ್ಕುರಾಢ್ಯೈಃ ಶರಾವೈಶ್ಚ ಧೂಪಪಾತ್ರೈಃ ಸಧೂಪಕೈಃ ॥೨೧॥

ಶಙ್ಖಪಾತ್ರೈಃ ಸ್ರುವೈಃ ಸ್ರುಗ್ಭಿಃ ಪಾತ್ರೈರರ್ಘ್ಯಾಭಿಪೂರಿತೈಃ ।
ಲಾಜಪೂರ್ಣೈಶ್ಚ ಪಾತ್ರೌಘೈರಕ್ಷತೈರಪಿ ಸಂಸ್ಕೃತೈಃ ॥೨೨॥

ದರ್ಭೈಃ ಸಮೈಃ ಸಮಾಸ್ತೀರ್ಯ ವಿಧಿವನ್ಮನ್ತ್ರಪೂರ್ವಕಮ್ ।
ಅಗ್ನಿಮಾಧಾಯ ವೇದ್ಯಾಂ ತು ವಿಧಿಮನ್ತ್ರಪುರಸ್ಕೃತಮ್ ।
ಜುಹಾವಾಗ್ನೌ ಮಹಾತೇಜಾ ವಸಿಷ್ಠೋ ಭಗವಾನೃಷಿಃ ॥೨೩॥

ತತಃ ಸೀತಾಂ ಸಮಾನೀಯ ಸರ್ವಾಭರಣಭೂಷಿತಾಮ್ ।
ಸಮಕ್ಷಮಗ್ನೇಃ ಸಂಸ್ಥಾಪ್ಯ ರಾಘವಾಭಿಮುಖೇ ತದಾ ॥೨೪॥

ಅಬ್ರವೀಜ್ಜನಕೋ ರಾಜಾ ಕೌಸಲ್ಯಾನನ್ದವರ್ಧನಮ್ ।
ಇಯಂ ಸೀತಾ ಮಮ ಸುತಾ ಸಹಧರ್ಮಚರೀ ತವ ।
ಪ್ರತೀಚ್ಛ ಚೈನಾಂ ಭದ್ರಂ ತೇ ಪಾಣಿಂ ಗೃಹ್ಣೀಷ್ವ ಪಾಣಿನಾ ॥೨೫॥

ಪತಿವ್ರತಾ ಮಹಾಭಾಗಾ ಛಾಯೇವಾನುಗತಾ ಸದಾ ।
ಇತ್ಯುಕ್ತ್ವಾ ಪ್ರಾಕ್ಷಿಪದ್ರಾಜಾ ಮನ್ತ್ರಪೂತಂ ಜಲಂ ತದಾ ॥೨೬॥

ಸಾಧು ಸಾಧ್ವಿತಿ ದೇವಾನಾಮೃಷೀಣಾಂ ವದತಾಂ ತದಾ ।
ದೇವದುನ್ದುಭಿನಿರ್ಘೋಷಃ ಪುಷ್ಪವರ್ಷೋ ಮಹಾನಭೂತ್ ॥೨೭॥

ಏವಂ ದತ್ತ್ವಾ ಸುತಾಂ ಸೀತಾಂ ಮನ್ತ್ರೋದಕಪುರಸ್ಕೃತಾಮ್ ।
ಅಬ್ರವೀಜ್ಜನಕೋ ರಾಜಾ ಹರ್ಷೇಣಾಭಿಪರಿಪ್ಲುತಃ ॥೨೮॥

ಲಕ್ಷ್ಮಣಾಗಚ್ಛ ಭದ್ರಂ ತೇ ಊರ್ಮಿಲಾಂ ಚ ಮಮಾತ್ಮಜಾಮ್ ।
ಪ್ರತೀಚ್ಛ ಪಾಣಿಂ ಗೃಹ್ಣೀಷ್ವ ಮಾ ಭೂತ್ಕಾಲಸ್ಯ ಪರ್ಯಯಃ ॥೨೯॥

ತಮೇವಮುಕ್ತ್ವಾ ಜನಕೋ ಭರತಂ ಚಾಭ್ಯಭಾಷತ ।
ಪಾಣಿಂ ಗೃಹ್ಣೀಷ್ವ ಮಾಣ್ಡವ್ಯಾಃ ಪಾಣಿನಾ ರಘುನನ್ದನ ॥೩೦॥

ಶತ್ರುಘ್ನಂ ಚಾಪಿ ಧರ್ಮಾತ್ಮಾ ಅಬ್ರವೀನ್ಮಿಥಿಲೇಶ್ವರಃ ।
ಶ್ರುತಕೀರ್ತ್ಯಾ ಮಹಾಬಾಹೋ ಪಾಣಿಂ ಗೃಹ್ಣೀಷ್ವ ಪಾಣಿನಾ ॥೩೧॥

ಸರ್ವೇ ಭವನ್ತಃ ಸೌಮ್ಯಾಶ್ಚ ಸರ್ವೇ ಸುಚರಿತವ್ರತಾಃ ।
ಪತ್ನೀಭಿಃ ಸನ್ತು ಕಾಕುತ್ಸ್ಥಾ ಮಾ ಭೂತ್ಕಾಲಸ್ಯ ಪರ್ಯಯಃ ॥೩೨॥

ಜನಕಸ್ಯ ವಚಃ ಶ್ರುತ್ವಾ ಪಾಣೀನ್ಪಾಣಿಭಿರಸ್ಪೃಶನ್ ।
ಚತ್ವಾರಸ್ತೇ ಚತಸೃಣಾಂ ವಸಿಷ್ಠಸ್ಯ ಮತೇ ಸ್ಥಿತಾಃ ॥೩೩॥

ಅಗ್ನಿಂ ಪ್ರದಕ್ಷಿಣಂ ಕೃತ್ವಾ ವೇದಿಂ ರಾಜಾನಮೇವ ಚ ।
ಋಷೀಂಶ್ಚಾಪಿ ಮಹಾತ್ಮಾನಃ ಸಭಾರ್ಯಾ ರಘುಸತ್ತಮಾಃ ।
ಯಥೋಕ್ತೇನ ತದಾ ಚಕ್ರುರ್ವಿವಾಹಂ ವಿಧಿಪೂರ್ವಕಮ್ ॥೩೪॥

ಕಾಕುತ್ಸ್ಥೈಸ್ತು ಗೃಹೀತೇಷು ಲಲಿತೇಷು ಚ ಪಾಣಿಷು ।
ಪುಷ್ಪವೃಷ್ಟಿರ್ಮಹತ್ಯಾಸೀದನ್ತರಿಕ್ಷಾತ್ಸುಭಾಸ್ವರಾ ।
ದಿವ್ಯದುನ್ದುಭಿನಿರ್ಘೋಷೈರ್ಗೀತವಾದಿತ್ರನಿಃಸ್ವನೈಃ ॥೩೫॥

ನನೃತುಶ್ಚಾಪ್ಸರಃಸಂಘಾ ಗನ್ಧರ್ವಾಶ್ಚ ಜಗುಃ ಕಲಮ್ ।
ವಿವಾಹೇ ರಘುಮುಖ್ಯಾನಾಂ ತದದ್ಭುತಮದೃಶ್ಯತ ॥೩೬॥

ಈದೃಶೇ ವರ್ತಮಾನೇ ತು ತೂರ್ಯೋದ್ಘುಷ್ಟನಿನಾದಿತೇ ।
ತ್ರಿರಗ್ನಿಂ ತೇ ಪರಿಕ್ರಮ್ಯ ಊಹುರ್ಭಾರ್ಯಾ ರಘೂತ್ತಮಾಃ ॥೩೭॥
ಅಥೋಪಕಾರ್ಯಂ ಜಗ್ಮುಸ್ತೇ ಸದಾರಾ ರಘುನನ್ದನಾಃ ।
ರಾಜಾಪ್ಯನುಯಯೌ ಪಶ್ಯನ್ಸರ್ಷಿಸಂಘಃ ಸಬಾನ್ಧವಃ ॥೩೮॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ವಾಲ್ಮೀಕೀಯೇ ಆದಿಕಾವ್ಯೇ
ಬಾಲಕಾಣ್ಡೇ ತ್ರಿಸಪ್ತತಿತಮಃ ಸರ್ಗಃ

ಚತುಃಸಪ್ತತಿತಮಃ ಸರ್ಗಃ

ಅಥ ರಾತ್ರ್ಯಾಂ ವ್ಯತೀತಾಯಾಂ ವಿಶ್ವಾಮಿತ್ರೋ ಮಹಾಮುನಿಃ ।
ಆಪೃಚ್ಛ್ಯ ತೌ ಚ ರಾಜಾನೌ ಜಗಾಮೋತ್ತರಪರ್ವತಮ್ ।
ಆಶೀರ್ಭಿಃ ಪೂರಯಿತ್ವಾ ಚ ಕುಮಾರಾಂಶ್ಚ ಸರಾಘವಾನ್ ॥೧॥

ವಿಶ್ವಾಮಿತ್ರೇ ಗತೇ ರಾಜಾ ವೈದೇಹಂ ಮಿಥಿಲಾಧಿಪಮ್ ।
ಆಪೃಚ್ಛ್ಯಾಥ ಜಗಾಮಾಶು ರಾಜಾ ದಶರಥಃ ಪುರೀಮ್ ॥೨॥

ಅಥ ರಾಜಾ ವಿದೇಹಾನಾಂ ದದೌ ಕನ್ಯಾಧನಂ ಬಹು ।
ಗವಾಂ ಶತಸಹಸ್ರಾಣಿ ಬಹೂನಿ ಮಿಥಿಲೇಶ್ವರಃ ॥೩॥

ಕಮ್ಬಲಾನಾಂ ಚ ಮುಖ್ಯಾನಾಂ ಕ್ಷೌಮಕೋಟ್ಯಮ್ಬರಾಣಿ ಚ ।
ಹಸ್ತ್ಯಶ್ವರಥಪಾದಾತಂ ದಿವ್ಯರೂಪಂ ಸ್ವಲಂಕೃತಮ್ ॥೪॥

ದದೌ ಕನ್ಯಾಪಿತಾ ತಾಸಾಂ ದಾಸೀದಾಸಮನುತ್ತಮಮ್ ।
ಹಿರಣ್ಯಸ್ಯ ಸುವರ್ಣಸ್ಯ ಮುಕ್ತಾನಾಂ ವಿದ್ರುಮಸ್ಯ ಚ ॥೫॥

ದದೌ ಪರಮಸಂತುಷ್ಟಃ ಕನ್ಯಾಧನಮನುತ್ತಮಮ್ ।
ದತ್ತ್ವಾ ಬಹುಧನಂ ರಾಜಾ ಸಮನುಜ್ಞಾಪ್ಯ ಪಾರ್ಥಿವಮ್ ।
ಪ್ರವಿವೇಶ ಸ್ವನಿಲಯಂ ಮಿಥಿಲಾಂ ಮಿಥಿಲೇಶ್ವರಃ ॥೬॥

ರಾಜಾಪ್ಯಯೋಧ್ಯಾಧಿಪತಿಃ ಸಹ ಪುತ್ರೈರ್ಮಹಾತ್ಮಭಿಃ ।
ಋಷೀನ್ಸರ್ವಾನ್ಪುರಸ್ಕೃತ್ಯ ಜಗಾಮ ಸಬಲಾನುಗಃ ॥೭॥

ಗಚ್ಛನ್ತಂ ತಂ ನರವ್ಯಾಘ್ರಂ ಸರ್ಷಿಸಂಘಂ ಸರಾಘವಮ್ ।
ಘೋರಾಃ ಸ್ಮ ಪಕ್ಷಿಣೋ ವಾಚೋ ವ್ಯಾಹರನ್ತಿ ತತಸ್ತತಃ ।
ಭೌಮಾಶ್ಚೈವ ಮೃಗಾಃ ಸರ್ವೇ ಗಚ್ಛನ್ತಿ ಸ್ಮ ಪ್ರದಕ್ಷಿಣಮ್ ॥೮॥

ತಾನ್ದೃಷ್ಟ್ವಾ ರಾಜಶಾರ್ದೂಲೋ ವಸಿಷ್ಠಂ ಪರ್ಯಪೃಚ್ಛತ ।
ಅಸೌಮ್ಯಾಃ ಪಕ್ಷಿಣೋ ಘೋರಾ ಮೃಗಾಶ್ಚಾಪಿ ಪ್ರದಕ್ಷಿಣಾಃ ।
ಕಿಮಿದಂ ಹೃದಯೋತ್ಕಮ್ಪಿ ಮನೋ ಮಮ ವಿಷೀದತಿ ॥೯॥

ರಾಜ್ಞೋ ದಶರಥಸ್ಯೈತಚ್ಛ್ರುತ್ವಾ ವಾಕ್ಯಂ ಮಹಾನೃಷಿಃ ।
ಉವಾಚ ಮಧುರಾಂ ವಾಣೀಂ ಶ್ರೂಯತಾಮಸ್ಯ ಯತ್ಫಲಮ್ ॥

ಉಪಸ್ಥಿತಂ ಭಯಂ ಘೋರಂ ದಿವ್ಯಂ ಪಕ್ಷಿಮುಖಾಚ್ಚ್ಯುತಮ್ ।
ಮೃಗಾಃ ಪ್ರಶಮಯನ್ತ್ಯೇತೇ ಸಂತಾಪಸ್ತ್ಯಜ್ಯತಾಮಯಮ್ ॥೧೧॥

ತೇಷಾಂ ಸಂವದತಾಂ ತತ್ರ ವಾಯುಃ ಪ್ರಾದುರ್ಬಭೂವ ಹ ।
ಕಮ್ಪಯನ್ಮೇದಿನೀಂ ಸರ್ವಾಂ ಪಾತಯಂಶ್ಚ ಮಹಾದ್ರುಮಾನ್ ॥೧೨॥

ತಮಸಾ ಸಂವೃತಃ ಸೂರ್ಯಃ ಸರ್ವಾ ನ ಪ್ರಬಭುರ್ದಿಶಃ ।
ಭಸ್ಮನಾ ಚಾವೃತಂ ಸರ್ವಂ ಸಂಮೂಢಮಿವ ತದ್ಬಲಮ್ ॥೧೩॥

ವಸಿಷ್ಠಶ್ಚರ್ಷಯಶ್ಚಾನ್ಯೇ ರಾಜಾ ಚ ಸಸುತಸ್ತದಾ ।
ಸಸಂಜ್ಞಾ ಇವ ತತ್ರಾಸನ್ಸರ್ವಮನ್ಯದ್ವಿಚೇತನಮ್ ॥೧೪॥

ತಸ್ಮಿಂಸ್ತಮಸಿ ಘೋರೇ ತು ಭಸ್ಮಚ್ಛನ್ನೇವ ಸಾ ಚಮೂಃ ।
ದದರ್ಶ ಭೀಮಸಂಕಾಶಂ ಜಟಾಮಣ್ಡಲಧಾರಿಣಮ್ ।
ಭಾರ್ಗವಂ ಜಾಮದಗ್ನ್ಯಂ ತಂ ರಾಜಾ ರಾಜವಿಮರ್ದಿನಮ್ ॥೧೫॥

ಕೈಲಾಸಮಿವ ದುರ್ಧರ್ಷಂ ಕಾಲಾಗ್ನಿಮಿವ ದುಃಸಹಮ್ ।
ಜ್ವಲನ್ತಮಿವ ತೇಜೋಭಿರ್ದುರ್ನಿರೀಕ್ಷ್ಯಂ ಪೃಥಗ್ಜನೈಃ ॥೧೬॥

ಸ್ಕನ್ಧೇ ಚಾಸಾದ್ಯ ಪರಶುಂ ಧನುರ್ವಿದ್ಯುದ್ಗಣೋಪಮಮ್ ।
ಪ್ರಗೃಹ್ಯ ಶರಮುಖ್ಯಂ ಚ ತ್ರಿಪುರಘ್ನಂ ಯಥಾ ಶಿವಮ್ ॥೧೭॥

ತಂ ದೃಷ್ಟ್ವಾ ಭೀಮಸಂಕಾಶಂ ಜ್ವಲನ್ತಮಿವ ಪಾವಕಮ್ ।
ವಸಿಷ್ಠಪ್ರಮುಖಾ ವಿಪ್ರಾ ಜಪಹೋಮಪರಾಯಣಾಃ ।
ಸಂಗತಾ ಮುನಯಃ ಸರ್ವೇ ಸಂಜಜಲ್ಪುರಥೋ ಮಿಥಃ ॥೧೮॥

ಕಚ್ಚಿತ್ಪಿತೃವಧಾಮರ್ಷೀ ಕ್ಷತ್ರಂ ನೋತ್ಸಾದಯಿಷ್ಯತಿ ।
ಪೂರ್ವಂ ಕ್ಷತ್ರವಧಂ ಕೃತ್ವಾ ಗತಮನ್ಯುರ್ಗತಜ್ವರಃ ।
ಕ್ಷತ್ರಸ್ಯೋತ್ಸಾದನಂ ಭೂಯೋ ನ ಖಲ್ವಸ್ಯ ಚಿಕೀರ್ಷಿತಮ್ ॥೧೯॥

ಏವಮುಕ್ತ್ವಾರ್ಘ್ಯಮಾದಾಯ ಭಾರ್ಗವಂ ಭೀಮದರ್ಶನಮ್ ।
ಋಷಯೋ ರಾಮ ರಾಮೇತಿ ವಚೋ ಮಧುರಮಬ್ರುವನ್ ॥೨೦॥

ಪ್ರತಿಗೃಹ್ಯ ತು ತಾಂ ಪೂಜಾಮೃಷಿದತ್ತಾಂ ಪ್ರತಾಪವಾನ್ ।
ರಾಮಂ ದಾಶರಥಿಂ ರಾಮೋ ಜಾಮದಗ್ನ್ಯೋಽಭ್ಯಭಾಷತ ॥೨೧॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ವಾಲ್ಮೀಕೀಯೇ ಆದಿಕಾವ್ಯೇ
ಬಾಲಕಾಣ್ಡೇ ಚತುಃಸಪ್ತತಿತಮಃ ಸರ್ಗಃ

ಪಞ್ಚಸಪ್ತತಿತಮಃ ಸರ್ಗಃ

ರಾಮ ದಾಶರಥೇ ವೀರ ವೀರ್ಯಂ ತೇ ಶ್ರೂಯತೇಽದ್ಭುತಮ್ ।
ಧನುಷೋ ಭೇದನಂ ಚೈವ ನಿಖಿಲೇನ ಮಯಾ ಶ್ರುತಮ್ ॥೧॥

ತದದ್ಭುತಮಚಿನ್ತ್ಯಂ ಚ ಭೇದನಂ ಧನುಷಸ್ತ್ವಯಾ ।
ತಚ್ಛ್ರುತ್ವಾಹಮನುಪ್ರಾಪ್ತೋ ಧನುರ್ಗೃಹ್ಯಾಪರಂ ಶುಭಮ್ ॥೨॥

ತದಿದಂ ಘೋರಸಂಕಾಶಂ ಜಾಮದಗ್ನ್ಯಂ ಮಹದ್ಧನುಃ ।
ಪೂರಯಸ್ವ ಶರೇಣೈವ ಸ್ವಬಲಂ ದರ್ಶಯಸ್ವ ಚ ॥೩॥

ತದಹಂ ತೇ ಬಲಂ ದೃಷ್ಟ್ವಾ ಧನುಷೋಽಸ್ಯ ಪ್ರಪೂರಣೇ ।
ದ್ವನ್ದ್ವಯುದ್ಧಂ ಪ್ರದಾಸ್ಯಾಮಿ ವೀರ್ಯಶ್ಲಾಘ್ಯಮಹಂ ತವ ॥೪॥

ತಸ್ಯ ತದ್ವಚನಂ ಶ್ರುತ್ವಾ ರಾಜಾ ದಶರಥಸ್ತದಾ ।
ವಿಷಣ್ಣವದನೋ ದೀನಃ ಪ್ರಾಞ್ಜಲಿರ್ವಾಕ್ಯಮಬ್ರವೀತ್ ॥೫॥

ಕ್ಷತ್ರರೋಷಾತ್ಪ್ರಶಾನ್ತಸ್ತ್ವಂ ಬ್ರಾಹ್ಮಣಶ್ಚ ಮಹಾತಪಾಃ ।
ಬಾಲಾನಾಂ ಮಮ ಪುತ್ರಾಣಾಮಭಯಂ ದಾತುಮರ್ಹಸಿ ॥೬॥

ಭಾರ್ಗವಾಣಾಂ ಕುಲೇ ಜಾತಃ ಸ್ವಾಧ್ಯಾಯವ್ರತಶಾಲಿನಾಮ್ ।
ಸಹಸ್ರಾಕ್ಷೇ ಪ್ರತಿಜ್ಞಾಯ ಶಸ್ತ್ರಂ ನಿಕ್ಷಿಪ್ತವಾನಸಿ ॥೭॥

ಸ ತ್ವಂ ಧರ್ಮಪರೋ ಭೂತ್ವಾ ಕಾಶ್ಯಪಾಯ ವಸುಂಧರಾಮ್ ।
ದತ್ತ್ವಾ ವನಮುಪಾಗಮ್ಯ ಮಹೇನ್ದ್ರಕೃತಕೇತನಃ ॥೮॥

ಮಮ ಸರ್ವವಿನಾಶಾಯ ಸಂಪ್ರಾಪ್ತಸ್ತ್ವಂ ಮಹಾಮುನೇ ।
ನ ಚೈಕಸ್ಮಿನ್ಹತೇ ರಾಮೇ ಸರ್ವೇ ಜೀವಾಮಹೇ ವಯಮ್ ॥೯॥

ಬ್ರುವತ್ಯೇವಂ ದಶರಥೇ ಜಾಮದಗ್ನ್ಯಃ ಪ್ರತಾಪವಾನ್ ।
ಅನಾದೃತ್ಯೈವ ತದ್ವಾಕ್ಯಂ ರಾಮಮೇವಾಭ್ಯಭಾಷತ ॥೧೦॥

ಇಮೇ ದ್ವೇ ಧನುಷೀ ಶ್ರೇಷ್ಠೇ ದಿವ್ಯೇ ಲೋಕಾಭಿವಿಶ್ರುತೇ ।
ದೃಢೇ ಬಲವತೀ ಮುಖ್ಯೇ ಸುಕೃತೇ ವಿಶ್ವಕರ್ಮಣಾ ॥೧೧॥

ಅತಿಸೃಷ್ಟಂ ಸುರೈರೇಕಂ ತ್ರ್ಯಮ್ಬಕಾಯ ಯುಯುತ್ಸವೇ ।
ತ್ರಿಪುರಘ್ನಂ ನರಶ್ರೇಷ್ಠ ಭಗ್ನಂ ಕಾಕುತ್ಸ್ಥ ಯತ್ತ್ವಯಾ ॥೧೨॥

ಇದಂ ದ್ವಿತೀಯಂ ದುರ್ಧರ್ಷಂ ವಿಷ್ಣೋರ್ದತ್ತಂ ಸುರೋತ್ತಮೈಃ ।
ತದಿದಂ ವೈಷ್ಣವಂ ರಾಮ ಧನುಃ ಪರಪುರಂಜಯಮ್ ॥೧೩॥

ಸಮಾನಸಾರಂ ಕಾಕುತ್ಸ್ಥ ರೌದ್ರೇಣ ಧನುಷಾ ತ್ವಿದಮ್ ।
ತದಾ ತು ದೇವತಾಃ ಸರ್ವಾಃ ಪೃಚ್ಛನ್ತಿ ಸ್ಮ ಪಿತಾಮಹಮ್ ।
ಶಿತಿಕಣ್ಠಸ್ಯ ವಿಷ್ಣೋಶ್ಚ ಬಲಾಬಲನಿರೀಕ್ಷಯಾ ॥೧೪॥

ಅಭಿಪ್ರಾಯಂ ತು ವಿಜ್ಞಾಯ ದೇವತಾನಾಂ ಪಿತಾಮಹಃ ।
ವಿರೋಧಂ ಜನಯಾಮಾಸ ತಯೋಃ ಸತ್ಯವತಾಂ ವರಃ ॥೧೫॥

ವಿರೋಧೇ ಚ ಮಹದ್ಯುದ್ಧಮಭವದ್ರೋಮಹರ್ಷಣಮ್ ।
ಶಿತಿಕಣ್ಠಸ್ಯ ವಿಷ್ಣೋಶ್ಚ ಪರಸ್ಪರಜಯೈಷಿಣೋಃ ॥೧೬॥

ತದಾ ತು ಜೃಮ್ಭಿತಂ ಶೈವಂ ಧನುರ್ಭೀಮಪರಾಕ್ರಮಮ್ ।
ಹುಂಕಾರೇಣ ಮಹಾದೇವಸ್ತಮ್ಭಿತೋಽಥ ತ್ರಿಲೋಚನಃ ॥೧೭॥

ದೇವೈಸ್ತದಾ ಸಮಾಗಮ್ಯ ಸರ್ಷಿಸಂಘೈಃ ಸಚಾರಣೈಃ ।
ಯಾಚಿತೌ ಪ್ರಶಮಂ ತತ್ರ ಜಗ್ಮತುಸ್ತೌ ಸುರೋತ್ತಮೌ ॥೧೮॥

ಜೃಮ್ಭಿತಂ ತದ್ಧನುರ್ದೃಷ್ಟ್ವಾ ಶೈವಂ ವಿಷ್ಣುಪರಾಕ್ರಮೈಃ ।
ಅಧಿಕಂ ಮೇನಿರೇ ವಿಷ್ಣುಂ ದೇವಾಃ ಸರ್ಷಿಗಣಾಸ್ತದಾ ॥೧೯॥

ಧನೂ ರುದ್ರಸ್ತು ಸಂಕ್ರುದ್ಧೋ ವಿದೇಹೇಷು ಮಹಾಯಶಾಃ ।
ದೇವರಾತಸ್ಯ ರಾಜರ್ಷೇರ್ದದೌ ಹಸ್ತೇ ಸಸಾಯಕಮ್ ॥೨೦॥

ಇದಂ ಚ ವೈಷ್ಣವಂ ರಾಮ ಧನುಃ ಪರಪುರಂಜಯಮ್ ।
ಋಚೀಕೇ ಭಾರ್ಗವೇ ಪ್ರಾದಾದ್ವಿಷ್ಣುಃ ಸಂನ್ಯಾಸಮುತ್ತಮಮ್ ॥೨೧॥

ಋಚೀಕಸ್ತು ಮಹಾತೇಜಾಃ ಪುತ್ರಸ್ಯಾಪ್ರತಿಕರ್ಮಣಃ ।
ಪಿತುರ್ಮಮ ದದೌ ದಿವ್ಯಂ ಜಮದಗ್ನೇರ್ಮಹಾತ್ಮನಃ ॥೨೨॥

ನ್ಯಸ್ತಶಸ್ತ್ರೇ ಪಿತರಿ ಮೇ ತಪೋಬಲಸಮನ್ವಿತೇ ।
ಅರ್ಜುನೋ ವಿದಧೇ ಮೃತ್ಯುಂ ಪ್ರಾಕೃತಾಂ ಬುದ್ಧಿಮಾಸ್ಥಿತಃ ॥೨೩॥

ವಧಮಪ್ರತಿರೂಪಂ ತು ಪಿತುಃ ಶ್ರುತ್ವಾ ಸುದಾರುಣಮ್ ।
ಕ್ಷತ್ರಮುತ್ಸಾದಯನ್ರೋಷಾಜ್ಜಾತಂ ಜಾತಮನೇಕಶಃ ॥೨೪॥

ಪೃಥಿವೀಂ ಚಾಖಿಲಾಂ ಪ್ರಾಪ್ಯ ಕಾಶ್ಯಪಾಯ ಮಹಾತ್ಮನೇ ।
ಯಜ್ಞಸ್ಯಾನ್ತೇ ತದಾ ರಾಮ ದಕ್ಷಿಣಾಂ ಪುಣ್ಯಕರ್ಮಣೇ ॥೨೫॥

ದತ್ತ್ವಾ ಮಹೇನ್ದ್ರನಿಲಯಸ್ತಪೋಬಲಸಮನ್ವಿತಃ ।
ಸ್ಥಿತೋಽಸ್ಮಿ ತಸ್ಮಿಂಸ್ತಪ್ಯನ್ವೈ ಸುಸುಖಂ ಸುರಸೇವಿತೇ ॥೨೬॥

ಅದ್ಯ ತೂತ್ತಮವೀರ್ಯೇಣ ತ್ವಯಾ ರಾಮ ಮಹಾಬಲ ।
ಶ್ರುತ್ವಾ ತು ಧನುಷೋ ಭೇದಂ ತತೋಽಹಂ ದ್ರುತಮಾಗತಃ ॥೨೭॥

ತದಿದಂ ವೈಷ್ಣವಂ ರಾಮ ಪಿತೃಪೈತಾಮಹಂ ಮಹತ್ ।
ಕ್ಷತ್ರಧರ್ಮಂ ಪುರಸ್ಕೃತ್ಯ ಗೃಹ್ಣೀಷ್ವ ಧನುರುತ್ತಮಮ್ ॥೨೮॥

ಯೋಜಯಸ್ವ ಧನುಃಶ್ರೇಷ್ಠೇ ಶರಂ ಪರಪುರಂಜಯಮ್ ।
ಯದಿ ಶಕ್ನೋಷಿ ಕಾಕುತ್ಸ್ಥ ದ್ವನ್ದ್ವಂ ದಾಸ್ಯಾಮಿ ತೇ ತತಃ ॥೨೯॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ವಾಲ್ಮೀಕೀಯೇ ಆದಿಕಾವ್ಯೇ
ಬಾಲಕಾಣ್ಡೇ ಪಞ್ಚಸಪ್ತತಿತಮಃ ಸರ್ಗಃ

ಷಟ್ಸಪ್ತತಿತಮಃ ಸರ್ಗಃ

ಶ್ರುತ್ವಾ ತು ಜಾಮದಗ್ನ್ಯಸ್ಯ ವಾಕ್ಯಂ ದಾಶರಥಿಸ್ತದಾ ।
ಗೌರವಾದ್ಯನ್ತ್ರಿತಕಥಃ ಪಿತೂ ರಾಮಮಥಾಬ್ರವೀತ್ ॥೧॥

ಶ್ರುತವಾನಸ್ಮಿ ಯತ್ಕರ್ಮ ಕೃತವಾನಸಿ ಭಾರ್ಗವ ।
ಅನುರುನ್ಧ್ಯಾಮಹೇ ಬ್ರಹ್ಮನ್ಪಿತುರಾನೃಣ್ಯಮಾಸ್ಥಿತಃ ॥೨॥

ವೀರ್ಯಹೀನಮಿವಾಶಕ್ತಂ ಕ್ಷತ್ರಧರ್ಮೇಣ ಭಾರ್ಗವ ।
ಅವಜಾನಾಸಿ ಮೇ ತೇಜಃ ಪಶ್ಯ ಮೇಽದ್ಯ ಪರಾಕ್ರಮಮ್ ॥೩॥

ಇತ್ಯುಕ್ತ್ವಾ ರಾಘವಃ ಕ್ರುದ್ಧೋ ಭಾರ್ಗವಸ್ಯ ಶರಾಸನಮ್ ।
ಶರಂ ಚ ಪ್ರತಿಜಗ್ರಾಹ ಹಸ್ತಾಲ್ಲಘುಪರಾಕ್ರಮಃ ॥೪॥

ಆರೋಪ್ಯ ಸ ಧನೂ ರಾಮಃ ಶರಂ ಸಜ್ಯಂ ಚಕಾರ ಹ ।
ಜಾಮದಗ್ನ್ಯಂ ತತೋ ರಾಮಂ ರಾಮಃ ಕ್ರುದ್ಧೋಽಬ್ರವೀದಿದಮ್ ॥

ಬ್ರಾಹ್ಮಣೋಽಸೀತಿ ಪೂಜ್ಯೋ ಮೇ ವಿಶ್ವಾಮಿತ್ರಕೃತೇನ ಚ ।
ತಸ್ಮಾಚ್ಛಕ್ತೋ ನ ತೇ ರಾಮ ಮೋಕ್ತುಂ ಪ್ರಾಣಹರಂ ಶರಮ್ ॥೬॥

ಇಮಾಂ ವಾ ತ್ವದ್ಗತಿಂ ರಾಮ ತಪೋಬಲಸಮಾರ್ಜಿತಾನ್ ।
ಲೋಕಾನಪ್ರತಿಮಾನ್ವಾ ತೇ ಹನಿಷ್ಯಾಮಿ ಯದಿಚ್ಛಸಿ ॥೭॥

ನ ಹ್ಯಯಂ ವೈಷ್ಣವೋ ದಿವ್ಯಃ ಶರಃ ಪರಪುರಂಜಯಃ ।
ಮೋಘಃ ಪತತಿ ವೀರ್ಯೇಣ ಬಲದರ್ಪವಿನಾಶನಃ ॥೮॥

ವರಾಯುಧಧರಂ ರಾಮಂ ದ್ರಷ್ಟುಂ ಸರ್ಷಿಗಣಾಃ ಸುರಾಃ ।
ಪಿತಾಮಹಂ ಪುರಸ್ಕೃತ್ಯ ಸಮೇತಾಸ್ತತ್ರ ಸರ್ವಶಃ ॥೯॥

ಗನ್ಧರ್ವಾಪ್ಸರಸಶ್ಚೈವ ಸಿದ್ಧಚಾರಣಕಿನ್ನರಾಃ ।
ಯಕ್ಷರಾಕ್ಷಸನಾಗಾಶ್ಚ ತದ್ದ್ರಷ್ಟುಂ ಮಹದದ್ಭುತಮ್ ॥೧೦॥

ಜಡೀಕೃತೇ ತದಾ ಲೋಕೇ ರಾಮೇ ವರಧನುರ್ಧರೇ ।
ನಿರ್ವೀರ್ಯೋ ಜಾಮದಗ್ನ್ಯೋಽಥ ರಾಮೋ ರಾಮಮುದೈಕ್ಷತ ॥

ತೇಜೋಭಿಹತವೀರ್ಯತ್ವಾಜ್ಜಾಮದಗ್ನ್ಯೋ ಜಡೀಕೃತಃ ।
ರಾಮಂ ಕಮಲಪತ್ರಾಕ್ಷಂ ಮನ್ದಂ ಮನ್ದಮುವಾಚ ಹ ॥೧೨॥

ಕಾಶ್ಯಪಾಯ ಮಯಾ ದತ್ತಾ ಯದಾ ಪೂರ್ವಂ ವಸುಂಧರಾ ।
ವಿಷಯೇ ಮೇ ನ ವಸ್ತವ್ಯಮಿತಿ ಮಾಂ ಕಾಶ್ಯಪೋಽಬ್ರವೀತ್ ॥೧೩॥

ಸೋಽಹಂ ಗುರುವಚಃ ಕುರ್ವನ್ಪೃಥಿವ್ಯಾಂ ನ ವಸೇ ನಿಶಾಮ್ ।
ತದಾ ಪ್ರತಿಜ್ಞಾ ಕಾಕುತ್ಸ್ಥ ಕೃತಾ ಮೇ ಕಾಶ್ಯಪಸ್ಯ ಹಿ ॥೧೪॥

ತದಿಮಾಂ ತ್ವಂ ಗತಿಂ ವೀರ ಹನ್ತುಂ ನಾರ್ಹಸಿ ರಾಘವ ।
ಮನೋಜವಂ ಗಮಿಷ್ಯಾಮಿ ಮಹೇನ್ದ್ರಂ ಪರ್ವತೋತ್ತಮಮ್ ॥

ಲೋಕಾಸ್ತ್ವಪ್ರತಿಮಾ ರಾಮ ನಿರ್ಜಿತಾಸ್ತಪಸಾ ಮಯಾ ।
ಜಹಿ ತಾನ್ ಶರಮುಖ್ಯೇನ ಮಾ ಭೂತ್ಕಾಲಸ್ಯ ಪರ್ಯಯಃ ॥೧೬॥

ಅಕ್ಷಯಂ ಮಧುಹನ್ತಾರಂ ಜಾನಾಮಿ ತ್ವಾಂ ಸುರೇಶ್ವರಮ್ ।
ಧನುಷೋಽಸ್ಯ ಪರಾಮರ್ಶಾತ್ ಸ್ವಸ್ತಿ ತೇಽಸ್ತು ಪರಂತಪ ॥೧೭॥

ಏತೇ ಸುರಗಣಾಃ ಸರ್ವೇ ನಿರೀಕ್ಷನ್ತೇ ಸಮಾಗತಾಃ ।
ತ್ವಾಮಪ್ರತಿಮಕರ್ಮಾಣಮಪ್ರತಿದ್ವನ್ದ್ವಮಾಹವೇ ॥೧೮॥

ನ ಚೇಯಂ ಮಮ ಕಾಕುತ್ಸ್ಥ ವ್ರೀಡಾ ಭವಿತುಮರ್ಹತಿ ।
ತ್ವಯಾ ತ್ರೈಲೋಕ್ಯನಾಥೇನ ಯದಹಂ ವಿಮುಖೀಕೃತಃ ॥೧೯॥

ಶರಮಪ್ರತಿಮಂ ರಾಮ ಮೋಕ್ತುಮರ್ಹಸಿ ಸುವ್ರತ ।
ಶರಮೋಕ್ಷೇ ಗಮಿಷ್ಯಾಮಿ ಮಹೇನ್ದ್ರಂ ಪರ್ವತೋತ್ತಮಮ್ ॥೨೦॥

ತಥಾ ಬ್ರುವತಿ ರಾಮೇ ತು ಜಾಮದಗ್ನ್ಯೇ ಪ್ರತಾಪವಾನ್ ।
ರಾಮೋ ದಾಶರಥಿಃ ಶ್ರೀಮಾಂಶ್ಚಿಕ್ಷೇಪ ಶರಮುತ್ತಮಮ್ ॥೨೧॥

ಸ ಹತಾನ್ದೃಶ್ಯ ರಾಮೇಣ ಸ್ವಾನ್ಲೋಕಾಂಸ್ತಪಸಾರ್ಜಿತಾನ್ ।
ಜಾಮದಗ್ನ್ಯೋ ಜಗಾಮಾಶು ಮಹೇನ್ದ್ರಂ ಪರ್ವತೋತ್ತಮಮ್ ॥

ತತೋ ವಿತಿಮಿರಾಃ ಸರ್ವಾ ದಿಶಶ್ಚೋಪದಿಶಸ್ತಥಾ ।
ಸುರಾಃ ಸರ್ಷಿಗಣಾ ರಾಮಂ ಪ್ರಶಶಂಸುರುದಾಯುಧಮ್ ॥೨೩॥

ರಾಮಂ ದಾಶರಥಿಂ ರಾಮೋ ಜಾಮದಗ್ನ್ಯಃ ಪ್ರಶಸ್ಯ ಚ ।
ತತಃ ಪ್ರದಕ್ಷಿಣಂ ಕೃತ್ವಾ ಜಗಾಮಾತ್ಮಗತಿಂ ಪ್ರಭುಃ ॥೨೪॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ವಾಲ್ಮೀಕೀಯೇ ಆದಿಕಾವ್ಯೇ
ಬಾಲಕಾಣ್ಡೇ ಷಟ್ಸಪ್ತತಿತಮಃ ಸರ್ಗಃ

ಸಪ್ತಸಪ್ತತಿತಮಃ ಸರ್ಗಃ

ಗತೇ ರಾಮೇ ಪ್ರಶಾನ್ತಾತ್ಮಾ ರಾಮೋ ದಾಶರಥಿರ್ಧನುಃ ।
ವರುಣಾಯಾಪ್ರಮೇಯಾಯ ದದೌ ಹಸ್ತೇ ಸಸಾಯಕಮ್ ॥೧॥

ಅಭಿವಾದ್ಯ ತತೋ ರಾಮೋ ವಸಿಷ್ಠಪ್ರಮುಖಾನೃಷೀನ್ ।
ಪಿತರಂ ವಿಹ್ವಲಂ ದೃಷ್ಟ್ವಾ ಪ್ರೋವಾಚ ರಘುನನ್ದನಃ ॥೨॥

ಜಾಮದಗ್ನ್ಯೋ ಗತೋ ರಾಮಃ ಪ್ರಯಾತು ಚತುರಙ್ಗಿಣೀ ।
ಅಯೋಧ್ಯಾಭಿಮುಖೀ ಸೇನಾ ತ್ವಯಾ ನಾಥೇನ ಪಾಲಿತಾ ॥೩॥

ರಾಮಸ್ಯ ತದ್ವಚಃ ಶ್ರುತ್ವಾ ರಾಜಾ ದಶರಥಃ ಸುತಮ್ ।
ಬಾಹುಭ್ಯಾಂ ಸಂಪರಿಷ್ವಜ್ಯ ಮೂರ್ಧ್ನಿ ಚಾಘ್ರಾಯ ರಾಘವಮ್ ॥೪॥

ಗತೋ ರಾಮ ಇತಿ ಶ್ರುತ್ವಾ ಹೃಷ್ಟಃ ಪ್ರಮುದಿತೋ ನೃಪಃ ।
ಪುನರ್ಜಾತಂ ತದಾ ಮೇನೇ ಪುತ್ರಮಾತ್ಮಾನಮೇವ ಚ ।
ಚೋದಯಾಮಾಸ ತಾಂ ಸೇನಾಂ ಜಗಾಮಾಶು ತತಃ ಪುರೀಮ್ ॥೫॥

ಪತಾಕಾಧ್ವಜಿನೀಂ ರಮ್ಯಾಂ ಜಯೋದ್ಘುಷ್ಟನಿನಾದಿತಾಮ್ ।
ಸಿಕ್ತರಾಜಪಥಾಂ ರಮ್ಯಾಂ ಪ್ರಕೀರ್ಣಕುಸುಮೋತ್ಕರಾಮ್ ॥೬॥

ರಾಜಪ್ರವೇಶಸುಮುಖೈಃ ಪೌರೈರ್ಮಙ್ಗಲವಾದಿಭಿಃ ।
ಸಂಪೂರ್ಣಾಂ ಪ್ರಾವಿಶದ್ರಾಜಾ ಜನೌಘೈಃ ಸಮಲಂಕೃತಾಮ್ ॥೭॥

ಪೌರೈಃ ಪ್ರತ್ಯುದ್ಗತೋ ದೂರಂ ದ್ವಿಜೈಶ್ಚ ಪುರವಾಸಿಭಿಃ ।
ಪುತ್ರೈರನುಗತಃ ಶ್ರೀಮಾನ್ ಶ್ರೀಮದ್ಭಿಶ್ಚ ಮಹಾಯಶಾಃ ।
ಪ್ರವಿವೇಶ ಗೃಹಂ ರಾಜಾ ಹಿಮವತ್ಸದೃಶಂ ಪ್ರಿಯಮ್ ॥೮॥

ನನನ್ದ ಸ್ವಜನೈ ರಾಜಾ ಗೃಹೇ ಕಾಮ್ಯೈಃ ಸುಪೂಜಿತಃ ॥೯॥

ಕೌಸಲ್ಯಾ ಚ ಸುಮಿತ್ರಾ ಚ ಕೈಕೇಯೀ ಚ ಸುಮಧ್ಯಮಾ ।
ವಧೂಪ್ರತಿಗ್ರಹೇ ಯುಕ್ತಾ ಯಾಶ್ಚಾನ್ಯಾ ರಾಜಯೋಷಿತಃ ॥೧೦॥

ತತಃ ಸೀತಾಂ ಮಹಾಭಾಗಾಮೂರ್ಮಿಲಾಂ ಚ ಯಶಸ್ವಿನೀಮ್ ।
ಕುಶಧ್ವಜಸುತೇ ಚೋಭೇ ಜಗೃಹುರ್ನೃಪಪತ್ನಯಃ ॥೧೧॥

ಮಙ್ಗಲಾಲಾಪನೈರ್ಹೋಮೈಃ ಶೋಭಿತಾಃ ಕ್ಷೌಮವಾಸಸಃ ।
ದೇವತಾಯತನಾನ್ಯಾಶು ಸರ್ವಾಸ್ತಾಃ ಪ್ರತ್ಯಪೂಜಯನ್ ॥೧೨॥

ಅಭಿವಾದ್ಯಾಭಿವಾದ್ಯಾಂಶ್ಚ ಸರ್ವಾ ರಾಜಸುತಾಸ್ತದಾ ।
ರೇಮಿರೇ ಮುದಿತಾಃ ಸರ್ವಾ ಭರ್ತೃಭಿಃ ಸಹಿತಾ ರಹಃ ॥೧೩॥

ಕುಮಾರಾಶ್ಚ ಮಹಾತ್ಮಾನೋ ವೀರ್ಯೇಣಾಪ್ರತಿಮಾ ಭುವಿ ।
ಕೃತದಾರಾಃ ಕೃತಾಸ್ತ್ರಾಶ್ಚ ಸಧನಾಃ ಸಸುಹೃಜ್ಜನಾಃ ।
ಶುಶ್ರೂಷಮಾಣಾಃ ಪಿತರಂ ವರ್ತಯನ್ತಿ ನರರ್ಷಭಾಃ ॥೧೪॥

ಕಸ್ಯಚಿತ್ತ್ವಥ ಕಾಲಸ್ಯ ರಾಜಾ ದಶರಥಃ ಸುತಮ್ ।
ಭರತಂ ಕೇಕಯೀಪುತ್ರಮಬ್ರವೀದ್ರಘುನನ್ದನಃ ॥೧೫॥

ಅಯಂ ಕೇಕಯರಾಜಸ್ಯ ಪುತ್ರೋ ವಸತಿ ಪುತ್ರಕ ।
ತ್ವಾಂ ನೇತುಮಾಗತೋ ವೀರೋ ಯುಧಾಜಿನ್ಮಾತುಲಸ್ತವ ॥೧೬॥

ಶ್ರುತ್ವಾ ದಶರಥಸ್ಯೈತದ್ಭರತಃ ಕೇಕಯೀಸುತಃ ।
ಗಮನಾಯಾಭಿಚಕ್ರಾಮ ಶತ್ರುಘ್ನಸಹಿತಸ್ತದಾ ॥೧೭॥

ಆಪೃಚ್ಛ್ಯ ಪಿತರಂ ಶೂರೋ ರಾಮಂ ಚಾಕ್ಲಿಷ್ಟಕಾರಿಣಮ್ ।
ಮಾತೄಶ್ಚಾಪಿ ನರಶ್ರೇಷ್ಠಃ ಶತ್ರುಘ್ನಸಹಿತೋ ಯಯೌ ॥೧೮॥

ಯುಧಾಜಿತ್ಪ್ರಾಪ್ಯ ಭರತಂ ಸಶತ್ರುಘ್ನಂ ಪ್ರಹರ್ಷಿತಃ ।
ಸ್ವಪುರಂ ಪ್ರಾವಿಶದ್ವೀರಃ ಪಿತಾ ತಸ್ಯ ತುತೋಷ ಹ ॥೧೯॥

ಗತೇ ತು ಭರತೇ ರಾಮೋ ಲಕ್ಷ್ಮಣಶ್ಚ ಮಹಾಬಲಃ ।
ಪಿತರಂ ದೇವಸಂಕಾಶಂ ಪೂಜಯಾಮಾಸತುಸ್ತದಾ ॥೨೦॥

ಪಿತುರಾಜ್ಞಾಂ ಪುರಸ್ಕೃತ್ಯ ಪೌರಕಾರ್ಯಾಣಿ ಸರ್ವಶಃ ।
ಚಕಾರ ರಾಮೋ ಧರ್ಮಾತ್ಮಾ ಪ್ರಿಯಾಣಿ ಚ ಹಿತಾನಿ ಚ ॥೨೧॥

ಮಾತೃಭ್ಯೋ ಮಾತೃಕಾರ್ಯಾಣಿ ಕೃತ್ವಾ ಪರಮಯನ್ತ್ರಿತಃ ।
ಗುರೂಣಾಂ ಗುರುಕಾರ್ಯಾಣಿ ಕಾಲೇ ಕಾಲೇ ಚಕಾರ ಹ ॥೨೨॥

ಏವಂ ದಶರಥಃ ಪ್ರೀತೋ ಬ್ರಾಹ್ಮಣಾ ನೈಗಮಾಸ್ತದಾ ।
ರಾಮಸ್ಯ ಶೀಲವೃತ್ತೇನ ಸರ್ವೇ ವಿಷಯವಾಸಿನಃ ॥೨೩॥

ತೇಷಾಮತಿಯಶಾ ಲೋಕೇ ರಾಮಃ ಸತ್ಯಪರಾಕ್ರಮಃ ।
ಸ್ವಯಂಭೂರಿವ ಭೂತಾನಾಂ ಬಭೂವ ಗುಣವತ್ತರಃ ॥೨೪॥

ರಾಮಸ್ತು ಸೀತಯಾ ಸಾರ್ಧಂ ವಿಜಹಾರ ಬಹೂನೃತೂನ್ ।
ಮನಸ್ವೀ ತದ್ಗತಮನಾ ನಿತ್ಯಂ ಹೃದಿ ಸಮರ್ಪಿತಃ ॥೨೫॥

ಪ್ರಿಯಾ ತು ಸೀತಾ ರಾಮಸ್ಯ ದಾರಾಃ ಪಿತೃಕೃತಾ ಇತಿ ।
ಗುಣಾದ್ರೂಪಗುಣಾಚ್ಚಾಪಿ ಪ್ರೀತಿರ್ಭೂಯೋಽಭ್ಯವರ್ಧತ ॥೨೬॥

ತಸ್ಯಾಶ್ಚ ಭರ್ತಾ ದ್ವಿಗುಣಂ ಹೃದಯೇ ಪರಿವರ್ತತೇ ।
ಅಂತರ್ಗತಮಪಿ ವ್ಯಕ್ತಮಾಖ್ಯಾತಿ ಹೃದಯಂ ಹೃದಾ ॥೨೭॥

ತಸ್ಯ ಭೂಯೋ ವಿಶೇಷೇಣ ಮೈಥಿಲೀ ಜನಕಾತ್ಮಜಾ ।
ದೇವತಾಭಿಃ ಸಮಾ ರೂಪೇ ಸೀತಾ ಶ್ರೀರಿವ ರೂಪಿಣೀ ॥೨೮॥

ತಯಾ ಸ ರಾಜರ್ಷಿಸುತೋಽಭಿರಾಮಯಾ
ಸಮೇಯಿವಾನುತ್ತಮರಾಜಕನ್ಯಯಾ ।

ಅತೀವ ರಾಮಃ ಶುಶುಭೇಽತಿಕಾಮಯಾ
ವಿಭುಃ ಶ್ರಿಯಾ ವಿಷ್ಣುರಿವಾಮರೇಶ್ವರಃ ॥೨೯॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ವಾಲ್ಮೀಕೀಯೇ ಆದಿಕಾವ್ಯೇ
ಬಾಲಕಾಣ್ಡೇ ಸಪ್ತಸಪ್ತತಿತಮಃ ಸರ್ಗಃ

ಬಾಲಕಾಣ್ಡಃ ಸಮಾಪ್ತಃ

ಅಥ ಅಯೋಧ್ಯಾಕಾಣ್ಡೇ ಪ್ರಥಮಃ ಸರ್ಗಃ

ಗಚ್ಛತಾ ಮಾತುಲಕುಲಂ ಭರತೇನ ತದಾನಘಃ ।
ಶತ್ರುಘ್ನೋ ನಿತ್ಯಶತ್ರುಘ್ನೋ ನೀತಃ ಪ್ರೀತಿಪುರಸ್ಕೃತಃ ॥೧॥

ಸ್ವಸ್ತಿ ಪ್ರಜಾಭ್ಯಃ ಪರಿಪಾಲಯನ್ತಾಂ
ನ್ಯಾಯ್ಯೇನ ಮಾರ್ಗೇಣ ಮಹೀಂ ಮಹೀಶಾಃ ।
ಗೋಬ್ರಾಹ್ಮಣೇಭ್ಯಃ ಶುಭಮಸ್ತು ನಿತ್ಯಂ
ಲೋಕಾಃ ಸಮಸ್ತಾಃ ಸುಖಿನೋ ಭವನ್ತು ॥

ಕಾಲೇ ವರ್ಷತು ಪರ್ಜನ್ಯಃ ಪೃಥಿವೀ ಸಸ್ಯಶಾಲಿನೀ ।
ದೇಶೋಽಯಂ ಕ್ಷೋಭರಹಿತೋ ಬ್ರಾಹ್ಮಣಾಃ ಸನ್ತು ನಿರ್ಭಯಾಃ ॥

ಅಪುತ್ರಾಃ ಪುತ್ರಿಣಃ ಸನ್ತು ಪುತ್ರಿಣಃ ಸನ್ತು ಪೌತ್ರಿಣಃ ।
ಅಧನಾಃ ಸಧನಾಃ ಸನ್ತು ಜೀವನ್ತು ಶರದಾಂ ಶತಮ್ ॥

ಕಾಯೇನ ವಾಚಾ ಮನಸೇನ್ದ್ರಿಯೈರ್ವಾ
ಬುದ್ಧ್ಯಾತ್ಮನಾ ವಾ ಪ್ರಕೃತೇಃ ಸ್ವಭಾವಾತ್ ।
ಕರೋಮಿ ಯದ್ಯತ್ಸಕಲಂ ಪರಸ್ಮೈ
ನಾರಾಯಣಾಯೇತಿ ಸಮರ್ಪಯಾಮಿ ॥

ಯದಕ್ಷರಪದಭ್ರಷ್ಟಂ ಮಾತ್ರಾಹೀನಂ ತು ಯದ್ಭವೇತ್ ।
ತತ್ಸರ್ವಂ ಕ್ಷಮ್ಯತಾಂ ದೇವ ನಾರಾಯಣ ನಮೋಽಸ್ತು ತೇ ॥

ಶ್ರೀಕೃಷ್ಣಾರ್ಪಣಮಸ್ತು ಶ್ರೀ ಸದ್ಗುರುಚರಣಾರವಿನ್ದಾರ್ಪಣಮಸ್ತು
ಓ ತತ್ಸತ್

ಕಾಮ್ಯಫಲಗಳ ಪ್ರಾಪ್ತಿಗಾಗಿ ರಾಮಾಯಣ ಪಾರಾಯಣದ ವಿಧಾನ

ಬೃಹದ್ಧರ್ಮಪುರಾಣದಲ್ಲಿ ಪ್ರತ್ಯೇಕಕಾಂಡದ ಸಕಾಮ–(ಎಂದರೆ ಫಲೋದ್ದೇಶಿತ) ಪಾಠಕ್ರಮವನ್ನು ಹೀಗೆ ಹೇಳಿದೆ : ಯಾವ ಯಾವ ಕಾಮನೆಗಳಿಗಾಗಿ ಯಾವ ಯಾವ ಕಾಂಡಗಳನ್ನು ಪಠಿಸಬೇಕೆಂದು ಅದರಲ್ಲಿ ಹೀಗೆ ಹೇಳಲ್ಪಟ್ಟಿದೆ.

ಅನಾವೃಷ್ಟಿರ್ಮಹಾಪೀಡಾಗ್ರಹಪೀಡಾಪ್ರಪೀಡಿತಾಃ ।
ಆದಿಕಾಂಡಂ ಪಠೇಯುರ್ಯೇ ತೇ ಮುಚ್ಯನ್ತೇ ತತೋ ಭಯಾತ್ ॥
ಪುತ್ರಜನ್ಮವಿವಾಹಾದೌ ಗುರುದರ್ಶನ ಏವ ಚ ।
ಪಠೇಚ್ಚ ಶೃಣುಯಾಚ್ಚೈವ ದ್ವಿತೀಯಂ ಕಾಂಡಮುತ್ತಮಮ್ ॥
ವನೇ ರಾಜಕುಲೇ ವಹ್ನಿಜಲಪೀಡಾಯುತೋ ನರಃ ।
ಪಠೇದಾರಣ್ಯಕಂ ಕಾಂಡಂ ಶೃಣುಯಾದ್ ವಾ ಸುಮಙ್ಗಲೀ ॥
ಮಿತ್ರಲಾಭೇ ತಥಾ ನಷ್ಟದ್ರವ್ಯಸ್ಯ ಚ ಗವೇಷಣೇ ।
ಶ್ರುತ್ವಾ ಪಠಿತ್ವಾ ಕೈಷ್ಕಿನ್ಧಂ ಕಾಂಡಂ ತತ್ತತ್ ಫಲಂ ಲಭೇತ್ ॥
ಶ್ರಾದ್ಧೇಷು ದೇವಕಾರ್ಯೇಷು ಪಠೇತ್ ಸುಂದರಕಾಂಡಕಮ್ ।
ಶತ್ರೋರ್ಜಯೇ ಸಮುತ್ಸಾಹೇ ಜನವಾದೇ ವಿಗರ್ಹಿತೇ ॥
ಲಂಕಾಕಾಂಡಂ ಪಠೇತ್ ಕಿಂ ವಾ ಶೃಣುಯಾತ್ ಸ ಸುಖೀ ಭವೇತ್ ।
ಯಃ ಪಠೇಚ್ಛೃಣುಯಾದ್ ವಾಪಿ ಕಾಂಡಮಭ್ಯುದಯೋತ್ತರಮ್
ಆನಂದಕಾರ್ಯೇ ಯಾತ್ರಾಯಾಂ ಸ ಜಯೀ ಪರತೋಽತ್ರ ಚ ।
ಮೋಕ್ಷಾರ್ಥೀ ಲಭತೇ ಮೋಕ್ಷಂ ಭಕ್ತ್ಯರ್ಥೀ ಭಕ್ತಿಮೇವ ಚ ।
ಜ್ಞಾನಾರ್ಥೀ ಲಭತೇ ಜ್ಞಾನಂ ಬ್ರಹ್ಮತತ್ತ್ವೋಪಲಂಭಕಮ್ ॥

(ಬೃಹದ್ಧರ್ಮಪುರಾಣ-ಪೂರ್ವಖಂಡ-ಅಧ್ಯಾಯ ೨೬-೯-೧೫)

ದೇಶದಲ್ಲಿ ಅನಾವೃಷ್ಟಿ, ಸಾಂಕ್ರಾಮಿಕ ರೋಗ, ದುಷ್ಟಮೃಗ-ಕ್ರಿಮಿ ಕೀಟಾದಿಗಳಿಂದುಂಟಾಗುವ ಹಾನಿ–ಇವೇ ಮುಂತಾದ ಮಹಾಪೀಡೆ, ಸಮಷ್ಟಿ-ವ್ಯಷ್ಟಿ ಎಂದರೆ ಗ್ರಹಗಳ ವಿವಿಧಸಂಯೋಗಗಳಿಂದುಂಟಾಗುವ ರಾಷ್ಟ್ರೀಯ ಅಥವಾ ವೈಯಕ್ತಿಕಗ್ರಹಪೀಡೆ–ಇವುಗಳೆಲ್ಲದರ ಪರಿಹಾರಕ್ಕಾಗಿ ಆದಿ ಅಥವಾ ಬಾಲಕಾಂಡವನ್ನು ಪಾರಾಯಣಮಾಡಬೇಕು.

ಪುತ್ರಜನ್ಮ-ವಿವಾಹಾದಿ ಮಂಗಳಪ್ರಸಂಗಗಳಲ್ಲಿ, ಗುರುಗಳ ದರ್ಶನ, ಪಾದಪೂಜನ-ಜಯಂತಿಗಳ ಶುಭ ಅವಸರಗಳಲ್ಲಿ ಅಯೋಧ್ಯಾಕಾಂಡದ ಪಾರಾಯಣವು ಕರ್ಮಸಮೃದ್ಧಿಯನ್ನುಂಟುಮಾಡಿ ಎಲ್ಲ ವಿಧ ಮಂಗಳವನ್ನೂ ಉಂಟುಮಾಡುತ್ತದೆ.

ಅರಣ್ಯಾದಿಗಳಲ್ಲಿ ಕಷ್ಟಪರಿಸ್ಥಿತಿಯಲ್ಲಿರುವಾಗ, ರಾಜಕೋಪಕ್ಕೆ ಗುರಿಯಾಗಿರುವ ಸಂದರ್ಭಗಳಲ್ಲಿ, ಬೆಂಕಿ-ನೀರು ಇತ್ಯಾದಿಗಳಿಂದ ಉಂಟಾದ ಕಷ್ಟಕಾಲಗಳಲ್ಲಿ ಅರಣ್ಯಕಾಂಡವನ್ನು ಪಠಿಸಬೇಕು.

ಸ್ನೇಹಿತರನ್ನು ಗಳಿಸಬೇಕಾದ ಸಮಯದಲ್ಲಿ, ಕಳೆದುಹೋದ ದ್ರವ್ಯಗಳ ಪುನರ್ಲಾಭಕ್ಕಾಗಿ ಕಿಷ್ಕಿಂಧಾಕಾಂಡದ ಪಠಣ-ಶ್ರವಣಗಳು ಉದ್ದೇಶಿತ ಫಲವನ್ನು ಕೊಡುತ್ತವೆ.

ಶ್ರಾದ್ಧಾದಿಗಳ ಮತ್ತು ದೇವಕಾರ್ಯ—ಎಂದರೆ ಹಬ್ಬ-ಹರಿದಿನಗಳ ಸಂದರ್ಭದಲ್ಲಿ ಸುಂದರಕಾಂಡವನ್ನು ಪಠಿಸಬೇಕು. ಶತ್ರುಗಳನ್ನು ಜಯಿಸಲು, ಲೋಕಾಪವಾದ ಅಥವಾ ಮಿಥ್ಯಾಪವಾದದಿಂದ ಸಂಕಟಕ್ಕೊಳಗಾದಾಗ, ಉತ್ಸಾಹವರ್ಧನೆಗಾಗಿ ಲಂಕಾಕಾಂಡ ಅಥವಾ ಯುದ್ಧಕಾಂಡದ ಪಠಣ ಅಥವಾ ಶ್ರವಣಾದಿಗಳು ಹೇಳಲ್ಪಟ್ಟಿವೆ.

ಆನಂದಕಾರ್ಯ—ಎಂದರೆ ಎಲ್ಲ ಶುಭಕಾರ್ಯಗಳಲ್ಲಿ, ಯಾತ್ರಾಕಾಲದಲ್ಲಿ ಉತ್ತರಕಾಂಡದ ಪಠಣ-ಶ್ರವಣಾದಿಗಳು ಐಹಿಕಾಮುಷ್ಮಿಕಫಲಗಳನ್ನು ಕೊಡುತ್ತವೆ.

ಶ್ರೀಮದ್ರಾಮಾಯಣದ ಪಠಣ-ಶ್ರವಣಾದಿಗಳಿಂದ ಮೋಕ್ಷವನ್ನಪೇಕ್ಷಿಸುವವರು ಮೋಕ್ಷವನ್ನೂ, ಭಕ್ತಿಯನ್ನಪೇಕ್ಷಿಸುವವರು ಭಗವದ್ಭಕ್ತಿಯನ್ನೂ, ಬ್ರಹ್ಮತತ್ತ್ವವಿಚಾರಣೆಗೆ ಪೂರಕವಾದ ಜ್ಞಾನವನ್ನೂ ಪಡೆಯುತ್ತಾರೆ.

ಶ್ರೀಮದ್ರಾಮಾಯಣದ ಫಲೋದ್ದೇಶಿತಪಾರಾಯಣಕ್ಕಾಗಿ ವಿವಿಧಕಾಂಡಗಳ ಋಷಿ-ನ್ಯಾಸಾದಿಗಳು

ಬಾಲಕಾಂಡ

ಅಸ್ಯ ಶ್ರೀ ಬಾಲಕಾಂಡಮಹಾಮಂತ್ರಸ್ಯ ಋಷ್ಯಶೃಙ್ಗಃಋಷಿಃ। ಅನುಷ್ಟುಪ್ ಛನ್ದಃ। ದಾಶರಥಿಃ ಪರಮಾತ್ಮಾ ದೇವತಾ। ರಾಂ ಬೀಜಮ್

ನಮಃ ಶಕ್ತಿಃ । ರಾಮಾಯೇತಿ ಕೀಲಕಂ। ಶ್ರೀರಾಮಪ್ರೀತ್ಯರ್ಥೇ ಬಾಲಕಾಂಡಪಾರಾಯಣೇ ವಿನಿಯೋಗಃ ॥

ಋಷ್ಯಶೃಙ್ಗಋಷಯೇ ನಮಃ ಶಿರಸಿ । ಅನುಷ್ಟುಪ್ ಛನ್ದಸೇ ನಮಃ ಮುಖೇ। ದಾಶರಥಿಃಪರಮಾತ್ಮಾದೇವತಾಯೈ ನಮಃ ಹೃದಿ । ರಾಂ ಬೀಜಾಯ ನಮಃ ಗುಹ್ಯೇ। ನಮಃ ಶಕ್ತಯೇ ನಮಃ ಪಾದಯೋಃ । ರಾಮಾಯ ಕೀಲಕಾಯ ನಮಃ ಸರ್ವಾಙ್ಗೇ ॥

ಸುಪ್ರಸನ್ನಾಯ ಅಙ್ಗುಷ್ಠಾಭ್ಯಾಂ ನಮಃ । ಶಾನ್ತಮನಸೇ ತರ್ಜನೀಭ್ಯಾಂ ನಮಃ । ಸತ್ಯಸಂಧಾಯ ಮಧ್ಯಮಾಭ್ಯಾಂ ನಮಃ । ಜಿತೇನ್ದ್ರಿಯಾಯ ಅನಾಮಿಕಾಭ್ಯಾಂ ನಮಃ । ಧರ್ಮಜ್ಞಾಯ ನಯಸಾರಜ್ಞಾಯ ಕನಿಷ್ಠಿಕಾಭ್ಯಾಂ ನಮಃ । ರಾಜ್ಞೇ ದಾಶರಥಯೇ ಜಯಿನೇ ಕರತಲಕರಪೃಷ್ಠಾಭ್ಯಾಂ ನಮಃ ॥

ಸುಪ್ರಸನ್ನಾಯ ಹೃದಯಾಯ ನಮಃ । ಶಾನ್ತಮನಸೇ ಶಿರಸೇ ಸ್ವಾಹಾ। ಸತ್ಯಸಂಧಾಯ ಶಿಖಾಯೈ ವಷಟ್ । ಜಿತೇನ್ದ್ರಿಯಾಯ ಕವಚಾಯ ಹುಂ। ಧರ್ಮಜ್ಞಾಯ ನಯಸಾರಜ್ಞಾಯ ನೇತ್ರತ್ರಯಾಯ ವೌಷಟ್ । ರಾಜ್ಞೇ ದಾಶರಥಯೇ ಜಯಿನೇ ಅಸ್ತ್ರಾಯ ಫಟ್ ।

ಭೂರ್ಭುವಸ್ಸುವರೋಂ ಇತಿ ದಿಗ್ಬಂಧಃ

ಧ್ಯಾನಮ್ :-

ಶ್ರೀರಾಮಮಾಶ್ರಿತಜನಾಮರಭೂರುಹೇಶ-
ಮಾನನ್ದಶುದ್ಧಮಖಿಲಾಮರವನ್ದಿತಾಂಘ್ರಿಮ್ ।
ಸೀತಾಙ್ಗನಾಸುಮಿಲಿತಂ ಸತತಂ ಸುಮಿತ್ರಾ-
ಪುತ್ರಾನ್ವಿತಂ ಧೃತಧನುಃಶರಮಾದಿದೇವಮ್ ॥

ಅನಂತರ ಈ ಕೆಳಕಂಡ ಮಂತ್ರದಿಂದ ಶ್ರೀರಾಮಚಂದ್ರನನ್ನು ಪೂಜಿಸಿ ಇದೇ ಮಂತ್ರದಿಂದ ಅಥವಾ ಶ್ರೀರಾಮಮಂತ್ರದಿಂದ ಸಂಪುಟೀಕರಣಮಾಡಿ ಬಾಲಕಾಂಡವನ್ನು ಪಾರಾಯಣಮಾಡಬೇಕು.

ಸುಪ್ರಸನ್ನಃ ಶಾನ್ತಮನಾಃ ಸತ್ಯಸಂಧೋ ಜಿತೇಂದ್ರಿಯಃ ।
ಧರ್ಮಜ್ಞೋ ನಯಸಾರಜ್ಞೋ ರಾಜಾ ದಾಶರಥಿರ್ಜಯೀ ॥

ಫಲ–ಗ್ರಹಶಾನ್ತಿ, ಈತಿ-ಭೀತಿಶಾನ್ತಿ ಹಾಗೂ ಪುತ್ರಪ್ರಾಪ್ತಿ.

ಅಯೋಧ್ಯಾಕಾಂಡ

ಅಸ್ಯ ಶ್ರೀ ಅಯೋಧ್ಯಾಕಾಂಡಮಹಾಮಂತ್ರಸ್ಯ । ವಸಿಷ್ಠಋಷಿಃ ಅನುಷ್ಟುಪ್ ಛನ್ದಃ। ಭರತೋ ದಾಶರಥಿಃ ಪರಮಾತ್ಮಾದೇವತಾ । ಭಂ ಬೀಜಂ । ನಮಃ ಶಕ್ತಿಃ। ಭರತಾಯೇತಿ ಕೀಲಕಂ । ಮಮ ಭರತಪ್ರಸಾದ ಸಿದ್ಧ್ಯರ್ಥೇ ಅಯೋಧ್ಯಾಕಾಂಡಪಾರಾಯಣೇ ವಿನಿಯೋಗಃ । ವಸಿಷ್ಠ ಋಷಯೇ ನಮಃ ಶಿರಸಿ । ಅನುಷ್ಟುಪ್ ಛನ್ದಸೇ ನಮಃ ಮುಖೇ । ದಾಶ ರಥಿರ್ಭರತಃಪರಮಾತ್ಮಾದೇವತಾಯೈ ನಮಃ ಹೃದಿ । ಭಂ ಬೀಜಾಯ ನಮಃ ಗುಹ್ಯೇ । ನಮಃ ಶಕ್ತಯೇ ನಮಃ ಪಾದಯೋಃ। ಭರತಾಯ ಕೀಲಕಾಯ ನಮಃ ಸರ್ವಾಙ್ಗೇ ॥

ಭರತಾಯ ನಮಸ್ತಸ್ಮೈ ಅಙ್ಗುಷ್ಠಾಭ್ಯಾಂ ನಮಃ। ಸಾರಜ್ಞಾಯ ತರ್ಜನೀಭ್ಯಾಂನಮಃ । ಮಹಾತ್ಮನೇ ಮಧ್ಯಮಾಭ್ಯಾಂ ನಮಃ ।ತಾಪ ಸಾಯ ಅನಾಮಿಕಾಭ್ಯಾಂ ನಮಃ। ಅತಿಶಾನ್ತಾಯ ಕನಿಷ್ಠಿಕಾಭ್ಯಾಂ ನಮಃ। ಶತ್ರುಘ್ನಸಹಿತಾಯ ಕರತಲಕರಪೃಷ್ಠಾಭ್ಯಾಂ ನಮಃ। ಭರತಾಯ ನಮ ಸ್ತಸ್ಮೈ ಹೃದಯಾಯ ನಮಃ ।ಸಾರಜ್ಞಾಯ ಶಿರಸೇ ಸ್ವಾಹಾ ।ಮಹಾತ್ಮನೇ ಶಿಖಾಯೈ ವಷಟ್ ।ತಾಪಸಾಯ ಕವಚಾಯ ಹುಮ್ ।ಅತಿಶಾನ್ತಾಯ ನೇತ್ರತ್ರಯಾಯ ವೌಷಟ್ । ಶತ್ರುಘ್ನಸಹಿತಾಯ ಅಸ್ತ್ರಾಯ ಫಟ್ ।

ಭೂರ್ಭುವಸ್ಸುವರೋಮಿತಿ ದಿಗ್ಬಂಧಃ ।

ಧ್ಯಾನಮ್ :-

ಶ್ರೀರಾಮಪಾದದ್ವಯಪಾದುಕಾನ್ತಸಂಸಕ್ತಚಿತ್ತಂ ಕಮಲಾಯತಾಕ್ಷಮ್ ।
ಶ್ಯಾಮಂ ಪ್ರಸನ್ನವದನಂ ಕಮಲಾವದಾತಶತ್ರುಘ್ನಯುಕ್ತಮನಿಶಂ
ಭರತಂ ನಮಾಮಿ ॥

ಅನಂತರ ಕೆಳಗೆ ಕೊಟ್ಟಿರುವ ಮಂತ್ರದಿಂದ ಭರತನನ್ನು ಪಂಚೋಪ ಚಾರಗಳಿಂದ ಪೂಜಿಸಬೇಕು.

ಭರತಾಯ ನಮಸ್ತಸ್ಮೈ ಸಾರಜ್ಞಾಯ ಮಹಾತ್ಮನೇ ।
ತಾಪಸಾಯಾತಿಶಾನ್ತಾಯ ಶತ್ರುಘ್ನಸಹಿತಾಯ ಚ ॥

ಇದೇ ಮಂತ್ರದಿಂದ ಸಂಪುಟೀಕರಣಮಾಡಿ ಅಯೋಧ್ಯಾಕಾಂಡವನ್ನು ಪಠಿಸಬೇಕು. ಫಲ :- ಲಕ್ಷ್ಮೀ (ಐಶ್ವರ್ಯ) ಪ್ರಾಪ್ತಿ.

ಅರಣ್ಯಕಾಂಡ

ಅಸ್ಯ ಶ್ರೀ ಅರಣ್ಯಕಾಂಡಮಹಾಮಂತ್ರಸ್ಯ । ಭಗವಾನ್ ಋಷಿಃ । ಅನುಷ್ಟುಪ್ ಛನ್ದಃ । ಶ್ರೀರಾಮೋ ದಾಶರಥಿಃ ಪರಮಾತ್ಮಾ ಮಹೇನ್ದ್ರೋ ದೇವತಾ । ಈಂ ಬೀಜಂ । ನಮಃ ಶಕ್ತಿಃ । ಇಂದ್ರಾಯೇತಿ ಕೀಲಕಂ । ಇಂದ್ರ ಪ್ರಸಾದಸಿದ್ಧ್ಯರ್ಥೇ ಅರಣ್ಯಕಾಂಡಪಾರಾಯಣೇ ಜಪೇ ವಿನಿಯೋಗಃ। ಭಗವದೃಷಯೇ ನಮಃ ಶಿರಸಿ ।ಅನುಷ್ಟುಪ್ ಛನ್ದಸೇ ನಮಃ ಮುಖೇ ।ದಾಶರಥಿ ಶ್ರೀರಾಮಃಪರಮಾತ್ಮಾಮಹೇಂದ್ರದೇವತಾಯೈನಮಃ ಹೃದಿ ।ಈಂ ಬೀಜಾಯ ನಮಃ ಗುಹ್ಯೇ । ನಮಃ ಶಕ್ತಯೇ ನಮಃ ಪಾದಯೋಃ । ಇಂದ್ರಾಯ ಕೀಲಕಾಯ ನಮಃ ಸರ್ವಾಙ್ಗೇ ॥

ಸಹಸ್ರನಯನಾಯ ಅಂಗುಷ್ಠಾಭ್ಯಾಂ ನಮಃ । ದೇವಾಯ ತರ್ಜ-ನೀಭ್ಯಾಂ ನಮಃ । ಸರ್ವದೇವನಮಸ್ಕೃತಾಯ ಮಧ್ಯಮಾಭ್ಯಾಂ ನಮಃ । ದಿವ್ಯ ವಜ್ರಧರಾಯ ಅನಾಮಿಕಾಭ್ಯಾಂ ನಮಃ ।ಮಹೇಂದ್ರಾಯ ಕನಿಷ್ಠಿಕಾಭ್ಯಾಂ ನಮಃ। ಶಚೀಪತಯೇ ಕರತಲಕರಪೃಷ್ಠಾಭ್ಯಾಂ ನಮಃ ।

ಸಹಸ್ರನಯನಾಯ ಹೃದಯಾಯ ನಮಃ । ದೇವಾಯ ಶಿರಸೇ ಸ್ವಾಹಾ ।ಸರ್ವದೇವನಮಸ್ಕೃತಾಯ ಶಿಖಾಯೈ ವಷಟ್ ।ದಿವ್ಯವಜ್ರ ಧರಾಯ ಕವಚಾಯ ಹುಂ । ಮಹೇಂದ್ರಾಯ ನೇತ್ರತ್ರಯಾಯ ವೌಷಟ್ । ಶಚೀಪತಯೇ ಅಸ್ತ್ರಾಯಫಟ್ । ಭೂರ್ಭುವಸ್ಸುವರೋಮಿತಿ ದಿಗ್ಬನ್ಧಃ ।

ಧ್ಯಾನಮ್ :-

ಶಚೀಪತಿಂ ಸರ್ವಸುರೇಶವನ್ದ್ಯಂ ಸರ್ವಾರ್ತಿಹರ್ತಾರಮಚಿನ್ತ್ಯಶಕ್ತಿಮ್ ।
ಶ್ರೀರಾಮಸೇವಾನಿರತಂ ಮಹಾನ್ತಂ ವನ್ದೇ ಮಹೇನ್ದ್ರಂ
ಧೃತವಜ್ರಮೀಡ್ಯಮ್ ॥

ಈ ಕೆಳಗೆ ಕೊಟ್ಟಿರುವ ಮಂತ್ರದಿಂದ ಇಂದ್ರನನ್ನು ಪೂಜಿಸುವುದು.

ಸಹಸ್ರನಯನಂ ದೇವಂ ಸರ್ವದೇವನಮಸ್ಕೃತಮ್ ।
ದಿವ್ಯವಜ್ರಧರಂ ವನ್ದೇ ಮಹೇಂದ್ರಂ ಚ ಶಚೀಪತಿಮ್ ॥

ಇದೇ ಮಂತ್ರದಿಂದ ಸಂಪುಟೀಕರಣಮಾಡಿ ಅರಣ್ಯಕಾಂಡವನ್ನು ಪಠಿಸುವುದರ ಫಲ–ನಷ್ಟದ್ರವ್ಯಪ್ರಾಪ್ತಿ ಇತ್ಯಾದಿ.

(ಮುಂದುವರಿಯುವುದು.)

ಶ್ರೀಮಹಾಗಣಪತಯೇ ನಮಃ ಶ್ರೀಸರಸ್ವತ್ಯೈ ನಮಃ ಶ್ರೀಸದ್ಗುರವೇ ನಮಃ

ಶ್ರೀಮದ್ವಾಲ್ಮೀಕಿರಾಮಾಯಣದ ಮಹಿಮೆ

ಸ್ಕಾಂದಪುರಾಣ-ಉತ್ತರಖಂಡ
೧ನೆಯ ಅಧ್ಯಾಯ

ಕಲಿಯುಗದ ಸ್ಥಿತಿ : ಕಲಿಯುಗದಲ್ಲಿ ಮಾನವನ ಉದ್ಧಾರದ ಉಪಾಯ : ರಾಮಾಯಣಪಾರಾಯಣದ ಮಹಿಮೆ : ರಾಮಾಯಣಶ್ರವಣಕ್ಕೆ ಪ್ರಶಸ್ತವಾದ ಕಾಲ

ಸೂತರು ಹೇಳುತ್ತಾರೆ :

ಶ್ರೀರಾಮಃ ಶರಣಂ ಸಮಸ್ತಜಗತಾಂ ರಾಮಂ ವಿನಾ ಕಾ ಗತಿಃ
ರಾಮೇಣ ಪ್ರತಿಹನ್ಯತೇ ಕಲಿಮಲಂ ರಾಮಾಯ ಕಾರ್ಯಂ ನಮಃ ।
ರಾಮಾತ್ ತ್ರಸ್ಯತಿ ಕಾಲಭೀಮಭುಜಗೋ ರಾಮಸ್ಯ ಸರ್ವಂ ವಶೇ
ರಾಮೇ ಭಕ್ತಿರಖಣ್ಡಿತಾ ಭವತು ಮೇ ರಾಮ ತ್ವಮೇವಾಶ್ರಯಃ ॥೧॥

"ಶ್ರೀರಾಮಚಂದ್ರನು ಸಮಸ್ತಜನರಿಗೂ ಆಶ್ರಯವನ್ನು ಕೊಡತಕ್ಕವನು. ರಾಮನನ್ನು ಬಿಟ್ಟರೆ ಮನುಷ್ಯರ ಉದ್ಧಾರಕ್ಕೆ ಬೇರೆ ಯಾವ ಮಾರ್ಗವಿದೆ? ಶ್ರೀರಾಮನಿಂದ ಕಲಿಯುಗಕ್ಕೆ ಸಂಬಂಧಿಸಿದ ಸಮಸ್ತದೋಷ ಗಳೂ ಪರಿಹಾರವಾಗುತ್ತವೆ. ಅಂತಹ ರಾಮಚಂದ್ರನಿಗೆ ನಮಸ್ಕರಿಸಬೇಕಾ ದುದು ಸಮಸ್ತರ ಕರ್ತವ್ಯವೂ ಆಗಿದೆ. ರಾಮನ ದೆಸೆಯಿಂದ ಭಯಂಕರ ಸರ್ಪರೂಪನಾದ ಕಾಲನೂ ಭಯಗೊಳ್ಳುತ್ತಾನೆ. ಜಗತ್ತಿನಲ್ಲಿರುವ ಸಮಸ್ತವೂ ಶ್ರೀರಾಮನ ವಶದಲ್ಲಿಯೇ ಇದೆ. ಅಂತಹ ಶ್ರೀರಾಮನಲ್ಲಿ ನನ್ನ ಭಕ್ತಿಯು ಅಖಂಡಿತವಾಗಿರಲಿ. (ನಿರಂತರವಾಗಿರಲಿ.) ಹೇ ಶ್ರೀರಾಮ! ನೀನೇ ನನಗೆ ಪರಮಾಶ್ರಯನು.

ಚಿತ್ರಕೂಟಾಲಯಂ ರಾಮಮಿನ್ದಿರಾನನ್ದಮನ್ದಿರಮ್ ।
ವನ್ದೇಽಹಂ ಪರಮಾನನ್ದಂ ಭಕ್ತಾನಾಮಭಯಪ್ರದಮ್ ॥೨॥

ಚಿತ್ರಕೂಟನಿವಾಸಿಯಾದ, ಲಕ್ಷ್ಮಿಗೆ (ಸೀತಾದೇವಿಗೆ) ಆನಂದಮಂದಿರನಾಗಿರುವ, ಭಕ್ತರಿಗೆ ಅಭಯದಾಯಕನಾದ, ಪರಮಾನಂದಸ್ವರೂಪನಾದ ಶ್ರೀರಾಮಚಂದ್ರನನ್ನು ನಮಸ್ಕರಿಸುತ್ತೇನೆ.

ಬ್ರಹ್ಮವಿಷ್ಣುಮಹೇಶಾದ್ಯಾ ಯಸ್ಯಾಂಶಾ ಲೋಕಸಾಧಕಾಃ ।
ನಮಾಮಿ ದೇವಂ ಚಿದ್ರೂಪಂ ವಿಶುದ್ಧಂ ಪರಮಂ ಭಜೇ ॥೩॥

ಸಮಸ್ತಜಗತ್ತಿನ ಅಥವಾ ಸಮಸ್ತಜನರ ಮನೋರಥಗಳನ್ನು ಸಾಧಿಸಿಕೊಡುವ ಅಥವಾ ಸೃಷ್ಟಿ-ಸ್ಥಿತಿ-ಲಯಗಳ ಮೂಲಕವಾದ ಲೋಕ ವ್ಯವಹಾರವನ್ನು ಸಾಧಿಸುವ ಬ್ರಹ್ಮ-ವಿಷ್ಣು-ಮಹೇಶ್ವರಾದಿ ದೇವತೆಗಳು ಯಾವನ ಅಂಶದಿಂದ ಹುಟ್ಟಿರುವರೋ–ಅಂತಹ ಪರಮಶುದ್ಧನಾದ, ಸಚ್ಚಿದಾನಂದಮಯನಾದ, ಪರಮಾತ್ಮನಾದ ಶ್ರೀರಾಮಚಂದ್ರಮೂರ್ತಿಯನ್ನು ನಮಿಸುತ್ತೇನೆ ಮತ್ತು ಭಜಿಸುತ್ತೇನೆ.”

ಋಷಿಗಳು ಹೇಳುತ್ತಾರೆ :

“ಪೂಜ್ಯರೇ! ವಿದ್ವಾಂಸರಾದ ನೀವು ನಾವು ಕೇಳಿರುವ ಎಲ್ಲ ಪ್ರಶ್ನೆಗಳಿಗೂ ಸಮಂಜಸವಾಗಿ ಉತ್ತರಿಸಿರುವಿರಿ. ಸಂಸಾರವೆಂಬ ಹಗ್ಗದಿಂದ ಕಟ್ಟಲ್ಪಟ್ಟಿರುವ ಜೀವರುಗಳಿಗೆ ಅನೇಕವಿಧವಾದ ದುಃಖಗಳು ಒದಗಿ ಬರುತ್ತವೆ. ಕಲಿಯುಗದಲ್ಲಿ ವೇದೋಕ್ತವಾದ ಮಾರ್ಗಗಳೂ ನಾಶಹೊಂದು ತ್ತವೆಯೆಂದು ನೀವೇ ಹೇಳಿರುವಿರಿ. ಈ ಸಮಯದಲ್ಲಿ ಸಂಸಾರವೆಂಬ ಹಗ್ಗವನ್ನು ಕತ್ತರಿಸಿಹಾಕುವವರು ಅಥವಾ ಸಂಸಾರಬಂಧನದಿಂದ ಜೀವರನ್ನು ಮುಕ್ತಿಗೊಳಿಸುವವರು ಯಾರಿದ್ದಾರೆ?

ಪೂಜ್ಯರೇ! ಅಧರ್ಮದಲ್ಲಿಯೇ ನಿರತರಾಗಿರುವವರಿಗೆ ಪ್ರಾಪ್ತ ವಾಗುವ ಯಾತನೆಗಳನ್ನು ನೀವು ಹೇಳಿರುವಿರಿ. ‘ಘೋರವಾದ ಕಲಿಯುಗವು ಸನ್ನಿಹಿತವಾದನಂತರ ವೇದಮಾರ್ಗವು ಬಹಿಷ್ಕೃತವಾಗುತ್ತದೆ. ನಾಸ್ತಿಕರ ಮತವು ಸರ್ವತ್ರ ವ್ಯಾಪಿಸುತ್ತದೆ”–ಎಂದು ಸಾಮಾನ್ಯವಾಗಿ ಎಲ್ಲರೂ ಹೇಳುತ್ತಿದ್ದಾರೆ.

ಕಾಮಾರ್ತಾ ಹ್ರಸ್ವದೇಹಾಶ್ಚ ಲುಬ್ಧಾ ಅನ್ಯೋನ್ಯತತ್ಪರಾಃ ।
ಕಲೌ ಸರ್ವೇ ಭವಿಷ್ಯನ್ತಿ ಸ್ವಲ್ಪಾಯುರ್ಬಹುಪುತ್ರಕಾಃ ॥೭॥

ಕಲಿಯುಗದಲ್ಲಿ ಎಲ್ಲರೂ ಕಾಮಪೀಡಿತರಾಗಿರುತ್ತಾರೆ. ಕುಳ್ಳರಾಗಿರುತ್ತಾರೆ. ಲುಬ್ಧರಾಗಿ ಯಾವಾಗಲೂ ಪರಸ್ಪರವಾದ ಹಿತಾಸಕ್ತಿಗಳಲ್ಲಿಯೇ ಆಸಕ್ತರಾಗಿರುತ್ತಾರೆ. ಧರ್ಮದ ಮತ್ತು ಈಶ್ವರನ ಆಶ್ರಯವನ್ನು ದೂರೀಕರಿಸಿರುತ್ತಾರೆ. ಅಲ್ಪಾಯುಗಳೂ ಬಹುಪುತ್ರವಂತರೂ ಆಗಿರುತ್ತಾರೆ.

ಸ್ತ್ರಿಯಃ ಸ್ವಪೋಷಣಪರಾ ವೇಶ್ಯಾಚರಣತತ್ಪರಾಃ ।
ಪತಿವಾಕ್ಯಮನಾದೃತ್ಯ ಸದಾನ್ಯಗೃಹತತ್ಪರಾಃ ॥೮॥

ದುಃಶೀಲೇಷು ಕರಿಷ್ಯನ್ತಿ ಪುರುಷೇಷು ಸದಾ ಸ್ಪೃಹಾಮ್ ॥೯॥

ಕಲಿಯುಗದಲ್ಲಿ ಸ್ತ್ರೀಯರು ಯಾವಾಗಲೂ ತಮ್ಮ ಪೋಷಣೆಯಲ್ಲಿಯೇ ಆಸಕ್ತರಾಗಿರುತ್ತಾರೆ. ವೇಶ್ಯೆಯರಿಗೆ ಸಮಾನವಾದ ಆಚಾರ-ವಿಚಾರವುಳ್ಳವರಾಗಿರುತ್ತಾರೆ. ಪತಿಯ ಆಜ್ಞೆಯನ್ನು ಅನಾದರಿಸುತ್ತಾ ಇತರರ ಮನೆಗಳವರ ವಿಷಯದಲ್ಲಿಯೇ ಆಸಕ್ತರಾಗಿರುತ್ತಾರೆ. ಸರ್ವಕಾಲದಲ್ಲಿಯೂ ದುರಾಚಾರಿಗಳಾದ ಮನುಷ್ಯರೊಡನೆ ಸೇರುವ ಆಶೆಯುಳ್ಳವರಾಗಿರುತ್ತಾರೆ.

ಅಸದ್ವಾರ್ತಾ ವದಿಷ್ಯನ್ತಿ ಪುರುಷೇಷು ಕುಲಾಙ್ಗನಾಃ ।
ಪರುಷಾನೃತಭಾಷಿಣ್ಯೋ ದೇಹಸಂಸ್ಕಾರವರ್ಜಿತಾಃ ।
ವಾಚಾಲಾಶ್ಚ ಭವಿಷ್ಯನ್ತಿ ಕಲೌ ಪ್ರಾಯೇಣ ಯೋಷಿತಃ ॥೧೦॥

ಉತ್ತಮಕುಲದಲ್ಲಿ ಹುಟ್ಟಿದ ಸ್ತ್ರೀಯರು ಕೂಡ ಪುರುಷರೊಡನೆ ಅಶ್ಲೀಲವಾದ ಮಾತುಗಳನ್ನಾಡುತ್ತಾರೆ. ಕಠೋರವಾಗಿ ಮಾತನಾಡುತ್ತಾರೆ. ಸುಳ್ಳುಹೇಳುತ್ತಾರೆ. ಕಾಲಾನುಗುಣವಾಗಿ ಆಗಬೇಕಾದ ದೇಹಸಂಸ್ಕಾರಗಳೊಂದೂ ಅವರಿಗೆ ಆಗುವುದಿಲ್ಲ. ಪ್ರಾಯಶಃ ಕಲಿಯುಗದಲ್ಲಿ ಸ್ತ್ರೀಯರು ಮಾತಿನ ಮಲ್ಲಿಯರಾಗಿರುತ್ತಾರೆ.

ಭಿಕ್ಷವಶ್ಚಾಪಿ ಮಿತ್ರಾದಿಸ್ನೇಹಸಮ್ಬನ್ಧಯನ್ತ್ರಿತಾಃ ।
ಅನ್ನೋಪಾಧಿನಿಮಿತ್ತೇನ ಶಿಷ್ಯಾನ್ಬಧ್ನನ್ತಿ ಲೋಲುಪಾಃ ॥೧೧॥

ಸಂನ್ಯಾಸಿಗಳು ಕೂಡ ಮೈತ್ರಿಯೇ ಮೊದಲಾದ ಸ್ನೇಹಸಂಬಂಧದಿಂದ

ಬಂಧಿತರಾಗಿರುತ್ತಾರೆ. ಭಿಕ್ಷೆಯನ್ನೇ ನೆಪಮಾಡಿಕೊಂಡು ಆಸೆಬಡುಕರಾಗಿ ಶಿಷ್ಯರನ್ನು ಸಂಗ್ರಹಿಸುತ್ತಾರೆ.

ಉಭಾಭ್ಯಾಮಪಿ ಪಾಣಿಭ್ಯಾಂ ಶಿರಃ ಕಣ್ಡೂಯನಂ ಸ್ತ್ರಿಯಃ |
ಕುರ್ವನ್ತ್ಯೋ ಗೃಹಭರ್ತೄಣಾಮಾಜ್ಞಾಂ ಭೇತ್ಸ್ಯನ್ತ್ಯತನ್ದ್ರಿತಾಃ ||೧೨||

ಕಲಿಯುಗದಲ್ಲಿ ಸ್ತ್ರೀಯರು ಎರಡು ಕೈಗಳಿಂದಲೂ ತಲೆಯನ್ನು ಕೆರೆದು ಕೊಳ್ಳುತ್ತಾ ಮನೆಯ ಯಜಮಾನರ ಆಜ್ಞೆಯನ್ನು ದಿಟ್ಟತನದಿಂದ ಉಲ್ಲಂಘಿಸುತ್ತಾರೆ.

ಪಾಖಣ್ಡಾಲಾಪನಿರತಾಃ ಪಾಖಣ್ಡಜನಸಙ್ಗಿನಃ |
ಯದಾ ದ್ವಿಜಾ ಭವಿಷ್ಯನ್ತಿ ತದಾ ವೃದ್ಧಿಂ ಗತಃ ಕಲಿಃ ||೧೩||

ಯಾವಾಗ ಬ್ರಾಹ್ಮಣರು ನಾಸ್ತಿಕರ ಜೊತೆಯಲ್ಲಿದ್ದುಕೊಂಡು ಅವರೊಡನೆ ಮಾತುಕತೆಗಳಲ್ಲಿ ನಿರತರಾಗಿರುವರೋ–ಆಗ ಕಲಿಯುಗದ ಪ್ರಭಾವವು ಅಧಿಕವಾಗುತ್ತದೆ.

ಬ್ರಾಹ್ಮಣೋತ್ತಮ! ಇಂತಹ ಅಶುಭಲಕ್ಷಣಗಳುಳ್ಳ, ಘೋರವಾದ ಕಲಿಯುಗದಲ್ಲಿರುವ ಮನಃಶುದ್ಧಿಯಿಲ್ಲದ ಪಾಪಕರ್ಮಿಗಳಾದ ಮನುಷ್ಯರಿಗೆ ಅವರ ಪಾಪಗಳನ್ನು ತೊಳೆಯಲು ಯಾವ ಪ್ರಾಯಶ್ಚಿತ್ತವಿದೆ? ಜಗದ್ಗುರು ವಾದ, ದೇವೇಶನಾದ, ದೇವದೇವನಾದ ಶ್ರೀರಾಮಚಂದ್ರನು ಹೇಗೆ ತೃಪ್ತ ನಾಗುತ್ತಾನೆ? ತೃಪ್ತನಾಗಿ ಇಂತಹ ಪಾಪಕರ್ಮಿಗಳ ಪಾಪವನ್ನು ಹೇಗೆ ಹೋಗಲಾಡಿಸುತ್ತಾನೆ? ಧರ್ಮಾತ್ಮರಲ್ಲಿ ಶ್ರೇಷ್ಠರಾದ ಸೂತರೇ! ನೀವು ಎಲ್ಲವನ್ನೂ ತಿಳಿದಿರುವಿರಿ. ಆದುದರಿಂದ ಈ ವಿಷಯವನ್ನು ದಯಮಾಡಿ ಹೇಳಿರಿ. ಮುನಿಶ್ರೇಷ್ಠರೇ! ನೀವು ಈ ವಿಷಯವನ್ನು ಆಮೂಲಾಗ್ರವಾಗಿ ಹೇಳಬೇಕು. ನಿಮ್ಮ ವಚನಾಮೃತವನ್ನು ಕೇಳುವುದರಿಂದ ಯಾರಿಗೆ ತಾನೇ ಸಂತೋಷವಾಗುವುದಿಲ್ಲ?”

ಸೂತರು ಹೇಳುತ್ತಾರೆ :

“ಋಷಿಸತ್ತಮರೇ! ಎಲ್ಲರೂ ಅವಧಾನಿಸಿರಿ. ನಿಮಗೆ ಇಷ್ಟವಾಗುವು ದನ್ನೇ ಹೇಳುತ್ತೇನೆ. ಮಹಾತ್ಮರಾದ ನಾರದರು ಮಹಾಕಾವ್ಯವಾದ ವೇದ ಸಮ್ಮತವಾಗಿರುವ ರಾಮಾಯಣವನ್ನು ಸನತ್ಕುಮಾರನಿಗೆ ಹೇಳಿದರು.

ರಾಮಾಯಣವು ಸಮಸ್ತಪಾಪಗಳ ವಿನಾಶಕವು. ದುಷ್ಟಗ್ರಹಗಳ ಬಾಧೆಯನ್ನೂ ನಿವಾರಿಸುತ್ತದೆ.

ದುಃಸ್ವಪ್ನನಾಶನಂ ಧನ್ಯಂ ಭುಕ್ತಿಮುಕ್ತಿಫಲಪ್ರದಮ್ ।
ರಾಮಚನ್ದ್ರಕಥೋಪೇತಂ ಸರ್ವಕಲ್ಯಾಣಸಿದ್ಧಿದಮ್ ॥೨೦॥

ಶ್ರೀರಾಮಚಂದ್ರನ ಕಥೆಯಿಂದ ಕೂಡಿರುವ ಈ ರಾಮಾಯಣವು ಕೆಟ್ಟ ಕನಸನ್ನು ಹೋಗಲಾಡಿಸುತ್ತದೆ. ಧನಲಾಭಕ್ಕೆ ನಿಮಿತ್ತವಾಗುತ್ತದೆ. ಐಹಿಕ ಭೋಗಗಳನ್ನೂ–ಆಮುಷ್ಮಿಕವಾದ ಮುಕ್ತಿಯನ್ನೂ ಕೊಡುತ್ತದೆ. ಹೆಚ್ಚೇನು ಹೇಳಲಿ? ರಾಮಾಯಣದ ಪಾರಾಯಣವು ಹೇಳುವವರಿಗೂ ಮತ್ತು ಕೇಳುವವರಿಗೂ ಸಮಸ್ತವಾದ ಮಂಗಳಕರವಾದ ಸಿದ್ಧಿಗಳನ್ನು ಒದಗಿಸಿ ಕೊಡುತ್ತದೆ.

ಧರ್ಮಾರ್ಥಕಾಮಮೋಕ್ಷಾಣಾಂ ಹೇತುಭೂತಂ ಮಹಾಫಲಮ್ ।
ಅಪೂರ್ವಪುಣ್ಯಫಲದಂ ಶೃಣುಧ್ವಂ ಸುಸಮಾಹಿತಾಃ ॥೨೧॥

ರಾಮಾಯಣಪಾರಾಯಣವು ಧರ್ಮಾರ್ಥ-ಕಾಮ-ಮೋಕ್ಷಗಳಿಗೆ ಕಾರಣಭೂತವಾದುದು. ಮಹಾಫಲವನ್ನು ಕೊಡತಕ್ಕುದು. ಅಪೂರ್ವವಾದ ಈ ಮಹಾಕಾವ್ಯವು ಪುಣ್ಯಮಯವಾದ ಫಲವನ್ನು ಕೊಡಲು ಸಮರ್ಥವಾಗಿದೆ. ಎಲ್ಲರೂ ಏಕಾಗ್ರತೆಯಿಂದ ಈ ಎಲ್ಲ ವಿಷಯಗಳನ್ನೂ ಕೇಳಿರಿ.

ಮಹಾಪಾತಕಯುಕ್ತೋ ವಾ ಯುಕ್ತೋ ವಾ ಸರ್ವಪಾಪಕೈಃ ।
ಶ್ರುತ್ವೈತದಾರ್ಷಂ ದಿವ್ಯಂ ಹಿ ಕಾವ್ಯಂ ಶುದ್ಧಿಮವಾಪ್ನುಯಾತ್ ॥

ರಾಮಾಯಣೇನ ವರ್ತನ್ತೇ ಸುತರಾಂ ಯೇ ಜಗದ್ಧಿತಾಃ ।
ತ ಏವ ಕೃತಕೃತ್ಯಾಶ್ಚ ಸರ್ವಶಾಸ್ತ್ರಾರ್ಥಕೋವಿದಾಃ ॥೨೩॥

ಮಹಾಪಾಪಗಳಿಂದ ಯಾರು ಕೂಡಿರುವರೋ ಅಥವಾ ಸಮಸ್ತಪಾಪಗಳನ್ನೂ ಯಾರು ಮಾಡಿರುವರೋ–ಅವರೆಲ್ಲರೂ ದಿವ್ಯವಾದ ಈ ಮಹಾಕಾವ್ಯವನ್ನು ಶ್ರವಣಮಾಡಿದ ಮಾತ್ರದಿಂದಲೇ ಪರಿಶುದ್ಧರಾಗುವರು. ಸಮಸ್ತ ಜಗತ್ತಿನ ಹಿತದಲ್ಲಿಯೇ ನಿರತರಾದ ಮನುಷ್ಯರು ರಾಮಾಯಣದಲ್ಲಿರುವ ನೀತಿಯನ್ನೇ ಅನುಸರಿಸಿ ವ್ಯವಹರಿಸಿದರೆ ಕೃತಕೃತ್ಯರಾಗುತ್ತಾರೆ. ಸರ್ವಶಾಸ್ತ್ರಾರ್ಥಗಳಲ್ಲಿ ವಿದ್ವಾಂಸರೂ ಆಗುತ್ತಾರೆ.

ಧರ್ಮಾರ್ಥಕಾಮಮೋಕ್ಷಾಣಾಂ ಸಾಧನಂ ಚ ದ್ವಿಜೋತ್ತಮಾಃ ।
ಶ್ರೋತವ್ಯಂ ಚ ಸದಾ ಭಕ್ತ್ಯಾ ರಾಮಾಯಣಪರಾಮೃತಮ್ ॥೨೪॥

ದ್ವಿಜಸತ್ತಮರೇ! ರಾಮಾಯಣವು ಧರ್ಮಾರ್ಥ-ಕಾಮ-ಮೋಕ್ಷಗಳಿಗೆ ಸಾಧನಭೂತವಾದುದು. ಶ್ರೇಷ್ಠವಾದ ಅಮೃತರೂಪವಾಗಿರುವ ಈ ರಾಮಾಯಣವನ್ನು ಸರ್ವಕಾಲದಲ್ಲಿಯೂ ಭಕ್ತಿಭಾವದಿಂದ ಕೇಳಬೇಕು.

ಪುರಾರ್ಜಿತಾನಿ ಪಾಪಾನಿ ನಾಶಮಾಯಾನ್ತಿ ಯಸ್ಯ ವೈ ।
ರಾಮಾಯಣೇ ಮಹಾಪ್ರೀತಿಸ್ತಸ್ಯ ವೈ ಭವತಿ ಧ್ರುವಮ್ ॥೨೫॥

ಯಾವನಿಗೆ ಪೂರ್ವಾರ್ಜಿತವಾದ ಪಾಪಗಳೆಲ್ಲವೂ ಹೋಗಿಬಿಟ್ಟಿರುವುವೋ–ಅಂತಹವನಿಗೆ ಮಾತ್ರವೇ ರಾಮಾಯಣದಲ್ಲಿ ಮಹಾಪ್ರೀತಿಯುಂಟಾಗುತ್ತದೆ. ಇದು ನಿಶ್ಚಯ.

ರಾಮಾಯಣೇ ವರ್ತಮಾನೇ ಪಾಪಪಾಶೇನ ಯನ್ತ್ರಿತಃ ।
ಅನಾದೃತ್ಯ ಅಸದ್ಗಾಥಾಸಕ್ತಬುದ್ಧಿಃ ಪ್ರವರ್ತತೇ ॥೨೬॥

ಇಂತಹ ಪರಮಪವಿತ್ರವಾದ, ಸರ್ವಪಾಪವಿನಾಶಕವಾದ, ಚತುರ್ವಿಧ ಪುರುಷಾರ್ಥಸಾಧಕವಾದ ರಾಮಾಯಣವು ಪ್ರಚಲಿತವಾಗಿರುವಾಗ ಪಾಪ ವೆಂಬ ಹಗ್ಗದಿಂದ ಕಟ್ಟಲ್ಪಟ್ಟ ಕಾಪುರುಷನು ರಾಮಾಯಣವನ್ನು ಅನಾದರಿಸಿ ಕಾಮಪ್ರಚೋದಕವಾದ ಕಥೆ-ಕಾದಂಬರಿಗಳ ಓದುವಿಕೆಯಲ್ಲಿ ತನ್ನ ಬುದ್ಧಿಯನ್ನು ತೊಡಗಿಸುತ್ತಾನೆ.

ರಾಮಾಯಣಂ ನಾಮ ಪರಂ ತು ಕಾವ್ಯಂ
ಸುಪುಣ್ಯದಂ ವೈ ಶೃಣುತ ದ್ವಿಜೇನ್ದ್ರಾಃ ।
ಯಸ್ಮಿನ್ ಶ್ರುತೇ ಜನ್ಮಜರಾದಿನಾಶೋ
ಭವತ್ಯದೋಷಃ ಸ ನರೋಽಚ್ಯುತಃ ಸ್ಯಾತ್ ॥೨೭॥

ಬ್ರಾಹ್ಮಣೋತ್ತಮನೇ! ರಾಮಾಯಣವೆಂಬುದು ಪರಮಶ್ರೇಷ್ಠವಾದ ಕಾವ್ಯವು. ಇದನ್ನು ಕೇಳಿರಿ. ಇದು ಪುಣ್ಯದಾಯಕವು. ಈ ಮಹಾಕಾವ್ಯವನ್ನು ಏಕಾಗ್ರಚಿತ್ತನಾಗಿ ಕೇಳಿದವನಿಗೆ ಹುಟ್ಟು-ಮುಪ್ಪು-ಸಾವುಗಳಿರುವುದಿಲ್ಲ. ಸಕಲಪಾಪಗಳಿಂದಲೂ ವಿಮುಕ್ತನಾಗುತ್ತಾನೆ. ಅಚ್ಯುತಸ್ವರೂಪನೇ ಆಗುತ್ತಾನೆ ಅಥವಾ ಧರ್ಮದಿಂದ ಯಾವಾಗಲೂ ಚ್ಯುತನಾಗುವುದಿಲ್ಲ.

ವರಂ ವರೇಣ್ಯಂ ವರದಂ ತು ಕಾವ್ಯಂ
ಸಂತಾರಯತ್ಯಾಶು ಚ ಸರ್ವಲೋಕಮ್ ।
ಸಂಕಲ್ಪಿತಾರ್ಥಪ್ರದಮಾದಿಕಾವ್ಯಂ
ಶ್ರುತ್ವಾ ಚ ರಾಮಸ್ಯ ಪದಂ ಪ್ರಯಾತಿ ॥೨೮॥

ರಾಮಾಯಣಮಹಾಕಾವ್ಯವು ಅತ್ಯಂತಶ್ರೇಷ್ಠವಾದುದು. ಅಪೇಕ್ಷಣೀಯವಾದುದು. ಮನೋಭೀಷ್ಟಪ್ರದವಾದುದು. ಸಮಸ್ತಜನರನ್ನೂ ಬಹಳ ಬೇಗ ಸಂಸಾರಸಾಗರದಿಂದ ಪಾರುಮಾಡುತ್ತದೆ. ಸಂಕಲ್ಪ ಮಾಡಿದುದನ್ನು ಸಿದ್ಧಿಸಿಕೊಡುತ್ತದೆ. (ಫಲಾಪೇಕ್ಷೆಯನ್ನು ಸಂಕಲ್ಪಿಸಿ ಪಾರಾಯಣ ಮಾಡಿದರೆ ಸಂಕಲ್ಪಿಸಿದ ಫಲವು ಸಿದ್ಧಿಸುತ್ತದೆ.) ಆದಿಕಾವ್ಯವಾದ ಶ್ರೀಮದ್ರಾಮಾಯಣವನ್ನು ಏಕಾಗ್ರತೆಯಿಂದ ಶ್ರವಣಮಾಡುವುದರಿಂದಲೇ ಶ್ರೀರಾಮಚಂದ್ರನ ಪರಮಪದವು ಲಭಿಸುತ್ತದೆ.

ಬ್ರಹ್ಮೇಶವಿಷ್ಣ್ವಾಖ್ಯಶರೀರ ಭೇದೈ-
ರ್ವಿಶ್ವಂ ಸೃಜತ್ಯತ್ತಿ ಚ ಪಾತಿ ಯಶ್ಚ ।
ತಮಾದಿದೇವಂ ಪರಮಂ ವರೇಣ್ಯ-
ಮಾಧಾಯ ಚೇತಸ್ಯುಪಯಾತಿ ಮುಕ್ತಿಮ್ ॥೨೯॥

ಯಾವನು ಬ್ರಹ್ಮ-ವಿಷ್ಣು-ರುದ್ರರೆಂಬ ಶರೀರಭೇದಗಳಿಂದ ವಿಶ್ವವನ್ನು ಸೃಷ್ಟಿಸಿ-ರಕ್ಷಿಸಿ-ವಿನಾಶಗೊಳಿಸುವನೋ–ಅಂತಹ ಆದಿದೇವನಾದ, ಪರಮ ಶ್ರೇಷ್ಠನಾದ, ಅಪೇಕ್ಷಣೀಯನಾದ ಶ್ರೀರಾಮಚಂದ್ರನನ್ನು ಹೃನ್ಮಂದಿರದಲ್ಲಿ ಸ್ಥಾಪಿಸಿಕೊಳ್ಳುವವನು ಮುಕ್ತನಾಗುತ್ತಾನೆ.

ಯೋ ನಾಮಜಾತ್ಯಾದಿವಿಕಲ್ಪಹೀನಃ
ಪರಾವರಾಣಾಂ ಪರಮಃ ಪರಂ ಸ್ಯಾತ್ ।
ವೇದಾನ್ತವೇದ್ಯಃ ಸ್ವರುಚಾ ಪ್ರಕಾಶಃ
ಸ ವೀಕ್ಷ್ಯತೇ ಸರ್ವಪುರಾಣವೇದೈಃ ॥೩೦॥

ಯಾವನು ನಾಮ-ಗೋತ್ರ-ಜಾತಿ-ಇವೇ ಮೊದಲಾದ ವಿಕಲ್ಪಗಳಿಂದ ರಹಿತನಾಗಿರುವನೋ, ಹಿಂದಿನವರಿಗಿಂತಲೂ ಮತ್ತು ಮುಂದಿನವರಿಗಿಂತಲೂ ಶ್ರೇಷ್ಠನಾಗಿರುವನೋ, ಕಾರ್ಯ-ಕಾರಣಗಳಿಗಿಂತಲೂ ಆಚೆಗೆ

ಇರುವನೋ, ವೇದಾಂತಶಾಸ್ತ್ರದ ಮೂಲಕವಾಗಿಯೂ ಸಮಸ್ತವಾದ ವೇದ-ಪುರಾಣಗಳಿಂದಲೂ ತಿಳಿಯಲ್ಪಡುವನೋ, ಸ್ವಯಂಪ್ರಕಾಶನೋ–ಅಂತಹ ರಾಮಚಂದ್ರಪ್ರಭುವನ್ನು ರಾಮಾಯಣಮಹಾಕಾವ್ಯದ ಪಾರಾಯಣ ದಿಂದಲೂ ಕಂಡುಕೊಳ್ಳಬಹುದು.

ಊರ್ಜೇ ಮಾಘೇ ಸಿತೇ ಪಕ್ಷೇ ಚೈತ್ರೇ ಚ ದ್ವಿಜಸತ್ತಮಾಃ ।
ನವಾಹ್ನಾ ಖಲು ಶ್ರೋತವ್ಯಂ ರಾಮಾಯಣಕಥಾಮೃತಮ್ ॥೩೧॥

ಕಾರ್ತಿಕ, ಮಾಘ ಮತ್ತು ಚೈತ್ರಮಾಸಗಳ ಶುಕ್ಲಪಕ್ಷದಲ್ಲಿ ಒಂಬತ್ತು ದಿವಸಗಳಲ್ಲಿ ಅಮೃತಸ್ವರೂಪವಾದ ರಾಮಾಯಣಕಥೆಯನ್ನು ಕೇಳಬೇಕು.

ಇತ್ಯೇವಂ ಶೃಣುಯಾದ್ಯಸ್ತು ಶ್ರೀರಾಮಚರಿತಂ ಶುಭಮ್ ।
ಸರ್ವಾನ್ಕಾಮಾನವಾಪ್ನೋತಿ ಪರತ್ರಾಮುತ್ರಚೋತ್ತಮಾನ್ ॥೩೨॥

ಹೀಗೆ ಯಾವನು ಒಂಬತ್ತು ದಿವಸಗಳಲ್ಲಿ ಶ್ರೀರಾಮನ ಮಂಗಳ ಮಯವಾದ ಶುಭಚರಿತ್ರೆಯನ್ನು ಕೇಳುವನೋ–ಅಂತಹವನು ಈ ಲೋಕ ದಲ್ಲಿಯೂ ಮತ್ತು ಪರಲೋಕದಲ್ಲಿಯೂ ತನ್ನ ಸಮಸ್ತವಾದ ಉತ್ತಮ ಕಾಮನೆಗಳನ್ನೂ ಹೊಂದುತ್ತಾನೆ.

ತ್ರಿಸಪ್ತಕುಲಸಂಯುಕ್ತಃ ಸರ್ವಪಾಪವಿವರ್ಜಿತಃ ।
ಪ್ರಯಾತಿ ರಾಮಭವನಂ ಯತ್ರ ಗತ್ವಾ ನ ಶೋಚತೇ ॥೩೩॥

ರಾಮಾಯಣಕಥೆಯನ್ನು ಕೇಳುವವನು ಸಮಸ್ತಪಾಪಗಳಿಂದಲೂ ಮುಕ್ತನಾಗಿ ತನ್ನ ಇಪ್ಪತ್ತೊಂದು ತಲೆಮಾರಿನವರ ಸಮೇತನಾಗಿ ಶೋಕ ರಹಿತವಾದ ಶ್ರೀರಾಮಚಂದ್ರನ ಪರಮಪದಕ್ಕೆ ಹೋಗುತ್ತಾನೆ.

ಚೈತ್ರೇ ಮಾಘೇ ಕಾರ್ತಿಕೇ ಚ ಸಿತೇ ಪಕ್ಷೇ ಚ ವಾಚಯೇತ್ ।
ನವಾಹಸ್ತು ಮಹಾಪುಣ್ಯಂ ಶ್ರೋತವ್ಯಂ ಚ ಪ್ರಯತ್ನತಃ ॥೩೪॥

ಚೈತ್ರ, ಮಾಘ ಮತ್ತು ಕಾರ್ತಿಕಮಾಸಗಳ ಶುಕ್ಲಪಕ್ಷದಲ್ಲಿ ರಾಮಾಯಣವನ್ನು ಪಾರಾಯಣಮಾಡಬೇಕು. ನವಾಹಪಾರಾಯಣವು ಮಹಾಪುಣ್ಯಪ್ರದವಾದುದು. ಹಾಗೆ ಪಾರಾಯಣಮಾಡುವಾಗ ಸಾಧಕನು ಅದನ್ನು ಪ್ರಯತ್ನಪೂರ್ವಕವಾಗಿ ಕೇಳಬೇಕು.

ರಾಮಾಯಣಮಾದಿಕಾವ್ಯಂ ಸ್ವರ್ಗಮೋಕ್ಷಪ್ರದಾಯಕಮ್ ।
ತಸ್ಮಾದ್ಘೋರೇ ಕಲಿಯುಗೇ ಸರ್ವಧರ್ಮಬಹಿಷ್ಕೃತೇ ।
ನವಭಿರ್ದಿನೈಃ ಶ್ರೋತವ್ಯಂ ರಾಮಾಯಣಕಥಾಮೃತಮ್ ॥೩೫॥

ರಾಮಾಯಣವು ಆದಿಕಾವ್ಯವು. ಸ್ವರ್ಗವನ್ನೂ ಮೋಕ್ಷವನ್ನೂ ಕೊಡ ತಕ್ಕುದು. ಸಮಸ್ತಧರ್ಮಗಳಿಂದಲೂ ದೂರೀಕೃತವಾದ ಕಲಿಯುಗವು ಸನ್ನಿಹಿತವಾದಾಗ ಕಲಿಯ ಪ್ರಭಾವವನ್ನು ಸಂಕುಚಿತಗೊಳಿಸಲು ಒಂಬತ್ತು ದಿನಗಳು ಅಮೃತಮಯವಾದ ರಾಮಾಯಣಕಥೆಯನ್ನು ಕೇಳಬೇಕು.

ರಾಮನಾಮಪರಾ ಯೇ ತು ಘೋರೇ ಕಲಿಯುಗೇ ದ್ವಿಜಾಃ ।
ತ ಏವ ಕೃತಕೃತ್ಯಾಶ್ಚ ನ ಕಲಿರ್ಬಾಧತೇ ಹಿ ತಾನ್ ॥೩೬॥

ಭಯಂಕರವಾದ ಕಲಿಯುಗದಲ್ಲಿ ಯಾರು ಶ್ರೀರಾಮನಾಮವನ್ನು ಆಶ್ರಯಿಸುವರೋ–ಅವರೇ ಕೃತಕೃತ್ಯರಾಗುವರು. ಅಂತಹವರನ್ನು ಕಲಿಯು ಬಾಧೆಪಡಿಸುವುದಿಲ್ಲ.

ಕಥಾ ರಾಮಾಯಣಸ್ಯಾಪಿ ನಿತ್ಯಂ ಭವತಿ ಯದ್ಗೃಹೇ ।
ತದ್ಗೃಹಂ ತೀರ್ಥರೂಪಂ ಹಿ ದುಷ್ಟಾನಾಂ ಪಾಪನಾಶನಮ್ ॥೩೭॥

ರಾಮಾಯಣಕಥೆಯು ಅನುದಿನವೂ ಯಾರ ಮನೆಯಲ್ಲಿ ಹೇಳಲ್ಪಡು ವುದೋ–ಆ ಮನೆಯೇ ತೀರ್ಥರೂಪವಾಗುತ್ತದೆ. ಅಂತಹ ಪವಿತ್ರವಾದ ಮನೆಯನ್ನು ಪ್ರವೇಶಿಸುವುದರಿಂದಲೇ ದುಷ್ಕರವಾದ ಪಾಪಗಳೆಲ್ಲವೂ ನಾಶ ವಾಗುತ್ತವೆ.

ತಾವತ್ಪಾಪಾನಿ ದೇಹೇಽಸ್ಮಿನ್ನಿವಸನ್ತಿ ತಪೋಧನಾಃ ।
ಯಾವನ್ನ ಶ್ರೂಯತೇ ಸಮ್ಯಕ್ ಶ್ರೀಮದ್ರಾಮಾಯಣಂ ನರೈಃ ॥೩೮॥

ತಪೋಧನರೇ! ಎಂದಿನವರೆಗೆ ಮನುಷ್ಯರು ರಾಮಾಯಣಕಥಾ ಮೃತವನ್ನು ಕೇಳುವುದಿಲ್ಲವೋ–ಅಂದಿನವರೆಗೂ ಅವರ ದೇಹಗಳಲ್ಲಿ ಪಾಪ ಗಳು ನಿವಾಸಮಾಡಿಕೊಂಡೇ ಇರುತ್ತವೆ.

ದುರ್ಲಭೈವ ಕಥಾ ಲೋಕೇ ಶ್ರೀಮದ್ರಾಮಾಯಣೋದ್ಭವಾ ।
ಕೋಟಿಜನ್ಮಸಮುತ್ಥೇನ ಪುಣ್ಯೇನೈವ ತು ಲಭ್ಯತೇ ॥೩೯॥

ಜನಸಾಮಾನ್ಯರಿಗೆ ಶ್ರೀಮದ್ರಾಮಾಯಣ ಕಥೆಯು ದುರ್ಲಭವೇ ಸರಿ. ಕೋಟಿಜನ್ಮಗಳಲ್ಲಿ ಮಾಡಿದ ಪುಣ್ಯದಿಂದ ಇದರ ಪ್ರಾಪ್ತಿಯಾಗುತ್ತದೆ.

ಕಾರ್ತಿಕ, ಮಾಘ ಮತ್ತು ಚೈತ್ರಮಾಸಗಳ ಶುಕ್ಲಪಕ್ಷಗಳಲ್ಲಿ ಶ್ರೀಮದ್ರಾಮಾಯಣವನ್ನು ಕೇಳಿದ ಮಾತ್ರದಿಂದಲೇ ರಾಕ್ಷಸಭಾವವನ್ನು ಹೊಂದಿದ್ದ ಸೌದಾಸನು ಮುಕ್ತನಾದನು. ಗೌತಮರ ಶಾಪದಿಂದಾಗಿ ಸೌದಾಸನು ರಾಕ್ಷಸಶರೀರವನ್ನು ಹೊಂದಿದ್ದನು. ರಾಮಾಯಣದ ಪ್ರಭಾವ ದಿಂದಲೇ ಅವನು ಶಾಪದಿಂದ ಬಿಡುಗಡೆಹೊಂದಿದನು.

ಯಸ್ತ್ವೇತಚ್ಛೃಣುಯಾದ್ಭಕ್ತ್ಯಾ ರಾಮಭಕ್ತಿಪರಾಯಣಃ ।
ಸ ಮುಚ್ಯತೇ ಮಹಾಪಾಪೈಃ ಪುರುಷಃ ಪಾತಕಾದಿಭಿಃ ॥೪೩॥

ಯಾವನು ಶ್ರೀರಾಮಭಕ್ತಿಯ ಆಶ್ರಯವನ್ನು ಹೊಂದಿ ಪ್ರೇಮ ಪೂರ್ವಕವಾಗಿ ಈ ಕಥೆಯನ್ನು ಭಕ್ತಿಯಿಂದ ಕೇಳುವನೋ–ಅಂತಹವನು ಮಹಾಪಾಪಗಳಿಂದಲೂ ವಿಮುಕ್ತನಾಗುತ್ತಾನೆ.”

೧ನೆಯ ಅಧ್ಯಾಯವು ಮುಗಿಯಿತು.

೨ನೆಯ ಅಧ್ಯಾಯ

ನಾರದ-ಸನತ್ಕುಮಾರರ ಸಂವಾದ : ಸೋಮದತ್ತನೆಂಬ ಬ್ರಾಹ್ಮಣನಿಗೆ ರಾಕ್ಷಸತ್ವದ ಪ್ರಾಪ್ತಿ : ರಾಮಾಯಣ ಕಥಾಶ್ರವಣದ ಮೂಲಕ ಅವನ ಉದ್ಧಾರ

ಋಷಿಗಳು ಪ್ರಶ್ನಿಸುತ್ತಾರೆ :

ಕಥಂ ಸನತ್ಕುಮಾರಾಯ ದೇವರ್ಷಿರ್ನಾರದೋ ಮುನಿಃ ।
ಪ್ರೋಕ್ತವಾನ್ಸಕಲಾನ್ಧರ್ಮಾನ್ಕಥಂ ತೌ ಮಿಲಿತಾವುಭೌ ॥೧॥

ಕಸ್ಮಿನ್ಕ್ಷೇತ್ರೇ ಸ್ಥಿತೌ ತಾತ ತಾವುಭೌ ಬ್ರಹ್ಮವಾದಿನೌ ।
ಯದುಕ್ತಂ ನಾರದೇನಾಸ್ಮೈ ತತ್ತ್ವಂ ಬ್ರೂಹಿ ಮಹಾಮುನೇ ॥೨॥

“ಮಹಾಮುನಿಗಳೇ! ಬ್ರಹ್ಮವಾದಿಗಳಾದ ಸನತ್ಕುಮಾರ-ನಾರದ ರಿಬ್ಬರೂ ಹೇಗೆ ಮತ್ತು ಯಾವ ಪುಣ್ಯಕ್ಷೇತ್ರದಲ್ಲಿ ಸಂಧಿಸಿದರು? ದೇವರ್ಷಿ ಗಳಾದ ನಾರದರು ರಾಮಾಯಣಕ್ಕೆ ಸಂಬಂಧಿಸಿದ ಸಕಲಧರ್ಮಗಳನ್ನೂ

ಹೇಗೆ ಹೇಳಿದರು? ನಾರದರು ಸನತ್ಕುಮಾರನಿಗೆ ಇನ್ನೂ ಯಾವ ಯಾವ ವಿಷಯಗಳನ್ನು ಹೇಳಿದರು? ಈ ಎಲ್ಲ ವಿಷಯಗಳನ್ನೂ ಯಥಾವತ್ತಾಗಿ ಹೇಳಿರಿ."

ಸೂತರು ಹೇಳುತ್ತಾರೆ :

"ಪೂಜ್ಯರೇ! ಸನಕನೇ ಮೊದಲಾದ ಮಹಾತ್ಮರಾದ ಮಹರ್ಷಿಗಳು ಬ್ರಹ್ಮಮಾನಸಪುತ್ರರು. ಅವರೆಲ್ಲರೂ ಅಹಂಕಾರ-ಮಮಕಾರಗಳಿಲ್ಲದವರು ಮತ್ತು ಊರ್ಧ್ವರೇತಸ್ಕರು.

ಸನಕ, ಸನಂದನ, ಸನತ್ಕುಮಾರ ಮತ್ತು ಸನಾತನ–ಎಂದು ಅವರ ಶುಭನಾಮಗಳು. ಅವರೆಲ್ಲರೂ ವಿಷ್ಣುಭಕ್ತರು ; ಮಹಾತ್ಮರು ; ಬ್ರಹ್ಮ ತತ್ತ್ವಧ್ಯಾನದಲ್ಲಿಯೇ ನಿರತರಾಗಿರತಕ್ಕವರು ; ಸತ್ಯವಂತರು ; ಮೋಕ್ಷವನ್ನು ಬಯಸುವವರು ಮತ್ತು ಸಾವಿರ ಸೂರ್ಯಪ್ರಕಾಶಕ್ಕೆ ಸಮಾನವಾದ ಪ್ರಕಾಶವುಳ್ಳವರು. ಒಮ್ಮೆ ಮಹಾತೇಜಸ್ವಿಗಳಾದ ಸನಕಾದಿಗಳು ಬ್ರಹ್ಮನ ಸಭೆಯನ್ನು ನೋಡುವ ಸಲುವಾಗಿ ಮೇರುಪರ್ವತದ ಶಿಖರಕ್ಕೆ ಹೋದರು. ಅಲ್ಲವರು ವಿಷ್ಣುವಿನ ಪಾದದಿಂದ ಹುಟ್ಟಿದ ಮಹಾಪುಣ್ಯವತಿಯಾದ 'ಸೀತಾ' ಎಂಬ ಹೆಸರನ್ನು ಹೊಂದಿದ್ದ ಗಂಗಾನದಿಯನ್ನು ನೋಡಿ ಸ್ನಾನ ಮಾಡಲು ಉದ್ಯುಕ್ತರಾದರು. ಆ ಮಧ್ಯದಲ್ಲಿ 'ಹರಿನಾರಾಯಣ! ಹರೇ ಮುಕುಂದ!' ಎಂಬುದಾಗಿ ಹರಿನಾಮವನ್ನು ಗಾನಮಾಡುತ್ತಾ ದೇವರ್ಷಿಗಳಾದ ನಾರದರು ಅಲ್ಲಿಗೆ ಆಗಮಿಸಿದರು.

ನಾರಾಯಣಾಚ್ಯುತಾನನ್ತ ವಾಸುದೇವ ಜನಾರ್ದನ ।
ಯಜ್ಞೇಶ ಯಜ್ಞಪುರುಷ ರಾಮ ವಿಷ್ಣೋ ನಮೋಽಸ್ತು ತೇ ॥೯॥

'ನಾರಾಯಣ! ಅಚ್ಯುತ! ಅನಂತ! ವಾಸುದೇವ! ಜನಾರ್ದನ! ಯಜ್ಞೇಶ! ಯಜ್ಞಪುರುಷ! ರಾಮಭದ್ರ! ವಿಷ್ಣುವೇ! ನಿನಗೆ ನಮಸ್ಕರಿಸು ತ್ತೇನೆ.'

ಇವೇ ಮುಂತಾಗಿ ಹರಿಸ್ಮರಣೆಮಾಡುತ್ತಾ ಸಮಸ್ತಲೋಕಗಳನ್ನೂ ಪಾವನಗೊಳಿಸುತ್ತಾ ನಾರದರು ಅಲ್ಲಿಗೆ ಆಗಮಿಸಿದರು. ಅಲ್ಲಿ ಲೋಕಪಾವನೆ ಯಾದ ಗಂಗಾನದಿಯನ್ನು ನೋಡಿ ನಾನಾಪ್ರಕಾರವಾಗಿ ಸ್ತೋತ್ರಮಾಡಿದರು.

ನಾರದರು ಆಗಮಿಸಿದುದನ್ನು ನೋಡಿ ಮಹಾತೇಜಸ್ವಿಗಳಾದ ಸನ

ಕಾದಿಗಳು ಮುನಿಗಳನ್ನು ಯಥೋಚಿತವಾಗಿ ಸತ್ಕರಿಸಿದರು. ಅದಕ್ಕೆ ಪ್ರತಿಯಾಗಿ ನಾರದರು ಕೂಡ ಸನಕಾದಿ ಮಹರ್ಷಿಗಳನ್ನು ವಂದಿಸಿದರು. ಬಳಿಕ ಆ ಮುನಿಗಳ ಸಭೆಯಲ್ಲಿ ನಾರಾಯಣನನ್ನೇ ಆಶ್ರಯನನ್ನಾಗಿ ಪಡೆದಿರುವ ಮುನಿಶ್ರೇಷ್ಠರಾದ ನಾರದರೊಡನೆ ಸನತ್ಕುಮಾರನು ಹೇಳಿದನು :

"ಮಹಾಪ್ರಾಜ್ಞರೇ! ಎಲ್ಲ ಋಷಿಗಳ ಮಧ್ಯದಲ್ಲಿರುವ ನೀವು ಎಲ್ಲವನ್ನೂ ತಿಳಿದವರಾಗಿರುವಿರಿ. ನೀವು ಹರಿಭಕ್ತರೂ ಆಗಿರುವುದರಿಂದ ನಿಮಗಿಂತಲೂ ಹೆಚ್ಚಿನ ವಾಚಕರು ಬೇರೆ ಯಾರೂ ಇಲ್ಲ. ಚರಾಚರಾತ್ಮಕ ವಾದ ಈ ಜಗತ್ತು ಯಾವನಿಂದ ಹುಟ್ಟಿತೋ, ಪರಮಪಾವನೆಯಾದ ಗಂಗಾದೇವಿಯು ಯಾವನ ಪಾದಕಮಲದಿಂದ ಹುಟ್ಟಿದಳೋ–ಅಂತಹ ಶ್ರೀಹರಿಯನ್ನು ಅರಿಯುವುದೆಂತು? ನಾವು ನಿಮ್ಮ ಅನುಗ್ರಹಕ್ಕೆ ಪಾತ್ರ ರಾಗಲು ಅರ್ಹರಾಗಿದ್ದರೆ ಈ ವಿಷಯವನ್ನು ಯಥಾವತ್ತಾಗಿ ಹೇಳಿರಿ."

ನಾರದರು ಹೇಳುತ್ತಾರೆ :

ನಮಃ ಪರಾಯ ದೇವಾಯ ಪರಾತ್ಪರತರಾಯ ಚ ।
ಪರಾತ್ಪರನಿವಾಸಾಯ ಸಗುಣಾಯಾಗುಣಾಯ ಚ ॥೧೫॥

"ಯಾವನು ಶ್ರೇಷ್ಠರಿಗಿಂತಲೂ ಶ್ರೇಷ್ಠನೋ–ಅಂತಹ ಪರದೇವತೆಯಾದ ಶ್ರೀರಾಮಚಂದ್ರನಿಗೆ ನಮಸ್ಕರಿಸುತ್ತೇನೆ. ಯಾವನ ನಿವಾಸಸ್ಥಾನವು ಉತ್ಕೃಷ್ಟವೆನಿಸಿದ ಎಲ್ಲ ಸ್ಥಾನಗಳಿಗಿಂತಲೂ ಉತ್ಕೃಷ್ಟವಾಗಿರುವುದೋ ಮತ್ತು ಯಾವನು ಸಗುಣನೂ ಮತ್ತು ನಿರ್ಗುಣನೂ ಆಗಿರುವನೋ–ಅಂತಹ ಶ್ರೀರಾಮಚಂದ್ರನಿಗೆ ನಮಸ್ಕರಿಸುತ್ತೇನೆ.

ಜ್ಞಾನಾಜ್ಞಾನಸ್ವರೂಪಾಯ ಧರ್ಮಾಧರ್ಮಸ್ವರೂಪಿಣೇ ।
ವಿದ್ಯಾವಿದ್ಯಾಸ್ವರೂಪಾಯ ಸ್ವಸ್ವರೂಪಾಯ ತೇ ನಮಃ ॥೧೬॥

ಜ್ಞಾನ-ಅಜ್ಞಾನ, ಧರ್ಮ-ಅಧರ್ಮ, ವಿದ್ಯೆ-ಅವಿದ್ಯೆ ಇವುಗಳ ಸ್ವರೂಪನಾದ ಮತ್ತು ಎಲ್ಲರ ಆತ್ಮಸ್ವರೂಪನೂ ಆಗಿರುವ ಶ್ರೀರಾಮನೇ! ನಿನಗೆ ನಮಸ್ಕರಿಸುತ್ತೇನೆ.

ಯೋ ದೈತ್ಯಹನ್ತಾ ನರಕಾನ್ತಕಶ್ಚ
ಭುಜಾಗ್ರಮಾತ್ರೇಣ ಚ ಧರ್ಮಗೋಪ್ತಾ ।

ಭೂಭಾರಸಂಘಾತವಿನೋದಕಾಮಂ
ನಮಾಮಿ ದೇವಂ ರಘುವಂಶದೀಪಮ್ ॥೧೭॥

ಯಾವನು ದೈತ್ಯರ ವಿನಾಶಕನೋ, ನರಕಾಂತಕನೋ, ಭುಜಬಲ ಪರಾಕ್ರಮಗಳಿಂದ ಧರ್ಮವನ್ನು ರಕ್ಷಿಸುವನೋ–ಅಂತಹ ದೇವದೇವನಿಗೆ ನಮಸ್ಕರಿಸುತ್ತೇನೆ. ಭೂಭಾರವನ್ನಿಳಿಸುವುದು ಯಾವನಿಗೆ ಒಂದು ವಿನೋದ ಮಾತ್ರವಾಗಿದೆಯೋ–ಅಂತಹ ರಘುವಂಶಪ್ರದೀಪನಾದ ಶ್ರೀರಾಮಚಂದ್ರ ನಿಗೆ ನಮಸ್ಕರಿಸುತ್ತೇನೆ.

ಆವಿರ್ಭೂತಶ್ಚತುರ್ಧಾ ಯಃ ಕಪಿಭಿಃ ಪರಿವಾರಿತಃ ।
ಹತವಾನ್ರಾಕ್ಷಸಾನೀಕಂ ರಾಮಂ ದಾಶರಥಿಂ ಭಜೇ ॥೧೮॥

ಯಾವ ಶ್ರೀಹರಿಯು ನಾಲ್ಕು ರೂಪಗಳನ್ನು ಹೊಂದಿ ಅವತರಿಸಿ ದನೋ, ಕಪಿಗಳಿಂದ ಪರಿವೃತನಾಗಿ ರಾಕ್ಷಸರ ಮಹಾಸೇನೆಯನ್ನು ಸಂಹರಿಸಿ ದನೋ ಅಂತಹ ದಶರಥನ ಮಗನಾದ ಶ್ರೀರಾಮನನ್ನು ಭಜಿಸುತ್ತೇನೆ.

ಋಷಿಸತ್ತಮರೇ! ಮಹಾತ್ಮನಾದ ಶ್ರೀರಾಮನ ಇಂತಹ ಚರಿತ್ರೆಗಳು ಅನೇಕವಾಗಿವೆ. ಕೋಟಿವರ್ಷಗಳವರೆಗೆ ಹೇಳಿದರೂ ಅವು ಮುಗಿಯುವು ದಿಲ್ಲ. ಅವನ ನಾಮಗಳ ಮಹಿಮೆಯ ಪಾರವನ್ನು ತಿಳಿಯಲು ಮನುಷ್ಯ ರಿಗಾಗಲೀ ಮುನೀಂದ್ರರಿಗಾಗಲೀ ಶಕ್ಯವೇ ಇಲ್ಲ. ಹೀಗಿರುವಾಗ ನನ್ನಂತಹ ಕ್ಷುಲ್ಲಕನು ಹೇಗೆತಾನೇ ಅದರ ಪಾರವನ್ನು ತಿಳಿದೇನು? ಅವನ ನಾಮ ಸ್ಮರಣೆಯ ಮಾತ್ರದಿಂದಲೇ ಮಹಾಪಾತಕಿಗಳು ಕೂಡ ಪರಿಶುದ್ಧರಾಗುತ್ತಾರೆ. ಅಂತಹ ಪರಮಾತ್ಮನ ಸ್ತೋತ್ರವನ್ನು ನನ್ನಂತಹ ಕ್ಷುಲ್ಲಕಬುದ್ಧಿಯವನು ಹೇಗೆ ಮಾಡಿಯಾನು? ಕಲಿಯುಗದಲ್ಲಿ ರಾಮಾಯಣವನ್ನು ಆಶ್ರಯಿಸಿದ ದ್ವಿಜರೇ ಕೃತಕೃತ್ಯರು. ಅಂತಹವರನ್ನು ನೀವು ನಿತ್ಯವೂ ನಮಸ್ಕರಿಸಿರಿ. ಕಾರ್ತಿಕ-ಮಾಘ ಮತ್ತು ಚೈತ್ರಮಾಸಗಳ ಶುಕ್ಲಪಕ್ಷಗಳಲ್ಲಿ ಒಂಬತ್ತು ದಿನಗಳು ಶ್ರೀಮದ್ರಾಮಾ ಯಣದ ಅಮೃತರೂಪವಾದ ಕಥೆಯನ್ನು ಕೇಳಬೇಕು. ಸೌದಾಸನು ಗೌತಮರ (ಶಿವನ) ಶಾಪದಿಂದ ರಾಕ್ಷಸಶರೀರವನ್ನು ಪಡೆದುಕೊಂಡನು. ರಾಮಾಯಣದ ಪ್ರಭಾವದಿಂದ ಅವನು ಆ ಶಾಪದಿಂದ ಮುಕ್ತನಾದನು."

ಸನತ್ಕುಮಾರನು ಪ್ರಶ್ನಿಸುತ್ತಾನೆ :

"ದೇವರ್ಷಿಗಳೇ! ಸಮಸ್ತಧರ್ಮಗಳ ಫಲವನ್ನು ಕೊಡುವ ರಾಮಾ

ಯಣವನ್ನು ಹೇಳಿದವರಾರು? ಸೌದಾಸನು ಗೌತಮರ (ಶಿವನ) ಶಾಪಕ್ಕೇಕೆ ಗುರಿಯಾದನು? ರಾಮಾಯಣದ ಪ್ರಭಾವದಿಂದ ಅವನು ಹೇಗೆ ಶಾಪದಿಂದ ಮುಕ್ತಿಯನ್ನು ಹೊಂದಿದನು? ನಾನು ತಮ್ಮ ಅನುಗ್ರಹಕ್ಕೆ ಯೋಗ್ಯನಾಗಿದ್ದರೆ–ಆ ವಿಷಯವನ್ನು ನೀವು ಯಥಾವತ್ತಾಗಿ ಹೇಳಿರಿ. ಏಕೆಂದರೆ : ಭಗವಂತನ ಕಥಾಶ್ರವಣವು ಹೇಳುವವರನ್ನೂ ಮತ್ತು ಕೇಳುವವರನ್ನೂ ಪಾವನಗೊಳಿಸುತ್ತದೆ."

ನಾರದರು ಹೇಳುತ್ತಾರೆ :

"ವಿಪ್ರೋತ್ತಮನೇ! ವಾಲ್ಮೀಕಿಯ ಮುಖಾರವಿಂದದಿಂದ ಪ್ರಾದುರ್ಭೂತವಾದ ರಾಮಾಯಣವನ್ನು ಕೇಳು. ರಾಮಾಯಣಕಥಾಮೃತವನ್ನು ಒಂಬತ್ತು ದಿವಸಗಳು ಕೇಳಬೇಕು.

ಕೃತಯುಗದಲ್ಲಿ ಧರ್ಮ-ಕರ್ಮವಿಶಾರದನಾದ, ಧರ್ಮಪರಾಯಣನಾದ ಸೋಮದತ್ತನೆಂಬ ಬ್ರಾಹ್ಮಣನಿದ್ದನು. ಅವನಿಗೆ ಸೌದಾಸನೆಂಬ ಹೆಸರೂ ಇದ್ದಿತು. ಅವನು ಮನೋಹರವಾದ ಗಂಗಾತೀರದಲ್ಲಿದ್ದ ಆಶ್ರಮ ದಲ್ಲಿ ಬ್ರಹ್ಮಜ್ಞಾನಿಗಳಾದ ಗೌತಮರಿಂದ ಸಮಸ್ತಧರ್ಮಗಳನ್ನೂ ಅಧ್ಯಯನ ಮಾಡಿದನು. ಪುರಾಣಗಳ ಮೂಲಕವಾಗಿ ಗೌತಮರು ಸೌದಾಸನಿಗೆ ತತ್ತ್ವ ಜ್ಞಾನವನ್ನು ಉಪದೇಶಿಸಿದರು. ಹೀಗೆ ಸೌದಾಸನು ಸರ್ವಧರ್ಮಗಳನ್ನೂ ಗೌತಮರಿಂದ ತಿಳಿದುಕೊಂಡನು.

ಒಮ್ಮೆ ಸೌದಾಸನು ಪರಮೇಶ್ವರನ ಆರಾಧನೆಯಲ್ಲಿ ನಿರತನಾಗಿದ್ದನು. ಆ ಸಮಯಕ್ಕೆ ಸರಿಯಾಗಿ ಗೌತಮರು ಅಲ್ಲಿಗೆ ಆಗಮಿಸಿದರು. ಆದರೆ ಪರಮೇಶ್ವರನ ಆರಾಧನೆಯಲ್ಲಿ ನಿರತನಾಗಿದ್ದ ಸೋಮದತ್ತನು ಮೇಲೆದ್ದು ಗುರುಗಳಿಗೆ ನಮಸ್ಕಾರವನ್ನು ಮಾಡಲಿಲ್ಲ. ತೇಜಸ್ವಿಗಳಿಗೆ ನಿಧಿಗಳಾದ ಮಹಾಬುದ್ಧಿಶಾಲಿಗಳಾದ ಗೌತಮರು ಅದರಿಂದ ಕುಪಿತರಾಗಲಿಲ್ಲ. ಶಾಂತರಾಗಿಯೇ ಇದ್ದರು. ತಮ್ಮ ಶಿಷ್ಯನು ಶಾಸ್ತ್ರೋಕ್ತವಾದ ಕರ್ಮಾನುಷ್ಠಾನಗಳನ್ನು ಯಥಾವಿಧಿಯಾಗಿ ಮಾಡುತ್ತಿರುವುದನ್ನು ಕಂಡು ಸಂತಸಗೊಂಡರು. ಆದರೆ ಸೋಮದತ್ತನ ಆರಾಧನಾಮೂರ್ತಿಯಾಗಿದ್ದ ಸಕಲಲೋಕಗುರುವಾದ ಶಿವನು ಗುರುಗಳ ವಿಷಯದಲ್ಲಿ ಸೌದಾಸನು ತೋರಿದ ಅನಾದರಣೆಯನ್ನು

ಸಹಿಸಿಕೊಳ್ಳಲಿಲ್ಲ. ಗುರುವನ್ನು ಅನಾದರಣೆಮಾಡಿದ ಪಾಪದ ಫಲವಾಗಿ ರಾಕ್ಷಸಜನ್ಮದಲ್ಲಿ ಹುಟ್ಟುವಂತೆ ಸೌದಾಸನಿಗೆ ಶಾಪಕೊಟ್ಟನು. ವಿನಯಜ್ಞನಾದ ಸೌದಾಸನು ಕೈಗಳನ್ನು ಮುಗಿದುಕೊಂಡು ಶಿವನಿಗೆ ಹೇಳಿದನು :

ಭಗವನ್ಸರ್ವಧರ್ಮಜ್ಞ ಸರ್ವದರ್ಶಿನ್ಸುರೇಶ್ವರ ।
ಕ್ಷಮಸ್ವ ಭಗವನ್ಸರ್ವಮಪರಾಧಃ ಕೃತೋ ಮಯಾ ॥೩೬॥

"ಪೂಜ್ಯನೇ! ಸರ್ವದರ್ಶಿಯೇ! ಸರ್ವಧರ್ಮಗಳನ್ನೂ ತಿಳಿದವನೇ! ಸುರೇಶ್ವರನೇ! ನಾನು ಅಪರಾಧಮಾಡಿದ್ದೇನೆ. ನಾನು ಮಾಡಿದ ಅಪರಾಧಗಳೆಲ್ಲವನ್ನೂ ಕ್ಷಮಿಸಿಬಿಡು."

ಆಗ ಗುರುಗಳಾದ ಗೌತಮರು ಸೌದಾಸನಿಗೆ ಹೇಳಿದರು :

"ವತ್ಸ! ಕಾರ್ತಿಕಮಾಸದ ಶುಕ್ಲಪಕ್ಷದಲ್ಲಿ ಭಕ್ತಿಭಾವದಿಂದ ಆದರ ಪೂರ್ವಕವಾಗಿ ರಾಮಾಯಣಕಥಾಮೃತವನ್ನು ಒಂಬತ್ತು ದಿವಸಗಳು ಕೇಳ ಬೇಕು. ಹಾಗೆ ಮಾಡಿದರೆ ಪರಮೇಶ್ವರನು ಕೊಟ್ಟಿರುವ ಶಾಪದ ಪ್ರಭಾವವು ಚಿರಕಾಲವಿರುವುದಿಲ್ಲ. ಹನ್ನೆರಡು ವರ್ಷಗಳು ಮಾತ್ರವೇ ಇರುತ್ತದೆ."

ಬ್ರಾಹ್ಮಣನು ಪ್ರಶ್ನಿಸುತ್ತಾನೆ :

"ಗುರುವರೇಣ್ಯರೇ! ರಾಮಾಯಣವನ್ನು ಯಾರು ಹೇಳಿದರು? ಅದರಲ್ಲಿ ಯಾವ ಕಥೆಯಿದೆ? ಮಹಾಪ್ರಾಜ್ಞರೇ! ಈ ಎಲ್ಲ ವಿಷಯಗಳನ್ನೂ ಸಂಕ್ಷೇಪವಾಗಿ ಹೇಳಿರಿ." ಹೀಗೆ ಹೇಳಿ ಪ್ರಸನ್ನಾತ್ಮನಾದ ಸೌದಾಸನು ಗುರುಗಳ ಚರಣಕಮಲಗಳಿಗೆ ವಂದಿಸಿದನು.

ಗೌತಮರು ಹೇಳುತ್ತಾರೆ :

"ಸೋಮದತ್ತ! ವಾಲ್ಮೀಕಿಪ್ರಣೀತವಾದ ರಾಮಾಯಣವನ್ನು ಕೇಳು. ಪರಮಾತ್ಮನು ರಾಮಾವತಾರವನ್ನು ಮಾಡಿ ರಾವಣಾದಿಗಳನ್ನು ಸಂಹರಿಸಿ ದೇವತೆಗಳ ಕಾರ್ಯವನ್ನು ಪೂರ್ಣಗೊಳಿಸಿದನು. ಇದು ರಾಮಾಯಣದ ಕಥೆ. ಕಾರ್ತಿಕಮಾಸದ ಶುಕ್ಲಪಕ್ಷದಲ್ಲಿ ಒಂಬತ್ತು ದಿವಸಗಳವರೆಗೆ ಸರ್ವ ಪಾಪವಿನಾಶಕವಾದ ರಾಮಾಯಣವನ್ನು ಕೇಳಬೇಕು."

ಹೀಗೆ ಹೇಳಿ ಪೂರ್ಣಕಾಮರಾದ ಗೌತಮರು ತಮ್ಮ ಆಶ್ರಮಕ್ಕೆ

ತೆರಳಿದರು. ಸೌದಾಸನು ದುಃಖಿತನಾಗಿ ಬೇರೆ ಮಾರ್ಗವಿಲ್ಲದೆ ರಾಕ್ಷಸ ದೇಹವನ್ನು ಆಶ್ರಯಿಸಿದನು. ರಾಕ್ಷಸಸ್ವಭಾವಾನುಗುಣವಾಗಿ ಹಸಿವು-ಬಾಯಾರಿಕೆಗಳಿಂದ ಅನುದಿನವೂ ಬಾಧೆಪಡುತ್ತಿದ್ದನು. ಕ್ರೋಧವನ್ನೇ ಸಂಪೂರ್ಣವಾಗಿ ಆಶ್ರಯಿಸಿದ್ದನು. ಕೃಷ್ಣಪಕ್ಷದ ಕಾಳರಾತ್ರಿಯಂತೆ ಅವನ ಬಣ್ಣವು ಕಪ್ಪಾಗಿದ್ದಿತು. ಭಯಂಕರಾಕಾರನಾಗಿದ್ದನು. ದಿಕ್ಕುಗಾಣದೇ ನಿರ್ಜನವಾದ ಅರಣ್ಯದಲ್ಲಿ ಸಂಚರಿಸುತ್ತಿದ್ದನು. ಹಸಿವಿನಿಂದ ಪೀಡಿತನಾಗಿದ್ದ ಸೌದಾಸನು ಕಣ್ಣಿಗೆ ಬಿದ್ದ ವಿಧ-ವಿಧವಾದ ಮೃಗಗಳನ್ನೂ, ಮನುಷ್ಯರನ್ನೂ, ಸರ್ಪಗಳೇ ಮೊದಲಾದ ಹರಿಯುವ ಜಂತುಗಳನ್ನೂ, ಪಕ್ಷಿಗಳನ್ನೂ ಬಲಾತ್ಕಾರವಾಗಿ ಹಿಡಿದು ಕಬಳಿಸುತ್ತಿದ್ದನು. ರಾಕ್ಷಸನ ಆ ಕೃತ್ಯದಿಂದಾಗಿ ಆ ಅರಣ್ಯಪ್ರದೇಶವು ಮೂಳೆಗಳಿಂದ ತುಂಬಿಹೋಯಿತು. ರಕ್ತವನ್ನು ಹೀರಿ ಬಿಸುಡಿದ ಕಳೇಬರಗಳು ಸರ್ವತ್ರವ್ಯಾಪ್ತವಾಗಿದ್ದುವು. ರಾಕ್ಷಸನ ಜೊತೆ ಯಲ್ಲಿಯೇ ರಕ್ತವನ್ನು ಹೀರುವ ಪ್ರೇತಗಳೂ ಸಂಚರಿಸುತ್ತಿದ್ದುವು. ಹೀಗೆ ಆ ಅರಣ್ಯಪ್ರದೇಶವು ಬಹಳ ಭಯಂಕರವಾಗಿ ಕಾಣುತ್ತಿದ್ದಿತು. ಸೌದಾಸನು ಆರು ತಿಂಗಳಿನಲ್ಲಿ ನೂರು ಯೋಜನಗಳಷ್ಟು ವಿಸ್ತೀರ್ಣವಾಗಿದ್ದ ಆ ವನಪ್ರದೇಶವನ್ನು ಪ್ರಾಣಿಗಳಿಗೆ ಅತಿದುಃಖಕರವನ್ನಾಗಿಸಿ ಮತ್ತೊಂದು ಅರಣ್ಯಕ್ಕೆ ತೆರಳಿದನು. ಅಲ್ಲಿಯೂ ಸೌದಾಸನು ನಿತ್ಯವೂ ನರಮಾಂಸವನ್ನು ತಿನ್ನುತ್ತಿದ್ದನು. ಸರ್ವಲೋಕಭಯಂಕರನಾದ ಅವನು ಒಂದು ಅರಣ್ಯದಿಂದ ಮತ್ತೊಂದು ಅರಣ್ಯಕ್ಕೆ ಹೋಗುತ್ತಾ ಕಡೆಗೆ ನರ್ಮದಾನದಿಯ ತೀರಕ್ಕೆ ಹೋದನು. ಅದೇ ಸಮಯದಲ್ಲಿ ಕಲಿಂಗದೇಶೀಯನಾದ, ಪರಮಧಾರ್ಮಿಕ ನಾದ ಗರ್ಗನೆಂಬ ಬ್ರಾಹ್ಮಣನು ನರ್ಮದಾನದಿಯ ಕಡೆಗೆ ಬರುತ್ತಿದ್ದನು. ಗಂಗಾಜಲವನ್ನು ಹೆಗಲಿನಲ್ಲಿ ಹೊತ್ತು, ವಿಶ್ವೇಶ್ವರನ ಸ್ತೋತ್ರವನ್ನು ಗಾನ ಮಾಡುತ್ತಾ, ಶ್ರೀರಾಮನಾಮವನ್ನು ಜಪಿಸುತ್ತಾ ಅತ್ಯಂತಹರ್ಷದಿಂದ ಅಲ್ಲಿಗೆ ಆಗಮಿಸಿದನು.

ಹೀಗೆ ಹಾಡಿಕೊಂಡು ಪಾಡಿಕೊಂಡು ಬರುತ್ತಿದ್ದ ಮುನಿಯನ್ನು ನೋಡಿ ಸೌದಾಸರಾಕ್ಷಸನು ಪಾರಣೆಗೆ ಒಳ್ಳೆಯ ಆಹಾರವು ಸಿಕ್ಕಿತೆಂದು ಭಾವಿಸಿಕೊಂಡು ಎರಡು ತೋಳುಗಳನ್ನೂ ಎತ್ತಿಕೊಂಡು ಆ ಬ್ರಾಹ್ಮಣನ

ಕಡೆಗೆ ಧಾವಿಸಿದನು. ಆದರೆ ಅವನು ಹಾಡುತ್ತಿದ್ದ ಹರಿಕೀರ್ತನೆಯ ಪ್ರಭಾವದಿಂದ ರಾಕ್ಷಸನು ದೂರದಲ್ಲಿಯೇ ನಿಲ್ಲಬೇಕಾಯಿತು. ಬ್ರಾಹ್ಮಣನನ್ನು ಕೊಲ್ಲಲು ಅವನಿಗೆ ಸಾಧ್ಯವಾಗಲಿಲ್ಲ. ರಾಕ್ಷಸನು ವಿಸ್ಮಯಗೊಂಡು ಬ್ರಾಹ್ಮಣನಿಗೆ ಹೇಳಿದನು :

"ಮಹಾಭಾಗ್ಯಶಾಲಿಯೇ! ಮಹಾತ್ಮನೇ! ನಿನಗೆ ನಮಸ್ಕಾರ ಮಾಡುತ್ತೇನೆ. ನಿನಗೆ ಮಂಗಳವಾಗಲಿ. ನೀನು ಭಗವನ್ನಾಮಸ್ಮರಣೆಯನ್ನು ಮಾಡುತ್ತಿರುವೆ. ಇದರಿಂದಲೇ ನಾನು ನಿನ್ನ ಸಮೀಪಕ್ಕೂ ಬರಲು ಸಾಧ್ಯವಾಗಲಿಲ್ಲ. ದೂರದಲ್ಲಿಯೇ ನಿಲ್ಲಬೇಕಾಯಿತು. ನಾನು ಈ ಹಿಂದೆ ಕೋಟಿ-ಕೋಟಿ ಬ್ರಾಹ್ಮಣರನ್ನು ಭಕ್ಷಿಸಿದ್ದೇನೆ. ಆದರೆ ನನಗೆ ಯಾವಾಗಲೂ ಇಂತಹ ತಡೆಯುಂಟಾಗಿರಲಿಲ್ಲ. ರಾಮನಾಮರೂಪವಾದ ಕವಚವೇ ನಿನ್ನನ್ನು ಮಹಾಭಯದಿಂದ ರಕ್ಷಿಸುತ್ತಿದೆ. ನೀನು ಮಾಡುತ್ತಿರುವ ನಾಮ ಸ್ಮರಣೆಯನ್ನು ಕೇಳಿದಮಾತ್ರದಿಂದಲೇ ರಾಕ್ಷಸರಾದ ನಮಗೂ ಶಾಂತಿಯು ಲಭಿಸಿದೆ. ನಿಶ್ಚಯವಾಗಿಯೂ ಅಚ್ಯುತನ ಮಹಿಮೆಯು ಎಂತಹುದಿರ ಬೇಕು? ಮಹಾಭಾಗನೇ! ರಾಮನಾಮಪ್ರಭಾವದಿಂದ ನೀನು ರಾಗಾದಿ ದೋಷಗಳಿಂದ ರಹಿತನಾಗಿರುವೆ. ಅದೇ ರಾಮಕಥಾಪ್ರಭಾವದಿಂದ ನನ್ನನ್ನೂ ಈ ಘೋರಪಾತಕದಿಂದ ಮುಕ್ತನನ್ನಾಗಿ ಮಾಡು. ನಾನು ಈ ಹಿಂದೆ ನಮ್ಮ ಗುರುಗಳನ್ನು ಅನಾದರಿಸಿದ್ದೆನು. ಆದರೂ ದಯಾಮಯರಾದ ಗುರುಗಳು ನನ್ನ ವಿಷಯದಲ್ಲಿ ಪ್ರಸನ್ನರಾಗಿ ಈ ಮಾತನ್ನು ಹೇಳಿದ್ದರು :

'ವಾಲ್ಮೀಕಿಮುನಿಯಿಂದ ರಚಿತವಾದ ರಾಮಾಯಣವನ್ನು ಕಾರ್ತಿಕ ಮಾಸದ ಶುಕ್ಲಪಕ್ಷದಲ್ಲಿ ಪ್ರಯತ್ನಪೂರ್ವಕವಾಗಿ ಕೇಳಬೇಕು. ರಾಮಾಯಣ ಕಥಾಮೃತವನ್ನು ಒಂಬತ್ತು ದಿವಸಗಳು ಕೇಳಬೇಕು.'

ಬ್ರಾಹ್ಮಣೋತ್ತಮನೇ! ನೀನು ಅಂತಹ ಶ್ರೀರಾಮನ ಕಥೆಯನ್ನೇ ಹಾಡಿಕೊಂಡು ಬರುತ್ತಿರುವೆ. ಈಗ ನನಗೂ ನೀನು ರಾಮಾಯಣದ ಕಥೆಯನ್ನು ಆಮೂಲಾಗ್ರವಾಗಿ ಹೇಳಿ ಈ ಪಾಪಕೂಪದಿಂದ ನನ್ನನ್ನು ಉದ್ಧರಿಸು."

ನಾರದರು ಹೇಳುತ್ತಾರೆ :

“ಸನತ್ಕುಮಾರ! ರಾಮಾಯಣದ ಖ್ಯಾತಿಯನ್ನೂ ಮತ್ತು ಶ್ರೀರಾಮನ ಮಹಿಮೆಯನ್ನೂ ರಾಕ್ಷಸನಿಂದ ಕೇಳಿ ಗರ್ಗನಿಗೆ ವಿಸ್ಮಯವಾಯಿತು. ರಾಮಾಯಣಪಾರಾಯಣದಲ್ಲೇ ನಿರತನಾಗಿದ್ದ ಆ ವಿಪ್ರನು ಕೃಪೆಯಿಂದ ಕೂಡಿದವನಾಗಿ ರಾಕ್ಷಸನಿಗೆ ಹೇಳಿದನು :

“ರಾಕ್ಷಸೇಂದ್ರನೇ! ರಾಮಭಕ್ತಿಪರಾಯಣನೇ! ನಿನ್ನ ಬುದ್ಧಿಯು ನಿರ್ಮಲವಾಗಿದೆ. ಈಗ ಕಾರ್ತಿಕಮಾಸದ ಶುಕ್ಲಪಕ್ಷವು ಪ್ರಾರಂಭವಾಗಿದೆ. ಈಗಲೇ ನೀನು ರಾಮಾಯಣಕಥೆಯನ್ನು ಕೇಳು. ಅಂತೆಯೇ ರಾಮನ ಮಹಿಮೆಯನ್ನೂ ಕೇಳು. ರಾಮಧ್ಯಾನಪರಾಯಣರನ್ನು ತೊಂದರೆಪಡಿಸಲು ಯಾರಿಂದ ತಾನೇ ಸಾಧ್ಯವಾಗುತ್ತದೆ? ರಾಮಭಕ್ತನು ಎಲ್ಲಿರುವನೋ ಅಲ್ಲಿಯೇ ಬ್ರಹ್ಮ-ವಿಷ್ಣು-ಮಹೇಶ್ವರರೂ, ದೇವತೆಗಳೂ, ಸಿದ್ಧರೂ, ರಾಮಾಯಣವನ್ನೇ ಆಶ್ರಯಿಸಿರುವ ಮನುಷ್ಯರೂ ಇರುತ್ತಾರೆ.

ಆದುದರಿಂದ ಕಾರ್ತಿಕಮಾಸದ ಶುಕ್ಲಪಕ್ಷದಲ್ಲಿ ನೀನು ರಾಮಾಯಣದ ಕಥೆಯನ್ನು ಕೇಳು. ಒಂಬತ್ತು ದಿವಸಗಳು ಸಾವಧಾನತೆಯಿಂದ ಕೇಳಬೇಕು.”

ಹೀಗೆ ಹೇಳಿ ಗರ್ಗನು ರಾಮಾಯಣದ ಕಥೆಯನ್ನು ಸೌದಾಸನಿಗೆ ಹೇಳಿದನು. ಕಥಾಶ್ರವಣಮಾತ್ರದಿಂದಲೇ ಅವನು ರಾಕ್ಷಸತ್ವವನ್ನು ವಿಸರ್ಜಿಸಿ ದೇವೋಪಮನಾಗಿ ಬೆಳಗಿದನು. ಕೋಟಿಸೂರ್ಯರ ಪ್ರಕಾಶಕ್ಕೆ ಸಮಾನವಾದ ಪ್ರಕಾಶವನ್ನು ಹೊಂದಿ ನಾರಾಯಣನ ಪ್ರಭೆಗೆ ಸಮಾನವಾದ ಪ್ರಭೆಯಿಂದ ಕೂಡಿದವನಾಗಿ ನಾರಾಯಣನಂತೆಯೇ ಶಂಖ-ಚಕ್ರ-ಗದಾಪಾಣಿಯಾಗಿ ತನಗೆ ರಾಮಕಥೆಯನ್ನು ಉಪದೇಶಿಸಿದ ಗರ್ಗನನ್ನು ಪ್ರಶಂಸಿಸುತ್ತಾ ಶ್ರೀಹರಿಯ ಭವನಕ್ಕೆ (ವೈಕುಂಠಕ್ಕೆ) ತೆರಳಿದನು.”

ನಾರದರು ಮುಂದುವರಿಸಿ ಹೇಳುತ್ತಾರೆ :

“ಸನತ್ಕುಮಾರ! ಈ ಕಾರಣದಿಂದ ನೀವೆಲ್ಲರೂ ರಾಮಾಯಣಕಥಾ ಮೃತವನ್ನು ಕೇಳಿರಿ. ಈ ರಾಮಾಯಣಕಥೆಯು ಮತ್ತು ಶ್ರೀರಾಮನ ಮಹಿಮೆಯು ಕಾರ್ತಿಕಮಾಸದಲ್ಲಿ ವಿಶೇಷವಾಗಿ ಹೇಳಲ್ಪಡುತ್ತದೆ.

'ರಾಮಾಯಣ'–ಎಂಬ ಹೆಸರಿನ ಸ್ಮರಣಮಾತ್ರದಿಂದಲೇ ಮನುಷ್ಯನು ಕೋಟಿ ಮಹಾಪಾತಕಗಳಿಂದ ವಿಮುಕ್ತನಾಗಿ ಪರಮಗತಿಯನ್ನು ಹೊಂದುತ್ತಾನೆ. 'ರಾಮಾಯಣ'–ಎಂಬ ಹೆಸರನ್ನು ಒಂದು ಬಾರಿ ಉಚ್ಚರಿಸಿದರೂ ಮನುಷ್ಯನು ಸಮಸ್ತಪಾಪಗಳಿಂದಲೂ ಮುಕ್ತನಾಗಿ ವಿಷ್ಣುಲೋಕಕ್ಕೆ ಹೋಗುತ್ತಾನೆ. ಯಾವ ಮನುಷ್ಯರು ಭಕ್ತಿಭಾವದಿಂದ ರಾಮಾಯಣವನ್ನು ಪಾರಾಯಣ ಮಾಡುವರೋ ಮತ್ತು ಕೇಳುವರೋ–ಅಂತಹವರಿಗೆ ಗಂಗಾ ನದಿಯಲ್ಲಿ ಸ್ನಾನಮಾಡುವುದರಿಂದ ಲಭ್ಯವಾಗುವುದಕ್ಕಿಂತಲೂ ನೂರು ಪಟ್ಟು ಹೆಚ್ಚಾದ ಫಲವು ಲಭಿಸುತ್ತದೆ."

೨ನೆಯ ಅಧ್ಯಾಯವು ಮುಗಿಯಿತು.

೩ನೆಯ ಅಧ್ಯಾಯ

ಮಾಘಮಾಸದಲ್ಲಿರಾಮಾಯಣವನ್ನು ಪಾರಾಯಣಮಾಡುವುದರ ಫಲ : ಸುಮತಿ ಮತ್ತು ಸತ್ಯವತಿಯರ ಪೂರ್ವಜನ್ಮೇತಿಹಾಸ

ಸನತ್ಕುಮಾರನು ಹೇಳುತ್ತಾನೆ :

"ನಾರದರೇ! ನೀವು ಅದ್ಭುತವಾದ ಈ ಇತಿಹಾಸವನ್ನು ಹೇಳಿದಿರಿ. ಇಷ್ಟರಿಂದಲೇ ನಮಗೆ ತೃಪ್ತಿಯಾಗಿಲ್ಲ. ರಾಮಾಯಣದ ಮಹಿಮೆಯನ್ನು ಇನ್ನೂ ವಿಸ್ತಾರವಾಗಿ ಹೇಳಿರಿ.

ಈ ಹಿಂದೆ ನೀವು ಕಾರ್ತಿಕಮಾಸದಲ್ಲಿ ರಾಮಾಯಣವನ್ನು ಪಾರಾಯಣಮಾಡುವುದರಿಂದ ಲಭಿಸುವ ಫಲವನ್ನು ಹೇಳಿದಿರಿ. ಈಗ ಮತ್ತೊಂದು ಮಾಸದಲ್ಲಿ ಪಾರಾಯಣಮಾಡುವುದರಿಂದ ಲಭಿಸುವ ಫಲ ವನ್ನು ಹೇಳಿರಿ. ನಿಮ್ಮ ವಚನಾಮೃತಶ್ರವಣದಿಂದ ಯಾರಿಗೆ ತಾನೇ ತೃಪ್ತಿಯಾಗುವುದಿಲ್ಲ?"

ನಾರದರು ಹೇಳುತ್ತಾರೆ :

"ಮುನಿಗಳೇ! ನೀವೆಲ್ಲರೂ ಮಹಾಭಾಗ್ಯಶಾಲಿಗಳು ಮತ್ತು ಕೃತಾರ್ಥರು. ಇದರಲ್ಲಿ ಸಂಶಯವೇ ಇಲ್ಲ. ಏಕೆಂದರೆ : ರಾಮನ ಪ್ರಭಾವ ವನ್ನು ನೀವು ಭಕ್ತಿಪೂರ್ವಕವಾಗಿ ಕೇಳಲು ಉದ್ಯುಕ್ತರಾಗಿರುವಿರಿ. ಬ್ರಹ್ಮ ಚಾರಿಗಳಾದ ಮುನಿಗಳು–ಶ್ರೀರಾಮನ ಮಹಿಮೆಯ ಶ್ರವಣವು ಪುಣ್ಯಾತ್ಮ

ರಿಗೂ ದುರ್ಲಭವೆಂದು ಹೇಳುತ್ತಾರೆ. ಮುನಿಗಳೇ! ನೀವೆಲ್ಲರೂ ವಿಚಿತ್ರವಾದ, ಸಮಸ್ತಪಾಪಗಳನ್ನೂ ಹೋಗಲಾಡಿಸುವ, ಸಮಸ್ತರೋಗಗಳನ್ನೂ ಪರಿಹರಿಸುವ, ಪುರಾತನವಾದ ಈ ಇತಿಹಾಸವನ್ನು ಕೇಳಿರಿ. ದ್ವಾಪರಯುಗದಲ್ಲಿ ಸುಮತಿ–ಎಂಬ ರಾಜನಿದ್ದನು. ಅವನು ಸೋಮವಂಶೀಯನು. ಏಳು ದ್ವೀಪಗಳಿಗೂ ಏಕೈಕಚಕ್ರವರ್ತಿಯಾಗಿದ್ದನು. ಧರ್ಮಾತ್ಮನೂ ಸತ್ಯಸಂಧನೂ ಆಗಿದ್ದನು. ಸಮಸ್ತವಾದ ಸಂಪತ್ತುಗ್ಗಳಿಂದಲೂ ಶೋಭಿಸುತ್ತಿದ್ದನು. ರಾಜನು ಸರ್ವಕಾಲದಲ್ಲಿಯೂ ಶ್ರೀರಾಮನ ಕಥೆಯನ್ನೇ ಆಶ್ರಯಿಸಿಕೊಂಡು ಶ್ರೀರಾಮನ ಪೂಜೆಯಲ್ಲೇ ನಿರತನಾಗಿರುತ್ತಿದ್ದನು. ರಾಮಪೂಜೆಯಲ್ಲಿ ನಿರತರಾಗಿರುವವರನ್ನು ಶುಶ್ರೂಷೆಮಾಡುತ್ತಿದ್ದನು. ಅಹಂಕಾರ-ಮಮಕಾರಗಳಿಂದ ರಹಿತನಾಗಿದ್ದನು. ಪೂಜ್ಯರನ್ನು ಯಥೋಚಿತವಾಗಿ ಸತ್ಕರಿಸುತ್ತಿದ್ದನು. ಎಲ್ಲರನ್ನೂ ಸಮಭಾವದಿಂದ ಕಾಣುತ್ತಿದ್ದನು. ಸಕಲ ಸದ್ಗುಣಸಂಪನ್ನನಾಗಿ, ಸರ್ವಪ್ರಾಣಿಗಳ ಹಿತದಲ್ಲಿಯೇ ಆಸಕ್ತಿಯುಳ್ಳವನೂ, ಶಾಂತಸ್ವಭಾವದವನೂ, ಮಾಡಿದ ಉಪಕಾರವನ್ನು ಸ್ಮರಿಸುವವನೂ ಆಗಿದ್ದನು. ಹೀಗಿದ್ದುದರಿಂದ ರಾಜನು ಅಪಾರವಾದ ಕೀರ್ತಿಯನ್ನು ಗಳಿಸಿದ್ದನು.

ಸುಮತಿರಾಜನಿಗೆ ಸತ್ಯವತೀ–ಎಂಬ ಹೆಸರಿನ ಭಾರ್ಯೆಯಿದ್ದಳು. ಅವಳು ಮಹಾಭಾಗ್ಯಶಾಲಿನಿಯೂ, ಸರ್ವಲಕ್ಷಣಸಂಪನ್ನೆಯೂ, ಪತಿವ್ರತೆಯೂ, ಪತಿಯನ್ನೇ ತನ್ನ ಪ್ರಾಣಗಳಿಗಿಂತ ಹೆಚ್ಚಾಗಿ ಪ್ರೀತಿಸುವವಳೂ ಆಗಿದ್ದಳು. ಆ ದಂಪತಿಗಳು ರಾಮಾಯಣಪಾರಾಯಣದಲ್ಲೇ ವಿಶೇಷವಾದ ಆಸಕ್ತಿಯುಳ್ಳವರಾಗಿದ್ದರು.

ಅವರು ಪ್ರತಿನಿತ್ಯವೂ ಅನ್ನದಾನ-ಜಲದಾನಗಳನ್ನು ಮಾಡುವುದರಲ್ಲಿಯೂ ನಿರತರಾಗಿರುತ್ತಿದ್ದರು. ಪ್ರಜೆಗಳ ಉಪಯೋಗಕ್ಕಾಗಿ ಕೆರೆ, ತೋಟ-ಬಾವಿಗಳನ್ನು ಬಹುಸಂಖ್ಯೆಯಲ್ಲಿ ನಿರ್ಮಾಣಮಾಡಿದ್ದರು. ಮಹಾಭಾಗ್ಯಶಾಲಿಯಾದ ಸುಮತಿರಾಜನು ಸದಾ ರಾಮಾಯಣವನ್ನೇ ಆಶ್ರಯಿಸಿದ್ದನು. ಭಕ್ತಿಭಾವದಿಂದ ಕೂಡಿದವನಾಗಿ ರಾಮಾಯಣವನ್ನು ಪಾರಾಯಣ ಮಾಡುತ್ತಿದ್ದನು. ಹಾಗೂ ಬೇರೆಯವರು ಮಾಡುತ್ತಿದ್ದ ಪಾರಾಯಣವನ್ನು ಏಕಾಗ್ರವಾದ ಮನಸ್ಸಿನಿಂದ ಕೇಳುತ್ತಿದ್ದನು. ಹೀಗೆ ನಿತ್ಯವೂ ಶ್ರೀರಾಮನ

ಆರಾಧನೆಯಲ್ಲಿಯೇ ನಿರತನಾಗಿರುತ್ತಿದ್ದ, ಧರ್ಮಕೋವಿದನಾಗಿದ್ದ ರಾಜನನ್ನೂ–ಅವನ ಪ್ರಿಯಭಾರ್ಯೆಯಾದ ಸತ್ಯವತಿಯನ್ನೂ ದೇವತೆಗಳೂ ಸ್ತೋತ್ರಮಾಡುತ್ತಿದ್ದರು.

ಮೂರು ಲೋಕಗಳಲ್ಲಿಯೂ ರಾಮಭಕ್ತರೆಂಬ ಖ್ಯಾತಿಯನ್ನು ಗಳಿಸಿದ್ದ ದಂಪತಿಗಳನ್ನು ನೋಡಲು ಒಮ್ಮೆ ವಿಭಾಂಡಕರೆಂಬ ಮಹರ್ಷಿಗಳು ಅನೇಕ ಶಿಷ್ಯರೊಡನೆ ಆಗಮಿಸಿದರು. ವಿಭಾಂಡಕರು ಬಂದುದನ್ನು ನೋಡಿ ರಾಜನಿಗೆ ಬಹಳ ಸಂತೋಷವಾಯಿತು. ಒಡನೆಯೇ ಪತ್ನೀಸಮೇತನಾಗಿ ಹಲವು ಬಗೆಯಾದ ಪೂಜಾಸಾಮಗ್ರಿಗಳೊಡನೆ ಮಹರ್ಷಿಗಳನ್ನು ಸತ್ಕರಿಸಿ ದನು. ಆತಿಥ್ಯವನ್ನು ಸ್ವೀಕರಿಸಿ ಸುಖಾಸನದಲ್ಲಿ ಶಾಂತಭಾವದಿಂದ ಕುಳಿತಿದ್ದ ವಿಭಾಂಡಕರಿಗೆ ಸಿಂಹಾಸನದಲ್ಲಿ ಕುಳಿತಿದ್ದ ರಾಜನು ಕೈಮುಗಿದುಕೊಂಡು ಹೇಳಿದನು :

"ಪೂಜ್ಯರೇ! ತಮ್ಮ ಆಗಮನದಿಂದ ಕೃತಾರ್ಥನಾದೆನು. ಸತ್ಪುರುಷರ ಆಗಮನವು ಸುಖಕರವಾದುದು. ಇದನ್ನು ಸತ್ಪುರುಷರೆಲ್ಲರೂ ಪ್ರಶಂಸಿ ಸುತ್ತಾರೆ.

ಯತ್ರ ಸ್ಯಾನ್ಮಹತಾಂ ಪ್ರೇಮ ತತ್ರ ಸ್ಯುಃ ಸರ್ವಸಂಪದಃ ।
ತೇಜಃ ಕೀರ್ತಿರ್ಧನಂ ಪುತ್ರ ಇತಿ ಪ್ರಾಹುರ್ವಿಪಶ್ಚಿತಃ ॥೧೮॥

ಮಹಾತ್ಮರ ಪ್ರೇಮವು ಯಾರಲ್ಲಿರುವುದೋ–ಅವರಲ್ಲಿ ಸಕಲ ಸಂಪತ್ತುಗಳೂ ಇರುತ್ತವೆ. ಮಹಾತ್ಮರ ವಿಶ್ವಾಸಮಾತ್ರದಿಂದಲೇ ತೇಜಸ್ಸು, ಕೀರ್ತಿ, ಧನ, ಮಕ್ಕಳು–ಈ ಎಲ್ಲವೂ ಸಿದ್ಧವಾಗುತ್ತವೆ–ಹೀಗೆಂದು ವಿದ್ವಾಂಸರು ಹೇಳುತ್ತಾರೆ. ಯಾರಲ್ಲಿ ಸತ್ಪುರುಷರು ಕೃಪೆತೋರುವರೋ–ಅವನಲ್ಲಿ ಕಲ್ಯಾಣಮಯವಾದ ಸಾಧನಗಳು ವೃದ್ಧಿಹೊಂದುತ್ತಿರುತ್ತವೆ. ಯಾವನು ಬ್ರಾಹ್ಮಣನ ಪಾದೋದಕವನ್ನು ತಲೆಯಲ್ಲಿ ಧರಿಸುವನೋ–ಅಂತಹವನು ಸರ್ವತೀರ್ಥಗಳಲ್ಲಿ ಅವಗಾಹನಮಾಡಿದ ಪುಣ್ಯಾತ್ಮನೇ ಆಗುತ್ತಾನೆ. ಈ ವಿಷಯದಲ್ಲಿ ಸಂಶಯವೇ ಇಲ್ಲ.

ಶಾಂತಾತ್ಮನೇ! ನನ್ನ ಮಕ್ಕಳು, ಭಾರ್ಯೆಯರು, ಸಂಪತ್ತು–ಎಲ್ಲ ವನ್ನೂ ನಿಮ್ಮ ಪಾದದಡಿಯಲ್ಲಿ ಸಮರ್ಪಿಸಿದ್ದೇನೆ. ನಾನೇನು ಮಾಡ ಬೇಕೆಂಬುದನ್ನು ಆಜ್ಞಾಪಿಸಿರಿ."

ಸನತ್ಕುಮಾರ! ಹೀಗೆ ಹೇಳಿದ ರಾಜನನ್ನು ನೋಡಿ ಹರ್ಷಿತರಾದ ವಿಭಾಂಡಕರು ರಾಜನನ್ನು ಕೈಯಿಂದ ಸ್ಪರ್ಶಿಸುತ್ತಾ ಹೇಳಿದರು :

"ಮಹಾರಾಜ! ನೀನು ಹುಟ್ಟಿರುವ ಕುಲಕ್ಕೆ ಅನುರೂಪವಾದ ಮಾತುಗಳನ್ನೇ ಆಡಿರುವೆ. ಸಾಧುಗಳಿಗೆ ವಿನಯದಿಂದ ಯಾರು ತಲೆಬಗ್ಗಿಸುವರೋ–ಅವರೆಲ್ಲರೂ ಪರಮಶ್ರೇಯಸ್ಸಿಗೆ ಭಾಗಿಗಳಾಗುತ್ತಾರೆ. ಸನ್ಮಾರ್ಗದಲ್ಲಿಯೇ ಮುನ್ನಡೆಯುತ್ತಿರುವ ನಿನ್ನ ವಿಷಯದಲ್ಲಿ ನಾನು ಸುಪ್ರೀತನಾಗಿದ್ದೇನೆ. ಮಹಾಭಾಗ್ಯಶಾಲಿಯೇ! ನಿನಗೆ ಮಂಗಳವಾಗಲಿ. ಈಗ ನಾನು ಕೇಳಲಿರುವ ಪ್ರಶ್ನೆಗಳಿಗೆ ಉತ್ತರಿಸು.

ಭಗವಂತನಾದ ಶ್ರೀಹರಿಯನ್ನು ಸಂತೋಷಗೊಳಿಸುವಂತಹ ಅನೇಕ ಪುರಾಣ-ಪುಣ್ಯಕಥೆಗಳಿವೆ. ಆದರೂ ನೀನು ಮಾಘಮಾಸದಲ್ಲಿ ರಾಮಾಯಣವೊಂದನ್ನೇ ಆಶ್ರಯಿಸಿರುವೆ. ರಾಮಕಥಾಪಠನ-ಪಾಠನಗಳಲ್ಲಿಯೇ ನಿರತನಾಗಿರುವೆ. ಸಾಧ್ವಿಯಾದ ನಿನ್ನ ಪತ್ನಿಯೂ ರಾಮಾಯಣಪರಾಯಣೆಯಾಗಿರುವಳು. ಇದಕ್ಕೆ ಕಾರಣವೇನು? ಯಥಾವತ್ತಾಗಿ ಹೇಳು."

ರಾಜನು ಹೇಳುತ್ತಾನೆ :

"ಪೂಜ್ಯರೇ! ಕೇಳಿರಿ. ನಿಮ್ಮ ಪ್ರಶ್ನೆಗೆ ಯಥಾನುರೂಪವಾಗಿಯೇ ಉತ್ತರಿಸುವೆನು. ನಮ್ಮಿಬ್ಬರ ಚರಿತ್ರೆಯು ಮೂಜಗಕ್ಕೂ ಆಶ್ಚರ್ಯವನ್ನುಂಟುಮಾಡುವುದಾಗಿದೆ.

ನಾನು ಹಿಂದೆ 'ಮಾಲತಿ'–ಎಂಬ ಹೆಸರಿನ ಶೂದ್ರನಾಗಿದ್ದೆನು. ಕುತ್ಸಿತವಾದ ಮಾರ್ಗದಲ್ಲಿಯೇ ವ್ಯವಹರಿಸುತ್ತಿದ್ದು ಜನರಿಗೆ ಅಹಿತಕಾರ್ಯಗಳನ್ನೇ ಮಾಡುತ್ತಿದ್ದೆನು. ನನ್ನ ಕೆಟ್ಟ ಚಾಳಿಗಳೆಂದರೆ ಅಷ್ಟಿಷ್ಟಲ್ಲ. ಚಾಡಿ ಹೇಳುವುದು, ಧರ್ಮವನ್ನು ದ್ವೇಷಿಸುವುದು, ದೇವರ ಸ್ವತ್ತನ್ನು ಅಪಹರಿಸುವುದು, ಮಹಾಪಾತಕಿಗಳೊಡನೆ ಬೆರೆಯುವುದು, ದೇವರ ದುಡ್ಡಿನಿಂದಲೇ ಜೀವಿಕೆಯನ್ನು ನಡೆಸುವುದು, ಗೋವುಗಳನ್ನು ಸಾಯಿಸುವುದು, ಬ್ರಾಹ್ಮಣರನ್ನು ಕೊಲೆಮಾಡುವುದು, ಕಳ್ಳತನಮಾಡುವುದು, ಕಣ್ಣಿಗೆ ಕಂಡ ಪ್ರಾಣಿ

ಗಳನ್ನು ವಧಿಸುವುದು, ಎಲ್ಲರೊಡನೆಯೂ ನಿಷ್ಠುರವಾಗಿ ಮಾತನಾಡು ವುದು, ವೇಶ್ಯಾಸಹವಾಸ–ಇತ್ಯಾದಿಗಳು ನನ್ನ ನಿತ್ಯಕರ್ಮಗಳಾಗಿದ್ದುವು.

ಹೀಗೆ ನಾನು ಸ್ವಲ್ಪಕಾಲದವರೆಗೆ ಜೀವನವನ್ನು ನಡೆಸುತ್ತಿದ್ದೆನು. ದೊಡ್ಡವರು ಹೇಳಿದ ಹಿತೋಕ್ತಿಗಳನ್ನು ಕೇಳುತ್ತಿರಲಿಲ್ಲ. ಅದರಿಂದಾಗಿ ನನ್ನ ಬಂಧುಗಳೆಲ್ಲರೂ ನನ್ನನ್ನು ಪರಿತ್ಯಜಿಸಿದರು. ಅದರಿಂದ ನಾನು ಬಹುದುಃಖಿತ ನಾಗಿ ಅರಣ್ಯವನ್ನು ಸೇರಿದೆನು. ಅಲ್ಲಿಯೂ ನಾನು ಮೃಗಗಳ ಮಾಂಸವನ್ನು ತಿನ್ನುತ್ತಿದ್ದೆನು. ದಾರಿಹೋಕರನ್ನು ತಡೆದು ಸುಲಿಗೆಮಾಡುತ್ತಿದ್ದೆನು. ಏಕಾಕಿಯಾಗಿದ್ದುದರಿಂದ ನನಗೆ ಬಹಳ ದುಃಖವಾಗುತ್ತಿದ್ದಿತು. ಆದರೂ ನಾನು ಬೇರೆಯ ಮಾರ್ಗವನ್ನು ಕಾಣದೇ ನಿರ್ಜನವಾದ ಅರಣ್ಯದಲ್ಲಿಯೇ ವಾಸಮಾಡುತ್ತಿದ್ದೆನು. ಹೀಗೆಯೇ ಇರುತ್ತಿರುವಾಗ ಒಮ್ಮೆ ನಾನು ಹಸಿವು-ಬಾಯಾರಿಕೆಗಳಿಂದ ಬಳಲಿ ನಿದ್ರೆಯಿಂದ ತೂಕಡಿಸುತ್ತಾ ತತ್ತರಿಸಿಕೊಂಡು ಜನರಹಿತವಾದ ವನದಲ್ಲಿ ಹೋಗುತ್ತಿದ್ದಾಗ ದೈವಯೋಗದಿಂದ ವಸಿಷ್ಠರ ಆಶ್ರಮವನ್ನು ನೋಡಿದೆನು. ವಸಿಷ್ಠರ ಆಶ್ರಮದ ಸಮೀಪದಲ್ಲಿ ಒಂದು ದಿವ್ಯವಾದ ಸರೋವರವಿದ್ದಿತು. ಹಂಸ-ಕಾರಂಡವಾದಿ ಪಕ್ಷಿಗಳು ಅಲ್ಲಿ ನಲಿದಾಡುತ್ತಿದ್ದುವು. ದಿವ್ಯಪುಷ್ಪಗಳಿಂದ ಆ ಸರೋವರವು ಆವೃತವಾಗಿದ್ದಿತು. ಅಲ್ಲಿಗೆ ಹೋಗಿ ನೀರನ್ನು ಕುಡಿದು ಬಾಯಾರಿಕೆಯನ್ನು ಕಳೆದುಕೊಂಡೆನು. ಅಂತೆಯೇ ಸರೋವರದ ಸಮೀಪದಲ್ಲಿದ್ದ ವೃಕ್ಷಮೂಲಗಳನ್ನು (ಗೆಡ್ಡೆ-ಗೆಣಸುಗಳನ್ನು) ಕಿತ್ತು ತಿಂದು ಹಸಿವನ್ನು ನಿವಾರಿಸಿಕೊಂಡೆನು.

ವಸಿಷ್ಠರ ಆಶ್ರಮದ ಸಮೀಪದಲ್ಲಿಯೇ ನಾನೂ ಒಂದು ಗುಡಿಸಲನ್ನು ಕಟ್ಟಿಕೊಂಡೆನು. ಒಡೆದು ಬಿದ್ದಿದ್ದ ಸ್ಫಟಿಕಶಿಲೆಗಳನ್ನೇ ಜೋಡಿಸಿಟ್ಟು ಗುಡಿ ಸಲಿನ ಗೋಡೆಯನ್ನು ಕಟ್ಟಿದೆನು. ಎಲೆಗಳನ್ನೂ, ಹುಲ್ಲನ್ನೂ, ಕಟ್ಟಿಗೆ ಗಳನ್ನೂ ಹೊದ್ದಿಸಿ ಸುಂದರವಾದ ಮನೆಯನ್ನೇ ಕಟ್ಟಿಕೊಂಡೆನು. ಅಲ್ಲಿ ನಾನು ವ್ಯಾಧವೃತ್ತಿಯನ್ನೇ ಅವಲಂಬಿಸಿ ಅನೇಕ ವಿಧವಾದ ಮೃಗಗಳನ್ನು ಕೊಲ್ಲುತ್ತಾ ಕಾಲಕಳೆಯುತ್ತಿದ್ದೆನು. ಹಾಗೆಯೇ ನಾನು ಇಪ್ಪತ್ತು ವರ್ಷ ಗಳನ್ನು ಅಲ್ಲಿಯೇ ಕಳೆದೆನು. ಈ ನನ್ನ ಭಾರ್ಯೆಯು ಹಿಂದೆ ನಿಷಾದಸ್ತ್ರೀ ಯಾಗಿದ್ದಳು. ಕಾಲೀ ಎಂಬ ಹೆಸರಿನಿಂದ ಪ್ರಸಿದ್ಧಳಾಗಿದ್ದಳು. ಹಿಂದಿನ ಜನ್ಮ

ದಲ್ಲಿ ಅವಳು ವಿಂಧ್ಯದೇಶದವಳು. ಅವಳನ್ನು ಕಾರಣಾಂತರದಿಂದ ಬಂಧು ಗಳೆಲ್ಲರೂ ತ್ಯಜಿಸಿಬಿಟ್ಟಿದ್ದರು. ಅವಳ ದೇಹವು ಜೀರ್ಣವಾಗಿ ಹೋಗಿದ್ದಿತು. ಪರಮದುಃಖಿತೆಯಾಗಿ ಅವಳು ನಾನು ವಾಸಮಾಡುತ್ತಿದ್ದ ಸ್ಥಳಕ್ಕೇ ಆಗಮಿ ಸಿದಳು. ಹಸಿವು-ಬಾಯಾರಿಕೆಗಳಿಂದ ಅವಳೂ ಬಹಳವಾಗಿ ಬಳಲಿದ್ದಳು. ಭೋಜನಕ್ಕಾಗಿ ಶೋಕಿಸುತ್ತಿದ್ದಳು. ನಿರ್ಜನವಾಗಿದ್ದ ಆ ಅರಣ್ಯದಲ್ಲಿ ಸುತ್ತಾಡುತ್ತಾ ದೈವಯೋಗದಿಂದ ನಾನಿದ್ದಲ್ಲಿಗೆ ಆಗಮಿಸಿದಳು. ಆಗ ಉರಿ ಬೇಸಿಗೆಯ ಕಾಲವಾಗಿದ್ದಿತು. ಬಿಸಿಲಿನ ತಾಪದಿಂದ ಬಹಳ ದಣಿದಿದ್ದಳು. ಅಂತಹ ದುಃಖದಲ್ಲಿದ್ದ, ಬಿಸಿಲಿನ ತಾಪದಿಂದ ಪೀಡಿತಳಾಗಿದ್ದ ಕಾಲಿಯನ್ನು ನೋಡಿ ನನ್ನ ಮನಸ್ಸಿನಲ್ಲಿ ಅವಳ ಮೇಲೆ ದಯಾಭಾವವು ಮೂಡಿತು. ನಾನವಳಿಗೆ ಕುಡಿಯಲು ನೀರನ್ನೂ ತಿನ್ನಲು ಮಾಂಸ-ಗೆಡ್ಡೆ-ಗೆಣಸುಗಳನ್ನೂ ಕೊಟ್ಟೆನು. ಅವಳು ಆಯಾಸವನ್ನು ಪರಿಹರಿಸಿಕೊಂಡನಂತರ ಅವಳ ವೃತ್ತಾಂತವನ್ನು ಕೇಳಿದೆನು. ಅವಳು ತನ್ನ ವೃತ್ತಾಂತವನ್ನು ವಿವರಿಸಿ ಹೇಳಿದಳು.

ಕಾಲೀ ಎಂಬ ಹೆಸರಿನಿಂದ ಪ್ರಸಿದ್ಧಳಾಗಿದ್ದ ಅವಳು ನಿಷಾದರ ಕುಲ ದಲ್ಲಿ ಹುಟ್ಟಿದವಳು. ಅವಳ ತಂದೆಯ ಹೆಸರು ದಾಂಭಿಕನೆಂದು. ಅವನು ವಿಂಧ್ಯಪರ್ವತದಲ್ಲಿ ವಾಸಮಾಡುತ್ತಿದ್ದನು. ಇತರರ ಸ್ವತ್ತನ್ನು ಅಪಹರಿಸು ವುದು, ಚಾಡಿಹೇಳುವುದು–ಇತ್ಯಾದಿಗಳೇ ಅವಳ ನಿತ್ಯವೃತ್ತಿಯಾಗಿದ್ದಿತು. ಅವಳೊಮ್ಮೆ ತನ್ನ ಪತಿಯನ್ನೇ ಕೊಂದುಬಿಟ್ಟಳು. ಆ ಕಾರಣದಿಂದಾಗಿ ಅವಳ ಬಂಧುವರ್ಗದವರು ಕಾಲಿಯನ್ನು ತೊರೆದರು. ಅನಂತರ ಅವಳು ಕಾಡಿನಲ್ಲಿ ಅಲೆದಾಡುತ್ತಾ ನನ್ನ ಬಳಿಗೆ ಬಂದಳು. ಈ ಎಲ್ಲ ವಿಷಯಗಳನ್ನೂ ಕಾಲಿಯೇ ನನಗೆ ವಿವರಿಸಿ ಹೇಳಿದಳು. ಅಲ್ಲಿಂದ ಮುಂದೆ ನಾನೂ ಮತ್ತು ಕಾಲಿಯೂ ದಂಪತಿಗಳಾದೆವು. ಮಾಂಸಾಹಾರಿಗಳಾಗಿದ್ದ ನಾವು ಪುಣ್ಯತಮವಾದ ವಸಿಷ್ಠರ ಆಶ್ರಮದ ಸಮೀಪದಲ್ಲಿಯೇ ಇದ್ದೆವು.

ಒಂದು ದಿನ ನಾವು ಯಾವುದೋ ಕಾರ್ಯದ ನಿಮಿತ್ತವಾಗಿ ವಸಿಷ್ಠರ ಆಶ್ರಮಕ್ಕೆ ಹೋದೆವು. ಅಲ್ಲಿ ನಾವು ದೇವರ್ಷಿಗಳ ಸಮಾಗಮವನ್ನು ನೋಡಿದೆವು. ಆಗ ಮಾಘಮಾಸವಾಗಿದ್ದಿತು. ಬ್ರಾಹ್ಮಣರೆಲ್ಲರೂ ರಾಮಾ

ಯಣಪಾರಾಯಣದಲ್ಲಿ ನಿರತರಾಗಿದ್ದರು. ಆ ಸಮಯದಲ್ಲಿ ನಾವು ಯಾವ ಆಹಾರವನ್ನೂ ತಿಂದಿರಲಿಲ್ಲ. ಹಸಿವು-ಬಾಯಾರಿಕೆಗಳಿಂದ ಬಳಲಿದ್ದೆವು. ಉದ್ದೇಶವಿಲ್ಲದೆಯೇ ನಾವು ವಸಿಷ್ಠರ ಆಶ್ರಮಕ್ಕೆ ಹೋಗಿದ್ದೆವು. ಅಲ್ಲಿಗೆ ಹೋದನಂತರ ಅಲ್ಲಿ ನಡೆಯುತ್ತಿದ್ದ ರಾಮಾಯಣದ ಕಥಾಪ್ರವಚನವನ್ನು ಕೇಳಬೇಕೆನ್ನಿಸಿತು. ಒಂಬತ್ತು ದಿನಗಳು ಭಕ್ತಿಪೂರ್ವಕವಾಗಿ ರಾಮಾಯಣ ಕಥೆಯನ್ನು ಕೇಳುತ್ತಾ ನಾವಲ್ಲಿಯೇ ಇದ್ದೆವು. ಒಂಬತ್ತು ದಿವಸಗಳು ಕಳೆಯುತ್ತಿದ್ದಂತೆ ನಮಗೆ ಅಲ್ಲಿಯೇ ಮೃತ್ಯುವು ಸಂಭವಿಸಿತು.

ಒಂಬತ್ತು ದಿನಗಳು ಭಕ್ತಿಯಿಂದ ರಾಮಾಯಣಕಥೆಯನ್ನು ಕೇಳಿದ್ದ ರಿಂದಲೇ ಮಧುಸೂದನನು ತುಷ್ಟನಾಗಿ ನಮ್ಮನ್ನು ಕರೆದುಕೊಂಡು ಹೋಗಲು ದೇವದೂತರನ್ನು ಕಳುಹಿಸಿದನು. ದೇವದೂತರು ನಮ್ಮನ್ನು ವಿಮಾನದಲ್ಲಿ ಕುಳ್ಳಿರಿಸಿಕೊಂಡು ದೇವಲೋಕಕ್ಕೆ ಹೋದರು. ಅಲ್ಲಿ ನಾವು ದೇವದೇವನಾದ, ಚಕ್ರಿಯಾದ ಮಹಾವಿಷ್ಣುವಿನ ಸಾನ್ನಿಧ್ಯವನ್ನು ಹೊಂದಿದೆವು. ಸಾವಿರ ಕೋಟಿ ಮತ್ತು ನೂರು ಕೋಟಿ ಯುಗಗಳವರೆಗೂ (ಬಹಳ ಕಾಲ) ನಾವು ಶ್ರೀರಾಮನ ಭವನದಲ್ಲಿ ಮಹಾಭೋಗಗಳನ್ನು ಅನುಭವಿಸುತ್ತಿದ್ದು ಅನಂತರ ಬ್ರಹ್ಮಲೋಕಕ್ಕೆ ಹೋದೆವು. ಅಷ್ಟೇ ಯುಗಗಳ ಕಾಲ ಅಲ್ಲಿಯೂ ಇದ್ದು ಅನಂತರ ಇಂದ್ರಲೋಕಕ್ಕೆ ಹೋದೆವು. ಅಲ್ಲಿಯೂ ಕೂಡ ಅಷ್ಟೇ ಕೋಟಿ ಯುಗಗಳ ಕಾಲ ಉತ್ತಮೋತ್ತಮವಾದ ಭೋಗಗಳನ್ನು ಅನುಭವಿಸುತ್ತಿದ್ದು ಬಳಿಕ ಪೃಥ್ವಿಯಲ್ಲಿ ಅವತರಿಸಿದೆವು. ಇಲ್ಲಿಯೂ ಕೂಡ ನಮಗೆ ರಾಮಾಯಣದ ಪ್ರಸಾದರೂಪವಾಗಿ ಅತುಲೈಶ್ವರ್ಯವಿದೆ. ಯಾವ ಉದ್ದೇಶವೂ ಇಲ್ಲದೆಯೇ ರಾಮಾಯಣಕಥೆಯನ್ನು ಕೇಳಿದುದಕ್ಕೆ ನಮಗೆ ಈ ವಿಧವಾದ ಫಲವು ಸಿಕ್ಕಿದೆ. ಹುಟ್ಟು-ಸಾವು-ಮುಪ್ಪುಗಳನ್ನು ಪರಿಹರಿಸುವ ರಾಮಾಯಣಕಥಾಮೃತವನ್ನು ಭಕ್ತಿಭಾವದಿಂದ ಒಂಬತ್ತು ದಿವಸಗಳು ಕೇಳಬೇಕು. ಮನಸ್ಸಿಲ್ಲದೆಯೇ ಈ ಒಂದು ಕಾರ್ಯವನ್ನು ಮಾಡಿದರೂ ರಾಮಾಯಣಪ್ರಸಾದದ ಫಲವಾಗಿ ಮಹಾಫಲವೇ ಲಭಿಸು ತ್ತದೆ.”

ನಾರದರು ಹೇಳುತ್ತಾರೆ :

“ಸನತ್ಕುಮಾರ! ಮುನೀಶ್ವರರಾದ ವಿಭಾಂಡಕರು ಈ ಎಲ್ಲ ವಿಷಯ

ಗಳನ್ನೂ ಕೇಳಿ ಸುಮತಿರಾಜನನ್ನು ಅಭಿನಂದಿಸಿ ಶಿಷ್ಯರೊಡನೆ ತಪೋವನಕ್ಕೆ ಹೊರಟುಹೋದರು.

ವಿಪ್ರಶ್ರೇಷ್ಠರೇ! ನೀವೂ ಕೂಡ ದೇವದೇವನಾದ, ಚಕ್ರಿಯಾದ ಶ್ರೀರಾಮನ ಕಥೆಯನ್ನು ಕೇಳಿರಿ. ರಾಮಾಯಣಕಥಾಶ್ರವಣವು ಕಾಮ ಧೇನುವಿನಂತೆ ಸಮಸ್ತವಾದ ಕಾಮನೆಗಳನ್ನೂ ಸಿದ್ಧಿಸಿಕೊಡುತ್ತದೆ.

ಮಾಘಮಾಸದ ಶುಕ್ಲಪಕ್ಷದಲ್ಲಿ ಒಂಬತ್ತು ದಿವಸಗಳು ಸರ್ವಧರ್ಮಗಳ ಫಲಗಳನ್ನೂ ನೀಡುವ ರಾಮಾಯಣಕಥೆಯನ್ನು ಪ್ರಯತ್ನಪೂರ್ವಕವಾಗಿ ಕೇಳಬೇಕು. ಪುಣ್ಯತಮವಾದ ಮತ್ತು ಸಕಲಪಾಪಗಳನ್ನೂ ಹೋಗಲಾಡಿಸುವ ಈ ಆಖ್ಯಾನವನ್ನು ಕೇಳಿದವನು ಅಥವಾ ಪಠಿಸಿದವನು ಶ್ರೀರಾಮ ಭಕ್ತನಾಗುತ್ತಾನೆ."

ಐನೆಯ ಅಧ್ಯಾಯವು ಮುಗಿಯಿತು.

೬ನೆಯ ಅಧ್ಯಾಯ

ಚೈತ್ರಮಾಸದಲ್ಲಿ ರಾಮಾಯಣಪಠನ-ಶ್ರವಣಗಳ ಮಹಿಮೆ : ಕಲಿಕೋತ್ತಂಕರ ಕಥೆ

ನಾರದರು ಹೇಳುತ್ತಾರೆ :

"ಸನಕಾದಿಮುನಿವರ್ಯರೇ! ರಾಮಾಯಣಪಠನ-ಶ್ರವಣಗಳಿಗೆ ಉಪಯುಕ್ತವಾದ ಮತ್ತೊಂದು ಮಾಸದ ಮಹಿಮೆಯನ್ನೂ ಹೇಳುವೆನು ; ಸಾವಧಾನತೆಯಿಂದ ಕೇಳಿರಿ. ರಾಮಾಯಣದ ಮಹಿಮೆಯು ಪಾಪಗಳನ್ನು ನಿವಾರಿಸುತ್ತದೆ. ಸಮಸ್ತದುಃಖಗಳನ್ನೂ ಹೋಗಲಾಡಿಸುತ್ತದೆ. ಪುಣ್ಯಪ್ರದ ವಾದುದು. ಬ್ರಾಹ್ಮಣ-ಕ್ಷತ್ರಿಯ-ವೈಶ್ಯ-ಶೂದ್ರರಿಗೂ ಮತ್ತು ಸ್ತ್ರೀಯರಿಗೂ ಸಮಸ್ತವಾದ ಕಾಮನೆಗಳನ್ನೂ ಕೊಡುತ್ತದೆ. ಸಮಸ್ತವ್ರತಗಳ ಫಲಗಳನ್ನೂ ಕೊಡುತ್ತದೆ. ದುಃಸ್ವಪ್ನವನ್ನು ವಿನಾಶಗೊಳಿಸುತ್ತದೆ. ಧನಸಮೃದ್ಧಿಯನ್ನು ಉಂಟುಮಾಡುತ್ತದೆ. ಭೋಗ-ಮುಕ್ತಿಗಳೆಂಬ ಐಹಿಕ-ಆಮುಷ್ಮಿಕ ಫಲಗಳನ್ನು ಕೊಡುತ್ತದೆ. ಆದುದರಿಂದ ರಾಮಾಯಣಮಾಹಾತ್ಮ್ಯವನ್ನು ಪ್ರಯತ್ನಪೂರ್ವಕ ವಾಗಿ ಕೇಳಬೇಕು.

ಈ ವಿಷಯದಲ್ಲಿ ವಿದ್ವಾಂಸರು ಪುರಾತನವಾದ ಇತಿಹಾಸವನ್ನು ಉದಾಹರಿಸುತ್ತಾರೆ. ಆ ಇತಿಹಾಸವು ಪಠಿಸುವವರ ಮತ್ತು ಕೇಳುವವರ ಸಕಲಪಾಪಗಳನ್ನೂ ನಿವಾರಿಸುತ್ತದೆ.

ಹಿಂದಿನ ಕಲಿಯುಗದಲ್ಲಿ ಕಲಿಕನೆಂಬ ವ್ಯಾಧನಿದ್ದನು. ಅವನು ಯಾವಾಗಲೂ ಪರಸ್ತ್ರೀ-ಪರಧನಗಳ ಅಪಹಾರದಲ್ಲಿಯೇ ನಿರತನಾಗಿರುತ್ತಿದ್ದನು. ಪರನಿಂದೆಯೇ ಅವನ ದೈನಂದಿನ ವ್ಯವಹಾರವಾಗಿದ್ದಿತು. ಪ್ರಾಣಿಗಳನ್ನು ಬಹಳವಾಗಿ ಪೀಡಿಸುತ್ತಿದ್ದನು. ಅವನು ನೂರಾರು ಬ್ರಾಹ್ಮಣರನ್ನೂ–ನೂರಾರು ಗೋವುಗಳನ್ನೂ ನಿರ್ದಯೆಯಿಂದ ಕೊಲೆ ಮಾಡಿದ್ದನು. ದೇವದ್ರವ್ಯ-ಪರದ್ರವ್ಯ ಗಳನ್ನು ಅಪಹರಿಸುವುದೇ ಅವನ ನಿತ್ಯಕರ್ಮವಾಗಿದ್ದಿತು. ಹೀಗೆ ಅವನು ಅನೇಕಮಹಾಪಾಪಗಳನ್ನೇ ಮಾಡುತ್ತಿದ್ದನು. ಕೋಟಿವರ್ಷಗಳವರೆಗೆ ಹೇಳಿದರೂ ಅವನು ಮಾಡಿದ ಮಹಾಪಾಪಗಳ ಸರಣಿಯನ್ನು ಹೇಳಿ ಮುಗಿಸುವ ಸಾಧ್ಯತೆಯಿರಲಿಲ್ಲ. ಪ್ರಾಣಿಗಳಿಗೆ ಯಮಪ್ರಾಯನಾಗಿದ್ದ ಮಹಾಪಾಪಿಷ್ಠನಾಗಿದ್ದ ಅವನೊಮ್ಮೆ ಸಕಲೈಶ್ವರ್ಯಸಂಪನ್ನವಾಗಿದ್ದ ಸೌವೀರ ನಗರಕ್ಕೆ ಹೋದನು. ಆ ನಗರಿಯು ವಸ್ತ್ರಾದಿಗಳಿಂದ ವಿಭೂಷಿತರಾದ ಸುಂದರಸ್ತ್ರೀಯರಿಂದಲೂ, ನಿರ್ಮಲವಾದ ನೀರಿನಿಂದ ಕೂಡಿದ ಸರೋವರ ಗಳಿಂದಲೂ, ಅಂಗಡಿ-ಮುಂಗಟ್ಟು ಗಳಿಂದಲೂ ಸಮಲಂಕೃತವಾಗಿದ್ದಿತು. ಅಂತಹ ದೇವಪುರಿಗೆ ಸಮಾನವಾಗಿದ್ದ ಸೌವೀರನಗರಕ್ಕೆ ಕಲಿಕನು ಹೋದನು.

ಆ ನಗರಕ್ಕೆ ಒಂದು ಉಪವನವಿದ್ದಿತು. ಅದರ ಮಧ್ಯದಲ್ಲಿ ಸುಂದರ ವಾದೊಂದು ಕೇಶವನ ಮಂದಿರವಿದ್ದಿತು. ಅದು ಅನೇಕ ಚಿನ್ನದ ಕಲಶ ಗಳಿಂದ ಸಮಲಂಕೃತವಾಗಿದ್ದಿತು. ಚಿನ್ನದ ಕಲಶಗಳನ್ನು ನೋಡಿದೊಡ ನೆಯೇ ಕಲಿಕನಿಗೆ ಬಹಳ ಸಂತೋಷವಾಯಿತು. ಅಲ್ಲಿರುವ ಎಲ್ಲ ಸುವರ್ಣ ಕಲಶಗಳನ್ನೂ ಅಪಹರಿಸಲು ನಿಶ್ಚಯಿಸಿದನು. ಕಳ್ಳತನದಲ್ಲಿಯೇ ಆಸಕ್ತ ನಾಗಿದ್ದ ಆ ವ್ಯಾಧನು ಕಳ್ಳತನಮಾಡುವ ಸಲುವಾಗಿ ರಾಮಭವನಕ್ಕೆ (ಕೇಶವನ ಮಂದಿರಕ್ಕೆ) ಹೋದನು. ಅಲ್ಲವನು ತತ್ತ್ವಾರ್ಥಕೋವಿದ ನಾದ, ಶಾಂತನಾಗಿದ್ದ, ವಿಷ್ಣುವಿನ ಪೂಜೆಯಲ್ಲಿಯೇ ನಿರತನಾಗಿದ್ದ,

ತಪೋನಿಧಿಯಾದ ಉತ್ತಂಕನೆಂಬ ಬ್ರಾಹ್ಮಣನನ್ನು ನೋಡಿದನು. ಆಗ ಆ ಬ್ರಾಹ್ಮಣನು ಏಕಾಕಿಯಾಗಿದ್ದನು. ನಿಃಸ್ಪೃಹನಾಗಿದ್ದನು. ಧ್ಯಾನದಲ್ಲಿಯೇ ಆಸಕ್ತನಾಗಿದ್ದನು. ದೇವಮಂದಿರಕ್ಕೆ ಸಂಬಂಧಿಸಿದ ಐಶ್ವರ್ಯವನ್ನು ಮಹಾಕಾಳರಾತ್ರಿಯಲ್ಲಿ ಕೊಂಡೊಯ್ಯುವಾಗ ಉತ್ತಂಕನು ಕಳ್ಳತನಕ್ಕೆ ಅಡ್ಡಿ ಮಾಡುವನೆಂದು ವ್ಯಾಧನು ಬಗೆದನು. ಆದುದರಿಂದ ಅವನನ್ನು ಮುಗಿಸಿಬಿಡಬೇಕೆಂದೂ ನಿಶ್ಚಯಿಸಿದನು. ಒಡನೆಯೇ ನಿರಾಯುಧನಾಗಿದ್ದ ಉತ್ತಂಕನನ್ನು ಕೆಳಕ್ಕೆ ಕೆಡವಿ ಅವನ ಎದೆಯ ಮೇಲೆ ಕಾಲನ್ನಿಟ್ಟುಕೊಂಡು ಎಡಗೈಯಿಂದ ಕುತ್ತಿಗೆಯನ್ನು ಹಿಡಿದು ಬಲಗೈಯಲ್ಲಿದ್ದ ಕತ್ತಿಯಿಂದ ಕುತ್ತಿಗೆಯನ್ನು ಕತ್ತರಿಸಿ ಹಾಕಲು ಕೈಯನ್ನು ಮೇಲಕ್ಕೆತ್ತಿದನು. ತನ್ನನ್ನು ಕೊಲೆ ಮಾಡುವುದರಲ್ಲಿದ್ದ ವ್ಯಾಧನನ್ನು ಕುರಿತು ಉತ್ತಂಕನು ಹೇಳಿದನು :

"ಎಲೈ ಸತ್ಪುರುಷನೇ! ನಿರಪರಾಧಿಯಾದ ನನ್ನನ್ನೇಕೆ ವೃಥಾ ಕೊಲ್ಲಲು ತೊಡಗಿರುವೆ? ನಾನು ನಿನಗಾವ ಅಪರಾಧವನ್ನು ಮಾಡಿದೆನೆಂಬುದನ್ನು ಹೇಳು. ಲೋಕದಲ್ಲಿ ಜನರು ಅಪರಾಧಮಾಡಿದವನನ್ನು ಮಾತ್ರವೇ ಹಿಂಸೆಗೆ ಗುರಿಪಡಿಸುತ್ತಾರೆ. ದುರ್ಜನರು ಕೂಡ ಅಪರಾಧ ಮಾಡದೇ ಇರುವವರನ್ನು ಹಿಂಸಿಸುವುದಿಲ್ಲ. ಶಾಂತಚಿತ್ತರಾದ ಸಾಧುಪುರು ಷರು ತಮ್ಮ ವಿರೋಧಿಗಳಾದ ಮೂರ್ಖಜನರಲ್ಲಿರುವ ಅಲ್ಪ-ಸ್ವಲ್ಪ ಒಳ್ಳೆಯ ಗುಣಗಳನ್ನೇ ವೀಕ್ಷಿಸಿ ಅವರೊಡನೆ ವಿರೋಧವನ್ನು ಕಟ್ಟಿಕೊಳ್ಳಲು ಇಚ್ಛಿಸುವುದಿಲ್ಲ. ಅನೇಕಪ್ರಕಾರವಾಗಿ ನಿಂದಿಸಲ್ಪಟ್ಟರೂ ಕುಪಿತನಾಗದೇ ಕ್ಷಮಾಶೀಲನಾಗಿರುವ ಮನುಷ್ಯನನ್ನು ಉತ್ತಮಪುರುಷನೆಂದು ಹೇಳುತ್ತಾರೆ. ಅಂತಹ ಕ್ಷಮಾಶೀಲನಾದ ಮನುಷ್ಯನು ವಿಷ್ಣುವಿಗೆ ಅತ್ಯಂತಪ್ರಿಯನು.

ಸುಜನೋ ನ ಯಾತಿ ವೈರಂ ಪರಹಿತನಿರತೋ ವಿನಾಶಕಾಲೇಽಪಿ ।
ಛೇದೇಽಪಿ ಚನ್ದನತರುಃ ಸುರಭೀಕರೋತಿ ಮುಖಂ ಕುಠಾರಸ್ಯ ॥

ಪರಹಿತದಲ್ಲಿಯೇ ನಿರತರಾದ ಸಜ್ಜನರು ವಿನಾಶಕಾಲದಲ್ಲಿಯೂ ಇತರರೊಡನೆ ದ್ವೇಷವನ್ನು ಕಟ್ಟಿಕೊಳ್ಳುವುದಿಲ್ಲ. ಶ್ರೀಗಂಧದ ಮರವನ್ನು ಕಡಿದುಹಾಕಿದರೂ ಅದು ತನ್ನನ್ನು ಕಡಿದ ಕೊಡಲಿಯ ಬಾಯನ್ನು ಸುವಾಸನೆ ಗೊಳಿಸುತ್ತದೆ.

ವಿಧಿಯೆಂಬುದು ಬಲವತ್ತರವಾದುದು. ಅದು ಜನರನ್ನು ನಾನಾ ರೀತಿಯಲ್ಲಿ ಬಾಧಿಸುತ್ತಲೇ ಇರುತ್ತದೆ. ಸರ್ವಸಂಗಪರಿತ್ಯಾಗಿಯೇ ಆಗಿದ್ದರೂ ವಿಧಿನಿಯಮದಂತೆ ದುಷ್ಟರಿಂದ ಪೀಡಿಸಲ್ಪಡುತ್ತಿರುತ್ತಾನೆ.

ಅಹೋ ನಿಷ್ಕಾರಣಂ ಲೋಕೇ ಬಾಧನ್ತೇ ದುರ್ಜನಾ ಜನಾನ್ ।
ಧೀವರಾಃ ಪಿಶುನಾ ವ್ಯಾಧಾ ಲೋಕೇಽಕಾರಣವೈರಿಣಃ ॥೨೩॥

ಅಯ್ಯೋ! ಈ ಲೋಕದಲ್ಲಿ ದುರ್ಜನರು ಯಾವ ಕಾರಣವೂ ಇಲ್ಲದೇ ಜನರನ್ನು ಬಾಧೆಪಡಿಸುತ್ತಾರೆ. ಯಾವ ಕಾರಣವೂ ಇಲ್ಲದೆಯೇ ಬೆಸ್ತರು—ಮೀನುಗಳಿಗೆ, ಚಾಡಿಕೋರರು—ಸಜ್ಜನರಿಗೆ, ವ್ಯಾಧರು—ಮೃಗಗಳಿಗೆ ವೈರಿಗಳಾಗಿರುತ್ತಾರೆ.

ನಿಶ್ಚಯವಾಗಿಯೂ ಮಾಯೆಯು ಬಲವತ್ತರವಾದುದು. ಸಮಸ್ತ ಜಗತ್ತನ್ನೂ ವಿಮೋಹಗೊಳಿಸುತ್ತದೆ. ಪುತ್ರ-ಮಿತ್ರ-ಕಳತ್ರರ ಮೂಲಕವಾಗಿ ಎಲ್ಲರನ್ನೂ ದುಃಖದಲ್ಲಿ ಮುಳುಗಿಸಿಬಿಡುತ್ತದೆ.

ಮಮ ಮಾತಾ ಮಮ ಪಿತಾ ಮಮ ಭಾರ್ಯಾ ಮಮಾತ್ಮಜಾಃ ।
ಮಮೇದಮಿತಿ ಜನ್ತೂನಾಂ ಮಮತಾ ಬಾಧತೇ ವೃಥಾ ॥೨೯॥

'ನನ್ನ ತಂದೆ', 'ನನ್ನ ತಾಯಿ', 'ನನ್ನ ಹೆಂಡತಿ', 'ನನ್ನ ಮಕ್ಕಳು', 'ಈ ಮನೆ-ಮಠ ಎಲ್ಲವೂ ನನ್ನದೇ'—ಈ ಪ್ರಕಾರವಾದ ಮಮತೆಯು ಪ್ರಾಣಿಗಳನ್ನು ವ್ಯರ್ಥವಾಗಿ ಸಂಕಟಕ್ಕೆ ಈಡುಮಾಡುತ್ತದೆ.

ಯಾವದರ್ಜಯತಿ ದ್ರವ್ಯಂ ತಾವದ್ಭವತಿ ಬಾನ್ಧವಃ ।
ಅರ್ಜಿತಂ ತು ಧನಂ ಸರ್ವೇ ಭುಞ್ಜನ್ತೇ ಬಾನ್ಧವಾಃ ಸದಾ ।
ದುಃಖಮೇಕತಮೋ ಮೂಢಸ್ತತ್ಪಾಪಫಲಮಶ್ನುತೇ ॥೨೭॥

ಮನುಷ್ಯನು ಎಂದಿನವರೆಗೆ ಹಣವನ್ನು ಕೊಡುತ್ತಿರುವನೋ—ಅಲ್ಲಿಯವರೆಗೂ ಬಂಧುಗಳಲ್ಲದವರೂ ಬಂಧುಗಳೆನಿಸಿಕೊಳ್ಳಲು ಪ್ರಯತ್ನ ಪಡುತ್ತಾರೆ. ದೂರದ ಬಂಧುಗಳು ಹತ್ತಿರದ ಬಂಧುಗಳಾಗುತ್ತಾರೆ. ಸಂಪಾದಿಸಿದ ಹಣವನ್ನು ಬಂಧುಗಳೆಲ್ಲರೂ ಉಪಭೋಗಿಸುತ್ತಿರುತ್ತಾರೆ. ಆದರೆ ಮೂರ್ಖನಾದ ಆ ಮನುಷ್ಯನು ಮಾಡಿದ ಪಾಪದ ಫಲವನ್ನು ಅವನೊ

ಬ್ಬನೇ ಅನುಭವಿಸುತ್ತಾನೆ. ಅದರಲ್ಲಿ ಪಾಲುಗೊಳ್ಳಲು ಯಾರೂ ಮುಂದೆ ಬರುವುದಿಲ್ಲ. ಪಾಪದ ಫಲವನ್ನು ಪಾಲುಗೊಳ್ಳಲೂ ಸಾಧ್ಯವಿಲ್ಲ."

ಸನತ್ಕುಮಾರ! ಉತ್ತಂಕನು ಹೀಗೆ ಹೇಳುತ್ತಿರುವಾಗ ಸಾವಧಾನತೆ ಯಿಂದ ಕೇಳುತ್ತಿದ್ದ ವ್ಯಾಧನು ಅವನು ಹೇಳಿದ ಪ್ರತಿಯೊಂದು ವಾಕ್ಯವನ್ನೂ ವಿಮರ್ಶೆಮಾಡಿದನು. ಅವನ ಮನಸ್ಸಿಗೆ ತಾನು ಮಾಡುತ್ತಿರುವುದು ಮಹಾ ಪರಾಧವೆಂದು ಅರಿವಾಗಿ ಮನಸ್ಸಿನಲ್ಲಿ ಭಯವಂಕುರಿಸಿತು. ಕೈಮುಗಿದು ಕೊಂಡು–"ವಿಪ್ರೋತ್ತಮರೇ! ನನ್ನ ಅಪರಾಧವನ್ನು ಕ್ಷಮಿಸಿರಿ"–ಎಂದು ಬಾರಿ-ಬಾರಿಗೂ ಕೇಳಿಕೊಂಡನು. ಸತ್ಸಂಗದ ಪ್ರಭಾವದಿಂದಲೂ ಶ್ರೀಹರಿಯ ಸಾನ್ನಿಧ್ಯದಿಂದಲೂ ವ್ಯಾಧನು ಪಾಪರಹಿತನಾದನು. ತಾನು ಮಾಡುತ್ತಿದ್ದ ಕಾರ್ಯಕ್ಕೆ ಪಶ್ಚಾತ್ತಾಪಪಟ್ಟನು. ಉತ್ತಂಕನನ್ನು ಪ್ರಾರ್ಥಿಸುತ್ತಾ ಹೇಳಿದನು :

"ವಿಪ್ರೇಂದ್ರರೇ! ನಾನು ನನ್ನ ಜೀವನದಲ್ಲಿ ಅನೇಕ ಮಹಾಪಾಪ ಗಳನ್ನು ಮಾಡಿರುತ್ತೇನೆ. ಆ ಎಲ್ಲ ಪಾಪಗಳೂ ನಿಮ್ಮ ದರ್ಶನಮಾತ್ರ ದಿಂದಲೇ ನಷ್ಟವಾಗಿ ಹೋದುವು. ಸರ್ವದಾ ಪಾಪಬುದ್ಧಿಯುಳ್ಳವನಾಗಿದ್ದ ನಾನು ಮಹಾಪಾಪಗಳನ್ನೇ ಮಾಡಿರುವೆನು. ಈ ನನ್ನ ಪಾಪಗಳಿಗೆ ಪ್ರಾಯಶ್ಚಿತ್ತವೇನು? ನಾನು ಯಾರ ಆಶ್ರಯವನ್ನು ಪಡೆಯಲಿ? ಹಿಂದೆ ಮಾಡಿದ ಪಾಪಕರ್ಮಗಳ ಫಲವಾಗಿ ನಾನು ಈ ಜನ್ಮದಲ್ಲಿ ವ್ಯಾಧನಾಗಿ ಹುಟ್ಟಿದೆನು. ಈ ಜನ್ಮದಲ್ಲಿ ಕೂಡ ಅಸಂಖ್ಯಾತವಾದ ಪಾಪಕರ್ಮಗಳನ್ನು ಮಾಡಿರುವ ನಾನು ಯಾವ ಗತಿಯನ್ನು ಹೊಂದುವೆನು?"

ಸನಕಾದಿ ಮಹರ್ಷಿಗಳೇ! ಮಹಾತ್ಮನಾದ ಕಲಿಕನು ಹೇಳಿದ ಮಾತು ಗಳನ್ನು ಕೇಳಿ ಬ್ರಹ್ಮರ್ಷಿಯಾದ ಉತ್ತಂಕನು ಹೇಳಿದನು :

"ಮಹಾಪ್ರಾಜ್ಞನೇ! ಸಾಧು–ಚೆನ್ನಾಗಿ ಹೇಳಿದೆ. ನೀನೇ ಧನ್ಯನು. ನಿನ್ನ ಬುದ್ಧಿಯೀಗ ನಿರ್ಮಲವಾಗಿಯೂ ಉಜ್ಜ್ವಲವಾಗಿಯೂ ಇದೆ. ಏಕೆಂದರೆ : ನೀನು ಸಾಂಸಾರಿಕದುಃಖಗಳ ನಾಶದ ಉಪಾಯವನ್ನು ತಿಳಿಯಲು ಇಚ್ಛಿಸುತ್ತಿರುವೆಯಲ್ಲವೇ?

ಚೈತ್ರೇ ಮಾಸೇ ಸಿತೇ ಪಕ್ಷೇ ಕಥಾ ರಾಮಾಯಣಸ್ಯ ಚ ।

ನವಾಹ್ನಾ ಕಿಲ ಶ್ರೋತವ್ಯಾ ಭಕ್ತಿಭಾವೇನ ಸಾದರಮ್ ।
ಯಸ್ಯ ಶ್ರವಣಮಾತ್ರೇಣ ಸರ್ವಪಾಪೈಃ ಪ್ರಮುಚ್ಯತೇ ॥೩೯॥

ಚೈತ್ರಮಾಸದ ಶುಕ್ಲಪಕ್ಷದಲ್ಲಿ ಒಂಬತ್ತು ದಿವಸಗಳು ರಾಮಾಯಣದ ಕಥೆಯನ್ನು ಭಕ್ತಿಭಾವದಿಂದ ಕೇಳಬೇಕು. ಆದರಪೂರ್ವಕವಾಗಿ ಮಾಡಿದ ರಾಮಾಯಣಶ್ರವಣಮಾತ್ರದಿಂದಲೇ ಮನುಷ್ಯನು ಸಮಸ್ತಪಾಪಗಳಿಂದಲೂ ವಿಮುಕ್ತನಾಗುತ್ತಾನೆ."

ಉತ್ತಂಕನ ಆ ಮಾತನ್ನು ಕೇಳುತ್ತಿದ್ದಂತೆಯೇ ವ್ಯಾಧನಾದ ಕಲಿಕನು ಪಾಪರಹಿತನಾದನು. ನಿಯಮಾನುಸಾರವಾಗಿ ಚೈತ್ರಮಾಸದ ಶುಕ್ಲಪಕ್ಷದಲ್ಲಿ ಒಂಬತ್ತು ದಿವಸಗಳ ಕಾಲ ರಾಮಾಯಣಕಥೆಯನ್ನು ಉತ್ತಂಕನಿಂದಲೇ ಕೇಳಿ ಅಸುನೀಗಿದನು.

ದಯಾಪರನಾದ ಉತ್ತಂಕನು ವ್ಯಾಧನು ಸತ್ತುಬಿದ್ದುದನ್ನು ನೋಡಿ ವಿಸ್ಮಿತನಾದನು. 'ಎಲ್ಲವೂ ನಿನ್ನ ದಯೆಯಪ್ಪಾ!'–ಎಂದು ಉದ್ಗರಿಸುತ್ತಾ ಕಮಲಾಪತಿಯನ್ನು ಸ್ತೋತ್ರಮಾಡಿದನು. ರಾಮಾಯಣದ ಕಥೆಯನ್ನು ಕೇಳಿ ಪಾಪರಹಿತನಾದ ವ್ಯಾಧನು ದಿವ್ಯವಿಮಾನವನ್ನು ಹತ್ತಿ ದೇವಲೋಕಕ್ಕೆ ಹೋಗುತ್ತಿದ್ದಾಗ ಉತ್ತಂಕಮುನಿಗೆ ಹೇಳಿದನು :

ವಿಮುಕ್ತಸ್ತ್ವತ್ಪ್ರಸಾದೇನ ಮಹಾಪಾತಕಸಂಕಟಾತ್ ।
ತಸ್ಮಾನ್ನತೋಽಸ್ಮಿ ತೇ ವಿದ್ವನ್ಯತ್ಕೃತಂ ತತ್ಕ್ಷಮಸ್ವ ಮೇ ॥೪೦॥

"ವಿದ್ವಾಂಸನೇ! ನಿನ್ನ ಪ್ರಸನ್ನತೆಯಿಂದಾಗಿ–ಮಹಾಪಾತಕದ ಕಾರಣ ದಿಂದಾಗಿ ಅನುಭವಿಸಬೇಕಾಗಿದ್ದ ಮಹಾಸಂಕಟದಿಂದ ಪಾರಾಗಿದ್ದೇನೆ. ಆದುದರಿಂದ ನಿನ್ನ ಚರಣಾರವಿಂದಗಳಲ್ಲಿ ನಮಸ್ಕರಿಸುತ್ತೇನೆ. ನನ್ನ ಅಪರಾಧವನ್ನು ಕ್ಷಮಿಸಿಬಿಡು." ಕಲಿಕನು ಹೀಗೆ ಹೇಳಿ ಉತ್ತಂಕನ ಮೇಲೆ ದೇವಕುಸುಮಗಳನ್ನು ಸುರಿಸಿದನು. ಮೂರು ಬಾರಿ ಪ್ರದಕ್ಷಿಣೆಮಾಡಿ ನಮಸ್ಕಾರಮಾಡಿದನು. ಬಳಿಕ ಸಮಸ್ತನಾದ ಕಾಮನಾವಸ್ತುಗಳಿಂದಲೂ ಯುಕ್ತವಾಗಿದ್ದ, ಅಪ್ಸರಸ್ತ್ರೀಯರಿಂದ ಸೇವಿಸಲ್ಪಡುತ್ತಿದ್ದ ವಿಮಾನದಲ್ಲಿ ಕುಳಿತು ಹರಿಮಂದಿರಕ್ಕೆ ಹೋದನು.

ವಿಪ್ರೇಂದ್ರರೇ! ಆದುದರಿಂದ, ರಾಮಾಯಣದ ಕಥೆಯನ್ನು ಕೇಳಿರಿ. ಚೈತ್ರಮಾಸದ ಶುಕ್ಲಪಕ್ಷದಲ್ಲಿ ಒಂಬತ್ತು ದಿವಸಗಳು ರಾಮಾಯಣಕಥಾಮೃತವನ್ನು ಪ್ರಯತ್ನಪೂರ್ವಕವಾಗಿ ಕೇಳಬೇಕು. ಎಲ್ಲ ಋತುಗಳಲ್ಲಿಯೂ ರಾಮಾಯಣವನ್ನು ಪಾರಾಯಣಮಾಡಬಹುದು. ರಾಮಾಯಣ ಪಾರಾಯಣವು ಸರ್ವರಿಗೂ ಹಿತವನ್ನುಂಟುಮಾಡುತ್ತದೆ. ರಾಮಾಯಣ ಪಾರಾಯಣದ ಮೂಲಕವಾಗಿ ಹರಿಯನ್ನು ಪೂಜಿಸುವವನು ಅಭೀಷ್ಟವಾದ ಕಾಮನೆಗಳೆಲ್ಲವನ್ನೂ ಪಡೆದುಕೊಳ್ಳುತ್ತಾನೆ. ಇದರಲ್ಲಿ ಸಂಶಯವೇ ಇಲ್ಲ.

ಸನತ್ಕುಮಾರ! ನೀನು ಯಾವ ಪ್ರಶ್ನೆಯನ್ನು ಕೇಳಿದೆಯೋ–ಆ ಪ್ರಶ್ನೆಗೆ ಸಮಂಜಸವಾದ ಉತ್ತರವನ್ನಿತ್ತಿದ್ದೇನೆ. ಮುಂದೆ ಯಾವ ವಿಷಯವನ್ನು ಕೇಳಲು ಇಚ್ಛಿಸುವೆ?"

ಒನೆಯ ಅಧ್ಯಾಯವು ಮುಗಿಯಿತು.

೫ನೆಯ ಅಧ್ಯಾಯ

ರಾಮಾಯಣದ ನವಾಹಶ್ರವಣದ ವಿಧಿ, ಮಹಿಮೆ ಮತ್ತು ಫಲವರ್ಣನೆ

ಸೂತರು ಹೇಳುತ್ತಾರೆ :

"ಮುನಿವರೇಣ್ಯರೇ! ರಾಮಾಯಣದ ಮಾಹಾತ್ಮ್ಯವನ್ನು ಕೇಳಿ ಪರಮಪ್ರೀತನಾದ ಸನತ್ಕುಮಾರನು ಪುನಃ ಮುನಿಶ್ರೇಷ್ಠರಾದ ನಾರದರನ್ನು ಪ್ರಶ್ನಿಸಿದನು :

"ಮುನೀಶ್ವರರೇ! ನಿಮ್ಮಿಂದ ನಾನು ಇದುವರೆಗೂ ರಾಮಾಯಣದ ಮಹಿಮೆಯನ್ನು ಕೇಳಿದೆನು. ಈಗ ನಾನು ರಾಮಾಯಣಪಾರಾಯಣದ ವಿಧಿಯನ್ನು ತಮ್ಮಿಂದ ಕೇಳಬಯಸಿದ್ದೇನೆ. ಮಹಾಭಾಗರೇ! ತತ್ತ್ವಾರ್ಥ ಕೋವಿದರೇ! ಈ ವಿಷಯವನ್ನು ಕೂಡ ಕೃಪೆಮಾಡಿ ಯಥಾವತ್ತಾಗಿ ಹೇಳಿರಿ."

ನಾರದರು ಹೇಳುತ್ತಾರೆ :

"ಸನಕಾದಿಮುನಿಗಳೇ! ನಾನೀಗ ಹೇಳಲಿರುವ ರಾಮಾಯಣ

ಪಾರಾಯಣದ ವಿಧಿಯನ್ನೂ ಏಕಾಗ್ರಚಿತ್ತರಾಗಿ ಕೇಳಿರಿ. ರಾಮಾಯಣ ಪಾರಾಯಣದ ವಿಧಿಯು ಸರ್ವಲೋಕಗಳಲ್ಲಿಯೂ ವಿಖ್ಯಾತವಾಗಿದೆ. ಸ್ವರ್ಗ ಸಂಪತ್ತನ್ನೂ ಮೋಕ್ಷಸಂಪತ್ತನ್ನೂ ವೃದ್ಧಿಪಡಿಸುತ್ತದೆ. ಅದರ ವಿಧಾನವನ್ನು ನಾನೀಗ ಹೇಳುತ್ತೇನೆ. ರಾಮಾಯಣದ ಕಥೆಯನ್ನು ಹೇಳುವವನೂ ಮತ್ತು ಕೇಳುವವನೂ ಭಕ್ತಿಭಾವದಿಂದ ಭಾವಿತನಾಗಿ ಈ ವಿಧಾನವನ್ನು ಅನುಸರಿಸಬೇಕು.

ಈ ವಿಧಿಯನ್ನು ಅನುಸರಿಸಿ ಪಾರಾಯಣಮಾಡಿದರೆ ಕೋಟಿ-ಕೋಟಿ ಪಾಪಗಳು ನಷ್ಟವಾಗಿ ಹೋಗುತ್ತವೆ. ಚೈತ್ರ, ಕಾರ್ತಿಕ ಅಥವಾ ಮಾಘ ಮಾಸಗಳಲ್ಲಿ ಶುಕ್ಲಪಕ್ಷದ ಪಂಚಮಿಯಿಂದ ಪಾರಾಯಣವನ್ನು ಆರಂಭಿಸ ಬೇಕು. ಸ್ವಸ್ತಿವಾಚನಪೂರ್ವಕವಾಗಿ ಸಂಕಲ್ಪವನ್ನು ಮಾಡಬೇಕು. ಪಂಚಮಿಯಿಂದ ಮೊದಲ್ಗೊಂಡು ಒಂಬತ್ತು ದಿವಸಗಳವರೆಗೂ ರಾಮಾ ಯಣದ ಅತ್ಯುತ್ತಮವಾದ ಕಥೆಯನ್ನು ಕೇಳಬೇಕು. ಪ್ರಾರಂಭಮಾಡುವಾಗ ಭಗವಂತನನ್ನು ಹೀಗೆ ಪ್ರಾರ್ಥಿಸಬೇಕು :

ಅದ್ಯ ಪ್ರಭೃತ್ಯಹಂ ರಾಮ ಶೃಣೋಮಿ ತ್ವತ್ಕಥಾಮೃತಮ್ ।
ಪ್ರತ್ಯಹಂ ಪೂರ್ಣತಾಮೇತು ತವ ರಾಮ ಪ್ರಸಾದತಃ ॥೮॥

"ರಾಮಭದ್ರ! ಇಂದಿನಿಂದ ಪ್ರತಿನಿತ್ಯವೂ ನಿನ್ನ ಕಥಾಮೃತವನ್ನು ಕೇಳುತ್ತೇನೆ. ನಿನ್ನ ಪ್ರಸನ್ನತೆಯಿಂದಾಗಿ ರಾಮಾಯಣಪಾರಾಯಣವು ಅನುದಿನವೂ ಪೂರ್ಣಗೊಳ್ಳಲಿ." ರಾಮಭಕ್ತಿಪರಾಯಣನಾದವನು ಪ್ರತಿ ದಿನವೂ ಉತ್ತರಣೀಕಡ್ಡಿಯಿಂದ ಹಲ್ಲುಗಳನ್ನು ಉಜ್ಜಿಕೊಳ್ಳಬೇಕು. ಅನಂತರ ವಿಧಿವತ್ತಾಗಿ ಸ್ನಾನಮಾಡಬೇಕು. ಇಂದ್ರಿಯಗಳನ್ನು ಹತೋಟಿಯಲ್ಲಿಟ್ಟು ಕೊಂಡು ಬಂಧುಗಳೊಡನೆ ರಾಮಾಯಣದ ಕಥೆಯನ್ನು ಕೇಳಬೇಕು. ತನ್ನ ಕುಲಾಚಾರಕ್ಕೆ ಅನುಸಾರವಾಗಿ, ದಂತಧಾವನಪೂರ್ವಕವಾಗಿ ಸ್ನಾನಮಾಡಿ, ಬಿಳಿಯ ವಸ್ತ್ರಗಳನ್ನುಟ್ಟು ಶುದ್ಧನಾಗಿ ಸ್ನಾನಘಟ್ಟದಿಂದ ಮನೆಗೆ ಬಂದು, ಕಾಲುಗಳನ್ನು ತೊಳೆದುಕೊಂಡು, ಆಚಮನಮಾಡಿ ಮೌನಿಯಾಗಿ ಪ್ರಭುವಾದ ನಾರಾಯಣನನ್ನು ಸ್ಮರಿಸಿಕೊಳ್ಳಬೇಕು. ನಿತ್ಯವೂ

ದೇವರಪೂಜೆಯನ್ನು ಮಾಡಿ ಭಕ್ತಿಭಾವದಿಂದ ಸಂಕಲ್ಪಪೂರ್ವಕವಾಗಿ ರಾಮಾಯಣಗ್ರಂಥವನ್ನು ಪೂಜಿಸಬೇಕು. ನವಾಹಪಾರಾಯಣದ ವ್ರತವನ್ನು ತೊಟ್ಟ ಮನುಷ್ಯನು ಆವಾಹನ-ಆಸನ-ಅರ್ಘ್ಯ-ಪಾದ್ಯಾದಿಗಳಿಂದಲೂ ಗಂಧ-ಪುಷ್ಪಗಳಿಂದಲೂ–'ಓಂ ನಮೋ ನಾರಾಯಣಾಯ'–ಎಂಬ ಅಷ್ಟಾಕ್ಷರೀಮಂತ್ರದ ಮೂಲಕ ಭಕ್ತಿಪರಾಯಣನಾಗಿ ರಾಮಾಯಣಗ್ರಂಥಕ್ಕೆ ಪೂಜೆಯನ್ನು ಮಾಡಬೇಕು. ಸಮಸ್ತಪಾಪಗಳ ನಿರಸನಕ್ಕಾಗಿ ತಮ್ಮ ಶಕ್ತಿಗೆ ಅನುಸಾರವಾಗಿ ಒಂದು ಬಾರಿ, ಎರಡು ಬಾರಿ ಅಥವಾ ಮೂರು ಬಾರಿ ಹೋಮವನ್ನು ಮಾಡಬೇಕು. ಯಾವನು ಪ್ರಯತ್ನಪೂರ್ವಕವಾಗಿ ಈ ರಾಮಾಯಣಪಾರಾಯಣದ ವಿಧಿಯನ್ನನುಸರಿಸಿ ಪಾರಾಯಣಮಾಡುವನೋ–ಅವನು ಪುನರಾವೃತ್ತಿರಹಿತವಾದ ವಿಷ್ಣುಭವನಕ್ಕೆ ಹೋಗುತ್ತಾನೆ. ರಾಮಾಯಣಪಾರಾಯಣದ ವ್ರತವನ್ನು ತೊಟ್ಟಿರುವ ಧರ್ಮಾತ್ಮನಾದ ಮನುಷ್ಯನು ಆ ಸಮಯದಲ್ಲಿ ದುಷ್ಟನನ್ನಾಗಲೀ, ಪತಿತನನ್ನಾಗಲೀ ಅನ್ನ-ವಸ್ತ್ರಾದಿಗಳಿಂದ ಸತ್ಕರಿಸಬಾರದು. ನಾಸ್ತಿಕರನ್ನೂ, ಧರ್ಮಮರ್ಯಾದೆಯಿಂದ ಭ್ರಷ್ಟರಾದವರನ್ನೂ, ನಿಂದಕರನ್ನೂ, ಚಾಡಿ ಹೇಳುವವರನ್ನೂ ರಾಮಾಯಣವ್ರತಸ್ಥನು ಮಾತಿನಿಂದಲೂ ಅಭಿನಂದಿಸಬಾರದು.

ಪತಿಯು ಜೀವಿಸಿರುವಾಗ ಪರಪುರುಷನಿಂದ ಹುಟ್ಟಿದವನನ್ನೂ, ಗಾಯಕನನ್ನೂ, ದೇವರಪೂಜೆಯಿಂದ ಜೀವಿಸುವವನ ಅನ್ನವನ್ನು ತಿನ್ನುವವನನ್ನೂ, ಜೀವಿಕೆಗಾಗಿ ವೈದ್ಯವೃತ್ತಿಯನ್ನವಲಂಬಿಸಿರುವವನನ್ನೂ, ಹೊಟ್ಟೆಪಾಡಿಗಾಗಿ ಮಿಥ್ಯಾಪ್ರಶಂಸೆಯನ್ನು ಮಾಡಿ ಕಾವ್ಯರಚಿಸುವ ಕವಿಯನ್ನೂ, ದೇವ-ದ್ವಿಜರ ವಿರೋಧಿಯನ್ನೂ, ಪರಾನ್ನದಲ್ಲಿಯೇ ಆಸಕ್ತನಾಗಿರುವವನನ್ನೂ, ಪರಸ್ತ್ರೀಲಂಪಟನನ್ನೂ–ರಾಮಾಯಣವ್ರತಧಾರಿಯು ಮಾತಿನಿಂದಲೂ ಸಮಾದರಿಸಬಾರದು.

ಇಂತಹ ದೋಷಗಳಿಂದ ದೂರವಿದ್ದು ಪರಿಶುದ್ಧನಾಗಿ, ಜಿತೇಂದ್ರಿಯನಾಗಿ, ಸರ್ವರ ಹಿತದಲ್ಲಿಯೂ ತತ್ಪರನಾಗಿ ರಾಮಾಯಣಪಾರಾಯಣವನ್ನು ಮಾಡುವವನು ಶ್ರೇಷ್ಠವಾದ ಸಿದ್ಧಿಯನ್ನು ಪಡೆದುಕೊಳ್ಳುತ್ತಾನೆ.

ನಾಸ್ತಿ ಗಂಗಾಸಮಂ ತೀರ್ಥಂ ನಾಸ್ತಿ ಮಾತೃಸಮೋ ಗುರುಃ ।
ನಾಸ್ತಿ ವಿಷ್ಣುಸಮೋ ದೇವೋ ನಾಸ್ತಿ ರಾಮಾಯಣಾತ್ಪರಮ್ ॥೨೧॥

ಗಂಗಾತೀರ್ಥಕ್ಕೆ ಸಮಾನವಾದ ಬೇರೊಂದು ತೀರ್ಥವಿಲ್ಲ. ತಾಯಿಗೆ ಸಮಾನವಾದ ಬೇರೊಬ್ಬ ಗುರುವಿಲ್ಲ. ವಿಷ್ಣುವಿಗೆ ಸಮಾನವಾದ ಬೇರೊಬ್ಬ ದೇವನಿಲ್ಲ. ರಾಮಾಯಣಕ್ಕಿಂತಲೂ ಉತ್ಕೃಷ್ಟವಾದ ಗ್ರಂಥವು ಬೇರೊಂದಿಲ್ಲ.

ನಾಸ್ತಿ ವೇದಸಮಂ ಶಾಸ್ತ್ರಂ ನಾಸ್ತಿ ಶಾನ್ತಿಸಮಂ ಸುಖಮ್ ।
ನಾಸ್ತಿ ಸೂರ್ಯಸಮಂ ಜ್ಯೋತಿರ್ನಾಸ್ತಿ ರಾಮಾಯಣಾತ್ಪರಮ್ ॥

ವೇದಕ್ಕೆ ಸಮಾನವಾದ ಶಾಸ್ತ್ರವು ಬೇರೊಂದಿಲ್ಲ. ಶಾಂತಿಗೆ ಸಮಾನ ವಾದ ಸುಖವು ಬೇರೊಂದಿಲ್ಲ. ಸೂರ್ಯನಿಗೆ ಸಮಾನವಾದ ಜ್ಯೋತಿಯು ಬೇರೊಂದಿಲ್ಲ. ರಾಮಾಯಣಕ್ಕಿಂತಲೂ ಉತ್ಕೃಷ್ಟವಾದ ಗ್ರಂಥವು ಬೇರೊಂದಿಲ್ಲ.

ನಾಸ್ತಿ ಕ್ಷಮಾಸಮಂ ಸಾರಂ ನಾಸ್ತಿ ಕೀರ್ತಿಸಮಂ ಧನಮ್ ।
ನಾಸ್ತಿ ಜ್ಞಾನಸಮೋ ಲಾಭೋ ನಾಸ್ತಿ ರಾಮಾಯಣಾತ್ಪರಮ್ ॥

ಕ್ಷಮೆಗಿಂತಲೂ ಸಾರವತ್ತಾದುದು ಬೇರೊಂದಿಲ್ಲ. ಕೀರ್ತಿಗೆ ಸಮಾನ ವಾದ ಧನವು ಬೇರೊಂದಿಲ್ಲ. ಜ್ಞಾನಕ್ಕೆ ಸಮಾನವಾದ ಲಾಭವು ಮತ್ತೊಂದಿಲ್ಲ. ರಾಮಾಯಣಕ್ಕಿಂತಲೂ ಉತ್ಕೃಷ್ಟವಾದ ಗ್ರಂಥವು ಬೇರೊಂದಿಲ್ಲ.

ರಾಮಾಯಣಪಾರಾಯಣದನಂತರ ರಾಮಾಯಣಪಾರಾಯಣವನ್ನು ಮಾಡಿದ ವೇದವಿದನಾದ ಬ್ರಾಹ್ಮಣನಿಗೆ ದಕ್ಷಿಣಾಸಹಿತವಾಗಿ ಗೋದಾನ ಮಾಡಬೇಕು. ರಾಮಾಯಣಪುಸ್ತಕವನ್ನೂ, ವಸ್ತ್ರಗಳನ್ನೂ, ಅಲಂಕಾರ ವಸ್ತುಗಳನ್ನೂ ವಾಚಕನಿಗೆ ಕೊಡಬೇಕು.

ರಾಮಾಯಣಂ ಪುಸ್ತಕಂ ಯೋ ವಾಚಕಾಯ ಪ್ರಯಚ್ಛತಿ ।
ಸ ಯಾತಿ ವಿಷ್ಣುಭವನಂ ಯತ್ರ ಗತ್ವಾ ನ ಶೋಚತೇ ॥೨೫॥

ರಾಮಾಯಣಪುಸ್ತಕವನ್ನು ವಾಚಕನಿಗೆ (ರಾಮಾಯಣಪಾರಾಯಣ ಮಾಡುವವನಿಗೆ) ಯಾವನು ಕೊಡುತ್ತಾನೋ–ಅವನು ಶೋಕರಹಿತವಾದ ವಿಷ್ಣುವಿನ ಸ್ಥಾನಕ್ಕೆ ಹೋಗುತ್ತಾನೆ.

ಧರ್ಮಾತ್ಮರಲ್ಲಿ ಶ್ರೇಷ್ಠನಾದ ಸನತ್ಕುಮಾರನೇ! ನವಾಹಪಾರಾಯಣ ವನ್ನು ಮಾಡುವವನಿಗೆ ಅಥವಾ ಒಂಬತ್ತು ದಿವಸಗಳು ರಾಮಕಥೆಯನ್ನು

ಕೇಳುವವನಿಗೆ ಲಭಿಸುವ ಫಲವನ್ನು ಹೇಳುವೆನು ; ಕೇಳು. ಪಂಚಮಿಯಿಂದ ಪ್ರಾರಂಭಿಸಿ ರಾಮಕಥಾಮೃತವನ್ನು ಶ್ರವಣಮಾಡಿದ ಮಾತ್ರದಿಂದಲೇ ಮನುಷ್ಯನು ಸಮಸ್ತಪಾಪಗಳಿಂದಲೂ ಮುಕ್ತನಾಗುತ್ತಾನೆ. ಎರಡು ಬಾರಿ ನವಾಹಪಾರಾಯಣವನ್ನು ವಿಧಿವತ್ತಾಗಿ ಮಾಡಿದರೆ ಪುಂಡರೀಕಯಾಗವನ್ನು ಮಾಡಿದ ಫಲವು ಲಭಿಸುತ್ತದೆ. ನಾಲ್ಕು ಬಾರಿ ರಾಮಕಥಾಮೃತವನ್ನು ಏಕಾಗ್ರಚಿತ್ತನಾಗಿ ಭಕ್ತಿಭಾವದಿಂದ ಕೇಳಿದರೆ ಎಂಟು ಅಗ್ನಿಷ್ಟೋಮಗಳನ್ನು ಮಾಡುವುದರಿಂದ ದೊರಕುವ ಫಲವು ಲಭಿಸುತ್ತದೆ. ಮಹಾತ್ಮನಾದ ಪುರುಷನು ಐದು ಬಾರಿ ರಾಮಾಯಣಕಥಾಮೃತಶ್ರವಣದ ವ್ರತವನ್ನು ಮುಗಿಸಿದರೆ ಅತ್ಯಗ್ನಿಷ್ಟೋಮಯಾಗದ ಫಲಕ್ಕೆ ಇಮ್ಮಡಿಯಾದ ಫಲವು ಲಭಿಸುತ್ತದೆ. ಏಕಾಗ್ರಚಿತ್ತನಾಗಿ ಆರು ಬಾರಿ ರಾಮಾಯಣಕಥಾಮೃತ ಶ್ರವಣದ ವ್ರತವನ್ನು ಮಾಡಿ ಮುಗಿಸಿದರೆ ಎಂಟು ಬಾರಿ ಅಗ್ನಿಷ್ಟೋಮಯಾಗವನ್ನು ಮಾಡಿದಷ್ಟು ಫಲವು ಸಿಕ್ಕುತ್ತದೆ. ಹೆಂಗಸಾಗಲೀ, ಗಂಡಸಾಗಲೀ ಎಂಟು ಬಾರಿ ರಾಮಾಯಣಕಥಾಮೃತಶ್ರವಣದ ವ್ರತವನ್ನು ಮುಗಿಸಿದರೆ ಐದು ಬಾರಿ ನರಮೇಧಯಾಗಮಾಡಿದ ಫಲವು ಲಭಿಸುತ್ತದೆ. ಹೆಂಗಸಾಗಲೀ ಗಂಡಸಾಗಲೀ ಒಂಬತ್ತು ಬಾರಿ ರಾಮಕಥಾಮೃತ ಶ್ರವಣವನ್ನು ಮಾಡಿದರೆ ಮೂರು ಬಾರಿ ಗೋಮೇಧಯಜ್ಞವನ್ನು ಮಾಡಿದ ಫಲವು ಲಭಿಸುತ್ತದೆ. ಶಾಂತಚಿತ್ತನಾಗಿ, ಜಿತೇಂದ್ರಿಯನಾಗಿ ಯಾವನು ರಾಮಾಯಣ ಮಹಾಯಜ್ಞ ವನ್ನು ಮಾಡುವನೋ–ಅವನು ಪರಮಾನಂದಮಯವಾದ ಶೋಕರಹಿತವಾದ ವಿಷ್ಣುಪದಕ್ಕೆ ಹೋಗುತ್ತಾನೆ. ಅನುದಿನವೂ ರಾಮಾಯಣಪಾರಾಯಣ ಮಾಡುವವರೂ ಅಥವಾ ರಾಮಕಥಾಮೃತವನ್ನು ಕೇಳುವವರೂ, ಗಂಗಾಸ್ನಾನಮಾಡುವವರೂ ಧರ್ಮಮಾರ್ಗದ ಉಪದೇಶಕರೂ ಮುಕ್ತಿಯನ್ನು ಹೊಂದಿಯೇ ಹೊಂದುತ್ತಾರೆ. ಇದರಲ್ಲಿ ಸಂಶಯವೇ ಇಲ್ಲ. ಯತಿಗಳು, ಬ್ರಹ್ಮಚಾರಿಗಳು ಮತ್ತು ಶ್ರೇಷ್ಠಯೋಧರು ಒಂಬತ್ತು ದಿವಸಗಳು ರಾಮಾಯಣಕಥಾಮೃತ ವನ್ನು ಕೇಳಬೇಕು. ರಾಮಕಥೆಯನ್ನು ಅತ್ಯಂತಭಕ್ತಿಭಾವದಿಂದ ಕೇಳಿದ ಮನುಷ್ಯನು ಮಹಾತೇಜಸ್ವಿಯಾಗುತ್ತಾನೆ. ಅವಸಾನಾನಂತರ ಬ್ರಹ್ಮಲೋಕಕ್ಕೆ ಹೋಗಿ ಅಲ್ಲಿ ಮಹಾನಂದವನ್ನು ಅನುಭವಿಸುತ್ತಾನೆ. ವಿಪ್ರೇಂದ್ರರೇ!

ಆದುದರಿಂದ, ರಾಮಾಯಣಕಥಾಮೃತವನ್ನು ಕೇಳಿರಿ. ಶ್ರೋತೃಗಳಿಗಿದು ಪರಮೋತ್ಕೃಷ್ಟವಾದ ಶ್ರವಣೀಯವಸ್ತುವಾಗಿದೆ. ಪವಿತ್ರಗ್ರಂಥಗಳಲ್ಲಿ ಪರಮ ಪವಿತ್ರ ಗ್ರಂಥವಾಗಿದೆ. ರಾಮಾಯಣಕಥಾಶ್ರವಣವು ದುಃಸ್ವಪ್ನನಾಶಕವು, ಧನಪ್ರಾಪಕವು. ಆದುದರಿಂದ ಇದನ್ನು ಪ್ರಯತ್ನಪೂರ್ವಕವಾಗಿ ಶ್ರವಣ ಮಾಡಬೇಕು. ಶ್ರದ್ಧಾಯುಕ್ತನಾದ ಮನುಷ್ಯನು ಶ್ಲೋಕವನ್ನಾಗಲೀ ಶ್ಲೋಕಾರ್ಧವನ್ನಾಗಲೀ ಪಠಿಸಿದರೂ ಕೋಟಿ-ಕೋಟಿ ಉಪಪಾತಕಗಳಿಂದ ಒಡನೆಯೇ ಮುಕ್ತನಾಗುತ್ತಾನೆ. ಇದು ಅತ್ಯಂತಪವಿತ್ರವಸ್ತುವಾದುದರಿಂದ ಸತ್ಪುರುಷರಿಗೆ ಮಾತ್ರವೇ ಇದನ್ನು ಬೋಧಿಸಬೇಕು. ರಾಮಾಯಣ ಕಥಾಮೃತವನ್ನು ರಾಮಮಂದಿರದಲ್ಲಾಗಲೀ, ಪುಣ್ಯಕ್ಷೇತ್ರಗಳಲ್ಲಾಗಲೀ, ಸತ್ಪುರುಷರ ಸಭೆಗಳಲ್ಲಾಗಲೀ ಹೇಳಬೇಕು. ಬ್ರಾಹ್ಮಣರನ್ನು ದ್ವೇಷಿಸು ವುದರಲ್ಲಿಯೇ ನಿರತರಾಗಿರತಕ್ಕವರಿಗೂ, ದಂಭಾಚಾರಿಗಳಿಗೂ, ಜನರನ್ನು ವಂಚಿಸುವ ವೃತ್ತಿಯನ್ನು ಅವಲಂಬಿಸಿರುವವರಿಗೂ ಉತ್ತಮೋತ್ತಮವಾದ ಈ ಕಥೆಯನ್ನು ಹೇಳಬಾರದು. ಮೋಕ್ಷಕ್ಕೆ ಸಾಧನವಾದ ಈ ರಾಮಕಥಾ ಮೃತವನ್ನು ಕಾಮ-ಕ್ರೋಧಾದಿಗಳನ್ನು ತ್ಯಜಿಸಿದವರಿಗೂ, ರಾಮಭಕ್ತಿ ಯಲ್ಲಿಯೇ ಆಸಕ್ತವಾದ ಮನಸ್ಸುಳ್ಳವರಿಗೂ ಗುರುಭಕ್ತರಿಗೂ ಹೇಳಬೇಕು.

ಸರ್ವದೇವಮಯೋ ರಾಮಃ ಸ್ಮೃತಶ್ಚಾರ್ತಿಪ್ರಣಾಶನಃ ।
ಸದ್ಭಕ್ತವತ್ಸಲೋ ದೇವೋ ಭಕ್ತ್ಯಾ ತುಷ್ಯತಿ ನಾನ್ಯಥಾ ॥೪೩॥

ಶ್ರೀರಾಮನು ಸರ್ವದೇವಮಯನು. ಶ್ರೀರಾಮನಲ್ಲಿಯೇ ಎಲ್ಲ ದೇವತೆಗಳೂ ಇರುವರು. ಸ್ಮರಿಸಿಕೊಂಡೊಡನೆಯೇ ಭಕ್ತರ ಪೀಡೆಗಳೆಲ್ಲ ವನ್ನೂ ವಿನಾಶಗೊಳಿಸುತ್ತಾನೆ. ಸದ್ಭಕ್ತರ ವಿಷಯದಲ್ಲಿ ತುಂಬಾ ಪ್ರೀತಿಯುಳ್ಳ ದೇವನಿವನು. ಭಕ್ತಿಯಿಂದಲೇ ಸಂತುಷ್ಟನಾಗುತ್ತಾನೆ. ಇವನ ಒಲುಮೆಗೆ ಬೇರೆ ಯಾವ ಉಪಾಯವೂ ಇಲ್ಲ.

ಮನುಷ್ಯನು ಬುದ್ಧಿಶೂನ್ಯನಾಗಿ ನಾಮಸಂಕೀರ್ತನೆಯನ್ನು ಮಾಡಿ ದರೂ ಸ್ಮರಿಸಿಕೊಂಡರೂ ಪಾಪಗಳಿಂದ ಮುಕ್ತನಾಗುತ್ತಾನೆ ಮತ್ತು ಪರಮ ಪದವನ್ನು ಸೇರುತ್ತಾನೆ.

ಸಂಸಾರಘೋರಕಾನ್ತಾರದಾವಾಗ್ನಿರ್ಮಧುಸೂದನಃ ।
ಸ್ಮರ್ತೄಣಾಂ ಸರ್ವಪಾಪಾನಿ ನಾಶಯತ್ಯಾಶು ಸತ್ತಮಾಃ ॥೪೫॥

ಸತ್ಪುರುಷರೇ! ಮಧುಸೂದನನು ಸಂಸಾರವೆಂಬ ಘೋರವಾದ ಅರಣ್ಯಕ್ಕೆ ದಾವಾಗ್ನಿಯಂತೆ. ಕಾಡುಗಿಚ್ಚು ಅರಣ್ಯವನ್ನು ಸುಡುವಂತೆ ಶ್ರೀರಾಮನು ಭಕ್ತರ ಸಂಸಾರಬಂಧನವನ್ನು ವಿನಾಶಗೊಳಿಸುತ್ತಾನೆ. ಸ್ಮರಿಸುವವರ ಪಾಪಗಳನ್ನು ಬಹಳ ಬೇಗ ಹೋಗಲಾಡಿಸುತ್ತಾನೆ. ಯಾವನಿಗೆ ರಾಮನಾಮದಲ್ಲಿ ಭಕ್ತಿಯುಕ್ತವಾದ ಪ್ರೀತಿಯಿರುವುದೋ–ಅವನೇ ಕೃತಕೃತ್ಯನು. ಸರ್ವಶಾಸ್ತ್ರಾರ್ಥಕೋವಿದನು. ರಾಮನಾಮರಸದಲ್ಲಿ ಪ್ರೀತಿಯುಳ್ಳವನು ಸಂಪಾದಿಸಿದ ತಪಸ್ಸು ಪವಿತ್ರವಾಗಿರುತ್ತದೆ. ಸಫಲವಾಗುತ್ತದೆ. ರಾಮನಾಮಕೀರ್ತನವೆಂಬ ರಸದಲ್ಲಿ ಅಭಿರುಚಿಯಿರದಿದ್ದರೆ ರಾಮಾಯಣ ಕಥಾಮೃತಶ್ರವಣದಲ್ಲಿಯೂ ಪ್ರೀತಿಯಿರುವುದಿಲ್ಲ.

ಘೋರವಾದ ಈ ಕಲಿಯುಗದಲ್ಲಿ ರಾಮಾಯಣವನ್ನು ಮತ್ತು ಶ್ರೀರಾಮನಾಮವನ್ನು ಆಶ್ರಯಿಸಿರುವವರೇ ಕೃತಕೃತ್ಯರು. ರಾಮಾಯಣ ಕಥಾಮೃತವನ್ನು ಒಂಬತ್ತು ದಿವಸಗಳು ಕೇಳಬೇಕು. ಯಾರು ಹೀಗೆ ವಿಧಿವತ್ತಾಗಿ ಶ್ರೀರಾಮನ ಕಥೆಯನ್ನು ಕೇಳುವರೋ–ಅವರೇ ಕೃತಾರ್ಥರು. ಮಹಾತ್ಮರಾದ ಅವರಿಗೆ ನಿತ್ಯವೂ ನನ್ನ ನಮಸ್ಕಾರಗಳಿರಲಿ.

ರಾಮನಾಮ್ನೈವ ನಾಮ್ನೈವ ನಾಮ್ನೈವ ಮಮ ಜೀವನಮ್ ।
ಕಲೌ ನಾಸ್ತ್ಯೇವ ನಾಸ್ತ್ಯೇವ ನಾಸ್ತ್ಯೇವ ಗತಿರನ್ಯಥಾ ॥೫೧॥

ಶ್ರೀರಾಮನಾಮವೇ–ಜಯರಾಮನಾಮವೇ–ಜಯ ಜಯ ರಾಮನಾಮವೇ ನನ್ನ ಜೀವನವು. ಕಲಿಯುಗದಲ್ಲಿ ಪರಮಗತಿಯನ್ನು ಹೊಂದಲು ಬೇರೆ ಯಾವ ಉಪಾಯವೂ ಇಲ್ಲ ; ಇಲ್ಲ ; ಇಲ್ಲವೇ ಇಲ್ಲ."

ಸೂತರು ಹೇಳುತ್ತಾರೆ :

"ಹೀಗೆ ಸನತ್ಕುಮಾರನು ನಾರದರಿಂದ ಜ್ಞಾನೋಪದೇಶವನ್ನು ಪಡೆದು ಒಡನೆಯೇ ಪರಮಾನಂದಸುಖವನ್ನು ಅನುಭವಿಸಿದನು. ಆದುದರಿಂದ, ವಿಪ್ರಶ್ರೇಷ್ಠರೇ! ರಾಮಾಯಣಕಥಾಮೃತವನ್ನು ಒಂಬತ್ತು ದಿವಸಗಳ

ಕಾಲ ನೀವೂ ಕೇಳಿರಿ. ಹೀಗೆ ಕೇಳುವವನು ಸಮಸ್ತಪಾಪಗಳಿಂದಲೂ ಬಿಡುಗಡೆ ಹೊಂದುತ್ತಾನೆ. ಈ ಮಹಾಕಾವ್ಯವನ್ನು ಕೇಳಿದನಂತರ ವಾಚಕನನ್ನು ಸತ್ಕರಿಸಿ ಗೌರವಿಸುವವನ ವಿಷಯದಲ್ಲಿ ಲಕ್ಷ್ಮೀಸಹಿತನಾದ ಮಹಾವಿಷ್ಣುವು ಸುಪ್ರೀತನಾಗುತ್ತಾನೆ. ವಾಚಕನೂ ಸುಪ್ರೀತನಾಗುತ್ತಾನೆ. ವಾಚಕನು ಸುಪ್ರೀತನಾದರೆ ಬ್ರಹ್ಮ-ವಿಷ್ಣು-ಮಹೇಶ್ವರರೂ ಸುಪ್ರೀತರಾಗುತ್ತಾರೆ. ಇದನ್ನು ಪುನರ್ವಿಮರ್ಶಿಸಬೇಕಾದ ಕಾರ್ಯವೇ ಇಲ್ಲ. ತನ್ನಲ್ಲಿರುವ ಐಶ್ವರ್ಯಕ್ಕೆ ತಕ್ಕಂತೆ ಶ್ರೋತೃವು ವಾಚಕನಿಗೆ ಗೋವನ್ನೂ, ವಸ್ತ್ರಗಳನ್ನೂ, ಸುವರ್ಣವನ್ನೂ ಮತ್ತು ರಾಮಾಯಣಗ್ರಂಥವನ್ನೂ ದಾನವಾಗಿ ಕೊಡ ಬೇಕು. ಹೀಗೆ ವಾಚಕನಿಗೆ ದಾನಮಾಡುವುದರಿಂದ ಪ್ರಾಪ್ತವಾಗುವ ಪುಣ್ಯ ಫಲಗಳನ್ನು ಹೇಳುವೆನು : ಏಕಾಗ್ರತೆಯಿಂದ ಕೇಳಿರಿ. ಭೂತ-ವೇತಾಲಾದಿ ಗ್ರಹಗಳು ಅವನನ್ನು ಬಾಧೆಪಡಿಸುವುದಿಲ್ಲ. ಸಮಸ್ತವಾದ ಶ್ರೇಯಸ್ಸುಗಳೂ ಲಭಿಸುತ್ತವೆ. ಅವನಿಗೆ ಅಗ್ನಿಬಾಧೆಯಿರುವುದಿಲ್ಲ. ಕಳ್ಳ-ಕಾಕರಿಂದ ಭಯವಿರುವುದಿಲ್ಲ. ಜನ್ಮ-ಜನ್ಮಾಂತರಗಳಿಂದ ಉಪಾರ್ಜಿತವಾದ ಪಾಪಗಳಿಂದಲೂ ಒಡನೆಯೇ ಮುಕ್ತನಾಗುತ್ತಾನೆ. ದೇಹಾಂತ್ಯದಲ್ಲಿ ತನ್ನ ಏಳು ತಲೆಮಾರಿನವರೊಡನೆ ಮೋಕ್ಷವನ್ನು ಹೊಂದುತ್ತಾನೆ.

ಹೀಗೆ ಹಿಂದೆ ನಾರದರು ಸನತ್ಕುಮಾರನಿಗೆ ಹೇಳಿದ ರಾಮಾಯಣ ಮಾಹಾತ್ಮ್ಯವನ್ನು ಭಕ್ತಿಯಿಂದ ಪ್ರಶ್ನಿಸಿದ ನಿಮಗೂ ಹೇಳಿದ್ದೇನೆ. ರಾಮಾಯಣ ಮಹಾಕಾವ್ಯವು ಸಮಸ್ತವೇದಾರ್ಥಗಳಿಗೂ ಸಮ್ಮತವಾದುದು. ಸರ್ವ ಪಾಪವಿನಾಶಕವು. ಪುಣ್ಯಪ್ರದವು. ಸಮಸ್ತದುಃಖವಿನಾಶಕವು. ಸಮಸ್ತಪುಣ್ಯ ಫಲಗಳನ್ನು ಕೊಡತಕ್ಕುದು. ಸಮಸ್ತಯಜ್ಞಗಳ ಫಲವನ್ನು ಕೊಡತಕ್ಕುದು. ಯಾವ ವಿದ್ವಾಂಸರು ಇದರಲ್ಲಿರುವ ಒಂದು ಶ್ಲೋಕವನ್ನಾಗಲೀ ಶ್ಲೋಕಾರ್ಧ ವನ್ನಾಗಲೀ ಪಠನಮಾಡುವರೋ–ಅಂತಹವರಿಗೆ ಯಾವಾಗಲೂ ಪಾಪದ ಬಂಧನವಿರುವುದಿಲ್ಲ. ಶ್ರೀರಾಮನಿಗೆ ಸಮರ್ಪಿತವಾದ ಈ ರಾಮಾಯಣಕಾವ್ಯವು ಪುಣ್ಯತಮವಾದುದು. ಸಮಸ್ತಕಾಮನೆಗಳನ್ನೂ ಕೊಡತಕ್ಕುದು. ಭಕ್ತಿಯಿಂದ ಯಾರು ಇದನ್ನು ಕೇಳುವರೋ ಅವರಿಗೆ ಲಭಿಸುವ ಫಲಗಳನ್ನು ಕೇಳಿರಿ. ನೂರು ಜನ್ಮಗಳಿಂದ ಶೇಖರಿಸಿದ ಪಾಪಗಳಿಂದ ಒಡ

ನೆಯೇ ಮುಕ್ತರಾಗಿ ಸಾವಿರ ತಲೆಮಾರಿನವರೊಡನೆ ಪರಮಪದಕ್ಕೆ ಹೋಗುತ್ತಾರೆ.

ಕಿಂ ತೀರ್ಥೈರ್ಗೋಪ್ರದಾನೈರ್ವಾ ಕಿಂ ತಪೋಭಿಃ ಕಿಮಧ್ವರೈಃ ।
ಅಹನ್ಯಹನಿ ರಾಮಸ್ಯ ಕೀರ್ತನಂ ಪರಿಶೃಣ್ವತಾಮ್ ॥೬೬॥

ಅನುದಿನವೂ ರಾಮನಾಮವನ್ನು ಕೀರ್ತನಮಾಡುವವರಿಗೆ ತೀರ್ಥಯಾತ್ರೆಯಿಂದಾಗಲೀ, ಗೋದಾನದಿಂದಾಗಲೀ, ತಪಸ್ಸುಗಳಿಂದಾಗಲೀ, ಯಾಗಾದಿಗಳಿಂದಾಗಲೀ–ಏನು ಪ್ರಯೋಜನ? ಶ್ರೀರಾಮನಾಮವನ್ನು ಪ್ರತಿದಿನವೂ ಕೀರ್ತನಮಾಡುವವರಿಗೆ ಈ ಯಾವುದರ ಆವಶ್ಯಕತೆಯೂ ಇಲ್ಲ. ರಾಮನಾಮಕೀರ್ತನದಿಂದಲೇ ಈ ಎಲ್ಲ ಕರ್ಮಗಳ ಫಲವೂ ಸಿದ್ಧಿಸುತ್ತದೆ.

ಚೈತ್ರ, ಕಾರ್ತಿಕ ಮತ್ತು ಮಾಘಮಾಸಗಳ ಶುಕ್ಲಪಕ್ಷದಲ್ಲಿ ರಾಮಕಥಾಮೃತವನ್ನು ಒಂಬತ್ತು ದಿವಸಗಳವರೆಗೆ ಕೇಳಬೇಕು. ಶ್ರೀರಾಮಕಥಾಮೃತಶ್ರವಣವು ಶ್ರೀರಾಮಚಂದ್ರನ ಅನುಗ್ರಹವನ್ನು ಸಿದ್ಧಿಸಿಕೊಡುತ್ತದೆ. ರಾಮಭಕ್ತಿಯನ್ನು ಹೆಚ್ಚಿಸುತ್ತದೆ. ಸಮಸ್ತಪಾಪಗಳನ್ನೂ ಹೋಗಲಾಡಿಸುತ್ತದೆ. ಸಮಸ್ತವಾದ ಸಂಪತ್ತನ್ನೂ ವೃದ್ಧಿಗೊಳಿಸುತ್ತದೆ.

ಯಸ್ತ್ವೇತಚ್ಛೃಣುಯಾದ್ವಾಪಿ ಪಠೇದ್ವಾ ಸುಸಮಾಹಿತಃ ।
ಸರ್ವಪಾಪವಿನಿರ್ಮುಕ್ತೋ ವಿಷ್ಣುಲೋಕಂ ಸ ಗಚ್ಛತಿ ॥೬೯॥

ಯಾವನು ಶ್ರೀಮದ್ರಾಮಾಯಣವನ್ನು ಪಾರಾಯಣಮಾಡುವನೋ, ರಾಮಕಥಾಮೃತವನ್ನು ಕೇಳುವನೋ–ಅಂತಹವನು ಸಮಸ್ತಪಾಪಗಳಿಂದಲೂ ಮುಕ್ತನಾಗಿ ವಿಷ್ಣುವಿನ ಲೋಕಕ್ಕೆ ಹೋಗುತ್ತಾನೆ."

ಸ್ಕಾಂದಪುರಾಣದ ಉತ್ತರಖಂಡದಲ್ಲಿ ನಾರದ-ಸನತ್ಕುಮಾರಸಂವಾದದಲ್ಲಿ
ಶ್ರೀಮದ್ರಾಮಾಯಣಮಾಹಾತ್ಮ್ಯದ ಫಲಾನುಕೀರ್ತನವೆಂಬ
ಐದನೆಯ ಅಧ್ಯಾಯವು ಮುಗಿಯಿತು.

ಶ್ರೀಮಹಾಗಣಪತಯೇ ನಮಃ ಶ್ರೀಸರಸ್ವತ್ಯೈ ನಮಃ ಶ್ರೀಸದ್ಗುರವೇ ನಮಃ

ಶ್ರೀಮದ್ವಾಲ್ಮೀಕಿರಾಮಾಯಣ-ಬಾಲಕಾಂಡ

ಒಂದನೆಯ ಸಂಪುಟ

ಬಾಲಕಾಂಡ ೧ನೆಯ ಸರ್ಗ

ನಾರದರು ವಾಲ್ಮೀಕಿಮಹರ್ಷಿಗಳಿಗೆ ಶ್ರೀರಾಮನ ಕಥೆಯನ್ನು ಸಂಕ್ಷೇಪವಾಗಿ ವಿವರಿಸಿದುದು

ತಪಃಸ್ವಾಧ್ಯಾಯನಿರತಂ ತಪಸ್ವೀ ವಾಗ್ವಿದಾಂ ವರಮ್ ।
ನಾರದಂ ಪರಿಪಪ್ರಚ್ಛ ವಾಲ್ಮೀಕಿರ್ಮುನಿಪುಙ್ಗವಮ್ ॥೧॥

ತಪಸ್ವಿಗಳಾದ ವಾಲ್ಮೀಕಿಮಹರ್ಷಿಗಳು ತಪಸ್ಸಿನಲ್ಲಿಯೂ,[1] ಅಧ್ಯಯನಾಧ್ಯಾಪನಗಳಲ್ಲಿಯೂ ನಿರತರಾದ, ಮಾತು ಬಲ್ಲವರಲ್ಲಿ ಶ್ರೇಷ್ಠ ರಾದ,[2] ಜ್ಞಾನದಾಯಕರಾದ ನಾರದಮಹರ್ಷಿಗಳನ್ನು ಅರ್ಘ್ಯ-ಪಾದ್ಯಾದಿ ಗಳಿಂದ ಪೂಜಿಸಿ ಹೀಗೆ ಪ್ರಶ್ನಿಸಿದರು :[3]

ಬ್ರಹ್ಮನು ನೂರು ಕೋಟಿ ಶ್ಲೋಕಗಳ ರಾಮಾಯಣವನ್ನು ರಚಿಸಿ ಅದನ್ನು ನಾರದಾದಿ ಮಹರ್ಷಿಗಳಿಗೆ ಉಪದೇಶಿಸಿದನು. ಅವನ ಆದೇಶದಂತೆ ನಾರದರು ಅದನ್ನು ಭೂಲೋಕದಲ್ಲಿರುವ ಮನುಷ್ಯರಿಗೆ ಸಂಕ್ಷೇಪವಾಗಿ ಉಪದೇಶಮಾಡುವುದಕ್ಕೋಸ್ಕರ ರಮಣೀಯವಾಗಿದ್ದ ವಾಲ್ಮೀಕಿಗಳ ಆಶ್ರಮಕ್ಕೆ ದಯಮಾಡಿಸಿದರು. ಆಗ ಮಹರ್ಷಿ ವಾಲ್ಮೀಕಿಗಳು ನಾರದರನ್ನು ಯಥೋಚಿತವಾಗಿ ಸತ್ಕರಿಸಿ ಪ್ರಶ್ನೆಮಾಡಿದರು.

1 ತಪಸ್ಸು : ಕಾಯಕ-ವಾಚಿಕ-ಮಾನಸಿಕ ಎಂದು ಮೂರು ಬಗೆ. ವ್ರತ-ಉಪವಾಸಾದಿಗಳು ಕಾಯಕ. ಅಧ್ಯಯನ-ಅಧ್ಯಾಪನಗಳು ವಾಚಿಕ. ಧ್ಯಾನವು ಮಾನಸಿಕವಾದ ತಪಸ್ಸು. ಮನಸ್ಸು ಮತ್ತು ಇಂದ್ರಿಯಗಳ ಏಕಾಗ್ರತೆಯೇ ಪರಮತಪಸ್ಸು. ಮನಶ್ಚೇನ್ದ್ರಿಯಾಣಾಂ ಚ ಹ್ಯೈಕಾಗ್ರ್ಯಂ ಪರಮಂ ತಪಃ ॥

(ಗೀತಾ-ಅಧ್ಯಾಯ-೧೭ ಶ್ಲೋಕ ೧೪-೧೫-೧೬)

2 ವಾಗ್ವಿದಾಂ ವರಂ : ಮಾತನ್ನು ಬಲ್ಲವರಲ್ಲಿ ಶ್ರೇಷ್ಠನು. ಇಲ್ಲಿ ಮಾತು ಎಂದರೆ ವೇದ ಸರಸ್ವತಿ. ಸತ್ಯಾರ್ಥವನ್ನು ರಮಣೀಯವಾಗಿ ನಿರೂಪಿಸುವ ಮಾತಿನ ಕಲೆಯೂ ಆಗುತ್ತದೆ. ನಾರದರು ಇವೆರಡರಲ್ಲಿಯೂ ನಿಪುಣರು.

3 ನಾರದರು ಬ್ರಹ್ಮಮಾನಸಪುತ್ರರು. ವಾಲ್ಮೀಕಿಗಳಾರು? ಅವರ ಪೂರ್ವಚರಿತವೇನು?

ಕೋ ನ್ವಸ್ಮಿನ್ಸಾಂಪ್ರತಂ ಲೋಕೇ ಗುಣವಾನ್ಕಶ್ಚ ವೀರ್ಯವಾನ್ ।
ಧರ್ಮಜ್ಞಶ್ಚ ಕೃತಜ್ಞಶ್ಚ ಸತ್ಯವಾಕ್ಯೋ ದೃಢವ್ರತಃ ॥೨॥

ಚಾರಿತ್ರೇಣ ಚ ಕೋ ಯುಕ್ತಃ ಸರ್ವಭೂತೇಷು ಕೋ ಹಿತಃ ।
ವಿದ್ವಾನ್ಕಃ ಕಃ ಸಮರ್ಥಶ್ಚ ಕಶ್ಚೈಕಪ್ರಿಯದರ್ಶನಃ ॥೩॥

ಆತ್ಮವಾನ್ಕೋ ಜಿತಕ್ರೋಧೋ ದ್ಯುತಿಮಾನ್ಕೋಽನಸೂಯಕಃ ।
ಕಸ್ಯ ಬಿಭ್ಯತಿ ದೇವಾಶ್ಚ ಜಾತರೋಷಸ್ಯ ಸಂಯುಗೇ ॥೪॥

ಏತದಿಚ್ಛಾಮ್ಯಹಂ ಶ್ರೋತುಂ ಪರಂ ಕೌತೂಹಲಂ ಹಿ ಮೇ ।
ಮಹರ್ಷೇ ತ್ವಂ ಸಮರ್ಥೋಽಸಿ ಜ್ಞಾತುಮೇವಂವಿಧಂ ನರಮ್ ॥೫॥

"ಪರಮಪೂಜ್ಯರಾದ ನಾರದಮಹರ್ಷಿಗಳೇ! ಈಗ ಲೋಕದಲ್ಲಿ ಸಕಲಕಲ್ಯಾಣಗುಣಗಳಿಂದ[1] ಕೂಡಿರುವವನು ಯಾರು? ವೀರ್ಯವಂತನಾರು?[2] ಧರ್ಮಜ್ಞನಾರು?[3] ಕೃತಜ್ಞನಾರು?[4] ಸತ್ಯಭಾಷಿಯು ಯಾರು?[5]

ಎಂಬ ವಿಷಯವಾಗಿ ಪುರಾಣಗಳ ಅಭಿಪ್ರಾಯವು ಹೀಗಿದೆ : 'ವಲ್ಮೀಕ' ಎಂದರೆ ಹುತ್ತ. ಹುತ್ತದಲ್ಲಿ ಹುಟ್ಟಿದವರು ವಾಲ್ಮೀಕಿ. ಆ ಹುತ್ತವು ಬೆಳೆಯುವ ಮೊದಲು ತಪಸ್ಸಿನಲ್ಲಿ ಕುಳಿತಿದ್ದ ಮಹರ್ಷಿಗಳಾರು?–ಎಂದರೆ 'ಋಕ್ಷೋಽಭೂದ್ಭಾರ್ಗವಸ್ತಸ್ಮಾದ್ವಾಲ್ಮೀಕಿರ್ಯೋಽಭಿಧೀಯತೇ' (ವಿಷ್ಣುಪುರಾಣ) 'ಭೃಗುವಂಶ್ಯಃ ಕಶ್ಚಿತ್ಪ್ರಚೇತಾನಾಮಾ, ತಸ್ಯ ಪುತ್ರಃ ಋಕ್ಷೋ ನಾಮ'–ಭೃಗುವಂಶದಲ್ಲಿ ಪ್ರಚೇತಸನೆಂಬ ಮಹರ್ಷಿಯಿದ್ದನು. ಅವನ ಮಗನ ಹೆಸರು ಋಕ್ಷ. ಋಕ್ಷಮಹರ್ಷಿಯು ತಪಸ್ಸುಮಾಡಲು ಕುಳಿತನು. ಅನೇಕ ವರ್ಷಗಳು ತಪಸ್ಸು ಮಾಡುತ್ತಲೇ ಇದ್ದನು. ಅವನ ಮೇಲೆ ಹುತ್ತವು ಬೆಳೆಯಿತು. ವರುಣನು ಮಳೆಗರೆದು ಹುತ್ತವನ್ನು ಕರಗಿಸಿದನು. ಋಕ್ಷನು ಹೊರಗೆ ಬಂದನು. ಅದರಿಂದಾಗಿ ಅವನಿಗೆ ವಾಲ್ಮೀಕಿಯೆಂದೇ ಹೆಸರಾಯಿತು. ವರುಣನು ಮಳೆಗೆರೆದು ಹುತ್ತವನ್ನು ಕರಗಿಸಿದ ಕಾರಣದಿಂದಲೂ, ವರುಣನ ಮಗ ಪ್ರಾಚೇತಸನೆಂದು ವಾಲ್ಮೀಕಿಯನ್ನು ಕರೆಯುವರು ಅಥವಾ ಭೃಗುವಂಶದಲ್ಲಿ ಹುಟ್ಟಿದ ಪ್ರಚೇತಸನ ಮಗನಾದ್ದರಿಂದ ಪ್ರಾಚೇತಸನೆಂದೂ ಹೆಸರಾಯಿತು. ಇದು ವಾಲ್ಮೀಕಿಯ ವಿಷಯವಾಗಿ ಪುರಾಣಾಂತರಗಳಲ್ಲಿ ಸಿಕ್ಕುವ ಕಥೆಯಾಗಿದೆ.

[1] ಗುಣಗಳೆಂದರೆ ಸೌಶೀಲ್ಯಾದಿ ಗುಣಗಳು. 'ಗುಣ್ಯತೇ ಇತಿ ಗುಣಃ' ಎಂದರೆ ಅನುಯಾಯಿಗಳಿಂದ ಅನುಸಂಧಾನಮಾಡಲ್ಪಡುವುದು, ಅಥವಾ ಅನುಕರಣೆಮಾಡಲ್ಪಡುವುದೇ ಗುಣ.

[2] ವಿಕಾರಕ್ಕೆ ಕಾರಣಗಳಿದ್ದರೂ ವಿಕಾರಹೊಂದದವನು, ಅಥವಾ ತಾನೂ ವಿಕಾರ

ದೃಢವಾದ ವ್ರತನಿಷ್ಠೆಯುಳ್ಳವನು ಯಾರು?[6] ಮಹರ್ಷಿಗಳೇ! ಕುಲಾಚಾರವನ್ನು ಉಲ್ಲಂಘಿಸದೇ ಅನೂಚಾನವಾಗಿ ಬಂದಿರುವ ಆಚಾರ-ವ್ಯವಹಾರಗಳನ್ನು ತಪ್ಪದೇ ನಡೆಸಿಕೊಂಡು ಹೋಗುತ್ತಿರುವವನಾರು? ಸಕಲಪ್ರಾಣಿಗಳಲ್ಲಿಯೂ ದಯಾಪರನಾಗಿರುವವನು ಯಾರು? ಚತುರ್ದಶವಿದ್ಯೆಗಳಲ್ಲಿಯೂ ಪಾರಂಗತನಾದ ವಿದ್ವಾಂಸನು ಯಾರು? ಸರ್ವಕಾರ್ಯಧುರಂಧರನು ಯಾವನಾದರೂ ಇರುವನೇ? ಸರ್ವರಿಗೂ ಸರ್ವಕಾಲದಲ್ಲಿಯೂ ಮೋಹನರೂಪನಾಗಿರುವ ಪುರುಷನಿರುವನೇ?[*] ಮಹರ್ಷಿಗಳೇ! ಅತ್ಯಂತ ಧೈರ್ಯವಂತನು ಯಾರಿದ್ದಾನೆ? ಕೋಪವನ್ನು ಜಯಿಸಿರುವವನು ಅಥವಾ ವಶಪಡಿಸಿಕೊಂಡಿರುವವನು ಯಾರು? ಎಣೆಯಿಲ್ಲದ ಕಾಂತಿಯುಳ್ಳ ಮನುಷ್ಯನು ಯಾರಿದ್ದಾನೆ? ಗುಣಗಳಲ್ಲಿ ದೋಷಗಳನ್ನು ಎಣಿಸದೇ ಇರುವ ಅಸೂಯಾರಹಿತನು ಯಾರಿದ್ದಾನೆ? ಯಾವನು ಕುಪಿತನಾಗಿ ಯುದ್ಧಕ್ಕೆ ನಿಂತರೆ ದೇವತೆಗಳೇ ಆದಿಯಾಗಿ ಸಕಲರೂ ಭೀತರಾಗುವರು? ಇಂತಹ ಸಕಲಗುಣಪರಿಪೂರ್ಣನಾದವನು ಈಗಿನ ಕಾಲದಲ್ಲಿ ಯಾರಾದರೂ ಇದ್ದಾರೆಯೇ? ಇದ್ದರೆ ಅವನಾರು? ಇದನ್ನು ಕೇಳಬಯಸುತ್ತೇನೆ ; ಇದನ್ನು

ಹೊಂದದೆ ಮತ್ತೊಬ್ಬರನ್ನೂ ವಿಕಾರಹೊಂದದಂತೆ ಮಾಡಬಲ್ಲ ಸಮರ್ಥನು ವೀರ್ಯವಂತನೆನಿಸಿಕೊಳ್ಳುತ್ತಾನೆ.

ಯತೋಽಭ್ಯುದಯನಿಃಶ್ರೇಯಸಸಿದ್ಧಿಃಸಧರ್ಮಃ–ಅಭ್ಯುದಯ ಮತ್ತು ಶ್ರೇಯಸ್ಸುಗಳನ್ನು ಸಾಧಿಸಿಕೊಡುವುದೇ ಧರ್ಮ. ಅಲೌಕಿಕಶ್ರೇಯಸ್ಸಿನ ಸಾಧನೆಯೇ ಧರ್ಮ. ಇಂತಹ ಧರ್ಮದಲ್ಲಿ ಸಾಮಾನ್ಯ ಮತ್ತು ವಿಶೇಷರೂಪಗಳನ್ನು ತಿಳಿದವನು ಧರ್ಮಜ್ಞನು.

4 ಇತರರಿಂದಾದ ಉಪಕಾರವು ಸ್ವಲ್ಪವೇ ಆದರೂ ಅದನ್ನೇ ಬಹುವಾಗಿ ತಿಳಿಯುವವನು ಕೃತಜ್ಞನು.

[5] ನಿಜವನ್ನು ಹೇಳಿದರೆ ತನಗೆ ತೊಂದರೆಯುಂಟಾಗುವುದೆಂದು ತಿಳಿದೂ ಸುಳ್ಳು ಹೇಳದೇ ನಿಜವನ್ನು ಹೇಳುವವನೇ ಸತ್ಯಭಾಷಿಯು.

[6] ಎಂತಹ ವಿಪತ್ತು ಒದಗಿದರೂ ಸಂಕಲ್ಪವನ್ನು ಪರಿತ್ಯಜಿಸದೇ ಕಾರ್ಯವನ್ನು ಸಾಧಿಸುವ ಸತ್ಯಸಂಕಲ್ಪನು ದೃಢವ್ರತನೆನಿಸುತ್ತಾನೆ.

* ಮನುಷ್ಯನ ಬಾಲ್ಯ-ಯೌವನ-ವಾರ್ಧಕ್ಯಾವಸ್ಥೆಗಳಿಂದಾಗಿ ಮತ್ತು ರೋಗ-ರುಜಿನಗಳ ಕಾರಣದಿಂದಾಗಿ ಇಂದು ಚೆಲುವಾಗಿ ಕಾಣುವವನೊಬ್ಬನು ಕೆಲವು ದಿನಗಳಲ್ಲಿಯೇ ವಿಕಾರಿಯಾಗಿ ಕಾಣಬಹುದು ಮತ್ತು ಕೆಲವರಿಗೆ ಸುಂದರನಾಗಿ ಕಾಣು

ಕೇಳಲು ನನಗೆ ತುಂಬಾ ಕುತೂಹಲವುಂಟಾಗಿದೆ. ಜ್ಞಾನದ ಪಾರವನ್ನು ಹೊಂದಿರುವ ಮಹರ್ಷಿಗಳಾದ ನೀವು ಇಂತಹ ಸಕಲಗುಣಪರಿಪೂರ್ಣನಾದ ಮಾನವನು ಎಲ್ಲಿರುವನೆಂಬ ವಿಷಯವನ್ನು ತಿಳಿಸಲು ಸಮರ್ಥರಾಗಿರುವಿರಿ. ದಯೆಯಿಟ್ಟು ಅವನಾರೆಂಬುದನ್ನು ಹೇಳಿರಿ."*

ವಾಲ್ಮೀಕಿಗಳ ಆ ಪ್ರಶ್ನೆಗಳನ್ನು ಕೇಳಿ ಮೂರು ಲೋಕಗಳಲ್ಲಿಯೂ ನಡೆಯುವ ವಿದ್ಯಮಾನಗಳೆಲ್ಲವನ್ನೂ ಅಂತರ್ದೃಷ್ಟಿಯಿಂದ ತಿಳಿಯಲು ಸಮರ್ಥರಾದ ನಾರದರಿಗೆ ಬಹಳ ಸಂತೋಷವಾಯಿತು. ತಮಗಾದ ಆನಂದವನ್ನು ಮುಖಾರವಿಂದದಿಂದ ಹೊರಸೂಸುತ್ತಾ–'ಶ್ರೂಯತಾಂ–ಕೇಳಿರಿ, ಹೇಳುತ್ತೇನೆ'–ಎಂದು ವಾಲ್ಮೀಕಿಗಳನ್ನು ಸಂಬೋಧಿಸಿ ನಾರದರು ಹೇಳತೊಡಗಿದರು :

"ಮಹರ್ಷಿಗಳೇ! ತಮ್ಮಿಂದ ಹೇಳಲ್ಪಟ್ಟ ಗುಣಗಳು ಬಹಳವಾಗಿವೆ. ಅವು ದುರ್ಲಭವೂ ಆಗಿವೆ. ಆದರೂ ತಾವು ಹೇಳಿರುವ ಸಕಲಗುಣಗಳಿಂದಲೂ ಪರಿಪೂರ್ಣನಾದ ಒಬ್ಬನೇ ಒಬ್ಬ ನರಪುಂಗವನ ವಿಷಯವನ್ನು ಜ್ಞಾನದಿಂದ ತಿಳಿದು ಹೇಳುವೆನು ; ಕೇಳಿರಿ :

ವವನು ಮತ್ತೆ ಕೆಲವರಿಗೆ ಸಾಧಾರಣರೂಪನಾಗಿಯೂ ಕಾಣಬಹುದು. ಆದರೆ ರಾಮನು ಯಾವಾಗಲೂ ಎಲ್ಲರಿಗೂ ಪ್ರಿಯವಾದ ದರ್ಶನವುಳ್ಳವನಾಗಿದ್ದನು.

* ವಾಲ್ಮೀಕಿಮಹರ್ಷಿಗಳು–"ಕೋ ನ್ವಸ್ಮಿನ್ ಸಾಂಪ್ರತಂ ಲೋಕೇ"–ಎಂದು ಹೇಳಿರುತ್ತಾರೆ. ಇದರಿಂದಾಗಿ ಶ್ರೀರಾಮಚಂದ್ರನ ಜೀವಿತಕಾಲದಲ್ಲಿಯೇ ಶ್ರೀಮದ್ವಾಲ್ಮೀಕಿ ರಾಮಾಯಣವು ರಚಿತವಾಯಿತೆಂದು ಹೇಳಬಹುದಾಗಿದೆ. ಮುಂದೆ ವಾಲ್ಮೀಕಿಗಳಿಂದ ರಾಮಾಯಣದ ಉಪದೇಶವನ್ನು ಲವ-ಕುಶರು ಪಡೆದು ಶ್ರೀರಾಮನ ಆಸ್ಥಾನದಲ್ಲಿಯೇ ಹಾಡುತ್ತಾರಾದ್ದರಿಂದ ಈ ವಿಷಯದಲ್ಲಿ ಸಂಶಯಪಡುವ ಕಾರಣವೂ ಇಲ್ಲ. ಮಹರ್ಷಿಗಳಾದ ವಾಲ್ಮೀಕಿಗಳಿಗೆ ಇಂತಹ ಸಕಲಗುಣಪರಿಪೂರ್ಣನು ಶ್ರೀರಾಮಚಂದ್ರ ನೊಬ್ಬನೇ ಎಂಬ ವಿಷಯವು ತಿಳಿಯದೇ ಇರಲಿಲ್ಲ. ಅವರಿಗೆ ರಾಮನ ಗುಣಗಳು ತಿಳಿದಿದ್ದುದರಿಂದಲೇ ಅವನಲ್ಲಿದ್ದ ಗುಣಗಳೆಲ್ಲವನ್ನೂ ವಿವರಿಸಿ ಅವನ ಹೆಸರನ್ನು ಮಾತ್ರ ಹೇಳದೇ ಅವನಾರೆಂದು ನಾರದರನ್ನು ಕೇಳಿದರು. ಮನಸ್ಸಿನಲ್ಲಿ ಇಂತಹವನೇ–ಎಂಬ ನಿಶ್ಚಯವಿದ್ದ ನಾರದರೂ ಅವನನ್ನೇ ಕುರಿತು ಹೇಳಿದರೆ ಹೆಚ್ಚು ಸಂತೋಷವಾಗುವುದು ಸಹಜವಲ್ಲವೇ? "ಕಸ್ಯ ಬಿಭ್ಯತಿ ದೇವಾಶ್ಚ ಜಾತರೋಷಸ್ಯ ಸಂಯುಗೇ" ಎಂದು ಹೇಳಿರುವುದರಿಂದ ವಾಲ್ಮೀಕಿಗಳು ಶ್ರೀರಾಮಚಂದ್ರನನ್ನೇ ಮನದಲ್ಲಿಟ್ಟುಕೊಂಡು ಈ ಪ್ರಶ್ನೆಗಳನ್ನು ಕೇಳಿದರೆಂದೂ ಹೇಳಬಹುದಾಗಿದೆ.

ವೈವಸ್ವತಮನುವಿಗೆ ಜ್ಯೇಷ್ಠಪುತ್ರನಾದ ಇಕ್ಷ್ವಾಕುವಿನ ವಂಶದಲ್ಲಿ ಹುಟ್ಟಿದ–'ರಾಮ' 'ರಾಮ' ಎಂದು ಜನಗಳಿಂದ ಕರೆಯಲ್ಪಡುವ ನರ ಪುಂಗವನು–ನೀವು ಹೇಳಿದ ಸಕಲಲಕ್ಷಣಗಳಿಂದಲೂ ಪರಿಪೂರ್ಣನಾಗಿರು ವನು. ಅವನ ಕಲ್ಯಾಣಗುಣಗಳನ್ನು ನಾನೂ ವಿವರಿಸಿ ಹೇಳುವೆನು ; ಕೇಳಿರಿ. ರಾಮನು ವಿಕಾರರಹಿತವಾದ ಆತ್ಮವುಳ್ಳವನು. ಪ್ರಪಂಚವೆಲ್ಲವನ್ನೂ ತನ್ನ ವಶದಲ್ಲಿಟ್ಟುಕೊಂಡಿರುವವನು. ಜಿತೇಂದ್ರಿಯನು ಮತ್ತು ಸರ್ವಜ್ಞನು. ನೀತಿಶಾಸ್ತ್ರವಿಶಾರದನು. ಸರ್ವವೇದಪ್ರವರ್ತಕನು. ಅಷ್ಟೈಶ್ವರ್ಯಸಂಪನ್ನನು. ಶತ್ರುವಿನಾಶಕನು. ವಾಲ್ಮೀಕಿಗಳೇ! ಇವಿಷ್ಟೂ ಅವನ ಕಲ್ಯಾಣಗುಣ ಗಳಾದುವು. ಮಹಾಪುರುಷನಾದ ಆ ರಾಮನ ಶರೀರಲಕ್ಷಣಗಳನ್ನೂ ವಿವರಿಸಿ ಹೇಳುವೆನು ; ಕೇಳಿರಿ. ರಾಮನು ಎತ್ತರವಾದ ಹೆಗಲಿನಿಂದ ಕೂಡಿರುವನು. ಅವನ ಬಾಹುಗಳು ದುಂಡು-ದುಂಡಾಗಿವೆ. ಕುತ್ತಿಗೆಯು ಶಂಖದಂತಿದ್ದು ತ್ರಿವಳಿಗಳಿಂದ ಕೂಡಿರುವುದು. ಕಪೋಲಗಳ ಮೇಲ್ಭಾಗವು ಪುಷ್ಟವಾಗಿದೆ. ಅವನಿಗೆ ವಿಶಾಲವಾದ, ಕಠಿಣವಾದ ಮತ್ತು ಉಬ್ಬಿದ ಎದೆಯಿರುವುದು. ಅವನು ಮಹಾಧನುಸ್ಸನ್ನು ಧರಿಸಿರುತ್ತಾನೆ. ಶ್ರೀರಾಮನ ಹೆಗಲುಗಳ ಸಂಧಿಪ್ರದೇಶವು ಗೂಢವಾಗಿದೆ. (ತುಂಬಿಕೊಂಡಿರುವುದರಿಂದ ಸಂಧಿಪ್ರದೇಶದ ಮೂಳೆಗಳು ಕಾಣುವುದಿಲ್ಲ.) ಅವನು ಕಾಮ-ಕ್ರೋಧ-ಲೋಭ-ಮೋಹ-ಮದ-ಮಾತ್ಸರ್ಯಗಳೆಂಬ ಅರಿಷಡ್ವರ್ಗವನ್ನು ದಮನಮಾಡಿರುವನು. ಅವನ ಬಾಹುಗಳು ಅವನ ಮಂಡಿಯವರೆಗೂ ಪ್ರಸರಿಸಿದ್ದು ನೀಳವಾಗಿರುವುವು. ಅವನ ತಲೆಯು ವೃತ್ತಾಕಾರವಾಗಿದ್ದು ಛತ್ರಿಯ ರೂಪದಲ್ಲಿದೆ. ಹಣೆಯು ಅರ್ಧಚಂದ್ರಾಕಾರದಲ್ಲಿದ್ದು ಉನ್ನತವಾಗಿದೆ. ನಡಿಗೆಯು ಗಜಗಮನದಂತಿರುವುದು. ರಾಮನು ತೀರ ಎತ್ತರದ ಮನುಷ್ಯನೂ ಅಲ್ಲ. ಕುಳ್ಳ ಮನುಷ್ಯನೂ ಅಲ್ಲ. (ಲಕ್ಷಣಶಾಸ್ತ್ರದ ಪ್ರಕಾರ ತೊಂಬತ್ತಾರು ಅಂಗುಲ ಎತ್ತರವಿದ್ದಾನೆ.) ಅವನ ಶರೀರದ ಅಂಗಾಂಗಗಳು ಯುಕ್ತಪ್ರಮಾಣದಲ್ಲಿವೆ. ಅವನು ಶ್ಯಾಮಲವರ್ಣನು. ಮಹಾತೇಜಸ್ವಿಯು. ಅವನಿಗೆ ಮಾಂಸಲವಾದ ಉಬ್ಬಿದ ವಕ್ಷಸ್ಥಳ ವಿರುವುದು. ಆತನು ಪದ್ಮಪತ್ರದಂತೆ ವಿಶಾಲವಾದ ಕಣ್ಣುಗಳುಳ್ಳವನು. ಯಾವಾಗಲೂ ಅನುಪಮವಾದ ದೇಹಕಾಂತಿಯಿಂದ ಕೂಡಿರುವನು. ಅವನ

ಶರೀರದಲ್ಲಿ ಸಕಲವಿಧವಾದ ಶುಭಸೂಚಕಚಿಹ್ನೆಗಳೂ ಇವೆ. ಅವನು ಶರಣಾಗತರಕ್ಷಣಾಧರ್ಮವನ್ನು ಪೂರ್ಣವಾಗಿ ತಿಳಿದಿರುವನು. ಸತ್ಯಪ್ರತಿಜ್ಞನು. ಯಾವಾಗಲೂ ಪ್ರಜೆಗಳ ಹಿತದಲ್ಲಿಯೇ ನಿರತನಾಗಿರುವನು. ಆಶ್ರಿತರಕ್ಷಕನೆಂಬ ಕೀರ್ತಿಯನ್ನು ಪಡೆದಿರುವನು. ಸರ್ವವಿಷಯಜ್ಞಾನಸಂಪನ್ನನು. ನಿತ್ಯಶುದ್ಧನು. ಗುರು-ಹಿರಿಯರಿಗೆ ಯಾವಾಗಲೂ ವಿಧೇಯನು. ಯಾವಾಗಲೂ ಪ್ರಜೆಗಳ ಮತ್ತು ಆಶ್ರಿತರ ಹಿತರಕ್ಷಣೆಯಲ್ಲಿಯೇ ಮಗ್ನನಾಗಿರುವನು. ಸಾಕ್ಷಾತ್ ಪ್ರಜಾಪತಿಗೆ ಅಥವಾ ಬ್ರಹ್ಮನಿಗೆ ಸಮಾನನು. ಪೌರುಷಶ್ರೀಯಿಂದ ಪ್ರಕಾಶಿಸುತ್ತಿರುವನು. ಸಕಲಪ್ರಾಣಿಗಳ ಮತ್ತು ಪ್ರಜೆಗಳ ಪೋಷಕನು. ತಂದೆಯು ಮಕ್ಕಳನ್ನು ಪೋಷಿಸುವಂತೆಯೇ ರಾಮನು ಪ್ರಜೆಗಳನ್ನು ಪೋಷಿಸುತ್ತಾನೆ. ಅವನು ಶತ್ರುಗಳ ವಿನಾಶಕನು. ಪ್ರಪಂಚದಲ್ಲಿ ರಾಜರು ಸಾಮಾನ್ಯವಾಗಿ ಪ್ರಜೆಗಳ ರಕ್ಷಕರಾಗಿರುತ್ತಾರೆ. ಆದರೆ ಶ್ರೀರಾಮನು ಸಕಲ ಪ್ರಾಣಿಗಳ ಸಂರಕ್ಷಕನು ಕೂಡ ಆಗಿರುತ್ತಾನೆ. ವರ್ಣಾಶ್ರಮಧರ್ಮೋಕ್ತಿಗಳ ಪ್ರಕಾರ ಕ್ಷತ್ರಿಯನಿಗೆ ಹೇಳಲ್ಪಟ್ಟ ಧರ್ಮಗಳನ್ನು ತಾನು ಆಚರಿಸುವುದಲ್ಲದೇ–ತನ್ನ ರಾಜ್ಯದಲ್ಲಿಯೂ ವರ್ಣಾಶ್ರಮಗಳನ್ನು ವ್ಯವಸ್ಥೆಗೊಳಿಸಿ ಧರ್ಮವನ್ನು ರಕ್ಷಣೆಮಾಡುತ್ತಿರುವನು. ಶರಣಾಗತಪಾಲನವೆಂಬ ಕ್ಷತ್ರಿಯ ಧರ್ಮವನ್ನು ಬಹಳ ಜಾಗರೂಕತೆಯಿಂದ ರಕ್ಷಿಸುತ್ತಿದ್ದಾನೆ. ಪರರ ರಕ್ಷಣೆ ಮತ್ತು ವರ್ಣಾಶ್ರಮಧರ್ಮಗಳ ವ್ಯವಸ್ಥೆಯಲ್ಲಿಯೇ ನಿರತನಾಗಿರುವ ರಾಮನು ತನ್ನ ಬಂಧು-ಬಾಂಧವರ ಹಿತರಕ್ಷಣೆಯಲ್ಲಿಯೂ ಅಲಕ್ಷ್ಯ ತೋರದೇ ಅವರನ್ನೂ ರಕ್ಷಿಸುತ್ತಿದ್ದಾನೆ. ಅವನು ವೇದಗಳ ಮತ್ತು ವೇದಾಂಗಗಳ ರಹಸ್ಯವನ್ನು ಬಲ್ಲವನು.* ಕ್ಷತ್ರಿಯನಿಗೆ ಉಕ್ತವಾದ ಧನುರ್ವೇದದಲ್ಲಿ ನಿಷ್ಣಾತನಾಗಿರುತ್ತಾನೆ. ಸರ್ವಶಾಸ್ತ್ರಗಳ ತತ್ತ್ವವನ್ನೂ ತಿಳಿದಿರುವನು. ಅವನಿಗೆ ವಿಸ್ಮರಣೆಯೆಂಬುದೇ ಇಲ್ಲ. ಸರ್ವಲೋಕಗಳಿಗೂ ಅಥವಾ ಸರ್ವ

---

* ವೇದಗಳು : ಋಗ್ಯಜುಸ್ಸಾಮಾಥರ್ವಣಗಳು. ಆಯುರ್ವೇದ, ಧನುರ್ವೇದ, ಗಾಂಧರ್ವವೇದ ಮತ್ತು ಶಸ್ತ್ರಶಾಸ್ತ್ರ ಇವು ನಾಲ್ಕು ವೇದಗಳ ಉಪವೇದಗಳು. ವೇದಾಂಗಗಳು : ಶಿಕ್ಷಾ ವ್ಯಾಕರಣಂ ಛನ್ದೋ ನಿರುಕ್ತಂ ಜ್ಯೋತಿಷಂ ತಥಾ । ಕಲ್ಪಶ್ಚೇತಿ ಷಡಂಗಾನಿ ವೇದಸ್ಯಾಹುರ್ಮನೀಷಿಣಃ ॥ ಶಿಕ್ಷೆ, ವ್ಯಾಕರಣ, ಛಂದಸ್ಸು, ನಿರುಕ್ತ, ಜ್ಯೋತಿಷ ಮತ್ತು ಕಲ್ಪ–ಈ ಆರು ವೇದಾಂಗಗಳು.

ಪ್ರಜೆಗಳಿಗೂ ರಾಮನು ಪ್ರಿಯನಾಗಿದ್ದಾನೆ. ಅಪಕಾರಿಗಳಿಗೂ ಉಪಕಾರ ಶೀಲನು. ವ್ಯಸನಪರಂಪರೆಗಳೊದಗಿದರೂ ಉದ್ವೇಗವಿಲ್ಲದ ಅಂತಃಕರಣ ವುಳ್ಳವನು. ಆಯಾಕಾಲದಲ್ಲಿ ಮಾಡಬೇಕಾದ ವೈದಿಕ-ಲೌಕಿಕಕರ್ತವ್ಯನಿರ್ವ ಹಣೆಯಲ್ಲಿ ಕುಶಲನು. ಸಮುದ್ರರಾಜನಲ್ಲಿ ನದಿಗಳು ಹೇಗೆ ನಿರಂತರವೂ ಸೇರುತ್ತಿರುತ್ತವೆಯೋ—ಅದೇ ರೀತಿಯಲ್ಲಿ ಶ್ರೀರಾಮನಲ್ಲಿಗೆ ಸತ್ಪುರುಷರು ಹೋಗುತ್ತಿರುತ್ತಾರೆ. ರಾಮನು ಸಕಲಲೋಕವಂದ್ಯನು. ತನ್ನನ್ನು ಪ್ರೀತಿಸುವವರಲ್ಲಿಯೂ ಮತ್ತು ತನ್ನ ವಿಷಯದಲ್ಲಿ ಔದಾಸೀನ್ಯದಿಂದ ಇರುವವರಲ್ಲಿಯೂ ಒಂದೇ ರೀತಿಯಾದ ಪ್ರೀತಿ-ವಿಶ್ವಾಸಗಳುಳ್ಳವನು. ರಾಮನು ಪ್ರಿಯದರ್ಶನನು. ವಾಲ್ಮೀಕಿಗಳೇ! ಅವನನ್ನು ನೋಡಿದರೆ ಮಹಾನಂದವುಂಟಾಗುತ್ತದೆ. ಪದೇ-ಪದೇ ನೋಡಬೇಕೆನ್ನಿಸುತ್ತದೆ. ಮಹರ್ಷಿಗಳೇ! ಒಂದೇ ಮಾತಿನಲ್ಲಿ ಹೇಳುವುದಾದರೆ : ಕೌಸಲ್ಯಾ ದೇವಿಗೆ ಬಾರಿ-ಬಾರಿಗೂ ಅಮಿತಾನಂದವನ್ನುಂಟುಮಾಡುವ ಶ್ರೀರಾಮನು ಸಕಲಕಲ್ಯಾಣಗುಣಪರಿಪೂರ್ಣನು. ಗಾಂಭೀರ್ಯದಲ್ಲಿ ಸಮುದ್ರಕ್ಕೆ ಸಮಾನನು.* ಧೈರ್ಯದಲ್ಲಿ ಹಿಮವತ್ಪರ್ವತಕ್ಕೆ ಸಮಾನನು. (ಕಷ್ಟವೊದಗಿ ದಾಗ ಶೋಕಿಸದಿರುವುದೇ ಧೈರ್ಯ.) ಪರ್ವತಗಳ ಮೇಲೆ ಅನುಸ್ಯೂತ ವಾಗಿ ಮಳೆಗರೆದರೂ ಅವು ದುಃಖಿಸುವುದಿಲ್ಲ. ಅದೇ ರೀತಿಯಲ್ಲಿ ರಾಮನೂ ದುಃಖಬಂದಾಗ ಶೋಕಿಸದೇ ಪರ್ವತದಂತೆ ಸ್ಥೈರ್ಯದಿಂದಿರುತ್ತಾನೆ. ಪರಾಕ್ರಮದಲ್ಲಿ ವಿಷ್ಣುವಿಗೆ ಸಮಾನನು. ಪೂರ್ಣಚಂದ್ರನನ್ನು ನೋಡು ತ್ತಿದ್ದಂತೆಲ್ಲಾ ಹೇಗೆ ಇನ್ನೂ ನೋಡುತ್ತಿರಬೇಕೆಂಬ ಆಕಾಂಕ್ಷೆಯು ಹುಟ್ಟು ವುದೋ—ಹಾಗೆಯೇ ರಾಮನನ್ನು ಅನುದಿನವೂ ಸಂದರ್ಶಿಸುತ್ತಿದ್ದರೂ ಪುನಃ ಪುನಃ ಸಂದರ್ಶಿಸಬೇಕೆಂಬ ಆಕಾಂಕ್ಷೆಯುಂಟಾಗುತ್ತದೆ. ಕೋಪಬಂದಾಗ ಕಾಲಾಗ್ನಿಯಂತೆ ಪ್ರಪಂಚವನ್ನೇ ದಹಿಸಿಬಿಡುವ ಉಜ್ಜ್ವಲತೇಜಸ್ಸಿನಿಂದ ಶ್ರೀರಾಮನು ಕೂಡಿರುತ್ತಾನೆ. ಅವನು ಪೃಥ್ವಿಯಂತೆ ಕ್ಷಮಾಗುಣಪರಿ ಪೂರ್ಣನು. ತ್ಯಾಗದಲ್ಲಿ ಕುಬೇರನಿಗೆ ಸಮಾನನು. ಸತ್ಯಪರಿಪಾಲನೆಯಲ್ಲಿ

---

* ಗಾಂಭೀರ್ಯ : ಭಯ, ಶೋಕ, ಕೋಪ, ಹರ್ಷ ಮುಂತಾದುವುಗಳಿಂದ ವಿಕಾರ ವನ್ನು ಹೊಂದದಿರುವಿಕೆ. ಯಸ್ಯೇಂಗಿತೈಸ್ತಥಾಕಾರಾತ್ ಶೋಕಹರ್ಷಭಯಾದಯಃ। ಭಾವಸ್ಥಾ ನೋಪಲಭ್ಯನ್ತೇ ತದ್ಗಾಮ್ಭೀರ್ಯಮುದಾಹೃತಮ್ ॥

ಬೇರೊಬ್ಬ ಧರ್ಮದೇವತೆಯೇ ಭೂಮಿಯಲ್ಲಿ ಅವತರಿಸಿರುವನೋ ಎಂಬಂತೆ ಇರುವನು. ಇಷ್ಟು ಪ್ರಸಿದ್ಧನಾದ, ಸಕಲಕಲ್ಯಾಣಗುಣಪರಿಪೂರ್ಣನಾದ, ಪ್ರಜೆಗಳ ಪ್ರೀತಿಗೆ ಪಾತ್ರನಾದ, ಪ್ರಜೆಗಳ ಹಿತಚಿಂತನೆಯಲ್ಲಿಯೇ ಸರ್ವದಾ ಆಸಕ್ತನಾದ ಶ್ರೀರಾಮನಿಗೆ–ಪ್ರಪಂಚಕ್ಕೆ ಅಥವಾ ಪ್ರಜೆಗಳಿಗೆ ಪ್ರಿಯವನ್ನುಂಟುಮಾಡುವ ಅಭಿಲಾಷೆಯಿಂದ ದಶರಥಮಹಾರಾಜನು ಯೌವರಾಜ್ಯಪಟ್ಟಾಭಿಷೇಕಮಾಡಲು ಇಚ್ಛಿಸಿದನು. ಪಟ್ಟಾಭಿಷೇಕಕ್ಕೆ ಬೇಕಾಗುವ ಉಪಕರಣಗಳೆಲ್ಲವೂ ಸಿದ್ಧವಾಗುತ್ತಿರುವುದನ್ನು ಮಂಥರೆಯ ಮೂಲಕ ತಿಳಿದ ದಶರಥನ ಕಿರಿಯ ಹೆಂಡತಿಯಾದ ಕೈಕೇಯಿಯು ಹಿಂದೆ ತನಗೆ ವಾಗ್ದಾನ ಮಾಡಿದ್ದ ಎರಡು ವರಗಳನ್ನು ಕೊಡುವಂತೆ ದಶರಥನನ್ನು ಕೇಳಿದಳು.* ರಾಮನ ಯೌವರಾಜ್ಯಾಭಿಷೇಕಕ್ಕೆ ಸರ್ವಸಿದ್ಧತೆಗಳಾಗುತ್ತಿದ್ದಾಗ ಕೈಕೇಯಿಯು ಆ ವರಗಳನ್ನು ಕೇಳಿಕೊಂಡಳು. ರಾಮನ ವನವಾಸ ; ಭರತನಿಗೆ ಪಟ್ಟಾಭಿಷೇಕ–ಇವೇ ಕೈಕೇಯಿಯು ದಶರಥನನ್ನು ಕೇಳಿದ ಎರಡು ವರಗಳು. ಕೈಕೇಯಿಗೆ ಕೊಟ್ಟ ಪ್ರಮಾಣವಚನದ ಕಾರಣದಿಂದ ದಶರಥನು ಧರ್ಮಪಾಶದಿಂದ ಕಟ್ಟಲ್ಪಟ್ಟು ಪ್ರಿಯನಾದ ರಾಮನನ್ನು ಕಾಡಿಗೆ ಕಳುಹಿಸಿದನು. ತಂದೆಯ ಆಜ್ಞಾಪರಿಪಾಲನೆಗಾಗಿಯೂ, ಕೈಕೇಯಿಗೆ ಪ್ರಿಯವನ್ನುಂಟುಮಾಡುವ ಸಲುವಾಗಿಯೂ–ಕೃತಪ್ರತಿಜ್ಞನಾದ, ಸಮರ್ಥನಾದ ರಾಮಚಂದ್ರನು ದಂಡಕಾರಣ್ಯಕ್ಕೆ ಹೊರಟುಹೋದನು. ರಾಮನಿಗೆ ಅತಿಪ್ರಿಯನೂ, ವಿನಯಸಂಪನ್ನನೂ, ಸುಮಿತ್ರಾದೇವಿಗೆ ಆನಂದದಾಯಕನೂ ಆದ ಲಕ್ಷ್ಮಣನು ಪ್ರಿಯತಮನಾದ ರಾಮನ ವಿಷಯದಲ್ಲಿ ಶ್ರೇಷ್ಠವಾದ ಸೋದರಭಾವವನ್ನು ವ್ಯಕ್ತಪಡಿಸುತ್ತಾ ತಂದೆಯ ಆಜ್ಞಾಪರಿಪಾಲನೆಗಾಗಿ ಅರಣ್ಯಕ್ಕೆ ಹೊರಟ ರಾಮನನ್ನು ಅನುಸರಿಸಿ ನಡೆದನು. ಅಭಿರಾಮನಾದ ರಾಮನಿಗೂ

---

* ಹಿಂದೆ ಕೈಕೇಯಿಯ ಸಮೇತನಾಗಿ ದಶರಥನು ಇಂದ್ರನಿಗೆ ಸಹಾಯಮಾಡುವ ಸಲುವಾಗಿ ಶಂಬರಾಸುರನೊಡನೆ ಯುದ್ಧಮಾಡಲು ಹೋಗಿದ್ದಾಗ ಕೈಕೇಯಿಯು ರಥದ ಸಾರಥ್ಯವನ್ನು ವಹಿಸಿ, ಬಹಳ ವೈಚಕ್ಷಣ್ಯದಿಂದ ರಥವನ್ನು ನಡೆಸಿ ಪ್ರಾಣಾಪಾಯದಿಂದ ದಶರಥನನ್ನು ಪಾರುಮಾಡಿದ್ದಳು. ಆದರಿಂದ ಸುಪ್ರೀತನಾದ ದಶರಥನು ಅವಳಿಗೆ ಎರಡು ವರಗಳನ್ನು ಕೊಟ್ಟಿದ್ದನು. ಆದರೆ ಕೈಕೇಯಿಯು ಆ ಸಮಯದಲ್ಲಿ ತನಗೆ ಯಾವ ವರವು ಬೇಕೆಂಬುದನ್ನು ಹೇಳಿರಲಿಲ್ಲ. ಸಮಯ ಬಂದಾಗ ಕೇಳುವೆನೆಂದು ಹೇಳಿ ಆ ಎರಡು ವರಗಳನ್ನೇ ಈಗ ಕೇಳಿದಳು.

ಅಭಿರಾಮೆಯಾಗಿ ರಾಮನ ಹೃದಯದಲ್ಲಿ ನಿತ್ಯವೂ ಧರಿಸಲ್ಪಡುತ್ತಾ, ರಾಮನಿಗೆ ಪ್ರಾಣಸಮಳಾದ ಮತ್ತು ಹಿತಕರಳಾದ, ಜನಕಕುಲೋತ್ಪನ್ನಳಾದ ಮತ್ತು ದೇವರು ಮಾಯೆಯಿಂದ ನಿರ್ಮಾಣಮಾಡಿದ ಮೂರ್ತಿಯೋ ಎಂಬಂತೆ ಲಾವಣ್ಯಸಂಪತ್ತುಗಳಿಂದ ಕೂಡಿದ್ದ, ಸರ್ವಶುಭಲಕ್ಷಣಗಳಿಂದ ಯುಕ್ತಳಾಗಿದ್ದ, ಸ್ತ್ರೀಯರಲ್ಲಿ ಶ್ರೇಷ್ಠಳಾದ, ದಶರಥನ ಸೊಸೆಯಾದ ಸೀತೆಯು–ಚಂದ್ರನನ್ನನುಸರಿಸಿ ರೋಹಿಣಿಯು ಹೋಗುವ ರೀತಿಯಲ್ಲಿ–ರಾಮನನ್ನನುಸರಿಸಿ ಕಾಡಿಗೆ ಹೋದಳು.* ಸೀತಾ-ಲಕ್ಷ್ಮಣಸಮೇತನಾಗಿ ಹೊರಟ ರಾಮಚಂದ್ರನನ್ನು ಪಟ್ಟಣಿಗರು ದೂರದ ತಮಸಾನದಿಯವರೆಗೂ ಮತ್ತು ತಂದೆಯಾದ ದಶರಥನು ಸ್ವಲ್ಪದೂರದವರೆಗೂ ಅನುಸರಿಸಿ ಹೋದರು. ಗಂಗಾತೀರದಲ್ಲಿದ್ದ ಶೃಂಗಬೇರಪುರಕ್ಕೆ ಹೋದನಂತರ ಶ್ರೀರಾಮಚಂದ್ರನು ಸೂತನನ್ನೂ ಅಯೋಧ್ಯೆಗೆ ಕಳುಹಿಸಿದನು. ಗಂಗಾ ತೀರದಲ್ಲಿ ಧರ್ಮಾತ್ಮನಾದ ಶ್ರೀರಾಮನು ತನಗೆ ಪ್ರಿಯನಾದ, ನಿಷಾದರಿಗೆ ಒಡೆಯನಾದ ಗುಹನೊಡನೆ ಸೇರಿದನು. ಗುಹನು ಸಿದ್ಧಪಡಿಸಿದ ದೋಣಿ ಯಲ್ಲಿ ಸೀತಾ-ಲಕ್ಷ್ಮಣಸಮೇತನಾಗಿ ಕುಳಿತು ಗಂಗಾನದಿಯನ್ನು ದಾಟಿ ದನು. ಅನಂತರ ಗುಹನಿಂದ ಬೀಳ್ಕೊಡಲ್ಪಟ್ಟು ಅರಣ್ಯದಲ್ಲಿ ಮುಂದೆ- ಮುಂದೆ ನಡೆದು, ಒಂದು ವನದಿಂದ ಮತ್ತೊಂದು ವನಕ್ಕೆ ಹೋಗುತ್ತಾ, ಜಲಸಮೃದ್ಧವಾಗಿದ್ದ ಅನೇಕ ನದಿಗಳನ್ನು ದಾಟಿ ಭರದ್ವಾಜರ ನಿರ್ದೇಶದಂತೆ ಸೀತಾ-ರಾಮ-ಲಕ್ಷ್ಮಣರು ಚಿತ್ರಕೂಟಪರ್ವತವನ್ನು ಸೇರಿದರು. ಮಹರ್ಷಿಗಳಾದ ಭರದ್ವಾಜರ ನಿರ್ದೇಶದಂತೆಯೇ ರಮ್ಯವಾದ ಆಶ್ರಮವು ಲಕ್ಷ್ಮಣನಿಂದ ನಿರ್ಮಿಸಲ್ಪಟ್ಟಿತು. ಆಶ್ರಮದ ಸುತ್ತಲೂ ಇದ್ದ ವನಪ್ರದೇಶ ದಲ್ಲಿ ಸಂಚರಿಸಿ, ನಯನಮನೋಹರವಾದ ಪ್ರಕೃತಿಯ ಸೌಂದರ್ಯಾತಿಶಯ ವನ್ನು ನೋಡಿ ಆನಂದಿಸುತ್ತಾ, ದೇವಗಂಧರ್ವರೋಪಾದಿಯಲ್ಲಿ ಸೀತಾ-ರಾಮ-ಲಕ್ಷ್ಮಣರು ಸುಖದಿಂದಿದ್ದರು. ಶ್ರೀರಾಮಚಂದ್ರನು ಸೀತಾ-ಲಕ್ಷ್ಮಣರ ಸಮೇತನಾಗಿ ಚಿತ್ರಕೂಟಪರ್ವತಕ್ಕೆ ಹೋದನಂತರ ದಶರಥನು ಪ್ರೀತಿಯ ಪುತ್ರನ ಅಗಲಿಕೆಯ ಶೋಕದಿಂದ ಪೀಡಿತನಾಗಿ ಮಗನನ್ನು ಬಾರಿ-ಬಾರಿಗೂ

---

* ರೋಹಿಣೀನಕ್ಷತ್ರವು ಯಾವಾಗಲೂ ಚಂದ್ರನ ಸಮೀಪದಲ್ಲಿಯೇ ಇರುವುದು.

ನೆನೆದು ದುಃಖಪಡುತ್ತಾ ಸ್ವರ್ಗವನ್ನೈದಿದನು. ದಶರಥನ ಮರಣಾನಂತರ ದಲ್ಲಿ ವಸಿಷ್ಠಪ್ರಮುಖರಾದ ಬ್ರಾಹ್ಮಣರು ಭರತನನ್ನು ಸಾಮ್ರಾಜ್ಯಾಭಿಷೇಕಕ್ಕೆ ನಿಯೋಜಿಸಿದರು. ಆದರೆ ಭರತನಿಗೆ ರಾಜ್ಯವಾಳಲು ಸಾಮರ್ಥ್ಯವಿದ್ದರೂ ಅವನು ರಾಜ್ಯವನ್ನು ಬಯಸಲಿಲ್ಲ. ವಸಿಷ್ಠಾದಿಗಳಿಂದಲೂ ಮತ್ತು ಚತುರಂಗಬಲದಿಂದಲೂ ಕೂಡಿದವನಾಗಿ, ಶ್ರೀರಾಮಚಂದ್ರನನ್ನೇ ರಾಜ್ಯಭಾರವನ್ನು ವಹಿಸುವಂತೆ ಪ್ರಸನ್ನನನ್ನಾಗಿ ಮಾಡಲು ವೀರನಾದ ಅವನು ಅರಣ್ಯಕ್ಕೆ ಹೊರಟನು. ಸ್ವತಃ ಪ್ರಸನ್ನಹೃದಯನಾದ, ಸತ್ಯಪರಾಕ್ರಮಿಯಾದ ರಾಮನ ಬಳಿಗೆ ಹೋಗಿ, ಅಣ್ಣನನ್ನು ಪೂಜ್ಯತಮನೆಂದು ಪುರಸ್ಕರಿಸಿ ಬದ್ಧಾಂಜಲಿಯಾಗಿ ನಿಂತು ಹೇಳಿದನು :

"ಅಣ್ಣ! ಜ್ಯೇಷ್ಠಪುತ್ರನಿರುವಾಗ ಕನಿಷ್ಠನು ರಾಜ್ಯಸಿಂಹಾಸನಕ್ಕೆ ಅರ್ಹನಲ್ಲ. ಈ ಸನಾತನಧರ್ಮವನ್ನು ಪೂರ್ಣವಾಗಿ ತಿಳಿದಿರುವ ನೀನೇ ಇಂದು ನಮ್ಮ ರಾಜನಾಗಿರುವೆ."

ರಾಮನು ತನ್ನ ಬಳಿಗೆ ಬಂದವರ ಮನಸ್ಸನ್ನು ಹರ್ಷಗೊಳಿಸುವ ಸ್ವಭಾವದವನು. ಉದಾರನು. ತನ್ನ ಬಳಿಗೆ ಯಾಚಕರು ಯಾರಾದರೂ ಬಂದರೆಂದು ತಿಳಿದಮಾತ್ರದಿಂದಲೇ ಪ್ರಸನ್ನಮುಖಾರವಿಂದದಿಂದ ಅವರನ್ನು ಸ್ವಾಗತಿಸಿ-ಸತ್ಕರಿಸಿ ಅವರ ಇಚ್ಛೆಯನ್ನು ಪೂರ್ಣಮಾಡುವ ಸ್ವಭಾವದವನು. ಆದರೂ ತಂದೆಯ ಆದೇಶದ ಕಾರಣದಿಂದಾಗಿ ಮಹಾಬಲಶಾಲಿಯಾದ ಆತನು ರಾಜ್ಯವನ್ನು ಅಪೇಕ್ಷಿಸಲಿಲ್ಲ. (ಭರತನ ಪ್ರಾರ್ಥನೆಗೆ ಒಪ್ಪಲಿಲ್ಲ.) ಭರತನು ಬಹಳ ದುಃಖಿತನಾಗಿ ಪುನಃ ಪುನಃ ಪ್ರಾರ್ಥಿಸಲು ಕಡೆಗೆ ತನ್ನ ಪಾದುಕೆಗಳನ್ನು ಅವನಿಗೆ ಕೊಟ್ಟು–"ಈ ಪಾದುಕೆಗಳನ್ನು ನನ್ನ ಪ್ರತಿನಿಧಿ ಯನ್ನಾಗಿ ಭಾವಿಸಿ ನೀನು ರಾಜ್ಯಭಾರಮಾಡು"–ಎಂದು ಹೇಳಿ, ದುಃಖಿಸು ತ್ತಿದ್ದ ಭರತನನ್ನು ಮತ್ತೆ ಮತ್ತೆ ಸಂತೈಸಿ ಕಳುಹಿಸಿಕೊಟ್ಟನು. ಭರತನ ಇಚ್ಛೆಯು ಪೂರ್ಣವಾಗಲಿಲ್ಲ. ಆದರೂ ಅಣ್ಣನ ನಿರ್ದೇಶದಂತೆ ನಡೆಯಲೇ ಬೇಕು. ಅವನು ಭಾರವಾದ ಹೃದಯದಿಂದ ರಾಮನನ್ನಗಲಿ ಪರಿವಾರ ಸಮೇತನಾಗಿ ಅಯೋಧ್ಯೆಯ ಕಡೆಗೆ ಹಿಂದಿರುಗಿದನು. ಅಯೋಧ್ಯೆಯು ಸಮೀಪವಾಗುತ್ತಲೇ ರಾಮರಹಿತವಾದ ಪಟ್ಟಣಕ್ಕೆ ಪ್ರವೇಶಿಸುವುದೂ

ಭರತನಿಗೆ ಸಹ್ಯವಾಗಲಿಲ್ಲ. ಅಯೋಧ್ಯೆಗೆ ಸ್ವಲ್ಪ ದೂರದಲ್ಲಿದ್ದ ನಂದಿಗ್ರಾಮದಲ್ಲಿಯೇ ನಿವಾಸಮಾಡಿದನು. ರಾಮನ ಪಾದುಕೆಗಳನ್ನು ಸಿಂಹಾಸನದ ಮೇಲಿಟ್ಟು ಪ್ರತಿನಿತ್ಯವೂ ಆ ಪಾದುಕೆಗಳಿಗೆ ನಮಸ್ಕರಿಸಿ ಒಂದೊಂದು ದಿನವನ್ನೂ ರಾಮನ ಆಗಮನವನ್ನು ಕಳಕಳಿಯಿಂದ ಪ್ರತೀಕ್ಷಿಸುತ್ತಾ ರಾಜ್ಯಭಾರವನ್ನು ಮಾಡುತ್ತಿದ್ದನು.

ಭರತನು ಅಯೋಧ್ಯೆಗೆ ಹೊರಟನಂತರದಲ್ಲಿ ಶ್ರೀಮಂತನಾದ, ಸತ್ಯಸಂಧನಾದ, ಜಿತೇಂದ್ರಿಯನಾದ ರಾಮನು ಯೋಚಿಸತೊಡಗಿದನು. "ಈ ಚಿತ್ರಕೂಟದಲ್ಲಿಯೇ ಇದ್ದರೆ ಪಟ್ಟಣಿಗರು ಪುನಃ ನನ್ನನ್ನು ನೋಡುವ ಸಲುವಾಗಿ ಬರಬಹುದು ; ನನ್ನ ಪ್ರತಿಜ್ಞೆಗೆ ಭಂಗತರಲು ಯತ್ನಿಸಲೂಬಹುದು"– ಹೀಗೆಂದು ಯೋಚಿಸಿ, ಪಿತೃವಾಕ್ಯಪರಿಪಾಲನೆಯಲ್ಲಿಯೇ ನಿಷ್ಠನಾದ ರಾಮನು ಸೀತಾ-ಲಕ್ಷ್ಮಣರೊಡನೆ ದಂಡಕಾವನವನ್ನು ಪ್ರವೇಶಿಸಿದನು. ರಾಜೀವಲೋಚನನಾದ ಶ್ರೀರಾಮನು ಮಹಾರಣ್ಯವನ್ನು ಪ್ರವೇಶಿಸಿ ವಿರಾಧನೆಂಬ ರಾಕ್ಷಸನನ್ನು ಸಂಹರಿಸಿ, ಶರಭಂಗರೆಂಬ ಮಹರ್ಷಿಗಳನ್ನು ಸಂದರ್ಶಿಸಿದನು. ಶರಭಂಗರ ಅನುಜ್ಞೆಯನ್ನು ಪಡೆದು ಸುತೀಕ್ಷ್ಣರೆಂಬ ಮಹರ್ಷಿಗಳನ್ನೂ, ಅಗಸ್ತ್ಯರನ್ನೂ ಮತ್ತು ಅಗಸ್ತ್ಯರ ಅನುಜರಾದ ಸುದರ್ಶನರೆಂಬ ಮಹರ್ಷಿಗಳನ್ನೂ ಸೀತಾ-ಲಕ್ಷ್ಮಣರ ಸಮೇತನಾಗಿ ಸಂದರ್ಶಿಸಿ ಸತ್ಕರಿಸಿದನು. ಅಗಸ್ತ್ಯರ ಮಾತಿನಂತೆ ಇಂದ್ರಧನುಸ್ಸನ್ನೂ, ಖಡ್ಗವನ್ನೂ, ಅಕ್ಷಯ ಬಾಣಗಳುಳ್ಳ ಎರಡು ಬತ್ತಳಿಕೆಗಳನ್ನೂ ಪರಮಪ್ರೀತನಾಗಿ ಶ್ರೀರಾಮನು ಸ್ವೀಕರಿಸಿದನು. ಆಗ ಅರಣ್ಯದಲ್ಲಿದ್ದ ಅಸುರ-ರಾಕ್ಷಸರನ್ನು ವಧೆಮಾಡಿ ತಮಗಿರುವ ಉಪದ್ರವವನ್ನು ಹೋಗಲಾಡಿಸಬೇಕೆಂದು ಪ್ರಾರ್ಥಿಸುವ ಸಲುವಾಗಿ ಆ ವನದಲ್ಲಿ ವಾಸಮಾಡುತ್ತಿದ್ದ ಎಲ್ಲ ಋಷಿಗಳೂ ಅರಣ್ಯದಲ್ಲಿ ವನಚರರೊಡನೆ ವಾಸಮಾಡುತ್ತಿದ್ದ ಶ್ರೀರಾಮನ ಬಳಿಗೆ ಬಂದರು. ರಾಕ್ಷಸರಿಂದ ನಿಬಿಡವಾಗಿದ್ದ ಆ ವನದಲ್ಲಿ ಶ್ರೀರಾಮನು ದಂಡಕಾರಣ್ಯವಾಸಿಗಳಾದ, ಅಗ್ನಿಗೆ ಸಮವಾದ ತೇಜಸ್ಸಿನಿಂದ ಕೂಡಿದ್ದ ಮಹರ್ಷಿಗಳು ಹೇಳಿದ ಮಾತುಗಳನ್ನು ಕೇಳಿ ಅವರ ಅಪೇಕ್ಷೆಯಂತೆ ರಾಕ್ಷಸರನ್ನು ಯುದ್ಧದಲ್ಲಿ ಸಂಹಾರ ಮಾಡುವುದಾಗಿ ಋಷಿಗಳ ಸನ್ನಿಧಿಯಲ್ಲಿ ಪ್ರತಿಜ್ಞೆಮಾಡಿದನು. ದಂಡಕಾರಣ್ಯದಲ್ಲಿ ಜನಸ್ಥಾನವೆಂಬ ಪ್ರದೇಶದಲ್ಲಿ ವಾಸಮಾಡುತ್ತಿದ್ದ ಶ್ರೀರಾಮನು, ಅದೇ

ಸ್ಥಳದಲ್ಲಿ ವಾಸಮಾಡುತ್ತಿದ್ದ ಕಾಮರೂಪಿಣಿಯಾದ ಶೂರ್ಪಣಖೆಯೆಂಬ ರಾಕ್ಷಸಿಯನ್ನು ವಿರೂಪಗೊಳಿಸಿದನು. ಅನಂತರದಲ್ಲಿ ಶೂರ್ಪಣಖೆಯ ವಿಕಾರವಾದ ರೂಪವನ್ನು ನೋಡಿ ಮತ್ತು ಅವಳ ಮಾತುಗಳನ್ನು ಕೇಳಿ ರಾಮನನ್ನು ಕೊಲ್ಲಲು ಯುದ್ಧಸನ್ನದ್ಧರಾಗಿ ಬಂದ ಸಮಸ್ತರಾಕ್ಷಸರನ್ನೂ, ಖರ, ತ್ರಿಶಿರಸ್ಸು ಮತ್ತು ದೂಷಣರೆಂಬ ರಾಕ್ಷಸರನ್ನೂ, ಅವರ ಅನುಯಾಯಿ ಗಳಾಗಿದ್ದ ಸಾವಿರಾರು ರಾಕ್ಷಸರನ್ನೂ ಶ್ರೀರಾಮನು ಯುದ್ಧದಲ್ಲಿ ಸಂಹರಿಸಿ ದನು. ಆ ವನದಲ್ಲಿ ವಾಸಮಾಡುತ್ತಿದ್ದ ಜನಸ್ಥಾನನಿವಾಸಿಗಳಾಗಿದ್ದ ಹದಿ ನಾಲ್ಕು ಸಾವಿರ ರಾಕ್ಷಸರನ್ನೂ ಸಂಹರಿಸಿದನು. ತನ್ನ ಜ್ಞಾತಿಯಾದ ಖರನ ವಧೆಯು ರಾಮನಿಂದ ಆಯಿತೆಂಬುದನ್ನು ಕೇಳಿ ಕ್ರೋಧದಿಂದ ಮೂಢನಾದ ರಾವಣನು ರಾಮನಿಗೆ ಪ್ರತೀಕಾರಮಾಡುವ ಸಲುವಾಗಿ ಮಾರೀಚನೆಂಬ ರಾಕ್ಷಸನ ಸಹಾಯವನ್ನು ಕೋರಿದನು. ರಾಮನ ಪರಾಕ್ರಮದ ಉಗ್ರತೆಯನ್ನು ಹಿಂದೆ ಅನುಭವಿಸಿದ್ದ ಮಾರೀಚನು ರಾವಣನಿಗೆ ಹೇಳಿದನು : "ರಾವಣೇಶ್ವರ! ಖರಾದಿಗಳನ್ನು ಸಂಹಾರಮಾಡಿರುವುದರಿಂದಲೇ ಶ್ರೀರಾಮನು ಎಂತಹ ಮಹಾಬಲಶಾಲಿಯೆಂಬುದನ್ನು ಊಹಿಸಬಹು ದಾಗಿದೆ. **ನ ವಿರೋಧೋ ಬಲವತಾ ಕ್ಷಮೋ ರಾವಣ ತೇನ ತೇ॥** ಬಲಿಷ್ಠರೊಡನೆ ವಿರೋಧವನ್ನು ಕಟ್ಟಿಕೊಳ್ಳುವುದು ಖಂಡಿತವಾಗಿಯೂ ಯುಕ್ತವಲ್ಲ."–ಹೀಗೆ ಬಹುವಿಧವಾಗಿ ಹೇಳಿ, ರಾವಣನನ್ನು ತಡೆಯಲು ಯತ್ನಿಸಿದನು. ಆದರೆ ಮೃತ್ಯುವಿನಿಂದ ಪ್ರೇರಿತನಾದ ರಾವಣನು ಮಾರೀಚನ ಮಾತನ್ನು ತಿರಸ್ಕರಿಸಿ, ಮಾರೀಚನನ್ನೂ ಜೊತೆಯಲ್ಲಿ ಕರೆದುಕೊಂಡು ರಾಮನ ಆಶ್ರಮದೆಡೆಗೆ ತೆರಳಿದನು. ರಾವಣನು ಸೀತಾಪಹರಣದ ಯೋಜನೆಯನ್ನು ಸಿದ್ಧಪಡಿಸಿದನು. ಆ ಯೋಜನೆಯಂತೆ ಮಾರೀಚನು ಮಾಯಾಮೃಗವಾದನು. ಆ ಚಿನ್ನದ ಜಿಂಕೆಯನ್ನು ತರುವ ಸಲುವಾಗಿ ರಾಮನು ಜಿಂಕೆಯ ಹಿಂದೆ ಹೊರಟನು. ಆ ಮಾಯಾಮೃಗವು ದಶರಥನ ಪುತ್ರರಾದ, ವೀರರಾದ ರಾಮ-ಲಕ್ಷ್ಮಣರನ್ನು ಬಹಳ ದೂರಕ್ಕೆ ಕೊಂಡೊಯ್ಯಿತು. ರಾಮ-ಲಕ್ಷ್ಮಣರಿಲ್ಲದ ಆ ಸಮಯವನ್ನು ನೋಡಿ ರಾವಣನು ಸೀತೆಯನ್ನು ಅಪಹರಿಸಿಕೊಂಡು ಹೋದನು. ಹೋಗುವ ದಾರಿಯಲ್ಲಿ ಪ್ರತಿಭಟಿಸಿದ ಜಟಾಯುವನ್ನು ಬಾಣಗಳಿಂದ ಘಾಸಿಪಡಿಸಿ

ಲಂಕೆಗೆ ಹೊರಟುಹೋದನು. ರಾಮನು ಮಾರೀಚನನ್ನು ಕೊಂದು, ತನ್ನನ್ನು ಹುಡುಕಿಕೊಂಡು ಬಂದ ಲಕ್ಷ್ಮಣನೊಡನೆ ಆಶ್ರಮಕ್ಕೆ ಬಂದನು. ಅಲ್ಲಿ ಸೀತೆಯು ಇರಲಿಲ್ಲ. ಆಕೆಯನ್ನು ಹುಡುಕುತ್ತಿದ್ದಾಗ ಸ್ವಲ್ಪದೂರದಲ್ಲಿ ಪ್ರಾಣಬಿಡಲು ಸಿದ್ಧನಾಗಿದ್ದ ಜಟಾಯುವನ್ನು ಶ್ರೀರಾಮನು ಕಂಡನು ಮತ್ತು ಅವನಿಂದ ರಾವಣನು ಸೀತೆಯನ್ನು ಅಪಹರಿಸಿಕೊಂಡು ಹೋದನೆಂಬ ದುರ್ವಾರ್ತೆಯನ್ನೂ ಕೇಳಿದನು. ಶ್ರೀರಾಮನಿಗೆ ಆ ವಾರ್ತೆಯನ್ನು ತಿಳಿಸಿ ದೊಡನೆಯೇ ಜಟಾಯುವಿನ ಪ್ರಾಣಪಕ್ಷಿಯು ಹಾರಿಹೋಯಿತು. ಶ್ರೀರಾಮನ ಶೋಕವು ಇಮ್ಮಡಿಯಾಯಿತು. ಶೋಕಪರೀತನಾದ ಅವನು ಜಟಾಯುವಿಗೆ ಬ್ರಹ್ಮಮೇಧಕ್ರಮದಿಂದ ಸಂಸ್ಕಾರಮಾಡಿ, ಕಾಡಿನಲ್ಲಿ ಸೀತೆಯನ್ನು ಹುಡುಕುತ್ತಿದ್ದಾಗ ಹೊಟ್ಟೆಯಲ್ಲಿ ತಲೆಯನ್ನು ಧರಿಸಿ ವಿಕೃತರೂಪನಾಗಿಯೂ, ಭಯಂಕರನಾಗಿಯೂ ಇದ್ದ ಕಬಂಧನೆಂಬ ರಾಕ್ಷಸನನ್ನು ಕಂಡನು. ಉದ್ದವಾದ ತೋಳುಗಳನ್ನು ಚಾಚಿ ತಮ್ಮನ್ನು ಬಂಧಿಸಿದ ಕಬಂಧಾ ಸುರನನ್ನು ಮಹಾಬಾಹುವಾದ ರಾಮನು ಸಂಹರಿಸಿದನು. ಕಬಂಧನ ಪ್ರಾರ್ಥನೆಯಂತೆ ಅವನ ಪಾರ್ಥಿವಶರೀರವನ್ನು ದಹನಮಾಡಿದ್ದರಿಂದ ಅವನಿಗೆ ಸ್ವರ್ಗಪ್ರಾಪ್ತಿಯಾಯಿತು. ಕಬಂಧನು ಸ್ವರ್ಗಕ್ಕೆ ಹೋಗುವ ಮೊದಲು ರಾಮನಿಗೆ ಹೇಳಿದನು :

"ಶ್ರೀರಾಮಚಂದ್ರ! ಗುರುಶುಶ್ರೂಷಾದಿಧರ್ಮಗಳಲ್ಲಿ ನಿಷ್ಠಳಾಗಿ, ಅತಿಥಿಸತ್ಕಾರರೂಪವಾದ ಧರ್ಮದಲ್ಲಿ ನಿಪುಣೆಯಾದ ಪರಿವ್ರಾಜಕಳಾದ ಶಬರಿಯು ನಿನಗಾಗಿ ಅನೇಕ ವರ್ಷಗಳಿಂದ ಕಾದಿರುವಳು ; ಅವಳಲ್ಲಿಗೆ ಹೋಗು." ಹೀಗೆ ಹೇಳಿ ಕಬಂಧನು ಸ್ವರ್ಗಾರೋಹಣಮಾಡಿದನು. ಮಹಾ ತೇಜಸ್ವಿಯಾದ, ಶತ್ರುಸೂದನನಾದ ರಾಮನು ಶಬರಿಯ ಆಶ್ರಮಕ್ಕೆ ಹೋದನು. ಅಲ್ಲಿ ರಾಮನ ಸಂದರ್ಶನದಿಂದ ತುಷ್ಟಳಾದ ಶಬರಿಯು ರಾಮ ನನ್ನು ಭಕ್ತಿಯಿಂದ ಸತ್ಕರಿಸಿದಳು.

ಅನಂತರ ಮುಂದೆ ಸೀತಾನ್ವೇಷಣಕ್ಕಾಗಿ ಹೋಗುತ್ತಿದ್ದಾಗ–ಪಂಪಾ ತೀರದಲ್ಲಿ ವಾನರಶ್ರೇಷ್ಠನಾದ ಹನುಮಂತನ ಸಮಾಗಮವಾಯಿತು. ಹನು ಮಂತನ ಮಾತಿನಂತೆ ಅವನಿಗೆ ಸುಗ್ರೀವನ ಭೇಟಿಯಾಯಿತು. ಮಹಾಬಲ

ನಾದ ರಾಮನು ಸುಗ್ರೀವನಿಗೆ ಮೊದಲಿನಿಂದ ನಡೆದ ವೃತ್ತಾಂತವನ್ನು ಯಥೋಚಿತವಾಗಿ ತಿಳಿಯಪಡಿಸಿ, ಸೀತೆಯ ಅಪಹರಣದ ವಿಷಯವನ್ನು ವಿಶೇಷವಾಗಿ ವಿವರಿಸಿ ಹೇಳಿದನು. ಸುಗ್ರೀವನು ರಾಮನಿಂದ ಎಲ್ಲವನ್ನೂ ಕೇಳಿ ಪ್ರೀತನಾಗಿ ರಾಮನೊಡನೆ ಅಗ್ನಿಸಾಕ್ಷಿಯಾಗಿ ಸಖ್ಯಮಾಡಿಕೊಂಡನು. ಅನಂತರ ಸುಗ್ರೀವನು ತನ್ನ ವೃತ್ತಾಂತವನ್ನು ನೆನೆದು ದುಃಖಿಸುತ್ತಾ, ಅಣ್ಣ ನಾದ ವಾಲಿಗೂ ಮತ್ತು ತನಗೂ ಇದ್ದ ವೈರದ ಕಾರಣವನ್ನೂ ಮತ್ತು ಹೆಂಡತಿಯಾದ ರುಮೆಯ ಅಪಹರಣವನ್ನೂ ಸ್ನೇಹದ ಕಾರಣದಿಂದ ರಾಮ ನಿಗೆ ಯಥಾರೀತಿಯಾಗಿ ತಿಳಿಯಪಡಿಸಿದನು. ಒಡನೆಯೇ ರಾಮನು ವಾಲಿ ಯನ್ನು ವಧೆಮಾಡುವೆನೆಂದು ಪ್ರತಿಜ್ಞೆಮಾಡಿದನು. ಪ್ರತಿಜ್ಞಾನಂತರ ಸುಗ್ರೀವನು ವಾಲಿಯ ಬಲವೆಷ್ಟೆಂಬುದನ್ನು ವಿಶದವಾಗಿ ತಿಳಿಯಪಡಿಸಿದನು. "ರಾಮನು ವಾಲಿಯ ವಧೆಯನ್ನು ಮಾಡುವೆನೆಂದು ಪ್ರತಿಜ್ಞೆಯನ್ನೇನೋ ಮಾಡಿರುವನು. ಆದರೆ ರಾಮನಿಗೆ ವಾಲಿಯ ವಧೆಮಾಡುವ ಸಾಮರ್ಥ್ಯ ವಿರುವುದೇ?" ಈ ಸಂಶಯವು ಸುಗ್ರೀವನಿಗೆ ಪ್ರತಿಕ್ಷಣದಲ್ಲಿಯೂ ಉದ್ಭೂತ ವಾಗುತ್ತಿದ್ದಿತು. ರಾಮನಿಗೆ ವಾಲಿಯನ್ನು ವಧೆಮಾಡುವ ಸಾಮರ್ಥ್ಯವಿದೆ ಯೆಂಬುದು ತಿಳಿಯುವುದಾದರೂ ಹೇಗೆ? ಸುಗ್ರೀವನು ರಾಮಸಮೇತನಾಗಿ ಸಂಚರಿಸುತ್ತಿದ್ದ ಕಾಲದಲ್ಲಿ ವಾಲಿಯಿಂದ ಕೊಲ್ಲಲ್ಪಟ್ಟ, ಮಹಾಪರ್ವತಕ್ಕೆ ಸಮನಾಗಿದ್ದ, ದುಂದುಭಿಯೆಂಬ ರಾಕ್ಷಸನ ಶಿಥಿಲವಾದ ಮಹಾಕಾಯವನ್ನು ತೋರಿಸಿ–"ವಾಲಿಯು ಈ ಪಾರ್ಥಿವಶರೀರವನ್ನು ಕಾಲಿನ ತುದಿಯಿಂದ ಮೇಲಕ್ಕೆ ಚಿಮ್ಮಿಸಬಲ್ಲನು"–ಎಂದು ಹೇಳಿದನು. ಮಹಾಬಲನಾದ, ಮಹಾ ಬಾಹುವಾದ ರಾಮನು ಪರ್ವತೋಪಮವಾಗಿ ಬಿದ್ದಿದ್ದ ರಾಕ್ಷಸನ ಅಸ್ಥಿ ಯನ್ನು ನೋಡಿದನು. ಮುಗುಳ್ನಗೆಯನ್ನು ಬೀರಿ ಮುಂದೆ ಹೋಗಿ ತನ್ನ ಕಾಲಿನ ಹೆಬ್ಬೆರಳಿನಿಂದ ಬೃಹದಾಕಾರದ ಅಸ್ಥಿಯನ್ನು ಚಿಮ್ಮಿದನು. ಒಡನೆಯೇ ಅಸ್ಥಿಯು ಹತ್ತು ಯೋಜನಗಳಷ್ಟು ದೂರ ಹೋಗಿಬಿದ್ದಿತು. ಸುಗ್ರೀವನ ಮನೋಗತವಾಗಿದ್ದ ಸಂಶಯದ ನಿವಾರಣೆಗಾಗಿ ಶ್ರೀರಾಮನು ಹೆದೆ ಯೇರಿಸಿ ಸೆಳೆದು ಒಂದೇ ಒಂದು ಬಾಣವನ್ನು ಹೊಡೆದನು. ಆ ಬಾಣವು ಏಳು ಸಾಲವೃಕ್ಷಗಳನ್ನೂ ಏಕಕಾಲದಲ್ಲಿ ಭೇದಿಸಿಕೊಂಡು, ರಸಾತಲ ವನ್ನು ಸೇರಿ, ಸುಗ್ರೀವನ ಮನಸ್ಸಿನಲ್ಲಿ ರಾಮನ ಪರಾಕ್ರಮದ ವಿಷಯದಲ್ಲಿದ್ದ

ಸಂಶಯವನ್ನೂ ಭೇದಿಸಿ, ವಿಶ್ವಾಸವನ್ನು ಹುಟ್ಟಿಸಿತು. ವಾಲಿವಧೆಮಾಡಲು ರಾಮನು ಸಮರ್ಥನೆಂಬ ವಿಶ್ವಾಸವು ಸುಗ್ರೀವನಿಗುಂಟಾಯಿತು. ರಾಜ್ಯವು ತನಗೆ ಒಡನೆಯೇ ಸಿಕ್ಕುವುದೆಂದು ಭಾವಿಸಿ ಸುಗ್ರೀವನು ಸುಪ್ರೀತನಾದನು. ಗುಹೆಯಂತೆ ಪರ್ವತಮಧ್ಯದಲ್ಲಿದ್ದ ಕಿಷ್ಕಿಂಧಾಪಟ್ಟಣಕ್ಕೆ ಸುಗ್ರೀವನು ರಾಮನೊಡನೆ ಒಡನೆಯೇ ತೆರಳಿದನು. ಸುವರ್ಣದಂತೆ ಪಿಂಗಲವರ್ಣದಿಂದಿದ್ದ ಕಪಿಶ್ರೇಷ್ಠನಾದ ಸುಗ್ರೀವನು ಕಿಷ್ಕಿಂಧಾಪಟ್ಟಣದ ಮಹಾದ್ವಾರದಲ್ಲಿ ನಿಂತು ಸಿಂಹನಾದವನ್ನು ಮಾಡಿದನು. ಆ ಗರ್ಜನೆಯನ್ನು ಕೇಳಿ ವಾಲಿಯು ಅರಮನೆಯಿಂದ ಹೊರಕ್ಕೆ ಹೊರಟನು. ತಾರೆಯು ವಾಲಿಯನ್ನು ತಡೆದಳು. ಆದರೂ ಅವಳನ್ನು ಸಂತೈಸಿ, ಬಾರಿ-ಬಾರಿಗೂ ಗರ್ಜನೆಮಾಡುತ್ತಿದ್ದ ಸುಗ್ರೀವನ ಬಳಿಗೆ ಬಂದನು. ವಾಲಿ-ಸುಗ್ರೀವರಿಬ್ಬರಿಗೂ ಘೋರವಾದ ಯುದ್ಧವಾಯಿತು. ಸುಗ್ರೀವನು ಕ್ಷಣ-ಕ್ಷಣಕ್ಕೂ ದುರ್ಬಲನಾಗುತ್ತಿದ್ದನು. ಅವನು ವಾಲಿಯ ವಧೆಯನ್ನು ಕೂಡಲೇ ಮಾಡಬೇಕೆಂದು ರಾಮನನ್ನು ಪ್ರಾರ್ಥಿಸಿದನು. ಆಗ ರಾಮನು ಒಂದೇ ಒಂದು ಬಾಣವನ್ನು ತೆಗೆದು ಧನುಸ್ಸಿನಲ್ಲಿ ಹೂಡಿ, ವಾಲಿಗೆ ಗುರಿಯಿಟ್ಟು ಹೊಡೆದನು. ವಾಲಿಯ ಸಂಹಾರವಾಯಿತು. ಶ್ರೀರಾಮಚಂದ್ರನು ಸುಗ್ರೀವನಿಗೆ ಆ ರಾಜ್ಯದಲ್ಲಿ ಪಟ್ಟಾಭಿಷೇಕಮಾಡಿದನು.

ಕಪಿಶ್ರೇಷ್ಠನಾದ ಸುಗ್ರೀವನು ರಾಮನಿಗೆ ಪ್ರತ್ಯುಪಕಾರಮಾಡಲು ನಿಶ್ಚಯಿಸಿದವನಾಗಿ ವಾನರಪ್ರಮುಖರುಗಳನ್ನು ಕಿಷ್ಕಿಂಧೆಗೆ ಕರೆಯಿಸಿ, ಸೀತೆಯು ಎಲ್ಲಿರುವಳೆಂಬ ವೃತ್ತಾಂತವನ್ನು ಶೀಘ್ರವಾಗಿ ತಿಳಿದು ಬರ ಬೇಕೆಂದು ಆಜ್ಞಾಪಿಸಿ, ಎಲ್ಲ ದಿಕ್ಕುಗಳಿಗೂ ಕಳುಹಿಸಿಕೊಟ್ಟನು. ಕಪಿಮುಖ್ಯ ರಲ್ಲಿ ಮಹಾಬಲಶಾಲಿಯಾದ ಹನುಮಂತನೂ ಒಬ್ಬನಾಗಿದ್ದನು. ಅವನು ಅಂಗದಾದಿಗಳೊಡನೆ ದಕ್ಷಿಣದಿಕ್ಕಿಗೆ ಸೀತಾನ್ವೇಷಣೆಗಾಗಿ ಹೊರಟನು. ಅವರಿಗೆ ದಾರಿಯಲ್ಲಿ ಜಟಾಯುವಿನ ಅಣ್ಣನಾದ ಸಂಪಾತಿಯ ದರ್ಶನ ವಾಯಿತು. ಸೀತೆಯು ಸಮುದ್ರಮಧ್ಯದಲ್ಲಿರುವ ಲಂಕೆಯಲ್ಲಿರುವಳೆಂದೂ, ನೂರು ಯೋಜನಗಳಷ್ಟು ವಿಸ್ತಾರವಾಗಿದ್ದ ಸಮುದ್ರವನ್ನು ದಾಟಿ ಲಂಕೆಗೆ ಹೋಗಬೇಕೆಂದೂ ಸಂಪಾತಿಯು ತಿಳಿಸಿದನು. ಅದರಂತೆ ಹನುಮಂತನು

ನೂರು ಯೋಜನ ವಿಸ್ತೀರ್ಣದ ಲವಣಸಮುದ್ರವನ್ನು ಹಾರಿದನು. ಹನು ಮಂತನು ರಾವಣನಿಂದ ಪರಿಪಾಲಿತವಾಗಿದ್ದ, ಸಮುದ್ರದ ಮಧ್ಯದಲ್ಲಿದ್ದ ಲಂಕಾಪಟ್ಟಣದಲ್ಲಿಳಿದು ರಾವಣನ ಅಂತಃಪುರೋದ್ಯಾನವಾದ ಅಶೋಕವನ ದಲ್ಲಿ ಪರಾತ್ಪರನಾದ ರಾಮನನ್ನೇ ನಿರಂತರವೂ ಸ್ಮರಿಸುತ್ತಿದ್ದ ಸೀತಾದೇವಿ ಯನ್ನು ಸಂದರ್ಶಿಸಿದನು. ರಾಮನ ಅಭಿಜ್ಞಾನಭೂತವಾಗಿದ್ದ ಉಂಗುರ ವನ್ನು ಸೀತಾದೇವಿಗೆ ಸಮರ್ಪಿಸಿ, ಸುಗ್ರೀವ-ರಾಮರ ಸಖ್ಯ, ಸೇನಾಸಂಗ್ರಹ ಣಾದಿ ವೃತ್ತಾಂತವನ್ನೂ ತಿಳಿಸಿ–'ರಾಮನು ಸೇನಾಸಮೇತನಾಗಿ ಬಂದು ರಾವಣನನ್ನು ನಿಗ್ರಹಿಸಿ, ನಿನ್ನನ್ನು ಕರೆದೊಯ್ಯುವನು'–ಎಂದು ಹೇಳಿ ಸೀತಾದೇವಿಯನ್ನು ಸಂತೈಸಿದನು. ಅವಳ ಅನುಮತಿಯನ್ನು ಪಡೆದು ಹೊರಡಲಿದ್ದಾಗ ರಾವಣನನ್ನು ನೋಡಿ, ಅವನ ಅಭಿಪ್ರಾಯವನ್ನು ತಿಳಿಯ ಬೇಕೆಂಬ ಕುತೂಹಲದಿಂದ ಹನುಮಂತನು ಅಶೋಕವನದ ಹೊರಬಾಗಿ ಲನ್ನು ಕೆಡವಿದನು. ಅದನ್ನು ಕಂಡು ಮೇಲೆ ಬಿದ್ದ ಐವರು ಸೇನಾನಾಯಕ ರನ್ನೂ ಏಳು ಮಂದಿ ಮಂತ್ರಿಗಳ ಮಕ್ಕಳನ್ನೂ ಸಂಹರಿಸಿ, ಶೂರನಾದ ಅಕ್ಷಕುಮಾರನನ್ನೂ ಪುಡಿ-ಪುಡಿಮಾಡಿ, ಇಂದ್ರಜಿತುವು ಪ್ರಯೋಗಿಸಿದ ಬ್ರಹ್ಮಾಸ್ತ್ರಕ್ಕೆ ಕಟ್ಟುಬಿದ್ದನು. ವೀರನಾದ, ಕಪಿಶ್ರೇಷ್ಠನಾದ ಹನುಮಂತನು ಬ್ರಹ್ಮನ ವರದ ಕಾರಣದಿಂದಾಗಿ ಐದು ಘಳಿಗೆಗಳ ನಂತರ ಸ್ವಪ್ರಯತ್ನವೇ ಇಲ್ಲದೆ ಬ್ರಹ್ಮಾಸ್ತ್ರದಿಂದ ಬಿಡುಗಡೆಯನ್ನು ಹೊಂದಿದನು. ಬ್ರಹ್ಮಾಸ್ತ್ರದಿಂದ ವಿಮುಕ್ತನಾದೆನೆಂದು ತಿಳಿದೊಡನೆಯೇ, ಬ್ರಹ್ಮಾಸ್ತ್ರದಿಂದ ಬಂಧಿತನಾಗಿದ್ದ ಕಾಲದಲ್ಲಿ ತನ್ನನ್ನು ಹಗ್ಗಗಳಿಂದ ಕಟ್ಟಿ ಅತ್ತಲಿತ್ತ ಸೆಳೆದಾಡಿದ್ದ ರಾಕ್ಷಸರ ಅಪರಾಧವನ್ನು ಸಹಿಸಿಕೊಂಡು, ಮಿಥಿಲಾಪಟ್ಟಣದ ರಾಜಕುಮಾರಿಯಾದ ಸೀತೆಯಿದ್ದ ಸ್ಥಳವೊಂದನ್ನು ಬಿಟ್ಟು ಲಂಕೆಯನ್ನು ದಹಿಸಿ, ರಾಮನಿಗೆ ಸೀತಾ ದರ್ಶನವೆಂಬ ಪ್ರಿಯವಾರ್ತೆಯನ್ನು ತಿಳಿಸುವ ಸಲುವಾಗಿ ಕಿಷ್ಕಿಂಧೆಗೆ ಬಂದನು. ಅಪಾರವಾದ ಬುದ್ಧಿಯುಳ್ಳ ಹನುಮಂತನು ಮಹಾತ್ಮನಾದ ರಾಮನಿಗೆ ಪ್ರದಕ್ಷಿಣೆಮಾಡಿ ನಮಸ್ಕರಿಸಿ ಅಂಜಲಿಬದ್ಧನಾಗಿ–"ರಾಮಚಂದ್ರ! 'ದೃಷ್ಟಾ ಸೀತಾ' ಸೀತಾದೇವಿಯನ್ನು ಕಂಡೆನು"–ಎಂದು ಹೇಳಿ ಅಲ್ಲಿ ಅವಳಿದ್ದ ಪರಿಸ್ಥಿತಿಯನ್ನೂ ವಿವರಿಸಿ ಹೇಳಿದನು. ಅನಂತರದಲ್ಲಿ ಶ್ರೀರಾಮನು ಸುಗ್ರೀವಸಮೇತನಾಗಿ ಸಮುದ್ರರಾಜನ ಬಳಿಗೆ ಹೋದನು. ಸಮುದ್ರ

ರಾಜನು ರಾಮನಿಗೆ ಲಂಕೆಗೆ ಹೋಗುವ ಮಾರ್ಗವನ್ನು ತೋರಿಸದೇ ಔದಾಸೀನ್ಯದಿಂದಿದ್ದುದರಿಂದ ರಾಮನು ಕೋಪಗೊಂಡು ಸೂರ್ಯನಂತೆ ಪ್ರಖರವಾದ ತನ್ನ ಬಾಣಗಳಿಂದ ಸಮುದ್ರವನ್ನು ಶೋಷಿಸಲಾರಂಭಿಸಿದನು. ಸಮುದ್ರರಾಜನು ಭಯಗೊಂಡವನಾಗಿ ರಾಮನ ಕೋಪವನ್ನು ಶಮನ ಮಾಡಲು ಸಶರೀರನಾಗಿ ಬಂದು ಶಾಂತನಾಗುವಂತೆ ರಾಮನನ್ನು ಪ್ರಾರ್ಥಿಸಿದನು. ಸಮುದ್ರರಾಜನ ಮಾತಿನಂತೆ ಶ್ರೀರಾಮನು ನಲನಿಂದ ಸಮುದ್ರದ ಮೇಲೆ ಸೇತುವೆಯನ್ನು ಕಟ್ಟಿಸಿದನು. ಆ ಸೇತುವೆಯ ಮೂಲಕ ಶ್ರೀರಾಮನು ವಾನರಸೈನ್ಯಸಮೇತನಾಗಿ ಲಂಕೆಗೆ ಹೋಗಿ, ಯುದ್ಧದಲ್ಲಿ ರಾವಣನನ್ನು ಸಂಹರಿಸಿ, ಸೀತೆಯನ್ನೂ ಪಡೆದನು. ಆದರೆ ಲೋಕಾಪವಾದದ ಭೀತಿಯಿಂದ ರಾಮನು ಸೀತೆಯನ್ನು ಕರೆದೊಯ್ಯಲು ಬಹಳ ಲಜ್ಜಿತನಾದನು. ನೆರೆದಿದ್ದ ಸಭೆಯಲ್ಲಿ ಸೀತೆಯನ್ನು ಕುರಿತು ಅವಳ ಬಗೆಗೆ ಕಠಿಣವಾದ ಮಾತುಗಳನ್ನಾಡಿದನು.

ಅವಳು ರಾಮನು ಹೇಳಿದ ಕಠೋರವಾದ ಮಾತುಗಳನ್ನು ಸಹಿಸದೇ ಲಕ್ಷ್ಮಣನಿಂದ ಅಗ್ನಿಯನ್ನು ಸಿದ್ಧಪಡಿಸಿ ಅಗ್ನಿಪ್ರವೇಶಮಾಡಿದಳು. ಒಡನೆಯೇ ಅಗ್ನಿದೇವನು ಸರ್ವರ ಸಮ್ಮುಖದಲ್ಲಿ ಸೀತೆಯನ್ನು ಕರೆತಂದು ಸೀತೆಯು ಪರಮಪಾವನೆಯೆಂದೂ, ಕಲ್ಮಷರಹಿತಳೆಂದೂ, ತ್ರಿಕರಣಶುದ್ಧಳೆಂದೂ ಹೇಳಿದನು. ರಾಮನು ಅಗ್ನಿದೇವನು ಹೇಳಿದ ಮಾತುಗಳಿಂದ ಸೀತೆಯು ದೋಷರಹಿತಳೆಂಬುದನ್ನು ನಿಶ್ಚಯಿಸಿದವನಾಗಿ ಸೀತೆಯನ್ನು ಪರಿಗ್ರಹಿಸಿ, ಅವಳನ್ನು ನಾನಾವಿಧವಾದ ಪ್ರಿಯೋಕ್ತಿಗಳಿಂದ ಸಂತೈಸಿ, ಹೆಚ್ಚಿನ ಸಂತೋಷವನ್ನು ವ್ಯಕ್ತಪಡಿಸಿದನು. ಸಂಪ್ರಹೃಷ್ಟನಾಗಿದ್ದ ಶ್ರೀರಾಮಚಂದ್ರನನ್ನು ದೇವತೆಗಳೂ ಪೂಜಿಸಿ ಶ್ಲಾಘಿಸಿದರು. ಮಹಾತ್ಮನಾದ ರಾಘವನು ಮಾಡಿದ ರಾವಣವಧೆಯೆಂಬ ಮಹಾಕಾರ್ಯದಿಂದ ಮೂರು ಲೋಕಗಳೂ, ದೇವರ್ಷಿಗಣಗಳೂ, ಸ್ಥಾವರ-ಜಂಗಮಗಳೂ ಸಂತುಷ್ಟವಾದುವು. ಶ್ರೀರಾಮನು ರಾಕ್ಷಸೇಂದ್ರನಾದ ವಿಭೀಷಣನಿಗೆ ಲಂಕಾರಾಜ್ಯದ ಪಟ್ಟಾಭಿಷೇಕವನ್ನು ಮಾಡಿ ಕೃತಕೃತ್ಯನಾಗಿ ಆನಂದಭರಿತನಾದನು.

ತನ್ನ ವಿಜಯವನ್ನು ಶ್ಲಾಘಿಸಲು ಬಂದಿದ್ದ ದೇವತೆಗಳಿಂದ ವರವನ್ನು

ಪಡೆದು, ಯುದ್ಧದಲ್ಲಿ ಸತ್ತುಹೋಗಿದ್ದ ವಾನರಸೇನೆಗಳಿಗೆ ಪ್ರಾಣದಾನವನ್ನು ಮಾಡಿ, ಮಲಗಿ ನಿದ್ರಿಸುತ್ತಿರುವವರನ್ನು ಎಬ್ಬಿಸುವಂತೆ ಎಲ್ಲರನ್ನೂ ಎಬ್ಬಿಸಿ, ಸುಗ್ರೀವ - ವಿಭೀಷಣ - ಸೀತಾ - ಲಕ್ಷ್ಮಣ - ಹನುಮತ್ಸಮೇತನಾಗಿ ಪುಷ್ಪಕ ವಿಮಾನದಲ್ಲಿ ಕುಳಿತು ಅಯೋಧ್ಯಾಪಟ್ಟಣಕ್ಕೆ ಹೊರಟನು. ಭರದ್ವಾಜ ಮಹರ್ಷಿಗಳ ಆದೇಶದಂತೆ ಸತ್ಯಪರಾಕ್ರಮನಾದ ಶ್ರೀರಾಮನು ಅವರ ಆಶ್ರಮದಲ್ಲಿ ಪರಿವಾರಸಮೇತನಾಗಿ ಇಳಿದನು. ಅಂದಿಗೆ ಸರಿಯಾಗಿ ರಾಮನು ಅಯೋಧ್ಯೆಯಿಂದ ಹೊರಟು ಹದಿನಾಲ್ಕು ವರ್ಷಗಳಾಗಿದ್ದುವು. ಹದಿನಾಲ್ಕನೆಯ ವರ್ಷವು ತುಂಬಿದೊಡನೆಯೇ ಅಯೋಧ್ಯೆಗೆ ಬರುವುದಾಗಿ ರಾಮನು ಭರತನಿಗೆ ವಚನವನ್ನಿತ್ತಿದ್ದನು. ಭರತನೂ ರಾಮನು ಬಾರದಿದ್ದರೆ ಅಗ್ನಿಪ್ರವೇಶ ಮಾಡುವುದಾಗಿ ಹೇಳಿದ್ದನು. ಆ ಕಾರಣದಿಂದಾಗಿ ಶ್ರೀರಾಮನು ಹನುಮಂತನನ್ನು–ತಾನು ಪರಿವಾರಸಮೇತನಾಗಿ ಬರುತ್ತಿರುವೆನೆಂಬ ಸುವಾರ್ತೆಯೊಡನೆ–ಭರತನ ಸಮೀಪಕ್ಕೆ ಕಳುಹಿಸಿಕೊಟ್ಟನು. ಭರದ್ವಾಜ ಮಹರ್ಷಿಗಳ ಆತಿಥ್ಯವನ್ನು ಸ್ವೀಕರಿಸಿ, ಅವರಿಂದ ಅನುಮತಿಯನ್ನು ಪಡೆದು, ಪುನಃ ಪುಷ್ಪಕವಿಮಾನವನ್ನು ಹತ್ತಿ ಸುಗ್ರೀವಾದಿಗಳೊಡನೆ ಆಕಾಶಮಾರ್ಗದಲ್ಲಿ ಹೋಗುತ್ತಿದ್ದಾಗ–ಹಿಂದೆ ನಡೆದ ವೃತ್ತಾಂತವೆಲ್ಲವನ್ನೂ ಸುಗ್ರೀವ-ವಿಭೀಷಣ ರೊಡನೆ ಹೇಳುತ್ತಾ ರಾಮನು ನಂದಿಗ್ರಾಮವನ್ನು ಸೇರಿದನು. ಪಿತೃ ವಾಕ್ಯಪರಿಪಾಲನೆಯನ್ನು ಪೂರ್ಣವಾಗಿ ಮಾಡಿ, ದೋಷರಹಿತನಾದ ಶ್ರೀರಾಮನು ಅನೇಕ ವರ್ಷಗಳಿಂದ ಗಂಟು-ಗಂಟಾಗಿದ್ದ ಜಡೆಯನ್ನು ಬಿಚ್ಚಿ, ಅನುಜರಿಂದೊಡಗೂಡಿ ಸೀತಾಸಹಿತನಾಗಿ ಪಟ್ಟಾಭಿಷಿಕ್ತನಾಗಿ ರಾಜ್ಯಭಾರ ವನ್ನು ವಹಿಸಿಕೊಂಡನು.

ಪ್ರಹೃಷ್ಟಮುದಿತೋ ಲೋಕಸ್ತುಷ್ಟಃ ಪುಷ್ಟಃ ಸುಧಾರ್ಮಿಕಃ ।
ನಿರಾಮಯೋ ಹ್ಯರೋಗಶ್ಚ ದುರ್ಭಿಕ್ಷಭಯವರ್ಜಿತಃ ॥೮೮॥

ನ ಪುತ್ರಮರಣಂ ಕಿಂಚಿದ್ದ್ರಕ್ಷ್ಯನ್ತಿ ಪುರುಷಾಃ ಕ್ವಚಿತ್ ।
ನಾರ್ಯಶ್ಚಾವಿಧವಾ ನಿತ್ಯಂ ಭವಿಷ್ಯನ್ತಿ ಪತಿವ್ರತಾಃ ॥೮೯॥

ನ ಚಾಗ್ನಿಜಂ ಭಯಂ ಕಿಂಚಿನ್ನಾಪ್ಸು ಮಜ್ಜನ್ತಿ ಜನ್ತವಃ ।

ನ ವಾತಜಂ ಭಯಂ ಕಿಂಚಿನ್ನಾಪಿ ಜ್ವರಕೃತಂ ತಥಾ ।
ನ ಚಾಪಿ ಕ್ಷುದ್ಭಯಂ ತತ್ರ ನ ತಸ್ಕರಭಯಂ ತಥಾ ॥೯೦॥

ನಗರಾಣಿ ಚ ರಾಷ್ಟ್ರಾಣಿ ಧನಧಾನ್ಯಯುತಾನಿ ಚ ।
ನಿತ್ಯಂ ಪ್ರಮುದಿತಾಃ ಸರ್ವೇ ಯಥಾ ಕೃತಯುಗೇ ತಥಾ ॥೯೧॥

ಶ್ರೀರಾಮಚಂದ್ರನು ರಾಜ್ಯವಾಳುತ್ತಿರುವಾಗ–ಪ್ರಜೆಗಳು ಪರಮಾನಂದಭರಿತರಾಗಿದ್ದರು. ಜನರು ತುಷ್ಟರಾಗಿಯೂ ಪುಷ್ಟರಾಗಿಯೂ ಇದ್ದರು. ಲೋಕವು ಸುಧಾರ್ಮಿಕವಾಗಿದ್ದಿತು. ಜನರ ಜೀವನವು ಧರ್ಮಮೂಲವಾಗಿದ್ದಿತು. ಪ್ರಜೆಗಳು ಅರೋಗದೃಢಕಾಯರಾಗಿದ್ದರು. ಜನರಿಗೆ ಯಾವ ಮಾನಸಿಕವ್ಯಥೆಯೂ ಇರಲಿಲ್ಲ. ದುರ್ಭಿಕ್ಷದ ಭಯವು ಶ್ರೀರಾಮನ ರಾಜ್ಯದಲ್ಲಿರಲಿಲ್ಲ. ಪುತ್ರಮರಣವು ಎಲ್ಲಿಯೂ ಕಾಣಿಸುತ್ತಿರಲಿಲ್ಲ. ಸ್ತ್ರೀಯರು ನಿತ್ಯಸುಮಂಗಲಿಯರಾಗಿದ್ದು ಪತಿವ್ರತೆಯರಾಗಿರುತ್ತಿದ್ದರು. ವಿಧವೆಯರೇ ಅವನ ರಾಜ್ಯದಲ್ಲಿರಲಿಲ್ಲ.* ಶ್ರೀರಾಮನು ರಾಜ್ಯವಾಳುತ್ತಿರುವಾಗ– ದೇಶದಲ್ಲಿ ಅಗ್ನಿಭಯವಿರಲಿಲ್ಲ. ಪ್ರವಾಹವು ಅತ್ಯಧಿಕವಾಗಿ ಜನರು ನೀರಿನಲ್ಲಿ ಮುಳುಗಿಹೋಗುತ್ತಿರಲಿಲ್ಲ. ಬಿರುಗಾಳಿಯಿಂದ ಪ್ರಪಂಚವು ಅಲ್ಲೋಲ-ಕಲ್ಲೋಲವಾಗುತ್ತಿರಲಿಲ್ಲ. ಜ್ವರದಿಂದ ಮನುಷ್ಯರು ನರಳುತ್ತಿರಲಿಲ್ಲ. ಅನಾವೃಷ್ಟಿಯಿಂದ ಧಾನ್ಯಾದಿಗಳು ಬೆಳೆಯದೆ ಪ್ರಜೆಗಳು ಹಸಿವಿನಿಂದ ನರಳುತ್ತಿರಲಿಲ್ಲ. ದೇಶದಲ್ಲಿ ಕಳ್ಳ-ಕಾಕರ ಭಯವೂ ಇರಲಿಲ್ಲ. ನಗರಗಳು ಮತ್ತು ರಾಷ್ಟ್ರಗಳು ಧನ-ಧಾನ್ಯಸಮೃದ್ಧವಾಗಿದ್ದುವು. ಕೃತ ಯುಗದಲ್ಲಿ ಹೇಗೆ ಮಾನವರು ನಿತ್ಯಾನಂದದಿಂದಿರುತ್ತಿದ್ದರೋ–ಹಾಗೆಯೇ ತ್ರೇತಾಯುಗದಲ್ಲಿಯೂ ಶ್ರೀರಾಮಚಂದ್ರನ ಆಳ್ವಿಕೆಯಲ್ಲಿಯೂ ಪ್ರಜೆಗಳು ನಿತ್ಯಾನಂದದಿಂದಿರುತ್ತಿದ್ದರು. ಮಹಾಯಶಸ್ವಿಯಾದ ಶ್ರೀರಾಮನು ಅನೇಕ ಅಶ್ವಮೇಧಯಾಗಗಳನ್ನೂ, ಬಹುಸುವರ್ಣಕವೆಂಬ ಯಾಗಗಳನ್ನೂ, ಅಗ್ನಿಷ್ಟೋಮಾದಿಗಳನ್ನೂ ಮಾಡಿ, ಕೋಟಿಸಂಖ್ಯೆಯ ಗೋದಾನಗಳನ್ನೂ ಮಾಡಿ ಬ್ರಹ್ಮಲೋಕವನ್ನು ಸೇರುತ್ತಾನೆ. ರಾಘವನು ಈ ಲೋಕದಲ್ಲಿ ಮುಂದೆ

---

* ವಿಧವಾಶಬ್ದಕ್ಕೆ 'ವಿವಿಧಾಃ ಧವಾಃ ಯಾಸಾಂ ತಾಃ' ಎಂದು ವ್ಯುತ್ಪತ್ತಿಮಾಡಿ 'ಬಹುಪತಿಯುಳ್ಳವರು' ಅರ್ಥಾತ್ 'ವ್ಯಭಿಚಾರಿಣಿಯರು' ಇರಲಿಲ್ಲವೆಂದೂ ಒಬ್ಬರು ವ್ಯಾಖ್ಯಾನಮಾಡಿರುತ್ತಾರೆ.

ರಾಜವಂಶದ ನೂರಾರು ಧಾರ್ಮಿಕರಾದ ಅರಸರನ್ನು ನೆಲೆಗೊಳಿಸುವನು. ಅವರ ಮೂಲಕ ಬ್ರಹ್ಮ-ಕ್ಷತ್ರಿಯ-ವೈಶ್ಯ-ಶೂದ್ರರೆಂಬ ನಾಲ್ಕು ವರ್ಣಗಳನ್ನೂ ಅವರವರ ವರ್ಣಾಶ್ರಮಧರ್ಮಗಳಲ್ಲಿ ಅನುಷ್ಠಾನಪರರಾಗಿರುವಂತೆ ನಿಯೋಜಿಸುವನು. ಈ ರೀತಿಯಲ್ಲಿ ಹನ್ನೊಂದು ಸಾವಿರ ವರ್ಷಗಳ ಕಾಲ ಶ್ರೀರಾಮನು ರಾಜ್ಯವನ್ನು ಪರಿಪಾಲನೆಮಾಡಿ ಬ್ರಹ್ಮಲೋಕವನ್ನು ಸೇರುತ್ತಾನೆ.

ಇದಂ ಪವಿತ್ರಂ ಪಾಪಘ್ನಂ ಪುಣ್ಯಂ ವೇದೈಶ್ಚ ಸಂಮಿತಮ್ ।
ಯಃ ಪಠೇದ್ರಾಮಚರಿತಂ ಸರ್ವಪಾಪೈಃ ಪ್ರಮುಚ್ಯತೇ ॥೯೫॥

ಏತದಾಖ್ಯಾನಮಾಯುಷ್ಯಂ ಪಠನ್ರಾಮಾಯಣಂ ನರಃ ।
ಸಪುತ್ರಪೌತ್ರಃ ಸಗಣಃ ಪ್ರೇತ್ಯ ಸ್ವರ್ಗೇ ಮಹೀಯತೇ ॥೯೬॥

ಪಠನ್ದ್ವಿಜೋ ವಾಗೃಷಭತ್ವಮೀಯಾತ್
ಸ್ಯಾತ್ಕ್ಷತ್ರಿಯೋ ಭೂಮಿಪತಿತ್ವಮೀಯಾತ್ ।
ವಣಿಗ್ಜನಃ ಪಣ್ಯಫಲತ್ವಮೀಯಾತ್
ಜನಶ್ಚ ಶೂದ್ರೋಽಪಿ ಮಹತ್ತ್ವಮೀಯಾತ್ ॥೯೭॥

ವಾಲ್ಮೀಕಿಗಳೇ! ನಾನು ಹೇಳಿದ ಈ ರಾಮಾಯಣವು ಪವಿತ್ರವಾದುದು. ಅನುದಿನವೂ ರಾಮಾಯಣದ ಶ್ರವಣ-ಕೀರ್ತನಗಳು ಮಾನವನನ್ನು ಮಹಾಪಾಪಗಳಿಂದಲೂ ವಿಮುಕ್ತಗೊಳಿಸುವುದು. ಇದು ವೇದಕ್ಕೆ ಸಮಾನವಾದುದು. ಯಾವನು ಈ ಮಹಾಚರಿತವನ್ನು ಪಠನಮಾಡುವನೋ–ಅವನು ಸರ್ವಪಾಪಗಳಿಂದಲೂ ವಿಮುಕ್ತನಾಗುತ್ತಾನೆ. ದೀರ್ಘಾಯುಷ್ಯವನ್ನು ನೀಡುವ ರಾಮಾಯಣವನ್ನು ಯಾವ ಮನುಷ್ಯನು ಅನುದಿನವೂ ಪಾರಾಯಣಮಾಡುವನೋ ಅವನು ಪುತ್ರ-ಪೌತ್ರ-ಪರಿವಾರ ಸಮೇತನಾಗಿ ಕಾಲಾನಂತರದಲ್ಲಿ ಸ್ವರ್ಗವನ್ನು ಹೊಂದಿ ಅಲ್ಲಿ ಪೂಜಿಸಲ್ಪಡುತ್ತಾನೆ. ಇದನ್ನು ಅನುದಿನವೂ ಪಾರಾಯಣಮಾಡುವ ಬ್ರಾಹ್ಮಣನು ಶ್ರೇಷ್ಠವಾದ ಮಾತಿನ ಸಂಪತ್ತಿಗೆ ಅಧಿಪತಿಯಾಗುತ್ತಾನೆ. ಕ್ಷತ್ರಿಯನು ಭೂಪತಿಯಾಗುತ್ತಾನೆ. ವೈಶ್ಯನು ಹೆಚ್ಚು ವ್ಯಾಪಾರದ ಪರಮಘಟ್ಟವನ್ನು ಪಡೆಯುತ್ತಾನೆ. ಅನುದಿನವೂ ಈ ರಾಮಾಯಣವನ್ನು ಪಾರಾಯಣ ಮಾಡುವ ಶೂದ್ರನೂ ಜನರಲ್ಲಿ ಶ್ರೇಷ್ಠನೆನಿಸಿಕೊಳ್ಳುತ್ತಾನೆ.”

ಹೀಗೆ ನಾರದರು ಬ್ರಹ್ಮನಿಂದ ಉಪದಿಷ್ಟವಾದ, ಶತಕೋಟಿಪ್ರವಿಸ್ತರವಾದ ರಾಮಾಯಣವನ್ನು ಸಂಕ್ಷೇಪವಾಗಿ ವಾಲ್ಮೀಕಿಮಹರ್ಷಿಗಳಿಗೆ ಹೇಳಿದರು.

೧ನೆಯ ಸರ್ಗವು ಮುಗಿಯಿತು.

ತಮಸಾನದಿಯ ತೀರದಲ್ಲಿ ಕ್ರೌಂಚವಧೆಯಿಂದ ಸಂತಪ್ತರಾದ ವಾಲ್ಮೀಕಿಮಹರ್ಷಿಗಳ ಶೋಕದ ಮಾತು ಶ್ಲೋಕರೂಪವಾದುದು : ರಾಮಾಯಣಕಾವ್ಯವನ್ನು ರಚಿಸಲು ಬ್ರಹ್ಮನಿಂದ ವಾಲ್ಮೀಕಿಗಳಿಗೆ ಆದೇಶ : ರಾಮಾಯಣಕಾವ್ಯದ ಉಪಕ್ರಮ

ನಾರದಸ್ಯ ತು ತದ್ವಾಕ್ಯಂ ಶ್ರುತ್ವಾ ವಾಕ್ಯವಿಶಾರದಃ ।
ಪೂಜಯಾಮಾಸ ಧರ್ಮಾತ್ಮಾ ಸಹಶಿಷ್ಯೋ ಮಹಾಮುನಿಃ ॥೧॥

ವಾಕ್ಯವಿಶಾರದರಾದ, ಧರ್ಮಾತ್ಮರಾದ, ಮಹಾಮುನಿಗಳಾದ ವಾಲ್ಮೀಕಿಗಳು ನಾರದರು ಹೇಳಿದ ಸಂಗ್ರಹರಾಮಾಯಣವನ್ನು ಕೇಳಿ, ಹೃಷ್ಟರಾಗಿ ಶಿಷ್ಯರೊಡನೆ ನಾರದಮಹರ್ಷಿಗಳನ್ನು ವಿಧಿಪೂರ್ವಕವಾಗಿ ಪೂಜಿಸಿದರು. ವಾಲ್ಮೀಕಿಗಳು ಶಿಷ್ಯಸಮೇತರಾಗಿ ಮಾಡಿದ ಪೂಜೆಯನ್ನು ದೇವರ್ಷಿಗಳಾದ ನಾರದರು ಸ್ವೀಕರಿಸಿ ವಾಲ್ಮೀಕಿಗಳ ಅನುಮತಿಯನ್ನು ಪಡೆದು ಆಕಾಶಕ್ಕೆ ತೆರಳಿದರು. ನಾರದರು ದೇವಲೋಕಕ್ಕೆ ತೆರಳಿದನಂತರ ವಾಲ್ಮೀಕಿಗಳು ಆಶ್ರಮದಲ್ಲಿ ಮುಹೂರ್ತಕಾಲವಿದ್ದು ಅನಂತರ ಮಾಧ್ಯಾಹ್ನಿಕ ಕ್ರಿಯೆಗಾಗಿ ಗಂಗಾನದಿಗೆ ಸಮೀಪದಲ್ಲಿದ್ದ ತಮಸಾನದಿಯ ತೀರಕ್ಕೆ ಹೊರಟರು. ತಮಸಾತೀರಕ್ಕೆ ಹೋಗಿ ನದಿಯ ನೀರು ಕೆಸರಿಲ್ಲದೇ ಸ್ವಚ್ಛ ವಾಗಿದ್ದುದನ್ನು ಕಂಡು ಪಕ್ಕದಲ್ಲಿಯೇ ನಿಂತಿದ್ದ ಭರದ್ವಾಜನೆಂಬ ಶಿಷ್ಯನಿಗೆ ಹೇಳಿದರು :

"ಭರದ್ವಾಜ! ಈ ತಮಸಾನದಿಯ ನೀರನ್ನು ನೋಡು. ಎಷ್ಟು ಸ್ವಚ್ಛ ವಾಗಿದೆ! ನೀರಿನ ಕೆಳಭಾಗದಲ್ಲಿ ಕೆಸರಿಲ್ಲ. ಬಹಳ ತಿಳಿಯಾಗಿದೆ. ರಮಣೀಯ ವಾಗಿದೆ. ಸುಳಿಗಳಾಗಲೀ, ಜಲಪಾತಗಳಾಗಲೀ ಇಲ್ಲದೇ ಈ ನದಿಯು ಪ್ರಸನ್ನವಾದ ಪ್ರವಾಹದಿಂದ ಕೂಡಿರುವುದು. ನಿಶ್ಚಯವಾಗಿಯೂ ಇದನ್ನು ನೋಡಿದರೆ–"ಸನ್ಮನುಷ್ಯಮನೋ ಯಥಾ–ಸತ್ಪುರುಷನ ಕೋಮಲ ವಾದ, ಕಲ್ಮಷರಹಿತವಾದ, ಅನುದ್ವಿಗ್ನವಾದ ಮನಸ್ಸಿನಂತೆಯೇ ಕಾಣು ತ್ತಿದೆ." ಮಗು! ಇಲ್ಲಿಯೇ ನನ್ನ ಕಮಂಡಲುವನ್ನಿಡು. ಸ್ನಾನಕ್ಕಾಗಿ ನಾರು

ಬಟ್ಟೆಯನ್ನು ಕೊಡು. ಈ ತೀರ್ಥದಲ್ಲಿಯೇ ನಾನು ಶ್ರೇಷ್ಠವಾದ ಮಾಧ್ಯಂದಿನ ಸ್ನಾನವನ್ನು ಮಾಡುತ್ತೇನೆ."

ಮಹಾತ್ಮರಾದ ವಾಲ್ಮೀಕಿಮಹರ್ಷಿಗಳಿಂದ ಹೀಗೆ ನಿರ್ದೇಶಿಸಲ್ಪಟ್ಟ, ಗುರುವಿನ ಆಜ್ಞಾಧಾರಕನಾದ ಭರದ್ವಾಜನು ಸ್ನಾನವಸ್ತ್ರವನ್ನು ಮಹರ್ಷಿಗಳಿಗೆ ಕೊಟ್ಟನು. ಜಿತೇಂದ್ರಿಯರಾದ ವಾಲ್ಮೀಕಿಮಹರ್ಷಿಗಳು ಶಿಷ್ಯನಿಂದ ಸ್ನಾನ ವಸ್ತ್ರವನ್ನು ತೆಗೆದುಕೊಂಡು ನದಿಯ ದಂಡೆಯಲ್ಲಿದ್ದ ವನದ ಸೊಬಗನ್ನು ನೋಡುತ್ತಾ ಸಂಚರಿಸುತ್ತಿದ್ದರು. ಹೀಗೆ ಸಂಚರಿಸುತ್ತಿರುವಾಗ ತಮಸಾ ನದಿಯ ತೀರಪ್ರದೇಶದಲ್ಲಿ–ಒಂದು ಕ್ಷಣವಾದರೂ ವಿರಹವನ್ನು ಅನುಭವಿಸಲು ಅಸಮರ್ಥವಾಗಿದ್ದ, ಆನಂದಾತಿಶಯದಿಂದ ಮನೋಹರವಾಗಿ ಧ್ವನಿಮಾಡುತ್ತಿದ್ದ ಕ್ರೌಂಚಪಕ್ಷಿಗಳ ಜೋಡಿಯನ್ನು (ಹೆಣ್ಣು-ಗಂಡು ಕೊಕ್ಕರೆಗಳನ್ನು) ಪೂಜ್ಯರಾದ ವಾಲ್ಮೀಕಿಗಳು ಕಂಡರು. ಆನಂದಾತಿಶಯ ದಿಂದ ನಲಿದಾಡುತ್ತಿದ್ದ ಪಕ್ಷಿಯುಗ್ಮವನ್ನು ಮಹರ್ಷಿಗಳು ನೋಡುತ್ತಿರು ವಾಗಲೇ–ಅವರು ನೋಡುತ್ತಿರುವರೆಂಬುದನ್ನೂ ಅಲಕ್ಷಿಸಿ–ಸರ್ವಪ್ರಾಣಿಗಳ ವಿಷಯದಲ್ಲಿಯೂ ವೈರಬುದ್ಧಿಯಿರುವ, ಪಾಪಕಾರ್ಯಮಾಡಲು ಸ್ವಲ್ಪವೂ ಹಿಂಜರಿಯದ ನಿಷಾದನೊಬ್ಬನು ಆ ಪಕ್ಷಿಯುಗ್ಮದಲ್ಲಿ ಗಂಡುಪಕ್ಷಿಗೆ ತನ್ನ ಬಾಣದಿಂದ ಗುರಿಯಿಟ್ಟು ಹೊಡೆದನು. ಪಕ್ಕದಲ್ಲೇ ಇದ್ದ ಹೆಣ್ಣುಪಕ್ಷಿಯು, ನಿಷಾದನು ತನ್ನ ಜೊತೆಯ ಗಂಡುಪಕ್ಷಿಗೆ ಹೊಡೆದುದನ್ನೂ ಮತ್ತು ಅದು ಒಡನೆಯೇ ಭೂಮಿಯ ಮೇಲೆ ಬಿದ್ದು ರಕ್ತದಿಂದ ತೋಯ್ದ ಶರೀರವುಳ್ಳದ್ದಾಗಿ ಮರಣಾವಸ್ಥೆಯಲ್ಲಿ ಸಂಕಟಪಡುತ್ತಾ ಅತ್ತಲಿತ್ತ ಧೂಳಿನಲ್ಲಿ ಹೊರ ಳಾಡುತ್ತಿದ್ದುದನ್ನೂ ಕಂಡು, ಕರುಣಾಜನಕವಾದ ಧ್ವನಿಯಲ್ಲಿ ರೋದನ ಮಾಡತೊಡಗಿತು. ಆ ಪಕ್ಷಿಗಳು ಯಾವಾಗಲೂ ಪರಸ್ಪರ ವಿರಹವೆಂಬುದನ್ನೇ ಕಾಣದೇ ಸಹಚಾರಿಗಳಾಗಿದ್ದುವು. ಆಗ ತನ್ನ ಸಂಗಾತಿಯಾದ, ತಾಮ್ರದಂತೆ ಕೆಂಪಾದ ತಲೆಯಿಂದ ಕೂಡಿದ್ದ, ರತಿಸುಖದಲ್ಲಿ ಪ್ರಮತ್ತವಾಗಿದ್ದ, ನಯನಮನೋಹರವಾದ ಗರಿಗಳಿಂದ ಕೂಡಿದ್ದ ತನ್ನ ಪ್ರಿಯನಿಂದ ಬೇರ್ಪಟ್ಟು ಮಾಡುತ್ತಿದ್ದ ಹೆಣ್ಣುಪಕ್ಷಿಯ ರೋದನವು ನಿಶ್ಚಯವಾಗಿಯೂ ಕರುಣಾಜನಕವಾಗಿದ್ದಿತು. ನಿಷಾದನಿಂದ ಕೆಡುಹಲ್ಪಟ್ಟು ಭೂಮಿಯ ಮೇಲೆ ಅತ್ತಲಿತ್ತ ಹೊರಳಾಡುತ್ತಾ ಪ್ರಾಣಬಿಡುವುದರಲ್ಲಿದ್ದ ಪಕ್ಷಿಯನ್ನು ನೋಡಿ

ಮಹಾತ್ಮರಾದ, ಧರ್ಮಾತ್ಮರಾದ ವಾಲ್ಮೀಕಿಮಹರ್ಷಿಗಳ ಹೃದಯದಲ್ಲಿ ಕರುಣಾರಸವು ಉದ್ಭೂತವಾಯಿತು. ಹೆಣ್ಣುಪಕ್ಷಿಯ ರೋದನವನ್ನು ಕೇಳಿ ಮಹರ್ಷಿಗಳ ಹೃದಯದಿಂದ ಕರುಣಾರಸವು ಉಕ್ಕಿ ಹರಿಯಿತು. ಕರುಣಾ ಮಯರಾದ ವಾಲ್ಮೀಕಿಗಳು ನಿಷಾದನ ಕಾರ್ಯವನ್ನು ಅಧರ್ಮಾಚರಣೆ ಯೆಂದು ನಿಶ್ಚಯಿಸಿದರು. ಮಹರ್ಷಿಗಳ ಅಂತಃಕರಣದಿಂದ ಉಕ್ಕಿಹರಿಯುತ್ತಿದ್ದ ಕರುಣಾರಸದೊಡನೆ ಶ್ಲೋಕರೂಪವಾದ ಈ ವಾಣಿಯು ವಾಲ್ಮೀಕಿಗಳ ಮುಖಾರವಿಂದದಿಂದ ಹೊರಟಿತು.

ಮಾ ನಿಷಾದ ಪ್ರತಿಷ್ಠಾಂ ತ್ವಮಗಮಃ ಶಾಶ್ವತೀಃ ಸಮಾಃ ।
ಯತ್ಕ್ರೌಂಚಮಿಥುನಾದೇಕಮವಧೀಃ ಕಾಮಮೋಹಿತಮ್ ॥೧೫॥

"ಎಲೈ ಬೇಡನೇ! ನೀನು ಬಹಳ ಕಾಲದವರೆಗೆ ಸ್ಥಿರವಾಗಿ ಬದುಕ

ಲಾರೆ. ಕಾಮೇಚ್ಛೆಯಿಂದ ಸುತ್ತಾಡುತ್ತಿದ್ದ ಕ್ರೌಂಚದಂಪತಿಗಳಲ್ಲಿ ಗಂಡು ಪಕ್ಷಿಯನ್ನು ಹೊಡೆದು ಕೊಂದಿರುವುದರಿಂದ ನಿನಗೂ ಬಾಳಿನಲ್ಲಿ ಬಹಳ ಕಾಲ ನೆಲೆ ಇಲ್ಲದಂತಾಗಲಿ." ಮರುಕ್ಷಣದಲ್ಲಿಯೇ–'ಮಾ ನಿಷಾದ'– ಎಂದು ಹೇಳಿದ ಮಹರ್ಷಿಗಳ ಹೃದಯದಲ್ಲಿ ಚಿಂತೆಯೂ ಉಂಟಾಯಿತು.

'ಈ ಪಕ್ಷಿಯ ನಿಮಿತ್ತವಾಗಿ ಶೋಕಪೀಡಿತನಾದ ನಾನು ಏನು ಹೇಳಿ ಬಿಟ್ಟೆನು? ತಪಸ್ವಿಯಾದ ನಾನೇಕೆ ತಪೋಹರಣಕ್ಕೆ ಕಾರಣವಾಗುವ ಈ ಶಾಪವನ್ನು ಕೊಟ್ಟೆ?'

ಈ ರೀತಿಯಾಗಿ ಯೋಚಿಸುತ್ತಾ ವಾಲ್ಮೀಕಿಗಳು ಚಿಂತಾಪರರಾದರು. ಕೆಲವು ನಿಮಿಷಗಳು ಹಾಗೆಯೇ ಚಿಂತಿಸುತ್ತಿದ್ದು ಕಡೆಗೆ ಮಹಾಪ್ರಾಜ್ಞರಾದ ವಾಲ್ಮೀಕಿಮಹರ್ಷಿಗಳು ಒಂದು ನಿರ್ಧಾರಕ್ಕೆ ಬಂದು ಶಿಷ್ಯನಾದ ಭರದ್ವಾಜ ನಿಗೆ ಹೇಳಿದರು :

"ಹೆಣ್ಣುಹಕ್ಕಿಯ ಸಂಕಟವನ್ನು ಕಂಡು ಶೋಕದಿಂದ ಪೀಡಿತನಾದ ನನ್ನ ಮುಖದಿಂದ ಹೊರಟ ಈ ವಾಣಿಯು ನಾಲ್ಕು ಪಾದಗಳಿಂದ ಕೂಡಿ, ಸಮಾಕ್ಷರವುಳ್ಳದ್ದಾಗಿ, ಪ್ರಾಸಬದ್ಧವಾಗಿ, ತಂತಿಯವಾದ್ಯಗಳೊಡನೆ ಹಾಡಲು ಲಯಬದ್ಧವಾಗಿರುವ ಶ್ಲೋಕವಾಗಿ ಪರಿಣಮಿಸಲಿ. ಕೇವಲ ಪದಜಾಲವಾಗ ದಿರಲಿ. ನನ್ನ ಮಾತು ಶ್ಲೋಕರೂಪವಾಗಿ ಪರಿಣಮಿಸಲಿ"–ಎಂದು ವಾಲ್ಮೀಕಿ ಗಳು ಹೇಳಲು ಅವರ ಮುಖಾರವಿಂದದಿಂದ ಹೊರಟ ಆ ಮಾತನ್ನು (ಮಾ ನಿಷಾದ....) ಶಿಷ್ಯನಾದ ಭರದ್ವಾಜನು ಬಾಯಿಪಾಠಮಾಡಿ ಹೇಳಿದನು. ಅದರಿಂದ ಗುರುಗಳಾದ ವಾಲ್ಮೀಕಿಗಳಿಗೆ ಬಹಳ ಸಂತೋಷವಾಯಿತು. ಅನಂತರದಲ್ಲಿ ವಾಲ್ಮೀಕಿಮಹರ್ಷಿಗಳು ತಮಸಾನದಿಯಲ್ಲಿ ಯಥಾವಿಧಿ ಯಾಗಿ ಸ್ನಾನಮಾಡಿ, ಶೋಕೋದ್ವೇಗದಿಂದ ಮುಖದಿಂದ ಹೊರಟ ಶ್ಲೋಕ ವನ್ನೇ ಪುನಃ ಪುನಃ ಹೇಳುತ್ತಾ, ಅದರ ಅರ್ಥಚಿಂತನೆಮಾಡುತ್ತಾ ಆಶ್ರಮಕ್ಕೆ ಹಿಂದಿರುಗಿದರು. ವಿನಯಸಂಪನ್ನನಾದ ಭರದ್ವಾಜನೂ ಜಲಪೂರ್ಣವಾದ ಕಮಂಡಲುವನ್ನು ತೆಗೆದುಕೊಂಡು ವಾಲ್ಮೀಕಿಮಹರ್ಷಿಗಳನ್ನು ಅನುಸರಿಸಿ ದನು. ಧರ್ಮವಿದರಾದ ವಾಲ್ಮೀಕಿಮಹರ್ಷಿಗಳು ಶಿಷ್ಯಸಮೇತರಾಗಿ ಆಶ್ರಮವನ್ನು ಪ್ರವೇಶಿಸಿ, ಸುಖಾಸನದಲ್ಲಿ ಕುಳಿತು ಪ್ರಯತ್ನವಿಲ್ಲದೆಯೇ

ತಮ್ಮ ಮುಖದಿಂದ ಹೊರಟ–'ಮಾ ನಿಷಾದ...' ಎಂಬ ಶ್ಲೋಕದ ವಿಷಯವನ್ನು ಕುರಿತು ಧ್ಯಾನಮಾಡುತ್ತಾ, ಹಾಗೆಯೇ ಇತರ ಪುರಾಣಕಥೆ

ಗಳನ್ನೂ ಸ್ಮರಿಸಿ ಹೇಳಿಕೊಳ್ಳುತ್ತಿದ್ದರು. ಆ ವೇಳೆಗೆ ಸರಿಯಾಗಿ ಲೋಕ ಸೃಷ್ಟಿಗೆ ಕಾರಣನಾದ ಬ್ರಹ್ಮನು ಋಷಿಪುಂಗವರಾದ ವಾಲ್ಮೀಕಿಮಹರ್ಷಿಗಳನ್ನು ನೋಡುವ ಸಲುವಾಗಿ ಆಶ್ರಮಕ್ಕೆ ಬಂದನು. ವಾಲ್ಮೀಕಿಗಳು ಬ್ರಹ್ಮನನ್ನು ನೋಡಿ ಒಡನೆಯೇ ಮೇಲೆದ್ದರು. ಅವರ ಬಾಯಿಂದ ಮಾತುಗಳೇ ಹೊರಡಲಿಲ್ಲ. ಬದ್ಧಾಂಜಲಿಗಳಾಗಿ ನಮಸ್ಕರಿಸಿ, ವಿಸ್ಮಯದಿಂದ ಕೂಡಿದ ಮುಖಾರವಿಂದವುಳ್ಳವರಾಗಿ ಬ್ರಹ್ಮನ ಸಮೀಪದಲ್ಲಿ ನಿಂತುಕೊಂಡರು. ಮುಗುಳ್ನಗೆಯಿಂದ ವಿಧಿಪೂರ್ವಕವಾಗಿ ಕುಶಲಪ್ರಶ್ನೆಮಾಡಿ ಪಾದ್ಯ-ಅರ್ಘ್ಯ-ನಮಸ್ಕಾರಗಳನ್ನು ಸಮರ್ಪಿಸಿ ಅವನನ್ನು ಪೂಜಿಸಿದರು.

ಅನಂತರ ಭಗವಂತನಾದ ಬ್ರಹ್ಮನು ವಾಲ್ಮೀಕಿಗಳಿಂದ ಪೂಜಾರೂಪವಾಗಿ ಸಮರ್ಪಿತವಾದ, ಶ್ರೇಷ್ಠವಾದ ಆಸನದಲ್ಲಿ ಕುಳಿತು ವಾಲ್ಮೀಕಿಮಹರ್ಷಿ ಗಳಿಗೂ ಕುಳಿತುಕೊಳ್ಳಲು ನಿರ್ದೇಶಿಸಿದನು. ಬ್ರಹ್ಮನ ಅನುಜ್ಞೆಯನ್ನು ಪಡೆದು ವಾಲ್ಮೀಕಿಮಹರ್ಷಿಗಳು ಆಸನವನ್ನು ಅಲಂಕರಿಸಿದರು. ಸಾಕ್ಷಾತ್ ಲೋಕಪಿತಾಮಹನಾದ ಚತುರ್ಮುಖಬ್ರಹ್ಮನು ಮುಂದೆಯೇ ಕುಳಿತಿದ್ದರೂ ವಾಲ್ಮೀಕಿಮಹರ್ಷಿಗಳು ಕ್ರೌಂಚಪಕ್ಷಿಯ ವಧೆಯನ್ನೂ ಮತ್ತು ತಮ್ಮ ಬಾಯಿಂದ ಬಂದ "ಮಾ ನಿಷಾದ..." ಶ್ಲೋಕವನ್ನೂ ಕುರಿತು ಚಿಂತಿಸುತ್ತಲೇ ಇದ್ದರು.

"ವೈರದಿಂದ ಕ್ರೌಂಚಪಕ್ಷಿಯನ್ನು ಹಿಡಿಯಲು ಯತ್ನಿಸಿದ, ಪಾಪಾತ್ಮನಾದ ವ್ಯಾಧನು ನಿಶ್ಚಯವಾಗಿಯೂ ಕುತ್ಸಿತಕಾರ್ಯವನ್ನು ಮಾಡಿದನು. ಕ್ರೌಂಚಪಕ್ಷಿಗಳು ಮನೋಹರವಾಗಿ ಧ್ವನಿಮಾಡುತ್ತಿದ್ದುವು. ರತಿಸುಖವನ್ನು ಅನುಭವಿಸುತ್ತಿದ್ದುವು. ಅಂತಹ ಸ್ಥಿತಿಯಲ್ಲಿದ್ದಾಗ ನಿಷ್ಕಾರಣವಾಗಿ ಆ ದುಷ್ಕರ್ಮಿಯಾದ ವ್ಯಾಧನು ಗಂಡುಪಕ್ಷಿಯನ್ನು ಹೊಡೆದುಕೊಂದನು."

ತಮಸಾನದಿಯ ತೀರದಲ್ಲಿ ನೋಡಿದ ದೃಶ್ಯಗಳೆಲ್ಲವೂ ತರಂಗಗಳಂತೆ ಒಂದರ ಮೇಲೊಂದು ವಾಲ್ಮೀಕಿಮಹರ್ಷಿಗಳ ಮನೋಭೂಮಿಯಲ್ಲಿ ಕಾಣ ತೊಡಗಿದುವು. ವ್ಯಾಧನು ಗಂಡುಪಕ್ಷಿಯನ್ನು ಕೊಂದ ದೃಶ್ಯವನ್ನು ಕಂಡೊಡನೆಯೇ ಹೆಣ್ಣುಪಕ್ಷಿಯು ಆರ್ತನಾದಮಾಡಿ ಅಳುತ್ತಿದ್ದ ದೃಶ್ಯವು ಅಲ್ಲಿ ಕಂಡಿತು. ಮಹರ್ಷಿಗಳ ಹೃದಯವು ಪುನಃ ಶೋಕದಿಂದ ಉದ್ವಿಗ್ನವಾಯಿತು.

ಮಾ ನಿಷಾದ ಪ್ರತಿಷ್ಠಾಂ ತ್ವಮಗಮಃ ಶಾಶ್ವತೀಃ ಸಮಾಃ ।
ಯತ್ಕ್ರೌಂಚಮಿಥುನಾದೇಕಮವಧೀಃ ಕಾಮಮೋಹಿತಮ್ ॥

ಎಂದು ಅಂತರ್ಗತವಾದ ಮನಸ್ಸಿನಿಂದಲೇ ಮಹರ್ಷಿಗಳು ಹೇಳುತ್ತಿದ್ದರು. ಬ್ರಹ್ಮನು ವಾಲ್ಮೀಕಿಮಹರ್ಷಿಗಳ ಮನೋಗತವಾದ ವಿಷಯವನ್ನು ತಿಳಿದು ನಸುನಕ್ಕು ವಾಲ್ಮೀಕಿಮಹರ್ಷಿಗಳಿಗೆ ಹೀಗೆ ಹೇಳಿದನು :

ಶ್ಲೋಕ ಏವ ತ್ವಯಾ ಬದ್ಧೋ ನಾತ್ರ ಕಾರ್ಯಾ ವಿಚಾರಣಾ ॥೩೦॥

ಮಚ್ಛನ್ದಾದೇವ ತೇ ಬ್ರಹ್ಮನ್ಪ್ರವೃತ್ತೇಯಂ ಸರಸ್ವತೀ ।
ರಾಮಸ್ಯ ಚರಿತಂ ಕೃತ್ಸ್ನಂ ಕುರು ತ್ವಮೃಷಿಸತ್ತಮ ॥೩೧॥

"ಬ್ರಾಹ್ಮಣೋತ್ತಮ! ನಿನ್ನಿಂದ ಶ್ಲೋಕವೇ ರಚಿತವಾಗಿದೆ. ನಿನ್ನ ಮುಖಾರವಿಂದದಿಂದ ಪ್ರಯತ್ನವಿಲ್ಲದೆಯೇ ಹೊರಟ ಪದಜಾಲವು ಶ್ಲೋಕವಾಗಿಯೇ ಇರುವುದು. ಇದರಲ್ಲಿ ಸಂಶಯಪಡುವ ಕಾರಣವಿಲ್ಲ. ಈ ವಿಷಯವಾಗಿ ಚಿಂತಿಸಲೂ ಬೇಡ. ವಾಲ್ಮೀಕಿಮಹರ್ಷಿಯೇ! ನನ್ನ ಇಚ್ಛೆಯಿಂದಲೇ–ನನ್ನ ಅನುಗ್ರಹದಿಂದಲೇ 'ಮಾ ನಿಷಾದ' ವೆಂಬ ಶ್ಲೋಕರೂಪವಾದ ವಾಣಿಯು ನಿನ್ನ ಮುಖಾರವಿಂದದಿಂದ ಹೊರಹೊಮ್ಮಿದೆ. ಇದೇ ವಿಧವಾದ, ತಂತ್ರೀಲಯದಿಂದ ಕೂಡಿರುವ, ನಾಲ್ಕು ಪಾದಗಳುಳ್ಳ ಶ್ಲೋಕಗಳಿಂದ ನೀನು ರಾಮನ ಚರಿತ್ರೆಯನ್ನು ರಚಿಸು. ಧರ್ಮಾತ್ಮನಾದ, ಸಕಲಕಲ್ಯಾಣಗುಣಗಳಿಂದ ಕೂಡಿರುವ, ಶಾಸ್ತ್ರವಿಶಾರದನಾದ, ಪರಾಕ್ರಮಿಯಾದ ಶ್ರೀರಾಮನ ಚರಿತ್ರೆಯನ್ನು ನೀನು ನಾರದರಿಂದ ಹೇಗೆ ಕೇಳಿರುವೆಯೋ ಅದೇ ಕ್ರಮದಲ್ಲಿ ರಚಿಸುವವನಾಗು. ಲಕ್ಷ್ಮಣಸಮೇತನಾದ ಆ ಶ್ರೀರಾಮನ ವಿಷಯವಾಗಿ ಎಲ್ಲರಿಗೂ ತಿಳಿದಿರುವ ವಿಷಯಗಳು ಮತ್ತು ಯಾರಿಗೂ ತಿಳಿಯದಿರುವ ರಹಸ್ಯ ವಿಷಯಗಳು, ರಾವಣಾದಿರಾಕ್ಷಸರ ವಿಷಯವಾಗಿ ಸರ್ವರಿಗೂ ತಿಳಿದಿರುವ ವಿಷಯಗಳು ಮತ್ತು ಯಾರಿಗೂ ತಿಳಿಯದಿರುವ ರಹಸ್ಯವಿಷಯಗಳು, ವೈದೇಹಿಯ ವಿಷಯವಾಗಿ ಎಲ್ಲರಿಗೂ ತಿಳಿದಿರುವ ಮತ್ತು ತಿಳಿಯದ ರಹಸ್ಯವಿಷಯಗಳೂ ನಿನಗೆ ವೇದ್ಯವಾಗುತ್ತವೆ. ನಡೆದ ವೃತ್ತಾಂತಗಳೆಲ್ಲವೂ ನಿನಗೆ ಅಂಗೈಯಿನ ನೆಲ್ಲಿಕಾಯಿಯಂತೆ ಗೋಚರವಾಗುತ್ತವೆ.

ನ ತೇ ವಾಗನೃತಾ ಕಾವ್ಯೇ ಕಾಚಿದತ್ರ ಭವಿಷ್ಯತಿ ।
ಕುರು ರಾಮಕಥಾಂ ಪುಣ್ಯಾಂ ಶ್ಲೋಕಬದ್ಧಾಂ ಮನೋರಮಾಮ್ ॥

ಯಾವತ್ ಸ್ಥಾಸ್ಯನ್ತಿ ಗಿರಯಃ ಸರಿತಶ್ಚ ಮಹೀತಲೇ ।
ತಾವದ್ರಾಮಾಯಣಕಥಾ ಲೋಕೇಷು ಪ್ರಚರಿಷ್ಯತಿ ॥೩೬॥

ನೀನು ರಚಿಸಲಿರುವ ರಾಮಾಯಣಕಾವ್ಯದಲ್ಲಿ ಅಸತ್ಯವು ಸ್ವಲ್ಪವಾದರೂ ಇರುವ ಸಾಧ್ಯತೆಯೇ ಇಲ್ಲ. ಆದುದರಿಂದ ಪುಣ್ಯತಮವಾದ, ಮನೋಹರವಾದ, ಶ್ಲೋಕಬದ್ಧವಾದ ಶ್ರೀರಾಮನ ಕಥೆಯನ್ನು ರಚಿಸು.

ಇದರಿಂದ ನಿನಗೆ ಮಹಾಯಶಸ್ಸು ಲಭಿಸುವುದು. ಎಂದಿನವರೆಗೆ ಈ ಭೂಮಿಯಲ್ಲಿ ಪರ್ವತ-ಗಿರಿ-ದುರ್ಗಗಳೂ, ನದೀ-ನದ-ಸರೋವರಗಳೂ ಇರುವುವೋ ಅಂದಿನವರೆಗೂ ನೀನು ರಚಿಸುವ ರಾಮಾಯಣಕಥೆಯು ಸಮಸ್ತಲೋಕಗಳಲ್ಲಿಯೂ ಪ್ರಚಾರದಲ್ಲಿರುವುದು.

ಯಾವದ್ರಾಮಾಯಣಕಥಾ ತ್ವತ್ಕೃತಾ ಪ್ರಚರಿಷ್ಯತಿ ।
ತಾವದೂರ್ಧ್ವಮಧಶ್ಚ ತ್ವಂ ಮಲ್ಲೋಕೇಷು ನಿವತ್ಸ್ಯಸಿ ॥೩೭॥

ಎಂದಿನವರೆಗೆ ನಿನ್ನಿಂದ ರಚಿತವಾದ ರಾಮಾಯಣವು ಪ್ರಚಾರದಲ್ಲಿರುವುದೋ–ಅಂದಿನವರೆಗೂ ನೀನು ಮೇಲುಗಡೆ ಮತ್ತು ಕೆಳಗಡೆ ಇರುವ ನನ್ನ ಎಲ್ಲ ಉತ್ತಮಲೋಕಗಳಲ್ಲಿ ವಾಸಮಾಡಲು ಅರ್ಹನಾಗುವೆ.” ಹೀಗೆ ಹೇಳಿ ಬ್ರಹ್ಮದೇವನು ಕುಳಿತಿದ್ದಲ್ಲಿಯೇ ಅಂತರ್ಧಾನಹೊಂದಿದನು. ಸಶಿಷ್ಯ ರಾದ ವಾಲ್ಮೀಕಿಮಹರ್ಷಿಗಳು ಬ್ರಹ್ಮನ ದರ್ಶನದಿಂದಲೂ ಮತ್ತು ಬ್ರಹ್ಮನು ಹೇಳಿದ ಮಾತಿನಿಂದಲೂ ವಿಸ್ಮಯಗೊಂಡರು. ಶಿಷ್ಯರೆಲ್ಲರೂ ಪ್ರೀತರಾಗಿ ‘ಮಾ ನಿಷಾದ’ ವೆಂಬ ಶ್ಲೋಕವನ್ನು ಪುನಃ ಪುನಃ ಹೇಳಿದರು. ಆ ಶ್ಲೋಕವನ್ನು ಉಚ್ಚರಿಸುತ್ತಿದ್ದಂತೆಲ್ಲಾ ಅವರಿಗೆ ಪುನಃ ಪುನಃ ಕೇಳುವ ಆಸಕ್ತಿಯುಂಟಾಗುತ್ತಿದ್ದಿತು. ಅವರೆಲ್ಲರೂ ನಡೆದ ವೃತ್ತಾಂತವನ್ನು ನೆನೆದು ವಿಸ್ಮಿತರಾಗಿ ಹೇಳಿದರು.

ಸಮಾಕ್ಷರೈಶ್ಚತುರ್ಭಿರ್ಯಃ ಪಾದೈರ್ಗೀತೋ ಮಹರ್ಷಿಣಾ ।
ಸೋಽನುವ್ಯಾಹರಣಾದ್ಭೂಯಃ ಶೋಕಃ ಶ್ಲೋಕತ್ವಮಾಗತಃ ॥೪೦॥

“ನಮ್ಮ ಗುರುಗಳಾದ ವಾಲ್ಮೀಕಿಗಳು ಕ್ರೌಂಚಪಕ್ಷಿಯು ಸತ್ತುಹೋದ ದುಃಖದಿಂದ–ಸಮಾನಾಕ್ಷರಗಳುಳ್ಳ ನಾಲ್ಕು ಪಾದಗಳಿಂದ ಕೂಡಿದ ಯಾವ ಶೋಕವಾಕ್ಯವನ್ನು ಹೇಳಿದರೋ ಅದು ಬಾರಿ-ಬಾರಿಗೂ ಹೇಳುತ್ತಿದ್ದಂತೆ ಶ್ಲೋಕವಾಗಿ ಪರಿಣಮಿಸಿತು.”

---

* ಪುನಃ ಪುನಃ ಶ್ಲೋಕ್ಯಮಾನತ್ವಾತ್ ಶ್ಲೋಕತ್ವಂ = ಬಾರಿ-ಬಾರಿಗೂ ಕೀರ್ತನ ಮಾಡುವುದರಿಂದಲೇ ಶ್ಲೋಕತ್ವವುಂಟಾಗುತ್ತದೆ. ಶ್ಲೋಕ–ಎಂಬ ಪದಕ್ಕೆ ಕೀರ್ತಿಸಲ್ಪಟ್ಟಿದ್ದು ; ಯಶಸ್ಸು–ಎಂದೂ ಅರ್ಥವಾಗುತ್ತದೆ. ಪದ್ಯೇ ಯಶಸಿ ಚ ಶ್ಲೋಕಃ

ಶಿಷ್ಯರು ಹೇಳುತ್ತಿದ್ದ "ಮಾ ನಿಷಾದ" ಶ್ಲೋಕವನ್ನು ಬಾರಿ-ಬಾರಿಗೂ ಕೇಳಿ ಪರಮಾತ್ಮಚಿಂತಕರಾದ ವಾಲ್ಮೀಕಿಗಳಲ್ಲಿ ರಾಮಾಯಣಕಾವ್ಯವನ್ನು ಇದೇ ವಿಧವಾದ ಶ್ಲೋಕಗಳಿಂದ ರಚಿಸಬೇಕೆಂಬ ಬುದ್ಧಿಯುಂಟಾಯಿತು. ಕೀರ್ತಿಮಂತರಾದ ಉದಾರವಾದ ಬುದ್ಧಿಯುಳ್ಳ ವಾಲ್ಮೀಕಿಮುನಿಗಳು ಶ್ರೀರಾಮನ ಯಶೋದಾಯಕವಾದ ಕಾವ್ಯವನ್ನು–ಶ್ರೇಷ್ಠವೃತ್ತಗಳಿಂದಲೂ, ಒಳಗೂ-ಹೊರಗೂ ಸ್ಫುಟವಾಗಿ ತೋರುವ ದ್ರಾಕ್ಷಾಪಾಕವೆನಿಸುವ ರಸ ಸಂವಿಧಾನದಿಂದಲೂ, ರಸವ್ಯಂಜಕಗಳಾದ ಪದಗಳ ಜೋಡಣೆಯಿಂದಲೂ, ಓದುಗರ ಮನಸ್ಸಿಗೆ ರಮ್ಯವಾಗಿರುವುದಾಗಿಯೂ ಇರುವ, ಸಮಾಕ್ಷರಗಳಿಂದ ಕೂಡಿರುವ ನೂರಾರು ಶ್ಲೋಕಗಳಿಂದ ರಚಿಸಿದರು. ಶಾಸ್ತ್ರಾನುರೂಪವಾಗಿ ರುವ ಸಮಾಸಗಳಿಂದಲೂ, ಸಂಧಿಗಳಿಂದಲೂ, ಪದಗಳ ವ್ಯುತ್ಪತ್ತಿಗಳಿಂದಲೂ ಕೂಡಿರುವ, ಸಮವೆಂಬ ಲಕ್ಷಣದಿಂದಲೂ–ಮಾಧುರ್ಯ ಲಕ್ಷಣದಿಂದಲೂ–ಅರ್ಥವ್ಯಕ್ತಿಯೆಂಬ ಲಕ್ಷಣದಿಂದಲೂ ಕೂಡಿದ ವಾಕ್ಯ ಗಳಿಂದ ಬದ್ಧವಾದ, ವಾಲ್ಮೀಕಿಮಹರ್ಷಿಪ್ರಣೀತವಾದ, ರಾವಣನ ವಧೆ ಯಿಂದ ಕೂಡಿರುವ, ರಘುಶ್ರೇಷ್ಠನಾದ ಶ್ರೀರಾಮನ ಚರಿತ್ರೆಯನ್ನು ಆಲಿಸಿರಿ.*

೨ನೆಯ ಸರ್ಗವು ಮುಗಿಯಿತು.

ಬಾಲಕಾಂಡ ೩ನೆಯ ಸರ್ಗ

ವಾಲ್ಮೀಕಿಮಹರ್ಷಿಗಳಿಂದ ರಚಿಸಲ್ಪಟ್ಟ ರಾಮಾಯಣಕಾವ್ಯದ ಸಂಕ್ಷೇಪ ನಿರೂಪಣೆ

ಶ್ರುತ್ವಾ ವಸ್ತು ಸಮಗ್ರಂ ತದ್ಧರ್ಮಾತ್ಮಾ ಧರ್ಮಸಂಹಿತಮ್ ।
ವ್ಯಕ್ತಮನ್ವೇಷತೇ ಭೂಯೋ ಯದ್ವೃತ್ತಂ ತಸ್ಯ ಧೀಮತಃ ॥೧॥

ಧರ್ಮಾತ್ಮರಾದ ವಾಲ್ಮೀಕಿಮಹರ್ಷಿಗಳು ಧರ್ಮಸಹಿತವಾದ, ಸಮಗ್ರ ವಾಗಿ ನಾರದರಿಂದ ಹೇಳಲ್ಪಟ್ಟ ಧೀಮಂತನಾದ ರಾಮನ ಚರಿತ್ರೆಯನ್ನು

---

* ಸಮಲಕ್ಷಣ = 'ಸಮಂ ಬಂಧೇಷ್ವವಿಷಮಂ' ಮಾಧುರ್ಯಲಕ್ಷಣ = 'ಮಧುರಂ ರಸವದ್ವಾಚಿ ವಸ್ತುನ್ಯಪಿ ರಸಸ್ಥಿತಿಃ । ಯೇನ ಮಾದ್ಯಂತಿ ಧೀಮಂತೋ-ಮಧುನೇವ ಮಧುವ್ರತಾಃ ॥' ಅರ್ಥವ್ಯಕ್ತಿಲಕ್ಷಣಂ = 'ಅರ್ಥವ್ಯಕ್ತಿರಮೇಯತ್ವಮರ್ಥಸ್ಯ'

ಕೇಳಿ–ಅನಂತರದಲ್ಲಿ ಅದನ್ನೇ ಪುನಃ ಪುನಃ ಪರ್ಯಾಲೋಚಿಸತೊಡಗಿದರು. ಮಹರ್ಷಿಗಳಾದ ವಾಲ್ಮೀಕಿಗಳು ಶುದ್ಧಾಚಮನಮಾಡಿ, ಪೂರ್ವದಿಕ್ಕಿಗೆ ಅಗ್ರ ಗಳಿರುವ ದರ್ಭಾಸನದ ಮೇಲೆ ಯಥಾಶಾಸ್ತ್ರವಾಗಿ, ಪದ್ಮಾಸನದಲ್ಲಿ ಬದ್ಧಾಂಜಲಿಗಳಾಗಿ ಯೋಗಾರೂಢರಾಗಿ ಕುಳಿತು, ರಾಮನ ಕಥೆಯ ಸರಣಿ ಯನ್ನು ನೆನೆದರು. ನಾರದರು ಹೇಳಿದುದು ಬೀಜರೂಪವಾದ ರಾಮಾಯಣ. ಅದನ್ನೇ ಮನದಲ್ಲಿ ನೆನೆಯುತ್ತಾ ಅದರ ವಿವರಣೆಯು ಹೇಗೆಂಬುದನ್ನು ಯೋಗಮಾರ್ಗದಿಂದ ತಿಳಿದರು. ರಾಮ-ಲಕ್ಷ್ಮಣ-ಸೀತೆಯರು ; ಭಾರ್ಯೆ ಯರಿಂದ ಮತ್ತು ರಾಷ್ಟ್ರದಿಂದ ಕೂಡಿದ ರಾಜನಾದ ದಶರಥ ; ಅವರಿಗೆ ಏನೇನು ಒದಗಿತೋ–ಅವೆಲ್ಲವನ್ನೂ ವಿಶದವಾಗಿ ವಾಲ್ಮೀಕಿಮಹರ್ಷಿಗಳು ತಿಳಿದರು. ರಾಮಾದಿಗಳ ನಗು, ಭಾಷಣ, ಪ್ರಯಾಣ, ಯುದ್ಧಾದಿಕಾರ್ಯ–- ಇವುಗಳೆಲ್ಲವನ್ನೂ ಬ್ರಹ್ಮನ ವರಪ್ರಸಾದದಿಂದಾಗಿ ವಾಲ್ಮೀಕಿಗಳು ತಿಳಿದು ಕೊಂಡರು. ಸೀತಾ-ಲಕ್ಷ್ಮಣರೊಡನೆ ರಾಮನು ಅರಣ್ಯದಲ್ಲಿ ಸಂಚರಿಸುತ್ತಿದ್ದಾಗ ಸತ್ಯಸಂಧನಾದ ರಾಮನಿಗೆ ಒದಗಿಬಂದುದನ್ನೆಲ್ಲಾ ವಾಲ್ಮೀಕಿಗಳು ಬ್ರಹ್ಮನ ವರಪ್ರಸಾದದಿಂದ ತಿಳಿದುಕೊಂಡರು. ಈ ರೀತಿಯಲ್ಲಿ ಬ್ರಹ್ಮನ ವರಪ್ರಸಾದಲಬ್ಧವಾದ ಯೋಗಬಲದಿಂದ ರಾಮನು ಹುಟ್ಟುವ ಮೊದಲಿನ ಮತ್ತು ಹುಟ್ಟಿದ ನಂತರದ ವಿಷಯಗಳೆಲ್ಲವನ್ನೂ ವಾಲ್ಮೀಕಿಮಹರ್ಷಿಗಳು ಅಂಗೈಯಲ್ಲಿರುವ ನೆಲ್ಲಿಯಕಾಯಿಯಂತೆ ಸ್ಪಷ್ಟವಾಗಿ ತಿಳಿದುಕೊಂಡರು. ಮಹಾತೇಜಸ್ವಿಗಳಾದ ವಾಲ್ಮೀಕಿಮಹರ್ಷಿಗಳು ಅಭಿರಾಮನಾದ ಶ್ರೀರಾಮನ ವೃತ್ತಾಂತವೆಲ್ಲವನ್ನೂ ಯೋಗಧರ್ಮದಿಂದ ತಿಳಿದು ಕಾಮಾರ್ಥಗುಣ ಗಳಿಂದಲೂ–ಧರ್ಮಾರ್ಥಗುಣಗಳಿಂದಲೂ ಯುಕ್ತವಾದ, ಸಮುದ್ರದಂತೆ ಅನೇಕ ತತ್ತ್ವಗಳೆಂಬ ರತ್ನಗಳಿಂದ ಪೂರ್ಣವಾದ, ಕಿವಿಗಿಂಪಾದ ಶಬ್ದ ಮಾಧುರ್ಯದಿಂದ ಕೂಡಿದ ಮತ್ತು ಅರ್ಥಸೌಷ್ಠವದಿಂದ ಚಿತ್ತಾಕರ್ಷಕ ವಾದ ರಘುವಂಶದ ಚರಿತ್ರೆಯನ್ನು ನಾರದರು ಯಾವ ಕ್ರಮದಲ್ಲಿ ಹೇಳಿ ದ್ದರೋ ಅದೇ ಕ್ರಮದಲ್ಲಿ ರಚಿಸಿದರು. ರಾಮನ ಜನ್ಮ; ತಾಟಕಾದಿಗಳ ವಿಷಯದಲ್ಲಿ ರಾಮನ ಪರಾಕ್ರಮ ; ಜನಾನುರಾಗ ಮತ್ತು ಜನರಿಗೆ ರಾಮನ ವಿಷಯದಲ್ಲಿದ್ದ ಪ್ರೀತಿ ; ರಾಮನ ಸರ್ವಾಪರಾಧಸಹಿಷ್ಣುತೆ ; ಸೌಮ್ಯಸ್ವಭಾವ; ಸತ್ಯಪ್ರಿಯತೆ ; ವಿಶ್ವಾಮಿತ್ರರಿಂದ ಶ್ರೀರಾಮನು ಕೇಳಿದ ಚಿತ್ರ-ವಿಚಿತ್ರವಾದ

ಉಪಕಥೆಗಳು ; ಜಾನಕಿಯ ವಿವಾಹ ; ವಿವಾಹಕ್ಕೆ ಪೂರ್ವಭಾವಿಯಾಗಿ ಅವನು ಮಾಡಿದ ಶಿವಧನುಸ್ಸಿನ ಭಂಗ ; ವಿವಾಹಾನಂತರದಲ್ಲಿ ನಡೆದ ರಾಮ ಮತ್ತು ಪರಶುರಾಮರ ವಿವಾದ ; ಶ್ರೀರಾಮನ ವಿಶೇಷಗುಣಗಳು ; ಅವನ ಗುಣಾತಿಶಯಗಳಿಂದಾಗಿ ರಾಮನಿಗೆ ಯೌವರಾಜ್ಯದಲ್ಲಿ ಪಟ್ಟಾಭಿಷೇಕಕ್ಕೆ ದಶರಥನ ನಿಶ್ಚಯ ; ಆ ಸಮಯದಲ್ಲಿ ಮಂಥರೆಯ ಕೃತ್ರಿಮದಿಂದಾಗಿ ಕೈಕೇಯಿಯು–'ಶ್ರೀರಾಮನಿಗೆ ವನವಾಸ, ಭರತನಿಗೆ ಪಟ್ಟಾಭಿಷೇಕ'– ಎಂಬ ಎರಡು ವರಗಳನ್ನು ಕೊಡುವಂತೆ ದಶರಥನನ್ನು ಕೇಳಿದುದು ; ಅದರಿಂದಾಗಿ ಪಟ್ಟಾಭಿಷೇಕಕ್ಕೆ ತಡೆ ; ರಾಮನ ವನವಾಸ ; ಅದರಿಂದ ದಶರಥನಿಗುಂಟಾದ ಪುತ್ರಶೋಕ ; ಅದರಿಂದಲೇ ದಶರಥನ ಪರಲೋಕ ಯಾತ್ರೆ ; ಪ್ರಜೆಗಳ ಪರಿತಾಪ ; ಶ್ರೀರಾಮನು ತನ್ನನ್ನು ಹಿಂಬಾಲಿಸಿದ ಪ್ರಜೆಗಳನ್ನು ಬಿಟ್ಟು ಮುಂದೆ ಪ್ರಯಾಣಮಾಡಿದುದು ; ಗುಹನೊಡನೆ ರಾಮನು ಮಾಡಿದ ಸಂಭಾಷಣೆ ; ಸುಮಂತ್ರನ ಹಿಂದಿರುಗುವಿಕೆ ; ಗಂಗಾ ತರಣ ; ಭರದ್ವಾಜರ ದರ್ಶನ ; ಭರದ್ವಾಜರ ಅನುಜ್ಞೆಯಂತೆ ಚಿತ್ರಕೂಟ ಪರ್ವತಕ್ಕೆ ಗಮನ ; ಚಿತ್ರಕೂಟದಲ್ಲಿ ಆಶ್ರಮನಿರ್ಮಾಣ ; ಆಶ್ರಮವಾಸ ; ದಶರಥನ ಅವಸಾನಾನಂತರ ವಸಿಷ್ಠಾದಿಗಳೊಡನೆ ಭರತನ ಆಗಮನ ; ರಾಮನನ್ನು ಒಲಿಸಲು ಭರತನ ಪ್ರಯತ್ನ ; ತಂದೆಗೆ ತರ್ಪಣಾದಿಗಳು ; ಪಾದುಕಾಪ್ರದಾನ ; ಭರತನು ಪಾದುಕಾಸಮೇತನಾಗಿ ನಂದಿಗ್ರಾಮಕ್ಕೆ ಬಂದು ಪಾದುಕಾಪಟ್ಟಾಭಿಷೇಕವನ್ನು ಮಾಡಿದುದು ; ಮುಂದೆ ರಾಮನ ದಂಡಕಾ ರಣ್ಯಪ್ರವೇಶ ; ವಿರಾಧನ ವಧೆ ; ಸುತೀಕ್ಷ್ಣ-ಶರಭಂಗರ ದರ್ಶನ ; ಅನ ಸೂಯೆಗೆ ಸೀತೆಯ ನಮಸ್ಕಾರ ; ಚಂದನದ ಅರ್ಪಣೆ ; ಅಗಸ್ತ್ಯದರ್ಶನ ; ಧನುಃಸ್ವೀಕರಣ ; ಪಂಚವಟೀಗಮನ ; ಶೂರ್ಪಣಖೆಯ ದರ್ಶನ ; ಅವ ಳೊಡನೆ ಸಂವಾದ ಮತ್ತು ವಿರೂಪಕರಣ ; ಖರ-ತ್ರಿಶಿರಸ್ಸುಗಳ ವಧೆ ; ಅದ ರಿಂದಾಗಿ ಲಂಕೆಯಿಂದ ರಾವಣನ ನಿರ್ಗಮನ ; ಪ್ರತೀಕಾರೋದ್ಯೋಗ ; ಮಾರೀಚವಧೆ; ವೈದೇಹೀಹರಣ ; ಅದರಿಂದ ರಾಘವನಿಗುಂಟಾದ ಶೋಕ ಮತ್ತು ಅವನ ವಿಲಾಪ ; ಜಟಾಯುಮರಣ ; ಕಬಂಧದರ್ಶನ ಮತ್ತು ವಧೆ; ಪಂಪಾದರ್ಶನ ; ಶಬರೀದರ್ಶನ ; ಶಬರಿಯು ಸಮರ್ಪಿಸಿದ ಫಲಸ್ವೀಕರಣ ; ಪಂಪಾತೀರದಲ್ಲಿ ಮಹಾತ್ಮನಾದ ರಾಮನು ಸೀತೆಯನ್ನು

ಸ್ಮರಿಸಿ ಮಾಡಿದ ವಿಲಾಪ ; ಹನೂಮದ್ದರ್ಶನ ; ಋಷ್ಯಮೂಕಗಮನ ; ಸುಗ್ರೀವಸಮಾಗಮ ; ರಾಮನು ಸುಗ್ರೀವನಿಗೆ ತನ್ನ ಪರಾಕ್ರಮದ ವಿಷಯದಲ್ಲಿ ನಂಬಿಕೆಯನ್ನು ಹುಟ್ಟಿಸಿದುದು ; ಸುಗ್ರೀವನೊಡನೆ ಅಗ್ನಿಸಾಕ್ಷಿಯಾಗಿ ಸಖ್ಯ ; ವಾಲಿ-ಸುಗ್ರೀವರ ಯುದ್ಧ ; ರಾಮನಿಂದ ವಾಲಿಯ ಸಂಹಾರ ; ಸುಗ್ರೀವನಿಗೆ ರಾಜ್ಯಾಭಿಷೇಕ ; ತಾರಾವಿಲಾಪ ; ಶರತ್ಕಾಲವು ಮುಗಿಯುವುದರೊಳಗಾಗಿ ಸೀತಾನ್ವೇಷಣವಾಗಬೇಕೆಂದು ರಾಮ-ಸುಗ್ರೀವರು ಮಾಡಿಕೊಂಡ ಸಂಕೇತ ; ವರ್ಷಾಕಾಲದಲ್ಲಿ ರಾಮನ ಗುಹಾವಾಸ ; ಸೀತಾನ್ವೇಷಣಮಾಡದೆ ಔದಾಸೀನ್ಯವನ್ನು ತೋರಿದ್ದಕ್ಕಾಗಿ ರಾಮನಿಗೆ ಸುಗ್ರೀವನ ವಿಷಯದಲ್ಲಿ ಉಂಟಾದ ಕೋಪ ; ಕಪಿಸೈನ್ಯ ಸಂಗ್ರಹಣೆ ; ಎಲ್ಲಾ ದಿಕ್ಕುಗಳಿಗೂ ವಾನರಪ್ರಮುಖರ ಪ್ರೇಷಣೆ ; ದ್ವೀಪ-ಸಮುದ್ರಾದಿಗಳ ವಿವರಣೆ ; ಹನುಮಂತನಿಗೆ ರಾಮನಿಂದ ಅಂಗುಲೀಯಕ ಪ್ರದಾನ ; ಸ್ವಯಂಪ್ರಭಾಬಿಲದ ದರ್ಶನ ; ಪ್ರಾಯೋಪವೇಶ ; ಜಟಾಯುವಿನ ಅಣ್ಣನಾದ ಸಂಪಾತಿಯ ದರ್ಶನ ; ಹನುಮಂತನಿಂದ ಸಮುದ್ರಲಂಘನಕ್ಕಾಗಿ ಮಹೇಂದ್ರಪರ್ವತಾರೋಹಣ ; ಸಮುದ್ರಲಂಘನ ; ಸಮುದ್ರರಾಜನ ಮಾತಿನಂತೆ ಹೊರಬಂದ ಮೈನಾಕನ ದರ್ಶನ ; ರಾಕ್ಷಸೀತರ್ಜನ ; ಛಾಯಾಗ್ರಹ ದರ್ಶನ ; ಸಿಂಹಿಕಾ ಎಂಬ ರಾಕ್ಷಸಸ್ತ್ರೀಯ ನಿಧನ ; ಲಂಕೆಯಲ್ಲಿ ಮಲಯಪರ್ವತದರ್ಶನ ; ರಾತ್ರಿಯಲ್ಲಿ ಲಂಕೆಯ ಪ್ರವೇಶ ; ಹನುಮಂತನ ಚಿಂತೆ ; ರಾವಣನ ಪಾನಭೂಮಿಗೆ ಆಗಮನ ; ಅಂತಃಪುರಸ್ತ್ರೀಯರ ದರ್ಶನ ; ರಾವಣನ ದರ್ಶನ ; ಪುಷ್ಪಕವಿಮಾನದ ದರ್ಶನ ; ಅಶೋಕವನ ಗಮನ ; ಸೀತಾದರ್ಶನ ; ಸೀತೆಗೆ ಅಂಗುಲೀಯಕಪ್ರದಾನ ; ಸೀತೆಯೊಡನೆ ಸಂಭಾಷಣೆ ; ರಾಕ್ಷಸಿಯರು ಸೀತೆಗೆ ಬೆದರಿಸುವಿಕೆ ; ವಿಭೀಷಣನ ಪುತ್ರಿಯಾದ ತ್ರಿಜಟೆಯ ಸ್ವಪ್ನ ; ಹನುಮಂತನಿಗೆ ಸೀತೆಯಿಂದ ಚೂಡಾಮಣಿಯ ಪ್ರದಾನ ; ಹನುಮಂತನಿಂದ ಅಶೋಕವನದಲ್ಲಿದ್ದ ವೃಕ್ಷಗಳ ಧ್ವಂಸ ; ಏಕಾಕ್ಷೀ, ಏಕಕರ್ಣೀ ಮುಂತಾದ ರಾಕ್ಷಸಸ್ತ್ರೀಯರ ಪಲಾಯನ ; ರಾವಣನು ಕಳುಹಿಸಿದ ಕಿಂಕರರೆಂಬ ರಾಕ್ಷಸರ ವಿಧ್ವಂಸನ ; ಐವರು ಸೇನಾನಾಯಕರ ಮತ್ತು ಏಳು ಮಂದಿ ಮಂತ್ರಿಗಳ ನಿಧನ ; ರಾವಣನ ಎರಡನೆಯ ಮಗನಾದ ಅಕ್ಷನ ನಿಧನ ; ಹೊರದ್ವಾರದ ಧ್ವಂಸ ; ಬ್ರಹ್ಮಾಸ್ತ್ರದಿಂದ ವಾಯುಪುತ್ರನ

ಬಂಧನ ; ಲಂಕಾದಹನ ; ರಾಕ್ಷಸರ ಚೀತ್ಕಾರ ; ಶ್ರೀರಾಮನಲ್ಲಿಗೆ ವಾಯುಪುತ್ರನ ಹಿಂದಿರುಗುವಿಕೆ ; ಕಪಿಗಳಿಂದ ಮಧುವಿನ ಅಪಹಾರ ; ರಾಮನಿಗೆ ಚೂಡಾಮಣಿಪ್ರದಾನ ಮತ್ತು ಸೀತೆಯ ವಿಷಯದಲ್ಲಿ ಆಶ್ವಾಸನೆ ; ರಾಮ-ಸಮುದ್ರರಾಜರ ಸಮಾಗಮ ; ನಲನಿಂದ ಸೇತುವೆಯ ನಿರ್ಮಾಣ ; ಸಮುದ್ರತರಣ ; ರಾತ್ರಿಯಲ್ಲಿ ಲಂಕೆಗೆ ಮುತ್ತಿಗೆ ; ವಿಭೀಷಣಸಮಾಗಮ ; ವಿಭೀಷಣನಿಂದ ರಾವಣನ ವಧೋಪಾಯದ ಸೂಚನೆ ; ಕುಂಭಕರ್ಣ ನಿಧನ ; ಮೇಘನಾದನ ಮರಣ ; ರಾವಣಸಂಹಾರ ; ಶತ್ರುವಿನ ಪಟ್ಟಣದಲ್ಲಿ ಸೀತೆಯ ಪ್ರಾಪ್ತಿ ; ವಿಭೀಷಣನಿಗೆ ಲಂಕಾರಾಜ್ಯದ ಪಟ್ಟಾಭಿಷೇಕ ; ಪುಷ್ಪಕ ವಿಮಾನ ಪ್ರಾರ್ಥನೆ ; ಅಯೋಧ್ಯೆಯನ್ನು ಕುರಿತು ಪ್ರಯಾಣ ; ಭರದ್ವಾಜ ದರ್ಶನ ; ಭರತನಲ್ಲಿಗೆ ವಾಯುಪುತ್ರನ ಪ್ರೇಷಣೆ ; ಭರತಸಮಾಗಮ ; ಶ್ರೀರಾಮಚಂದ್ರನಿಗೆ ಸಾಮ್ರಾಜ್ಯಪಟ್ಟಾಭಿಷೇಕ ; ಸೈನ್ಯವಿಸರ್ಜನ ; ಸ್ವರಾಷ್ಟ್ರಜನರಂಜನ ; ಸೀತಾಪರಿತ್ಯಾಗ–ಇವುಗಳೆಲ್ಲವನ್ನೂ ಪೂಜ್ಯರಾದ ವಾಲ್ಮೀಕಿಮಹರ್ಷಿಗಳು ವಿಸ್ತಾರವಾಗಿ ರಚಿಸಿ, ಸೀತಾವಿಸರ್ಜನವಾದನಂತರ ರಾಮನು ಭೂಲೋಕದಲ್ಲಿ ಮಾಡಿದ ಅಶ್ವಮೇಧಯಾಗವೇ ಮುಂತಾದ ವಿಷಯಗಳನ್ನು ಉತ್ತರಕಾಂಡದಲ್ಲಿ ರಚಿಸಿದರು.

ಃನೆಯ ಸರ್ಗವು ಮುಗಿಯಿತು.

ವಾಲ್ಮೀಕಿಮಹರ್ಷಿಗಳು ಇಪ್ಪತ್ತುನಾಲ್ಕು ಸಾವಿರ ಶ್ಲೋಕಗಳಲ್ಲಿ ರಾಮಾಯಣವನ್ನು ರಚಿಸಿ ಅದನ್ನು ಲವ-ಕುಶರಿಗೆ ಉಪದೇಶಿಸಿದುದು : ಮುನಿಗಳ ಸಮೂಹದಲ್ಲಿ ಲವ-ಕುಶರು ರಾಮಾಯಣವನ್ನು ತಾಳ-ಲಯಬದ್ಧವಾಗಿ ಹಾಡಿ ಎಲ್ಲರ ಪ್ರಶಂಸೆಗೂ ಪಾತ್ರರಾದುದು : ಶ್ರೀರಾಮನಿಂದಲೂ ಸಮ್ಮಾನಿತರಾಗಿ ಶ್ರೀರಾಮನ ಆಸ್ಥಾನದಲ್ಲಿ ರಾಮಾಯಣವನ್ನು ಹಾಡಿದುದು

ಪ್ರಾಪ್ತರಾಜ್ಯಸ್ಯ ರಾಮಸ್ಯ ವಾಲ್ಮೀಕಿರ್ಭಗವಾನೃಷಿಃ ।
ಚಕಾರ ಚರಿತಂ ಕೃತ್ಸ್ನಂ ವಿಚಿತ್ರಪದಮರ್ಥವತ್ ॥೧॥

ಸಕಲಗುಣಾಭಿರಾಮನಾದ ಶ್ರೀರಾಮನಿಗೆ ಸಾಮ್ರಾಜ್ಯಪ್ರಾಪ್ತಿಯಾದ

ನಂತರ, ಬ್ರಹ್ಮನ ಅನುಗ್ರಹದಿಂದ ದಿವ್ಯಜ್ಞಾನವನ್ನು ಗಳಿಸಿದವರಾಗಿ ಸಾವಧಾನವಾದ ಅಂತಃಕರಣವುಳ್ಳ ವಾಲ್ಮೀಕಿಮಹರ್ಷಿಗಳು ಚಿತ್ರ-ವಿಚಿತ್ರವಾದ ಶಬ್ದಾರ್ಥಾಲಂಕಾರಗಳಿಂದ ಕೂಡಿದ ಶ್ರೀರಾಮನ ಚರಿತ್ರೆಯನ್ನು ರಚಿಸಿದರು.

ಚತುರ್ವಿಂಶತ್ಸಹಸ್ರಾಣಿ ಶ್ಲೋಕಾನಾಮುಕ್ತವಾನೃಷಿಃ ।
ತಥಾ ಸರ್ಗಶತಾನ್ಪಞ್ಚ ಷಟ್ಕಾಣ್ಡಾನಿ ತಥೋತ್ತರಮ್ ॥೨॥

ಪೂಜ್ಯರಾದ ವಾಲ್ಮೀಕಿಮಹರ್ಷಿಗಳು ಇಪ್ಪತ್ತುನಾಲ್ಕು ಸಾವಿರ ಶ್ಲೋಕಗಳಿಂದ ಕೂಡಿ, ಐದುನೂರು ಸರ್ಗಗಳಿಂದಲೂ ಆರು ಕಾಂಡಗಳಿಂದಲೂ ಮತ್ತು ಉತ್ತರಕಾಂಡದಿಂದಲೂ ವಿಭಾಗಗೊಂಡ ಶ್ರೀಮದ್ರಾಮಾಯಣ ವನ್ನು ರಚಿಸಿದರು. ಆ ಜ್ಞಾನಿಶ್ರೇಷ್ಠರು ಶ್ರೀರಾಮನ ಪಟ್ಟಾಭಿಷೇಕಾನಂತರದ ಭವಿಷ್ಯವನ್ನು ಹೇಳುವ ಉತ್ತರಕಾಂಡಸಹಿತವಾದ ರಾಮಾಯಣವನ್ನು ರಚಿಸಿದನಂತರ–'ನನ್ನಿಂದ ಇದರ ಉಪದೇಶವನ್ನು ಪಡೆದು ಸರಿಯಾಗಿ ಪ್ರಯೋಗಿಸಬಲ್ಲ ಸಮರ್ಥರು ಯಾರಿದ್ದಾರೆ?'–ಎಂಬ ಚಿಂತೆಗೊಳಗಾದರು.* ಹಾಗೆ ಚಿಂತಿಸುತ್ತಿದ್ದ ವಾಲ್ಮೀಕಿಮಹರ್ಷಿಗಳ ಪಾದಾರವಿಂದ

---

* ಆದರೆ ಈಗ ರಾಮಾಯಣದಲ್ಲಿರುವ ಸರ್ಗಗಳಿಗೂ ಮತ್ತು ಶ್ಲೋಕಗಳಿಗೂ ಈ ಸಂಖ್ಯೆಯು ಸಮನ್ವಯವಾಗುವುದಿಲ್ಲ. ಶ್ಲೋಕಗಳ ವಿಷಯದಲ್ಲಿ ಸ್ವಲ್ಪ ಹೆಚ್ಚು ಕಡಿಮೆ ಸರಿಯಾಗಿದೆಯೆಂದು ಹೇಳಬಹುದಾದರೂ–ಸರ್ಗಗಳ ವಿಷಯದಲ್ಲಿ ಹೆಚ್ಚು ವ್ಯತ್ಯಾಸವಿದೆ. ಸರ್ಗಗಳ ಸಂಖ್ಯೆ ಬಾಲಕಾಂಡದಲ್ಲಿ ೭೭, ಅಯೋಧ್ಯಾಕಾಂಡದಲ್ಲಿ ೧೧೯, ಅರಣ್ಯಕಾಂಡ ೭೫, ಕಿಷ್ಕಿಂಧಾಕಾಂಡ ೬೭, ಸುಂದರಕಾಂಡ ೬೮, ಯುದ್ಧಕಾಂಡ ೧೩೧, ಉತ್ತರಕಾಂಡ ೧೧೦, ಒಟ್ಟು ೬೪೭ ಸರ್ಗಗಳಾಗುತ್ತವೆ. ಒಂದು ವೇಳೆ ಉತ್ತರಕಾಂಡವನ್ನು ಬಿಟ್ಟರೂ ೫೩೭ ಸರ್ಗಗಳಾಗುತ್ತವೆ. ಶ್ಲೋಕಪರ್ಯಾಯವನ್ನು ತೆಗೆದುಕೊಂಡರೆ ಉತ್ತರಕಾಂಡವು ಸೇರದೇ ೨೪ ಸಾವಿರ ಶ್ಲೋಕಗಳಾಗುವುದಿಲ್ಲ. ಬಾಲಕಾಂಡ ೨,೨೫೬, ಅಯೋಧ್ಯಾ ೪,೪೧೫, ಅರಣ್ಯ ೨,೭೩೨, ಕಿಷ್ಕಿಂಧಾ ೨,೬೨೦, ಸುಂದರ ೩,೦೦೬, ಯುದ್ಧಕಾಂಡ ೫,೯೯೦, ಉತ್ತರಕಾಂಡ ೩,೭೩೪ ಒಟ್ಟು ೨೪,೭೫೩ ಶ್ಲೋಕಗಳಾಗುತ್ತವೆ. ಆದುದರಿಂದ ಈ ಶ್ಲೋಕದಲ್ಲಿ ಹೇಳಿರುವಂತೆ ಸರ್ಗಗಳಿಗೂ ಶ್ಲೋಕಗಳಿಗೂ ಸಮನ್ವಯವಾಗುವುದಿಲ್ಲ. ಈ ಕಾರಣದಿಂದ ಈ ಶ್ಲೋಕವನ್ನು ಒಬ್ಬ ವ್ಯಾಖ್ಯಾನಕಾರರು ಪ್ರಕ್ಷಿಪ್ತವೆಂದೇ ಹೇಳಿದ್ದಾರೆ. ಮತ್ತೊಬ್ಬ ವ್ಯಾಖ್ಯಾನಕಾರರು ಗಾಯತ್ರಿ ಛಂದಸ್ಸಿನ ೨೪ ಅಕ್ಷರಗಳಿಗೆ ಅನುಗುಣವಾಗಿ ಉತ್ತರಕಾಂಡವೂ ಸೇರಿ ೨೪ ಸಾವಿರ ಶ್ಲೋಕಗಳೆಂಬುದು ನಿಶ್ಚಯವೆಂದೂ

ಗಳನ್ನು ಮುನಿವೇಷಧಾರಿಗಳಾದ ಗಾಯಕರಾದ ಲವ-ಕುಶರು ಹಿಡಿದು ಕೊಂಡರು. ಅವರಿಬ್ಬರೂ ಗುರುಶುಶ್ರೂಷಾಧರ್ಮದಲ್ಲಿ ನಿಷ್ಣಾತರಾದವರು. ಯಶೋವಂತರು, ರಾಜಪುತ್ರರು, ಸ್ವರಸಂಪನ್ನರು, ಸಮಾನರೂಪವುಳ್ಳ ಸಹೋದರರು. ಆಶ್ರಮವಾಸಿಗಳಾದ ಕುಶ-ಲವರನ್ನು ಪರಮಾತ್ಮನ ಧ್ಯಾನಾಸಕ್ತರಾಗಿದ್ದ ವಾಲ್ಮೀಕಿಗಳು ಕಣ್ತೆರೆದು ನೋಡಿದರು. ಅವರಿಗೆ ಮಹತ್ತರವಾದ ಆನಂದವಾಯಿತು. ಅವರಿಬ್ಬರ ಗುಣಾತಿಶಯಗಳ ಸ್ಮರಣೆಯೂ ವಾಲ್ಮೀಕಿಗಳಿಗುಂಟಾಯಿತು. ಲವ-ಕುಶರು ಎಲ್ಲ ವೇದ ಗಳಲ್ಲಿಯೂ, ವೇದಾಂಗಗಳಲ್ಲಿಯೂ ನಿಷ್ಣಾತರಾದವರು. ಎಂತಹ ಕಠಿಣ ವಿಷಯವನ್ನೂ ಧರಿಸಲು ಸಮರ್ಥವಾದ ಬುದ್ಧಿಯುಳ್ಳ ಮೇಧಾವಿಗಳು. ವೇದಾರ್ಥವನ್ನು ವಿಸ್ತಾರವಾಗಿ ಲೋಕಕ್ಕೆ ತಿಳಿಯಪಡಿಸುವ ಸಲುವಾಗಿ, ದುರ್ಬೋಧ್ಯವಿಷಯಗಳನ್ನೂ ಬಹಳ ಸುಲಭವಾಗಿ ಬೋಧನಮಾಡಲು ಸಮರ್ಥರಾದ ವಾಲ್ಮೀಕಿಮಹರ್ಷಿಗಳು ರಾಮಾಯಣವನ್ನು ಉಪದೇಶಿಸಲು ಅವರನ್ನು ಆರಿಸಿಕೊಂಡರು. ರಾಮನ ಕಲ್ಯಾಣಗುಣಗಳನ್ನು ಪ್ರತಿಪಾದಿಸುವ, ಸೀತೆಯ ಸಚ್ಚರಿತ್ರರೂಪವಾದ, ರಾವಣನ ವಧೆಯನ್ನು ನಿರೂಪಿಸುವ, ರಾಮಾಯಣವೆಂಬ ಮಹಾಕಾವ್ಯವನ್ನು ವಾಲ್ಮೀಕಿಮಹರ್ಷಿಗಳು ಲವ-

---

ಹೆಚ್ಚಿನ ೭೫೩ ಶ್ಲೋಕಗಳು ತ್ರಿಷ್ಟುಪ್ ಜಗತ್ಯಾದಿ ಛಂದೋವೃತ್ತಗಳ ಅಕ್ಷರಾಧಿಕ್ಯದಿಂದ ಉಂಟಾಗಿವೆಯೆಂದೂ ಹೇಳಿರುವರು. 'ಗಾಯತ್ರ್ಯಾಶ್ಚ ಸ್ವರೂಪಂ ಯದ್ರಾಮಾಯಣಮನುತ್ತಮಾಮ್'–ಎಂದು ರಾಮಾಯಣದಲ್ಲಿ ವಾಕ್ಯವಿದೆ. (ಉ. ೧೧೧-೧೯) ಆದರೆ ಈ ಶ್ಲೋಕದಲ್ಲಿ ಹೇಳಿರುವಂತೆ ೫೦೦ ಸರ್ಗಗಳಿಗೆ ಬದಲಾಗಿ ೬೪೭ ಸರ್ಗಗಳೇಕಾದುವೆಂಬುದಕ್ಕೆ ಇದು ಸಮಾಧಾನವಾಗುವುದಿಲ್ಲ.

ಓರಿಯಂಟಲ್ ಇನ್‌ಸ್ಟಿಟ್ಯೂಟ್, ಬರೋಡ–ಇವರು ಪ್ರಕಟಿಸಿರುವ ವಿಮರ್ಶಾತ್ಮಕ ರಾಮಾಯಣದಲ್ಲಿರುವುದು ೬೦೬ ಸರ್ಗಗಳು ಮತ್ತು ೧೮,೭೬೬ ಶ್ಲೋಕಗಳು ಮಾತ್ರ.

ಈಗ ದೊರಕಿರುವ ರಾಮಾಯಣದಲ್ಲಿ ಅನೇಕ ಪ್ರಕ್ಷಿಪ್ತಭಾಗಗಳಿವೆಯೆಂದು ಮಾತ್ರ ಹೇಳಬಹುದು.

ರಾಮನು ಸೀತೆಯನ್ನು ಪರಿತ್ಯಾಗಮಾಡಿದನಂತರದ ಕಾವ್ಯಕ್ಕೆ ಭವಿಷ್ಯವೆಂದೂ ಮತ್ತೊಬ್ಬರು ಸೀತೆಯು ಭೂಮಿಯೊಳಗೆ ಪ್ರವೇಶಿಸಿದನಂತರ ನಡೆದ ಸಂಗತಿಯನ್ನು ತಿಳಿಸುವ ಕಾವ್ಯಕ್ಕೆ ಭವಿಷ್ಯವೆಂದೂ, ಇನ್ನೊಬ್ಬರು ಭವಿಷ್ಯದಿಂದ ಸಹಿತವಾದ ಉತ್ತರಕಾಂಡವೆಂದೂ ವ್ಯಾಖ್ಯಾನಮಾಡಿರುತ್ತಾರೆ.

ಕುಶರಿಗೆ ಉಪದೇಶಿಸಿದರು. ರಾಮಾಯಣದಲ್ಲಿ ಅಧ್ಯಯನಮಾಧುರ್ಯವೂ ಇದೆ ; ಗಾಯನಮಾಧುರ್ಯವೂ ಇದೆ. ಶ್ಲೋಕಗಳು ಮೂರು ಪ್ರಮಾಣಗಳಿಂದ[1] ಕೂಡಿರುವುದು. ಏಳು ಜಾತಿಗಳ ಸ್ವರಗಳಿಂದ[2] ಕೂಡಿರುವುದು. ವೀಣಾವಾದ್ಯದೊಡನೆಯೂ, ತಾಳ-ಮೃದಂಗಾದಿಗಳೊಡನೆಯೂ ಹೊಂದಿ



ಹಾಡಲು ಯೋಗ್ಯವಾಗಿದೆ. ಈ ಮಹಾಕಾವ್ಯವು ನವರಸಗಳಾದ ಶೃಂಗಾರ, ಕರುಣ, ಹಾಸ್ಯ, ವೀರ, ಅದ್ಭುತ, ಭಯಾನಕ, ರೌದ್ರ, ಭೀಭತ್ಸ ಮತ್ತು

[1] ಮೂರು ಪ್ರಮಾಣಗಳು: ಗಾನ-ಧ್ವನಿ-ಪರಿಚ್ಛೇದ ಅಥವಾ ತ್ರ್ಯಶ್ರ ಚತುರಶ್ರ ಮಿಶ್ರ ಅಥವಾ ದ್ರುತ-ಮಧ್ಯಮ-ವಿಲಂಬಿತ.

[2] ಸಪ್ತಸ್ವರಗಳು : ಷಡ್ಜ, ಋಷಭ, ಗಾಂಧಾರ, ಮಧ್ಯಮ, ಪಂಚಮ, ದೈವತ ಮತ್ತು ನಿಷಾದ.

ಶಾಂತರಸಗಳಿಂದ ಕೂಡಿದೆ. ಇಂತಹ ಪರಮಾದ್ಭುತವಾದ ರಾಮಾಯಣ ಮಹಾಕಾವ್ಯವನ್ನು ಲವ-ಕುಶರು ಹಾಡಿದರು. ಲವ-ಕುಶರು ಗಾನಶಾಸ್ತ್ರದ ರಹಸ್ಯವನ್ನು ಚೆನ್ನಾಗಿ ತಿಳಿದವರಾಗಿದ್ದರು. ವೀಣಾದಿವಾದನಗಳಲ್ಲಿ ನಿಪುಣರು. ಮಂದ್ರ-ಮಧ್ಯ-ತಾರರೂಪಗಳಾದ ಸ್ವರತ್ರಯಸ್ಥಾನಗಳನ್ನೂ, ಆರೋಹಣಾವರೋಹಣಗಳನ್ನೂ ಪೂರ್ಣವಾಗಿ ತಿಳಿದವರು. ಒಳ್ಳೆಯ ಶಾರೀರವುಳ್ಳವರು. ಗಂಧರ್ವರಂತೆ ಸ್ಫುರದ್ರೂಪಿಗಳು. ರೂಪ-ಲಕ್ಷಣ ಸಂಪನ್ನರು. ಅವರು ಗಾಯನವು ಇಂಪಾಗಿದ್ದುದು ಮಾತ್ರವಲ್ಲದೇ ಮಾತುಗಳೂ ಮಾಧುರ್ಯದಿಂದ ಕೂಡಿದ್ದುವು. ಆ ಸಹೋದರರಿಬ್ಬರೂ ನಿಶ್ಚಯವಾಗಿಯೂ ರಾಮನ ಶರೀರದಿಂದ ಹೊರಹೊಮ್ಮಿದ ರಾಮನ ಎರಡು ಬಿಂಬಾಕೃತಿಗಳಂತೆಯೇ ಕಾಣುತ್ತಿದ್ದರು. ಇಂತಹ ಲವ-ಕುಶರು ರಾಮಾಯಣಕಾವ್ಯವನ್ನು ಹಾಡಿದರು. ಋಷಿಕುಮಾರವೇಷಧಾರಿಗಳಾದ, ರಾಜಕುಮಾರರಾದ, ನಿಂದೆಗೆ ಅನರ್ಹರಾದ, ಸ್ವಲ್ಪವಾದರೂ ವಿಸ್ಮರಣೆ ಯಿಲ್ಲದ, ಮಹಾತ್ಮರಾದ, ಸಕಲಗುಣಪರಿಪೂರ್ಣರಾದ, ಶಬ್ದಗಳ ಗುಣ-ಲಕ್ಷಣಗಳನ್ನೂ ತಿಳಿದಿರುವ ಲವ-ಕುಶರು ಧರ್ಮಪರಿಪೂರ್ಣವಾದ, ಶ್ರೇಷ್ಠತಮವಾದ ರಾಮಾಯಣವೆಂಬ ಆಖ್ಯಾನವನ್ನು ಆಮೂಲಾಗ್ರವಾಗಿ ಬಾಯಿಪಾಠಮಾಡಿಕೊಂಡು ಋಷಿಗಳ, ಸಾಧುಗಳ ಮತ್ತು ಬ್ರಾಹ್ಮಣರ ಸಭೆಗಳಲ್ಲಿ ವಾಲ್ಮೀಕಿಗಳಿಂದ ಉಪದಿಷ್ಟವಾದ ಕ್ರಮದಲ್ಲಿ ಹಾಡಿದರು. ಧರ್ಮದ ವಿಷಯದಲ್ಲಿ ನಿಶ್ಚಯಜ್ಞಾನವುಳ್ಳ ಮಹರ್ಷಿಗಳು ದೈನಂದಿನಯಜ್ಞಕ್ರಿಯೆಗಳು ಮುಗಿದನಂತರ ಸುಖಾಸೀನರಾಗಿ ಕುಳಿತಿದ್ದಾಗ ಅವರೆಲ್ಲರ ಸಮೀಪದಲ್ಲಿ ಕುಳಿತು, ಒಮ್ಮೆ ಲವ-ಕುಶರು ವಾಲ್ಮೀಕಿಗಳಿಂದ ಉಪದಿಷ್ಟವಾದ ರಾಮಾಯಣವನ್ನು ಸುಮಧುರಕಂಠದಿಂದ ಹಾಡಿದರು. ಆ ಮಹಾಕಾವ್ಯವನ್ನು ಕುಶ-ಲವರ ಮುಖಾರವಿಂದದಿಂದ ಕೇಳಿ ಮಹರ್ಷಿಗಳು ಆಶ್ಚರ್ಯಗೊಂಡವರಾಗಿ ಆನಂದಾತಿಶಯಗಳಿಂದ ಆನಂದಬಾಷ್ಪಗಳನ್ನು ಸುರಿಸಿದರು. ಗಾಯನದಿಂದ ಸುಪ್ರೀತರಾದ, ಧರ್ಮವತ್ಸಲರಾದ ಮಹರ್ಷಿಗಳು ಪ್ರಶಂಸೆಗೆ ಅರ್ಹರಾದ ಕುಶ-ಲವರನ್ನು–"ಸಾಧು", "ಸಾಧು"–ಎಂದು ಹೇಳುತ್ತಾ ಬಹುವಾಗಿ ಪ್ರಶಂಸಿಸಿದರು.

"ನಿಶ್ಚಯವಾಗಿಯೂ ಇವರ ಗಾಯನವು ಎಷ್ಟು ಮಧುರವಾಗಿದೆ! ಅದಕ್ಕಿಂತಲೂ ವಿಶೇಷವಾಗಿ ಶ್ಲೋಕಗಳು ಎಷ್ಟು ಇಂಪಾಗಿವೆ! ಇವರು ಹೇಳಿ

ರುವ ಆಖ್ಯಾನವು ನಡೆದು ಬಹಳ ಕಾಲದವರೆಗೂ ಆ ಕಥಾವಸ್ತುವಿನ ಪ್ರತ್ಯಕ್ಷ ಚಿತ್ರವೇ ನಮ್ಮ ಹೃನ್ಮಂದಿರದಲ್ಲಿ ಕಾಣುತ್ತಿದೆ. ಇವರ ಗಾನವು ಷಡ್ಜಾದಿ ಸಪ್ತಸ್ವರಗಳಿಂದ ಪರಿಪೂರ್ಣವಾಗಿದೆ. ಶೃಂಗಾರ-ವೀರಾದಿ ರಸಯುತವಾದ ಶ್ಲೋಕಗಳನ್ನು ಅವಕ್ಕೆ ಅನುಗುಣವಾದ ರಾಗಗಳಿಂದ ಹಾಡುತ್ತಾರೆ. ಹಾಡುವಾಗ ಅಪಶಬ್ದಗಳು ಒಮ್ಮೆಯಾದರೂ ಇವರ ಮುಖಾರವಿಂದದಿಂದ ಬರುವುದಿಲ್ಲ. ಭಾವಪರವಶರಾಗಿ ಗೀತೆಯಲ್ಲಿಯೇ ತಲ್ಲೀನರಾಗಿ ಹಾಡುತ್ತಾರೆ.”

ಮಹಾತ್ಮರಾದ, ತಪಸ್ಸಿನಿಂದ ಶ್ಲಾಘ್ಯರಾದ ಮಹರ್ಷಿಗಳಿಂದ ಹೀಗೆ ಪ್ರಶಂಸಿತರಾದ ಕುಶ-ಲವರು ಇನ್ನೂ ಅತಿಶಯವಾದ ಸ್ವರಸಂಪತ್ತಿಯಿಂದ ಕೂಡಿದ ರಾಗಗಳಿಂದಲೂ, ಅತಿಶಯಮಾಧುರ್ಯದಿಂದಲೂ ರಾಮಾಯಣ ಕಥೆಯನ್ನು ಹಾಡಿದರು. ಅವರ ಸುಮಧುರಗಾಯನವನ್ನು ಕೇಳಿ ಸುಪ್ರೀತರಾದ ಮಹರ್ಷಿಗಳು ತಮ್ಮಲ್ಲಿದ್ದ ವಸ್ತುಗಳನ್ನೇ ಆನಂದಾತಿಶಯದಿಂದ ಲವ-ಕುಶರಿಗೆ ಬಹುಮಾನರೂಪವಾಗಿಕೊಟ್ಟರು. ಒಬ್ಬರು ಕಲಶವನ್ನು ಕೊಟ್ಟರು. ಮತ್ತೊಬ್ಬರು ನಾರುಮಡಿಯನ್ನು ಕೊಟ್ಟರು. ಇನ್ನೊಬ್ಬ ಮಹರ್ಷಿಗಳು ಕೃಷ್ಣಾಜಿನವನ್ನೇ ಬಹುಮಾನವಾಗಿ ಕೊಟ್ಟರು. ಯಜ್ಞೋಪವೀತ, ಕಮಂಡಲು, ಮೌಂಜಿ, ದರ್ಭಾಸನ, ಕೌಪೀನ, ಜಪಮಾಲೆ, ಕಾಷಾಯವಸ್ತ್ರ, ಇದಲ್ಲದೆ ಜಟಾಬಂಧನ ರಜ್ಜು (ಹಗ್ಗ) ಕಾಷ್ಠಬಂಧನ ರಜ್ಜು, ಯಜ್ಞಭಾಂಡ, ಸೌದೆ, ಔದುಂಬರೀ ಮುಂತಾದ ವಸ್ತುಗಳೂ ಲವ-ಕುಶರು ಹಾಡಿದ ಗಾಯನದಿಂದ ಆನಂದಪರವಶರಾದ ಋಷಿಗಳಿಂದ ಲವ-ಕುಶರಿಗೆ ಬಹುಮಾನರೂಪವಾಗಿ ಕೊಡಲ್ಪಟ್ಟುವು. ಕೆಲವು ಮಹರ್ಷಿಗಳು ಸ್ವಸ್ತಿವಾಚನವನ್ನು ಮಾಡಿದರು. ಮತ್ತೆ ಕೆಲವರು– ‘ದೀರ್ಘಾಯುಷ್ಮನ್ತೌ ಭವತಾಮ್’ ‘ನಿಮಗೆ ದೀರ್ಘಾಯುಸ್ಸು ಉಂಟಾಗಲಿ’–ಎಂದು ಆಶೀರ್ವದಿಸಿದರು. ಸತ್ಯವಾದಿಗಳಾದ ಮಹರ್ಷಿಗಳು ಅವರಿಗೆ ವರಗಳನ್ನು ಕೊಟ್ಟರು. ಈ ರಾಮಾಯಣ ಪ್ರಬಂಧವು ವಾಲ್ಮೀಕಿ ಮಹರ್ಷಿಗಳಿಂದ ನವರಸಪೂರ್ಣವಾಗಿ, ವಿಸ್ತಾರವಾಗಿ ಹೇಳಲ್ಪಟ್ಟಿತು. ಮುಂದೆ ಈ ಕಾವ್ಯವೇ ಕವಿಗಳಿಗೆ ಮೂಲಾಧಾರವಾಯಿತು. ಈ ಮಹಾಕಾವ್ಯವನ್ನು ಕುಶ-ಲವರು ಯಥಾಕ್ರಮವಾಗಿ ಹಾಡಲು ಉಪಕ್ರಮಿಸಿ ನಿರ್ವಿಘ್ನವಾಗಿ ಪರಿಸಮಾಪ್ತಿಮಾಡಿದರು. ಸರ್ವಗೀತೆಗಳಿಗಿಂತಲೂ ಪೂಜ್ಯತಮವಾದ,

ಆಯುಷ್ಯವರ್ಧಕವಾದ, ಪುಷ್ಟಿವರ್ಧಕವಾದ, ಸ್ವರಪ್ರಧಾನಗಳಾದ ಸರ್ವ ಶ್ರುತಿಗಳಿಗಿಂತಲೂ ಮನೋಹರವಾಗಿರುವ ಈ ರಾಮಾಯಣಕಾವ್ಯವನ್ನು ಸರ್ವಗೀತೆಗಳಲ್ಲಿಯೂ ಕೋವಿದರಾದ ಕುಶ-ಲವಗಾಯಕರು ಬೀದಿಗಳಲ್ಲಿಯೂ, ರಾಜಬೀದಿಗಳಲ್ಲಿಯೂ ಹಾಡುತ್ತಿರುವಾಗ–ಒಂದು ದಿನ ಭರತಾಗ್ರಜನಾದ ಶ್ರೀರಾಮನು ಅವರು ಹಾಡುತ್ತಿರುವುದನ್ನು ಕಂಡನು. ಶತ್ರುನಿಬರ್ಹಣನಾದ ಶ್ರೀರಾಮನು ಸನ್ಮಾನಾರ್ಹರಾದ ಸಹೋದರರಾದ ಕುಶ-ಲವರನ್ನು ಅರಮನೆಗೆ ಕರೆದೊಯ್ದು ಯಥಾಯೋಗ್ಯವಾಗಿ ಉಪಚರಿಸಿದನು. ಪ್ರಭುವಾದ, ವ್ರತನಿಷ್ಠನಾದ ಶ್ರೀರಾಮಚಂದ್ರನು ಲವ-ಕುಶರನ್ನು ಯಥೋಚಿತವಾಗಿ ಉಪಚರಿಸಿದನಂತರ ಸ್ವರ್ಣಮಯವಾದ ಸಿಂಹಾಸನದಲ್ಲಿ ಕುಳಿತು, ಮಂತ್ರಿಗಳಿಂದಲೂ-ಲಕ್ಷ್ಮಣ-ಭರತ-ಶತ್ರುಘ್ನಾದಿಗಳಿಂದಲೂ ಪರಿವೃತನಾಗಿ, ರೂಪಸಂಪನ್ನರಾದ ಲವ-ಕುಶರನ್ನು ದಿಟ್ಟಿಸಿ ನೋಡುತ್ತಾ ಲಕ್ಷ್ಮಣ-ಭರತ-ಶತ್ರುಘ್ನರಿಗೆ ಹೇಳಿದನು :

"ಸಹೋದರರರೇ! ಸಚಿವೋತ್ತಮರೇ! ದೇವತೆಗಳ ಕಾಂತಿಗೆ ಸಮಾನವಾದ ವರ್ಚಸ್ಸಿನಿಂದ ಕೂಡಿರುವ ಇವರು ಹೇಳಲಿರುವ, ವಿಚಿತ್ರಾರ್ಥಪದ ಸಮೂಹಗಳಿಂದ ನಿಬದ್ಧವಾಗಿರುವ ಆಖ್ಯಾನವನ್ನು ಆಲಿಸಿರಿ"–ಎಂದು ಹೇಳಿ, ಲವ-ಕುಶರ ಕಡೆಗೆ ತಿರುಗಿ–"ನೀವು ಆಖ್ಯಾನವನ್ನು ಆರಂಭಿಸಬಹುದು"–ಎಂದು ಪ್ರೇರಣೆಮಾಡಿದನು. ಶ್ರೀರಾಮನಿಂದ ಅನುಜ್ಞೆಪಡೆದ ಲವ-ಕುಶರು ಮೊದಲು ರಾಗದ ಆಲಾಪನವನ್ನು ಮಾಡಿ ವೀಣಾ-ಮೃದಂಗಾದಿ ವಾದ್ಯಗಳೊಡನೆ ಮಧುರವಾಗಿ ಹಾಡಲು ಉಪಕ್ರಮಿಸಿದರು. ಅವರು ಹಾಡುವ ಕಾಲದಲ್ಲಿಯೂ ಕಾವ್ಯದ ಅರ್ಥವು ಬಹಳ ಸ್ಪಷ್ಟವಾಗಿ ಶ್ರೋತೃಗಳಿಗೆ ತಿಳಿಯುತ್ತಿದ್ದಿತು. ಅವರ ದಿವ್ಯಗಾಯನವನ್ನು ಕೇಳಿ ಸಭಿಕರು ಆನಂದಪರವಶರಾಗಿ ಉಬ್ಬಿಹೋದರು. ಅವರ ಮನಸ್ಸು ಮತ್ತು ಹೃದಯಗಳು ಆನಂದತುಂದಿಲವಾದುವು. ಈ ರೀತಿಯಾಗಿ ಕಿವಿಗಳ ಸುಖಕ್ಕೆ ಆಶ್ರಯಭೂತವಾದ ಆ ದಿವ್ಯಗಾಯನವು ಜನರ ಸಮೂಹದಲ್ಲಿ ವಿಜೃಂಭಿಸಿತು. ಅಂದಿನ ಸಮಾರಂಭವು ಮುಗಿದನಂತರ ಸಭ್ಯರನ್ನು ಕುರಿತು ಶ್ರೀರಾಮಚಂದ್ರನು ಹೇಳಿದನು :

"ಈ ಕುಶೀಲವರು ಮುನಿವೇಷಧಾರಿಗಳಾಗಿದ್ದರೂ ರಾಜಲಕ್ಷಣ ಗಳಿಂದ ಕೂಡಿರುವರು. ಇವರು ಗಾಯಕರಾದರೂ ಮಹಾತಪಸ್ವಿಗಳಾಗಿರುವರು. ಇವರು ಮಾಡುತ್ತಿರುವ ಗಾನವೂ ಮತ್ತು ತನ್ಮೂಲಕ ಹೇಳುತ್ತಿರುವ ಕಾವ್ಯ ಪ್ರವಚನವೂ ನನಗೂ ಶ್ರೇಯಸ್ಕರವಾಗಿರುವುದು. ಭಾವಪೂರ್ಣವಾಗಿ

ಹಾಡುತ್ತಿರುವ ಮಹಾಮಹಿಮೆಯುಳ್ಳ ಚರಿತವನ್ನು ನೀವೆಲ್ಲರೂ ಆಮೂಲಾಗ್ರವಾಗಿ ಕೇಳಿರಿ."

ಮರುದಿನ ಶ್ರೀರಾಮನ ಆಶಯದಂತೆ ಪ್ರಜೆಗಳು, ಭರತ-ಲಕ್ಷ್ಮಣ-ಶತ್ರುಘ್ನರು, ಅಮಾತ್ಯಶ್ರೇಷ್ಠರು–ಎಲ್ಲರೂ ಸಭಾಭವನವನ್ನಲಂಕರಿಸಿದ್ದರು.

ಶ್ರೀರಾಮನಿಂದ ಗಾನಮಾಡಲು ಪ್ರೇರಿತರಾದ ಕುಶೀಲವರು ಮಾರ್ಗವೆಂಬ ಸಂಗೀತಸಂಪ್ರದಾಯವನ್ನನುಸರಿಸಿ ಹೃದಯಂಗಮವಾಗಿ ಹಾಡುತ್ತಿದ್ದರು.* ಗಾನಸುಧೆಯನ್ನು ಪಾನಮಾಡುವ ಇಚ್ಛೆಯಿಂದ ರಾಮನೂ ಮೆಲ್ಲ-ಮೆಲ್ಲನೆ ಸಭಾಮಂದಿರವನ್ನು ಪ್ರವೇಶಿಸಿ, ಕುಶೀಲವರು ಹಾಡುತ್ತಿದ್ದ ಗಾನದಲ್ಲಿ ತಲ್ಲೀನನಾಗಿ ಹೋದನು.

೪ನೆಯ ಸರ್ಗವು ಮುಗಿಯಿತು.

ದಶರಥರಾಜನಿಂದ ಆಳಲ್ಪಡುತ್ತಿದ್ದ ಅಯೋಧ್ಯೆಯ ವರ್ಣನೆ

ಲವ-ಕುಶರು 'ಸರ್ವಾ ಪೂರ್ವಮಿಯಂ' ಎಂಬ ಶ್ಲೋಕದಿಂದ ರಾಮಾಯಣದ ಗಾಯನವನ್ನು ಆರಂಭಿಸಿದರು.

ಸರ್ವಾ ಪೂರ್ವಮಿಯಂ ಯೇಷಾಮಾಸೀತ್ಕೃತ್ಸ್ನಾ ವಸುಂಧರಾ ।
ಪ್ರಜಾಪತಿಮುಪಾದಾಯ ನೃಪಾಣಾಂ ಜಯಶಾಲಿನಾಮ್ ॥೧॥

"ಸಪ್ತದ್ವೀಪಾತ್ಮಕವಾದ ಈ ಭೂಮಿಯು ಮನುಪ್ರಜಾಪತಿಯಿಂದ ಪ್ರಾರಂಭವಾದ ವಂಶದಲ್ಲಿ ಜನಿಸಿದ ಜಯಶಾಲಿಗಳಾದ ರಾಜರ ಆಳ್ವಿಕೆಗೆ ಒಳಪಟ್ಟಿದ್ದಿತು. ಅವರಲ್ಲಿ ಸಗರನೆಂಬುವನು ಬಹಳ ಪ್ರಸಿದ್ಧನಾಗಿದ್ದನು. ಅವನಿಂದಲೇ ಸಾಗರವು ತೋಡಲ್ಪಟ್ಟಿತು. ಅಶ್ವಮೇಧದ ಕುದುರೆಯನ್ನು ಹುಡುಕುವ ಸಲುವಾಗಿ ಅವನ ಅರುವತ್ತು ಸಾವಿರ ಮಕ್ಕಳೂ ಭೂಮಿಯನ್ನು ಅಗೆದು ಸಾಗರವನ್ನು ಮಾಡಿದರು. ಸಗರನು ದಂಡಯಾತ್ರೆಗೆ ಹೊರಡುತ್ತಿದ್ದ ಕಾಲದಲ್ಲಿ ಅವನ ಅರುವತ್ತು ಸಾವಿರ ಮಕ್ಕಳೂ ಅವನನ್ನು ಹಿಂಬಾಲಿಸಿ ಹೋಗುತ್ತಿದ್ದರು. ಈ ಪೃಥ್ವಿಯಲ್ಲಿ ಅವನಿಗೆ ಎದುರಾಗಿ ನಿಲ್ಲುವ ರಾಜರು ಮತ್ತಾರೂ ಇರಲಿಲ್ಲ. ಮಹಾತ್ಮರಾದ ಇಕ್ಷ್ವಾಕುವೇ ಮೊದಲಾದ ರಾಜರು ಜನಿಸಿದ್ದ ಆ ಮಹಾವಂಶದಲ್ಲಿ ರಾಮಾಯಣವೆಂದು ಹೇಳಲ್ಪಡುವ

* 'ಮಾರ್ಗ', 'ದೇಶೀ' ಎಂಬ ಎರಡು ಸಂಪ್ರದಾಯಗಳು ಸಂಗೀತಶಾಸ್ತ್ರದಲ್ಲಿವೆಯೆಂದು ತಜ್ಞರು ಹೇಳುತ್ತಾರೆ. ಪ್ರಾಕೃತಗೀತಗಳನ್ನು 'ದೇಶೀ' ಸಂಪ್ರದಾಯಕ್ರಮದಲ್ಲಿಯೂ, ಸಂಸ್ಕೃತಗೀತಗಳನ್ನು 'ಮಾರ್ಗ' ಸಂಪ್ರದಾಯಕ್ರಮದಲ್ಲಿಯೂ ಹಾಡುತ್ತಾರೆ.

ಪೂಜಾರ್ಹವಾದ ಆಖ್ಯಾನವು ಉದ್ಭೂತವಾಯಿತು. ಬ್ರಹ್ಮನ ವರಪ್ರಸಾದ ದಿಂದ ರಚಿಸಲ್ಪಟ್ಟ ರಾಮಾಯಣವನ್ನು ಆಮೂಲಾಗ್ರವಾಗಿ, ಸ್ವಲ್ಪವೂ ನ್ಯೂನತೆಗಳಿಲ್ಲದಂತೆ ವಿಸ್ತಾರವಾಗಿ ಹೇಳುತ್ತೇವೆ. ಧರ್ಮ-ಕಾಮಾರ್ಥಗಳ ಸಾಧನೆಗೆ ಕಾರಣಭೂತವಾದ ರಾಮಾಯಣವನ್ನು ಶ್ರದ್ಧೆಯಿಂದ ಕೇಳಿರಿ! ಸರಯೂನದಿಯ ತೀರದಲ್ಲಿ ಸಮೃದ್ಧವಾದ ಜನಸ್ತೋಮದಿಂದಲೂ, ಸಂತುಷ್ಟರಾದ ಜನರಿಂದಲೂ ಮತ್ತು ಧನ-ಧಾನ್ಯಸಮೃದ್ಧಿಯಿಂದಲೂ ಕೂಡಿರುವ ಕೋಸಲವೆಂಬ ದೇಶವಿದೆ. ಆ ದೇಶದಲ್ಲಿ ತ್ರಿಲೋಕಪ್ರಸಿದ್ಧವಾದ 'ಅಯೋಧ್ಯಾ' ಎಂಬ ನಗರಿಯುಂಟು. ಅದು ಮಾನವೇಂದ್ರನಾದ ಮನು ಚಕ್ರವರ್ತಿಯಿಂದ ನಿರ್ಮಿಸಲ್ಪಟ್ಟಿರುವ ಪಟ್ಟಣ. ಸರ್ವದಾ ಕಾಂತಿಯಿಂದ ಕೂಡಿರುವ ಆ ಮಹಾನಗರಿಯು ಹನ್ನೆರಡು ಯೋಜನ ಉದ್ದ ಮತ್ತು ಮೂರು ಯೋಜನದಷ್ಟು ಅಗಲವಾಗಿದೆ. ಅಲ್ಲಿನ ಬೀದಿಗಳು ಬಹಳ ಅಗಲವಾಗಿಯೂ ಮತ್ತು ಸಾಲುಮರಗಳಿಂದ ಅಲಂಕೃತವಾಗಿಯೂ ಇವೆ. ನೇರವಾದ ಮತ್ತು ಅಗಲವಾದ, ಸ್ವಲ್ಪವೂ ಹಳ್ಳ-ತಿಟ್ಟಿಲ್ಲದಂತೆ ಮಾಡಿರುವ ರಾಜ ಮಾರ್ಗಗಳಿಂದ ಆ ನಗರಿಯು ಸುಶೋಭಿತವಾಗಿದೆ. ಸರ್ವಕಾಲಗಳಲ್ಲಿಯೂ ಸಾಲುಮರಗಳಿಂದ ಹೂಗಳು ಉದುರಿ ಮಾರ್ಗಗಳು ಸರ್ವದಾ ಸುಗಂಧ ಮಯವಾಗಿರುತ್ತವೆ. ಧೂಳಾಗದಂತೆ ಪ್ರತಿನಿತ್ಯವೂ ರಸ್ತೆಗಳಿಗೆ ನೀರನ್ನು ಚುಮುಕಿಸುವ ವ್ಯವಸ್ಥೆಯಿದೆ. ಆ ಮಹಾರಾಷ್ಟ್ರವನ್ನು (ಕೋಸಲರಾಜ್ಯವನ್ನು) ಧರ್ಮದಿಂದ ಪರಿಪಾಲಿಸುತ್ತಿದ್ದ ದಶರಥನು–ಅಮರಾವತಿಯಲ್ಲಿ ದೇವಪತಿ ಯಾದ ಇಂದ್ರನು ವಾಸಿಸುವಂತೆ–ಅಯೋಧ್ಯಾನಗರಿಯಲ್ಲಿ ವಾಸಿಸುತ್ತಿದ್ದನು. ಆ ಪಟ್ಟಣವು ಪ್ರಶಸ್ತವಾದ ಬಾಗಿಲುಗಳಿಂದಲೂ, ಹೊರಬಾಗಿಲು ಗಳಿಂದಲೂ ಅಲಂಕರಿಸಲ್ಪಟ್ಟಿರುವುದು. ಅಂಗಡಿಗಳು ಒಂದೇ ಸಮನಾಗಿದ್ದು ಒಂದಕ್ಕೊಂದು ಸೇರಿಕೊಂಡಿರದೇ ಸುವ್ಯವಸ್ಥೆಯಿಂದ ಕಟ್ಟಲ್ಪಟ್ಟಿದ್ದುವು. ನಾನಾವಿಧವಾದ ಯಂತ್ರಗಳಿಂದಲೂ, ಆಯುಧಗಳಿಂದಲೂ ಆ ನಗರವು ಸಮೃದ್ಧವಾಗಿದ್ದಿತು. ಅಲ್ಲಿ ನಾನಾವಿಧವಾದ ಶಿಲ್ಪಕಲೆಗಳಲ್ಲಿ ಚತುರರಾದ ಶಿಲ್ಪಿಗಳು ಅನೇಕರಿದ್ದರು. ಅನೇಕ ವಂದಿ-ಮಾಗಧರುಗಳಿದ್ದರು. ಆ ನಗರಿಯು ಧನ-ಧಾನ್ಯಸಮೃದ್ಧವಾಗಿಯೂ ಅನುಪಮಕಾಂತಿಯುತವಾಗಿಯೂ ಇದ್ದಿತು. ಆ ನಗರಿಯಲ್ಲಿ ಎತ್ತರವಾದ ನೂರಾರು ಮಹಡಿಗಳಿದ್ದು, ಅವುಗಳ

ಮೇಲೆ ಧ್ವಜ-ಪತಾಕೆಗಳು ಹಾರಾಡುತ್ತಿದ್ದುವು. ನಗರಿಯ ಸುತ್ತಲೂ ಅಭೇದ್ಯವಾದ ಕೋಟೆಯಿದ್ದು, ಅದರಲ್ಲಿ ನೂರಾರು ಶತಘ್ನಿಗಳೆಂಬ ಯಂತ್ರಗಳನ್ನು ಶತ್ರುಗಳ ವಿನಾಶಕ್ಕಾಗಿ ಸ್ಥಾಪಿಸಿದ್ದರು. ಆ ಪಟ್ಟಣದಲ್ಲಿ ಅಲ್ಲಲ್ಲಿಯೇ ನರ್ತಕಿಯರ ಸಂಘಗಳೂ ನಾಟಕಶಾಲೆಗಳೂ ಇದ್ದುವು. ಮಾವು, ಹಲಸು ಮುಂತಾದ ವೃಕ್ಷಗಳಿಂದ ಕೂಡಿದ ಉದ್ಯಾನವನಗಳಿದ್ದುವು. ನಗರದ ಸುತ್ತಲೂ ನಿರ್ಮಿಸಿರುವ ಪ್ರಾಕಾರವೂ ಮೇಖಲೆಯಂತೆ ಶೋಭಿಸುತ್ತಿದ್ದಿತು. ಅಯೋಧ್ಯಾನಗರಿಯ ಸುತ್ತಲೂ ಅಭೇದ್ಯವಾದ ದುರ್ಗವಿದ್ದಿತು. ದುರ್ಗಕ್ಕೆ ಕೆಳಭಾಗದಲ್ಲಿ ಆಳವಾದ ಕೊತ್ತಲಿದ್ದಿತು. ಆದುದರಿಂದ ಆ ನಗರಿಯು ಶತ್ರುಗಳಿಗೆ ಅಭೇದ್ಯವಾಗಿದ್ದಿತು. ಅಲ್ಲಿ ಅನೇಕ ಸಾವಿರ ಕುದುರೆಗಳೂ, ಆನೆಗಳೂ, ಹಸುಗಳೂ, ಒಂಟೆಗಳೂ ಮತ್ತು ಹೇಸರಕತ್ತೆಗಳೂ ಇದ್ದುವು. ದಶರಥನಿಗೊಪ್ಪಿಸುವ ಸಲುವಾಗಿ ಕಪ್ಪ-ಕಾಣಿಕೆಗಳನ್ನು ಹೊತ್ತು ತಂದ ಅನೇಕ ಆಶ್ರಿತರಾಜರಿಂದ ಆ ಪಟ್ಟಣವು ಆವೃತವಾಗಿದ್ದಿತು. ವ್ಯಾಪಾರಿಗಳು ತಮ್ಮ ಪದಾರ್ಥಗಳ ವಿಕ್ರಯಕ್ಕಾಗಿ ನಾನಾದೇಶಗಳಿಂದ ಅಲ್ಲಿಗೆ ಬಂದು ನೆಲೆಸುತ್ತಿದ್ದರು. ಅವರು ವ್ಯಾಪಾರಕ್ಕಾಗಿ ತಂದ ತಮ್ಮ ವಸ್ತುಗಳನ್ನು ನಯನಮನೋಹರವಾದ ರೀತಿಯಲ್ಲಿ ಜೋಡಿಸುತ್ತಿದ್ದರು. ಇಂತಹ ಅನೇಕ ಅಂಗಡಿಗಳಿಂದ ಅಯೋಧ್ಯಾಪಟ್ಟಣವು ಸುಶೋಭಿತವಾಗಿದ್ದಿತು. ಅಲ್ಲಿನ ರಾಜಗೃಹಗಳು ರತ್ನಖಚಿತಗಳಾಗಿದ್ದುವು. ರಾಜಗೃಹಗಳ ಸುತ್ತಲೂ ಕ್ರೀಡಾಪರ್ವತಗಳಿದ್ದುವು. ಅದಕ್ಕೆ ಸೇರಿದಂತೆಯೇ ರಾಜರ ವಿನೋದಾರ್ಥವಾಗಿ ಜೂಜಾಟದ ನಿವಾಸಗಳೂ ಇದ್ದುವು. ಅವೆಲ್ಲವುಗಳಿಂದಲೂ ಕೂಡಿರುವ ಆ ಮಹಾನಗರಿಯು ಇಂದ್ರನ ಅಮರಾವತಿಗೆ ಸದೃಶವಾ ಗಿದ್ದಿತು. ಅಲ್ಲಿಯ ರಾಜಗೃಹಗಳು ವಿಚಿತ್ರರೀತಿಯಲ್ಲಿದ್ದುವು. ಆ ಪಟ್ಟಣವು ಅಷ್ಟಾಪದ ಫಲದಂತೆ ಎಂಟು ಭಾಗಗಳಿಂದಲೂ, ಲೋಕಸುಂದರಿಯರಾದ ಸ್ತ್ರೀಯರ ಸಮೂಹದಿಂದಲೂ, ನಾನಾವಿಧವಾದ ಬಹುಮೌಲ್ಯವಾದ ವಜ್ರ-ವೈಡೂರ್ಯಾದಿಗಳಿಂದಲೂ, ಪದ್ಮರಾಗ-ಗೋಮೇಧಿಕ-ಇಂದ್ರನೀಲಾದಿ ರತ್ನಗಳಿಂದಲೂ, ವಿಮಾನಗೃಹಗಳಿಂದಲೂ ಶೋಭಿಸುತ್ತಿದ್ದಿತು.* ಪಟ್ಟಣಿಗರ

---

* ವಿಶಿಷ್ಟರೀತಿಯಲ್ಲಿ ನಿರ್ಮಿಸಿದ ರಾಜಗೃಹಗಳಿಗೆ ವಿಮಾನವೆಂದು ಹೆಸರು.
"ವಿಮಾನೋಽಸ್ತ್ರೀ ದೇವಯಾನೇ ಸಾರ್ವಭೌಮಿಕಸದ್ಮನಿ" [ಅಮರಃ]

ಮನೆಗಳೂ ನಿಬಿಡವಾಗಿಯೂ, ಸುಂದರವಾಗಿಯೂ ಕಟ್ಟಲ್ಪಟ್ಟಿದ್ದುವು. ನಗರಿಯು ಸಮನೆಲದಲ್ಲಿ ನಿರ್ಮಿತವಾಗಿದ್ದಿತು. ಶಾಲಿ-ತಂಡುಲಧಾನ್ಯ ಗಳಿಂದ ಸಮೃದ್ಧವಾಗಿದ್ದಿತು. ಕಬ್ಬಿನ ಹಾಲಿನಂತಹ ರುಚಿಕರವಾದ ನೀರು ಸಮೃದ್ಧವಾಗಿದ್ದಿತು. ಪಟ್ಟಣದ ಎಲ್ಲೆಡೆಗಳಲ್ಲಿಯೂ ಭೇರೀನಿನಾದಗಳೂ, ಸುಶ್ರಾವ್ಯವಾದ ವೀಣಾವಾದನಗಳೂ ಮತ್ತು ಅದಕ್ಕೆ ಹಿನ್ನೆಲೆಯಲ್ಲಿ ಮೃದಂಗ-ಮದ್ದಲೆಗಳ ನಿನಾದಗಳೂ ಕೇಳಿಬರುತ್ತಿದ್ದುವು. ಜನರು ಯಾವಾ ಗಲೂ ಆನಂದದಿಂದಿರುತ್ತಿದ್ದರು. ಈ ರೀತಿಯಲ್ಲಿ ಅನವರತವೂ ಮಂಗಳ ನಿನಾದದಿಂದ ಕೂಡಿದ ಅಯೋಧ್ಯೆಯು ಪೃಥ್ವಿಯಲ್ಲಿಯೇ ಅತಿಸುಂದರವಾದ ಏಕೈಕಪಟ್ಟಣವಾಗಿದ್ದಿತು. ತಪಸ್ಸಿನಿಂದ ಸಿದ್ಧಿಯನ್ನು ಪಡೆದು ಸ್ವರ್ಗಕ್ಕೆ ಹೋಗಿರುವ ಸಿದ್ಧರ ತಪಃಫಲದಿಂದ ಪ್ರಾಪ್ತವಾಗುವ ದೇವವಿಮಾನಗಳಂತೆ– ಅಯೋಧ್ಯಾನಗರದಲ್ಲಿ ನಯನಮನೋಹರವಾಗಿ ನಿರ್ಮಿತವಾದ ಸುಂದರ ನಿವಾಸಗಳು ಕಂಗೊಳಿಸುತ್ತಿದ್ದುವು. ಅನೇಕದೇಶಗಳ ರಾಜರು ದರ್ಶನಾ ಕಾಂಕ್ಷಿಗಳಾಗಿಯೇ ಆ ಸುಂದರನಗರಕ್ಕೆ ಬರುತ್ತಿದ್ದರು. ಆ ನಗರವು ಶ್ರೇಷ್ಠ ಪುರುಷರಿಂದ ತುಂಬಿದ್ದಿತು. ಆ ರಾಷ್ಟ್ರದ ಸೈನಿಕರು ಬಾಣಪ್ರಯೋಗದಲ್ಲಿ ಅತಿಶಯವಾದ ಕೈಚಳಕವುಳ್ಳವರೂ ಶಸ್ತ್ರಾಸ್ತ್ರವಿಶಾರದರೂ ಆಗಿದ್ದರು. ಅವರು ಅಸಹಾಯಕನನ್ನೂ, ವಂಶದ ಅಭ್ಯುದಯಕ್ಕೆ ಏಕಮಾತ್ರಪುತ್ರನಾಗಿರುವವ ನನ್ನೂ, ಪಲಾಯನಮಾಡುತ್ತಿರುವವನನ್ನೂ, ಬಚ್ಚಿಟ್ಟುಕೊಂಡಿರುವವನನ್ನೂ ಬಾಣಪ್ರಯೋಗಮಾಡಿ ಕೊಲ್ಲುತ್ತಿರಲಿಲ್ಲ. ಮನೋಬಲ ಮತ್ತು ಬಾಹುಬಲ ಗಳಿಂದ ಕೂಡಿದ ಆ ಯೋಧರು ಮದಿಸಿ ಕೊಬ್ಬಿರುವ, ಘೋರಗರ್ಜನೆ ಮಾಡುತ್ತಿರುವ, ಅರಣ್ಯವಾಸಿಗಳಾದ ಸಿಂಹ-ವ್ಯಾಘ್ರ-ವರಾಹಗಳನ್ನು ತೀಕ್ಷ್ಣ ವಾದ ಶಸ್ತ್ರಗಳಿಂದ ಕೊಲ್ಲುತ್ತಿದ್ದರು. ತನ್ನನ್ನೂ, ಸಾರಥಿಯನ್ನೂ, ಕುದುರೆ ಗಳನ್ನೂ ರಕ್ಷಣೆಮಾಡಿಕೊಂಡು ಯುದ್ಧಮಾಡುವ ಸಾವಿರಾರು ಮಹಾ ರಥಿಕರಿಂದ ಅಯೋಧ್ಯಾನಗರಿಯು ತುಂಬಿದ್ದಿತು. ಇಂತಹ ಅನುಪಮವಾದ ಮಹಾನಗರಿಯನ್ನು ದಶರಥರಾಜನು ಹಿಂದಿನವರಿಗಿಂತಲೂ ಚೆನ್ನಾಗಿ ಆಳುತ್ತಿದ್ದನು. ಆ ಮಹಾನಗರಿಯಲ್ಲಿ ಅನೇಕಾನೇಕ ಆಹಿತಾಗ್ನಿಗಳೂ, ಶಮ- ದಮಾದಿಗುಣಾನ್ವಿತರೂ, ವೇದ-ವೇದಾಂಗಪಾರಂಗತರೂ ಆದ ದ್ವಿಜೋ ತ್ತಮರಿದ್ದರು. ಸಾವಿರಸಂಖ್ಯೆಯಲ್ಲಿ ವಸ್ತುಗಳನ್ನು ದಾನಮಾಡುವ, ಸತ್ಯ

ಪ್ರಿಯರಾದ ಮಹಾತ್ಮರುಗಳಿಂದ ಆ ಪಟ್ಟಣವು ನಿಬಿಡವಾಗಿದ್ದಿತು. ಅಲ್ಲಿ ಮಹರ್ಷಿಗಳಿಗೆ ಸಮಾನರಾದ ಅನೇಕ ಮುನಿಗಳಿದ್ದರು. ಇಂತಹ ಸರ್ವಾಂಗ ಸುಂದರವಾದ ಅಯೋಧ್ಯಾನಗರಿಯನ್ನು ರಾಜನಾದ ದಶರಥನು ಆಳು ತ್ತಿದ್ದನು. ೫ನೆಯ ಸರ್ಗವು ಮುಗಿಯಿತು.

ಬಾಲಕಾಂಡ ೬ನೆಯ ಸರ್ಗ

ದಶರಥರಾಜನ ರಾಜ್ಯಭಾರ ಮತ್ತು ಜನಜೀವನ

ತಸ್ಯಾಂ ಪುರ್ಯಾಮಯೋಧ್ಯಾಯಾಂ ವೇದವಿತ್ಸರ್ವಸಂಗ್ರಹಃ ।
ದೀರ್ಘದರ್ಶೀ ಮಹಾತೇಜಾಃ ಪೌರಜಾನಪದಪ್ರಿಯಃ ॥೧॥

ಆ ಅಯೋಧ್ಯಾಪಟ್ಟಣವನ್ನು ಆಳುತ್ತಿದ್ದ ದಶರಥಮಹಾರಾಜನು ವೇದವನ್ನು ಸಾಂಗವಾಗಿ ತಿಳಿದವನಾಗಿದ್ದನು. ಶೂರರನ್ನೂ, ವಿದ್ವಾಂಸರನ್ನೂ ಧನ-ಮಾನಾದಿಗಳಿಂದ ಸಂಗ್ರಹಿಸುತ್ತಿದ್ದನು. ದೀರ್ಘದರ್ಶಿಯಾಗಿದ್ದನು.* ಮಹಾಪ್ರತಾಪವುಳ್ಳವನಾಗಿದ್ದನು. ಪ್ರಜೆಗಳಿಗೆ ಅತಿಪ್ರಿಯನಾದ ರಾಜನಾಗಿ ದ್ದನು. ಇಕ್ಷ್ವಾಕುವಂಶೋತ್ಪನ್ನನಾದ ಅವನು ಹತ್ತುಸಾವಿರ ಮಹಾರಥ ರೊಡನೆ ಇತರರ ಸಹಾಯವಿಲ್ಲದೇ ಯುದ್ಧಮಾಡುತ್ತಿದ್ದುದರಿಂದ ಅತಿರಥ ನೆನಿಸಿಕೊಂಡಿದ್ದನು. ಅನೇಕ ಯಾಗಗಳನ್ನು ಮಾಡಿದ್ದನು. ಪ್ರಜೆಗಳಿಗೆ ಅನು ಕೂಲವಾಗುವಂತೆ ಕೆರೆ, ಬಾವಿ ಮುಂತಾದುವುಗಳನ್ನು ತೋಡಿಸಿ ಪ್ರಜಾ ಪಾಲನಧರ್ಮದಲ್ಲಿ ನಿರಂತರವಾದ ಆಸಕ್ತಿಯುಳ್ಳವನಾಗಿದ್ದನು. ಪ್ರಜೆ ಗಳನ್ನೂ, ಸಾಮಂತರಾಜರನ್ನೂ, ಅಮಾತ್ಯ-ದಂಡನಾಯಕರನ್ನೂ ಸ್ವಾಧೀನ ದಲ್ಲಿಟ್ಟುಕೊಂಡಿದ್ದನು. ಅವನು ವಸ್ತುತಃ ರಾಜರ್ಷಿಯಾಗಿದ್ದರೂ ಮಹರ್ಷಿ ಗಳಿಗೆ ಸಮಾನನಾಗಿದ್ದನು. ಸ್ವರ್ಗ, ಮರ್ತ್ಯ, ಪಾತಾಳ–ಈ ಮೂರು ಲೋಕ ಗಳಲ್ಲಿಯೂ ದಶರಥನು ಪ್ರಸಿದ್ಧನಾಗಿದ್ದನು. ಅವನಲ್ಲಿ ಅಸಂಖ್ಯಾತವಾದ ಸೇನಾಬಲವಿದ್ದಿತು. ಅವನು ಎಲ್ಲ ಶತ್ರುಗಳನ್ನೂ ಅಡಗಿಸಿದ್ದನು. ಸದ್ವಂಶ ದಲ್ಲಿ ಹುಟ್ಟಿದ ಮಿತ್ರರಿಂದ ಕೂಡಿದವನಾಗಿದ್ದನು. ಜಿತೇಂದ್ರಿಯನಾಗಿದ್ದನು.

---

* ಮುಂದೆ ಅನೇಕದಿನಗಳು ಕಳೆದನಂತರ ಏನಾಗಬಹುದೆಂಬುದನ್ನು ಇಂದೇ ಯೋಚಿಸಿ ಕಾರ್ಯಮಾಡುವವನಿಗೆ ದೂರದರ್ಶೀ ಅಥವಾ ದೀರ್ಘದರ್ಶೀ ಎಂದು ಹೇಳುತ್ತಾರೆ.

ಧನದಲ್ಲಿಯೂ ಮತ್ತು ಅನರ್ಘವಸ್ತುಗಳ ಸಂಗ್ರಹದಲ್ಲಿಯೂ ಇಂದ್ರ-ಕುಬೇರರಿಗೆ ಸಮಾನನಾಗಿದ್ದನು.

ಹಿಂದೆ ವೈವಸ್ವತಮನುವು ಮಹಾತೇಜಸ್ಸಿನಿಂದ ಕೂಡಿದವನಾಗಿ ಲೋಕವನ್ನು ಹೇಗೆ ರಕ್ಷಣೆಮಾಡುತ್ತಿದ್ದನೋ–ಅದೇ ರೀತಿಯಲ್ಲಿ ಮಾನವ ಕುಲಾವತಂಸನಾದ ದಶರಥನೂ ಅಯೋಧ್ಯೆಯಲ್ಲಿ ವಾಸಿಸುತ್ತಾ ಭೂಲೋಕ ವನ್ನು ಪಾಲನೆಮಾಡುತ್ತಿದ್ದನು. ದಶರಥನು ಸತ್ಯವ್ರತನಾಗಿ ಧರ್ಮಾರ್ಥ-ಕಾಮಗಳೆಂಬ ಪುರುಷಾರ್ಥಗಳನ್ನು ಸಾಧನೆಮಾಡುತ್ತಾ–ಇಂದ್ರನು ಅಮರಾ ವತೀ ಪಟ್ಟಣವನ್ನು ಪಾಲಿಸುವಂತೆ–ಶ್ರೇಷ್ಠವಾದ ಆ ಅಯೋಧ್ಯಾನಗರಿ ಯನ್ನು ಪರಿಪಾಲಿಸುತ್ತಿದ್ದನು. ಆ ಪಟ್ಟಣದಲ್ಲಿ ಪ್ರಜೆಗಳೆಲ್ಲರೂ ನಿತ್ಯ ಸಂತುಷ್ಟರಾಗಿದ್ದರು. ಅನಕ್ಷರಸ್ಥರಾಗಲೀ, ಅವಿದ್ಯಾವಂತರಾಗಲೀ ಅಲ್ಲಿ ಇರ ಲಿಲ್ಲ. ಸಕಲರೂ ವೇದ-ಶಾಸ್ತ್ರಗಳನ್ನು ಅಧ್ಯಯನಮಾಡಿದ್ದರು. ಎಲ್ಲರೂ ಧರ್ಮಾತ್ಮರಾಗಿದ್ದರು. ತಮ್ಮ-ತಮ್ಮ ವರ್ಣಾಶ್ರಮಗಳ ಅನುಷ್ಠಾನದಿಂದ ಬರುವ ಧನದಿಂದಲೇ ತುಷ್ಟರಾಗಿರುತ್ತಿದ್ದರು. ಪರರ ಧನವನ್ನು ಕಂಡು ಅಸೂಯೆಪಡುತ್ತಿರಲಿಲ್ಲ. ಲೋಭಿಗಳಾಗಿರಲಿಲ್ಲ. ಸರ್ವರೂ ಸತ್ಯವಾದಿಗಳಾ ಗಿದ್ದರು. ಆ ಪಟ್ಟಣದಲ್ಲಿ ಅಲ್ಪಧನವುಳ್ಳವನು ಯಾವನೂ ಇರಲಿಲ್ಲ. ಧರ್ಮಾರ್ಥ-ಕಾಮಗಳನ್ನು ಸಾಧಿಸದ ಕುಟುಂಬಿಯು ಯಾರೂ ಇರಲಿಲ್ಲ. ಎಲ್ಲರ ಮನೆಗಳಲ್ಲಿಯೂ ಅನೇಕ ಹಸುಗಳೂ, ಕುದುರೆಗಳೂ ಇರುತ್ತಿ ದ್ದುವು. ಕುಟುಂಬಿಗಳ* ಮನೆಗಳೆಲ್ಲವೂ ಧನ-ಧಾನ್ಯಸಮೃದ್ಧವಾಗಿದ್ದುವು. ಅಯೋಧ್ಯೆಯಲ್ಲಿ ಕೇವಲ ಕಾಮಾಸಕ್ತನಾದ ಮನುಷ್ಯನಾಗಲೀ, ಕದರ್ಯ ನಾಗಲೀ,[1] ಕ್ರೂರಿಯಾಗಲೀ, ಅವಿದ್ಯಾವಂತನಾಗಲೀ, ಪರಲೋಕ ಮತ್ತು

---

* ಮಾತಾ ಪಿತಾ ಸ್ನುಷೇ ಪುತ್ರೌ ಪುತ್ರೀ ಪತ್ನ್ಯತಿಥಿಃ ಸ್ವಯಂ । ದಶಸಂಖ್ಯಃ ಕುಟುಂಬೀತಿ ॥ ತಾಯಿ, ತಂದೆ, ಇಬ್ಬರು ಸೊಸೆಯರು, ಇಬ್ಬರು ಗಂಡುಮಕ್ಕಳು, ಮಗಳು, ಪತ್ನಿ, ಅತಿಥಿ ಮತ್ತು ಯಜಮಾನ–ಈ ಹತ್ತು ಮಂದಿ ಸೇರಿದ ಸಂಸಾರಕ್ಕೆ ಕುಟುಂಬವೆಂದು ಹೆಸರು.

[1] ಆತ್ಮಾನಂ ಧರ್ಮಕೃತ್ಯಂ ಚ ಪುತ್ರದಾರಾಂಶ್ಚ ಪೀಡಯೇತ್ ॥ ಲೋಭಾದ್ಯಃ ಪಿತರೌ ಭ್ರಾತೄನ್ ಸ ಕದರ್ಯ ಇತಿ ಸ್ಮೃತಃ ॥ ಲೋಭದ ಕಾರಣದಿಂದ ಯಾವನು ಧರ್ಮಕಾರ್ಯವನ್ನು ತ್ಯಜಿಸುವನೋ–ಪುತ್ರರನ್ನೂ, ಹೆಂಡತಿಯನ್ನೂ, ತಂದೆ-ತಾಯಿ

ಅದಕ್ಕೆ ಹೇತುಭೂತವಾದ ಪಾಪ-ಪುಣ್ಯಗಳು ಇಲ್ಲವೆಂದು ಹೇಳುವ ನಾಸ್ತಿಕನಾಗಲೀ ಇರಲಿಲ್ಲ. ಆ ಪಟ್ಟಣದಲ್ಲಿ ಪುರುಷರೂ ಮತ್ತು ಸ್ತ್ರೀಯರೂ ಧರ್ಮಶೀಲರೂ, ಜಿತೇಂದ್ರಿಯರೂ ಆಗಿದ್ದರು. ಎಲ್ಲರೂ ಸ್ವಭಾವಜನ್ಯವಾದ ಸೌಶೀಲ್ಯ-ಸದಾಚಾರಗಳಿಂದ ಮಹರ್ಷಿಗಳಂತೆ ನಿರ್ಮಲಚಿತ್ತರಾಗಿದ್ದರು. ದಶರಥನ ಪ್ರಜೆಗಳಾರೂ ಕರ್ಣಕುಂಡಲಾದಿಗಳಿಲ್ಲದವರಾಗಿರಲಿಲ್ಲ. ಎಲ್ಲರೂ ಕರ್ಣಾಭರಣಗಳನ್ನೂ, ಶಿರಸ್ತ್ರಾಣಗಳನ್ನೂ, ರತ್ನಮಾಲೆಗಳನ್ನೂ ಧರಿಸಿರುತ್ತಿದ್ದರು. ತಮ್ಮ ಅಭಿಲಾಷೆಯನ್ನು ಪೂರ್ಣಮಾಡಿಕೊಳ್ಳುವ ಸಾಮರ್ಥ್ಯವುಳ್ಳವರಾಗಿದ್ದರು. ಕಾಲ-ಕಾಲಕ್ಕೆ ಅಭ್ಯಂಗನಸ್ನಾನಮಾಡುತ್ತಲೂ, ಚಂದನಾಗರುಗಳಿಂದ ಶರೀರವನ್ನು ಅನುಲೇಪಿಸಿಕೊಳ್ಳುತ್ತಲೂ ಇದ್ದರು. ಕುಂಕುಮ-ಕಸ್ತೂರ್ಯಾದಿ ಸುಗಂಧವಸ್ತುಗಳ ಪರಿಮಳವನ್ನು ಹೊರಸೂಸುತ್ತಿದ್ದರು. ಅಲ್ಲಿ ಆಹಾರಾಭಾವವಿರಲಿಲ್ಲ. ಎಲ್ಲರೂ ಮೃಷ್ಟಾನ್ನ ಭೋಜನವನ್ನೇ ಮಾಡುತ್ತಿದ್ದರು. ಅಯೋಧ್ಯೆಯಲ್ಲಿ ಅನ್ನದಾನಮಾಡದವರು ಯಾರೂ ಇರಲಿಲ್ಲ. ಎಲ್ಲರೂ ಅತಿಥಿಗಳ ಆಗಮನಾಕಾಂಕ್ಷಿಗಳಾಗಿರುತ್ತಿದ್ದರು. ಎಲ್ಲರೂ ತೋಳ್ಬಳೆಗಳನ್ನೂ, ಉರೋಭೂಷಣವಾಗಿದ್ದ ಪದಕವನ್ನೂ, ಹಸ್ತಾಭರಣಗಳನ್ನೂ ಧರಿಸಿರುತ್ತಿದ್ದರು. ಜಿತೇಂದ್ರಿಯರಲ್ಲದವರು ಅಯೋಧ್ಯೆಯಲ್ಲಿ ಯಾರೂ ಇರಲಿಲ್ಲ. ಆಹಿತಾಗ್ನಿಗಳಲ್ಲದ ಮತ್ತು ಸೋಮಯಾಗಮಾಡದ ಬ್ರಾಹ್ಮಣರೇ ಅಯೋಧ್ಯೆಯಲ್ಲಿರಲಿಲ್ಲ. ಅಲ್ಪವಿದ್ಯೆಯುಳ್ಳವರಾಗಲೀ, ಅಲ್ಪೈಶ್ವರ್ಯವುಳ್ಳವರಾಗಲೀ ಇರಲಿಲ್ಲ. ಕ್ಷುದ್ರರೂ ಮತ್ತು ಕಳ್ಳಕಾಕರೂ ಇರಲಿಲ್ಲ. ಆ ರಾಜ್ಯದಲ್ಲಿ ಪರದಾರಾಭಿಗಮನವನ್ನು ಮಾಡಿ ವರ್ಣಸಂಕರಕ್ಕೆ ಯಾರೂ ಅವಕಾಶವೀಯುತ್ತಿರಲಿಲ್ಲ. ಬ್ರಾಹ್ಮಣರು ಯಾವಾಗಲೂ ಸ್ವಕರ್ಮನಿರತರಾಗಿಯೂ, ಜಿತೇಂದ್ರಿಯರಾಗಿಯೂ ಇದ್ದರು. ಅಧ್ಯಯನ-ದಾನನಿರತರಾಗಿದ್ದರು. ಪ್ರತಿಗ್ರಹಮಾಡುವುದರಲ್ಲಿ ಸಂಕೋಚವುಳ್ಳವರಾಗಿದ್ದರು. ಹಿಂದೆ ಹೇಳಿದಂತೆ ಆ ಪಟ್ಟಣದಲ್ಲಿ ನಾಸ್ತಿಕನೂ, ಸುಳ್ಳು ಹೇಳುವವನೂ, ಅಲ್ಪವಿದ್ಯೆಯುಳ್ಳವನೂ, ಪರರ ಐಶ್ವರ್ಯವನ್ನು ಕಂಡು ಅಥವಾ

ಗಳನ್ನೂ, ಅಣ್ಣ-ತಮ್ಮಂದಿರನ್ನೂ ಹಿಂಸಿಸುವನೋ–ಸಂಪಾದಿಸಿದುದನ್ನು ತಾನೂ ಉಪಭೋಗಿಸದೇ ಇರುವನೋ–ಅವನಿಗೆ 'ಕದರ್ಯ', 'ಮಹಾಲೋಭಿ', 'ಕಡುಲೋಭಿ' ಎಂದು ಹೆಸರು.

ಪರರ ಅಭಿವೃದ್ಧಿಯನ್ನು ನೋಡಿ ಅಸೂಯೆಪಡುವವನೂ, ಕಾರ್ಯಸಾಧನೆಯಲ್ಲಿ ಅಶಕ್ತನೂ ಮತ್ತು ಅವಿದ್ಯಾವಂತನೂ ಇರಲಿಲ್ಲ. ಶಿಕ್ಷಾ, ವ್ಯಾಕರಣ, ಛಂದಸ್ಸು, ನಿರುಕ್ತ, ಜ್ಯೋತಿಷ, ಕಲ್ಪಗಳೆಂಬ ಷಡಂಗಗಳನ್ನು ಅಧ್ಯಯನ ಮಾಡದ ವೇದಾಧ್ಯಾಯಿಯಾಗಲೀ, ಚಾಂದ್ರಾಯಣಾದಿ ವ್ರತಾನುಷ್ಠಾನಗಳನ್ನು ಮಾಡದ ಗೃಹಸ್ಥನಾಗಲೀ, ಸಹಸ್ರಸುವರ್ಣಗಳನ್ನು ದಾನಮಾಡದವನಾಗಲೀ, ದೈನ್ಯವುಳ್ಳವನಾಗಲೀ, ಮನೋರೋಗದಿಂದ ಮತ್ತು ವ್ಯಾಧಿಗಳಿಂದ ಪೀಡಿತನಾದವನಾಗಲೀ ಅಯೋಧ್ಯಾಪಟ್ಟಣದಲ್ಲಿ ಇರಲಿಲ್ಲ. ಆ ನಗರಿಯಲ್ಲಿ ಸ್ತ್ರೀ-ಪುರುಷರೆಲ್ಲರೂ ಕಾಂತಿಯಿಂದ ಕೂಡಿದವರಾಗಿಯೂ ಮತ್ತು ರೂಪಸಂಪನ್ನರಾಗಿಯೂ ಇದ್ದರು. ಕುರೂಪಿಯಾಗಲೀ, ಕಾಂತಿಹೀನನಾಗಲೀ ಎಲ್ಲಿಯೂ ಕಾಣುತ್ತಿರಲಿಲ್ಲ. ಎಲ್ಲರೂ ರಾಜನಲ್ಲಿ ವಿಶೇಷವಾದ ಭಕ್ತಿ-ಗೌರವವುಳ್ಳವರಾಗಿದ್ದರು. ನಾಲ್ಕು ವರ್ಣಗಳವರೂ ದೇವತಾತಿಥಿ ಪೂಜಕರಾಗಿದ್ದರು. ಉಪಕಾರಸ್ಮರಣೆಯುಳ್ಳವರಾಗಿಯೂ, ದಾನಶೀಲರಾಗಿಯೂ, ಸ್ವಕರ್ಮಶೂರರಾಗಿಯೂ, ಕಷ್ಟಸಹಿಷ್ಣುಗಳಾಗಿಯೂ ಇದ್ದರು. ಅಲ್ಲಿಯ ಜನರೆಲ್ಲರೂ ಸತ್ಯ-ಧರ್ಮಗಳನ್ನೇ ಆಶ್ರಯವನ್ನಾಗಿ ಪಡೆದಿದ್ದರು. ಅದರಿಂದಾಗಿ ಸರ್ವರೂ ದೀರ್ಘಾಯುಷ್ಯವುಳ್ಳವರಾಗಿದ್ದರು. ಪುತ್ರ-ಪೌತ್ರರುಗಳಿಂದಲೂ, ಸ್ತ್ರೀಯರಿಂದಲೂ ಕೂಡಿದವರಾಗಿ ನಿತ್ಯಸಂತುಷ್ಟರಾಗಿದ್ದರು. ಕ್ಷತ್ರಿಯರು ಬ್ರಾಹ್ಮಣರ ಆಜ್ಞಾನುವರ್ತಿಗಳಾಗಿದ್ದರು. ವೈಶ್ಯರು ಕ್ಷತ್ರಿಯರ ಆಜ್ಞಾನುವರ್ತಿಗಳಾಗಿದ್ದರು. ಶೂದ್ರರು ಮೂರು ವರ್ಣಗಳವರ ಸೇವೆಯಲ್ಲಿ ನಿರತರಾಗಿರುತ್ತಿದ್ದು ಸ್ವಧರ್ಮವನ್ನು ಪರಿಪಾಲಿಸುತ್ತಿದ್ದರು. ಹಿಂದೆ ಧೀಮಂತನಾದ ಮನುಚಕ್ರವರ್ತಿಯಿಂದ ಈ ಭೂಮಿಯು ಪರಿಪಾಲಿತವಾಗಿದ್ದಂತೆ– ಇಕ್ಷ್ವಾಕುಕುಲೋತ್ಪನ್ನನಾದ ದಶರಥನಿಂದ ಅಯೋಧ್ಯಾನಗರಿಯು ಪರಿಪಾಲಿತವಾಗಿದ್ದಿತು. ಅಗ್ನಿಯಂತೆ ಪ್ರತಾಪಾತಿಶಯದಿಂದ ಪ್ರಜ್ವಲಿಸುತ್ತಿದ್ದು ಕಪಟವಿಲ್ಲದ ನಿಷ್ಣಾತರಾದ ಯೋಧರಿಂದ ಆ ಅಯೋಧ್ಯೆಯು* ಸಿಂಹಗಳು ವಾಸಮಾಡುತ್ತಿರುವ ಗುಹೆಯೋಪಾದಿಯಲ್ಲಿ ಸಂರಕ್ಷಿತವಾಗಿದ್ದಿತು. ದಶರಥನ ಅಪಾರವಾದ ಅಶ್ವಸೇನೆಯಲ್ಲಿರುವ ಕುದುರೆಗಳು ಕಾಂಬೋಜ,

---

* '**ಗುಹಾ ಕೇಸರಿಣಾಮಿವ**'–ಸಿಂಹವಿರುವ ಗುಹೆಯನ್ನು ಹೊರಗಡೆ ನಿಂತು ಯಾರೂ ಕಾವಲುಕಾಯಬೇಕಾಗಿಲ್ಲ. ಸಿಂಹವಿದೆಯೆಂದು ತಿಳಿದಮಾತ್ರದಿಂದಲೇ ಯಾರೂ ಗುಹೆಯ

ಬಾಹ್ಲೀಕ, ವನಾಯು ಮತ್ತು ಸಿಂಧುದೇಶಗಳಲ್ಲಿ ಹುಟ್ಟಿದುವುಗಳಾಗಿದ್ದುವು ಮತ್ತು ಇಂದ್ರನ ಉಚ್ಚೈಃಶ್ರವಸ್ಸೆಂಬ ಕುದುರೆಯಂತೆ ಶ್ರೇಷ್ಠಲಕ್ಷಣಗಳಿಂದ ಕೂಡಿದ್ದುವು. ದಶರಥರಾಜನಲ್ಲಿರುವ ಗಜಸೇನೆಯೂ ಪೃಥ್ವಿಯಲ್ಲಿಯೇ ಅಸಾಧಾರಣವಾಗಿದ್ದು, ಎಲ್ಲ ಆನೆಗಳೂ ವಿಂಧ್ಯಪರ್ವತದ ಕಾಡುಗಳಲ್ಲಿಯೂ, ಹಿಮವತ್ಪರ್ವತದ ಕಾಡುಗಳಲ್ಲಿಯೂ ಹುಟ್ಟಿದುವುಗಳಾಗಿದ್ದುವು. ಅವುಗಳೆಲ್ಲವೂ ಮದಿಸಿದ ಆನೆಗಳಾಗಿದ್ದುವಲ್ಲದೇ ಪರ್ವತಗಳಂತೆ ಬೃಹದಾಕಾರವುಳ್ಳವುಗಳಾಗಿಯೂ ಇದ್ದುವು. ಅವುಗಳಲ್ಲಿ ಇಂದ್ರನ ಪಟ್ಟದಾನೆಯಾದ ಐರಾವತದ ಕುಲೋತ್ಪನ್ನವಾದ ಆನೆಗಳೂ, ಅಂಜನವೆಂಬ ಮತ್ತು ವಾಮನವೆಂಬ ದಿಗ್ಗಜಗಳಿಂದ ಉತ್ಪನ್ನವಾದ ಆನೆಗಳೂ ಇದ್ದುವು. ಅಂತಹ ಅತ್ಯುತ್ತಮವಾದ ಮಹಾಬಲಯುಕ್ತವಾದ ಆನೆಗಳಿಂದ ದಶರಥರಾಜನ ಗಜ ಸೈನ್ಯವು ಪೂರ್ಣವಾಗಿದ್ದಿತು. ಹಿಮಾಲಯದಲ್ಲಿ ಹುಟ್ಟಿದ ಭದ್ರಜಾತಿಯ ಆನೆಗಳೂ, ವಿಂಧ್ಯಪರ್ವತದಲ್ಲಿ ಹುಟ್ಟಿದ ಮಂದ್ರಜಾತಿಯ ಆನೆಗಳೂ, ಸಹ್ಯ ಪರ್ವತದಲ್ಲಿ ಹುಟ್ಟಿದ ಮೃಗಜಾತಿಯ ಆನೆಗಳೂ ದಶರಥನ ಸೈನ್ಯದಲ್ಲಿ ದ್ದುವು. ಆ ಮೂರು ಜಾತಿಗಳ ಗಜಗಳ ಅನ್ಯೋನ್ಯಸಂಪರ್ಕದಿಂದ ಜನಿಸಿದ ಭದ್ರಮಂದ್ರ, ಭದ್ರಮೃಗ, ಮೃಗಮಂದ್ರಗಳೆಂಬ ಉಪಜಾತಿಗಳ ಆನೆಗಳೂ ಎಷ್ಟೋ ಇದ್ದುವು. ಮದಿಸಿದ ಮತ್ತು ಪರ್ವತೋಪಮಗಳಾದ, ಮಹಾ ಬಲಿಷ್ಠಗಳಾದ ಅಂತಹ ಆನೆಗಳಿಂದ ಅಯೋಧ್ಯಾಪಟ್ಟಣವು ಪೂರ್ಣವಾಗಿದ್ದಿತು. ಅಯೋಧ್ಯಾನಗರಿಯ ಎಲ್ಲೆಯನ್ನು ದಾಟಿ ಮುಂದೆ ಎರಡು ಯೋಜನಗಳವರೆಗೂ ಶತ್ರುಗಳು ಸುಳಿಯುವಂತೆಯೇ ಇರಲಿಲ್ಲ. ಆದುದರಿಂದ ಅನ್ವರ್ಥವಾದ 'ಅಯೋಧ್ಯಾ' ಎಂಬ ಹೆಸರಿನಿಂದಲೇ ಆ ಪಟ್ಟಣವು ಪ್ರಸಿದ್ಧವಾಗಿದ್ದಿತು. ಅಂತಹ ವಿಸ್ತಾರವಾದ ಅಯೋಧ್ಯಾಪಟ್ಟಣದಲ್ಲಿ ವಾಸಮಾಡುತ್ತಾ ರಾಜಾದಶರಥನು ಕೋಸಲದೇಶವನ್ನು ಆಳುತ್ತಿದ್ದನು. ಮಹಾತೇಜಸ್ವಿಯಾದ ದಶರಥನು ಶತ್ರುಗಳನ್ನು ಧ್ವಂಸಮಾಡಿ–ನಕ್ಷತ್ರಗಳನ್ನು ಚಂದ್ರನು ಆಳುವಂತೆ–ಅಯೋಧ್ಯೆಯನ್ನು ಆಳುತ್ತಿದ್ದನು. ಬಲವಾದ ಹೊರಬಾಗಿಲುಗಳಿಂದಲೂ, ಅಗಳಿಗಳಿಂದಲೂ ಕೂಡಿರುವ, ಚಿತ್ರ-ವಿಚಿತ್ರವಾದ

ಸಮೀಪಕ್ಕೂ ಹೋಗರು–ಹಾಗೆಯೇ ಮಹಾಪರಾಕ್ರಮಿಗಳಾದ ಯೋಧರಿರುವರೆಂದು ತಿಳಿದಿರುವುದರಿಂದಲೇ ಅಯೋಧ್ಯಾನಗರದ ಸಮೀಪಕ್ಕೂ ಶತ್ರುಗಳು ಧಾವಿಸುತ್ತಿರಲಿಲ್ಲ.

ಗೃಹಪಂಕ್ತಿಗಳಿಂದ ಉಪಶೋಭಿತವಾದ, ಸಾವಿರಾರು ಜನರಿಗೂ, ಆಶ್ರಿತ ರಾಜರಿಗೂ ಆಶ್ರಯಸ್ಥಾನವಾದ, ಮಂಗಳಕರವಾದ–'ಅಯೋಧ್ಯಾ'–ಎಂದು ಅನ್ವರ್ಥನಾಮವನ್ನು ಪಡೆದಿರುವ (ಶತ್ರುಗಳಿಂದ ಪಟ್ಟಣದೊಳಗೆ ನುಗ್ಗಿ ಯುದ್ಧಮಾಡಲು ಅಸಾಧ್ಯವಾದ) ಅಯೋಧ್ಯಾನಗರಿಯನ್ನು ದೇವೇಂದ್ರನಿಗೆ ಸಮಾನನಾದ ದಶರಥನು ಆಳುತ್ತಿದ್ದನು.

೬ನೆಯ ಸರ್ಗವು ಮುಗಿಯಿತು.

ಬಾಲಕಾಂಡ ೭ನೆಯ ಸರ್ಗ

ಅಮಾತ್ಯರ ಗುಣ–ನೀತಿಗಳ ವರ್ಣನೆ

ತಸ್ಯಾಮಾತ್ಯಾ ಗುಣೈರಾಸನ್ನಿಕ್ಷ್ವಾಕೋಽಸ್ತು ಮಹಾತ್ಮನಃ ।
ಮನ್ತ್ರಜ್ಞಾಶ್ಚೇಙ್ಗಿತಜ್ಞಾಶ್ಚ ನಿತ್ಯಂ ಪ್ರಿಯಹಿತೇ ರತಾಃ ॥೧॥

ಮಹಾತ್ಮನಾದ ಇಕ್ಷ್ವಾಕುವಂಶಸಂಭೂತನಾದ ದಶರಥನಿಗೆ ಮಂತ್ರಾಲೋಚನೆಯಲ್ಲಿ ಸಮರ್ಥರಾದ, ಕಾರ್ಯವಿಚಾರಪರರಾದ ಮತ್ತು ಪರರ ಮನಸ್ಸಿನಲ್ಲಿರುವುದನ್ನು ಮುಖಭಾವದಿಂದಲೇ ತಿಳಿಯುವ ಸಾಮರ್ಥ್ಯವುಳ್ಳ ಮಂತ್ರಿಗಳಿದ್ದರು. ಆ ಮಂತ್ರಿಗಳು ಮಹಾತಜ್ಞರಾಗಿದ್ದುದು ಮಾತ್ರವಲ್ಲದೇ ರಾಜನ ಹಿತರಕ್ಷಣೆಯಲ್ಲಿಯೇ ನಿತ್ಯವೂ ನಿರತರಾಗಿದ್ದರು.* ದಶರಥನಿಗೆ ಎಂಟು ಮಂದಿ ಯಶಸ್ವಿಗಳಾದ ಮಂತ್ರಿಗಳಿದ್ದರು. ಅವರು ಸರ್ವದಾ ಶುದ್ಧರಾಗಿದ್ದರು. ರಾಜದ್ರೋಹ-ಪ್ರಜಾದ್ರೋಹ-ಸ್ವಾರ್ಥಗಳೆಂಬುವು ಅವರ ಮನಸ್ಸಿನಲ್ಲಿಯೂ ಸುಳಿಯುತ್ತಿರಲಿಲ್ಲ. ಸರ್ವದಾ ರಾಜಕಾರ್ಯತತ್ಪರರಾಗಿದ್ದರು. ಧೃಷ್ಟಿ, ಜಯಂತ, ವಿಜಯ, ಸಿದ್ಧಾರ್ಥ, ಅರ್ಥಸಾಧಕ, ಅಶೋಕ, ಮಂತ್ರಪಾಲ ಮತ್ತು ಸುಮಂತ್ರ–ಇವರೇ ಈ ಎಂಟು ಜನ ಮಂತ್ರಿಶ್ರೇಷ್ಠರು. ಋಷಿಸತ್ತಮರಾದ ವಸಿಷ್ಠ-ವಾಮದೇವರು, ದಶರಥನಿಗೆ

* ಮನುವು ಎಷ್ಟು ಮಂದಿ ಮಂತ್ರಿಗಳು ಇರಬೇಕೆಂಬುದನ್ನು ನಿಯಮಮಾಡಿರುತ್ತಾನೆ. 'ಮನ್ತ್ರಿಣಃ ಸಪ್ತ ವಾಷ್ಟೌ ವಾ ಪ್ರಕುರ್ವೀತ ಪರೀಕ್ಷಿತಾನ್ ।' ಏಳು ಅಥವಾ ಎಂಟು ಮಂದಿ ಮಂತ್ರಿಗಳನ್ನು ಪರೀಕ್ಷಿಸಿ ಇಟ್ಟುಕೊಳ್ಳಬೇಕು.

ಮುಖ್ಯಪುರೋಹಿತರು. ಮಂತ್ರಜ್ಞರಾದ ಸುಯಜ್ಞ, ಜಾಬಾಲಿ, ಕಾಶ್ಯಪ, ಗೌತಮ, ಚಿರಾಯುವಾದ ಮಾರ್ಕಂಡೇಯ, ಕಾತ್ಯಾಯನ ಮೊದಲಾದ ಬ್ರಹ್ಮನಿಷ್ಠರು ದಶರಥನು ಮಾಡುತ್ತಿದ್ದ ಯಜ್ಞಕರ್ಮಗಳಿಗೆ ಋತ್ವಿಜರಾಗಿ ಭಾಗವಹಿಸುತ್ತಿದ್ದರು. ದಶರಥನ ಮಂತ್ರಿಗಳು ದಂಡನೀತಿಯಲ್ಲಿ ನಿಷ್ಣಾತರು. ಅಕಾರ್ಯವನ್ನು ಮಾಡಲು ಲಜ್ಜೆಪಡತಕ್ಕವರು ; ನೀತಿಶಾಸ್ತ್ರಕೋವಿದರು; ವಿಹಿತವಲ್ಲದ ವಿಷಯದಲ್ಲಿ ತೊಡಗುವವರಲ್ಲ ; ಶ್ರೀಮಂತರು ; ಮಹಾ ಬುದ್ಧಿವಂತರು ; ವೇದ-ಶಾಸ್ತ್ರಗಳನ್ನು ಪೂರ್ಣವಾಗಿ ತಿಳಿದವರು ; ಅಪ್ರತಿಹತ ವಾದ ಪರಾಕ್ರಮವುಳ್ಳವರು ; ರಾಜಕಾರ್ಯಗಳಲ್ಲಿ ಕುಶಲರು ; ಕೀರ್ತಿಶಾಲಿ ಗಳು ; ಭಕ್ತಿ-ಶ್ರದ್ಧೆಗಳುಳ್ಳವರು ; ಕೊಟ್ಟಮಾತಿನಂತೆ ನಡೆಯುವವರು. ಎಲ್ಲರೂ ತೇಜೋವಂತರಾಗಿಯೂ, ಕ್ಷಮಾವಂತರಾಗಿಯೂ, ಯಶೋ ವಂತರಾಗಿಯೂ ಇದ್ದರು. ತಮ್ಮನ್ನು ಕಾಣಲು ಬಂದವರೊಡನೆ ನಸು ನಗುತ್ತಾ ಮಾತನಾಡುತ್ತಿದ್ದರು. ಕ್ರೋಧದ ಕಾರಣದಿಂದಾಗಲೀ, ಅಭಿ ಲಾಷೆಯ ಪೂರಣಕ್ಕಾಗಲೀ, ಅರ್ಥನಿಮಿತ್ತದಿಂದಾಗಲೀ ಸುಳ್ಳನ್ನು ಹೇಳುತ್ತಿರ ಲಿಲ್ಲ. ಅವರಿಗೆ ತಮ್ಮ ರಾಷ್ಟ್ರದ ವಿದ್ಯಮಾನಗಳು ಪ್ರತಿಯೊಂದೂ ವಿಶದವಾಗಿ ತಿಳಿದಿರುತ್ತಿದ್ದುವು. ಇಷ್ಟುಮಾತ್ರವಲ್ಲ ; ಪರದೇಶದ ವಿದ್ಯಮಾನಗಳೂ ಅವರಿಗೆ ತಿಳಿದಿರುತ್ತಿದ್ದುವು. ದೇಶ-ವಿದೇಶಾಂಗ ವ್ಯವಹಾರಗಳಲ್ಲಿ ಇದು ವರೆಗೆ ನಡೆದಿರುವುದು, ಈಗ ನಡೆಯುತ್ತಿರುವುದು, ಮುಂದೆ ನಡೆಯಬಹು ದಾದುದು ; ಈಗ ಅನುಸರಿಸುತ್ತಿರುವ ನೀತಿಯಿಂದ ಉಂಟಾಗಿರುವ ದೋಷ ಗಳೇನು? ಅವುಗಳನ್ನು ಸರಿಪಡಿಸುವುದೆಂತು?–ಮುಂತಾದುವೆಲ್ಲವನ್ನೂ ಗೂಢಚಾರರ ಮೂಲಕ ಅನುದಿನವೂ ಕೂಲಂಕಷವಾಗಿ ತಿಳಿದು ಮಾಡ ಬೇಕಾದ ಕಾರ್ಯಗಳನ್ನು ಒಡನೆಯೇ ಮಾಡುತ್ತಿದ್ದರು. ವ್ಯವಹಾರಗಳಲ್ಲಿ ಕುಶಲರಾಗಿದ್ದರು. ಕಾರ್ಯಮಾಡುವುದರಿಂದ ಉಂಟಾಗಬಹುದಾದ ಗುಣ-ದೋಷಗಳ ವಿಮರ್ಶೆಯಿಲ್ಲದೇ ಕಾರ್ಯಮಾಡುತ್ತಿರಲಿಲ್ಲ. ರಾಜನಿಂದ ಸ್ನೇಹದ ವಿಷಯದಲ್ಲಿ ಬಹಳವಾಗಿ ಪರೀಕ್ಷಿಸಲ್ಪಟ್ಟವರಾಗಿದ್ದರು. ಯಾವ ಕಾಲದಲ್ಲಿಯಾದರೂ ತಮ್ಮ ಮಗನೇ ಅಪರಾಧಮಾಡಿರುವನೆಂದು ತಿಳಿದು ಬಂದಲ್ಲಿ ಒಡನೆಯೇ ಅವನನ್ನು ತಮ್ಮ ಪುತ್ರನೆಂಬುದನ್ನು ಕೂಡ ಲೆಕ್ಕಿಸದೇ ಶಿಕ್ಷಿಸುತ್ತಿದ್ದರು. ರಾಜಾದಾಯವನ್ನು ಸಂಗ್ರಹಿಸುವುದರಲ್ಲಿ ವಿಚಕ್ಷಣರಾಗಿ

ದ್ದರು. ಸೈನ್ಯದ ಸಂಗ್ರಹಣೆಯಲ್ಲಿಯೂ ಹೆಚ್ಚಿನ ಆಸಕ್ತಿಯುಳ್ಳವರಾಗಿದ್ದರು. ಒಬ್ಬನು ವೈಯಕ್ತಿಕವಾಗಿ ತಮ್ಮ ಶತ್ರುವಾಗಿದ್ದರೂ ನಿರ್ದೋಷಿಯಾಗಿದ್ದರೆ ಅವನನ್ನು ಯಾವ ಕಾರಣದಿಂದಲೂ ಹಿಂಸಿಸುತ್ತಿರಲಿಲ್ಲ. ಅವರೆಲ್ಲರೂ ಶತ್ರು ನಿವಾರಣೆಯಲ್ಲಿ ಸಾಮರ್ಥ್ಯವುಳ್ಳವರೂ, ಶತ್ರುಗಳನ್ನು ಜಯಿಸುವುದರಲ್ಲಿ ಹೆಚ್ಚಿನ ಆಸಕ್ತಿಯುಳ್ಳವರೂ, ನೀತಿಶಾಸ್ತ್ರವನ್ನು ಅಕ್ಷರಶಃ ಪರಿಪಾಲಿಸತಕ್ಕವರೂ, ದೇಶವಾಸಿಗಳಾದ ಶಿಷ್ಟಪ್ರಜೆಗಳ ರಕ್ಷಕರೂ ಮತ್ತು ದುಷ್ಟಶಿಕ್ಷಕರೂ ಆಗಿದ್ದರು. ಕರಗ್ರಹಣದಲ್ಲಾಗಲೀ, ರಾಜಾದಾಯಸಂಗ್ರಹಣೆಯಲ್ಲಾಗಲೀ ಬ್ರಾಹ್ಮಣರನ್ನು ಮತ್ತು ಕ್ಷತ್ರಿಯರನ್ನು ಹಿಂಸೆಮಾಡುತ್ತಿರಲಿಲ್ಲ.* ಪ್ರಜೆಗಳನ್ನು ಹಿಂಸಿಸದೇ ಅವರೇ ಸಂತೋಷದಿಂದ ಕೊಡುವ ರಾಜಾದಾಯದಿಂದ ಬೊಕ್ಕಸವನ್ನು ತುಂಬುತ್ತಿದ್ದರು. ಅಪರಾಧಿಗಳ ವಿಷಯದಲ್ಲಿಯೂ ಅವರು ಮಾಡಿದ ಅಪರಾಧವು ಸಣ್ಣದಾಗಿದ್ದರೆ ಅಲ್ಪಶಿಕ್ಷೆಯನ್ನೂ, ದೊಡ್ಡದಾಗಿದ್ದರೆ ಉಗ್ರಶಿಕ್ಷೆಯನ್ನೂ ನೀತಿಶಾಸ್ತ್ರಾನುಗುಣವಾಗಿ ಕೊಡುತ್ತಿದ್ದರು. ಅಪರಾಧಿ ಯಾದವನಿಗೆ ಶಿಕ್ಷೆಯನ್ನು ಅನುಭವಿಸುವ ಸಾಮರ್ಥ್ಯವಿದೆಯೇ? ಒಂದು ವೇಳೆ ಅಪರಾಧಿಯು ದುರ್ಬಲನಾಗಿದ್ದರೆ ಯಾವ ವಿಧವಾದ ಶಿಕ್ಷೆಯನ್ನು ಕೊಡಬೇಕು? ಎಂಬ ಪೂರ್ವವಿವೇಚನೆಯಿಂದ ಶಿಕ್ಷೆಯನ್ನು ವಿಧಿಸುತ್ತಿದ್ದರು. ತ್ರಿಕರಣಶುದ್ಧಿಯುಳ್ಳ, ಧರ್ಮೈಕವಿಚಾರಪರರಾದ ದಶರಥನ ಅಮಾತ್ಯರು ಮೇಲೆ ಹೇಳಿದ ವಿಧಾನದಲ್ಲಿ ರಾಜ್ಯಪರಿಪಾಲನೆಯನ್ನು ಮಾಡು ತ್ತಿದ್ದಾಗ ಅಯೋಧ್ಯಾಪಟ್ಟಣದಲ್ಲಿಯೇ ಆಗಲೀ, ಕೋಸಲರಾಜ್ಯದಲ್ಲಿಯೇ ಆಗಲೀ–ಅಸತ್ಯವಾದಿಯೂ, ದುಷ್ಟನೂ, ಪರರ ಪತ್ನಿಯರನ್ನು ಮೋಹಿಸು ವವನೂ ಇರಲಿಲ್ಲ. ಕೋಸಲರಾಜ್ಯವೂ, ರಾಜಧಾನಿಯಾದ ಅಯೋಧ್ಯಾ ಪಟ್ಟಣವೂ ಸುಖ-ಶಾಂತಿಗಳಿಂದ ತುಂಬಿ ಪ್ರಶಾಂತವಾಗಿದ್ದುವು. ದಶರಥನ ಅಮಾತ್ಯರು ಶುಭ್ರವಾದ ವೇಷ-ಭೂಷಣಗಳುಳ್ಳವರಾಗಿಯೂ, ಜಾಗರೂಕ ರಾಗಿಯೂ ಇರುತ್ತಿದ್ದರು. ನಯ-ನೀತಿಗಳ ವಿಷಯದಲ್ಲಿ ಹೆಚ್ಚಿನ ಅವಧಾನ ವುಳ್ಳವರಾಗಿಯೂ ಇದ್ದರು. ಆಚಾರ್ಯರ ಗುಣಗ್ರಹಣೆಮಾಡಿ ಅದರಂತೆ

---

* ಒಬ್ಬ ವ್ಯಾಖ್ಯಾನಕಾರರು ಬ್ರಹ್ಮಕ್ಷತ್ರಂ ಎಂಬುದಕ್ಕೆ ಬ್ರಹ್ಮಣಃ = ವೇದದ, ಕ್ಷತ್ = ಅಪ್ರಾಮಾಣ್ಯವನ್ನು ಪ್ರತಿಪಾದಿಸುವ ನಾಸ್ತಿಕರಿಂದ, ತ್ರಾಯತೇ = ಕಾಪಾಡುವವರು, ಬ್ರಹ್ಮಕ್ಷತ್ರರು = ಬ್ರಾಹ್ಮಣಕುಲದವರು ಎಂದು ವ್ಯಾಖ್ಯಾನಮಾಡಿರುತ್ತಾರೆ.

ನಡೆಯುತ್ತಿದ್ದರು. ನಡೆದುಹೋದ ವಿಷಯಗಳಲ್ಲಿ ಅವರಿಗಿದ್ದ ಸ್ಮರಣಶಕ್ತಿ, ಮುಂದೆ ನಡೆಯಬಹುದಾದ ವಿಷಯದಲ್ಲಿ ಇದ್ದ ಊಹಾಶಕ್ತಿ–ಇವುಗಳಿಂದ ದಶರಥನ ಮಂತ್ರಿಪ್ರಮುಖರು ವಿದೇಶಗಳಲ್ಲಿಯೂ ವಿಖ್ಯಾತರಾಗಿದ್ದರು. ಎಲ್ಲ ವಿಷಯಗಳಲ್ಲಿಯೂ ಚತುರರಾಗಿದ್ದರು. ಯಾವ ವಿಷಯದಲ್ಲಿಯೂ ಅವರಲ್ಲಿ ನ್ಯೂನತೆಯಿರಲಿಲ್ಲ. ಯಾವ ಸಮಯದಲ್ಲಿ ಯಾವ ರಾಜನೊಡನೆ ಯುದ್ಧಮಾಡಬೇಕೆಂಬ ರಾಜನೀತಿಯ ಮಹಾತತ್ತ್ವವನ್ನು ತಿಳಿದವರಾಗಿದ್ದರು.*

ಅವರು ಸ್ವಾಭಾವಿಕವಾಗಿಯೇ ಐಶ್ವರ್ಯವಂತರಾಗಿದ್ದರು. ರಾಜ ಕಾರ್ಯದ ರಹಸ್ಯವನ್ನು ಅತಿಗೋಪ್ಯವಾಗಿಡಲು ಸಮರ್ಥರಾಗಿದ್ದರು. ಸೂಕ್ಷ್ಮಾರ್ಥವಿಷಯವಿಚಾರಗಳಲ್ಲಿ ಮತ್ತು ನಿರ್ಧಾರಗಳಲ್ಲಿ ಹೆಚ್ಚಿನ ಪ್ರತಿಭಾ ವಂತರಾಗಿದ್ದರು. ನೀತಿಶಾಸ್ತ್ರಪ್ರವೀಣರಾಗಿದ್ದರು. ಪ್ರಾವೀಣ್ಯವಿದ್ದುದು ಮಾತ್ರವಲ್ಲದೇ ನೀತಿಶಾಸ್ತ್ರಾನುಸಾರವಾದ ಆಚರಣೆಯುಳ್ಳವರಾಗಿದ್ದರು. ಯಾವಾಗಲೂ ಪ್ರಿಯೋಕ್ತಿಗಳನ್ನೇ ಹೇಳುತ್ತಿದ್ದರು. ಅಂತಹ ಸಕಲಗುಣ ಸಂಪನ್ನರಾದ ಅಮಾತ್ಯಶ್ರೇಷ್ಠರಿಂದ ಕೂಡಿದವನಾಗಿ, ದಶರಥರಾಜನು ವ್ಯಸನರಹಿತನಾಗಿ ರಾಜ್ಯವಾಳುತ್ತಿದ್ದನು. ರಾಜನಿಷ್ಠರಾದ ಗೂಢಚಾರರಿಂದ ಸ್ವರಾಷ್ಟ್ರ-ಪರರಾಷ್ಟ್ರಗಳಲ್ಲಿ ನಡೆಯುತ್ತಿದ್ದ ದೈನಂದಿನವಿಷಯಗಳನ್ನೂ ತಿಳಿದುಕೊಳ್ಳುತ್ತಿದ್ದನು.[1] ದಶರಥನು ಧರ್ಮಮೂಲವಾಗಿ ರಾಜ್ಯವಾಳುತ್ತಾ ಪ್ರಜೆಗಳನ್ನು ಆನಂದಪಡಿಸುತ್ತಿದ್ದನು. ತನ್ನ ಮಕ್ಕಳನ್ನು ಪಾಲಿಸಿ-ಲಾಲಿಸು ವಂತೆ ಪ್ರಜೆಗಳಿಗೆ ಅನಿಷ್ಟವಾಗುವುದನ್ನು ದೂರಮಾಡಿ, ಇಷ್ಟವಾಗುವುದನ್ನು ಒದಗಿಸಿಕೊಟ್ಟು ಅವರನ್ನು ಪಾಲನೆಮಾಡುತ್ತಿದ್ದನು. ಆಶ್ರಿತವತ್ಸಲನಾಗಿ ದ್ದರೂ ಅಧರ್ಮಕ್ಕೆ ಅವನಲ್ಲಿ ಆಶ್ರಯವು ಇರಲಿಲ್ಲ. ಅದನ್ನು ಪೂರ್ಣವಾಗಿ

---

* ಶತ್ರುವಿನೊಡನೆ ಸಂಧಿಯನ್ನು ಯಾವಾಗ ಮಾಡಿಕೊಳ್ಳಬೇಕು ಮತ್ತು ಯುದ್ಧವನ್ನು ಯಾವಾಗ ಮಾಡಬೇಕು?–ಎಂಬ ಬಗೆಗೆ ಮನುಸ್ಮೃತಿಯಲ್ಲಿ ಹೀಗೆ ಹೇಳಿದೆ :

ಯದಾತ್ವೇವಾಲ್ಪಿಕಾ ಪೀಡಾ ತದಾ ಸನ್ಧಿಂ ಸಮಾಶ್ರಯೇತ್ ।
ಅಭ್ಯುಚ್ಛ್ರಯೋ ಯದಾತ್ಮಾನಂ ತದಾ ಮನ್ಯೇತ ವಿಗ್ರಹಮ್ ॥

1 ಗೂಢಚಾರರು ಹೇಗಿರಬೇಕೆಂಬ ವಿಷಯದಲ್ಲಿ ಮನುವು ಹೇಳುತ್ತಾನೆ : 'ವನೇ ವನಚರಾಃ ಕಾರ್ಯಾಃ ಶ್ರಮಣಾ ವಿಟಕಾದಯಃ । ಪರಪ್ರವೃತ್ತಿಜ್ಞಾನಾರ್ಥಂ ಶೀಘ್ರಾಶ್ಚಾರಪರಮ್ಪರಾ ॥ '

ಪರಿವರ್ಜಿಸಿದ್ದನು. ಸರ್ವಲೋಕಗಳಲ್ಲಿಯೂ ದಾನಶೀಲನೆಂದೂ, ಸತ್ಯ ಪ್ರತಿಜ್ಞನೆಂದೂ ಪ್ರಸಿದ್ಧನಾಗಿದ್ದನು. ದಶರಥನಿಗೆ ಸಮಾನಬಲವಿರುವ ಅಥವಾ ಅವನನ್ನು ಅತಿಶಯಿಸಿರುವ ಶತ್ರುವು ಯಾರೂ ಇರಲಿಲ್ಲ. ಮಿತ್ರ ಸಂಪತ್ತಿಯುಳ್ಳವನಾಗಿದ್ದನು. ಅವನ ಪ್ರತಾಪದಿಂದ ಮುಳ್ಳುಗಿಡಗಳಂತಿದ್ದ ಶತ್ರುಗಳು ಪೂರ್ಣವಾಗಿ ನಾಶಹೊಂದುತ್ತಿದ್ದರು. ಸಾಮಂತರಾಜರು ಸದಾ ವಿಧೇಯರಾಗಿ ವಿನೀತರಾಗಿದ್ದರು. ಸ್ವರ್ಗವನ್ನು ದೇವೇಂದ್ರನು ಆಳುತ್ತಿರು ವಂತೆ–ಭೂಲೋಕವನ್ನು ಮೇಲೆ ಹೇಳಿದಂತೆ ಅತುಲಪರಾಕ್ರಮಿಯಾದ ದಶರಥನು ಆಳುತ್ತಿದ್ದನು. ರಾಜ್ಯಾಂಗದ ಸಮಾಲೋಚನೆಯಲ್ಲಿಯೂ– ರಾಜ್ಯದ ಮತ್ತು ರಾಜನ ಹಿತದಲ್ಲಿಯೂ ನಿತ್ಯಾಸಕ್ತರಾದ, ಬುದ್ಧಿಕುಶಲರಾದ, ಕಾರ್ಯಕರಣಸಮರ್ಥರಾದ ಮಹಾಮಾತ್ಯರಿಂದ ಕೂಡಿದ ದಶರಥನು ತೇಜೋಮಯವಾದ ಕಿರಣಗಳಿಂದ ಕೂಡಿದ ಬಾಲಸೂರ್ಯನಂತೆಯೇ ಪ್ರಕಾಶಿಸುತ್ತಿದ್ದನು.

೭ನೆಯ ಸರ್ಗವು ಮುಗಿಯಿತು.

ಬಾಲಕಾಂಡ ೮ನೆಯ ಸರ್ಗ

ದಶರಥನು ಮಕ್ಕಳನ್ನು ಪಡೆಯಲು ಅಶ್ವಮೇಧಯಾಗಮಾಡುವ ಪ್ರಸ್ತಾಪಮಾಡಿದುದು : ಮಂತ್ರಿಗಳ ಮತ್ತು ಬ್ರಾಹ್ಮಣರ ಅನುಮೋದನೆ

ತಸ್ಯ ತ್ವೇವಂಪ್ರಭಾವಸ್ಯ ಧರ್ಮಜ್ಞಸ್ಯ ಮಹಾತ್ಮನಃ ।
ಸುತಾರ್ಥಂ ತಪ್ಯಮಾನಸ್ಯ ನಾಸೀದ್ವಂಶಕರಃ ಸುತಃ ॥೧॥

ಪ್ರಭಾವಶಾಲಿಯಾದ, ಧರ್ಮಜ್ಞನಾದ, ಮಹಾತ್ಮನಾದ, ಪುತ್ರ ಸಂತಾನಕ್ಕಾಗಿ ಹಂಬಲಿಸುತ್ತಾ ಅದು ಆಗದೇ ಇದ್ದುದರಿಂದ ಪರಿತಪಿಸುತ್ತಿದ್ದ ದಶರಥನಿಗೆ, ವಂಶದ ಅಭಿವೃದ್ಧಿಗೆ ಕಾರಣಭೂತನಾದ ಒಬ್ಬ ಮಗನೂ ಹುಟ್ಟಲಿಲ್ಲ. ಅದೇ ಅವನಿಗೊಂದು ದೊಡ್ಡ ಚಿಂತೆಯಾಗಿತ್ತು. ಅದನ್ನೇ ಸರ್ವದಾ ಚಿಂತಿಸುತ್ತಿದ್ದನು. 'ದೈವಾನುಗ್ರಹದಿಂದಲಾದರೂ ಮಕ್ಕಳನ್ನು

ಪಡೆಯಲು ಏಕೆ ಯತ್ನಿಸಬಾರದು? ಮಕ್ಕಳನ್ನು ಪಡೆಯಲು ಸಂಕಲ್ಪಿಸಿ, ಅಶ್ವಮೇಧಯಾಗವನ್ನೇಕೆ* ಮಾಡಬಾರದು?'–ಎಂಬ ಆಲೋಚನೆಯು ಮಹಾತ್ಮನಾದ ದಶರಥನ ಮನಸ್ಸಿನಲ್ಲಿ ಹುಟ್ಟಿತು. ಒಡನೆಯೇ ಬುದ್ಧಿವಂತ ರಾದ ಮಂತ್ರಿಗಳನ್ನು ಕರೆಯಿಸಿ, ಸಮಾಲೋಚಿಸಿ–"ಪುತ್ರರನ್ನು ಪಡೆಯುವ ಸಲುವಾಗಿ ಯಾಗಮಾಡಿಯೇ ತೀರುವೆನು"–ಎಂದು ನಿಶ್ಚಯಿಸಿ, ಸುಮಂತ್ರ ನಿಗೆ ಹೇಳಿದನು :

"ಸುಮಂತ್ರ! ಈಗಲೇ ಹೋಗಿ ನನ್ನ ಗುರುಗಳಾದ ವಸಿಷ್ಠರನ್ನೂ, ವಾಮದೇವಾದಿ ಪುರೋಹಿತರನ್ನೂ ಕರೆದುಕೊಂಡು ಬಾ."

ಶೀಘ್ರಗಾಮಿಯಾದ ಸುಮಂತ್ರನು ಒಡನೆಯೇ ಹೋಗಿ, ವೇದ-ವೇದಾಂಗಪಾರಂಗತರಾದ ಅವರೆಲ್ಲರನ್ನೂ ರಾಜನ ಆಣತಿಯಂತೆ ಮರ್ಯಾದೆಯೊಡನೆ ಅರಮನೆಗೆ ಕರೆದುಕೊಂಡು ಬಂದನು. ಸುಯಜ್ಞ, ವಾಮದೇವ, ಜಾಬಾಲಿ, ಕಶ್ಯಪ, ಪ್ರಧಾನಪುರೋಹಿತರಾದ ವಸಿಷ್ಠರು ಮತ್ತು ಇನ್ನೂ ಅನೇಕ ಬ್ರಾಹ್ಮಣೋತ್ತಮರು ಅರಮನೆಗೆ ಆಗಮಿಸಿದರು. ಅವರೆಲ್ಲರನ್ನೂ ಧರ್ಮಾತ್ಮನಾದ ದಶರಥನು ಪೂಜಿಸಿ ಧರ್ಮಾರ್ಥಸಾಧನೆಗೆ ಕಾರಣವಾದ, ಮಧುರವಾದ ಈ ಮಾತುಗಳನ್ನು ಹೇಳಿದನು :

"ಬ್ರಾಹ್ಮಣೋತ್ತಮರೇ! ಪುತ್ರಾರ್ಥವಾಗಿ ಅನುದಿನವೂ ವಿಲಪಿಸು ತ್ತಿರುವ ನನಗೆ ಜೀವನದಲ್ಲಿ ಸುಖವೆಂಬುದೇ ಇಲ್ಲವಾಗಿದೆ. ಆದುದರಿಂದ ಪುತ್ರಪ್ರಾಪ್ತಿಗಾಗಿ ಅಶ್ವಮೇಧಯಾಗವನ್ನು ಮಾಡಬೇಕೆಂಬ ಬುದ್ಧಿಯು ನನಗುಂಟಾಗಿದೆ. ಇಂತಹ ಮಹಾಯಾಗಗಳನ್ನು ಮಾಡುವಾಗ ಅನೇಕಾ ನೇಕ ವಿಘ್ನಪರಂಪರೆಗಳು ಪ್ರಾಪ್ತವಾಗುವುದೆಂಬುದನ್ನು ಕೇಳಿದ್ದೇನೆ. ನಿರ್ವಿಘ್ನವಾಗಿ ಯಜ್ಞವು ನೆರವೇರುವಂತೆಯೂ, ನನ್ನ ಪುತ್ರಕಾಮನೆಯು

* ಅಶ್ವಮೇಧವು ಸಕಲಪಾಪಹರವಾದ ಯಜ್ಞ, ಸರ್ವಂ ಪಾಪ್ಮಾನಂ ತರತಿ ತರತಿ ಬ್ರಹ್ಮಹತ್ಯಾಂ ಯೋಽಶ್ವಮೇಧೇನ ಯಜತೇ। ॥ ತೈತ್ತಿರೀಯಸಂಹಿತಾ ॥ 'ರಾಜಾ ಸಾರ್ವಭೌಮೋಽಶ್ವಮೇಧೇನ ಯಜೇತ' ॥ ಸ್ಮೃತಿ ॥ ಈ ರೀತಿಯಲ್ಲಿ ಶ್ರುತಿ- ಸ್ಮೃತಿಗಳಿಗೆ ಅನುಸಾರವಾಗಿ ದಶರಥರಾಜನು ಸರ್ವಪಾಪಗಳ ನಿವಾರಣೆಗಾಗಿ ಅಶ್ವಮೇಧ ಯಾಗವನ್ನು ಮಾಡಲು ನಿಶ್ಚಯಿಸಿದನು.

ಫಲಿತವಾಗುವಂತೆಯೂ ತಾವೆಲ್ಲರೂ ಸೇರಿ ಉಪಾಯವನ್ನು ಪರ್ಯಾಲೋಚಿಸಿ ಹೇಳಿರಿ."

ದಶರಥನ ಮುಖದಿಂದ ಆ ಮಾತುಗಳು ಬಂದೊಡನೆಯೇ ವಸಿಷ್ಠ ಪ್ರಮುಖರಾದ ಪುರೋಹಿತರು :

"ಮಹಾರಾಜ! ನೀನು ಹೇಳುತ್ತಿರುವುದು ಸಾಧುವಾಗಿದೆ"–ಎಂದು ಹೇಳಿ ಗೌರವಿಸಿದರು. ಸುಪ್ರೀತರಾದ ಆ ವಿಪ್ರೋತ್ತಮರು ದಶರಥನಿಗೆ ಅಶ್ವ ಮೇಧಯಜ್ಞದ ವಿಷಯವಾಗಿಯೂ ಹೇಳಿದರು. "ಮಹಾರಾಜ! ಒಡನೆಯೇ ಯಜ್ಞೋಪಕರಣಗಳು ಸಿದ್ಧವಾಗಲಿ. ಅಶ್ವಮೇಧಾಶ್ವದ ವಿಮೋಚನೆಯಾಗಲಿ."*

ಬ್ರಾಹ್ಮಣರು ಮುಂದುವರಿದು ಹೇಳಿದರು :

"ಸರಯೂನದಿಯ ಉತ್ತರತೀರವು ಯಜ್ಞಕ್ಕೆ ಪ್ರಶಸ್ತವಾದ ಪ್ರದೇಶವಾಗಿದೆ. ಅಲ್ಲಿಯೇ ಯಜ್ಞವೇದಿಕೆಯು ನಿರ್ಮಾಣವಾಗಲಿ. ನೀನು ನಿಶ್ಚಯವಾಗಿಯೂ ಪುತ್ರರನ್ನು ಪಡೆಯುವೆ. ಇದರಲ್ಲಾವ ಸಂಶಯವೂ ಇಲ್ಲ. ಪುತ್ರಾರ್ಥವಾಗಿ ನಿನಗೆ ಅಶ್ವಮೇಧಯಾಗವನ್ನು ಮಾಡಬೇಕೆಂಬ ಧರ್ಮ ಬುದ್ಧಿಯುಂಟಾಗಿರುವುದರಿಂದಲೇ ನಿನಗೆ ಮಕ್ಕಳಾಗಿಯೇ ತೀರುವುದೆಂಬುದನ್ನು ನಿಶ್ಚಯಿಸಬಹುದಾಗಿದೆ."

ಬ್ರಾಹ್ಮಣರ ಮಾತುಗಳನ್ನು ಕೇಳಿದೊಡನೆಯೇ ದಶರಥನು ಸುಪ್ರೀತನಾದನು. ವಿಕಸಿತವಾದ ದೃಷ್ಟಿಯಿಂದಲೇ ತನಗುಂಟಾದ ಆನಂದಾಧಿಕ್ಯವನ್ನು ಹೊರಸೂಸುತ್ತಾ ಅಮಾತ್ಯರಿಗೆ ಹೇಳಿದನು :

"ನನ್ನ ಗುರುಗಳು ಹೇಳಿದಂತೆ ಯಜ್ಞೋಪಕರಣವಸ್ತುಗಳು ಕೂಡಲೇ ಸಿದ್ಧವಾಗಲಿ. ರಕ್ಷಣೆಯಲ್ಲಿ ಸಮರ್ಥರಾದ ಯೋಧರೊಡನೆಯೂ, ಋತ್ವಿಜ

---

* ಅಶ್ವಮೇಧಯಾಗವನ್ನು ಮಾಡುವ ಮೊದಲು ಯಜ್ಞದ ಕುದುರೆಯನ್ನು ಪೂಜಿಸಿ ಬಿಟ್ಟುಬಿಡುತ್ತಾರೆ. ಅದು ದೇಶ-ದೇಶಾಂತರಗಳನ್ನು ಸಂಚರಿಸುತ್ತದೆ. ಹಾಗೆ ಸಂಚರಿಸುವಾಗ ಯಾವ ರಾಜನಾದರೂ ಕುದುರೆಯನ್ನು ಕಟ್ಟಿಹಾಕಿದ ಪಕ್ಷದಲ್ಲಿ ಆ ರಾಜನೊಡನೆ ಯುದ್ಧಮಾಡಿ ಕುದುರೆಯನ್ನು ಬಿಡಿಸಿಕೊಂಡು ಪುನಃ ಬಿಡಬೇಕು.

ರೊಡನೆಯೂ ಅಶ್ವಮೇಧದ ಕುದುರೆಯನ್ನು ಯಥಾವಿಧಿಯಾಗಿ ಬಿಟ್ಟು ಬಿಡಿರಿ. ಅಶ್ವರಕ್ಷಣೆಯಲ್ಲಿ ಸಮರ್ಥರಾದ ಯೋಧರೂ ಮತ್ತು ಪುರೋಹಿತರೂ ಕುದುರೆಯನ್ನನುಸರಿಸಿ ನಡೆಯಲಿ. ಸರಯೂನದಿಯ ಉತ್ತರತೀರದಲ್ಲಿ ಯಜ್ಞವೇದಿಕೆಯ ನಿರ್ಮಾಣವಾಗಲಿ. ವಿಘ್ನನಿವಾರಕಗಳಾದ ಶಾಂತಿಗಳು ಕಲ್ಪೋಕ್ತಪ್ರಕಾರವಾಗಿಯೂ,[*] ಶಾಸ್ತ್ರೋಕ್ತಪ್ರಕಾರವಾಗಿಯೂ ನಡೆಯಲಿ. ಪ್ರಪಂಚದಲ್ಲಿರುವ ಎಲ್ಲ ರಾಜರೂ ಈ ಯಜ್ಞವನ್ನು ಮಾಡಬಹುದು. ಆದರೆ ಈ ಮಹಾಯಜ್ಞದಲ್ಲಿ ಸ್ವಲ್ಪ ನ್ಯೂನಾತಿರೇಕಗಳುಂಟಾದರೂ ಒಡನೆಯೇ ಕರ್ತೃವಿಗೆ ಅನರ್ಥವುಂಟಾಗುತ್ತದೆ. ವಿದ್ವಾಂಸರಾದ ಬ್ರಹ್ಮರಾಕ್ಷಸರು[1] ಈ ಯಜ್ಞದಲ್ಲುಂಟಾಗಬಹುದಾದ ನ್ಯೂನಾತಿರೇಕಗಳನ್ನೇ ಹುಡುಕುತ್ತಿರುತ್ತಾರೆ. ಇದರ ಫಲವಾಗಿ ಯಜ್ಞಕರ್ತೃವು ಒಡನೆಯೇ ನಾಶಹೊಂದುತ್ತಾನೆ. ಸ್ವಲ್ಪವಾದರೂ ದೋಷವುಂಟಾಗದ ರೀತಿಯಲ್ಲಿ ಯಜ್ಞವು ಸಮಾಪ್ತವಾಗುವಂತೆ ನೀವು ಯತ್ನಿಸಬೇಕು. ಈ ವಿಷಯವನ್ನು ನಿಮಗೆ ಒತ್ತಿ ಹೇಳಬೇಕಾದ ಕಾರಣವೇನೂ ಇಲ್ಲ. ನೀವೆಲ್ಲರೂ ಈ ಪ್ರಕ್ರಿಯೆಗಳಲ್ಲಿ ನಿಪುಣರಾಗಿರುವಿರಿ."

ಪಾರ್ಥಿವೇಂದ್ರನಾದ ದಶರಥನು ಹೇಳಿದ ವಾಕ್ಯವನ್ನು ಕೇಳಿ ಮಂತ್ರಿಪ್ರಮುಖರು–"ತಮ್ಮ ಆಜ್ಞಾನುವರ್ತಿಗಳಾಗಿ ತಾವು ಹೇಳಿದಂತೆಯೇ ಮಾಡುತ್ತೇವೆ"–ಎಂಬ ಪ್ರತ್ಯುತ್ತರದಿಂದ ಗೌರವಿಸಿದರು. ಅದೇ ರೀತಿಯಲ್ಲಿ ಬ್ರಾಹ್ಮಣರು–"ಮುಂದಿನ ಚೈತ್ರಮಾಸದ ಪೌರ್ಣಮಿಯಂದು ಯಜ್ಞವನ್ನು ಪ್ರಾರಂಭಿಸಬಹುದು"– ಎಂದು ಹೇಳಿ, ರಾಜನನ್ನು ಆಶೀರ್ವದಿಸಿ, ಅವನ

ಕುದುರೆಯನ್ನು ಕಟ್ಟಿಹಾಕದೇ ಅಥವಾ ಕಟ್ಟಿಹಾಕಿಯೂ ಯುದ್ಧದಲ್ಲಿ ಸೋತುಹೋದ ರಾಜರು ಸಾಮಂತರಾಜರೆನಿಸಿಕೊಳ್ಳುತ್ತಾರೆ. ಹೀಗೆ ಸರ್ವದೇಶಗಳನ್ನೂ ಸುತ್ತಿ ಕುದುರೆಯು ಸ್ವದೇಶಕ್ಕೆ ಬಂದನಂತರ ಆ ಅಶ್ವವನ್ನೇ ಮೇಧವಾಗಿ ಮಾಡಿಕೊಂಡು ಯಾಗಮಾಡು ತ್ತಾರೆ. ಆದುದರಿಂದಲೇ ಅಶ್ವಮೇಧಯಾಗವನ್ನು ಮಾಡಿದವನು ಸಾರ್ವಭೌಮನೆನಿಸಿ ಕೊಳ್ಳುತ್ತಾನೆ.

[*] 'ಕಲ್ಪ' ವೆಂದರೆ ಶ್ರೌತಸೂತ್ರಾದಿಗಳು. 'ಕಲ್ಪ' ಶಬ್ದಕ್ಕೆ ಕ್ರಮವೆಂಬ ಅರ್ಥವೂ ಉಂಟು.

[1] ಸಾಂಗವೇದಾಧ್ಯಯನವನ್ನು ಮಾಡಿ ಇತರರಿಗೆ ಪಾಠ ಹೇಳಿಕೊಡದವನೂ, ದಾನ ತೆಗೆದುಕೊಂಡು ಪ್ರಾಯಶ್ಚಿತ್ತ ಮಾಡಿಕೊಳ್ಳದವನೂ, ಯಾಗ ಮಾಡಲು ಅನರ್ಹರಾದವರಿಗೆ

ಅನುಮತಿಯನ್ನು ಪಡೆದು, ತಮ್ಮ-ತಮ್ಮ ನಿವಾಸಗಳಿಗೆ ತೆರಳಿದರು. ರಾಜನು ಅರಮನೆಯಿಂದ ಹೊರಟ ಬ್ರಾಹ್ಮಣರನ್ನು ಬಾಗಿಲಿನವರೆಗೆ ಹೋಗಿ ಕಳುಹಿಸಿಕೊಟ್ಟು ಪುನಃ ಬಂದು, ಅಮಾತ್ಯರನ್ನುದ್ದೇಶಿಸಿ–"ನೀವು ಈ ಕೂಡಲೇ ಋತ್ವಿಜರು ಆಜ್ಞೆಮಾಡಿರುವ ಯಜ್ಞಸಂಭಾರಗಳನ್ನು ಸಿದ್ಧಪಡಿಸಿರಿ"–ಎಂದು ಹೇಳಿದನು. ಸಚಿವೋತ್ತಮರೆಲ್ಲರೂ ರಾಜನಿಗೆ ಜಯವನ್ನು ಕೋರಿ, ಅವನ ಅನುಜ್ಞೆಯನ್ನು ಪಡೆದು ಹೊರಟರು. ದಶರಥನು ಸಚಿವ ರನ್ನೂ ಕಳುಹಿಸಿಕೊಟ್ಟನಂತರ ತನ್ನ ಅಂತಃಪುರಕ್ಕೆ ತೆರಳಿ, ಹೃದಯವಲ್ಲಭೆ ಯರಾದ ಧರ್ಮಪತ್ನಿಯರಿಗೆ ಹೇಳಿದನು :

"ನಾನು ಪುತ್ರಪ್ರಾಪ್ತಿಗಾಗಿ ಅಶ್ವಮೇಧಯಜ್ಞಮಾಡಲು ನಿಶ್ಚಯಿಸಿರುತ್ತೇನೆ. ಆದುದರಿಂದ ನೀವು ಮೂವರೂ ಯಜ್ಞದೀಕ್ಷೆಯನ್ನು ಕೈಗೊಳ್ಳಿರಿ."

ರಾಜನು ಹೇಳಿದ ಇಷ್ಟತಮವಾದ ಮಾತುಗಳಿಂದ ಸುಮುಖಿಯರಾದ ಅವರ ಮುಖಕಮಲಗಳು–ಹಿಮಕಾಲವು ಕಳೆದ ಮೇಲೆ ಅರಳುವ ಕಮಲ ಪುಷ್ಪಗಳಂತೆಯೇ ಅರಳಿ ಕಂಗೊಳಿಸಿದುವು.

೮ನೆಯ ಸರ್ಗವು ಮುಗಿಯಿತು.

ಯಜ್ಞ-ಯಾಗಾದಿಗಳನ್ನು ಮಾಡಿಸುತ್ತಾ ಸ್ವಾನುಷ್ಠಾನದಲ್ಲಿ ನಿರಾಸಕ್ತನೂ ಆದ ಬ್ರಾಹ್ಮಣನು ಬ್ರಹ್ಮರಾಕ್ಷಸನಾಗುತ್ತಾನೆಂದು ಪುರಾಣವಚನವಿದೆ.

ಪರಸ್ಯ ಯೋಷಿತಂ ಹೃತ್ವಾ ಪರಸ್ವಮಪಹೃತ್ಯ ಚ ।
ಅರಣ್ಯೇ ನಿರ್ಜನೇ ದೇಶೇ ಭವತಿ ಬ್ರಹ್ಮರಾಕ್ಷಸಃ ॥

ಯಾಜ್ಞವಲ್ಕ್ಯಸ್ಮೃತಿ ೩-೨೧೨

ಪರಸ್ತ್ರೀಯನ್ನು ಅಪಹರಿಸುವ ಮತ್ತು ಪರರ ಸ್ವತ್ತನ್ನು ತಿಂದುಹಾಕುವ ಬ್ರಾಹ್ಮಣನು ಅವಸಾನಾನಂತರ ಬ್ರಹ್ಮರಾಕ್ಷಸನಾಗಿ ನಿರ್ಜನವಾದ ಅರಣ್ಯದಲ್ಲಿ ತಿರುಗುತ್ತಿರುತ್ತಾನೆ.

ಸಂಯೋಗಂ ಪತಿತೈರ್ಗತ್ವಾ ಪರಸ್ಯೈವ ಚ ಯೋಷಿತಮ್ ।
ಅಪಹೃತ್ಯ ಚ ವಿಪ್ರಸ್ವಂ ಭವತಿ ಬ್ರಹ್ಮರಾಕ್ಷಸಃ ॥ ಮನುಸ್ಮೃತಿ ೧೨-೬೦

ಪತಿತರೊಡನೆ ಸಂಬಂಧ, ಪರಸ್ತ್ರೀಹರಣ, ವಿಪ್ರಧನಾಪಹರಣ ಮುಂತಾದ ಮಹಾ ಪಾತಕಗಳನ್ನು ಮಾಡಿದ ಬ್ರಾಹ್ಮಣನು ಬ್ರಹ್ಮರಾಕ್ಷಸನಾಗುತ್ತಾನೆ.

ಸುಮಂತ್ರನು ದಶರಥನಿಗೆ ಋಷ್ಯಶೃಂಗನನ್ನು ಕರೆತರಲು ಸಲಹೆ ನೀಡಿದುದು : ಋಷ್ಯಶೃಂಗನೊಡನೆ ಶಾಂತಾದೇವಿಯ ವಿವಾಹಪ್ರಸಂಗವನ್ನೂ ವಿವರಿಸಿ ಹೇಳಿದುದು

ಏತಚ್ಛ್ರುತ್ವಾ ರಹಃ ಸೂತೋ ರಾಜಾನಮಿದಮಬ್ರವೀತ್ ।
ಶ್ರೂಯತಾಂ ತತ್ಪುರಾವೃತ್ತಂ ಪುರಾಣೇ ಚ ಮಯಾ ಶ್ರುತಮ್ ।
ಋತ್ವಿಗ್ಭಿರುಪದಿಷ್ಟೋಽಯಂ ಪುರಾವೃತ್ತೋ ಮಯಾ ಶ್ರುತಃ ॥೧॥

ಸುಮಂತ್ರನು ದಶರಥರಾಜನ ಅಂತಃಪುರಕ್ಕೆ ಬಂದು ಏಕಾಂತದಲ್ಲಿ ರಾಜನನ್ನು ಸಂಧಿಸಿ ಹೇಳಿದನು : "ಮಹಾರಾಜ! ಪುತ್ರಪ್ರಾಪ್ತಿಗಾಗಿ ಅಶ್ವ ಮೇಧಯಜ್ಞವನ್ನು ಮಾಡುವಂತೆ ಋತ್ವಿಜರು ನಿನಗೆ ಉಪದೇಶಿಸಿರುವುದು ಸರಿಯಷ್ಟೆ. ಅದರಂತೆ ನೀನೂ ದೀಕ್ಷಾಬದ್ಧನಾಗಿರುವೆ. ನಾವೂ ಸಕಲ ಸಂಭಾರಗಳನ್ನೂ ಸಿದ್ಧಪಡಿಸುತ್ತಿದ್ದೇವೆ. ಮಕ್ಕಳ ಸಲುವಾಗಿ ನೀನು ಅಶ್ವ ಮೇಧಯಾಗವನ್ನು ಮಾಡಲು ಉದ್ದೇಶಿಸಿರುವೆಯೆಂಬುದನ್ನು ಕೇಳಿ ನಾನು ಈ ಹಿಂದೆ ಇದೇ ವಿಷಯವಾಗಿ ಕೇಳಿದ ಒಂದು ಸಮಾಚಾರವನ್ನು ಹೇಳಲು ಬಯಸುತ್ತೇನೆ. ಭೂತ-ಭವಿಷ್ಯದ್ವರ್ತಮಾನಗಳನ್ನು ತಿಳಿದ ಸನತ್ಕುಮಾರ ಮಹರ್ಷಿಯು ಪೂರ್ವದಲ್ಲಿ ನಿನ್ನ ಪುತ್ರಪ್ರಾಪ್ತಿವಿಷಯಕವಾದ ಕಥೆಯನ್ನು ಋಷಿಗಳ ಸಮ್ಮುಖದಲ್ಲಿ ಹೇಳಿದನು. ಅವನಂದು ಹೇಳಿದ ಕಥೆಯನ್ನು ನಿನಗೆ ಸಂಕ್ಷೇಪಿಸಿ ಹೇಳುವೆನು.

"ಕಾಶ್ಯಪನಿಗೆ ವಿಭಂಡಕನೆಂಬ ಮಗನೊಬ್ಬನಿರುವನು. ಅವನಿಗೆ ಋಷ್ಯಶೃಂಗನೆಂದು ಪ್ರಖ್ಯಾತನಾದ ಮಗನು ಹುಟ್ಟುತ್ತಾನೆ. ಅವನು ಅರಣ್ಯ ದಲ್ಲಿಯೇ ಪ್ರವರ್ಧಮಾನನಾಗುತ್ತಾನೆ. ಯಾವಾಗಲೂ ಅರಣ್ಯದಲ್ಲಿಯೇ ಸುತ್ತುತ್ತಾನೆ. ನಿತ್ಯವೂ ತಂದೆಯ ಜೊತೆಯಲ್ಲಿಯೇ ಇರುತ್ತಿರುತ್ತಾನೆ. ತಂದೆಯೊಬ್ಬನನ್ನುಳಿದು ಬೇರೆ ಮನುಷ್ಯರು ಈ ಪೃಥ್ವಿಯಲ್ಲಿರುವ ವಿಷಯವೇ ಅವನಿಗೆ ತಿಳಿದಿರುವುದಿಲ್ಲ. ಆದರೆ ಆ ಮಹಾತ್ಮನು ಆಚರಿಸುತ್ತಿರುವ ಬ್ರಹ್ಮಚರ್ಯಕ್ಕೆ ಭಂಗವುಂಟಾಗುವುದು. ಈ ವಿಷಯವು

ಲೋಕಪ್ರಸಿದ್ಧವಾಗುತ್ತದೆ. ಬ್ರಾಹ್ಮಣರು ಇದನ್ನು ಸದಾ ಹೇಳುತ್ತಾ ಬಂದಿದ್ದಾರೆ.* ಬ್ರಹ್ಮಚರ್ಯಾಶ್ರಮಕ್ಕೆ ಅನುಸಾರವಾಗಿ ಅಗ್ನಿಯನ್ನು ಸಮಿದಾಧಾನದಿಂದಲೂ–ಯಶೋವಂತನಾದ ಮತ್ತು ಗುರುವಾದ ತಂದೆಯನ್ನು ಶುಶ್ರೂಷೆಯಿಂದಲೂ ಪೂಜಿಸುತ್ತಿದ್ದ ಋಷ್ಯಶೃಂಗನಿಗೆ ಅನೇಕ ವರ್ಷಗಳು ಹೀಗೆಯೇ ಕಳೆಯುತ್ತವೆ. ಅದೇ ಕಾಲದಲ್ಲಿ ಅಂಗದೇಶಾಧಿಪತಿಯಾದ, ಸುಪ್ರಸಿದ್ಧನಾದ, ಮಹಾಬಲಿಷ್ಠನಾದ ರೋಮಪಾದನೆಂಬ ಪ್ರತಾಪಶಾಲಿಯಾದ ರಾಜನು ಅಂಗದೇಶವನ್ನು ಆಳುತ್ತಿರುತ್ತಾನೆ. ಅವನು ಮಾಡಿದ ಧರ್ಮವ್ಯತಿಕ್ರಮದ ಕಾರಣದಿಂದಾಗಿ ಅವನ ರಾಜ್ಯದಲ್ಲಿ ಸಕಲಪ್ರಾಣಿಗಳಿಗೂ ಭಯೋತ್ಪಾದಕವಾದ, ದಾರುಣವಾದ ಅನಾವೃಷ್ಟಿಯು ಸಂಭವಿಸುತ್ತದೆ. ಅನೇಕವರ್ಷಗಳ ಕಾಲ ಆ ರಾಜ್ಯದಲ್ಲಿ ಮಳೆಯೇ ಆಗುವುದಿಲ್ಲ. ಅದರಿಂದ ಪೈರುಪಚ್ಚೆಗಳು ಬೆಳೆಯದೇ ದೇಶದಲ್ಲಿ ಕ್ಷೋಭೆಯುಂಟಾಗಿ ಬಹಳ ದುಃಖಿತನಾಗುವ ರೋಮಪಾದನು ಬಹುಶ್ರುತರಾದ ಬ್ರಾಹ್ಮಣರನ್ನು ಕರೆಯಿಸಿ, ಸತ್ಕರಿಸಿ, ಅವರಲ್ಲಿ ಪ್ರಾರ್ಥಿಸುತ್ತಾನೆ: "ಬ್ರಾಹ್ಮಣೋತ್ತಮರೇ! ನೀವು ಧರ್ಮಾಧರ್ಮವಿಷಯಗಳನ್ನು ಪೂರ್ಣವಾಗಿ ತಿಳಿದವರಾಗಿರುವಿರಿ. ನಾನು ಮಾಡಿರುವ ಮಹಾಪಾಪದ ಕಾರಣದಿಂದಲೇ ಇಂತಹ ಅತಿಘೋರವಾದ ಅನಾವೃಷ್ಟಿಯು ನಮ್ಮ ದೇಶಕ್ಕೆ ಒದಗಿದೆಯೆಂಬುದರಲ್ಲಿ ಸಂಶಯವಿಲ್ಲ. ಆದುದರಿಂದ ತಾವು ಸಮಾಲೋಚಿಸಿ, ಅಪರಾಧಕ್ಕೆ ಪ್ರಾಯಶ್ಚಿತ್ತವನ್ನೂ ಮತ್ತು ಅದರ ನಿಯಮವನ್ನೂ ತಿಳಿಯಪಡಿಸಿರಿ." ಹೀಗೆ ಕೈಜೋಡಿಸಿ ಬ್ರಾಹ್ಮಣರನ್ನು ಕೇಳಿಕೊಳ್ಳುತ್ತಾನೆ. ವೇದ-ವೇದಾಂಗಪಾರಂಗತರಾದ, ಭೂತ-ಭವಿಷ್ಯದ್ವರ್ತಮಾನಗಳನ್ನು ತಿಳಿದ ಆ ಬ್ರಾಹ್ಮಣರು ಸುಪ್ರೀತರಾಗಿ

---

* ಈ ಶ್ಲೋಕಕ್ಕೆ ಹೀಗೂ ಅರ್ಥಮಾಡುತ್ತಾರೆ: 'ಋಷ್ಯಶೃಂಗನ ಬ್ರಹ್ಮಚರ್ಯವು ಎರಡು ಬಗೆಯದು. ವಿವಾಹಕ್ಕೆ ಮೊದಲು ಯಾವ ಸ್ತ್ರೀಸಂಗವನ್ನೂ ಮಾಡದಿರುವ ನಿಯಮವುಳ್ಳದ್ದು ಮೊದಲನೆಯದು. ಎರಡನೆಯದು : ವಿವಾಹಾನಂತರ ತನ್ನ ಪತ್ನಿಯೊಡನೆ ಋತುಕಾಲದಲ್ಲಿ ಮಾತ್ರ ಸಂಗಮಮಾಡುವ ನಿಯಮವುಳ್ಳದ್ದು. ಮಹಾತ್ಮನಾದ ಋಷ್ಯಶೃಂಗನಿಗೆ ಎರಡು ಬಗೆಯ ಬ್ರಹ್ಮಚರ್ಯಗಳೂ ಒದಗುವುವು.'

ದ್ವೈವಿಧ್ಯಂ = ಎರಡು ಬಗೆಯದು ; ಏಕರೂಪತೆಯನ್ನು ಕಳೆದುಕೊಳ್ಳುವುದು ; ಭಂಗಹೊಂದುವುದು.

ರಾಜನಿಗೆ ಹೇಳುತ್ತಾರೆ : "ಮಹಾರಾಜ! ವಿಭಂಡಕನಿಗೆ ಋಷ್ಯಶೃಂಗನೆಂಬ ಮಗನಿದ್ದಾನೆ. ಅವನನ್ನು ನಾನಾರೀತಿಯ ಉಪಾಯಗಳಿಂದ ಪಟ್ಟಣಕ್ಕೆ ಕರೆತಂದು ಸತ್ಕರಿಸಿ, ನಿನ್ನ ಪ್ರಿಯಸುತೆಯಾದ ಶಾಂತೆಯನ್ನು ವಿಧಿಪೂರ್ವಕ ವಾಗಿ ಅವನಿಗೆ ವಿವಾಹಮಾಡಿಕೊಡು. ಈ ವಿಷಯದಲ್ಲಿ ಪುನರ್ವಿಮರ್ಶೆ ಯನ್ನು ಮಾಡುವ ಪ್ರಮೇಯವೇ ಇಲ್ಲ"–ಎಂದು ಹೇಳುತ್ತಾರೆ. ಬ್ರಾಹ್ಮಣರು ಹೇಳಿದ ಮಾತುಗಳನ್ನು ಕೇಳಿ ರೋಮಪಾದನು ಪುನಃ ಚಿಂತಾಕ್ರಾಂತ ನಾಗುತ್ತಾನೆ. "ಯಾವ ಉಪಾಯದಿಂದ ನಿಯತಬ್ರಹ್ಮಚಾರಿಯಾದ, ತಪೋನಿಷ್ಠನಾದ ಋಷ್ಯಶೃಂಗನನ್ನು ನಗರಕ್ಕೆ ಕರೆತರುವುದು?"–ಎಂಬುದೇ ಅವನ ಚಿಂತೆ. ಮಂತ್ರಿಗಳೊಡನೆಯೂ, ಅಮಾತ್ಯರೊಡನೆಯೂ, ಪುರೋ ಹಿತರೊಡನೆಯೂ ರೋಮಪಾದನು ಸಮಾಲೋಚಿಸಿ, ಬ್ರಾಹ್ಮಣವಟುವನ್ನು ಕರೆತರಲು ಬ್ರಾಹ್ಮಣರೇ ಸಮರ್ಥರೆಂದು ನಿಶ್ಚಯಿಸುತ್ತಾನೆ. ಬಳಿಕ ಬ್ರಾಹ್ಮಣರನ್ನು ಸತ್ಕರಿಸಿ ಋಷ್ಯಶೃಂಗನನ್ನು ಕರೆತರಲು ಕೇಳಿಕೊಳ್ಳುತ್ತಾನೆ. ಅವರು ರಾಜನ ಮಾತನ್ನು ಕೇಳಿ ವ್ಯಥಿತರಾಗಿ, ತಲೆಯನ್ನು ತಗ್ಗಿಸಿ ನಿಲ್ಲು ತ್ತಾರೆ. "ವಿಭಂಡಕಮುನಿಯ ಶಾಪಕ್ಕೆ ನಾವು ಭಯಪಡುವೆವು. ಆದುದರಿಂದ ಋಷ್ಯಶೃಂಗನನ್ನು ಕರೆತರಲು ಹೋಗಲಾರೆವು"–ಎಂದು ಸ್ಪಷ್ಟವಾಗಿ ಹೇಳುತ್ತಾರೆ. ಆದರೂ ಅವರು ಋಷಿಕುಮಾರನನ್ನು ಕರೆತರುವ ಉಪಾಯ ವನ್ನು ಸೂಚಿಸುವುದಾಗಿ ಹೇಳಿ ರಾಜನನ್ನು ಸಂತಯಿಸುತ್ತಾರೆ. ಋಷ್ಯ ಶೃಂಗನನ್ನು ಕರೆತರಲು ಸಾಧಕವಾದ ಉಪಾಯಗಳನ್ನೂ, ಅದರಲ್ಲಿರುವ ಬಾಧಕಗಳನ್ನೂ ಸಂಪೂರ್ಣವಾಗಿ ಪರ್ಯಾಲೋಚಿಸಿ ಬ್ರಾಹ್ಮಣರು ರಾಜನಿಗೆ ಹೇಳುತ್ತಾರೆ: "ನಗರದ ವೇಶ್ಯೆಯರ ಮೂಲಕವಾಗಿ ನಾವು ಉಪಾಯವಾಗಿ ಋಷಿಸುತನನ್ನು ಕರೆತರುತ್ತೇವೆ. ಅದರಿಂದ ಯಾವ ವಿಧವಾದ ದೋಷವೂ ಸಂಭವಿಸಲಾರದು." ಬ್ರಾಹ್ಮಣರು ಹೇಳಿದಂತೆ ರೋಮಪಾದನು ಸುಂದರಿ ಯರಾದ ವೇಶ್ಯೆಯರನ್ನು ಕಳುಹಿಸಿಕೊಟ್ಟು, ಋಷ್ಯಶೃಂಗನನ್ನು ನಗರಕ್ಕೆ ಕರೆಯಿಸುತ್ತಾನೆ. ಅವನು ರೋಮಪಾದನ ದೇಶವನ್ನು ಪ್ರವೇಶಮಾಡು ತ್ತಿದ್ದಂತೆಯೇ ಸುವೃಷ್ಟಿಯಾಗುತ್ತದೆ. ಬ್ರಾಹ್ಮಣರ ನಿರ್ದೇಶದಂತೆ ರೋಮ ಪಾದನು ತನ್ನ ಮಗಳಾದ ಶಾಂತೆಯನ್ನು ಋಷ್ಯಶೃಂಗನಿಗೆ ಕೊಟ್ಟು ಮದುವೆ ಮಾಡುತ್ತಾನೆ. ರೋಮಪಾದರಾಜನ ಅಳಿಯನಾದ ಋಷ್ಯಶೃಂಗನು ಮುಂದೆ

ದಶರಥನ ಪುತ್ರಪ್ರಾಪ್ತಿಗೂ ಕಾರಣನಾಗುವನು.” ಹೀಗೆ ಸನತ್ಕುಮಾರನು ಋಷಿಗಳ ಸಮ್ಮುಖದಲ್ಲಿ ಹೇಳಿದ ಕಥೆಯನ್ನು ನಾನು ನಿನಗೆ ಹೇಳಿರುವೆನು”–ಎಂದು ಹೇಳಿ ಸುಮಂತ್ರನು ಮೌನತಾಳಿದನು. ಆ ಕಥೆಯನ್ನು ಕೇಳಿ ದಶರಥನಿಗೆ ಬಹಳ ಸಂತೋಷವುಂಟಾಯಿತು. ರೋಮಪಾದನು ಋಷ್ಯಶೃಂಗನನ್ನು ನಗರಿಗೆ ಕರೆತಂದ ವಿಷಯವನ್ನು ವಿಸ್ತಾರವಾಗಿಯೇ ಕೇಳಬೇಕೆಂಬ ಕುತೂಹಲವುಂಟಾಗಿ ಪುನಃ ಸುಮಂತ್ರನಿಗೆ ಹೇಳಿದನು :

“ಸುಮಂತ್ರ! ನಿಯತಬ್ರಹ್ಮಚಾರಿಯಾದ ಋಷ್ಯಶೃಂಗನನ್ನು ವೇಶ್ಯೆಯರು ಹೇಗೆ ಪಟ್ಟಣಕ್ಕೆ ಕರೆತಂದರೆಂಬುದನ್ನು ನನಗೆ ವಿಸ್ತಾರವಾಗಿ ಹೇಳು.”

೯ನೆಯ ಸರ್ಗವು ಮುಗಿಯಿತು.

ಬಾಲಕಾಂಡ ೧೦ನೆಯ ಸರ್ಗ

ಅಂಗದೇಶಕ್ಕೆ ಋಷ್ಯಶೃಂಗನ ಆಗಮನ : ಶಾಂತಾದೇವಿಯೊಡನೆ ವಿವಾಹ

ಸುಮನ್ತ್ರಶ್ಚೋದಿತೋ ರಾಜ್ಞಾ ಪ್ರೋವಾಚೇದಂ ವಚಸ್ತದಾ ।
ಯಥರ್ಷ್ಯಶೃಙ್ಗಸ್ತ್ವಾನೀತಃ ಶೃಣು ಮೇ ಮನ್ತ್ರಿಭಿಃ ಸಹ ।
ತನ್ಮೇ ನಿಗದಿತಂ ಸರ್ವಂ ವಿಸ್ತರೇಣ ಶೃಣುಷ್ವ ಹ ॥೧॥

ಋಷ್ಯಶೃಂಗನ ಕಥೆಯನ್ನು ಹೇಳಲು ದಶರಥನಿಂದ ಪ್ರಚೋದಿತನಾದ ಸುಮಂತ್ರನು ಹೇಳತೊಡಗಿದನು :

“ಮಹಾರಾಜ! ರೋಮಪಾದನು ಮಂತ್ರಿಗಳೊಡನೆ ಸಮಾಲೋಚಿಸಿ, ಋಷ್ಯಶೃಂಗನನ್ನು ಪಟ್ಟಣಕ್ಕೆ ಹೇಗೆ ಕರೆತಂದನೆಂಬುದನ್ನು ಯಥಾಶ್ರುತವಾಗಿ ಹೇಳುವೆನು ; ಕೇಳು. ನಾನು ಹಿಂದೆ ಹೇಳಿದಂತೆ ಅಮಾತ್ಯಸಮೇತನಾಗಿ ಕುಳಿತಿದ್ದ ರೋಮಪಾದನಿಗೆ ಪುರೋಹಿತಪ್ರಮುಖರು ಹೇಳಿದರು :

“ಮಹಾರಾಜ! ನಾವು ಕೂಲಂಕಷವಾಗಿ ಪರ್ಯಾಲೋಚಿಸಿ ನಿಶ್ಚಯಿ

ಸಿರುವ ಋಷ್ಯಶೃಂಗನನ್ನು ಕರೆತರುವ ಉಪಾಯವು ನಿಶ್ಚಯವಾಗಿಯೂ ಅಪಾಯರಹಿತವಾಗಿರುವುದು. ವನಚರನಾದ ಋಷ್ಯಶೃಂಗನು ಯಾವಾಗಲೂ ತಪಸ್ಸಿನಲ್ಲಿಯೂ, ಅಧ್ಯಯನದಲ್ಲಿಯೂ ನಿರತನಾಗಿರುವನು. ಸ್ತ್ರೀಯರೆಂದರೆ ಯಾರೆಂಬುದೇ ಅವನಿಗೆ ತಿಳಿಯದು. ಶಬ್ದ-ಸ್ಪರ್ಶ-ರೂಪ- ರಸ-ಗಂಧಗಳ ಸಂಬಂಧದಿಂದ ಬರುವ ಸುಖದ ಅನುಭವವೂ ಅವನಿಗೆ ಇರುವುದಿಲ್ಲ. ಇಂದ್ರಿಯಗಳನ್ನು ಆಕರ್ಷಿಸುವ ವಸ್ತುಗಳಿಂದಲೂ, ಚಿತ್ತಾ ಕರ್ಷಕವಾದ ರೂಪ-ಲಾವಣ್ಯಗಳುಳ್ಳವರಿಂದಲೂ ಆಕರ್ಷಿತನನ್ನಾಗಿ ಮಾಡಿ, ಋಷಿಕುಮಾರನನ್ನು ನಗರಕ್ಕೆ ಕರೆತರೋಣ. ಈ ನಮ್ಮ ಯೋಜನೆಗೆ ನೀನು ಶೀಘ್ರವಾಗಿ ಒಪ್ಪಿಗೆ ನೀಡು, ಮಹಾರಾಜ! ಸುಸಂಸ್ಕೃತರಾದ, ರೂಪವತಿಯರಾದ, ವೇಶ್ಯೆಯರು ಅಲಂಕೃತರಾಗಿ ಅರಣ್ಯಕ್ಕೆ ಹೋಗಲಿ. ಅಲ್ಲಿ ಋಷಿ ಕುಮಾರನನ್ನು ವಿಧವಿಧವಾದ ಹಾವ-ಭಾವಗಳಿಂದ ವಂಚಿಸಿ ನಗರಕ್ಕೆ ಕರೆದುಕೊಂಡು ಬರಲಿ."

ರೋಮಪಾದನು ಆ ಮಾತುಗಳನ್ನು ಕೇಳಿ ಹಾಗೆಯೇ ಆಗಲೆಂದು ಒಪ್ಪಿದನು. ಮಂತ್ರಿಗಳೂ ಅದಕ್ಕೆ ಒಪ್ಪಿಗೆ ನೀಡಿದರು. ನಗರದಲ್ಲಿದ್ದ ಚೆಲುವೆಯರಾದ ವೇಶ್ಯೆಯರನ್ನು ಕರೆತರಿಸಿ, ಸತ್ಕರಿಸಿ, ಋಷ್ಯಶೃಂಗನನ್ನು ಕರೆತರಲು ಅವರು ಮಾಡಬೇಕಾದ ಕಾರ್ಯವನ್ನು ಯಥೋಚಿತವಾಗಿ ಸೂಚಿಸಿ, ಅವರಿಗೆ ಬೇಕಾಗಬಹುದಾದ ದಿವ್ಯವಸ್ತ್ರಾಭರಣಗಳನ್ನೂ, ಇತರ ವಸ್ತುಗಳನ್ನೂ ಕೊಟ್ಟರು. ರಾಜನ ಆಶಯದಂತೆ ಮತ್ತು ಮಂತ್ರಿಗಳ ಆದೇಶದಂತೆ ವಾರಾಂಗನೆಯರು ಮಹಾವನವನ್ನು ಪ್ರವೇಶಿಸಿದರು. ವೇಶ್ಯೆ ಯರು ವನವನ್ನು ಪ್ರವೇಶಿಸಿ ವಿಭಂಡಕರ ಆಶ್ರಮದ ಸಮೀಪದಲ್ಲಿಯೇ ತಮ್ಮ ತಾತ್ಕಾಲಿಕ ನಿವಾಸವನ್ನು ಮಾಡಿಕೊಂಡು ನಿಯತಬ್ರಹ್ಮಚಾರಿಯಾದ, ನಿತ್ಯವೂ ಆಶ್ರಮದಲ್ಲಿಯೇ ಇರುತ್ತಿದ್ದ ಋಷ್ಯಶೃಂಗನನ್ನು ಆಶ್ರಮದ, ಹೊರಗೇ ಕಾಣಲು ಯತ್ನಿಸಿದರು. ಆದರೆ ನಿತ್ಯಸಂತುಷ್ಟನಾದ, ತಂದೆಯ ಶುಶ್ರೂಷೆಯಲ್ಲಿಯೇ ನಿರತನಾದ ಋಷ್ಯಶೃಂಗನು ಒಮ್ಮೆಯಾದರೂ ಆಶ್ರಮದಿಂದ ಹೊರಕ್ಕೆ ಬರಲಿಲ್ಲ. ಹುಟ್ಟಿದಂದಿನಿಂದಲೂ ಋಷ್ಯಶೃಂಗನು ತಂದೆಯೊಬ್ಬನನ್ನು ಬಿಟ್ಟು ಬೇರಾವ ಪುರುಷನನ್ನಾಗಲೀ, ಸ್ತ್ರೀಯನ್ನಾಗಲೀ ಕಂಡವನಲ್ಲ. ಪಟ್ಟಣದಲ್ಲಿ ಅಥವಾ ರಾಷ್ಟ್ರದಲ್ಲಿ ಕಾಣುವ ವಸ್ತುಗಳ ಅರಿವೇ

ಅವನಿಗಿರಲಿಲ್ಲ. ದೈವವಶದಿಂದ ಒಂದಾನೊಂದು ದಿನ ಋಷ್ಯಶೃಂಗನು ಸ್ವೇಚ್ಛೆಯಿಂದಲೇ ಆಶ್ರಮದಿಂದ ಹೊರಗೆ ಬಂದು ಅತ್ತಲಿತ್ತ ತಿರುಗಾಡು ತ್ತಿದ್ದಾಗ ವಾರಾಂಗನೆಯರಿದ್ದ ಸ್ಥಳಕ್ಕೂ ಹೋದನು. ಅಲ್ಲಿ ಸರ್ವಾಲಂಕಾರ ವಿಭೂಷಿತೆಯರಾಗಿದ್ದ ವೇಶ್ಯೆಯರನ್ನು ಕಂಡನು. ಅವರು ಚಿತ್ರ-ವಿಚಿತ್ರವಾದ ವೇಷಭೂಷಣಗಳನ್ನು ಧರಿಸಿಕೊಂಡಿದ್ದರು. ಸುಮಧುರವಾಗಿ ಗಾನ ಮಾಡುತ್ತಿದ್ದರು. ಆ ಪ್ರಮದೆಯರು ಋಷಿಕುಮಾರನನ್ನು ಕಂಡೊಡನೆಯೇ ಸಂತೋಷಭರಿತರಾಗಿ ಅವನ ಸಮೀಪಕ್ಕೆ ಬಂದು ಸುತ್ತುವರಿದು ನಿಂತು ಕೇಳಿದರು :

"ಬ್ರಾಹ್ಮಣೋತ್ತಮನೇ! ನೀನು ಯಾರು? ನಿನ್ನ ಹೆಸರೇನು? ನಿನ್ನ ತಂದೆಯು ಯಾರು? ನೀನಿಲ್ಲಿ ಏನು ಮಾಡುತ್ತಿರುವೆ?–ಇವೆಲ್ಲವನ್ನೂ ನಿನ್ನಿಂದ ಕೇಳಿ ತಿಳಿಯುವ ಅಪೇಕ್ಷೆಯಿಂದಿದ್ದೇವೆ. ಏಕಾಕಿಯಾಗಿ ನಿರ್ಜನವಾದ ಮತ್ತು ಘೋರವಾದ ಈ ಕಾನನದಲ್ಲಿ ಏಕೆ ಸಂಚರಿಸುತ್ತಿರುವೆ? ಎಲ್ಲವನ್ನೂ ನಮಗೆ ವಿವರವಾಗಿ ಹೇಳು."

ಋಷ್ಯಶೃಂಗನು ಸ್ತ್ರೀರೂಪವನ್ನೇ ಎಂದೂ ನೋಡಿದವನಲ್ಲ. ಮೇಲಾಗಿ ಆ ಸ್ತ್ರೀಯರು ಅತ್ಯಂತಕಮನೀಯವಾದ ರೂಪಲಾವಣ್ಯವುಳ್ಳವರಾಗಿದ್ದರು. ಅವರನ್ನು ನೋಡಿದೊಡನೆಯೇ ಋಷಿಸುತನ ಹೃದಯದಲ್ಲಿ ಸ್ನೇಹವುಂಟಾಯಿತು. ಆ ಕಾರಣದಿಂದಲೇ ಅವರೊಡನೆ ತಾನೂ ಮಾತನಾಡ ಬೇಕೆಂಬ–ತನ್ನ ಮತ್ತು ತನ್ನ ತಂದೆಯ ನಾಮಧೇಯಗಳನ್ನು ಹೇಳಬೇಕೆಂಬ ಬುದ್ಧಿಯುಂಟಾಯಿತು. ಋಷ್ಯಶೃಂಗನು ಹೇಳಿದನು :

"ವಿಭಂಡಕರೆಂದು ನಮ್ಮ ತಂದೆಯವರ ಹೆಸರು. ಅವರಿಗೆ ನಾನು ಔರಸಪುತ್ರನು. ನನ್ನ ನಿತ್ಯ-ನೈಮಿತ್ತಿಕಕರ್ಮಗಳೆಲ್ಲವೂ ಈ ವನದಲ್ಲಿಯೇ ನಡೆಯುತ್ತಲಿವೆ.* ಶುಭದರ್ಶನರೇ! ಈ ವನಪ್ರದೇಶದಲ್ಲಿಯೇ ನಮ್ಮ ಆಶ್ರಮವಿದೆ. ಅಲ್ಲಿ ತಮ್ಮೆಲ್ಲರ ಸತ್ಕಾರವನ್ನು ವಿಧಿಪೂರ್ವಕವಾಗಿ ಮಾಡು ತ್ತೇನೆ." ಋಷಿಸುತನ ಮಾತನ್ನು ಕೇಳಿದ ವೇಶ್ಯೆಯರಿಗೆ ಅವನ ಆಶ್ರಮವನ್ನು

---

* ವಿಭಂಡಕರೊಮ್ಮೆ ಮಹಾಭೂತವೆಂಬ ಸರೋವರದಲ್ಲಿ ಸ್ನಾನಮಾಡುತ್ತಿದ್ದಾಗ ವ್ಯೋಮಯಾನದಲ್ಲಿ ಸಂಚರಿಸುತ್ತಿದ್ದ ಊರ್ವಶಿಯನ್ನು ಕಂಡರು. ಒಡನೆಯೇ ರೇತಸ್ಸು

ನೋಡುವ ಕುತೂಹಲವುಂಟಾಯಿತು. ಅವನನ್ನೇ ಅನುಸರಿಸಿ ಎಲ್ಲರೂ ಆಶ್ರಮಕ್ಕೆ ತೆರಳಿದರು. ಅವರು ಆಶ್ರಮದೊಳಕ್ಕೆ ಬರುವುದಕ್ಕಿಂತ

ಮುಂಚೆಯೇ ತಾನು ಆಶ್ರಮದೊಳಕ್ಕೆ ಹೋಗಿ ಕಮಂಡಲುವನ್ನು ತೆಗೆದು

ಸ್ಖಲನವಾಯಿತು. ಅದೇ ಸಮಯಕ್ಕೆ ಸರಿಯಾಗಿ ಹೆಣ್ಣು ಜಿಂಕೆಯೊಂದು ನೀರು ಕುಡಿಯಲು ಆ ಸರೋವರಕ್ಕೆ ಬಂದಿದ್ದಿತು. ನೀರಿನ ಜೊತೆಯಲ್ಲಿಯೇ ಋಷಿಯ ರೇತಸ್ಸನ್ನೂ ಪಾನ ಮಾಡಿತು. ಋಷಿಯಿಂದ ಬಿಡಲ್ಪಟ್ಟ ರೇತಸ್ಸು ವ್ಯರ್ಥವಾಗುವುದಿಲ್ಲವಾದ ಕಾರಣ ಜಿಂಕೆಯು ಗರ್ಭಧಾರಣೆ ಮಾಡಿ ತಲೆಯಲ್ಲಿ ಜಿಂಕೆಯಂತೆ ಕೊಂಬುಳ್ಳ ಮನುಷ್ಯಾಕಾರದ ಶಿಶುವನ್ನು ಪ್ರಸವಿಸಿತು. ಆ ಶಿಶುವನ್ನೇ ತನ್ನ ಔರಸಪುತ್ರನೆಂದು ಭಾವಿಸಿ ವಿಭಂಡಕರು 'ಋಷ್ಯಶೃಂಗ'ನೆಂದು ಹೆಸರಿಟ್ಟು ಪೋಷಿಸಿದರು.

ಕೊಂಡು ಬಂದು ಮಹರ್ಷಿಗಳಿಗೆ ಅರ್ಪಿಸುವಂತೆಯೇ ವಿನಯಪೂರ್ವಕ ವಾಗಿ 'ಇದಮರ್ಘ್ಯಂ' 'ಇದಂ ಪಾದ್ಯಂ' ಎಂದು ಮಂತ್ರಪುರಸ್ಸರವಾಗಿ ಅರ್ಘ್ಯ-ಪಾದ್ಯ-ಆಚಮನೀಯಾದಿಗಳನ್ನಿತ್ತು ಸತ್ಕರಿಸಿದನು. ಕಂದ-ಮೂಲ-ಫಲಾಹಾರಾದಿಗಳನ್ನು ಅರ್ಪಿಸಿದನು. ಋಷಿಪುತ್ರನು ಭಕ್ತಿಪೂರ್ವಕವಾಗಿ ಅರ್ಪಿಸಿದ ಪೂಜೆಯನ್ನು ವಾರಾಂಗನೆಯರೂ ಉತ್ಸುಕತೆಯಿಂದ ಸ್ವೀಕರಿಸಿದರು. ಆದರೆ ಅವರಿಗೆ ಅಲ್ಲಿಯೇ ಹೆಚ್ಚು ಹೊತ್ತು ನಿಲ್ಲುವ ಧೈರ್ಯವಿರಲಿಲ್ಲ. ವಿಭಂಡಕಮುನಿಗಳು ಬಂದುಬಿಡುವರೆಂಬ ಭಯದಿಂದಾಗಿ ಒಡನೆಯೇ ಆಶ್ರಮವನ್ನು ಬಿಟ್ಟು ಹೋಗಲು ನಿಶ್ಚಯಿಸಿದರು. ಹಾಗೆಯೇ ಹೋಗಿಬಿಟ್ಟರೆ ತಮ್ಮ ಕಾರ್ಯಸಿದ್ಧಿಯಾದರೂ ಹೇಗಾದೀತು? ಪೂರ್ವಸಿದ್ಧತೆಯಂತೆ ತಾವು ತಂದಿದ್ದ ಮೋದಕಗಳನ್ನೂ, ಲಡ್ಡುಗಳನ್ನೂ ಒಂದು ಪರಾತದಲ್ಲಿಟ್ಟು ಋಷಿಕುಮಾರನಿಗೆ ಕೊಟ್ಟು ಹೇಳಿದರು :

"ಬ್ರಾಹ್ಮಣೋತ್ತಮನೇ! ಇವು ನಾವು ತಿನ್ನುವ ಫಲಗಳಲ್ಲಿ ಮುಖ್ಯವಾದುವು. ಇವುಗಳನ್ನು ನೀನು ಸ್ವೀಕರಿಸು. ನಿನಗೆ ಮಂಗಳವಾಗಲಿ. ಸಾವಕಾಶಮಾಡದೆ ಒಡನೆಯೇ ಈ ಹಣ್ಣುಗಳನ್ನು ಭುಂಜಿಸು."

ಮೋದಕಗಳನ್ನೂ ಪರಿ-ಪರಿಯಾದ ಭಕ್ಷ್ಯಗಳನ್ನೂ ಋಷಿಕುಮಾರ ನಿಗೆ ಕೊಟ್ಟು ತಾವು ಬಂದ ಕಾರ್ಯದ ಸಾಧನೆಯಾಯಿತೆಂಬ ಸಂತೋಷಾಧಿಕ್ಯದಿಂದ ಅವನನ್ನು ಸ್ನೇಹಪೂರ್ವಕವಾಗಿ ಪ್ರತಿಯೊಬ್ಬರೂ ಆಲಿಂಗಿಸಿದರು. ವಾರಾಂಗನೆಯರಿತ್ತ ಭಕ್ಷ್ಯ-ಭೋಜ್ಯಾದಿಗಳನ್ನು ಉಪಭುಂಜಿಸಿದ ಋಷಿಕುಮಾರನು ನಿತ್ಯವನವಾಸಿಗಳು ಎಂದೂ ರುಚಿನೋಡದ ಆ ಭಕ್ಷ್ಯಗಳನ್ನು ಫಲಗಳೆಂದೇ ಭಾವಿಸಿದನು. ವಿಭಂಡಕರಿಗೆ ಹೆದರಿದ ವಾರಾಂಗನೆಯರು ಋಷಿಪುತ್ರನೊಡನೆ–ತಾವು ಯಾವುದೋ ಒಂದು ವ್ರತಾನುಷ್ಠಾನ ಮಾಡಬೇಕಾಗಿರುವುದೆಂದೂ, ಅದರಿಂದಾಗಿ ಹೋಗಿಬರುವುದಾಗಿಯೂ–ಹೇಳಿ ವಿಭಂಡಕರು ಆಶ್ರಮಕ್ಕೆ ಬರುವುದರೊಳಗಾಗಿ ಆಶ್ರಮದಿಂದ ಹೊರಟುಬಿಟ್ಟರು. ಅವರೆಲ್ಲರೂ ಹೊರಟುಹೋದೊಡನೆಯೇ ಋಷ್ಯಶೃಂಗನು ಅಸ್ವಸ್ಥಹೃದಯನಾದನು. ಮನಸ್ಸು ವಾರಾಂಗನೆಯರ ಸುಂದರಾಕಾರವನ್ನು ಸ್ಮರಿಸಿ ಪರಿಭ್ರಮಿಸಿತು. ಅವರ ವಿರಹದಿಂದ ದುಃಖವೂ ಉಂಟಾಯಿತು. ಆಶ್ರಮದಲ್ಲಿರಲು ಸಾಧ್ಯವಾಗಲಿಲ್ಲ. ಅವರನ್ನೇ ಸ್ಮರಿಸುತ್ತಾ ವನದಲ್ಲಿ ಸಂಚರಿಸು

ತ್ತಿದ್ದನು. ವಾರಾಂಗನೆಯರ ಸ್ಪರ್ಶನ-ದರ್ಶನ-ಗಾಯನಗಳನ್ನೇ ಸ್ಮರಿಸುತ್ತಾ ಸುತ್ತಾಡುತ್ತಿದ್ದ ಋಷ್ಯಶೃಂಗನು ಮರುದಿನ, ಹಿಂದಿನ ದಿನ ನೋಡಿದ್ದ ಸ್ಥಳ ದಲ್ಲಿಯೇ ಸುಂದರಿಯರೂ, ಸಾಲಂಕೃತೆಯರೂ ಆಗಿದ್ದ ವಾರಾಂಗನೆಯರನ್ನು ಕಂಡನು. ಋಷಿಕುಮಾರನು ತಮ್ಮ ಕಡೆಗೇ ಬರುತ್ತಿರುವುದನ್ನು ನೋಡಿದೊಡನೆಯೇ ವೇಶ್ಯೆಯರು ಹೆಚ್ಚು ಸಂತೋಷಗೊಂಡರು. ಮುಂದೆ ಹೋಗಿ ಋಷಿಪುತ್ರನನ್ನು ಆದರದಿಂದ ಸ್ವಾಗತಿಸಿ ಹೇಳಿದರು :

"ಬ್ರಾಹ್ಮಣೋತ್ತಮನೇ! ನಮ್ಮ ಆಶ್ರಮಕ್ಕೆ ದಯಮಾಡು. ನಾವೀ ಗಲೇ ನಿನ್ನನ್ನು ಕರೆದೊಯ್ಯುತ್ತೇವೆ. ಅಲ್ಲಿ ನಿನ್ನ ಸತ್ಕಾರಕ್ಕೆ ಅನೇಕವಿಧವಾದ ಕಂದ-ಮೂಲ-ಫಲಾಹಾರಗಳು ಸಿದ್ಧವಾಗಿವೆ ಮತ್ತು ಅಲ್ಲಿ ನಿನ್ನ ಸತ್ಕಾರ ವಿಧಿಯು ವಿಶೇಷರೀತಿಯಲ್ಲಿ ನಡೆಯುವ ಸಿದ್ಧತೆಯಾಗಿದೆ."

ಹೃದಯಂಗಮವಾದ ಸುಮಧುರವಾದ ಅವರ ಮಾತುಗಳನ್ನು ಕೇಳಿ ಋಷಿಕುಮಾರನಿಗೆ ತಾನೂ ಅವರ ಜೊತೆಯಲ್ಲಿ ಅವರ ಆಶ್ರಮಕ್ಕೆ ಹೋಗ ಬೇಕೆನ್ನುವ ಅಭಿಲಾಷೆಯು ಮೂಡಿತು. ವೇಶ್ಯೆಯರೂ ಕೃತಕೃತ್ಯರಾಗಿ, ಮಹರ್ಷಿಯಾದ ಋಷ್ಯಶೃಂಗನನ್ನು ತಮ್ಮ ಜೊತೆಯಲ್ಲಿ ಕರೆದುಕೊಂಡು ನಗರಾಭಿಮುಖವಾಗಿ ಹೊರಟರು. ಮಹಾತ್ಮನಾದ ಆ ಬ್ರಾಹ್ಮಣನನ್ನು ವಾರಾಂಗನೆಯರು ನಗರಕ್ಕೆ ಕರೆದುಕೊಂಡು ಹೋಗುತ್ತಿರುವಾಗಲೇ ದೇವೇಂದ್ರನು ಅಂಗದೇಶದಲ್ಲಿ ಮಳೆಯನ್ನು ಸುರಿಸಿ ಜಗತ್ತಿಗೇ ಆಹ್ಲಾದ ವನ್ನುಂಟುಮಾಡಿದನು. ಋಷಿಕುಮಾರನು ಮಳೆಯ ಸಂಗಡವೇ ತನ್ನ ದೇಶಕ್ಕೆ ಬಂದುದಕ್ಕಾಗಿ ಸಂತುಷ್ಟನಾದ ರೋಮಪಾದನು ಋಷಿಕುಮಾರ ನನ್ನು ಆದರದಿಂದ ಸ್ವಾಗತಿಸಿ ಸಾಷ್ಟಾಂಗಪ್ರಣಾಮಮಾಡಿದನು. ಅರ್ಘ್ಯ-ಪಾದ್ಯಾದಿಗಳಿಂದ ಋಷ್ಯಶೃಂಗನನ್ನು ಯಥಾವಿಧಿಯಾಗಿ ಸತ್ಕರಿಸಿದನು. ಋಷಿಕುಮಾರನನ್ನು ವೇಶ್ಯೆಯರು ವಂಚಿಸಿ ನಗರಕ್ಕೆ ಕರೆದುಕೊಂಡು ಬಂದುದಕ್ಕಾಗಿ ಋಷ್ಯಶೃಂಗನ ತಂದೆಯಾದ ವಿಭಂಡಕರಿಗೆ ಕೋಪ ವುಂಟಾಗದಿರುವಂತೆ ಅನುಗ್ರಹಿಸಬೇಕೆಂದು ರೋಮಪಾದನು ಋಷ್ಯಶೃಂಗ ನಿಂದ ವರವನ್ನು ಪ್ರಾರ್ಥಿಸಿದನು. ರೋಮಪಾದನು ಋಷ್ಯಶೃಂಗನೊಡನೆ ಅಂತಃಪುರವನ್ನು ಪ್ರವೇಶಿಸಿ, ವಿಧಿಪೂರ್ವಕವಾಗಿ ಶಾಂತಾದೇವಿಯನ್ನು

ಋಷ್ಯಶೃಂಗನಿಗೆ ಶಾಂತವಾದ ಮನಸ್ಸಿನಿಂದ ಮದುವೆಮಾಡಿಕೊಟ್ಟು ಆನಂದಭರಿತನಾದನು. ಈ ರೀತಿಯಾಗಿ ಸಕಲವಿಧವಾದ ಕಾಮೋಪಭೋಗ ಗಳಿಂದಲೂ ಸತ್ಕರಿಸಲ್ಪಟ್ಟವನಾಗಿ ಋಷ್ಯಶೃಂಗನು ಭಾರ್ಯೆಯಾದ ಶಾಂತಾದೇವಿಯೊಡನೆ ಅಲ್ಲಿಯೇ ಇರುವನು.

೧೦ನೆಯ ಸರ್ಗವು ಮುಗಿಯಿತು.

ಬಾಲಕಾಂಡ ೧೧ನೆಯ ಸರ್ಗ

ಸುಮಂತ್ರನಿಂದ ಋಷ್ಯಶೃಂಗನ ಮಹಿಮೆಯನ್ನು ಕೇಳಿ ದಶರಥನು ಸಪರಿವಾರನಾಗಿ ಅಂಗದೇಶಕ್ಕೆ ಹೋಗಿ ಅವನನ್ನು ಕರೆತಂದುದು

ಭೂಯ ಏವ ಹಿ ರಾಜೇನ್ದ್ರ ಶೃಣು ಮೇ ವಚನಂ ಹಿತಮ್ ।
ಯಥಾ ಸಾ ದೇವಪ್ರವರಃ ಕಥಾಯಾಮೇವಮಬ್ರವೀತ್ ॥೧॥

ಮಹಾರಾಜ! ಸನತ್ಕುಮಾರನು ಋಷ್ಯಶೃಂಗನ ಕಥಾಪ್ರಸಂಗವನ್ನು ಹೇಳಿ ಪುನಃ ಋಷಿಪ್ರಮುಖರಿಗೆ ಹೇಳಿದುದನ್ನು ನಾನೂ ನಿನ್ನೊಡನೆ ಹೇಳು ವೆನು ; ಕೇಳು. ಇಕ್ಷ್ವಾಕುಕುಲದಲ್ಲಿ ಪರಮಧಾರ್ಮಿಕವಾದ, ಸತ್ಯಪ್ರತಿಜ್ಞ ನಾದ, ಶ್ರೀಮಂತನಾದ ದಶರಥನೆಂಬ ರಾಜನು ಹುಟ್ಟುವನು. ಅವನಿಗೆ ಅಂಗರಾಜನೊಡನೆ ಸ್ನೇಹವುಂಟಾಗುತ್ತದೆ. ಆ ರಾಜನಿಗೆ ಶಾಂತಾ ಎಂಬ ಕನ್ಯೆಯೊಬ್ಬಳಿರುತ್ತಾಳೆ. ಅಂಗರಾಜನ ಮಗನಾದ ರೋಮಪಾದನು ಅಂಗ ರಾಜನೆಂಬ ಹೆಸರಿನಿಂದಲೂ ಪ್ರಸಿದ್ಧನಾಗಿರುತ್ತಾನೆ. ಅಂಗದೇಶವನ್ನು ಅವನು ಆಳುತ್ತಿರುವುದರಿಂದ ಅವನಿಗೆ ತಂದೆಯಂತೆಯೇ 'ಅಂಗರಾಜ' ಎಂಬ ಹೆಸರೂ ಬಂದಿರುತ್ತದೆ. ರೋಮಪಾದನಲ್ಲಿಗೆ ದಶರಥನು ಹೋಗುತ್ತಾನೆ. ದಶರಥನು ಮಿತ್ರನಾದ ಅಂಗರಾಜನಿಗೆ ಹೇಳುತ್ತಾನೆ :

"ಧರ್ಮಾತ್ಮನೇ! ನನಗೆ ಸಂತಾನವಿಲ್ಲ. ಆದುದರಿಂದ ಪುತ್ರಪ್ರಾಪ್ತಿ ಗಾಗಿ ಯಜ್ಞಮಾಡಲು ನಿಶ್ಚಯಿಸಿರುತ್ತೇನೆ. ಶಾಂತಾದೇವಿಯ ಪತಿಯಾದ ಋಷ್ಯಶೃಂಗನು ನಾನು ಮಾಡಲಿರುವ ಯಜ್ಞದಲ್ಲಿ ಭಾಗವಹಿಸಲಿ."

ಮಿತ್ರನಾದ ದಶರಥನ ಆ ಮಾತುಗಳನ್ನು ಕೇಳಿ ಮಹಾತ್ಮನಾದ

ರೋಮಪಾದನು ಕ್ಷಣಕಾಲ ಪರ್ಯಾಲೋಚಿಸಿ, ಸಪುತ್ರಕನಾದ ಋಷ್ಯಶೃಂಗ ನನ್ನು ದಶರಥನೊಡನೆ ಕಳುಹಿಸಿಕೊಡುತ್ತಾನೆ. ಸಂತಾಪವು ಪರಿಹಾರವಾಗಿ ಸಂತುಷ್ಟನಾಗುವ ದಶರಥನು ಋಷ್ಯಶೃಂಗನನ್ನು ತನ್ನೊಡನೆ ಕರೆದುಕೊಂಡು ಅಯೋಧ್ಯೆಗೆ ತೆರಳಿ, ಸಕಲಸಂಭಾರಗಳಿಂದಲೂ ಪರಿಪೂರ್ಣವಾಗಿರುವ ಯಜ್ಞಭೂಮಿಗೆ ಕರೆದೊಯ್ಯುತ್ತಾನೆ ಮತ್ತು ಆ ಯಾಗವನ್ನು ಮಾಡುತ್ತಾನೆ. ರಾಜಾ ದಶರಥನು ಯಜ್ಞಮಾಡುವ ಇಚ್ಛೆಯಿಂದ ಋಷ್ಯಶೃಂಗನ ಮುಂದೆ ಕೈಮುಗಿದು ನಿಂತು ಯಜ್ಞದ ಆರ್ತ್ವಿಜ್ಯವನ್ನು ವಹಿಸಬೇಕೆಂದೂ ತನ್ಮೂಲಕ ಮಕ್ಕಳಾಗುವಂತೆ ಅನುಗ್ರಹಿಸಬೇಕೆಂದೂ, ಪುತ್ರಪ್ರಾಪ್ತಿಯಿಂದ ಸ್ವರ್ಗವು ಲಭಿಸುವಂತೆ ಅನುಗ್ರಹಿಸಬೇಕೆಂದೂ–ಮಹರ್ಷಿಯನ್ನು ಪ್ರಾರ್ಥಿಸುತ್ತಾನೆ. ತನ್ನ ಮನೋಭಿಲಾಷೆಗಳನ್ನು ಮಹರ್ಷಿಯ ವರಪ್ರಸಾದದಿಂದ ದಶರಥನು ಪಡೆಯುತ್ತಾನೆ. ದಶರಥನಿಗೆ ಅಮಿತಪರಾಕ್ರಮವುಳ್ಳ, ವಂಶವೃದ್ಧಿಗೆ ಕಾರಣ ಭೂತರಾದ, ಸರ್ವಲೋಕಪ್ರಸಿದ್ಧರಾದ ನಾಲ್ವರು ಮಕ್ಕಳು ಹುಟ್ಟುತ್ತಾರೆ." ಈ ರೀತಿಯಾಗಿ ದೇವಶ್ರೇಷ್ಠನಾದ, ಭಗವಂತನಾದ, ಪ್ರಭುವಾದ ಸನತ್ಕು ಮಾರನು ಕೃತಯುಗದಲ್ಲಿ ಋಷಿಪ್ರಮುಖರನ್ನು ಸಂಬೋಧಿಸಿ ಹೇಳಿದನು. ಪುರುಷಶ್ರೇಷ್ಠನೇ! ಪುತ್ರಾರ್ಥಿಯಾಗಿರುವ ನೀನು ಸ್ವಯಮೇವ ಅಂಗ ರಾಜ್ಯಕ್ಕೆ ಪರಿವಾರಸಮೇತನಾಗಿ ಹೋಗಿ, ಋಷ್ಯಶೃಂಗನನ್ನು ಕರೆದುಕೊಂಡು ಬರುವುದು ಸೂಕ್ತವಾಗಿದೆ."

ಸುಮಂತ್ರನ ಮಾತುಗಳನ್ನು ಕೇಳಿ ದಶರಥನಿಗೆ ಅಮಿತಾನಂದ ವಾಯಿತು. ಸುಮಂತ್ರನು ಹೇಳಿದುದೆಲ್ಲವನ್ನೂ ಪೂರ್ಣವಾಗಿ ಕೇಳಿ, ವಸಿಷ್ಠರ ಅನುಮತಿಯನ್ನೂ ಪಡೆದು, ಪತ್ನಿಯರೊಡನೆಯೂ, ಅಮಾತ್ಯ ರೊಡನೆಯೂ ಋಷ್ಯಶೃಂಗನಿದ್ದ ರೋಮಪಾದನ ಪಟ್ಟಣದ ಕಡೆಗೆ ಹೊರಟನು. ಅನೇಕ ಕಾಡುಗಳನ್ನೂ, ನದೀ-ನದ-ಸರೋವರಗಳನ್ನೂ ಸಾವಧಾನ ವಾಗಿ (ವನಗಳ ಸೊಬಗನ್ನು ವೀಕ್ಷಿಸುತ್ತಾ) ದಾಟಿದನಂತರ ಮುನಿಪುಂಗವ ನಿದ್ದ ಅಂಗದೇಶವನ್ನು ಪರಿವಾರದೊಡನೆ ಸೇರಿದನು. ಮೊದಲು ದಶರಥನು ರೋಮಪಾದನ ಸಮೀಪದಲ್ಲಿದ್ದ, ಅಗ್ನಿಯಂತೆ ಜಾಜ್ವಲ್ಯಮಾನನಾಗಿದ್ದ, ತೇಜಸ್ಸಿನಿಂದ ಪ್ರಕಾಶಿಸುತ್ತಿದ್ದ, ದ್ವಿಜಶ್ರೇಷ್ಠನಾದ ಋಷಿಪುತ್ರನನ್ನು ಸಂದರ್ಶಿಸಿದನು. ಅನಂತರ ರೋಮಪಾದನು ತನ್ನ ಅರಮನೆಗೆ ಆಗಮಿಸಿದ

ಪ್ರಿಯಸಖನಾದ ದಶರಥನ ಸತ್ಕಾರವನ್ನು ಯಥಾವಿಧಿಯಾಗಿ ಸಂತುಷ್ಟವಾದ ಅಂತಃಕರಣದಿಂದ ಮಾಡಿದನು. ರೋಮಪಾದನು ತನ್ನ ಸಮೀಪದಲ್ಲಿಯೇ ಇದ್ದ ಋಷ್ಯಶೃಂಗನಿಗೆ ದಶರಥನ ಪರಿಚಯವನ್ನು ಮಾಡಿಕೊಡುತ್ತಾ– "ಮಹರ್ಷೇ! ದಶರಥರಾಜನು ನನ್ನ ಮಿತ್ರನೂ ಮತ್ತು ಬಂಧುವೂ ಆಗಿರುವನು"–ಎಂದು ಹೇಳಿದನು. ತನಗೆ ದಶರಥನೂ ಮಾವನಾಗಬೇಕೆಂಬ ವಿಷಯವು ರೋಮಪಾದನಿಂದ ತಿಳಿದನಂತರ ಋಷ್ಯಶೃಂಗನು ದಶರಥನನ್ನು ಯಥಾವಿಧಿಯಾಗಿ ಸತ್ಕರಿಸಿದನು.* ಈ ರೀತಿಯಾಗಿ ರೋಮಪಾದನಿಂದ ಸುಸತ್ಕೃತನಾಗಿ, ಅವನೊಡನೆ ಆರೆಂಟು ದಿನಗಳಿದ್ದು, ಅನಂತರ ದಶರಥ ರಾಜನು ರೋಮಪಾದನಿಗೆ ಹೇಳಿದನು :

"ನಿನ್ನ ಮಗಳಾದ ಶಾಂತಾದೇವಿಯು ತನ್ನ ಗಂಡನೊಡನೆಯೂ, ಮಕ್ಕಳೊಡನೆಯೂ ನನ್ನ ಪಟ್ಟಣಕ್ಕೆ ದಯಮಾಡಿಸಲಿ. ನಾನು ನಿನಗೆ ಹಿಂದೆ ಹೇಳಿದಂತೆ ಪುತ್ರಾರ್ಥವಾಗಿ ಮಹಾಕಾರ್ಯವು ಆರಂಭವಾಗಿರುತ್ತದೆ." "ಹಾಗೆಯೇ ಆಗಲಿ. ಕಳುಹಿಸಿಕೊಡುತ್ತೇನೆ"–ಎಂದು ರೋಮಪಾದನು ಪ್ರತಿಜ್ಞಾವಚನವನ್ನು ದಶರಥನಿಗಿತ್ತು ಅಳಿಯನಾದ ಋಷ್ಯಶೃಂಗನಿಗೆ ಭಾರ್ಯಾಸಮೇತನಾಗಿ ಅಯೋಧ್ಯೆಗೆ ಹೋಗಿಬರುವಂತೆ ಹೇಳಿದನು. ಋಷ್ಯಶೃಂಗನು ಹಾಗೆಯೇ ಆಗಲೆಂದು ಉತ್ತರಿಸಿ ರಾಜನಾದ ರೋಮಪಾದನ ಅನುಜ್ಞೆಯನ್ನು ಪಡೆದು ಭಾರ್ಯಾಸಮೇತನಾಗಿ ದಶರಥನೊಡನೆ ಅಯೋಧ್ಯಾಪಟ್ಟಣಕ್ಕೆ ಹೊರಟನು. ದಶರಥನು ಅಂಗರಾಜ್ಯವನ್ನು ಬಿಟ್ಟು ಹೊರಡುವ ಸಮಯದಲ್ಲಿ ದಶರಥನೂ ಮತ್ತು ರೋಮಪಾದನೂ ಪ್ರೇಮಾಧಿಕ್ಯದಿಂದ ಗಾಢಾಲಿಂಗನವನ್ನು ಮಾಡಿಕೊಂಡರು. ಪರಸ್ಪರವಾಗಿ ಕೈಮುಗಿ

---

* ದಶರಥ-ರೋಮಪಾದರ ಸಂಬಂಧದ ವಿಷಯವಾಗಿ ಪುರಾಣಾಂತರದಲ್ಲಿ ಹೀಗೆ ಹೇಳಿದೆ : " ಅನೇನ ಮೇऽನಪತ್ಯಾಯ ದತ್ತೇಯಂ ವರವರ್ಣಿನೀ । ಯಾಚತೇ ಪುತ್ರ ತುಲ್ಯೈಷಾ ಶಾನ್ತಾ ಪ್ರಿಯತರಾತ್ಮಜಾ । ಸೋಯಂ ತೇ ಶ್ವಶುರೋ ಬ್ರಹ್ಮನ್ಯಥೈವಾಹಂ ತಥಾ ನೃಪಃ ॥ " "ನನಗೆ ಮಕ್ಕಳಿರಲಿಲ್ಲ. ನಾನು ಪುತ್ರಾರ್ಥಿಯಾಗಿ ದಶರಥನನ್ನು ಪ್ರಾರ್ಥಿಸಿದೆನು. ಈಗ ನನಗೆ ಪುತ್ರರೂಪಳೇ ಆಗಿರುವ ಶಾಂತೆಯನ್ನು ದಶರಥನು ದತ್ತಕಪುತ್ರಿಯನ್ನಾಗಿ ಕೊಟ್ಟನು. ಆದುದರಿಂದ ನಾನು ಹೇಗೆ ನಿನಗೆ ಮಾವನೋ ದಶರಥನೂ ಅದೇ ರೀತಿಯಲ್ಲಿ ಮಾವನಾಗಿರುತ್ತಾನೆ."

ದರು. ಇಬ್ಬರಿಗೂ ಅಮಿತಾನಂದವಾಯಿತು. ರೋಮಪಾದನ ಅನುಜ್ಞೆಯನ್ನು ಪಡೆದು ದಶರಥನು ರಥವೇರಿದನು. ಶೀಘ್ರಗಾಮಿಗಳಾದ ದೂತ ರನ್ನು ಕರೆದು–ತಾನು ಮಹರ್ಷಿಗಳಾದ ಋಷ್ಯಶೃಂಗರೊಡನೆ ಬರುತ್ತಿರುವು ದಾಗಿಯೂ, ನಗರಿಯನ್ನು ಕೂಡಲೇ ಪತಾಕೆಗಳಿಂದಲೂ, ತಳಿರು-ತೋರ ಣಾದಿಗಳಿಂದಲೂ ಅಲಂಕರಿಸಬೇಕೆಂದೂ, ನಗರವು ಸುಗಂಧಮಯವಾಗಿರು ವಂತೆ ಎಲ್ಲೆಡೆಗಳಲ್ಲಿಯೂ ಧೂಪವನ್ನು ಹಚ್ಚಿಡಬೇಕೆಂದೂ–ಪೌರರಿಗೆ ಹೇಳಿ ಕಳುಹಿಸಿದನು. ರಾಜನು ಕೃತಕೃತ್ಯನಾಗಿ ಬರುತ್ತಿರುವ ವೃತ್ತಾಂತವನ್ನು ತಿಳಿದ ಪೌರರೆಲ್ಲರೂ ಆನಂದತುಂದಿಲರಾಗಿ, ರಾಜನು ಹೇಳಿಕಳುಹಿಸಿದಂತೆ ನಗರವನ್ನು ಬಹಳ ಸುಂದರವಾಗಿ ಅಲಂಕರಿಸಿದರು. ಸುಂದರವಾಗಿ ಅಲಂಕರಿ ಸಲ್ಪಟ್ಟಿದ್ದ ಅಯೋಧ್ಯಾನಗರಿಯನ್ನು ದಶರಥನು ಋಷ್ಯಶೃಂಗನನ್ನು ಮುಂದುಮಾಡಿಕೊಂಡು ಪ್ರವೇಶಿಸಿದನು. ಆ ಕಾಲದಲ್ಲಿ ಶಂಖ, ದುಂದುಭಿ ಮೊದಲಾದ ವಾದ್ಯಗಳು ಮೊಳಗಿದುವು. ಇಂದ್ರನಂತೆ ಮಹಾಪರಾಕ್ರಮ ಶಾಲಿಯಾದ ದಶರಥರಾಜನಿಂದ ಪುರಸ್ಕೃತನಾಗಿ, ಅಯೋಧ್ಯಾನಗರವನ್ನು ಪ್ರವೇಶಿಸುತ್ತಿರುವ, ದ್ವಿಜಶ್ರೇಷ್ಠನಾದ ಋಷ್ಯಶೃಂಗನನ್ನು ನೋಡಿ ನಾಗರಿಕ ರೆಲ್ಲರೂ ಆನಂದಭರಿತರಾದರು. ದಶರಥರಾಜನು ಸಕಲವಿಧವಾದ ಮರ್ಯಾದೆಗಳಿಂದಲೂ ಋಷ್ಯಶೃಂಗನನ್ನು ಸತ್ಕರಿಸಿ ಅಂತಃಪುರದೊಳಕ್ಕೆ ಕರೆದುಕೊಂಡು ಹೋಗಿ ಯಥಾವಿಧಿಯಾಗಿ ಪೂಜಿಸಿದನು. ಋಷಿಪುತ್ರನ ಆಗಮನದಿಂದ ತಾನು ಕೃತಕೃತ್ಯನಾದೆನೆಂದು ಭಾವಿಸಿದನು. ಅಂತಃಪುರದಲ್ಲಿ ಸ್ತ್ರೀಯರು, ಪತಿಯೊಡನೆ ಆಗಮಿಸಿದ ವಿಶಾಲಾಕ್ಷಿಯಾದ ಶಾಂತಾದೇವಿ ಯನ್ನು ಕಂಡು ಆನಂದಭರಿತರಾದರು. ಅವರೆಲ್ಲರೂ ಶಾಂತಾದೇವಿಯನ್ನು ಗೌರವಿಸಿ ಪೂಜಿಸಿದರು. ದಶರಥರಾಜನೂ ಪುತ್ರಿಯೆಂಬ ಪ್ರೇಮಾತಿಶಯ ದಿಂದ ಶಾಂತೆಯನ್ನು ವಿಶೇಷವಾಗಿ ಗೌರವಿಸಿದನು. ಈ ರೀತಿಯಲ್ಲಿ ತನ್ನ ಪತಿಯಾದ ಋಷ್ಯಶೃಂಗನೊಡನೆ ಕೆಲಕಾಲ ಶಾಂತಾದೇವಿಯು ದಶರಥ ರಾಜನ ಅಂತಃಪುರದಲ್ಲಿ ಸುಖವಾಗಿದ್ದಳು.

೧೧ನೆಯ ಸರ್ಗವು ಮುಗಿಯಿತು.

ಬಾಲಕಾಂಡ ೧೨ನೆಯ ಸರ್ಗ

ದಶರಥನು ಋಷಿಗಳೊಡನೆ ಯಜ್ಞಮಾಡುವ ಪ್ರಸ್ತಾಪವನ್ನೆತ್ತಿದುದು : ಋಷಿಗಳು ರಾಜನಿಗೂ ರಾಜನು ಮಂತ್ರಿಗಳಿಗೂ ಯಜ್ಞದ ಸಿದ್ಧತೆಯನ್ನು ಮಾಡುವಂತೆ ನಿರ್ದೇಶಿಸಿದುದು

*** ತತಃ ಕಾಲೇ ಬಹುತಿಥೇ ಕಸ್ಮಿಂಶ್ಚಿತ್ಸುಮನೋಹರೇ ।**
ವಸನ್ತೇ ಸಮನುಪ್ರಾಪ್ತೇ ರಾಜ್ಞೋ ಯಷ್ಟುಂ ಮನೋಽಭವತ್ ॥

ಋಷ್ಯಶೃಂಗನು ಬಂದು ಹಲವಾರು ದಿನಗಳು ಕಳೆದನಂತರ ಅತಿ ಮನೋಹರವಾದ ವಸಂತಋತುವು ಆರಂಭವಾಗುತ್ತಿರಲಾಗಿ ದಶರಥರಾಜನಿಗೆ ಅಶ್ವಮೇಧಯಾಗವನ್ನು ಮಾಡಬೇಕೆಂಬ ಮನಸ್ಸುಂಟಾಯಿತು. ತನ್ನ ಕುಲಕ್ಕೆ ಸಂತಾನಪ್ರಾಪ್ತಿಯಾಗಲು ಮಾಡಲಿರುವ ಯಜ್ಞಕ್ಕೋಸ್ಕರ ದೇವತೆಯಂತೆ ಅಮಿತವಾದ ತೇಜಸ್ಸಿನಿಂದ ಕೂಡಿದ್ದ ಋಷ್ಯಶೃಂಗನಿಗೆ ಸಾಷ್ಟಾಂಗ ಪ್ರಣಾಮಮಾಡಿ, ಯಜ್ಞದ ಬ್ರಹ್ಮತ್ವಕ್ಕೆ ಅವನನ್ನು ವರಣಮಾಡಿದನು. ಋಷ್ಯಶೃಂಗನೂ ಅದಕ್ಕೆ ಒಪ್ಪಿದನು. ಯಜ್ಞಾಂಗವಾಗಿ ಬ್ರಹ್ಮನಿಗೆ ಮಾಡಬೇಕಾದ ಆಸನ-ಪಾದ್ಯ-ಅರ್ಘ್ಯಾದಿ ಪೂಜೆಗಳಿಂದ ಋಷ್ಯಶೃಂಗನು ಸತ್ಕೃತನಾಗಿ ರಾಜನಿಗೆ ಹೇಳಿದನು :

"ಯಜ್ಞಕ್ಕೆ ಬೇಕಾಗುವ ಸಾಮಗ್ರಿಗಳು ತರಲ್ಪಡಲಿ. ನಿನ್ನ ಅಶ್ವಮೇಧದ ಕುದುರೆಯು ಸಂಚಾರಕ್ಕಾಗಿ ಬಿಡಲ್ಪಡಲಿ. ಸರಯೂನದಿಯ ಉತ್ತರ ತೀರದಲ್ಲಿ ಯಜ್ಞಭೂಮಿಯ ನಿರ್ಮಾಣವಾಗಲಿ."

ಋಷ್ಯಶೃಂಗನು ಹೀಗೆ ಹೇಳಿದೊಡನೆಯೇ ದಶರಥರಾಜನು ಮಂತ್ರಿಶ್ರೇಷ್ಠನಾದ ಸುಮಂತ್ರನನ್ನು ಕರೆಯಿಸಿ ಹೇಳಿದನು :

---

* ಚೈತ್ರಾಂ ಪೌರ್ಣಮಾಸ್ಯಾಂ ಪ್ರಾತಃ ಅಶ್ವಮೇಧೇನ ಯಕ್ಷ್ಯೇ–ಇತಿ ಸಂಕಲ್ಪ್ಯ। ಸಾಂಗ್ರಹಣ್ಯೇಷ್ಟ್ಯಾ ಯಜೇತ–ಎಂದು ಶ್ರೌತಪ್ರಯೋಗವಿದೆ.

“ವೇದಾಧ್ಯಯನಸಂಪನ್ನರಾದ ಋತ್ವಿಜರನ್ನು ಒಡನೆಯೇ ಕರೆದುಕೊಂಡು ಬಾ. ಸುಯಜ್ಞ, ವಾಮದೇವ, ಜಾಬಾಲಿ, ಕಾಶ್ಯಪ, ಪುರೋಹಿತರಾದ ವಸಿಷ್ಠರು ಮತ್ತು ಕರ್ಮನಿಷ್ಠರಾದ ಇನ್ನೂ ಇತರ ದ್ವಿಜೋತ್ತಮರನ್ನೂ ಕರೆದುಕೊಂಡು ಬಾ.” ಶೀಘ್ರಗಾಮಿಯಾದ ಸುಮಂತ್ರನು ಒಡನೆಯೇ ಹೋಗಿ ವೇದ-ವೇದಾಂಗಪಾರಂಗತರಾದ ಋತ್ವಿಜರೆಲ್ಲರನ್ನೂ ರಾಜನ ಆಣತಿಯಂತೆ ಮರ್ಯಾದೆಯೊಡನೆ ಅರಮನೆಗೆ ಕರೆತಂದನು. ಧರ್ಮಾತ್ಮನಾದ ದಶರಥನು ಅವರೆಲ್ಲರನ್ನೂ ಅರ್ಘ್ಯ-ಪಾದ್ಯಾದಿಗಳಿಂದ ಪೂಜಿಸಿ ಧರ್ಮಾರ್ಥಸಾಧನೆಗೆ ಕಾರಣಭೂತವಾದ, ಮಧುರವಾದ ಈ ಮಾತನ್ನು ಹೇಳಿದನು :

“ಬ್ರಾಹ್ಮಣೋತ್ತಮರೇ! ಪುತ್ರಾರ್ಥವಾಗಿ ಅನುದಿನವೂ ಹಂಬಲಿಸುತ್ತಿರುವ ನನಗೆ ಜೀವನದಲ್ಲಿ ಸುಖವೆಂಬುದೇ ಇಲ್ಲದಾಗಿದೆ. ಪುತ್ರಪ್ರಾಪ್ತಿಗಾಗಿ ಅಶ್ವಮೇಧಯಾಗವನ್ನು ಶಾಸ್ತ್ರವಿಹಿತವಾದ ರೀತಿಯಲ್ಲಿ ಮಾಡುವ ಇಚ್ಛೆಯಿಂದಿರುತ್ತೇನೆ. ಋಷಿಪುತ್ರನಾದ ಋಷ್ಯಶೃಂಗನ ಪ್ರಭಾವದಿಂದ ಇಷ್ಟಾರ್ಥಗಳನ್ನು ಪೂರೈಸಿಕೊಳ್ಳುತ್ತೇನೆ.”

ದಶರಥನ ಮುಖಾರವಿಂದದಿಂದ ಈ ಮಾತುಗಳು ಹೊರಟೊಡನೆಯೇ ವಸಿಷ್ಠಪ್ರಮುಖರಾದ ಪುರೋಹಿತರು–“ಮಹಾರಾಜ! ನೀನು ಹೇಳುತ್ತಿರುವುದು ಸಾಧುವಾಗಿದೆ. ‘ಸಾಧು’, ‘ಸಾಧು’ ಎಂದು ಹೇಳಿ ಗೌರವಿಸಿದರು. ಬಳಿಕ ಋಷ್ಯಶೃಂಗಾದಿಗಳು ರಾಜನಿಗೆ ಅಶ್ವಮೇಧಯಾಗದ ವಿಷಯವಾಗಿ ಹೇಳಿದರು :

“ಮಹಾರಾಜ! ಒಡನೆಯೇ ಯಜ್ಞೋಪಕರಣಗಳು ತರಲ್ಪಡಲಿ. ಅಶ್ವಮೇಧಾಶ್ವವು ವಿಮೋಚಿತವಾಗಲಿ. ಸರಯೂನದಿಯ ಉತ್ತರತೀರದಲ್ಲಿ ಯಜ್ಞವೇದಿಕೆಯು ನಿರ್ಮಿಸಲ್ಪಡಲಿ. ನೀನು ನಿಶ್ಚಯವಾಗಿಯೂ ನಾಲ್ವರು ಮಹಾಪರಾಕ್ರಮಿಗಳಾದ ಪುತ್ರರನ್ನು ಪಡೆಯುವೆ. ಇದರಲ್ಲಾವ ಸಂಶಯವೂ ಇಲ್ಲ. ಪುತ್ರಾರ್ಥವಾಗಿ ನಿನಗೆ ಅಶ್ವಮೇಧಯಾಗವನ್ನು ಮಾಡಬೇಕೆಂಬ ಧರ್ಮಬುದ್ಧಿಯುಂಟಾಗಿರುವುದರಿಂದಲೇ ನಿನಗೆ ಮಕ್ಕಳಾಗಿಯೇ ತೀರುವುದೆಂಬುದನ್ನು ನಿಶ್ಚಯಿಸಬಹುದಾಗಿದೆ.”

ಬ್ರಾಹ್ಮಣರ ಆ ಮಾತುಗಳನ್ನು ಕೇಳಿ ದಶರಥನಿಗೆ ಬಹಳ ಆನಂದ ವಾಯಿತು. ಹರ್ಷಾತಿಶಯದಿಂದ ಅಮಾತ್ಯರಿಗೆ ಈ ಶುಭವಾರ್ತೆಯನ್ನು ಹೇಳಿದನು :

"ನನ್ನ ಗುರುಗಳು ಹೇಳಿದಂತೆ ಯಜ್ಞಸಾಮಗ್ರಿಗಳು ಕೂಡಲೇ ಸಿದ್ಧ ವಾಗಲಿ. ರಕ್ಷಣೆಯಲ್ಲಿ ಸಮರ್ಥರಾದ ಯೋಧರೊಡನೆಯೂ, ಉಪಾ ಧ್ಯಾಯರೊಡನೆಯೂ ಅಶ್ವಮೇಧಾಶ್ವವನ್ನು ಬಿಡಿರಿ.* ಸರಯೂನದಿಯ ಉತ್ತರತೀರದಲ್ಲಿ ಯಜ್ಞವೇದಿಕೆಯು ನಿರ್ಮಿತವಾಗಲಿ. ವಿಘ್ನನಿವಾರಕ ಗಳಾದ ಶಾಂತಿಗಳು ಕಲ್ಪೋಕ್ತಪ್ರಕಾರವಾಗಿಯೂ–ಶಾಸ್ತ್ರೋಕ್ತಪ್ರಕಾರ ವಾಗಿಯೂ ಮಾಡಲ್ಪಡಲಿ. ಪ್ರಪಂಚದಲ್ಲಿರುವ ಎಲ್ಲ ರಾಜರೂ ಈ ಯಜ್ಞ ವನ್ನು ಮಾಡಿ ಇದರ ಫಲವನ್ನು ಅನುಭವಿಸಬಹುದು. ಆದರೆ ಈ ಯಜ್ಞದಲ್ಲಿ ಸ್ವಲ್ಪವೇ ದೋಷವುಂಟಾದರೂ ಮಹತ್ತಾದ ಅನರ್ಥಕ್ಕೆ ಕಾರಣವಾಗು ತ್ತದೆ. ವಿದ್ವಾಂಸರಾದ ಬ್ರಹ್ಮರಾಕ್ಷಸರು ಈ ಯಜ್ಞದಲ್ಲುಂಟಾಗಬಹುದಾದ ನ್ಯೂನಾತಿರೇಕಗಳನ್ನು ಹುಡುಕುತ್ತಲೇ ಇರುತ್ತಾರೆ. ನ್ಯೂನಾತಿರೇಕಗಳು ಕಂಡುಬಂದೊಡನೆಯೇ ಯಜ್ಞವನ್ನು ವಿನಾಶಮಾಡುತ್ತಾರೆ. ಇದರ ಫಲವಾಗಿ ಯಜಮಾನನೂ ವಿನಾಶಹೊಂದುತ್ತಾನೆ. ಸ್ವಲ್ಪವಾದರೂ ದೋಷವುಂಟಾಗದ ರೀತಿಯಲ್ಲಿ ಯಜ್ಞವು ಪರಿಪೂರ್ಣವಾಗುವಂತೆ ನೀವು ಯತ್ನಿಸಬೇಕು. ನೀವೆಲ್ಲರೂ ಈ ವಿಷಯದಲ್ಲಿ ಹೆಚ್ಚು ಅನುಭವವುಳ್ಳವ ರಾಗಿರುವುದರಿಂದ ಹೆಚ್ಚು ಹೇಳುವ ಅವಶ್ಯಕತೆಯಿಲ್ಲ."

ಪಾರ್ಥಿವೇಂದ್ರನಾದ ದಶರಥನಿಂದ ಆಜ್ಞಪ್ತರಾದ ಮಂತ್ರಿಪ್ರಮು ಖರು–"ತಾವು ಹೇಳಿದಂತೆಯೇ ಮಾಡುತ್ತೇವೆ"–ಎಂದು ಹೇಳಿ ಸಾಂಗ್ರಹ ಣೇಷ್ಟಿಯು ಮೊದಲ್ಗೊಂಡು ಅಶ್ವವಿಮೋಚನಪರ್ಯಂತವಾಗಿ ಬೇಕಾದ ಸಂಭಾರಗಳೆಲ್ಲವನ್ನೂ ಒಡನೆಯೇ ಸಿದ್ಧಪಡಿಸಿದರು. ಆಗಮಿಸಿದ್ದ

---

* ಸನ್ನಾಹವಂತಃ ಕ್ಷಿತಿಪಾಲಪುತ್ರಾಃ ಸನ್ನದ್ಧಸೂತ್ರಾಃ ಶತಮಸ್ಯ ತಲ್ಪಾಃ ।
ಗೋಪಾಯಿತಾರಃ ಶತಮೇವಮುಗ್ರಾಃ ಸನ್ನಾಹಿನಸ್ತಾದೃಶಸೂನುಯುಕ್ತಾಃ ।
ವೈಶ್ಯಾಃ ಶತಂ ಪ್ರಾಂತಚರಾಃ ಪಥಿ ಸ್ಯುರ್ವರೂಥಿನಸ್ಸ್ಫೈಃ ಶತಮೇವ ಶೂದ್ರಾಃ ॥

ಈ ರೀತಿಯಾಗಿ ಉಪಾಧ್ಯಾಯರಲ್ಲದೆ ನೂರು ಯೋಧರೂ, ನೂರುಮಂದಿ ವೈಶ್ಯರೂ, ನೂರುಮಂದಿ ಶೂದ್ರರೂ ಮೇಧಾಶ್ವದ ಜೊತೆಯಲ್ಲಿ ಹೋಗಬೇಕು.

ಬ್ರಾಹ್ಮಣರನ್ನು ಶ್ಲಾಘಿಸಿ ಅವರ ಅನುಮತಿಯನ್ನು ಪಡೆದು ತಮ್ಮ-ತಮ್ಮ ನಿವಾಸ ಗಳಿಗೆ ತೆರಳಿದರು. ಬಳಿಕ ದಶರಥನು ತನ್ನೊಡನಿದ್ದ ಮಂತ್ರಿಗಳನ್ನೂ ಕಳುಹಿಸಿಕೊಟ್ಟು ಅಂತಃಪುರಕ್ಕೆ ತೆರಳಿದನು.

೧೨ನೆಯ ಸರ್ಗವು ಮುಗಿಯಿತು.

ಯಜ್ಞವನ್ನು ಮಾಡಿಸುವಂತೆ ದಶರಥನು ವಸಿಷ್ಠರನ್ನು ಪ್ರಾರ್ಥಿಸಿದುದು : ವಸಿಷ್ಠರು ಪರಿವಾರದವರಿಗೆ ಯಜ್ಞದ ಸಿದ್ಧತೆಗಳನ್ನು ಮಾಡುವಂತೆ ಆದೇಶವಿತ್ತುದು : ಸುಮಂತ್ರನು ಎಲ್ಲ ರಾಜರಿಗೂ ಯಜ್ಞಕ್ಕಾಗಿ ಆಹ್ವಾನವಿತ್ತುದು : ಆಗಮಿಸಿದ ರಾಜರಿಗೆ ಸತ್ಕಾರ : ಪತ್ನಿಯರೊಡನೆ ದಶರಥನ ಯಜ್ಞದೀಕ್ಷೆ

ಪುನಃ ಪ್ರಾಪ್ತೇ ವಸನ್ತೇ ತು ಪೂರ್ಣಃ ಸಂವತ್ಸರೋಽಭವತ್ ।
ಪ್ರಸವಾರ್ಥಂ ಗತೋ ಯಷ್ಟುಂ ಹಯಮೇಧೇನ ವೀರ್ಯವಾನ್ ॥

ಹಿಂದೆ ಹೇಳಿದಂತೆ ವಸಂತಋತುವು ಪ್ರಾಪ್ತವಾದೊಡನೆಯೇ ದಶರಥನು ಪೂರ್ಣಿಮೆಯ ದಿನ ಸಾಂಗ್ರಹಣೇಷ್ಟಿಯನ್ನು ಮಾಡಿ, ಅಶ್ವ ಮೇಧಯಾಗಕ್ಕೆ ಸಂಕಲ್ಪಮಾಡಿದನು. ಅನಂತರ ಬ್ರಹ್ಮೌದನ, ಮೇಧಾಶ್ವ ಬಂಧನ, ಸ್ನಾಪನ, ಪ್ರೋಕ್ಷಣ, ವಿಮೋಚನಾದಿ ಕರ್ಮಗಳು ಯಥಾಕ್ರಮ ವಾಗಿ ನಡೆದುವು. ನಾಲ್ಕು ಜನ ಋತ್ವಿಜರೊಡನೆಯೂ ನಾಲ್ಕು ನೂರು ಮಂದಿ ಯೋಧರೊಡನೆಯೂ ಮೇಧಾಶ್ವವು ದೇಶಪರ್ಯಟನಕ್ಕೆ ಹೊರಟ ನಂತರ ಪ್ರತಿನಿತ್ಯವೂ ಸಾವಿತ್ರ್ಯಾದಿ ಕರ್ಮಗಳನ್ನು ಮಾಡುತ್ತಿದ್ದರು. ಹದಿಮೂರು ಅಮಾವಾಸ್ಯೆಗಳು ಕಳೆದು ಪುನಃ ವಸಂತಋತುವಿನ ಪ್ರಾದು ರ್ಭಾವವಾಯಿತು. ಸಾಂಗ್ರಹಣೇಷ್ಟಿಯನ್ನು ಮಾಡಿ ಒಂದು ವರ್ಷವು ಪೂರ್ಣವಾಯಿತು. ವಸಂತಋತುವಿನ ಪೂರ್ಣಿಮೆಯ ದಿನ ಪುತ್ರಾರ್ಥವಾಗಿ ಅಶ್ವಮೇಧಯಾಗವನ್ನಾರಂಭಿಸಲು ದಶರಥನು ಯಥಾವಿಧಿಯಾಗಿ ದೇವ ಯಜನಕ್ಕೆ ಹೊರಟನು. ಹೊರಡುವ ಮೊದಲು ಅಧ್ವರ್ಯುಗಳಾದ ವಸಿಷ್ಠ ರಿಗೆ ಸಾಷ್ಟಾಂಗಪ್ರಣಾಮಮಾಡಿ, ಯಥಾವಿಧಿಯಾಗಿ ಸತ್ಕರಿಸಿ, ಕೈಜೋಡಿಸಿ ವಿನಯಯುಕ್ತನಾಗಿ ಹೇಳಿದನು :

"ಮುನಿವರೇಣ್ಯರೇ! ಪುತ್ರಪ್ರಾಪ್ತಿಗಾಗಿ ಆರಂಭಿಸಿರುವ ಈ ಮಹಾ ಯಜ್ಞವು ಶಾಸ್ತ್ರವಿಧಿಯನ್ನು ಸ್ವಲ್ಪವಾದರೂ ಅತಿಕ್ರಮಿಸದ ರೀತಿಯಲ್ಲಿ ಆಚರಿಸಲ್ಪಡಲಿ. ದ್ರವ್ಯ-ದೇವತಾ-ಕರ್ಮಾದಿರೂಪವಾದ ಯಜ್ಞಾಂಗಗಳಲ್ಲಿ ರಾಕ್ಷಸರಿಂದ ವಿಘ್ನವುಂಟಾಗದ ರೀತಿಯಲ್ಲಿ ಯಜ್ಞಕರ್ಮವನ್ನು ಮಾಡಿರಿ. ಮಹರ್ಷಿಗಳೇ! ತಾವು ನನಗೆ ಪರಮಸ್ನೇಹಿತರೂ ಆಗಿರುವಿರಿ. ಸರ್ವಕಾಲ ದಲ್ಲಿಯೂ ನನಗೆ ಅಜ್ಞಾನವನ್ನು ಹೋಗಲಾಡಿಸಿ, ಜ್ಞಾನಜ್ಯೋತಿಯನ್ನು ತೋರುವ ಪರಮಗುರುಗಳೂ ತಾವೇ ಆಗಿರುವಿರಿ. ಆದುದರಿಂದ ಪ್ರಾರಂಭ ವಾಗಿರುವ ಈ ಅಶ್ವಮೇಧಯಾಗದ ಪೂರ್ಣಭಾರವನ್ನೂ ತಾವೇ ವಹಿಸಿ ಕೊಳ್ಳಬೇಕೆಂದು ಪ್ರಾರ್ಥಿಸುತ್ತೇನೆ."

ದಶರಥನು ಮೇಲೆ ಹೇಳಿದ ರೀತಿಯಲ್ಲಿ ಪ್ರಾರ್ಥಿಸಲು ಪರಮ ಕಾರುಣಿಕರಾದ ವಸಿಷ್ಠರು ದಶರಥನಿಗೆ ಹೇಳಿದರು :

"ಮಹಾರಾಜ! ನಿನ್ನ ಪ್ರಾರ್ಥನೆಯಂತೆ ನೀನು ಆರಂಭಿಸಿರುವ ಯಜ್ಞನಿರ್ವಹಣೆಯ ಸಂಪೂರ್ಣಭಾರವನ್ನೂ ನಾನೇ ವಹಿಸಿಕೊಂಡು ಸ್ವಲ್ಪ ವಾದರೂ ನ್ಯೂನಾತಿರೇಕವಾಗದ ರೀತಿಯಲ್ಲಿ ನೋಡಿಕೊಳ್ಳುವೆನು."

ಅನಂತರದಲ್ಲಿ ಬ್ರಾಹ್ಮಣರನ್ನೂ, ವೃದ್ಧರನ್ನೂ, ಶ್ರೌತಪ್ರಯೋಗ ಕುಶಲರನ್ನೂ, ಯಜ್ಞದ್ರವ್ಯಾಹರಣದಲ್ಲಿ ನಿಯುಕ್ತರಾದವರನ್ನೂ, ಪರಮ ಧಾರ್ಮಿಕರಾದ ವೃದ್ಧರನ್ನೂ, ಯಜ್ಞಕರ್ಮದ ಅಂತ್ಯವಾಗುವವರೆಗೂ ಸಂದರ್ಭೋಚಿತವಾದ ಕಾರ್ಯಗಳಲ್ಲಿ ನಿಯೋಜಿತರಾಗಿದ್ದ ಸೇವಕರನ್ನೂ, ಇಷ್ಟಕಾದಿಗಳನ್ನು ಸಿದ್ಧಪಡಿಸಲು ಆಹ್ವಾನಿತರಾದ ಶಿಲ್ಪಿಗಳನ್ನೂ, ಸ್ರುಕ್ಕು-ಸ್ರುವ-ಚಮಸ-ಗ್ರಹ-ಯೂಪಾದಿಗಳನ್ನು ಮಾಡಲು ನಿಯೋಜಿತರಾದ ಬಡಗಿಗಳನ್ನೂ, ಜ್ಯೌತಿಷಿಕರನ್ನೂ, ಚಿತ್ರಪಟಗಳನ್ನು ಬರೆಯಲು ನಿಯೋಜಿತ ರಾದ ಚಿತ್ರಕಾರರನ್ನೂ, ರಸಾಭಿನಯಮಾಡುವ ನಟರನ್ನೂ, ಭಾವಾಭಿನಯ ಮಾಡುವ ನರ್ತಕರನ್ನೂ ಕುರಿತು ಹೇಳಿದರು :

"ಋತ್ವಿಜರೇ! ನೀವು ರಾಜಶಾಸನಕ್ಕೆ ಅನುಸಾರವಾಗಿ ಯಜ್ಞಕರ್ಮ ವನ್ನು ಆರಂಭಿಸಿರಿ. ಶಿಲ್ಪಿಗಳು ಸಾವಿರ ಇಟ್ಟಿಗೆಗಳನ್ನು ಸಿದ್ಧಪಡಿಸಲಿ. ಮರ ಗೆಲಸದವರು ವಿಶಾಲವಾದ, ಉನ್ನತವಾದ ಮತ್ತು ಸುಂದರವಾದ ರಾಜರ

ನಿವಾಸಕ್ಕೆ ಯೋಗ್ಯವಾದ ರಾಜಸದನಗಳನ್ನು ನಿರ್ಮಿಸಲು ಉದ್ಯುಕ್ತರಾಗಲಿ. ನೂರಾರು ಬ್ರಾಹ್ಮಣರ ವಾಸಕ್ಕೆ ಯೋಗ್ಯವಾದ ಶುಭಲಕ್ಷಣಗಳುಳ್ಳ ಮನೆಗಳನ್ನು ಕಟ್ಟಲಿ. ಆ ಮನೆಗಳು ಭಕ್ಷ್ಯ-ಭೋಜ್ಯ-ಲೇಹ್ಯ-ಚೋಷ್ಯ-ಪಾನೀಯಾದಿಗಳಿಂದ ಸಮೃದ್ಧವಾಗಿರಬೇಕು. ಉಳಿದವರೂ ತಮ-ತಮಗೆ ನಿಯೋಜಿಸಿರುವ ಕಾರ್ಯಗಳನ್ನು ಶ್ರದ್ಧಾಸಕ್ತಿಗಳಿಂದ ನಿರ್ವಹಿಸಬೇಕು. ಇದೇ ರೀತಿಯಲ್ಲಿ ಅಯೋಧ್ಯಾನಗರದ ಪ್ರಜೆಗಳಿಗೂ ಮಹಾಯಜ್ಞದ ಸಂದರ್ಶನಕ್ಕೆ ಅನುಕೂಲವಾಗುವಂತೆ ವಿಸ್ತಾರವಾದ ಮಂಟಪಗಳೂ ಸಿದ್ಧವಾಗಬೇಕು. ಬಹಳ ದೂರದಿಂದ ಆಗಮಿಸಲಿರುವ ರಾಜರಿಗೆ ಪ್ರತ್ಯೇಕ-ಪ್ರತ್ಯೇಕವಾಗಿ ಬಿಡಾರಗಳಿರಬೇಕು. ಅಶ್ವಶಾಲೆಗಳೂ, ಗಜಶಾಲೆಗಳೂ ಮತ್ತು ಶಯ್ಯಾಗೃಹಗಳೂ ಅವರಿಗೆ ಪ್ರತ್ಯೇಕವಾಗಿರಬೇಕು. ವಿದೇಶಗಳಿಂದ ಬರುವ ಸೈನಿಕರುಗಳಿಗೂ ವಾಸಮಾಡಲು ಯೋಗ್ಯವಾದ ಭವನಗಳನ್ನು ನಿರ್ಮಿಸಬೇಕು. ಈ ಮನೆಗಳೆಲ್ಲವೂ ಹಿಂದೆ ಹೇಳಿದಂತೆ ಭಕ್ಷ್ಯ-ಭೋಜ್ಯಾದಿಗಳಿಂದ ಕೂಡಿರಬೇಕು. ಆ ಮನೆಗಳಲ್ಲಿ ಶೃಂಗಾರಯೋಗ್ಯವಾದ ಚಂದನಾದಿಗಳಿರಬೇಕು. ಕಾಮೋಪಭೋಗವಸ್ತುಗಳೆಲ್ಲವೂ ಇರಬೇಕು. ವಿದೇಶಗಳಿಂದ ಯಜ್ಞಾರ್ಥವಾಗಿ ಬರಲಿರುವ ಪ್ರಜೆಗಳಿಗೂ ತಂಗಲು ಯೋಗ್ಯವಾದ ಮನೆಗಳನ್ನು ನಿರ್ಮಿಸಬೇಕು. ಬರುವ ಅತಿಥಿಗಳನ್ನು ವಿಧಿಪೂರ್ವಕವಾಗಿ ಪೂಜಿಸಿ ಉಪಚರಿಸಿ ಭೋಜನಮಾಡಿಸಬೇಕು. ಔದಾಸೀನ್ಯದಿಂದ ಯಾವ ಕಾರ್ಯವನ್ನೂ ಮಾಡಬಾರದು. ಎಲ್ಲ ವರ್ಣಗಳ ಜನರೂ ಪೂಜಿಸಲ್ಪಟ್ಟು ಸತ್ಕೃತರಾಗುವಂತೆ ವ್ಯವಸ್ಥೆ ಮಾಡಬೇಕು. ಕಾಮ-ಕ್ರೋಧಗಳ ಕಾರಣದಿಂದ ಸ್ವಲ್ಪವಾದರೂ ಅನಾದರಣೆ-ಅನಾಸ್ಥೆ ಇರಕೂಡದು. ಯಜ್ಞಕ್ಕೆ ಸಂಬಂಧಪಟ್ಟ ಕಾರ್ಯದಲ್ಲಿ ನಿಯುಕ್ತರಾಗಿರುವವರನ್ನೂ ಸ್ವಲ್ಪವೂ ವಿಸ್ಮರಣೆಯಿಲ್ಲದೆ ಕಾಲ-ಕಾಲಕ್ಕೆ ಯಥಾವಿಧಿಯಾಗಿ ಸತ್ಕರಿಸಿ ಗೌರವಿಸಬೇಕು. ಅನಾಹೂತರಾಗಿ ಬರುವ ಅತಿಥಿಗಳನ್ನೂ ದಕ್ಷಿಣೆಯಿಂದಲೂ, ಮೃಷ್ಟಾನ್ನಭೋಜನದಿಂದಲೂ ತೃಪ್ತಿಪಡಿಸಬೇಕು. ಎಲ್ಲ ಕಾರ್ಯಗಳನ್ನೂ ಸುವಿಹಿತವಾಗಿ ಯಾವುದೊಂದೂ ಲೋಪವಾಗದ ರೀತಿಯಲ್ಲಿ ಯಾರೊಬ್ಬರಿಗೂ ಅಸಮಾಧಾನವಾಗದ ರೀತಿಯಲ್ಲಿ ನೀವು ನಿರ್ವಹಣೆಮಾಡಬೇಕಾಗಿದೆ. ಈ ಕಾರ್ಯವು ಕೇವಲ ರಾಜಾಜ್ಞೆಯ ಪ್ರಭಾವದಿಂದ ಮಾತ್ರವೇ ಮಾಡತಕ್ಕದ್ದಲ್ಲ. ರಾಜನಿಗೆ

ತಮ್ಮ ಮೇಲಿನ ಪ್ರೀತಿ ಮತ್ತು ನಿಮಗೆ ರಾಜನ ಮೇಲಿರುವ ಗೌರವ–ಇವುಗಳನ್ನು ನೆನೆದು ಪ್ರೀತಿಯಿಂದಲೂ ಸ್ನೇಹದಿಂದಲೂ ಕೂಡಿದ ಮನಸ್ಸುಳ್ಳವರಾಗಿ ನೀವು ಈ ಕಾರ್ಯವನ್ನು ನಿರ್ವಹಣೆಮಾಡಬೇಕು.”

ವಸಿಷ್ಠರ ಮಾತುಗಳನ್ನು ಕೇಳಿ ಅಲ್ಲಿ ನೆರೆದಿದ್ದ ಕಾರ್ಯಪ್ರಮುಖರೆಲ್ಲರೂ ಒಮ್ಮತದಿಂದ ಹೇಳಿದರು :

“ಪೂಜ್ಯರೇ! ತಾವು ಹೇಳಿದಂತೆಯೇ ಎಲ್ಲ ಕಾರ್ಯಗಳನ್ನೂ ವಿಹಿತವಾದ ರೀತಿಯಲ್ಲಿ ಮಾಡುತ್ತೇವೆ. ಯಾವುದೇ ವಿಧವಾದ ಲೋಪ-ದೋಷಗಳೂ ಉಂಟಾಗದಂತೆ ಜಾಗರೂಕತೆಯಿಂದ ನೋಡಿಕೊಳ್ಳುತ್ತೇವೆ. ಯಾರೊಡನೆಯೂ ಪರಿಹಾಸ್ಯವನ್ನಾಗಲೀ, ವಿನೋದವನ್ನಾಗಲೀ, ಯಾವ ವಿಷಯದಲ್ಲಿಯೂ ಔದಾಸೀನ್ಯವನ್ನಾಗಲೀ ಮಾಡದೇ ತಾವು ಹೇಳಿದ ರೀತಿಯಲ್ಲಿ ನಮ್ಮ-ನಮ್ಮ ಕಾರ್ಯಗಳನ್ನು ನಿಷ್ಠೆಯಿಂದಲೂ, ಶ್ರದ್ಧೆಯಿಂದಲೂ ಮಾಡುತ್ತೇವೆ.”

ವಸಿಷ್ಠರು ಸಂತುಷ್ಟರಾಗಿ ಅವರೆಲ್ಲರನ್ನೂ ಅವರವರಿಗೆ ನೇಮಕವಾದ ಕಾರ್ಯಮಾಡಲು ಕಳುಹಿಸಿಕೊಟ್ಟನಂತರ ಅಮಾತ್ಯಶ್ರೇಷ್ಠನಾದ ಸುಮಂತ್ರನನ್ನು ಕರೆಯಿಸಿ ಹೇಳಿದರು :

“ಸುಮಂತ್ರ! ಈ ಪೃಥ್ವಿಯಲ್ಲಿರುವ ಧಾರ್ಮಿಕರಾದ ರಾಜರೆಲ್ಲರನ್ನೂ ಈ ಮಹಾಯಜ್ಞಕ್ಕೆ ಆಹ್ವಾನಿಸು. ಎಲ್ಲ ದೇಶಗಳಲ್ಲಿಯೂ ಇರುವ ಪ್ರಮುಖರಾದ ಸಾವಿರಾರು ಬ್ರಾಹ್ಮಣ-ಕ್ಷತ್ರಿಯ-ವೈಶ್ಯ-ಶೂದ್ರರನ್ನು ಸತ್ಕರಿಸಿ ಈ ಯಜ್ಞಕ್ಕೆ ಆಹ್ವಾನಿಸು. ವೇದ-ವೇದಾಂಗಪಾರಂಗತನಾದ, ಎಲ್ಲ ಶಾಸ್ತ್ರಗಳಲ್ಲಿಯೂ ನಿಷ್ಣಾತನಾದ, ಸತ್ಯವಿಕ್ರಮನಾದ, ಶೂರನಾದ, ಮಿಥಿಲಾಧಿಪತಿಯಾದ ಜನಕನನ್ನು ಈ ಯಜ್ಞಕ್ಕೆ ಆಹ್ವಾನಿಸು. ದಶರಥನ ಪೂರ್ವ ಸಂಬಂಧಿಯಾದ, ಮಹಾನುಭಾವನಾದ ಜನಕನನ್ನು ನೀನೇ ಹೋಗಿ ಸತ್ಕರಿಸಿ ಆಹ್ವಾನಿಸು. ನೀನೇ ಹೋಗಿ ಆಹ್ವಾನಿಸಬೇಕಾದ ಉಳಿದ ರಾಜರ ಹೆಸರನ್ನು ಹೇಳುವೆನು, ಕೇಳು : ಸ್ನೇಹಪರನಾದ, ಪ್ರಿಯವಾದಿಯಾದ, ದಶರಥನ ಮಿತ್ರನಾದ ಕಾಶೀರಾಜನನ್ನೂ ನೀನೇ ಹೋಗಿ ಸತ್ಕರಿಸಿ ಆಹ್ವಾನಿಸು. ವೃದ್ಧನಾಗಿಯೂ, ಪರಮಧಾರ್ಮಿಕನಾಗಿಯೂ ಇರುವ

ದಶರಥನ ಮಾವನಾದ ಕೇಕಯದೇಶದ ಅಧಿಪತಿಯನ್ನೂ ನೀನೇ ಹೋಗಿ ಪುತ್ರ ಪರಿವಾರಸಮೇತನಾಗಿ ಯಜ್ಞಕ್ಕೆ ಬರಬೇಕೆಂದು ಆಹ್ವಾನಿಸು. ದಶರಥನ ಮತ್ತೊಬ್ಬ ಸ್ನೇಹಿತನಾದ, ಯಶಸ್ವಿಯಾದ, ಮಹಾನುಭಾವನಾದ, ಅಂಗ ರಾಜ್ಯಾಧಿಪತಿಯಾದ ರೋಮಪಾದನನ್ನೂ ಸತ್ಕರಿಸಿ ಕರೆದುಕೊಂಡು ಬಾ. ಉತ್ತರಕೋಸಲಾಧಿಪತಿಯಾದ ಭಾನುಮಂತನನ್ನೂ, ಸರ್ವಶಾಸ್ತ್ರವಿಶಾರದ ನಾದ ಪರಮೋದಾರನಾದ ಪುರುಷರ್ಷಭನಾದ ಮಗಧರಾಜನನ್ನೂ ಆಹ್ವಾನಿಸು. ಮೇಲೆ ಹೇಳಿದ ಇವರೆಲ್ಲರನ್ನೂ ನೀನು ರಾಜನಿರೂಪವನ್ನು ತೆಗೆದುಕೊಂಡು ಹೋಗಿ ಯಥಾವಿಧಿಯಾಗಿ ಸತ್ಕರಿಸಿ ಆಹ್ವಾನಿಸು. ಪೂರ್ವ ದಿಕ್ಕಿನಲ್ಲಿರುವ ರಾಜರನ್ನೂ, ಸಿಂಧು-ಸೌವೀರಾಧಿಪತಿಗಳನ್ನೂ, ಸೌರಾಷ್ಟ್ರದ ರಾಜರನ್ನೂ, ದಕ್ಷಿಣದಿಕ್ಕಿನಲ್ಲಿರುವ ದೇಶಗಳ ಅಧಿಪತಿಗಳನ್ನೂ ನಿಷ್ಠಾವಂತ ರಾದ ದೂತರನ್ನು ಕಳುಹಿಸಿ ಆಹ್ವಾನಿಸು. ಇವರಲ್ಲದೇ ಭೂವಲಯದಲ್ಲಿ ರುವ, ನಮ್ಮ ರಾಜನಿಗೆ ಪ್ರಿಯರಾದ ಇತರ ರಾಜರನ್ನೂ ಪರಿವಾರಸಮೇತ ರಾಗಿ ಅಶ್ವಮೇಧಯಾಗಕ್ಕೆ ಕೂಡಲೇ ಆಗಮಿಸುವಂತೆ ಆಹ್ವಾನಿಸು."

ಸುಮಂತ್ರನು ವಸಿಷ್ಠರು ಹೇಳಿದ ಮಾತುಗಳನ್ನು ಗ್ರಹಿಸಿ– 'ತಥಾಸ್ತು' ಎಂದು ಅವರನ್ನು ಬೀಳ್ಕೊಂಡು ತನ್ನ ನಿವಾಸಕ್ಕೆ ಬಂದು ರಾಜನ ನಿರೂಪಣೆಯನ್ನು ಒಯ್ಯಲು ಸಮರ್ಥರಾದವರನ್ನು ಕೂಡಲೇ ಕರೆಯಿಸಿ, ವಸಿಷ್ಠರ ಆದೇಶದಂತೆ ಸಿಂಧು, ಸೌವೀರ, ಸೌರಾಷ್ಟ್ರ ಮುಂತಾದ ರಾಜ್ಯಗಳಿಗೆ ಆಹ್ವಾನಪತ್ರಿಕೆಗಳನ್ನು ಕೊಟ್ಟು ಕಳುಹಿಸಿದನು. ಜನಕ, ಕಾಶೀರಾಜ, ಕೇಕಯ ರಾಜರನ್ನು ಆಹ್ವಾನಿಸಲು ವಸಿಷ್ಠರ ಆದೇಶದಂತೆ ಧರ್ಮಾತ್ಮನಾದ ಸುಮಂತ್ರನೇ ರಾಜನಿರೂಪಣೆಯೊಡನೆ ಹೊರಟನು. ಯಾರು-ಯಾರು ಯಾವ-ಯಾವ ಕಾರ್ಯಕ್ಕೆ ನಿಯೋಜಿತರಾಗಿದ್ದರೋ–ಅವರು ತಮ್ಮ-ತಮ್ಮ ಕಾರ್ಯವು ಮುಗಿದೊಡನೆಯೇ ವಸಿಷ್ಠರ ಬಳಿಗೆ ಬಂದು ಕಾರ್ಯ ಸಮಾಪ್ತಿಯ ವಿಷಯವನ್ನು ನಿವೇದಿಸುತ್ತಿದ್ದರು. ಸುಪ್ರೀತರಾದ ವಸಿಷ್ಠರು ಅವರಿಗೆ ಹೇಳುತ್ತಿದ್ದರು :

"ಯಜ್ಞವು ನಡೆಯುತ್ತಿರುವ ಸಮಯದಲ್ಲಿ ಯಾರನ್ನೂ ಪರಿಹಾಸ್ಯ ಮಾಡಲಾಗದು. ವಿನೋದದಿಂದಾಗಲೀ, ಔದಾಸೀನ್ಯದಿಂದಾಗಲೀ ದಾನ

ಮಾಡಬಾರದು. ಔದಾಸೀನ್ಯದಿಂದ ದಾನಮಾಡಿದರೆ ದಾನಿಯೇ ವಿನಾಶ ಹೊಂದುತ್ತಾನೆ. ಇದರಲ್ಲಾವ ಸಂಶಯವೂ ಇಲ್ಲ. ಇದು ನಿಮ್ಮ ಮನಸ್ಸಿನಲ್ಲಿ ದೃಢವಾಗಿರಲಿ."

ಕೆಲವು ದಿನಗಳನಂತರ ಸುಮಂತ್ರನಿಂದಲೂ ರಾಜಭಟರಿಂದಲೂ ಆಹ್ವಾನಿತರಾದ ರಾಜರು ದಶರಥರಾಜನಿಗೆ ಒಪ್ಪಿಸುವ ಸಲುವಾಗಿ ಮಣಿ-ಮುಕ್ತಾ-ಪ್ರವಾಲ-ವಸ್ತ್ರಾಭರಣ-ಚಂದನಾದಿಗಳನ್ನು ತೆಗೆದುಕೊಂಡು ಅಯೋಧ್ಯಾಪಟ್ಟಣಕ್ಕೆ ಬಂದರು. ಬಂದ ರಾಜರನ್ನು ಯಥಾವಿಧಿಯಾಗಿ ಸತ್ಕರಿಸಿದನಂತರ ಸುಪ್ರೀತರಾದ ವಸಿಷ್ಠರು ದಶರಥನ ಬಳಿಗೆ ಬಂದು ಹೇಳಿದರು :

"ಮಹಾರಾಜ! ನಿನ್ನ ಶಾಸನದಂತೆ ಪೃಥ್ವಿಯ ಎಲ್ಲ ರಾಜರೂ ಬಂದಿರುವರು. ಯಥಾಯೋಗ್ಯವಾಗಿ ಅವರವರ ಘನತೆಗೆ ತಕ್ಕಂತೆ ನಾನೂ ಅವರನ್ನು ಸತ್ಕರಿಸಿರುತ್ತೇನೆ. ಸುಸಮಾಹಿತರಾದ ಪುರುಷರಿಂದ ಯಜ್ಞಕ್ಕೆ ಬೇಕಾಗುವ ಸಂಭಾರಗಳೆಲ್ಲವೂ ಸಿದ್ಧಮಾಡಲ್ಪಟ್ಟಿವೆ. ಯಜ್ಞಮಾಡುವ ಸಲುವಾಗಿ ನೀನೂ ಸರ್ವೋಪಕರಣಗಳಿಂದ ಸಜ್ಜಿತನಾಗಿ, ಅನತಿದೂರದಲ್ಲಿಯೇ ಇರುವ ಯಜ್ಞಮಂಟಪಕ್ಕೆ ಹೊರಡಲು ಸಿದ್ಧನಾಗು. ಮನಸ್ಸಿನಲ್ಲಿ ಚಿತ್ರಿಸಿದಷ್ಟು ಶೀಘ್ರವಾಗಿ ಮತ್ತು ಸುಂದರವಾಗಿ ಅತ್ಯಲ್ಪಕಾಲದಲ್ಲಿ ನಿನ್ನ ಮನಃಸಂಕಲ್ಪದಂತೆಯೇ ನಿರ್ಮಿಸಲ್ಪಟ್ಟಿರುವ ಈ ಯಜ್ಞಮಂಟಪವನ್ನೂ ಮತ್ತು ಅದರ ಸುತ್ತಲೂ ಇರುವ ರಾಜಗೃಹಗಳನ್ನೂ ಸಂದರ್ಶಿಸು."

ದಶರಥನು ವಸಿಷ್ಠರ ಮಾತಿನಂತೆ ಮತ್ತು ಬ್ರಹ್ಮಸ್ಥಾನದಲ್ಲಿ ಅಧಿಷ್ಠಿತನಾದ ಋಷ್ಯಶೃಂಗನ ಆದೇಶದಂತೆ ಶುಭನಕ್ಷತ್ರ, ಶುಭಯೋಗ, ಶುಭಕರಣ, ಶುಭತಿಥಿಗಳು ಸೇರಿದ ಶುಭದಿನದಲ್ಲಿ ಯಜ್ಞಮಂಟಪಕ್ಕೆ ಹೊರಟನು. ಯಜಮಾನಪುರಸ್ಸರರಾಗಿ ಎಲ್ಲರೂ ಯಜ್ಞಮಂಟಪವನ್ನು ಸೇರಿದನಂತರ ಋಷ್ಯಶೃಂಗನನ್ನು ಮುಂದಿಟ್ಟುಕೊಂಡು ವಸಿಷ್ಠಪ್ರಮುಖರಾದ ಬ್ರಾಹ್ಮಣರು ಆಚಾರ ಮತ್ತು ಶಾಸ್ತ್ರಗಳಿಗೆ ಅನುಗುಣವಾಗಿ ತಮಗೆ ನೇಮಕವಾಗಿದ್ದ ಕರ್ಮಗಳನ್ನು ಅನುಷ್ಠಾನಮಾಡಲು ಉಪಕ್ರಮಿಸಿದರು. ದಶರಥರಾಜನೂ

ಪತ್ನಿಯರ ಸಮೇತನಾಗಿ, ಯಜ್ಞದೀಕ್ಷಾಬದ್ಧನಾಗಿ ಯಜಮಾನನ ಸ್ಥಾನ ವನ್ನಲಂಕರಿಸಿದನು.

೧೩ನೆಯ ಸರ್ಗವು ಮುಗಿಯಿತು.

ಬಾಲಕಾಂಡ ೧೪ನೆಯ ಸರ್ಗ

ದಶರಥಮಹಾರಾಜನು ಅಶ್ವಮೇಧಯಾಗವನ್ನು ಸಾಂಗೋಪಾಂಗವಾಗಿ ನೆರವೇರಿಸಿದುದು

ಅಥ ಸಂವತ್ಸರೇ ಪೂರ್ಣೇ ತಸ್ಮಿನ್ಪ್ರಾಪ್ತೇ ತುರಂಗಮೇ ।
ಸರಯ್ವಾಶ್ಚೋತ್ತರೇ ತೀರೇ ರಾಜ್ಞೋ ಯಜ್ಞೋಽಭ್ಯವರ್ತತ ॥೧॥

ಸಾಂಗ್ರಹಣೇಷ್ಟಿಯನ್ನು ಮಾಡಿ, ಅಶ್ವವಿಮೋಚನೆಯಾದನಂತರ ಒಂದು ವರ್ಷವು ಪೂರ್ಣವಾಯಿತು. ಸರಯೂನದಿಯ ಉತ್ತರತೀರದಲ್ಲಿ ರಾಜನು ಯಜ್ಞವನ್ನು ಆರಂಭಿಸಿದನು.* ಮಹಾತ್ಮನಾದ ದಶರಥನ ಅಶ್ವ ಮೇಧಮಹಾಯಜ್ಞದಲ್ಲಿ ಋಷ್ಯಶೃಂಗನು ಪ್ರಧಾನಋತ್ವಿಜನಾಗಿದ್ದನು. ಅವನ ನಿರ್ದೇಶನದಂತೆ ಇತರ ಬ್ರಾಹ್ಮಣರು ಕರ್ಮಗಳನ್ನು ಮಾಡುತ್ತಿದ್ದರು.

---

* ಅಶ್ವಮೇಧಕ್ರಮವು ಈ ರೀತಿಯಾಗಿರುತ್ತದೆ : "ಸ್ವೇಚ್ಛೆಯಿಂದ ಹೊರಟ ಅಶ್ವಮೇಧಾಶ್ವವನ್ನನುಸರಿಸಿ ಅದರ ರಕ್ಷಣೆಗಾಗಿ ರಾಜಪುತ್ರ, ರಾಜೋಗ್ರ, ಸೂತಗ್ರಾಮಣಿ, ಕ್ಷತ್ರಸಂಗ್ರಹೀತರೆಂಬ ನಾಲ್ಕುನೂರು ಜನ ಹಿಂಬಾಲಿಸುತ್ತಾರೆ. ಯಾವ ರಾಜನಾದರೂ ಕುದುರೆಯನ್ನು ಕಟ್ಟಿಹಾಕಿದರೆ ಯುದ್ಧಮಾಡಿ ಬಿಡಿಸಿಕೊಂಡು ಬರಬೇಕಾಗುತ್ತದೆ. ಹಾಗಿಲ್ಲದಿದ್ದರೆ ಕುದುರೆಯು ಹತ್ತಾರು ದೇಶಗಳನ್ನು ತಿರುಗಿ ಹಿಂದಿರುಗಿದನಂತರ ಬ್ರಹ್ಮ, ಅಧ್ವರ್ಯು, ಹೋತಾ, ಉದ್ಗಾತಾ–ಈ ನಾಲ್ವರು ಯಜ್ಞದ ಪ್ರಮುಖ ಋತ್ವಿಜರು, ಆ ಕುದುರೆಯನ್ನು ರಥಕಾರನ ಮನೆಗೊಯ್ದು ಅಲ್ಲಿ ಕಟ್ಟಿಹಾಕಿ ಕುದುರೆಯ ನಾಲ್ಕು ಕಾಲುಗಳಿಗೂ 'ಇಹ ಧೃತಿಃಸ್ವಾಹಾ' ಮೊದಲಾದ ಮಂತ್ರಗಳಿಂದ ಹೋಮಮಾಡುತ್ತಾರೆ. ಕುದುರೆಯನ್ನು ಬಿಟ್ಟು ಹನ್ನೊಂದು ತಿಂಗಳು ಕಳೆದನಂತರ ಆ ಕುದುರೆಯನ್ನು ಯಜ್ಞದ ಸದಸ್ಯರು ಅಶ್ವತ್ಥಮರಕ್ಕೆ ಕಟ್ಟಿಹಾಕುತ್ತಾರೆ. [ಊರ್ಧ್ವಮೇಕಾದಶಾನ್ಮಾಸಾದಶ್ವತ್ಥೇ ವ್ರಜೇಶ್ವಂ ಬಧ್ನೀಯಾತ್-ಆಪಸ್ತಂಬ] ಹನ್ನೆರಡನೆಯ ತಿಂಗಳಿನಲ್ಲಿ ಯಜ್ಞಶಾಲಾ ನಿರ್ಮಾಣ, ಯಜ್ಞಸಂಭಾರಗಳ ಆಹರಣವಾದನಂತರ ಫಾಲ್ಗುಣ ಬಹುಳ ಅಮಾವಾಸ್ಯೆಯ ದಿನ ಶಾಲಾಪ್ರವೇಶ ಮಾಡಿ ಚೈತ್ರ ಶುದ್ಧ ಪ್ರಥಮೆಯ ದಿನ ಅಶ್ವಮೇಧಯಾಗವನ್ನು ಆರಂಭಿಸುತ್ತಾರೆ.

ವೇದದ ಅರ್ಥವನ್ನು ಪೂರ್ಣವಾಗಿ ತಿಳಿದಿದ್ದ ಋತ್ವಿಜರು ಯಥಾವಿಧಿಯಾಗಿ ವೈಶ್ವದೇವ-ಹೋಮಾದಿ ಕರ್ಮಗಳನ್ನು ಮಾಡುತ್ತಿದ್ದರು. ಮೀಮಾಂಸಾ ಶಾಸ್ತ್ರಾನುಸಾರವಾಗಿ ಮತು ಕಲ್ಪಸೂತ್ರಾನುಸಾರವಾಗಿ ಪರಿಕ್ರಮಿಸುತ್ತಿದ್ದರು.[1] ಬ್ರಾಹ್ಮಣರು ಪ್ರವರ್ಗ್ಯವನ್ನೂ[2] ಉಪಸದ ಎಂಬ ಯಾಗವನ್ನೂ ಶಾಸ್ತ್ರವಿಧಿಗೆ ಅನುಸಾರವಾಗಿ ಮಾಡಿ, ಶ್ರೌತಪ್ರಯೋಗದ ಪ್ರಕಾರ ಮಾಡಬೇಕಾದ ಇತರ ವಿಶೇಷಕರ್ಮಗಳನ್ನೂ ಮಾಡಿದರು. ಮುನಿಪುಂಗವರು ಬಹಿಷ್ಪವಮಾನಾದಿಗಳಿಂದ ಆಯಾಯಾ ಕರ್ಮಾಧಿದೇವತೆಗಳನ್ನು ಪೂಜಿಸಿ, ಪ್ರಾತಸ್ಸವನವೇ ಮೊದಲಾದುವುಗಳನ್ನು ಯಥಾವಿಧಿಯಾಗಿ ಮಾಡಿದರು. ಇಂದ್ರನಿಗೆ ನಿರ್ದಿಷ್ಟವಾದ ಹೋಮಗಳನ್ನು ವಿಧಿವತ್ತಾಗಿ ಮಾಡಿದರು.[3] ಪಾಪಹರನಾದ ಸೋಮರಾಜನನ್ನು ಸ್ತೋತ್ರಮಾಡಿದರು ಮತ್ತು ಸೋಮಲತೆಯನ್ನು ಅರೆದರು.[4] ಅನಂತರ ಮಾಧ್ಯಂದಿನಸವನವನ್ನೂ ಯಥಾಕ್ರಮ

---

[1] ಯಜ್ಞದೀಕ್ಷಾಬದ್ಧರಾಗಿರುವ ಋತ್ವಿಜರು ಸ್ವೇಚ್ಛೆಯಿಂದ ತಿರುಗಾಡುವಂತಿಲ್ಲ. "ಇವರು ಹೀಗೆಯೇ ಓಡಾಡಬೇಕು. ಇಲ್ಲಿಯೇ ತಿರುಗಬೇಕು. ಇಲ್ಲಿಯೇ ಕುಳಿತುಕೊಳ್ಳಬೇಕು ಮತ್ತು ಇದೇ ದಿಕ್ಕಿಗೆ ಕುಳಿತುಕೊಳ್ಳಬೇಕು"–ಎಂಬ ನಿಯಮಗಳನ್ನು ಕಲ್ಪಸೂತ್ರಗಳೂ, ವೇದಗಳೂ ಹೇಳುತ್ತವೆ. "**ನಾಸಗ್ಂಸ್ಥಿತೇ ಸೋಮೇಽಧ್ವರ್ಯುಃ ಪ್ರತ್ಯಙ್ ಸದೋತಿಯಾತ್**"–ಸೋಮಯಾಗವು ಮುಗಿಯುವುದಕ್ಕೆ ಮೊದಲು ಅಧ್ವರ್ಯುವು ಸದೋಮಂಟಪದ ಪಶ್ಚಿಮಭಾಗವನ್ನು ಮೀರಿಹೋಗಬಾರದು ಮುಂತಾದ ಈ ಸೂತ್ರಗಳಿಗೆ ಮತ್ತು ಮೀಮಾಂಸಾಶಾಸ್ತ್ರಕ್ಕೆ ಅನುಸಾರವಾಗಿ ಋತ್ವಿಜರು ನಡೆದುಕೊಳ್ಳಬೇಕು.

[2] ಪ್ರವರ್ಗ್ಯ = ಅಶ್ವಮೇಧಕ್ಕೆ ಅಂಗಭೂತವಾದ ಒಂದು ಯಾಗ.

[3] ಯಜ್ಞದಲ್ಲಿ ಇಂದ್ರನಿಗೆ ಪ್ರಿಯವಾದ ದ್ರವ್ಯಗಳು ಶ್ರುತಿಯಲ್ಲಿ ಹೀಗೆ ಹೇಳಲ್ಪಟ್ಟಿವೆ : ಧಾನಾಃ ಕರಮ್ಭಃ ಪರಿವಾಪಃ ಪುರೋಡಾಶಃ ಪಯಸ್ಯಾಃ ಇವುಗಳ ವಿನಿಯೋಗ ಹೀಗಿದೆ : **ಇನ್ದ್ರಾಯ ಹರಿವತೇ ಧಾನಾಃ । ಇನ್ದ್ರಾಯ ಪೂಷಣ್ವತೇ ಕರಮ್ಭಃ । ಸರಸ್ವತ್ಯೈ ಪರಿವಾಪಃ। ಇನ್ದ್ರಾಯ ಪುರೋಡಾಶಃ। ಮಿತ್ರಾವರುಣಾಭ್ಯಾಂ ಪಯಸ್ಯಾಃ ।**

[4] ಸೋಮರಾಜನೆಂದರೆ ಸೋಮಲತೆಯೂ ಆಗುತ್ತದೆ. ಶ್ರೌತಸೂತ್ರವು ಹೀಗೆ ಹೇಳುತ್ತದೆ: **ಸೋಮಂ ರಾಜಾನಂ ದೃಷದಿ ನಿಧಾಯ.... ದೃಷದ್ಭಿರಭಿಹನ್ಯಾತ್ ।** ಸೋಮಲತೆಯನ್ನು ಅರೆಯುವ ಕಲ್ಲಿನ ಮೇಲಿಟ್ಟು ಕಲ್ಲುಗಳಿಂದಲೇ ಅರೆಯಬೇಕು.

ವಾಗಿ ಮಾಡಿದರು. ಬ್ರಾಹ್ಮಣಶ್ರೇಷ್ಠರು ಯಥಾಶಾಸ್ತ್ರವಾಗಿ ಮಹಾತ್ಮನಾದ ರಾಜನಿಗೋಸ್ಕರ ಯಥಾಕ್ರಮವಾಗಿ ತೃತೀಯಸವನವನ್ನೂ ಮಾಡಿದರು.* ಋಷ್ಯಶೃಂಗಾದಿ ಮಹರ್ಷಿಗಳು ಶಿಕ್ಷಾಕ್ಷರಸಮನ್ವಿತವಾದ ಮಹಾಮಂತ್ರ ಗಳಿಂದ ದೇವತೆಗಳಲ್ಲಿ ಶ್ರೇಷ್ಠರಾದ ಇಂದ್ರಾದಿದೇವತೆಗಳನ್ನು ಆಹ್ವಾನಿಸಿದರು. ಹೋತೃಗಳು ಮಧುರವಾದ, ಸ್ನೇಹಯುಕ್ತವಾದ ಋಙ್ಮಂತ್ರಗಳಿಂದ ಯಥಾರ್ಹವಾಗಿ ದೇವತೆಗಳಿಗೆ ಹವಿರ್ಭಾಗಗಳನ್ನು ಅರ್ಪಿಸಿದರು. ಆ ಮಹಾ ಯಜ್ಞದಲ್ಲಿ ಆಹುತಿಕೊಡಬೇಕಾದ ಮಂತ್ರಗಳೊಂದೂ ಬಿಟ್ಟುಹೋಗಲಿಲ್ಲ. ಇಂದ್ರದೇವತಾತ್ಮಕವಾದ ಮಂತ್ರಗಳನ್ನು ಹೇಳಿ ವರುಣನನ್ನು ಕುರಿತು ಉದ್ದೇಶತ್ಯಾಗಮಾಡುತ್ತಿರಲಿಲ್ಲ. ಆಹುತಿದ್ರವ್ಯಗಳು ಪಾತ್ರೆಯ ಕೆಳಗೆ ಬಿದ್ದು ನಷ್ಟವಾಗಲಿಲ್ಲ. ಎಲ್ಲವೂ ಬ್ರಹ್ಮಮಯವಾಗಿ ಕಾಣುತ್ತಿದ್ದಿತು. ಎಲ್ಲ ಕರ್ಮ ಗಳನ್ನೂ ಮಂತ್ರಲೋಪ-ಕ್ರಿಯಾಲೋಪಗಳಿಲ್ಲದಂತೆ ನೆರವೇರಿಸಿದರು. ಯಜ್ಞವು ನಡೆಯುತ್ತಿದ್ದ ಆ ದಿನಗಳಲ್ಲಿ ಬಾಯಾರಿಕೆಯಿಂದ ಬಳಲಿದವ ನಾಗಲೀ, ಹಸಿವಿನಿಂದ ಪರಿತಪಿಸಿದವನಾಗಲೀ ಎಲ್ಲಿಯೂ ಕಾಣುತ್ತಿರಲಿಲ್ಲ. ನೂರು ಶಿಷ್ಯರಿಂದ ಕೂಡಿರದ ಆಚಾರ್ಯನಿರಲಿಲ್ಲ. ವೇದ-ವೇದಾಂಗಪಾರಂ ಗತರಾದ ಬ್ರಾಹ್ಮಣರೂ, ನೂರಾರು ಶಿಷ್ಯರೊಡನೆ ಆಚಾರ್ಯರೂ ಅಲ್ಲಿಗೆ ಬಂದಿದ್ದರು. ಸಾವಿರಾರು ಬ್ರಾಹ್ಮಣ-ಕ್ಷತ್ರಿಯ-ವೈಶ್ಯರೂ ಅಲ್ಲಿ ಊಟಮಾಡು ತ್ತಿದ್ದರು. ಸಾವಿರಾರು ಶೂದ್ರರೂ ಊಟಮಾಡುತ್ತಿದ್ದರು. ತಪಸ್ವಿಗಳೂ, ದಿಗಂಬರರೂ ಅನುದಿನವೂ ಊಟಮಾಡುತ್ತಿದ್ದರು. ಸಾವಿರಾರು ವೃದ್ಧರು, ವ್ಯಾಧಿಪೀಡಿತರು, ಸ್ತ್ರೀಯರು, ಬಾಲಕರು ಯಾವಾಗಲೂ ಭೋಜನಮಾಡು ತ್ತಿದ್ದರೂ ತೃಪ್ತಿಹೊಂದುತ್ತಿರಲಿಲ್ಲ. ಏಕೆಂದರೆ : ಭೋಜನದ ರುಚಿಯು ಮತ್ತೂ ಊಟಮಾಡಬೇಕೆಂಬ ಆಸೆಯನ್ನು ಹುಟ್ಟಿಸುವುದಾಗಿತ್ತೇ ಹೊರತು 'ಸಾಕು' ಎಂಬ ತೃಪ್ತಿಯನ್ನುಂಟುಮಾಡುವುದಾಗಿರಲಿಲ್ಲ. **'ಅನ್ನಂ ದೀಯತಾಂ'; 'ವಿವಿಧಾನಿ ವಾಸಾಂಸಿ ದೀಯತಾಂ'**–'ಹಸಿದು ಬಂದ ವರಿಗೆ ಅನ್ನಹಾಕಿರಿ ; ನೂತನವಸ್ತ್ರಗಳನ್ನು ಕೊಡಿರಿ'–ಎಂದು ಪದೇ-ಪದೇ

---

* ಮಾಧ್ಯಂದಿನಸವನ ಮತ್ತು ತೃತೀಯಸವನಗಳಲ್ಲಿ ಪಯಸ್ಯಾಹೋಮವಿಲ್ಲ. ಉಳಿದ ಹೋಮಗಳು ಪ್ರಾತಸ್ಸವನದಂತೆಯೇ ಇಂದ್ರದೇವತೆಗೆ ಅರ್ಪಿಸುವ ಆಹುತಿಗಳು.

ಮಂತ್ರಿಗಳು ಹೇಳುತ್ತಲೇ ಇದ್ದರು. ರಾಜಭಟರು ಅನವರತವಾಗಿ ಅಭ್ಯಾಗತ ರಿಗೆ ನೂತನವಸ್ತ್ರಗಳನ್ನು ಕೊಟ್ಟು ಊಟಹಾಕುತ್ತಲೇ ಇದ್ದರು. ಪಾಕಶಾಲೆ ಯಲ್ಲಿ ದಿನ-ದಿನಕ್ಕೂ ಪರ್ವತೋಪಮವಾದ ಅನ್ನರಾಶಿಗಳು ಹೆಚ್ಚುತ್ತಿದ್ದುವು. ಪಾಕಶಾಸ್ತ್ರದ ಪ್ರಕಾರ ಸಿದ್ಧವಾದ ಭಕ್ಷ್ಯ-ಭೋಜ್ಯ-ಲೇಹ್ಯ-ಚೋಷ್ಯ-ಪಾನೀಯಗಳು ಯಥೇಚ್ಛವಾಗಿದ್ದುವು. ಮಹಾಯಜ್ಞದ ದರ್ಶನಾರ್ಥವಾಗಿ ನಾನಾದೇಶಗಳಿಂದ ಆಗಮಿಸಿದ್ದ ಸಾವಿರಾರು ಸ್ತ್ರೀಯರೂ, ಪುರುಷರೂ ದಶರಥನ ಅಶ್ವಮೇಧಯಜ್ಞವು ನಡೆಯುತ್ತಿದ್ದ ದಿನಗಳಲ್ಲಿ ಸಮೃದ್ಧವಾದ ಅನ್ನ-ಪಾನಾದಿಗಳಿಂದ ತೃಪ್ತಿಹೊಂದಿದರು. ಆಗಮಿಸಿದ್ದ ಅತಿಥಿಗಳಿಗೆ ರಾಜಸೇವಕರು ಮಾಡುತ್ತಿದ್ದ ಉಪಚಾರವು ಎಷ್ಟು ಮಾಧುರ್ಯದಿಂದ ಕೂಡಿದ್ದಿತೋ ಅನ್ನ-ಪಾನೀಯಗಳೂ ಅಷ್ಟೇ ರುಚಿಕರವಾಗಿದ್ದುವು. ರಾಜಭಟರು ನಯ-ವಿನಯಾನ್ವಿತರಾಗಿ ಅತಿಥಿಗಳಿಗೆ ಉಪಚಾರವನ್ನು ಮಾಡುತ್ತಿದ್ದರು. ಪಾಕಶಾಸ್ತ್ರಾನುಸಾರವಾಗಿ ಸಿದ್ಧಪಡಿಸಿದ್ದ ಅನ್ನ-ಪಾನೀಯ-ಭಕ್ಷ್ಯ-ಭೋಜ್ಯಗಳೂ ಹೆಚ್ಚು ರುಚಿಕರವಾಗಿದ್ದುವು. ದಶರಥನ ಯಾಗದ ಸಮಯದಲ್ಲಿ ಭೋಜನಮಾಡಿ ಬ್ರಾಹ್ಮಣರು 'ಅಹೋ ತೃಪ್ತಾಃ ಸ್ಮ'– 'ತೃಪ್ತರಾಗಿದ್ದೇವೆ ;' 'ಭದ್ರಂ ತೇ ಭವತು'–'ನಿನಗೆ ಮಂಗಳ ವಾಗಲಿ'–ಎಂದು ಬಾರಿ-ಬಾರಿಗೂ ಪ್ರಶಂಸೆಮಾಡುತ್ತಿದ್ದರು. ಅವರ ಪ್ರಶಂಸೆಯನ್ನು ರಾಜನೂ ಕೇಳುತ್ತಿದ್ದನು. ಅಲಂಕೃತರಾದ, ಶುಚೀ ಭೂತರಾದ ಪರಿಚಾರಕರು ಬ್ರಾಹ್ಮಣರಿಗೆ ಬಡಿಸುತ್ತಿದ್ದರು. ಬಹು ಮೂಲ್ಯವಾದ ಮತ್ತು ರತ್ನಖಚಿತವಾದ ಕರ್ಣಕುಂಡಲಗಳನ್ನು ಧರಿಸಿದ್ದ ಕೆಲವು ಪರಿಚಾರಕರು ಊಟಮಾಡುವಾಗ ಪಕ್ಕದಲ್ಲಿ ನಿಂತು ಬೀಸಣಿಗೆ ಗಳಿಂದ ಬೀಸುತ್ತಾ ಉಪಚರಿಸುತ್ತಿದ್ದರು. ಒಂದು ಸವನವಾದನಂತರ ಮತ್ತೊಂದು ಸವನವು ಪ್ರಾರಂಭವಾಗುವವರೆಗೆ ಇರುವ ವಿರಾಮಕಾಲದಲ್ಲಿ ಧೀಮಂತರಾದ, ವಾಗ್ಮಿಗಳಾದ ಋತ್ವಿಜರು ಒಬ್ಬರು ಮತ್ತೊಬ್ಬರನ್ನು ಜಯಿಸುವ ಆಶಯದಿಂದ ವಾಕ್ಯಾರ್ಥಗಳನ್ನು ಮಾಡುತ್ತಿದ್ದರು. ಯಜ್ಞ ಕರ್ಮದಲ್ಲಿ ಕುಶಲರಾದ ಬ್ರಾಹ್ಮಣರು ಅಶ್ವಮೇಧಯಾಗಕಾಲದಲ್ಲಿ ಅನುದಿನವೂ ಹೋಮಾದಿದೈವತಕ್ರಿಯೆಗಳನ್ನು ಯಥಾಶಾಸ್ತ್ರವಾಗಿ ಮತ್ತು ವೃದ್ಧರಿಂದ ನಿರ್ದೇಶಿತರಾಗಿ ಮಾಡುತ್ತಿದ್ದರು. ರಾಜನ ಅಶ್ವಮೇಧಯಾಗದಲ್ಲಿ

ಭಾಗವಹಿಸಿದ್ದ ಋತ್ವಿಜರಲ್ಲಿ ಒಬ್ಬನಾದರೂ ಷಡಂಗಯುಕ್ತವಾದ ವೇದಾಧ್ಯಯನವನ್ನು ಮಾಡದವನಿರಲಿಲ್ಲ ; ವ್ರತ-ಕರ್ಮಾನುಷ್ಠಾನಗಳಿಲ್ಲ ದವನಿರಲಿಲ್ಲ ; ಹೆಚ್ಚು ಶಾಸ್ತ್ರಗಳನ್ನು ತಿಳಿಯದವನಿರಲಿಲ್ಲ ; ವಾದಕುಶಲ ನಲ್ಲದವನಿರಲಿಲ್ಲ. ಅಲ್ಲಿ ಭಾಗವಹಿಸಿದ್ದ ಋತ್ವಿಜರೆಲ್ಲರೂ ವೇದ-ವೇದಾಂಗ ಪಾರಂಗತರಾಗಿದ್ದರು. ವ್ರತಕರ್ಮಾನುಷ್ಠಾನವುಳ್ಳವರಾಗಿದ್ದರು. ವೇದಾ ಧ್ಯಯನದ ಜೊತೆಗೆ ಸಕಲಶಾಸ್ತ್ರಪರಿಣತರೂ ಮತ್ತು ವಾಕ್ಯಾರ್ಥಮಾಡುವುದ ರಲ್ಲಿ ಕುಶಲರೂ ಆಗಿದ್ದರು. **"ಯೂಪಾಯೋಚ್ಛ್ರಿಯಮಾಣಾಯಾನು ಬ್ರೂಹಿ"**–ಎಂಬುದಾಗಿ ಪ್ರೈಷವನ್ನು ಹೇಳಿದನಂತರ ಆರು ಬಿಲ್ವಯೂಪಗಳೂ ಅವುಗಳ ಜೊತೆಯಲ್ಲಿಯೇ ಆರು ಖಾದಿರ (ಕಗ್ಗಲಿ) ಯೂಪಗಳೂ ಸ್ಥಾಪಿತವಾದುವು. ಮತ್ತೊಂದೆಡೆಯಲ್ಲಿ ಪಲಾಶ (ಮುತ್ತುಗ) ಯೂಪಗಳೂ ಸ್ಥಾಪಿತವಾದುವು. ರಾಜ್ಜುದಾಲವೃಕ್ಷದ ಒಂದು ಯೂಪವೂ, ದೇವ ದಾರುಮರದ ಎರಡು ಯೂಪಗಳೂ ಸ್ಥಾಪಿತವಾದುವು. **ರಾಜ್ಜುದಾಲ ಮುಗ್ನಿಷ್ಟಂ ಮಿನೋತಿ । ಪೌತುದ್ರವಾಭಿತೋ ಭವತಃ**–ಎಂಬ ಶ್ರುತಿ ವಚನದಂತೆ 'ರಾಜ್ಜುದಾಲ' ಎಂದರೆ ಶ್ಲೇಷ್ಮಾತ್ರಕಯೂಪವು ಮಧ್ಯದಲ್ಲಿದ್ದಿತು. 'ಪೌತುದ್ರವಾ'ವೆಂದರೆ ಎರಡು ದೇವದಾರುಯೂಪಗಳು ಶ್ಲೇಷ್ಮಾತ್ರಕ ಯೂಪದ ಪಕ್ಕದಲ್ಲಿದ್ದುವು. ಶ್ಲೇಷ್ಮಾತ್ರಕವು ಅಗ್ನಿಸ್ಥಾನವಾದ ವೇದಿಯಲ್ಲಿದ್ದಿತು. ಶ್ಲೇಷ್ಮಾತ್ರಕದ ದಕ್ಷಿಣೋತ್ತರ ದಿಕ್ಕುಗಳಲ್ಲಿ ದೇವದಾರುಯೂಪಗಳಿದ್ದುವು. ಆ ಮೂರು ಯೂಪಗಳ ದಕ್ಷಿಣದಿಕ್ಕಿನಲ್ಲಿ ಮೂರು ಬಿಲ್ವಯೂಪಗಳೂ ಮತ್ತು ಮೂರು ಖಾದಿರಯೂಪಗಳೂ, ಉತ್ತರದಿಕ್ಕಿನಲ್ಲಿ ಮೂರು ಬಿಲ್ವಯೂಪಗಳೂ ಮತ್ತು ಮೂರು ಖಾದಿರಯೂಪಗಳೂ ಇದ್ದುವು. ಆ ಹದಿನೈದು ಯೂಪಗಳ ಉತ್ತರದಲ್ಲಿ ಮೂರು ಪಲಾಶಯೂಪಗಳೂ, ದಕ್ಷಿಣದಲ್ಲಿ ಮೂರು ಪಲಾಶಯೂಪಗಳೂ ಇದ್ದುವು. ಈ ರೀತಿಯಾಗಿ ಇಪ್ಪತ್ತೊಂದು ಯೂಪಗಳನ್ನು ಸ್ಥಾಪಿಸಿದ್ದರು. ಯೂಪಗಳು ಎರಡು ತೋಳುಗಳನ್ನೂ ನೀಡಿದರೆ ಸ್ಪರ್ಶವಾಗುವ ಒಂದು ಮಾರು ಅಂತರದಲ್ಲಿ ದ್ದುವು. ಆ ಯೂಪಗಳು ಶಾಸ್ತ್ರಜ್ಞರಾದ, ಯಜ್ಞಪ್ರಕ್ರಿಯೆಗಳನ್ನು ಪೂರ್ಣವಾಗಿ ತಿಳಿದವರಿಂದ ಮಾಡಲ್ಪಟ್ಟಿದ್ದುವು. ಯಜ್ಞಭೂಮಿಯ ಶೋಭಾರ್ಥವಾಗಿ ಯೂಪಗಳು ಸ್ವರ್ಣಮಯವಾದ ಪೀತಾಂಬರಗಳಿಂದ ಅಲಂಕೃತವಾಗಿದ್ದುವು.

ಹಿಂದೆ ಹೇಳಿದಂತೆ ಇಪ್ಪತ್ತೊಂದು ಯೂಪಗಳನ್ನು ಸ್ಥಾಪಿಸಲಾಗಿತ್ತು.[1] ಪ್ರತಿಯೊಂದು ಯೂಪವೂ–'ಏಕವಿಗ್‌ಂಶತಿರರತ್ನಿರಶ್ವಮೇಧಸ್ಯ''–ಎಂಬ ಶ್ರುತ್ಯನುಸಾರವಾಗಿ ಇಪ್ಪತ್ತೊಂದು ಅರತ್ನಿಪರಿಮಿತವಾಗಿದ್ದುವು.[2] ಇಪ್ಪತ್ತೊಂದು ಯೂಪಗಳೂ ಇಪ್ಪತ್ತೊಂದು ದಿವ್ಯಾಂಬರಗಳಿಂದ ಅಲಂಕರಿಸಲ್ಪಟ್ಟಿದ್ದುವು. ಯೂಪಗಳು ಯಥಾಶಾಸ್ತ್ರವಾಗಿ ಸ್ವಲ್ಪವಾದರೂ ನ್ಯೂನಾತಿರೇಕಗಳಿಲ್ಲದಂತೆ, ಭಿನ್ನತೆಯಿಲ್ಲದಂತೆ ಶುಲ್ಬಶಾಸ್ತ್ರವಿಶಾರದರಿಂದ ಚೆನ್ನಾಗಿ ಮಾಡಲ್ಪಟ್ಟಿದ್ದುವು. ಎಲ್ಲವೂ ಗಟ್ಟಿಯಾಗಿದ್ದುವು. ಅಷ್ಟಕೋಣಗಳಿಂದ ಯುಕ್ತವಾಗಿದ್ದುವು. ಎಲ್ಲ ಯೂಪಗಳೂ ಅಲಂಕೃತವಾಗಿದ್ದು ನೋಡಲು ಮನೋಹರವಾಗಿ ಕಾಣುತ್ತಿದ್ದುವು. ದಿವ್ಯಾಂಬರಗಳಿಂದ ಆಚ್ಛಾದಿತವಾಗಿದ್ದ ಯೂಪಗಳು ಪುಷ್ಪಮಾಲೆಗಳಿಂದಲೂ, ಚಂದನಾದಿಗಳಿಂದಲೂ ಅಲಂಕರಿಸಲ್ಪಟ್ಟು–ದೀಪ್ತಿಮಂತರಾದ ಸಪ್ತರ್ಷಿಗಳು ಆಕಾಶದಲ್ಲಿ ದಿವ್ಯತೇಜಸ್ಸಿನಿಂದ ಪ್ರಕಾಶಿಸುವಂತೆ ಪ್ರಕಾಶಿಸಿದುವು. ಯಜ್ಞಾಂಗಚಯನಕರ್ಮದಲ್ಲಿ ಕುಶಲರಾದ ಬ್ರಾಹ್ಮಣರಿಂದ ಯಥಾಶಾಸ್ತ್ರವಾಗಿ, ವೇದೋಕ್ತಪ್ರಮಾಣದಂತೆ ಇಟ್ಟಿಗೆಗಳೂ ಮಾಡಲ್ಪಟ್ಟುವು. ಆ ಇಟ್ಟಿಗೆಗಳಿಂದ ಅಗ್ನ್ಯಾಧಾರವೇದಿಯು ನಿರ್ಮಾಣವಾಯಿತು. ರಾಜಸಿಂಹನಾದ ದಶರಥನ ಆ ಯಜ್ಞವೇದಿಯು ಕುಶಲರಾದ ಬ್ರಾಹ್ಮಣರಿಂದ ನಿರ್ಮಿತವಾಯಿತು. ಆ ವೇದಿಯು ಸುವರ್ಣ ಪಕ್ಷಗಳುಳ್ಳ ಗರುಡಪಕ್ಷಿಯ ಆಕಾರವುಳ್ಳದ್ದಾಗಿ, ತ್ರಿಗುಣಪ್ರಸ್ತಾರವುಳ್ಳ (ಎಂದರೆ ಪ್ರಕೃತಿಯಾದ ಅಗ್ನಿಷ್ಟೋಮದಲ್ಲಿರುವ ಆರು ಪ್ರಸ್ತಾರಗಳಿಗೆ ಮೂರರಷ್ಟು ಪ್ರಸ್ತಾರವುಳ್ಳ) ಅಷ್ಟಾದಶಪ್ರಸ್ತಾರಾತ್ಮಕವಾಗಿಯೂ ಇದ್ದಿತು. ಯಥಾಶಾಸ್ತ್ರವಾಗಿ–' ಇಂದ್ರಾಯ ರಾಜ್ಞೇ ಸೂಕರಃ '–ಮೊದಲಾದ ಶ್ರುತ್ಯುಕ್ತಿಯಂತೆ ಆಯಾ ದೇವತೆಯನ್ನು ಉದ್ದೇಶಿಸಿ ಪಶುಗಳೂ, ಸರ್ಪಗಳೂ, ಪಕ್ಷಿಗಳೂ ಯೂಪದಲ್ಲಿ ಬಂಧಿತವಾದುವು. ಮೇಲೆ ಹೇಳಿದ ಪ್ರಾಣಿಗಳಲ್ಲದೇ ಕುದುರೆ, ಜಲಚರಗಳಾದ ಆಮೆ ಮುಂತಾದುವುಗಳು ಕೂಡ ಋತ್ವಿಜರಿಂದ ಯಥಾಶಾಸ್ತ್ರವಾಗಿ ವಿಶಸನಕರ್ಮಕ್ಕೆ ಸಿದ್ಧಮಾಡಲ್ಪಟ್ಟುವು.

---

[1] ಪ್ರಧಾನಯೂಪ ರಾಜ್ಜುದಾಲ ಒಂದು, ದೇವದಾರು ಎರಡು, ಬಿಲ್ವ ಆರು, ಖಾದಿರ ಆರು, ಪಾಲಾಶ ಆರು ಒಟ್ಟು ಇಪ್ಪತ್ತೊಂದು.

[2] ೨೪ ಅಂಗುಲ = ೧ ಅರತ್ನಿ " ಚತುರ್ವಿಂಶತ್ಯಂಗುಲಯೋಟರತ್ನಿಃ "

ದೇವತೆಗಳನ್ನುದ್ದೇಶಿಸಿ ಸುಮಾರು ಮುನ್ನೂರು ಪಶುಗಳು[1] ಯಜ್ಞಯೂಪಗಳಿಗೆ ಕಟ್ಟಲ್ಪಟ್ಟುವು. ದಶರಥರಾಜನ ಶ್ರೇಷ್ಠಕುದುರೆಯಾದ ಅಶ್ವಮೇಧಾ ಶ್ವವೂ ಪ್ರಧಾನಯೂಪಕ್ಕೆ ಕಟ್ಟಲ್ಪಟ್ಟಿತು. ದಶರಥನ ಪಟ್ಟಮಹಿಷಿಯಾದ ಕೌಸಲ್ಯಾದೇವಿಯು ಸಂತೋಷಭರಿತಳಾಗಿ ವಿಶಸನಮಾಡಲ್ಪಟ್ಟ ಅಶ್ವಮೇಧಾಶ್ವವನ್ನು ಯಥಾಶಾಸ್ತ್ರವಾಗಿ ಸುತ್ತಿಬಂದು ಕುದುರೆಯ ಎದೆಯ ಮೇಲೆ ಮೂರು ಸೂಜಿಗಳಿಂದ ಛೇದನಮಾರ್ಗವನ್ನು ಗುರುತುಮಾಡಿದಳು.[2] ಧರ್ಮಕಾಮನೆಯಿಂದಲೂ, ಸ್ಥಿರಮನಸ್ಸಿನಿಂದಲೂ ಕೂಡಿದ್ದ ಕೌಸಲ್ಯೆಯು ಹನನಮಾಡಲ್ಪಟ್ಟ ಕುದುರೆಯ ಜೊತೆಯಲ್ಲಿ ಒಂದು ರಾತ್ರಿಯನ್ನು ಕಳೆ ದಳು. ಅಶ್ವಮೇಧಯಾಗದ ದಕ್ಷಿಣೆಯೂ ಅನ್ಯಾದೃಶವಾದುದು. (ಶ್ರೌತ ಸೂತ್ರದ ಪ್ರಕಾರ) **"ಮಹಿಷೀಂ ಬ್ರಹ್ಮಣೇ ದದಾತಿ ವಾವಾತಾಂ ಹೋತ್ರೇ ಪರಿವೃತ್ತಿಮುದ್ಗಾತ್ರೇ ಪಾಲಾಕಲೀಮಧ್ವರ್ಯವೇ"**–ಕ್ಷತ್ರಿಯನಿಗಿರುವ ಪಟ್ಟಮಹಿಷೀ, ವಾವಾತಾ, ಪರಿವೃತ್ತಿ, ಪಾಲಾಕಲೀ, ಎಂಬ ನಾಲ್ವರು ಪತ್ನಿಯರನ್ನು ಅನುಕ್ರಮವಾಗಿ ಪಟ್ಟಮಹಿಷಿಯನ್ನು ಬ್ರಹ್ಮನಿಗೂ, ವಾವಾತೆಯನ್ನು ಹೋತೃವಿಗೂ, ಪರಿವೃತ್ತಿಯನ್ನು ಉದ್ಗಾತೃವಿಗೂ, ಪಾರಾವೃತ್ತಿಯನ್ನು ಅಧ್ವರ್ಯುವಿಗೂ ದಾನಮಾಡಬೇಕು. ಅಶ್ವಮೇಧದಲ್ಲಿ ರಾಜನು ಕೊಟ್ಟ ಆ ಮಹಾದಕ್ಷಿಣೆಯನ್ನು ಬ್ರಹ್ಮಾ, ಹೋತಾ, ಅಧ್ವರ್ಯು, ಉದ್ಗಾತೃಗಳು ತೆಗೆದುಕೊಂಡು ಅವರ ಪಾಣಿಗ್ರಹಣಮಾಡಿದರು.[3]

---

[1] ಮುನ್ನೂರೆಂಬುದು ಬಹುವಾಚಕವೆಂದೂ "ಅಶ್ವಮೇಧೇ ಪಶುಸಂಖ್ಯಾತು ಪಂಚಶತಮೇಕೋನವಿಂಶತಿಶ್ಚ" ಎಂಬ ಉಕ್ತಿಯಂತೆ ಐನೂರಹತ್ತೊಂಬತ್ತು ಎಂಬುದಾಗಿ ವ್ಯಾಖ್ಯಾನಕಾರರು ಹೇಳುತ್ತಾರೆ.

[2] **ಸೌವರ್ಣೀಭಿಃ ಸೂಚೀಭಿಃ ಪತ್ನಯೋಽಶ್ವಸ್ಯಾಸಿಪಥಾನ್ಕಲ್ಪಯನ್ತಿ ಪ್ರಾಕ್ಕ್ರೋದಾತ್ಪತ್ನ್ಯಃ ಭಿಃ** (ಶ್ರೌತಸೂತ್ರ)

[3] **"ಹಯೇನ ಸಮಯೋಜಯನ್"**–ಎಂಬ ಪಾಠವನ್ನು ಆಶ್ರಯಿಸಿ–"ಮಹಿಷೀ, ವಾವಾತಾ, ಪರಿವೃತ್ತಿ, ಪಾಲಾಕಲೀ–ಇವರನ್ನು ಕುದುರೆಯೊಡನೆ ಇರುವಂತೆ ಮಾಡಿದರು" ಎಂದು ಕೆಲವರು ಅರ್ಥಮಾಡುತ್ತಾರೆ. ಈ ಅರ್ಥಕ್ಕೆ ಶ್ರುತಿಸಿದ್ಧವಾದ ಪ್ರಾಮಾಣ್ಯವಿಲ್ಲದಿರುವುದರಿಂದಲೂ, ಅಶ್ವಮೇಧಯಾಗದ ರಕ್ಷಣೆಯು ಸೂತ್ರದ ಮೂಲಕ ಉಕ್ತವಾಗಿರುವುದರಿಂದಲೂ ಹಿಂದಿನ ಅರ್ಥವೇ ಸಾಧುವಾಗಿದೆ. ಪತ್ನಿಯು ದಾನಕ್ಕೆ

ಅನಂತರ ಅಶ್ವಮೇಧಾಶ್ವದ ವಪಾಸ್ಥಾನದಲ್ಲಿರುವ ತೇಜನಿಯನ್ನು ತೆಗೆದು ಕೊಂಡು ಕರ್ಮಕ್ರಿಯೆಯಲ್ಲಿಯೇ ಏಕಾಗ್ರಬುದ್ಧಿಯುಳ್ಳ, ಪ್ರಯೋಗಚತುರ ನಾದ ಅಧ್ವರ್ಯುವು ಯಥಾಶಾಸ್ತ್ರವಾಗಿ ಪಾಕಮಾಡಿ ಹೋಮಮಾಡಿದನು.* ದಶರಥರಾಜನು ಹೋಮಕಾಲದಲ್ಲಿ ಪ್ರತ್ಯಾಸನ್ನನಾಗಿ, ಯಥಾಶಾಸ್ತ್ರವಾಗಿ ತನ್ನ ಪಾಪವನ್ನು ಪೂರ್ಣವಾಗಿ ತೊಳೆದು, ವಪಾಹೋಮದಿಂದ ಉದ್ಭೂತ ವಾದ ಧೂಮವನ್ನು ಆಘ್ರಾಣಮಾಡುತ್ತಿದ್ದನು. ತೇಜನಿಯ ಹೋಮವಾದ ನಂತರ ಹದಿನಾರು ಋತ್ವಿಜರು ಅಶ್ವಮೇಧಾಶ್ವದ ಸರ್ವಾಂಗಗಳನ್ನೂ ಯಥಾ ವಿಧಿಯಾಗಿ ಮಂತ್ರಪೂರ್ವಕವಾಗಿ ಹೋಮಮಾಡುತ್ತಿದ್ದರು.[1] ಪ್ಲಕ್ಷಶಾಖಾ

ಅರ್ಹಳೇ ಮತ್ತು ಇತರರ ಪತ್ನಿಯರನ್ನು ದಾನವಾಗಿ ಮಹರ್ಷಿಗಳು ಪ್ರತಿಗ್ರಹಿಸಬಹುದೇ? ಎಂಬ ಎರಡು ಪ್ರಶ್ನೆಗಳಿಗೂ ಉತ್ತರವು ಈ ರೀತಿಯಾಗಿರುತ್ತದೆ. ನಮ್ಮ ಪ್ರಾಚೀನ ಭಾರತದಲ್ಲಿ ಪತ್ನಿಯನ್ನೂ, ಮಗನನ್ನೂ, ತನ್ನನ್ನೂ ಕೂಡ ದಾನಮಾಡುವುದು ಅನೇಕ ಕಡೆಗಳಲ್ಲಿ ಕಂಡುಬರುವುದು. ಆದರೆ ದಾನತೆಗೆದುಕೊಳ್ಳುವವರು ಅವರನ್ನು ಉಪಯೋಗಿಸಿಕೊಳ್ಳುವುದಿಲ್ಲ. ಪ್ರತ್ಯಾಮ್ನಾಯದ್ರವ್ಯವನ್ನು ಮಾತ್ರ ತೆಗೆದುಕೊಳ್ಳುತ್ತಾರೆ. ರಾಜರು ರಾಜ್ಯವನ್ನೇ ದಾನಮಾಡಿಬಿಡುತ್ತಾರೆ. ಆಗ ದಾನತೆಗೆದುಕೊಂಡವರು ರಾಜ್ಯವಾಳುವುದನ್ನು ನಾವು ಇದುವರೆಗೂ ಕೇಳಿರುವುದಿಲ್ಲ. "ತಾವು ರಾಜ್ಯವಾಳಲು ಅನರ್ಹರೆಂದೂ ಇದಕ್ಕೆ ತಕ್ಕ ಮೌಲ್ಯವನ್ನು ಕೊಡಬೇಕೆಂದೂ"–ದಶರಥರಾಜನನ್ನು ವಸಿಷ್ಠಾದಿಗಳು ಕೇಳುವ ಪ್ರಸಂಗವು ಇಲ್ಲಿಯೇ ಬರುತ್ತದೆ. ಅದೇ ರೀತಿಯಲ್ಲಿ ಶ್ರೌತಸೂತ್ರದ ಪ್ರಕಾರವಾಗಿ ದಶರಥನ ಪತ್ನಿಯರನ್ನು ಯಥಾವಿಧಿಯಾಗಿ ದಾನತೆಗೆದುಕೊಂಡರೂ ಆ ಋತ್ವಿಜರು ಪುನಃ ದಶರಥನಿಗೆ ಒಪ್ಪಿಸುವರು.

* "ನಾಶ್ವಸ್ಯ ವಪಾ ವಿದ್ಯತೇ" ಎಂಬ ಸೂತ್ರದಂತೆ ಕುದುರೆಗೆ ವಪೆಯಿರುವುದಿಲ್ಲ. ಆ ಸ್ಥಾನದಲ್ಲಿ ತೇಜನಿಯೆಂಬುದು ಮಾತ್ರವಿರುತ್ತದೆ. ಇತರ ಪ್ರಾಣಿಗಳಲ್ಲಿಯೂ ವಪೆಯೊಡನೆ ತೇಜನಿಯಿರುತ್ತದೆ. "ನಾನ್ಯೇಷಾಂ ಪಶೂನಾಂ ತೇಜನ್ಯಾ ಅವದ್ಯಂತಿ । ಅವದ್ಯಂತ್ಯಶ್ವಸ್ಯ ।" ಎಂಬ ಶ್ರುತ್ಯನುಸಾರವಾಗಿ ಕುದುರೆಯಲ್ಲದೇ ಇತರ ಪ್ರಾಣಿಗಳ ತೇಜನಿಯ ಹೋಮವು ನಿಷಿದ್ಧವೆಂದು ಹೇಳಲ್ಪಟ್ಟಿದೆ.

1 ಅಂಗಹೋಮದ ವಿಷಯವಾಗಿ ಶ್ರುತಿಯು ಹೀಗೆ ಹೇಳುತ್ತದೆ. "ಅಜ್ಗೇ ವೈ ಪುರುಷಸ್ಯ ಪಾಪ್ಮೋಪಶ್ಲಿಷ್ಟಃ । ಅಜ್ಗಾದಜ್ಗಾದೇವೈನಂ ಪಾಪ್ಮನಸ್ತೇನ ಮುಞ್ಚತಿ ॥"

ಯಾಮನ್ಯೇಷಾಂ ಪಶೂನಾಮವದ್ಯನ್ತಿ। ವೇತಸಶಾಖಾಯಾಮಶ್ವಸ್ಯ॥ ಎಂಬ ಶ್ರುತಿವಾಕ್ಯದಂತೆ ಪ್ಲಕ್ಷಶಾಖೆಯಿಂದ ನಿರ್ಮಿತವಾದ ಸ್ರುಕ್ಕಿನಲ್ಲಿ ಇತರ ಪ್ರಾಣಿಗಳ ವಪಾಹೋಮವನ್ನು ಮಾಡಿದರು. ಆದರೆ ಅಶ್ವಮೇಧಾಶ್ವದ ತೇಜನಿಯನ್ನು ವೇತಸಶಾಖೆಯಿಂದ ನಿರ್ಮಿತವಾದ ಸ್ರುಕ್ಕಿನಿಂದಲೇ ಹೋಮಮಾಡಿದರು. **ಅಶ್ವಮೇಧಸ್ಯ ತ್ರೀಣಿ ಸವನೀಯಾನ್ಯಹಾನಿ** ಎಂಬ ಕಲ್ಪಸೂತ್ರದಿಂದ ಮತ್ತು ಬ್ರಾಹ್ಮಣಗ್ರಂಥಗಳಿಂದ ಅಶ್ವಮೇಧಸಂಬಂಧಿ ಯಾದ ಸೋಮಯಾಗವು ಮೂರು ದಿನಗಳು ಮಾಡಲ್ಪಡತಕ್ಕುದೆಂದು ನಿರ್ಣಯಿಸಲ್ಪಟ್ಟಿದೆ. ಅದರಲ್ಲಿ ಮೊದಲನೆಯ ದಿನ **ತ್ರಿವೃತ್ಪಂಚದಶಃ ಸಪ್ತದಶ ಏಕವಿಗ್ಂಶಃ** ಎಂಬ ಚತುಷ್ಟೋಮಗಳಿಂದ ಯುಕ್ತವಾದ ಅಗ್ನಿ ಷ್ಟೋಮವು ಆಚರಿಸಲ್ಪಟ್ಟಿತು. ಎರಡನೆಯ ದಿನ ಉಕ್ಥ್ಯವು ಮಾಡಲ್ಪಟ್ಟಿತು. ಇಪ್ಪತ್ತೊಂದು ಪದಾರ್ಥಗಳನ್ನು ಹೇಳಿಮಾಡುವ ಈ ಕರ್ಮಕ್ಕೆ ಉಕ್ಥ್ಯವೆಂದು ಹೆಸರು. ಮೂರನೆಯ ದಿನ **ಸರ್ವಸ್ತೋಮೋಽತಿರಾತ್ರಃ** ಎಂಬ ಶ್ರುತಿಯಂತೆ ಸರ್ವಸ್ತೋಮಾತ್ಮಕವಾದ ಅತಿರಾತ್ರಯಾಗವು ಮಾಡಲ್ಪಟ್ಟಿತು. ಇವುಗಳೂ ಅಲ್ಲದೇ ಜ್ಯೋತಿಷ್ಟೋಮ, ಆಯುಸ್ಸು, ಅತಿರಾತ್ರ, ಅಭಿಜಿತ್, ವಿಶ್ವಜಿತ್, ಆಪ್ತೋರ್ಯಾಮಗಳೆಂಬ ಆರು ಮಹಾಯಾಗಗಳು ಯಥಾಶಾಸ್ತ್ರ ವಾಗಿ ಮಾಡಲ್ಪಟ್ಟುವು. ಸ್ವಕುಲದ ಕೀರ್ತಿಯನ್ನು ವೃದ್ಧಿಪಡಿಸುವುದರಲ್ಲಿ ಅಪೇಕ್ಷೆಯುಳ್ಳ ದಶರಥರಾಜನು ಪೂರ್ವದಿಕ್ಕಿನ ರಾಜ್ಯಗಳನ್ನು ಹೋತೃವಿಗೆ ದಾನವಾಗಿ ಕೊಟ್ಟನು. ಅಧ್ವರ್ಯುವಿಗೆ ಪಶ್ಚಿಮದಿಕ್ಕಿನ ರಾಜ್ಯಗಳನ್ನೂ ಬ್ರಹ್ಮನಿಗೆ ದಕ್ಷಿಣದಿಕ್ಕಿನ ರಾಜ್ಯಗಳನ್ನೂ, ಉದ್ಗಾತೃವಿಗೆ ಉತ್ತರದಿಕ್ಕಿನ ರಾಜ್ಯಗಳನ್ನೂ ಬ್ರಹ್ಮಕಲ್ಪಿತವಾದ ಅಶ್ವಮೇಧಯಾಗದಲ್ಲಿ ದಾನರೂಪವಾಗಿಕೊಟ್ಟನು.* ಇಕ್ಷ್ವಾಕುಕುಲವರ್ಧನನಾದ ದಶರಥನು ಯಜ್ಞವನ್ನು ಶಾಸ್ತ್ರವಿಹಿತವಾದ ರೀತಿಯಲ್ಲಿ ಪರಿಸಮಾಪ್ತಿಮಾಡಿ ಋತ್ವಿಜರಿಗೆ ಅತುಲೈಶ್ವರ್ಯ ಸಂಪನ್ನವಾದ ತನ್ನ ರಾಜ್ಯವನ್ನೇ ದಾನಮಾಡಿ ಆನಂದಭರಿತನಾದನು. ಗತ ಕಲ್ಮಷನಾದ ನಿಷ್ಕಲಂಕನಾದ ದಶರಥರಾಜನಿಗೆ ಋತ್ವಿಜರು ಹೇಳಿದರು :

---

* "**ಪ್ರಜಾಪತಿರಶ್ವಮೇಧಮಸೃಜತ**"–ಚತುರ್ಮುಖಬ್ರಹ್ಮನೇ ಅಶ್ವಮೇಧಯಾಗದ ಪ್ರವರ್ತಕನು.

"ಮಹಾರಾಜ! ಈ ಭೂಮಿಯನ್ನಾಳಲು ನೀನೊಬ್ಬನು ಮಾತ್ರವೇ ಸಮರ್ಥನಾಗಿರುವೆ. ಈ ಭೂಮಿಯಿಂದ ನಮಗಾವ ಪ್ರಯೋಜನವೂ ಇಲ್ಲ. ಇದನ್ನಾಳಲು ನಾವು ಸಮರ್ಥರೂ ಅಲ್ಲ. ನಾವು ಯಾವಾಗಲೂ ಅಧ್ಯಯನಾ ಧ್ಯಾಪನಗಳಲ್ಲಿ ಮಾತ್ರವೇ ನಿರತರಾಗಿರುವೆವು. ಭೂಮಿಯು ನಮಗೆ ಬೇಡ ವಾದ್ದರಿಂದ ಅದರ ಪ್ರತ್ಯಾಮ್ನಾಯವಾಗಿ ಮಣಿ-ರತ್ನ-ಸುವರ್ಣ-ಹಸುಗಳು ಮುಂತಾದ ರೂಪದಲ್ಲಿ ದಕ್ಷಿಣೆಯನ್ನು ಕೊಡುವುದು ಯುಕ್ತವಾಗಿದೆ."

ವೇದಪಾರಂಗತರಾದ ಬ್ರಾಹ್ಮಣರು ಹೀಗೆ ಹೇಳಲಾಗಿ ದಶರಥನು ಭೂಮಿಯ ಪ್ರತ್ಯಾಮ್ನಾಯವಾಗಿ ದಶಲಕ್ಷಸಂಖ್ಯಾತವಾದ ಗೋವುಗಳನ್ನು ದಾನವಾಗಿ ಕೊಟ್ಟನು. ಹತ್ತು ಕೋಟಿ ಸುವರ್ಣನಾಣ್ಯಗಳನ್ನೂ, ನಲವತ್ತು ಕೋಟಿ ಬೆಳ್ಳಿಯ ನಾಣ್ಯಗಳನ್ನೂ ಪ್ರತ್ಯಾಮ್ನಾಯವಾಗಿ ಕೊಟ್ಟನು. ದಶರಥನಿಂದ ಪಡೆದ ಆ ಅಪಾರಧನವನ್ನು ಋತ್ವಿಜರು ಸರಿಯಾಗಿ ಹಂಚಿ ಕೊಡಲು ವಸಿಷ್ಠರಿಗೂ, ಋಷ್ಯಶೃಂಗರಿಗೂ ಅರ್ಪಿಸಿದರು. ಯಾವ **ದದ್ವರ್ಯವೇ ದದಾತಿ ತದರ್ಧಂ ಪ್ರತಿಪ್ರಸ್ಥಾತ್ರೇ**–ಮೊದಲಾದ ಶಾಸ್ತ್ರ ಗಳಿಂದ ಸಿದ್ಧವಾದ ರೀತಿಯಲ್ಲಿ ಅತುಲೈಶ್ವರ್ಯವನ್ನೂ ಪರಸ್ಪರ ವಿಭಾಗ ಮಾಡಿಕೊಂಡು ಆನಂದಭರಿತರಾಗಿ–'**ಸರ್ವೇ ವಯಂ ಪ್ರೀತಾಃ ಸ್ಮಃ**–ನಾವೆ ಲ್ಲರೂ ಸುಪ್ರೀತರಾಗಿರುತ್ತೇವೆ'–ಎಂದು ದಶರಥನಿಗೆ ಹೇಳಿದರು. ಯಜ್ಞ ದರ್ಶನಾರ್ಥವಾಗಿ ಬಂದವರಿಗೂ ಸುಮನಸ್ಕನಾದ ದಶರಥನು ಹಿರಣ್ಯ ವನ್ನು ದಾನಮಾಡಿದನು. ದರ್ಶನಾರ್ಥಿಗಳಾಗಿ ಬಂದ ಬ್ರಾಹ್ಮಣರಿಗೆ ಕೋಟಿ ಸಂಖ್ಯೆಯ ಸುವರ್ಣನಾಣ್ಯಗಳನ್ನು ದಕ್ಷಿಣಾರೂಪದಲ್ಲಿ ಕೊಟ್ಟನು. ದರಿದ್ರ ನಾದ ಬ್ರಾಹ್ಮಣನೊಬ್ಬನು ಅವನ ಹಸ್ತಾಭರಣವನ್ನು ಯಾಚಿಸಲಾಗಿ ನವರತ್ನಖಚಿತವಾದ ಹಸ್ತಾಭರಣವನ್ನೇ ಅವನಿಗೆ ದಾನವಾಗಿ ಕೊಟ್ಟನು. ಅಪಾರದ್ರವ್ಯದಾನಸ್ವೀಕಾರದಿಂದ ಬ್ರಾಹ್ಮಣರು ಸಂತುಷ್ಟರಾದನಂತರ ಬ್ರಾಹ್ಮಣವತ್ಸಲನಾದ ದಶರಥನು ಹರ್ಷದಿಂದ ಅರಳಿದ ಕಣ್ಣುಗಳುಳ್ಳವ ನಾಗಿ ಅವರೆಲ್ಲರಿಗೂ ದೀರ್ಘದಂಡನಮಸ್ಕಾರಮಾಡಿದನು. ಪ್ರಣಾಮ ಮಾಡಿದ ದಶರಥನಿಗೆ ಬ್ರಾಹ್ಮಣರೆಲ್ಲರೂ–'**ಪುತ್ರವಾನ್ ಭವ**'–'**ದೀರ್ಘಾ ಯುಷ್ಮಾನ್ ಭವ**', '**ವಿಜಯೀಭವ**'–ಮುಂತಾಗಿ ಆಶೀರ್ವಾದಗಳನ್ನು ಮಾಡಿದರು. ಪುತ್ರೋತ್ಪತ್ತಿಗೆ ಪ್ರತಿಬಂಧಕವಾದ ಪಾಪವನ್ನು ನಿವಾರಣೆ

ಮಾಡಿದ, ಸದ್ಗತಿಪ್ರದವಾದ, ಇತರರಿಂದ ಮಾಡಲು ದುಸ್ಸಾಧ್ಯವಾದ, ಉತ್ತ ಮೋತ್ತಮವಾದ ಯಜ್ಞವನ್ನು ಮಾಡಿ ದಶರಥನು ಸುಪ್ರೀತನಾದನು. ದಶರಥರಾಜನಿಗೆ ಸುಮಂತ್ರನು ಹೇಳಿದುದೆಲ್ಲವೂ ಕಿವಿಯಲ್ಲಿ ಪ್ರತಿಧ್ವನಿ ಸುತ್ತಿದ್ದಿತು. ಇಷ್ಟುಮಾತ್ರದಿಂದಲೇ ಪುತ್ರೋತ್ಪತ್ತಿಯಾಗುವುದಿಲ್ಲವೆಂದೂ, ಋಷ್ಯಶೃಂಗರ ವರಪ್ರಸಾದದಿಂದಲೇ ಪುತ್ರರು ಹುಟ್ಟುವರೆಂದೂ ನಿಶ್ಚಯಿಸಿ ಋಷ್ಯಶೃಂಗರಿಗೆ ಹೇಳಿದನು : "ಮಹಾನುಭಾವರೇ! ನಮ್ಮ ಕುಲವರ್ಧಕ ವಾದ ಕರ್ಮಮಾಡಲು ನೀವು ಅರ್ಹರಾಗಿರುವಿರಿ. ಅನುಗ್ರಹಿಸಿರಿ." ಋಷ್ಯ ಶೃಂಗರೂ ಮಂದಸ್ಮಿತರಾಗಿ ದಶರಥನಿಗೆ ಹೇಳಿದರು :

"ಮಹಾರಾಜ! ನೀನು ಹೇಳಿದಂತೆಯೇ ಮಾಡುವೆನು. ನೀನು ಸ್ವಲ್ಪವಾದರೂ ಚಿಂತಿಸಬೇಡ. ಕುಲದ ಉದ್ಧಾರಕರಾದ ನಾಲ್ವರು ಪುತ್ರರು ನಿನಗೆ ಜನಿಸುವರು."

ಋಷ್ಯಶೃಂಗರು ಹೇಳಿದ ಶ್ರೋತ್ರಾನಂದಕರವಾದ ಮಾತುಗಳನ್ನು ಕೇಳಿ ದಶರಥನು ಪರಮಾನಂದಭರಿತನಾಗಿ ಬಾರಿ-ಬಾರಿಗೂ ಮಹರ್ಷಿಗಳಿಗೆ ನಮಸ್ಕರಿಸುತ್ತಾ ಕೇಳಿದನು :

"ಪುತ್ರರಾಗುವ ರೀತಿಯು ಯಾವುದು? ಯಾವಾಗ ಲಭ್ಯವಿದೆ? ಏನು ಮಾಡಬೇಕು?"

ಹೀಗೆ ಪ್ರಶ್ನೆಗಳನ್ನು ಕೇಳಿದ ದಶರಥನಿಗೆ ಮಹರ್ಷಿಗಳು ಪುನಃ ಹೇಳಿ ದರು.

೧೪ನೆಯ ಸರ್ಗವು ಮುಗಿಯಿತು.

ಬಾಲಕಾಂಡ ೧೫ನೆಯ ಸರ್ಗ

ಋಷ್ಯಶೃಂಗರು ದಶರಥನಿಂದ ಪುತ್ರಕಾಮೇಷ್ಟಿಯನ್ನು ಮಾಡಿಸಿದುದು : ದೇವತೆಗಳ ಪ್ರಾರ್ಥನೆಯಂತೆ ಬ್ರಹ್ಮನು ರಾವಣನ ವಧೋಪಾಯವನ್ನು ಹೇಳಿದುದು : ಮಹಾವಿಷ್ಣುವು ದೇವತೆಗಳಿಗೆ ಆಶ್ವಾಸನೆಯನ್ನಿತ್ತುದು

ಮೇಧಾವೀ ತು ತತೋ ಧ್ಯಾತ್ವಾ ಸ ಕಿಂಚಿದಿದಮುತ್ತರಮ್ ।
ಲಬ್ಧಸಂಜ್ಞಸ್ತತಸ್ತಂ ತು ವೇದಜ್ಞೋ ನೃಪಮಬ್ರವೀತ್ ॥೧॥

ಮಹಾಮೇಧಾವಿಗಳಾದ, ಸಕಲವೇದಗಳನ್ನೂ ಪ್ರಯೋಗ-ನಿರೂಪಣೆ ಗಳೊಡನೆ ತಿಳಿದಿರುವ ಮಹರ್ಷಿಗಳಾದ ಋಷ್ಯಶೃಂಗರು ದಶರಥರಾಜನು ಕೇಳಿದ ಪ್ರಶ್ನೆಗೆ ಉತ್ತರಹೇಳಲು ಕ್ಷಣಕಾಲ ತದೇಕಚಿತ್ತರಾಗಿ ಕುಳಿತರು. ಅಥರ್ವಣವೇದೋಕ್ತವಾದ ಪುತ್ರಕಾಮೇಷ್ಟಿಯಾಗದ ಪ್ರಕರಣವೆಲ್ಲವನ್ನೂ ಆಮೂಲಾಗ್ರವಾಗಿ ನೆನೆದರು. ಆ ಯಾಗದ ಮೂಲಕವಾಗಿಯೇ ದಶರಥ ರಾಜನಿಗೆ ಪುತ್ರಪ್ರಾಪ್ತಿಯಾಗುವುದೆಂಬುದನ್ನು ನಿಶ್ಚಯಿಸಿದವರಾಗಿ ರಾಜನಿಗೆ ಹೇಳಿದರು.*

"ಮಹಾರಾಜ! ಪುತ್ರರನ್ನು ಪಡೆಯುವ ಸಲುವಾಗಿ, ಪುತ್ರಪ್ರಾಪ್ತಿಗೆ ಕಾರಣಭೂತವಾದ ಈ ಯಾಗವನ್ನು ಮಾಡಿದರೆ ಫಲವು ಸಿದ್ಧಿಸಿಯೇ ತೀರುವುದೆಂದು ಪ್ರಸಿದ್ಧವಾಗಿರುವ–ಪುತ್ರಕಾಮೇಷ್ಟಿ–ಎಂಬ ಯಾಗವನ್ನು ಅಥರ್ವಣವೇದೋಕ್ತಮಂತ್ರಗಳಿಂದಲೂ, ಕಲ್ಪಸೂತ್ರವಿಧಾನದಿಂದಲೂ ನಿನ ಗಾಗಿ ಮಾಡುತ್ತೇನೆ." ಹೀಗೆ ಹೇಳಿ ಒಡನೆಯೇ ಋಷ್ಯಶೃಂಗರು ದಶರಥನಿಗೆ ಮಕ್ಕಳಾಗಬೇಕೆನ್ನುವ ಕಾರಣದಿಂದ ಪುತ್ರಪ್ರಾಪ್ತಿಗೆ ಕಾರಣಭೂತವಾದ ಪುತ್ರಕಾಮೇಷ್ಟಿಯನ್ನು ಪ್ರಾರಂಭಿಸಿದರು. ತೇಜಸ್ವಿಗಳಾದ ಋಷ್ಯಶೃಂಗರು ವೇದಬೋಧಿತವಾದ ವಿಧಿಯಿಂದ ಶ್ರೌತಪ್ರಯೋಗಾನುಸಾರವಾಗಿ ಅಗ್ನಿ ಯಲ್ಲಿ ಹೋಮಮಾಡಿದರು. ದೇವತೆಗಳನ್ನು ಉದ್ದೇಶಿಸಿ ಮಂತ್ರಪುನ ಶ್ಚರಣೆಮಾಡಿ ಯಜ್ಞೇಶ್ವರನಲ್ಲಿ ಹೋಮಮಾಡಿದೊಡನೆಯೇ ಆಯಾ ದೇವತೆಗಳು ಯಜ್ಞೇಶ್ವರನ ಮೂಲಕ ತಮ್ಮ-ತಮ್ಮ ಹವಿರ್ಭಾಗಗಳನ್ನು

---

* ಧ್ಯಾತ್ವಾ ಲಬ್ಧಸಂಜ್ಞಃ –ಎಂಬ ಪದಗಳಿಗೆ ಒಬ್ಬೊಬ್ಬ ವ್ಯಾಖ್ಯಾನಕಾರರು ಒಂದೊಂದು ವಿಧವಾಗಿ ಅರ್ಥಮಾಡಿರುತ್ತಾರೆ. ಒಬ್ಬರು ಧ್ಯಾತ್ವಾ ಎಂಬುದಕ್ಕೆ ಸಮಾಧಿಸ್ಥರಾದ ರೆಂದೂ, ಸಮಾಧಿಯಲ್ಲಿ ಇದೇ ವಿಧವಾದ ಉತ್ತರ ಹೇಳಬೇಕೆಂದು ನಿಶ್ಚಯಿಸಿದವರಾಗಿ ಅನಂತರದಲ್ಲಿ ಬಹಿರ್ಮುಖರಾಗಿ ರಾಜನಿಗೆ ಉತ್ತರ ಹೇಳಿದರೆಂದೂ ಹೇಳಿದ್ದಾರೆ. ಮತ್ತೊಬ್ಬರು "ಮೇಧಾವೀ ಧ್ಯಾತ್ವಾ, ಲಬ್ಧಸಂಜ್ಞಃ ಸನ್" 'ನಾಲ್ಕು ವೇದಗಳನ್ನೂ ಸ್ಮರಿಸಿ ಅವುಗಳಲ್ಲಿರುವ ಅನೇಕ ವಿಧವಾದ ಯಾಗಪ್ರಕರಣಗಳೆಲ್ಲವನ್ನೂ ಸ್ಮೃತಿಪಥಕ್ಕೆ ತೆಗೆದುಕೊಂಡು ಅಥರ್ವಣವೇದೋಕ್ತವಾದ ಪುತ್ರಕಾಮೇಷ್ಟಿಯಿಂದಲೇ ದಶರಥನಿಗೆ ಪುತ್ರಪ್ರಾಪ್ತಿಯಾಗುವುದೆಂಬುದನ್ನು ನಿಶ್ಚಯಿಸಿದವರಾಗಿ'...... ಎಂದು ವ್ಯಾಖ್ಯಾನ ಮಾಡಿರುತ್ತಾರೆ.

ಸ್ವೀಕರಿಸಲು ಬರುತ್ತಿದ್ದರು. ದೇವತೆಗಳು, ಗಂಧರ್ವರು, ಸಿದ್ಧರು, ದೇವರ್ಷಿಗಳು–ಇವರೆಲ್ಲರೂ ಮಂತ್ರಾಹೂತರಾಗಿ ಯಜ್ಞವೇದಿಕೆಯ ಬಳಿಗೆ ಬಂದರು. ಯಥಾಕ್ರಮವಾಗಿ ಆಹೂತರಾದ ದೇವತೆಗಳೆಲ್ಲರೂ ಅಲ್ಲಿಯೇ ಉಪಸ್ಥಿತನಾಗಿದ್ದ ಲೋಕದ ಸೃಷ್ಟಿಗೆ ಕಾರಣಭೂತನಾದ ಬ್ರಹ್ಮನನ್ನು ಕುರಿತು ಈ ಮಾತುಗಳನ್ನು ಹೇಳಿದರು. (ಈ ದೇವತೆಗಳು ಯಜ್ಞವೇದಿಕೆಯಲ್ಲಿದ್ದವರಿಗೆ ಅಗೋಚರರಾಗಿದ್ದರು.)

"ಬ್ರಹ್ಮದೇವ! ನಿನ್ನ ವರಪ್ರಸಾದದಿಂದ ಪ್ರಾಪ್ತವಾಗಿರುವ ಮಹಾವೀರ್ಯಾತಿಶಯದಿಂದ ಕೊಬ್ಬಿರುವ ರಾವಣನೆಂಬ ರಾಕ್ಷಸನು ನಮ್ಮೆಲ್ಲರನ್ನೂ ಪೀಡಿಸುತ್ತಿದ್ದಾನೆ. ನಿನ್ನ ವರಪ್ರಸಾದದಿಂದಾಗಿ ಅವನನ್ನು ಶಿಕ್ಷಿಸಲು ನಾವು ಸಮರ್ಥರಾಗಿಲ್ಲ. ದೇವೇಶ! ರಾವಣನ ತಪಸ್ಸಿಗೆ ಸುಪ್ರೀತನಾದ ನೀನು ಅವನಿಗೆ ಕೊಟ್ಟಿರುವ–ದೇವತೆಗಳಿಂದ ಅವಧ್ಯನೆಂಬ–ವರವನ್ನು ಮಾನ್ಯಮಾಡುವ ಸಲುವಾಗಿ ರಾವಣನಿಂದ ಸರ್ವಪೀಡೆಗಳನ್ನೂ ಸಹಿಸುತ್ತಿದ್ದೇವೆ. ಅವನು ನಮಗೆ ಕೊಡುತ್ತಿರುವ ಕಿರುಕುಳಗಳನ್ನೂ ಅನುಭವಿಸುತ್ತಿದ್ದೇವೆ. ದುರ್ಮತಿಯಾದ ಆ ರಾವಣನು ಮೂರು ಲೋಕಗಳನ್ನೂ ಭಯಪಡಿಸುತ್ತಿದ್ದಾನೆ. ಲೋಕಪಾಲಕರನ್ನೂ ಸ್ವರ್ಗಕ್ಕೆ ಒಡೆಯನಾದ ಇಂದ್ರನನ್ನೂ ಅವರವರ ಸ್ಥಾನಗಳಿಂದ ಚ್ಯುತರನ್ನಾಗಿ ಮಾಡಲು ಆಶಿಸಿದ್ದಾನೆ. ಬ್ರಹ್ಮದೇವ! ನಿನ್ನ ವರದಾನದಿಂದ ಉನ್ಮತ್ತನಾಗಿರುವ ಮತ್ತು ದುರಹಂಕಾರಿಯಾಗಿರುವ ರಾವಣನು ಋಷಿಗಳನ್ನೂ, ಯಕ್ಷ-ಗಂಧರ್ವರನ್ನೂ ಬಹುವಾಗಿ ಪೀಡಿಸುತ್ತಿದ್ದಾನೆ. ಅವನಿಂದ ಭೀತರಾದ ನಾವು ನಮ್ಮ ಸ್ವಭಾವಜನ್ಯವಾದ ಗುಣ ಗಳನ್ನೇ ಪರಿತ್ಯಜಿಸಿದ್ದೇವೆ. ರಾವಣನು ಪ್ರವಾಸಹೊರಟ ವೇಳೆಯಲ್ಲಿ ದಿನಕರನಾದ ಸೂರ್ಯನು ಅವನಿಗೆ ತಾಪವನ್ನುಂಟುಮಾಡುವುದಿಲ್ಲ. ವಾಯು ದೇವನು ಅವನ ಸಮೀಪದಲ್ಲಿ ತನ್ನ ಪ್ರತಾಪವನ್ನು ನಡೆಸಲಾರನು. ಬಹಳ ಮಂದನಾಗಿ ಚಲಿಸುತ್ತಿದ್ದು ರಾವಣನಿಗೆ ಆಹ್ಲಾದವನ್ನುಂಟುಮಾಡಬೇಕಾಗಿದೆ. ಅಲೆಗಳಿಂದ ಪೂರ್ಣನಾದ ಸಮುದ್ರರಾಜನೂ ಅವನ ಭಯದಿಂದಾಗಿ ಚಲಿಸದೇ ನಿಲ್ಲುವಂತಾಗಿದೆ. ಮಹಾನುಭಾವನೇ! ಘೋರರೂಪಿಯಾದ ಆ ರಾವಣನ ದೆಸೆಯಿಂದ ನಮ್ಮೆಲ್ಲರಿಗೂ ಬಹಳ ಭಯವುಂಟಾಗಿರುವುದು. ಆದುದರಿಂದ ಲೋಕಕಂಟಕನಾದ ರಾವಣನ ವಧೆಗೆ ಉಪಾಯವೊಂದನ್ನು ನಿರೂಪಿಸಲು ನೀನೇ ಸಮರ್ಥನಾಗಿರುವೆ."

ದೇವತೆಗಳು ಬ್ರಹ್ಮನನ್ನು ಹೀಗೆ ಪ್ರಾರ್ಥಿಸಲಾಗಿ ಚತುರ್ಮುಖನು ಕ್ಷಣಕಾಲ ಚಿಂತಿಸಿ ಹೇಳಿದನು :

"ದೇವತೆಗಳೇ! ಈ ವಿಷಯದಲ್ಲಿ ನೀವು ನಿಶ್ಚಿಂತರಾಗಿರಬಹುದು. ಅವನ ವಧೆಯ ಉಪಾಯವು ಪರಮಾತ್ಮನಿಂದಲೇ ನಿಶ್ಚಯಿಸಲ್ಪಟ್ಟಿರುವುದು. ರಾವಣನು ನನ್ನನ್ನು ಕುರಿತು ಕಠಿಣವಾದ ತಪಸ್ಸುಮಾಡಿ ನನ್ನನ್ನು ಒಲಿಸಿ ಕೊಂಡು–'ಗಂಧರ್ವ-ಯಕ್ಷ-ದೇವ-ರಾಕ್ಷಸರಿಂದ ನಾನು ಅವಧ್ಯನಾಗು ವಂತೆ ಅನುಗ್ರಹಿಸು'–ಎಂದು ಕೇಳಿಕೊಂಡನು. ನಾನು 'ಹಾಗೆಯೇ ಆಗಲಿ'–ಎಂದು ವರವನ್ನೂ ಕೊಟ್ಟುಬಿಟ್ಟೆನು. ಮಾನವರ ವಿಷಯದಲ್ಲಿ ರಾವಣ ನಿಗಿದ್ದ ಅನಾದರಣೆಯ ಕಾರಣದಿಂದಾಗಿ ಅವನು ಮಾನವರಿಂದ ಮೃತ್ಯು ವುಂಟಾಗದಿರಲೆಂಬ ವರವನ್ನು ಕೇಳಲಿಲ್ಲ. ಆದುದರಿಂದ ಅವನು ಮಾನವ ನಿಂದಲೇ ವಧ್ಯನಾಗಬೇಕಾಗಿದೆ. ಬೇರಾರೂ ಅವನನ್ನು ಸಂಹರಿಸಲು ಸಾಧ್ಯವಿಲ್ಲ."

'ಮಾನವನಿಂದ ದುಷ್ಟರಾವಣನಿಗೆ ಮರಣವಿದೆ'–ಎಂಬ ಬ್ರಹ್ಮನ ಪ್ರಿಯವಾಣಿಯನ್ನು ಕೇಳಿ ದೇವ-ಗಂಧರ್ವ-ಯಕ್ಷರೂ, ಮಹರ್ಷಿಗಳೂ ಸಂತುಷ್ಟರಾದರು. ಆ ಸಮಯಕ್ಕೆ ಸರಿಯಾಗಿ ಮಹಾದ್ಯುತಿಯಾದ, ಶಂಖ-ಚಕ್ರ-ಗದಾಪಾಣಿಯಾದ, ಜಗತ್ಪತಿಯಾದ, ಪೀತಾಂಬರಧಾರಿ ಯಾದ, ಶ್ರೀಮಹಾವಿಷ್ಣುವು ಪುಟಕ್ಕೆ ಹಾಕಿದ ಚಿನ್ನದಿಂದ ಮಾಡಿದ ಕೇಯೂರಗಳನ್ನು ಧರಿಸಿ–ಸೂರ್ಯದೇವನು ಮೋಡದ ಮೇಲೇರಿ ಬರುವಂತೆ–ಗರುಡವಾಹನನಾಗಿ ಆಗಮಿಸಿದನು. ದೇವತೆಗಳು ತಮ್ಮ ರಕ್ಷಕನಾರೆಂದು ಯೋಚಿಸುತ್ತಿದ್ದ ಕಾಲದಲ್ಲಿ ಆಗಮಿಸಿದ ಲೋಕರಕ್ಷಕನಾದ, ಪರಮಕಾರುಣಿಕನಾದ ಶ್ರೀಮಹಾವಿಷ್ಣುವನ್ನು ನಾನಾರೀತಿಯಲ್ಲಿ ಸ್ತೋತ್ರಮಾಡಿದರು. ಪ್ರಸನ್ನವದನನಾದ ಮಹಾವಿಷ್ಣುವು ದೇವತೆಗಳ ಪ್ರಾರ್ಥನೆಯನ್ನು ಲಾಲಿಸುವ ಆಶಯದಿಂದ ಬ್ರಹ್ಮನೊಡನೆ ಉಪಸ್ಥಿತ ನಾದನು. ಪರಾತ್ಪರನಾದ ಶ್ರೀಮನ್ನಾರಾಯಣನನ್ನು ನಾನಾಪ್ರಕಾರವಾಗಿ ಸ್ತೋತ್ರಮಾಡಿದ ನಂತರ ನತಶಿರರಾದ ದೇವತೆಗಳು ಹೇಳಿದರು :

"ದೇವದೇವನೇ! ಭುವನತ್ರಯಕ್ಕೂ ಹಿತವನ್ನುಂಟುಮಾಡುವ

ಆಶಯದಿಂದ, ಮೂರು ಲೋಕಗಳಿಗೂ ಹಿತವುಂಟಾಗುವ ಕಾರ್ಯಕ್ಕೆ ನಿನ್ನನ್ನು ಪ್ರೋತ್ಸಾಹಿಸುವವರಾಗಿರುತ್ತೇವೆ. ಧರ್ಮಜ್ಞನಾದ, ದಾನಶೀಲನಾದ, ಮಹರ್ಷಿಗಳ ತೇಜಸ್ಸಿಗೆ ಸಮಾನವಾದ ದಿವ್ಯತೇಜಸ್ಸಿನಿಂದ ಕೂಡಿರುವ, ಅಯೋಧ್ಯಾಪತಿಯಾದ ದಶರಥನ ಮಡದಿಯರಾದ–ದಕ್ಷಕನ್ಯೆಯರಾದ ಹ್ರೀ, ಶ್ರೀ, ಕೀರ್ತಿ ಇವರನ್ನು ಹೋಲುವ–ಕೌಸಲ್ಯಾ, ಕೈಕೇಯಿ, ಸುಮಿತ್ರೆಯ ರಲ್ಲಿ ಜನಿಸು. ವಿಭುವೇ! ನೀನು ನಿನ್ನ ಆತ್ಮವನ್ನು ನಾಲ್ಕು ಪ್ರಕಾರವಾಗಿ ವಿಂಗಡಿಸಿಕೊಂಡು ಮೂವರು ರಾಜಪತ್ನಿಯರಲ್ಲಿ ಜನ್ಮತಾಳು. ಪೂಜ್ಯನೇ! ನೀನು ದಶರಥನ ಭಾರ್ಯೆಯರಲ್ಲಿ ಮನುಷ್ಯನಾಗಿ ಅವತರಿಸಿ, ಬ್ರಹ್ಮನ ವರಪ್ರಸಾದದಿಂದ ಬಲಿಷ್ಠನಾಗಿರುವ ಮತ್ತು ಆ ಕಾರಣದಿಂದಲೇ ದೇವತೆ ಗಳಿಂದಲೂ ಅವಧ್ಯನಾಗಿರುವ, ಲೋಕಕಂಟಕನಾಗಿರುವ ರಾವಣನನ್ನು ಯುದ್ಧದಲ್ಲಿ ಸಂಹರಿಸು. ಮೂರ್ಖನಾದ, ದುಷ್ಟನಾದ, ರಾಕ್ಷಸನಾದ ರಾವಣನು ತನಗೆ ವರಪ್ರಸಾದದಿಂದ ಪ್ರಾಪ್ತವಾಗಿರುವ ವೀರ್ಯಮದದಿಂದ ಗಂಧರ್ವಸಮೇತರಾದ ದೇವತೆಗಳನ್ನೂ, ಸಿದ್ಧರನ್ನೂ, ಋಷಿಶ್ರೇಷ್ಠರನ್ನೂ ಬಾರಿ-ಬಾರಿಗೂ ಪೀಡಿಸುತ್ತಿರುವನು. ಭಕ್ತವತ್ಸಲನೇ! ತಪಶ್ಚರ್ಯೆ ಯಲ್ಲಿಯೂ, ಯಜ್ಞ-ಯಾಗಾದಿಗಳಲ್ಲಿಯೂ ನಿರತರಾದ ಋಷಿ-ಮಹರ್ಷಿ ಗಳನ್ನು ಪೀಡಿಸುತ್ತಿರುವನು. ನಂದನವನದಲ್ಲಿ ಕ್ರೀಡೆಯಲ್ಲಿ ಮಗ್ನರಾದ ಗಂಧರ್ವರನ್ನೂ ಮತ್ತು ಅಪ್ಸರೆಯರನ್ನೂ ಕ್ರೂರಿಯಾದ ರಾವಣನು ಹಿಂಸೆಪಡಿಸುತ್ತಿದ್ದಾನೆ. ಆ ದುಷ್ಟನ ವಧೆಯನ್ನುದ್ದೇಶಿಸಿ ನಾವು ಋಷಿ-ಮಹರ್ಷಿಗಳೊಡನೆಯೂ, ಸಿದ್ಧ-ಗಂಧರ್ವ-ಯಕ್ಷರೊಡನೆಯೂ ದಶ ರಥನು ಕೈಗೊಂಡಿರುವ ಈ ಯಜ್ಞಕ್ಕೆ ಬಂದಿರುತ್ತೇವೆ. ಇದೇ ಸಮಯಕ್ಕೆ ನೀನೂ ಬಂದಿರುವೆ. ನಾವೆಲ್ಲರೂ ನಿನ್ನನ್ನೇ ರಕ್ಷಕನೆಂದು ನಂಬಿರುತ್ತೇವೆ. ನಮ್ಮೆಲ್ಲರಿಗೂ ನೀನೇ ಶರಣ್ಯನು. ಶರಣಾಗತರಕ್ಷಕನೇ! ನಿನ್ನನ್ನುಳಿದು ಬೇರೆ ಯಾರೂ ನಮಗೆ ರಕ್ಷಕರಿಲ್ಲ. ಶತ್ರುಗಳಿಗೆ ತಾಪವನ್ನುಂಟುಮಾಡುವ ಸಾಮರ್ಥ್ಯವುಳ್ಳ ಮಹಾವಿಷ್ಣುವೇ! ದೇವತೆಗಳ ಶತ್ರುಗಳಾದ ರಾವಣ- ಕುಂಭಕರ್ಣಾದಿ ರಾಕ್ಷಸರ ಸಂಹಾರಮಾಡುವ ಸಲುವಾಗಿ ಮನುಷ್ಯಲೋಕ ದಲ್ಲಿ ಅವತರಿಸುವ ಕೃಪೆಮಾಡು."

ಈ ರೀತಿಯಲ್ಲಿ ದೇವತೆಗಳು ಸ್ತೋತ್ರಮಾಡಿದನಂತರ ದೇವೇಶನಾದ,

ತ್ರಿದಶಪುಂಗವನಾದ, ಸರ್ವಲೋಕಗಳಿಂದಲೂ ನಮಿಸಲ್ಪಡುವ ಶ್ರೀಮಹಾ ವಿಷ್ಣುವು ಬ್ರಹ್ಮಪುರಸ್ಸರರಾಗಿ ಶರಣಾಗತಧರ್ಮವನ್ನವಲಂಬಿಸಿ ನಿಂತಿದ್ದ ದೇವತೆಗಳಿಗೆ ಹೇಳಿದನು : "ದೇವತೆಗಳೇ! ನಿಮಗುಂಟಾಗಿರುವ ಭಯ ವನ್ನು ದೂರಮಾಡಿರಿ. ಇನ್ನು ಮುಂದೆ ನೀವು ಭಯಪಡುವ ಕಾರಣವಿಲ್ಲ. ನಿಮ್ಮೆಲ್ಲರಿಗೂ ಹಿತವನ್ನುಂಟುಮಾಡುವ ಸಲುವಾಗಿ ಯುದ್ಧದಲ್ಲಿ ರಾವಣ ನನ್ನು ಸಂಹರಿಸುತ್ತೇನೆ. ದೇವರ್ಷಿಗಳಿಗೆ ಭಯವನ್ನುಂಟುಮಾಡುತ್ತಿರುವ, ಕ್ರೂರಿಯಾದ, ದುರಭಿಮಾನಿಯಾದ ರಾವಣನನ್ನು ಪುತ್ರ-ಪೌತ್ರ-ಅಮಾತ್ಯ-ಮಂತ್ರಿ-ಜ್ಞಾತಿ-ಬಾಂಧವರೊಡನೆ ಸಂಹರಿಸಿ ಹನ್ನೊಂದು ಸಾವಿರ ವರ್ಷಗಳ ವರೆಗೆ ಮನುಷ್ಯಲೋಕದಲ್ಲಿ ವಾಸಿಸುತ್ತಾ ಭೂಲೋಕವನ್ನು ಸಂರಕ್ಷಿಸುತ್ತಿರು ತ್ತೇನೆ. ನೀವಿನ್ನು ನಿಶ್ಚಿಂತರಾಗಿರಿ.*

ಆತ್ಮಸ್ವರೂಪನಾದ ಮಹಾವಿಷ್ಣುವು ಹೀಗೆ ದೇವತೆಗಳಿಗೆ ವರದಾನ ಮಾಡಿ ಮನುಷ್ಯಲೋಕದಲ್ಲಿ ತನ್ನ ಜನ್ಮಸ್ಥಾನವನ್ನು ಕುರಿತು ಚಿಂತಿಸಿದನು.[1] ಪುಂಡರೀಕಾಕ್ಷನಾದ ಮಹಾವಿಷ್ಣುವು ದೇವತೆಗಳು ಹೇಳಿದಂತೆಯೇ ತನ್ನ ಆತ್ಮವನ್ನು ನಾಲ್ಕು ವಿಧಗಳಾಗಿ ಪರಿವರ್ತಿಸಿ ದಶರಥಮಹಾರಾಜನನ್ನು ತನ್ನ ತಂದೆಯನ್ನಾಗಿ ಮಾಡಿಕೊಳ್ಳಲು ಬಯಸಿದನು. ಶ್ರೀಮಹಾವಿಷ್ಣುವು ದೇವತೆ ಗಳ ಪ್ರಾರ್ಥನೆಯಂತೆ ಮನುಷ್ಯಲೋಕದಲ್ಲಿ ಅವತರಿಸಲು ನಿಶ್ಚಯಿಸಿದೊಡ ನೆಯೇ ಸಂತುಷ್ಟರಾದ ದೇವರ್ಷಿ-ಗಂಧರ್ವರೂ, ಏಕಾದಶರುದ್ರರೂ, ಅಪ್ಸರೆಯರೂ ದಿವ್ಯವಾದ ನಾಮಸಂಕೀರ್ತನಗಳಿಂದ ಮಧುಸೂದನನನ್ನು

---

* ಒಬ್ಬ ವ್ಯಾಖ್ಯಾನಕಾರರು ದಶವರ್ಷಸಹಸ್ರಾಣಿ ಎಂಬುದಕ್ಕೆ ದಶಗುಣಿತ ತ್ರಿಸಹಸ್ರವರ್ಷಾಣಿ = ತ್ರಿಂಶತ್ಸಹಸ್ರಾಣಿ, ಮೂವತ್ತು ಸಾವಿರ ವರ್ಷಗಳು. ದಶವರ್ಷಶತಾನಿ = ದಶಗುಣಿತತ್ರಿಶತವರ್ಷಾಣಿ, ತ್ರಿಸಹಸ್ರವರ್ಷಾಣಿ = ಮೂರುಸಾವಿರ ವರ್ಷಗಳು ಒಟ್ಟು ಮೂವತ್ತುಮೂರು ಸಾವಿರ ವರ್ಷಗಳೆಂದು ವ್ಯಾಖ್ಯಾನಮಾಡಿರುತ್ತಾರೆ. 'ಸಹಸ್ರಾಣಿ' ಎಂಬ ಬಹುವಚನವಿರುವುದರಿಂದ ಬಹುವಚನಪ್ರಯೋಗವು ಕಡೆಯ ಪಕ್ಷ ಮೂರೆಂಬುದನ್ನು ಸೂಚಿಸುವುದೆಂದು ಇವರ ಅಭಿಪ್ರಾಯವಾಗಿದೆ.

[1] 'ಆತ್ಮವಾನ್' ಎಂಬುದಕ್ಕೆ 'ಆತ್ಮಾನಃ ನಿಯಮ್ಯತ್ವೇನ ಸಂತಿ ಅಸ್ಯ' ಎಂದು ವ್ಯಾಖ್ಯಾನಮಾಡಿರುತ್ತಾರೆ. ನಾವುಗಳೆಲ್ಲರೂ ಆತ್ಮವುಳ್ಳವರೇ ಆಗಿರುತ್ತೇವೆ. ಆದರೆ ಪರಮಾತ್ಮನು ಆತ್ಮನಿಯಾಮಕನಾಗಿರುತ್ತಾನೆ.

ಸ್ತೋತ್ರಮಾಡಿದರು : "ಮಹಾವಿಷ್ಣುವೇ! ದಾಮೋದರ! ಮಹಾನು ಭಾವ! ಉದ್ಧತನಾಗಿರುವ, ಮಹಾಪರಾಕ್ರಮಿಯಾಗಿರುವ, ತಪಸ್ವಿಗಳಿಗೆ ಶತ್ರುವಾಗಿ ಅವರ ತಪಸ್ಸುಗಳಿಗೆ ಕಂಟಕಪ್ರಾಯನಾಗಿ ದರ್ಪದಿಂದ ಕೊಬ್ಬಿರುವ, ದೇವೇಂದ್ರನ ಶತ್ರುವಾದ, ಮೂರು ಲೋಕಗಳಿಗೂ ದುಃಖಪ್ರದನಾದ, ವ್ರತನಿಷ್ಠರಾದ ತಪಸ್ವಿಗಳಿಗೆ ಪ್ರತಿಕ್ಷಣದಲ್ಲಿಯೂ ಭಯೋತ್ಪಾದನೆಮಾಡು ತ್ತಿರುವ, ಸೈನ್ಯಸಮೇತನಾದ, ಬಾಂಧವಸಮೇತನಾದ ರಾವಣನನ್ನು ಸಂಹರಿಸು. ಹೀಗೆ ಸರ್ವಜನಗಳಿಗೂ ದುಃಖಪ್ರದನಾದ, ಅತ್ಯುಗ್ರಪರಾಕ್ರಮಿ ಯಾದ ರಾವಣನ ವಧೆಮಾಡಿ, ದೇವತೆಗಳ ಬಾಧೆಯನ್ನು ಪೂರ್ಣವಾಗಿ ಹೋಗಲಾಡಿಸಿ ದೇವೇಂದ್ರನಿಂದ ಸುರಕ್ಷಿತವಾದ, ರಾಗ-ದ್ವೇಷಾದಿ ದೋಷ ಗಳಿಂದ ವಿಮುಕ್ತವಾದ ಸ್ವರ್ಗಕ್ಕೆ ಆಗಮಿಸು."

೧೫ನೆಯ ಸರ್ಗವು ಮುಗಿಯಿತು.

ಬಾಲಕಾಂಡ ೧೬ನೆಯ ಸರ್ಗ

ಶ್ರೀಹರಿಯು ರಾವಣನನ್ನು ಸಂಹರಿಸಲು ಮಾನವನಾಗಿ ಅವತರಿಸುವೆನೆಂದು ದೇವತೆಗಳಿಗೆ ಆಶ್ವಾಸನೆಯನ್ನಿತ್ತುದು : ಪುತ್ರಕಾಮೇಷ್ಟಿಯಜ್ಞದ ಅಗ್ನಿಕುಂಡದಿಂದ ಪ್ರಾಜಾಪತ್ಯ ಪುರುಷನು ಪ್ರಕಟವಾಗಿ ದಿವ್ಯಪಾಯಸವನ್ನು ಕೊಟ್ಟುದು : ಅದನ್ನು ಹಂಚಿಕೊಂಡು ಕುಡಿದ ರಾಣಿಯರು ಗರ್ಭವತಿಯರಾದುದು

ತತೋ ನಾರಾಯಣೋ ದೇವೋ ನಿಯುಕ್ತಃ ಸುರಸತ್ತಮೈಃ ।
ಜಾನನ್ನಪಿ ಸುರಾನೇವಂ ಶ್ಲಕ್ಷ್ಣಂ ವಚನಮಬ್ರವೀತ್ ॥೧॥

ರಾವಣನನ್ನು ಸಂಹರಿಸಲು ದೇವತೆಗಳಿಂದ ನಿಯೋಜಿಸಲ್ಪಟ್ಟ ಶ್ರೀಹರಿಯು–ಮುಂದಿನ ಕರ್ತವ್ಯವೇನೆಂಬುದನ್ನು ತಿಳಿದಿದ್ದರೂ–ದೇವತೆ ಗಳನ್ನು ಉದ್ದೇಶಿಸಿ ಮಧುರವಾದ ಈ ಮಾತುಗಳನ್ನಾಡಿದನು :

"ದೇವತೆಗಳೇ! ರಾಕ್ಷಸಾಧಿಪತಿಯಾದ ರಾವಣನನ್ನು ಸಂಹರಿಸಲು ಯಾವ ಉಪಾಯವಿದೆ? ಋಷಿಕಂಟಕನಾದ ಅವನನ್ನು ಯಾವ ಉಪಾಯ ದಿಂದ ಸಂಹರಿಸಲಿ?"

"ಮಹಿಮಾನ್ವಿತನೇ! ಮನುಷ್ಯನಾಗಿ ಅವತರಿಸಿ ಯುದ್ಧದಲ್ಲಿ ರಾವಣ ನನ್ನು ಸಂಹರಿಸು"–ಎಂದು ದೇವತೆಗಳು ವಿಷ್ಣುವಿಗೆ ಪ್ರತ್ಯುತ್ತರವನ್ನಿತ್ತರು. ಮನುಷ್ಯನಾಗಿಯೇ ಅವತರಿಸಿ ರಾವಣನ ವಧೆಮಾಡಬೇಕೆಂಬುದಕ್ಕೆ ಕಾರಣ ವನ್ನು ಪುನಃ ವಿವರಿಸುತ್ತಾ ದೇವತೆಗಳು ನಾರಾಯಣನಿಗೆ ಹೇಳಿದರು :

"ದೇವದೇವನೇ! ರಾವಣನು ಬಹಳ ಕಾಲದವರೆಗೂ ಬ್ರಹ್ಮನನ್ನು ಕುರಿತು ಉಗ್ರವಾದ ತಪಸ್ಸನ್ನು ಮಾಡುತ್ತಿದ್ದನು. ಲೋಕಸೃಷ್ಟಿಗೆ ಕಾರಣ ನಾದ, ಲೋಕಪೂಜ್ಯನಾದ ಬ್ರಹ್ಮನು ಅವನ ತಪಸ್ಸಿನಿಂದ ಸುಪ್ರೀತನಾಗಿ ಅವನು ಕೇಳಿದ ವರಗಳೆಲ್ಲವನ್ನೂ ಕೊಟ್ಟನು. ಆ ವರದ ಪರಿಣಾಮವಾಗಿ ಮನುಷ್ಯರನ್ನುಳಿದು ಉಳಿದ ಸಮಸ್ತಭೂತಗಳಿಂದಲೂ ಅವನಿಗೆ ಮೃತ್ಯು ವಿಲ್ಲವಾಯಿತು. ವರವನ್ನು ಕೇಳುವ ಸಮಯದಲ್ಲಿ– 'ಅಲ್ಪರಾದ ಮಾನವರು ತನ್ನನ್ನು ಕೊಲ್ಲಲಾರರು'–ಎಂಬ ಭಾವನೆಯಿಂದ ರಾವಣನು ತಿರಸ್ಕಾರದಿಂದ ಅವರ ಹೆಸರನ್ನು ಸೂಚಿಸಲಿಲ್ಲ. ಹೀಗೆ ಬ್ರಹ್ಮನಿಂದ ವರವನ್ನು ಪಡೆದ ರಾವಣನು ಅತಿಗರ್ವಿತನಾಗಿ ಮೂರು ಲೋಕಗಳನ್ನೂ ಪೀಡಿಸುತ್ತಿದ್ದಾನೆ. ಸ್ತ್ರೀಯರನ್ನೂ ಅಪಹರಿಸಿಕೊಂಡು ಹೋಗುತ್ತಿದ್ದಾನೆ. ಈ ಕಾರಣಗಳಿಂದಾಗಿ ರಾವಣನ ವಧೆಯು ಮನುಷ್ಯರಿಂದಲೇ ಎಂದು ಸಿದ್ಧವಾಗಿದೆ. ಆದುದರಿಂದ ನೀನು ಮನುಷ್ಯನಾಗಿ ಅವತರಿಸಿ ರಾವಣನ ವಧೆಯನ್ನು ಮಾಡು."

ದೇವತೆಗಳ ಆ ಮಾತುಗಳನ್ನು ಕೇಳಿ ಮಹಾವಿಷ್ಣುವು ಮನುಷ್ಯ ಲೋಕದಲ್ಲಿ ಅವತರಿಸಲು ನಿಶ್ಚಯಿಸಿ, ದಶರಥರಾಜನನ್ನು ತನ್ನ ತಂದೆ ಯನ್ನಾಗಿ ಮಾಡಿಕೊಳ್ಳಲು ಬಯಸಿದನು. ಹಿಂದೆಯೇ ತಿಳಿಸಿದ್ದಂತೆ ಅಪುತ್ರ ವಂತನಾದ, ಮಹಾಕಾಂತಿಯುಕ್ತನಾದ ದಶರಥರಾಜನು ಪುತ್ರಪ್ರಾಪ್ತಿಗಾಗಿ ಅದೇ ಕಾಲದಲ್ಲಿ ಪುತ್ರಕಾಮೇಷ್ಟಿಯಾಗವನ್ನು ಮಾಡುತ್ತಿದ್ದನು. ಮಹಾ ವಿಷ್ಣುವು ಮನುಷ್ಯಲೋಕದಲ್ಲಿ ಅವತರಿಸಿ ದೇವತೆಗಳ ಕಾರ್ಯವನ್ನು ಸಾಧನೆ ಮಾಡುವೆನೆಂದು ಬ್ರಹ್ಮನಿಗೆ ಆಶ್ವಾಸನೆಯನ್ನಿತ್ತು, ದೇವತೆಗಳಿಂದಲೂ ಋಷಿ-ಮಹರ್ಷಿಗಳಿಂದಲೂ ಪೂಜಿಸಲ್ಪಟ್ಟವನಾಗಿ ಅಂತರ್ಧಾನ ಹೊಂದಿ ದನು. ಇತ್ತಲಾಗಿ ಪುತ್ರಕಾಮೇಷ್ಟಿಯಾಗದಲ್ಲಿ ದೇವತೆಗಳೆಲ್ಲರೂ ತಮ್ಮ-ತಮ್ಮ ಹವಿರ್ಭಾಗಗಳನ್ನು ಸ್ವೀಕರಿಸಿದರು. ಪೂರ್ಣಾಹುತಿಯೂ ಆಯಿತು. ಆಗ

ಆಹವನೀಯ ಯಜ್ಞಕುಂಡದ ಮಧ್ಯಭಾಗದಿಂದ ಅಮಿತತೇಜಸ್ಸಿನಿಂದ ಪ್ರಕಾಶಿಸುತ್ತಿದ್ದ, ಮಹಾಬಲದಿಂದಲೂ-ವೀರ್ಯದಿಂದಲೂ ಸಂಪನ್ನನಾಗಿದ್ದ ಮಹಾಪುರುಷನೊಬ್ಬನು ಪ್ರಾದುರ್ಭವಿಸಿದನು.* ಆ ಮಹಾಭೂತದ ಬಣ್ಣವು ಕಪ್ಪಾಗಿದ್ದಿತು. ಮುಖವು ಕೆಂಪಾಗಿದ್ದಿತು. ಕಂಠನಿನಾದವು ನಗಾರಿಯ ಧ್ವನಿಯಂತೆ ಗಂಭೀರವಾಗಿದ್ದಿತು. ಸಿಂಹದ ಮೈಮೇಲಿರುವ ಮೃದುವಾದ ಮತ್ತು ನೀಳವಾದ ಕೂದಲಿನಂತೆ ಆ ಪುರುಷವಿಶೇಷದ ಮುಖದಲ್ಲಿಯೂ ತಲೆಯಲ್ಲಿಯೂ ಕೇಶರಾಶಿಯಿದ್ದಿತು. ಶರೀರದಲ್ಲಿ ಅನೇಕ ಶುಭಲಕ್ಷಣಗಳಿದ್ದುವು. ಅದು ಅನೇಕ ದಿವ್ಯಾಭರಣಗಳನ್ನು ಧರಿಸಿದ್ದಿತು. ಪರ್ವತದ ಶಿಖರದಂತೆ ಅದರ ಕಾಯವು ಉನ್ನತವಾಗಿದ್ದಿತು. ಅದಕ್ಕೆ ಮದಿಸಿದ ವ್ಯಾಘ್ರದ ಪದನ್ಯಾಸವಿದ್ದಿತು. ಸೂರ್ಯನಿಗೆ ಸಮಾನವಾದ ದಿವ್ಯಪ್ರಭಾಮಂಡಲದಿಂದ ಕೂಡಿರುವ, ಪ್ರಜ್ವಲಿಸುತ್ತಿರುವ ಯಜ್ಞೇಶ್ವರನ ಜ್ವಾಲೆಗೆ ಸದೃಶವಾದ ತೀಕ್ಷ್ಣ ತೇಜಸ್ಸಿನಿಂದ ಕೂಡಿದ್ದ ಆ ಮಹಾಭೂತವು ಪುಟಕ್ಕೆ ಹಾಕಿದ ಚಿನ್ನದಿಂದ ಮಾಡಲ್ಪಟ್ಟಿದ್ದ, ಬೆಳ್ಳಿಯ ಮುಚ್ಚಳದಿಂದ ಕೂಡಿದ್ದ, ದಿವ್ಯಪಾಯಸದಿಂದ ಪರಿಪೂರ್ಣವಾಗಿದ್ದ, ಮಾಯಾಕಲ್ಪಿತವಾದಂತೆ ಆಶ್ಚರ್ಯಕರವಾಗಿದ್ದ ಪಾತ್ರೆಯನ್ನು-ಪ್ರಿಯಪತ್ನಿಯನ್ನು ಎರಡು ತೋಳುಗಳಿಂದಲೂ ಆಲಿಂಗನ ಮಾಡಿಕೊಳ್ಳುವ ರೀತಿಯಲ್ಲಿ-ತೋಳುಗಳಿಂದ ಹಿಡಿದೆತ್ತಿಕೊಂಡು ಆವಿರ್ಭವಿಸಿತು. ದಿವ್ಯಪಾಯಸವನ್ನು ಹೊತ್ತು ಯಜ್ಞೇಶ್ವರನ ಮಧ್ಯ ಭಾಗದಲ್ಲಿ ಪ್ರಾದುರ್ಭೂತನಾದ ದಿವ್ಯಪುರುಷನು, ಯಜಮಾನನಾದ ದಶರಥನನ್ನು ದೃಷ್ಟಿಸಿ ನೋಡಿ ಹೇಳಿದನು : "ಮಹಾರಾಜ! ಇಲ್ಲಿಗೆ ಆಗಮಿಸಿರುವ ನನ್ನನ್ನು ಪ್ರಜಾಪತಿಯಿಂದ ಕಳುಹಿಸಲ್ಪಟ್ಟ ಪುರುಷನೆಂಬುದಾಗಿ ತಿಳಿ."

---

* ಭಗವಂತನಾದ ಶ್ರೀಮನ್ನಾರಾಯಣನೇ ತನ್ನ ತೇಜೋರೂಪವಾದ ದಿವ್ಯ ಪಾಯಸವನ್ನು ತೆಗೆದುಕೊಂಡು ಯಜ್ಞೇಶ್ವರನಲ್ಲಿ ಪ್ರಾದುರ್ಭೂತನಾದನು-ಎಂದು ಒಬ್ಬ ವ್ಯಾಖ್ಯಾನಕಾರರು ವ್ಯಾಖ್ಯೆಮಾಡಿರುತ್ತಾರೆ. ವಿಷ್ಣುವಲ್ಲದೇ ಬೇರೊಬ್ಬನಿಗೆ ಮಹಾವಿಷ್ಣುವಿನ ತೇಜಸ್ಸನ್ನು ಧರಿಸುವ ಸಾಧ್ಯತೆಯಿಲ್ಲವೆಂಬುದು ಮತ್ತು 'ಮಹದ್ಭೂತಂ' ಎಂಬುದು ವಿಷ್ಣುಪರ್ಯಾಯವಾಚಿ ['ಏಕೋ ವಿಷ್ಣುರ್ಮಹದ್ಭೂತಂ'] ಎಂಬುದು ಇವರ ವ್ಯಾಖ್ಯಾನಕ್ಕೆ ಸಾಧಕಗಳಾಗಿವೆ.

ದಿವ್ಯಪುರುಷನು ಹೇಳಿದ ದಿವ್ಯವಾಣಿಯನ್ನು ಕೇಳಿ ದಶರಥರಾಜನು ಕೈಮುಗಿದುಕೊಂಡು ಹೇಳಿದನು :

"ಪೂಜ್ಯನೇ! ನಿನಗೆ ಸ್ವಾಗತವು. ಮಹಾಮಹಿಮನಾದ ನಿನ್ನ ಸಲು ವಾಗಿ ನಾನೇನು ಮಾಡಬೇಕೆಂಬುದನ್ನು ಕೂಡಲೇ ಆಜ್ಞಾಪಿಸು."

ದಶರಥನ ಪ್ರಾರ್ಥನೆಗೆ ಉತ್ತರವಾಗಿ ಪ್ರಾಜಾಪತ್ಯನು ಹೇಳಿದನು :

"ಮಹಾರಾಜ! ಅಶ್ವಮೇಧ, ಪುತ್ರಕಾಮೇಷ್ಟಿ ಮೊದಲಾದ ಯಜ್ಞ ಗಳಿಂದ ದೇವತೆಗಳನ್ನು ಆರಾಧಿಸಿರುವುದಕ್ಕೆ ಫಲರೂಪವಾಗಿ ಇಂದು ನಿನಗೆ ಈ ದಿವ್ಯಪಾಯಸವು ದೊರಕಿದೆ. ಇದು ದೇವನಿರ್ಮಿತವಾದುದು. ಪ್ರಜೋ ತ್ಪತ್ತಿಗೆ ಕಾರಣವಾದ, ಪ್ರಶಸ್ತವಾದ ಮತ್ತು ಆರೋಗ್ಯಕರವಾದ ದಿವ್ಯ ಪಾಯಸವಿದಾಗಿರುತ್ತದೆ. ಇದನ್ನು ಸ್ವೀಕರಿಸು. ಈ ದಿವ್ಯಪಾಯಸವನ್ನು ಭಕ್ಷಣಮಾಡಲು ಅರ್ಹರಾದ, ಅನುರೂಪವಾದ ಕುಲದಲ್ಲಿ ಹುಟ್ಟಿರುವ ನಿನ್ನ ಪತ್ನಿಯರಿಗೆ 'ಪಾನಮಾಡಿರೆಂದು' ಹೇಳಿ ಈ ಪಾಯಸವನ್ನು ಕೊಡು. ಯಾವ ಫಲಕ್ಕಾಗಿ ನೀನು ಈ ಯಜ್ಞವನ್ನು ಮಾಡಿರುವೆಯೋ–ಆ ಪುತ್ರರೂಪ ಫಲಪ್ರಾಪ್ತಿಯು ಈ ಪಾಯಸದಿಂದ ನಿನಗುಂಟಾಗುತ್ತದೆ. ಈ ದಿವ್ಯ ಪಾಯಸವನ್ನು ಭುಂಜಿಸಿದ ಪತ್ನಿಯರಲ್ಲಿ ನೀನು ಪುತ್ರರನ್ನು ಪಡೆಯುವೆ."

ದಶರಥನು ಪರಮಪ್ರೀತನಾಗಿ ಪ್ರಾಜಾಪತ್ಯಪುರುಷನು ಕೊಟ್ಟ, ದೇವ ನಿರ್ಮಿತವಾದ ಪಾಯಸದಿಂದ ಪರಿಪೂರ್ಣವಾದ ಚಿನ್ನದ ಪಾತ್ರೆಯನ್ನು ತಲೆ ಯಲ್ಲಿ ಧಾರಣೆಮಾಡಿದನು. ವಿಶೇಷಸಂತೋಷದಿಂದ ಕೂಡಿದ ನರಪತಿಯು ಅದ್ಭುತಸ್ವರೂಪನಾದ, ಪ್ರಿಯದರ್ಶನನಾದ ಪ್ರಾಜಾಪತ್ಯನಿಗೆ ನಮಸ್ಕಾರ ಮಾಡಿ ಪ್ರದಕ್ಷಿಣೆಮಾಡಿದನು. ದೇವನಿರ್ಮಿತವಾದ ಪಾಯಸವನ್ನು ಪಡೆದ ದಶರಥನ ಸಂತೋಷಕ್ಕೆ ಪಾರವಿಲ್ಲವಾಯಿತು. "ಬಭೂವ ಪರಮಪ್ರೀತಃ ಪ್ರಾಪ್ಯವಿತ್ತಮಿವಾಧನಃ"–ಕಡುಬಡವನೊಬ್ಬನು ಆಕಸ್ಮಿಕವಾಗಿ ಅಪಾರ ಧನವು ಲಭಿಸಿದರೆ ಎಷ್ಟು ಸಂತೋಷಪಡುವನೋ–ಅದೇ ರೀತಿಯಲ್ಲಿ ದಶರಥನೂ ಅಪಾರವಾದ ಸಂತಸವನ್ನು ಹೊಂದಿದನು. ಅದ್ಭುತವಾದ

ರೂಪಕಾಂತಿಯಿಂದ ಕೂಡಿದ್ದ, ತೇಜೋರೂಪವಾದ ಮಹಾಭೂತವು ಪುತ್ರಕಾಮೇಷ್ಟಿಯಾಗವನ್ನು ಪಾಯಸಪ್ರದಾನದ ಮೂಲಕ ಸಫಲವಾಗಿ ಸಮಾಪ್ತಿಗೊಳಿಸಿ ಅಗ್ನಿಕುಂಡದಲ್ಲಿಯೇ ಅಂತರ್ಧಾನವನ್ನು ಹೊಂದಿತು. ಶರತ್ಕಾಲದ ಪೂರ್ಣಚಂದ್ರನ ಕಾಂತಿಯಿಂದ ಆಕಾಶವು ಪ್ರಕಾಶಮಾನ ವಾಗಿರುವಂತೆ–ಪಾಯಸಪ್ರಾಪ್ತಿಯಿಂದ ಪರಮಸಂತುಷ್ಟನಾದ ರಾಜನ ಹರ್ಷೋತ್ಫುಲ್ಲವಾದ ಮುಖಚಂದ್ರನ ಕಳಂಕರಹಿತವಾದ ಕಾಂತಿಯಿಂದ ಅಂತಃಪುರವು ಬೆಳಗಿತು. ರಾಜನು ಅಂತಃಪುರವನ್ನು ಪ್ರವೇಶಿಸಿ ಹಿರಿಯಪತ್ನಿ ಯಾದ ಕೌಸಲ್ಯೆಗೆ ಹೇಳಿದನು : "ಭದ್ರೇ! ಪುತ್ರೋತ್ಪತ್ತಿಗೆ ಕಾರಣವಾದ ಈ ದಿವ್ಯಪಾಯಸವನ್ನು ಸ್ವೀಕರಿಸು."

ಹೀಗೆ ಹೇಳಿ ದಶರಥರಾಜನು ದಿವ್ಯಪಾಯಸವನ್ನು ತನ್ನ ಮೂವರು ಪತ್ನಿಯರಿಗೂ ವಿಭಾಗಮಾಡಿಕೊಟ್ಟನು. ಹಿರಿಯಳಾದ ಕೌಸಲ್ಯಾದೇವಿಗೆ ಪಾಯಸದ ಅರ್ಧಭಾಗವನ್ನು ಕೊಟ್ಟನು. ಉಳಿದ ಅರ್ಧವನ್ನು ಪುನಃ ಎರಡು ಭಾಗ ಮಾಡಿ ಅದರಲ್ಲಿ ಒಂದು ಭಾಗವನ್ನು ಸುಮಿತ್ರಾದೇವಿಗೆ ಕೊಟ್ಟನು. ಉಳಿದ ಕಾಲುಭಾಗವನ್ನು ಪುನಃ ಎರಡು ಭಾಗಮಾಡಿ ಒಂದು ಭಾಗವನ್ನು ಕೈಕೇಯಿಗೆ ಕೊಟ್ಟನು. ಅಮೃತೋಪಮವಾದ ಪಾಯಸದ ಎಂಟನೆಯ ಒಂದು ಭಾಗವು ಪುನಃ ರಾಜನಲ್ಲಿಯೇ ಉಳಿಯಿತು. ಕ್ಷಣಕಾಲ ಯೋಚಿಸಿ ಉಳಿದಿದ್ದ ಎಂಟನೆಯ ಒಂದು ಭಾಗ ಪಾಯಸವನ್ನು ಸುಮಿತ್ರಾದೇವಿಗೇ ಕೊಟ್ಟುಬಿಟ್ಟನು. ಈ ರೀತಿಯಾಗಿ ದಶರಥರಾಜನು ಪತ್ನಿಯರಿಗೆ ಪಾಯಸ ವನ್ನು ಪ್ರತ್ಯೇಕ-ಪ್ರತ್ಯೇಕವಾಗಿ ಹಂಚಿದನು. ದಶರಥನ ಪತ್ನಿಯರಾದ, ಉತ್ತಮಸ್ತ್ರೀಯರಾದ ಕೌಸಲ್ಯಾ-ಸುಮಿತ್ರಾ-ಕೈಕೇಯಿಯರು ರಾಜನು ಹಂಚಿ ಕೊಟ್ಟ ಪಾಯಸವನ್ನು ಸ್ವೀಕರಿಸಿ ಹರ್ಷಭರಿತರಾಗಿ ತಾವು ಸನ್ಮಾನಿತರಾದೆ ವೆಂದೂ ಭಾವಿಸಿದರು. ಪವಿತ್ರಾಸನದಲ್ಲಿ ಕುಳಿತು ದಶರಥರಾಜನಿಂದ ಹಂಚಲ್ಪಟ್ಟ ಪಾಯಸವನ್ನು, ಪರಿಶುದ್ಧರಾಗಿ ಪ್ರತ್ಯೇಕ-ಪ್ರತ್ಯೇಕವಾಗಿ ಪ್ರಾಶನ ಮಾಡಿದರು. ಬಳಿಕ ಯಜ್ಞೇಶ್ವರನಿಗೂ ಸೂರ್ಯನಿಗೂ ಸಮಾನವಾದ ತೇಜಸ್ಸನ್ನು ಹೊಂದಿದವರಾಗಿ ಸ್ವಲ್ಪಕಾಲದಲ್ಲಿಯೇ ಗರ್ಭಧಾರಣೆ ಮಾಡಿದರು. ಪಾಯಸಪ್ರಾಶನದಿಂದ ಪತ್ನಿಯರು ಗರ್ಭಿಣಿಯರಾದುದನ್ನು ತಿಳಿದು ದಶರಥರಾಜನು ಸ್ವಸ್ಥಚಿತ್ತನಾಗಿ–ಸ್ವರ್ಗದಲ್ಲಿ ದೇವೇಂದ್ರನಿಂದಲೂ,

ಸಿದ್ಧರಿಂದಲೂ, ಋಷಿಗಣದಿಂದಲೂ ಪೂಜಿಸಲ್ಪಡುವ ಶ್ರೀಹರಿಯಂತೆ–ಪರಮಸಂತುಷ್ಟನಾದನು.

೧೬ನೆಯ ಸರ್ಗವು ಮುಗಿಯಿತು.

ಬಾಲಕಾಂಡ ೧೭ನೆಯ ಸರ್ಗ

ಬ್ರಹ್ಮನ ಆದೇಶದಂತೆ ದೇವತೆಗಳು ತಮ್ಮ ಅಂಶಗಳಿಂದ ಕಪಿನಾಯಕರನ್ನು ಸೃಷ್ಟಿಸಿದುದು

ಪುತ್ರತ್ವಂ ತು ಗತೇ ವಿಷ್ಣೌ ರಾಜ್ಞಸ್ತಸ್ಯ ಮಹಾತ್ಮನಃ ।
ಉವಾಚ ದೇವತಾಃ ಸರ್ವಾಃ ಸ್ವಯಂಭೂರ್ಭಗವಾನಿದಮ್ ॥೧॥

ಮಹಾವಿಷ್ಣುವು ಮಹಾತ್ಮನಾದ ದಶರಥನ ಪುತ್ರನಾಗಿ ಅವತರಿಸಲು ಉದ್ಯುಕ್ತನಾಗಲಾಗಿ, ದೇವಸಭೆಯಲ್ಲಿ ದಿವ್ಯಾಸನಾರೂಢನಾಗಿದ್ದ ಬ್ರಹ್ಮನು ದೇವತೆಗಳಿಗೆ ಹೇಳಿದನು :

“ದೇವತೆಗಳೇ! ನಮ್ಮೆಲ್ಲರ ಹಿತೈಷಿಯಾದ, ಸತ್ಯಸಂಧನಾದ ಶ್ರೀಮಹಾವಿಷ್ಣುವಿನ ಸಹಾಯಕ್ಕೆ ಯೋಗ್ಯರಾದ ಮತ್ತು ಕಾಮರೂಪಿಗಳಾದ ಪ್ರಾಣಿವಿಶೇಷಗಳನ್ನು ಭೂಮಿಯಲ್ಲಿ ಸೃಷ್ಟಿಸಿರಿ. ಅವರು ಮಾಯಾಯುದ್ಧ ಪ್ರಕ್ರಿಯೆಗಳನ್ನು ತಿಳಿದವರಾಗಿರಬೇಕು ; ಶೂರರಾಗಿರಬೇಕು ; ವೇಗದಲ್ಲಿ ವಾಯುವಿಗೆ ಸಮಾನರಾಗಿರಬೇಕು ; ನೀತಿಜ್ಞರಾಗಿರಬೇಕು ; ಬುದ್ಧಿಸಂಪನ್ನರಾಗಿರಬೇಕು. ಹೆಚ್ಚೇನು ಹೇಳಲಿ? ಎಲ್ಲರೂ ಶ್ರೀಮಹಾವಿಷ್ಣುವಿಗೆ ಸಮಾನವಾದ ಪರಾಕ್ರಮವುಳ್ಳವರಾಗಿಯೂ ಇರಬೇಕು. ಅವರನ್ನು ಯಾರೂ ಸಂಹರಿಸಲು ಸಾಧ್ಯವಾಗಕೂಡದು. ಅವರು ಸಾಮ-ದಾನ-ಭೇದ-ದಂಡಗಳೆಂಬ ನಾಲ್ಕು ಉಪಾಯಗಳನ್ನೂ ತಿಳಿದವರಾಗಿರಬೇಕು. ಸಿಂಹಕ್ಕೆ ಸಮಾನವಾದ ಶರೀರಬಲದಿಂದ ಕೂಡಿರಬೇಕು. ಸರ್ವಾಸ್ತ್ರಗಳ ಶಕ್ತಿಯನ್ನೂ ಪಡೆದಿರಬೇಕು. ಸಾವಿಗೀಡಾಗಕೂಡದು. ಅಮೃತವನ್ನು ಕುಡಿದವರಂತೆ ದೀರ್ಘಾಯುಗಳಾಗಿರಬೇಕು. ಇಂತಹವರನ್ನು ಸೃಷ್ಟಿಸಿರಿ. ಶ್ರೇಷ್ಠರಾದ ಅಪ್ಸರೆಯರಲ್ಲಿಯೂ, ಗಂಧರ್ವಸ್ತ್ರೀಯರಲ್ಲಿಯೂ, ಯಕ್ಷ-ಪನ್ನಗಕನ್ಯೆಯರಲ್ಲಿಯೂ, ಋಕ್ಷಿ (ಹೆಣ್ಣು ಕರಡಿ) ಮತ್ತು ವಿದ್ಯಾಧರಕನ್ಯೆಯರಲ್ಲಿಯೂ, ಕಿನ್ನರಸ್ತ್ರೀಯರಲ್ಲಿಯೂ, ವಾನರಸ್ತ್ರೀಯರಲ್ಲಿಯೂ ನಿಮ್ಮಂತೆ ಪರಾಕ್ರಮವಿರುವ ವಾನರರೂಪಿಗಳಾದ,

ಮಕ್ಕಳನ್ನು ಸೃಷ್ಟಿಸಿರಿ. ಜಾಂಬವಂತನೆಂಬ ಋಕ್ಷಪುಂಗವನನ್ನು (ಶ್ರೇಷ್ಠ ಕರಡಿಯನ್ನು) ನಾನು ಈ ಮೊದಲೇ ರಾಮನ ಸಹಾಯಕ್ಕಾಗಿ ಸೃಷ್ಟಿಸಿರುವೆನು. ನಾನೊಮ್ಮೆ ಆಕಳಿಸುತ್ತಿದ್ದಾಗ ನನ್ನ ಮುಖದಿಂದ ಅವನು ಹುಟ್ಟಿರುವನು."[*]

ದೇವಸಭೆಯಲ್ಲಿ ಆಸೀನರಾಗಿದ್ದ ದೇವತೆಗಳು, ಮಹಾತ್ಮರಾದ ಋಷಿಗಳು, ಸಿದ್ಧ-ವಿದ್ಯಾಧರರು ಮತ್ತು ಚಾರಣರು ಬ್ರಹ್ಮನು ಹೇಳಿದುದನ್ನೂ ಮತ್ತು ಅವನ ಶಾಸನವನ್ನೂ ಕೇಳಿ ವೀರರಾದ, ವನಚಾರಿಗಳಾದ ಮಕ್ಕಳನ್ನು ಹುಟ್ಟಿಸಿದರು. ಇಂದ್ರನು ತನ್ನಂತೆ ಕಾಂತಿಯಿಂದ ಕೂಡಿದ್ದ ವಾನರ ಶ್ರೇಷ್ಠನಾದ ವಾಲಿಯನ್ನು ಸೃಷ್ಟಿಸಿದನು.[1] ಬೆಳಗುವವರಲ್ಲಿ ಶ್ರೇಷ್ಠನಾದ ಸೂರ್ಯನು ಸುಗ್ರೀವನನ್ನು ಸೃಷ್ಟಿಸಿದನು. ಬೃಹಸ್ಪತಿಯು ವಾನರಮುಖ್ಯರಲ್ಲಿ ಮಹಾಬುದ್ಧಿವಂತನಾದ ತಾರನೆಂಬ ಮಹಾಕಪಿಯನ್ನು ಸೃಷ್ಟಿಸಿದನು. ಶ್ರೀಮಂತನಾದ ಗಂಧಮಾದನನೆಂಬ ವಾನರನು ಕುಬೇರನ ಮಗನಾದನು. ವಿಶ್ವಕರ್ಮನು ಶಿಲ್ಪಶಾಸ್ತ್ರದಲ್ಲಿ ದಕ್ಷನಾದ ನಲನೆಂಬ ಕಪಿಯನ್ನು ಸೃಷ್ಟಿಸಿದನು. ಯಜ್ಞೇಶ್ವರನಿಗೆ ಸಮಾನವಾದ ತೇಜಸ್ಸಿನಿಂದ ಕೂಡಿರುವ ನೀಲನು ಅಗ್ನಿಯ ಮಗನು. ಅವನು ತೇಜಸ್ಸಿನಲ್ಲಿಯೂ, ಯಶಸ್ಸಿನಲ್ಲಿಯೂ, ಪರಾಕ್ರಮದಲ್ಲಿಯೂ ಸಕಲವಾನರರನ್ನೂ ಮೀರಿಸಿದ್ದನು. ರೂಪಧನರಾದ, ಅನುಪಮ

---

[*] ಬ್ರಹ್ಮನು ದೇವತೆಗಳಿಗೆ– 'ನಿಮ್ಮ ನಿಮ್ಮ ಪತ್ನಿಯರಲ್ಲಿ ಮಕ್ಕಳನ್ನು ಸೃಷ್ಟಿಸಿರಿ' ಎಂದು ಹೇಳದೇ– 'ಗಂಧರ್ವಸ್ತ್ರೀಯರಲ್ಲಿ ಮತ್ತು ಅಪ್ಸರೆಯರಲ್ಲಿ ಸೃಷ್ಟಿಸಿರಿ'–ಎಂದು ಹೇಳುವುದಕ್ಕೆ ಕಾರಣವೇನೆಂದರೆ : ಪಾರ್ವತಿಯ ಶಾಪದ ಕಾರಣದಿಂದಾಗಿ ದೇವತೆಗಳಿಗೆ ಸ್ವಕ್ಷೇತ್ರದಲ್ಲಿ ಪುತ್ರೋತ್ಪಾದನೆಯ ಸಾಧ್ಯತೆಯಿಲ್ಲ. ಬ್ರಹ್ಮನು 'ಗಂಧರ್ವಿಯರ ಶರೀರಗಳಲ್ಲಿ ಸೃಷ್ಟಿಸಿರಿ' ಎಂದು ಕೂಡಾ ಹೇಳಿದ್ದಾನೆ. "**ಗಂಧರ್ವೀಣಾಂ ತನೂಷು ಚ ವಾನರೀಣಾಂ ತನೂಷು ಚ**" ಅಯೋನಿಜತ್ವದ ಸಿದ್ಧಿಗಾಗಿಯೂ, ಒಡನೆಯೇ ಪ್ರವೃದ್ಧಿಹೊಂದುವುದಕ್ಕಾಗಿಯೂ ಹೀಗೆ ಹೇಳಿರುತ್ತಾನೆ. ರಾವಣನಿಗೆ ನಂದಿಕೇಶ್ವರನಿತ್ತ ಶಾಪದಂತೆ ಕಪಿಗಳ ಸೃಷ್ಟಿಯಾಗ ಬೇಕಾಯಿತು.

ತಸ್ಮಾನ್ಮದ್ರೂಪಸಂಯುಕ್ತಾ ಮದ್ವೀರ್ಯಸಮತೇಜಸಃ ।
ಉತ್ಪತ್ಸ್ಯನ್ತಿ ವಧಾರ್ಥಂ ಹಿ ಕುಲಸ್ಯ ತವ ವಾನರಾಃ ॥

ಎಂದು ನಂದಿಕೇಶ್ವರನು ರಾವಣನಿಗೆ ಶಾಪಕೊಟ್ಟಿದ್ದನು.

[1] ರಾಮನ ಸಹಾಯಕ್ಕಾಗಿ ವಾಲಿಯ ಸೃಷ್ಟಿಯು ಹೇಗಾಯಿತೆಂಬ ಪ್ರಶ್ನೆಯು

ವಾದ ರೂಪವಂತರೆಂದು ಪ್ರಖ್ಯಾತರಾದ ಅಶ್ವಿನೀದೇವತೆಗಳು ಮೈಂದ ಮತ್ತು ದ್ವಿವಿದರೆಂಬ ವಾನರಶ್ರೇಷ್ಠರನ್ನು ಸೃಷ್ಟಿಸಿದರು. * ವರುಣನು ಸುಷೇಣನೆಂಬ ವಾನರಶ್ರೇಷ್ಠನನ್ನೂ, ಮಳೆಗೆ ಅಭಿಮಾನಿದೇವತೆಯಾದ ಪರ್ಜನ್ಯನು ಮಹಾಬಲನಾದ ಶರಭನೆಂಬ ವಾನರನನ್ನೂ ಸೃಷ್ಟಿಸಿದರು. ವಜ್ರಕ್ಕೆ ಸದೃಶವಾದ ದೇಹದಾರ್ಢ್ಯವುಳ್ಳ, ಗರುಡನಿಗೆ ಸಮಾನವಾದ ವೇಗವುಳ್ಳ, ಶ್ರೀಮಂತನಾದ ಹನುಮಂತನು ವಾಯುದೇವನ ಮಗನಾದನು. ಅವನು ಎಲ್ಲ ಕಪಿಗಳಿಗಿಂತಲೂ ಹೆಚ್ಚು ಬುದ್ಧಿವಂತನೂ ಮತ್ತು ಹೆಚ್ಚು ಬಲ ಶಾಲಿಯೂ ಆಗಿದ್ದನು. ಮೇಲೆ ಹೇಳಿದ ರೀತಿಯಲ್ಲಿ ದೇವತೆಗಳು ರಾವಣನ ಸಂಹಾರದಲ್ಲಿಯೇ ಆಸಕ್ತರಾದ, ಅಪ್ರತಿಮಬಲಶಾಲಿಗಳೂ, ವೀರರೂ ಮತ್ತು ವಿಖ್ಯಾತರೂ, ಕಾಮರೂಪಿಗಳೂ ಆಗಿದ್ದ, ಮೇರು ಮತ್ತು ಮಂದರಪರ್ವತಗಳಂತೆ ಶರೀರಗಳನ್ನು ಧರಿಸಿದ್ದ, ಮಹಾಬಲಿಷ್ಠರಾದ ಕರಡಿ, ಕಪಿ, ಗೋಪುಚ್ಛಾದಿ ಹಲವಾರು ಸಾವಿರ ಕಪಿವಿಶೇಷಗಳನ್ನು ಒಡನೆಯೇ ಸೃಷ್ಟಿಸಿದರು. ಯಾವ ದೇವತೆಗೆ ಯಾವ ಸುಂದರರೂಪ ವಿದ್ದಿತೋ ಮತ್ತು ಎಷ್ಟು ಪರಾಕ್ರಮವಿದ್ದಿತೋ–ಅದಕ್ಕೆ ಸಮಾನವಾದ ರೂಪ-ಪರಾಕ್ರಮಗಳುಳ್ಳ ಮಕ್ಕಳು ಆ ದೇವತೆಗೆ ಜನಿಸಿದರು. ಇದಲ್ಲದೇ

ಹುಟ್ಟುವುದಲ್ಲವೇ? ವಾಲಿಯ ಮಗನಾದ ಅಂಗದನ ಸಹಾಯಪಡೆಯಲು ವಾಲಿಯ ಸೃಷ್ಟಿಯಾಯಿತು. ಎರಡನೆಯದಾಗಿ ವಾಲಿ-ಸುಗ್ರೀವರಲ್ಲಿ ಪರಸ್ಪರವಿರೋಧವಿಲ್ಲದಿದ್ದರೆ ರಾವಣನ ವಧೆಗೆ ಅವಕಾಶವಿರಲಿಲ್ಲ. ರಾಮನು ವಾಲಿಯ ಸಖ್ಯವನ್ನು ಬೆಳೆಸಿದ್ದರೆ ವಾಲಿಯಿಂದ ಭೀತನಾದ ರಾವಣನು ಕ್ಷಣಮಾತ್ರದಲ್ಲಿ ಸೀತೆಯನ್ನು ರಾಮನಿಗೆ ತಂದೊಪ್ಪಿಸುತ್ತಿದ್ದನು. ರಾವಣವಧೆಯಾಗದೇ ರಾಮನ (ವಿಷ್ಣುವಿನ) ಅವತಾರಕ್ಕೆ ಸಾರ್ಥಕ್ಯವೇ ಇಲ್ಲದಂತಾಗುತ್ತದೆ. ಇದಲ್ಲದೆ ವಾಲಿಯು ದುಂದುಭಿಯೇ ಮುಂತಾದ ಅನೇಕ ದೈತ್ಯರನ್ನು ಸಂಹರಿಸಿದವನು. ಈ ಕಾರಣದಿಂದಲೂ ರಾವಣನ ವಧೆಗೆ (ದೇವಕಾರ್ಯಕ್ಕೆ) ವಾಲಿಯು ಸಹಾಯಕನಾದನೆಂದೇ ಹೇಳಬಹುದಾಗಿದೆ.

* ಯುದ್ಧಕಾಂಡದಲ್ಲಿ ರಾವಣನಿಗೆ ಶಾರ್ದೂಲನು–"**ಸುಷೇಣಶ್ಚಾತ್ರಧರ್ಮಾತ್ಮಾ ಪುತ್ರೋ ಧರ್ಮಸ್ಯ ವೀರ್ಯವಾನ್**"–ಧರ್ಮಾತ್ಮನಾದ ಸುಷೇಣನು ಯಮಧರ್ಮನ ಮಗನೆಂದು ಹೇಳುತ್ತಾನೆ. ಶಾರ್ದೂಲನು ಸುಷೇಣನನ್ನು ಯಮಧರ್ಮನ ಮಗನೆಂದು ಭ್ರಾಂತಿಯಿಂದ ಹೇಳಿರುವನೆಂದು ಭಾವಿಸಬೇಕಾಗಿದೆ.

ಪ್ರಸಿದ್ಧಪರಾಕ್ರಮಿಗಳಾದ ವಾನರಶ್ರೇಷ್ಠರಲ್ಲಿ ಕೆಲವರು ಗೋಪುಚ್ಛಮೃಗಗಳಲ್ಲಿಯೂ, ಕೆಲವರು ಕರಡಿಗಳಲ್ಲಿಯೂ, ಕೆಲವರು ಕಿನ್ನರಸ್ತ್ರೀಯರಲ್ಲಿಯೂ ಹುಟ್ಟಿದರು. ದೇವತೆಗಳು, ಮಹರ್ಷಿಗಳು, ಗಂಧರ್ವರು, ತಾರ್ಕ್ಷ್ಯರು, ಯಕ್ಷರು, ನಾಗರು, ಕಿಂಪುರುಷರು, ಸಿದ್ಧ-ವಿದ್ಯಾಧರರು, ಸರ್ಪದೇವತೆಗಳು, ಚಾರಣರು ಮುಂತಾದ ಅನೇಕ ಸಹಸ್ರದೇವತೆಗಳು ವನಚಾರಿಗಳಾದ, ಮಹಾಕಾಯರಾದ, ಸಾವಿರಾರು ವಾನರಶ್ರೇಷ್ಠರನ್ನು ಅಪ್ಸರೆಯರಲ್ಲಿ, ವಿದ್ಯಾಧರಿಯರಲ್ಲಿ, ನಾಗಕನ್ಯೆಯರಲ್ಲಿ ಮತ್ತು ಗಂಧರ್ವಸ್ತ್ರೀಯರಲ್ಲಿ ಹುಟ್ಟಿಸಿದರು. ಅವರೆಲ್ಲರೂ ಕಾಮರೂಪಿಗಳಾಗಿದ್ದರು. ಮಹಾಬಲಶಾಲಿಗಳಾಗಿದ್ದರು. ಇಚ್ಛೆಯಿದ್ದಲ್ಲಿಗೆ ಕ್ಷಣಮಾತ್ರದಲ್ಲಿ ಹೋಗಲು ಸಮರ್ಥರಾಗಿದ್ದರು. ದರ್ಪದಲ್ಲಿಯೂ ಮತ್ತು ಬಲದಲ್ಲಿಯೂ ಸಿಂಹಗಳಿಗೆ ಅಥವಾ ಹುಲಿಗಳಿಗೆ ಸಮಾನರಾಗಿದ್ದರು. ದೊಡ್ಡ-ದೊಡ್ಡ ಬಂಡೆಗಳನ್ನೇ ಎತ್ತಿ ಪ್ರಹರಿಸುವ ಪರಾಕ್ರಮದಿಂದ ಕೂಡಿದ್ದರು. ಮಹಾವೃಕ್ಷಗಳನ್ನೇ ಕಿತ್ತು ಯುದ್ಧಮಾಡುತ್ತಿದ್ದರು. ಅವರಿಗೆ ಉಗುರುಗಳು ಮತ್ತು ಕೋರೆದಾಡೆಗಳೇ ಮುಖ್ಯವಾದ ಆಯುಧಗಳಾಗಿದ್ದುವು. ಆದರೂ ಅವರು ಸರ್ವಾಸ್ತ್ರಗಳಲ್ಲಿಯೂ ಪ್ರಾವೀಣ್ಯವನ್ನು ಪಡೆದಿದ್ದರು. ದೊಡ್ಡ-ದೊಡ್ಡ ಪರ್ವತಗಳನ್ನೇ ಅಳ್ಳಾಡಿಸಿಬಿಡುತ್ತಿದ್ದರು. ದೊಡ್ಡ-ದೊಡ್ಡ ವೃಕ್ಷಗಳನ್ನೇ ಭುಜಶಕ್ತಿಯಿಂದ ಕಿತ್ತುಹಾಕುತ್ತಿದ್ದರು. ನದಿಗಳೊಡೆಯನಾದ ಸಮುದ್ರರಾಜನನ್ನೂ ಕಲಕಿಬಿಡುವ ಸಾಮರ್ಥ್ಯವುಳ್ಳವರಾಗಿದ್ದರು. ಕಾಲುಗಳಿಂದಲೇ ಭೂಮಿಯನ್ನು ಸೀಳುವ ಸಾಮರ್ಥ್ಯವು ಅವರಿಗಿದ್ದಿತು. ಮಹಾಸಮುದ್ರವನ್ನೂ ಕ್ಷಣಮಾತ್ರದಲ್ಲಿ ದಾಟುತ್ತಿದ್ದರು. ಆಕಾಶದ ತುದಿಯವರೆಗೂ ಹಾರುತ್ತಿದ್ದರು. ಮೋಡಗಳನ್ನೂ ಹಿಡಿಯುವ ಸಾಮರ್ಥ್ಯವೂ ಅವರಿಗಿದ್ದಿತು. ಅವರು ಕಾಡಿನಲ್ಲಿ ಸಂಚರಿಸುತ್ತಿದ್ದ ಆನೆಗಳ ಸೊಂಡಿಲುಗಳನ್ನು ಹಿಡಿದು ನಿಲ್ಲಿಸುವರು. ಸುಯ್ಯನೆ ಮೇಲಕ್ಕೆ ಹಾರಿ ಆಕಾಶದಲ್ಲಿ ಹಾರುವ ಪಕ್ಷಿಗಳನ್ನೂ ಹಿಡಿದುಬಿಡುವ ಅನುಪಮ ಸಾಮರ್ಥ್ಯವುಳ್ಳವರಾಗಿದ್ದರು. ಇಂತಹ ಅತುಲಪರಾಕ್ರಮವುಳ್ಳ ನೂರು ಲಕ್ಷ ಸಂಖ್ಯೆಯ ಮಹಾತ್ಮರಾದ ಕಪಿಯೋಧರು ಹುಟ್ಟಿದರು. ಆ ವಾನರಯೋಧರಲ್ಲಿ ಹಿಂದೆ ಹೇಳಿದ ವಾಲಿ-ಸುಗ್ರೀವಾದಿಗಳು ಪ್ರಮುಖರಾಗಿದ್ದರು ಮತ್ತು ಆ ಕಪಿಶ್ರೇಷ್ಠರಿಗೆ ವೀರರಾದ ಅನೇಕ ಮಕ್ಕಳೂ ಹುಟ್ಟಿದರು. ಅವರಲ್ಲಿ ಕೆಲವರು ಪರ್ವತದ ತಪ್ಪಲುಗಳಲ್ಲಿಯೂ, ಕೆಲವರು ಬೆಟ್ಟ-ಗುಡ್ಡಗಳಲ್ಲಿಯೂ,

ಕಾಡುಗಳಲ್ಲಿಯೂ ಸಹಸ್ರಸಂಖ್ಯೆಯಲ್ಲಿ ಗುಂಪು-ಗುಂಪಾಗಿ ವಾಸಮಾಡು ತ್ತಿದ್ದರು. ಸೂರ್ಯಪುತ್ರನಾದ ಸುಗ್ರೀವನನ್ನೂ ಮತ್ತು ಇಂದ್ರನ ಮಗನಾದ ವಾಲಿಯನ್ನೂ, ನಲ-ನೀಲ-ಹನುಮಂತ ಮೊದಲಾದ ನಾಯಕರನ್ನೂ ಅನು ಸರಿಸಿ ನೂರು ಲಕ್ಷ ವಾನರರೂ ಇರುತ್ತಿದ್ದರು. ಅವರೆಲ್ಲರೂ ಪಕ್ಷಿರಾಜನಾದ ಗರುಡನಂತೆ ಮಹಾಪರಾಕ್ರಮವುಳ್ಳವರಾಗಿದ್ದರು. ಯುದ್ಧವಿಶಾರದರಾಗಿ ದ್ದರು. ಕಾಡು-ಮೇಡುಗಳಲ್ಲಿ ಅಲೆದಾಡುತ್ತಿರುವಾಗ ಎದುರಿಗೆ ಸಿಕ್ಕುವ ಸಿಂಹ-ವ್ಯಾಘ್ರ-ಸರ್ಪಗಳೇ ಮುಂತಾದ ದುಷ್ಟಪ್ರಾಣಿಗಳನ್ನು ದರ್ಪದಿಂದ ಎದುರಿಸಿ ಮರ್ದನಮಾಡುತ್ತಿದ್ದರು. ಅಂತಹ ಅಪಾರವಾದ ಋಕ್ಷ-ಗೋಪುಚ್ಛ-ವಾನರಸೇನೆಗಳನ್ನು ಮಹಾಬಾಹುವಾದ, ಮಹಾಬಲಶಾಲಿ ಯಾದ, ಅಮಿತಪರಾಕ್ರಮಿಯಾದ ವಾಲಿಯು ತನ್ನ ಭುಜಬಲ-ಪರಾಕ್ರಮ ಗಳಿಂದ ರಕ್ಷಿಸುತ್ತಿದ್ದನು. ಪರ್ವತ-ವನ-ದುರ್ಗಗಳಿಂದಲೂ, ಸಮುದ್ರ ಗಳಿಂದಲೂ ಪರಿಶೋಭಿತಳಾದ ಈ ಭೂದೇವಿಯು ನಾನಾವಿಧವಾದ ಆಕಾರಗಳುಳ್ಳ ಮೇಲೆ ಹೇಳಿದ ಋಕ್ಷ-ಗೋಪುಚ್ಛ-ವಾನರಶ್ರೇಷ್ಠರಿಂದ ತುಂಬಿಹೋದಳು. ಮೇಘಗಳ ಪಂಕ್ತಿಯಿಂದ ಕೂಡಿದ ಪರ್ವತದ ಶಿಖರಗಳಂತೆ–ವಾನರಸೈನ್ಯಗಳಿಂದ ಮಹಾಬಲಶಾಲಿಗಳಾಗಿದ್ದ ವಾಲಿ-ಸುಗ್ರೀ ವಾದಿ ನಾಯಕರು ಪ್ರಕಾಶಿಸುತ್ತಿದ್ದರು. ಹೀಗೆ ಭಯಂಕರರೂಪವುಳ್ಳ, ರಾಮನ ಸಹಾಯಕ್ಕೆ ಕಾರಣಭೂತರಾದ, ವಾನರಸೈನಿಕರಿಂದ ಪೃಥ್ವಿಯು ತುಂಬಿಹೋಯಿತು.

(ಈ ಸರ್ಗವು–**ಪುತ್ರತ್ವಂ ತು ಗತೇ** ವಿಷ್ಣೌ–ಎಂಬುದರಿಂದ ಪ್ರಾರಂಭವಾಗಿದೆ. ಎಂದರೆ ವಿಷ್ಣುವು ದಶರಥನ ಮಗನಾಗಲು ಒಪ್ಪಿದ ನಂತರ ಅಥವಾ ಮಗನಾದನಂತರ ದೇವತೆಗಳಿಗೆ ಬ್ರಹ್ಮನು ಹೇಳುತ್ತಾನೆ : "ರಾಮನ ಸಹಾಯಕ್ಕಾಗಿ ನೀವೆಲ್ಲರೂ ನಿಮ್ಮ-ನಿಮ್ಮ ಅಂಶಗಳಿಂದ ಸಮರ್ಥ ರಾದ ಮಕ್ಕಳನ್ನು ಸೃಷ್ಟಿಸಿರಿ" ಮುಂತಾಗಿ. ಇದರಿಂದಾಗಿ ರಾಮನು ಹುಟ್ಟಿದ ನಂತರ ಅಥವಾ ಹುಟ್ಟುವ ವೇಳೆಗೆ ವಾಲಿ-ಸುಗ್ರೀವರು ಹುಟ್ಟಿದರೇ? ವಾಲಿ-ಸುಗ್ರೀವ, ಹನುಮಂತ ಮತ್ತು ರಾಮ-ಲಕ್ಷ್ಮಣ-ಭರತ-ಶತ್ರುಘ್ನರೆಲ್ಲರೂ ಸಮಕಾಲೀನರೇ ಅಥವಾ ಸಮವಯಸ್ಕರೇ? ಎಂಬ ಪ್ರಶ್ನೆಯು ಹುಟ್ಟುವುದು ಸಹಜವಾಗಿದೆ. ಆದರೆ ಉತ್ತರಕಾಂಡದಲ್ಲಿ ಹೇಳಿರುವ–
ತತಃ ಕದಾಚಿತ್ಕಿಷ್ಕಿನ್ಧಾಂ ನಗರೀಂ ವಾಲಿಪಾಲಿತಮ್ । ಗತ್ವಾಹ್ವಯತಿ

ಯುದ್ಧಾಯ ವಾಲಿನಂ ಹೇಮಮಾಲಿನಮ್ ॥ ಮುಂತಾದ ಕೆಲವು ಶ್ಲೋಕಗಳನ್ನು ವಿಮರ್ಶಾತ್ಮಕವಾಗಿ ಪರಿಶೀಲಿಸಿದಲ್ಲಿ ವಾಲಿ-ಸುಗ್ರೀವರೂ, ಮೈಂದ-ದ್ವಿವಿದರೂ ರಾಮನಿಗಿಂತಲೂ ಬಹಳ ಹಿಂದಿನವರೆಂದೂ ಕಾರ್ತವೀರ್ಯಾರ್ಜುನನ ಸಮಕಾಲೀನರೆಂದೂ ಸ್ಪಷ್ಟವಾಗಿ ಗೋಚರವಾಗುತ್ತದೆ. ಹೀಗಿರುವಾಗ ರಾಮಾವತಾರದ ಸಮಯದಲ್ಲಿಯೇ ಬ್ರಹ್ಮನ ನಿರ್ದೇಶದಂತೆ ವಾಲಿ-ಸುಗ್ರೀವಾದಿಗಳ ಜನ್ಮವಾಯಿತೆಂದರೆ ವಿರೋಧವಾಗಿ ಕಾಣುತ್ತದೆಯಲ್ಲವೇ? ಎಂಬ ಪ್ರಶ್ನೆಗೆ ಒಬ್ಬ ವ್ಯಾಖ್ಯಾನಕಾರರು ಈ ರೀತಿಯಾಗಿ ಸಮಾಧಾನವನ್ನು ಹೇಳಿರುತ್ತಾರೆ. "ವಾಲ್ಮೀಕಿಗಳು ಬಹಳ ಹಿಂದೆಯೇ ನಡೆದ ಕಥಾಭಾಗವನ್ನು ಈ ಪ್ರಕರಣದಲ್ಲಿ ಅಳವಡಿಸಿರುತ್ತಾರೆ. ಪ್ರಾಸಂಗಿಕವಾಗಿ "ಪುತ್ರತ್ವಂ ತು ಗತೇ ವಿಷ್ಣೌ" "ಉವಾಚ ದೇವತಾಃ ಸರ್ವಾಃ ಸ್ವಯಂಭೂರ್ಭಗವಾನಿದಮ್ । ತೇ ತಥೋಕ್ತಾ ಭಗವತಾ...." "ಜನಯಾಮಾಸುರೇವಂ ತೇ ಪುತ್ರಾನ್ವಾನರರೂಪಿಣಃ" ಮುಂತಾದುವು ಪ್ರಾಸಂಗಿಕವಾಗಿ ಹೇಳಿದ ವಾಕ್ಯಗಳೇ ಹೊರತು ವಿಷ್ಣುವಿನ ಅವತಾರಾನಂತರವೇ ನಡೆದ ಕ್ರಿಯೆಗಳಲ್ಲ.)

೧೭ನೆಯ ಸರ್ಗವು ಮುಗಿಯಿತು.

ಋಷ್ಯಶೃಂಗರೂ ರಾಜರೂ ತಮ್ಮ-ತಮ್ಮ ದೇಶಗಳಿಗೆ ಪ್ರಯಾಣಮಾಡಿದುದು : ಅಯೋಧ್ಯೆಗೆ ರಾಣಿಯರೊಡನೆ ದಶರಥನ ಪ್ರತ್ಯಾಗಮನ : ರಾಮ-ಲಕ್ಷ್ಮಣ-ಭರತ-ಶತ್ರುಘ್ನರ ಜನನ : ಮಕ್ಕಳ ಶೀಲ-ಸ್ವಭಾವಗಳು ಮತ್ತು ಗುಣಗಳ ವರ್ಣನೆ : ದಶರಥನ ಸಭೆಗೆ ವಿಶ್ವಾಮಿತ್ರರ ಆಗಮನ

ನಿರ್ವೃತ್ತೇ ತು ಕ್ರತೌ ತಸ್ಮಿನ್ಹಯಮೇಧೇ ಮಹಾತ್ಮನಃ ।
ಪ್ರತಿಗೃಹ್ಯ ಸುರಾ ಭಾಗಾನ್ಪ್ರತಿಜಗ್ಮುರ್ಯಥಾಗತಮ್ ॥೧॥

ದಶರಥನು ಪುತ್ರಪ್ರಾಪ್ತಿಗಾಗಿ ಆರಂಭಿಸಿದ ಅಶ್ವಮೇಧಯಾಗವೂ–

ಪುತ್ರಕಾಮೇಷ್ಟಿಯೂ ಮುಗಿದುವು. ದೇವತೆಗಳೆಲ್ಲರೂ ತಮ್ಮ-ತಮ್ಮ ಹವಿರ್ಭಾಗಗಳನ್ನು ಸ್ವೀಕರಿಸಿ ಸ್ವಸ್ಥಾನಗಳಿಗೆ ತೆರಳಿದರು. ದೀಕ್ಷಾನಿಯಮಗಳೆಲ್ಲವೂ ಕಳೆದು ಅವಭೃಥಸ್ನಾನವಾದನಂತರ ದಶರಥರಾಜನು ಪತ್ನಿಯರ, ದಾಸಿಯರ ಮತ್ತು ಭೃತ್ಯ-ಬಲ-ತುರಗಾದಿಗಳ ಸಮೇತನಾಗಿ ಅಯೋಧ್ಯಾ ಪಟ್ಟಣವನ್ನು ಪ್ರವೇಶಿಸಿದನು. ಅವರವರ ಅಂತಸ್ತಿಗೆ ಅನುಸಾರವಾಗಿ ದಶರಥನಿಂದ ಸತ್ಕೃತರಾದ ರಾಜ-ಮಹಾರಾಜರು ಮುನಿಪುಂಗವರಾದ ವಸಿಷ್ಠರಿಗೆ ನಮಸ್ಕರಿಸಿ, ಆಶೀರ್ವಾದಗಳನ್ನು ಪಡೆದು ಅತ್ಯಾನಂದದಿಂದ ತಮ್ಮ-ತಮ್ಮ ದೇಶಗಳಿಗೆ ತೆರಳಿದರು. ಶ್ರೀಮಂತರಾದ ರಾಜರ ಸೈನ್ಯಗಳಿಗೆ ದಶರಥನು ನೂತನವಸ್ತ್ರಾದಿಗಳನ್ನಿತ್ತು ಸತ್ಕರಿಸಿದನು. ಅವುಗಳನ್ನು ಧರಿಸಿ ಸಂತೋಷದಿಂದ ತೆರಳುತ್ತಿದ್ದ ರಾಜರ ಸೈನ್ಯಗಳು ವಿಶೇಷವಾಗಿ ಪ್ರಕಾಶಿಸಿದುವು. ರಾಜರೆಲ್ಲರೂ ಪ್ರಯಾಣಮಾಡಿದ ಬಳಿಕ ದಶರಥನು ಬ್ರಾಹ್ಮಣರನ್ನು ಮುಂದು ಮಾಡಿಕೊಂಡು ಅರಮನೆಯನ್ನು ಪ್ರವೇಶಿಸಿದನು. ಅಲ್ಲಿ ದಶರಥನು ಮಹರ್ಷಿಗಳಾದ ಋಷ್ಯಶೃಂಗರನ್ನು ಬಹುವಾಗಿ ಸತ್ಕರಿಸಿದನು. ಋಷ್ಯಶೃಂಗರೂ ಸಂತೋಷಭರಿತರಾಗಿ ಶಾಂತಾದೇವಿಯೊಡನೆಯೂ, ರಾಜನಾದ ರೋಮಪಾದನೊಡನೆಯೂ ಮತ್ತು ಭೃತ್ಯರೊಡನೆಯೂ ಅಂಗ ದೇಶಕ್ಕೆ ಪ್ರಯಾಣಮಾಡಿದರು. ಋಷ್ಯಶೃಂಗರನ್ನು ಸತ್ಕರಿಸಿ ಕಳುಹಿಸಿಕೊಟ್ಟಂತೆಯೇ ಇತರ ಋತ್ವಿಜರನ್ನು ದಶರಥನು ಸತ್ಕರಿಸಿ ಅವರವರ ನಿವಾಸಗಳಿಗೆ ಕಳುಹಿಸಿಕೊಟ್ಟು, ಆನಂದದಿಂದ ಪೂರ್ಣವಾದ ಮನಸ್ಸಿನಿಂದ ಕೂಡಿ, ಮಕ್ಕಳ ಜನನವನ್ನೇ ನಿರೀಕ್ಷಿಸುತ್ತಾ ಸುಖದಿಂದ ಕಾಲಕಳೆಯುತ್ತಿದ್ದನು. ಪುತ್ರಕಾಮೇಷ್ಟಿಯಾಗವು ಮುಗಿದು ಆರು ಋತುಗಳು ಕಳೆದುವು. (ಒಂದು ವರ್ಷವಾಯಿತು.)

ತತಶ್ಚ ದ್ವಾದಶೇ ಮಾಸೇ ಚೈತ್ರೇ ನಾವಮಿಕೇ ತಿಥೌ ॥೯॥

ನಕ್ಷತ್ರೇಽದಿತಿದೈವತ್ಯೇ ಸ್ವೋಚ್ಚಸಂಸ್ಥೇಷು ಪಞ್ಚಸು ।
ಗ್ರಹೇಷು ಕರ್ಕಟೇ ಲಗ್ನೇ ವಾಕ್ಪತಾವಿನ್ದುನಾ ಸಹ ॥೧೦॥

ಪ್ರೋದ್ಯಮಾನೇ ಜಗನ್ನಾಥಂ ಸರ್ವಲೋಕನಮಸ್ಕೃತಮ್ ।
ಕೌಸಲ್ಯಾಜನಯದ್ರಾಮಂ ಸರ್ವಲಕ್ಷಣಸಂಯುತಮ್ ।
ವಿಷ್ಣೋರರ್ಧಂ ಮಹಾಭಾಗಂ ಪುತ್ರಮೈಕ್ಷ್ವಾಕುವರ್ಧನಮ್ ॥೧೧॥

ಕೌಸಲ್ಯಾ ಶುಶುಭೇ ತೇನ ಪುತ್ರೇಣಾಮಿತತೇಜಸಾ ।
ಯಥಾ ವರೇಣ ದೇವಾನಾಮದಿತಿರ್ವಜ್ರಪಾಣಿನಾ ॥೧೨॥

ಅಶ್ವಮೇಧಯಾಗದ ಮೊದಲ್ಗೊಂಡು ಹನ್ನೆರಡು ಮಾಸಗಳು ಕಳೆದನಂತರ ಚೈತ್ರಶುದ್ಧನವಮಿಯ ದಿನ ಅದಿತಿದೇವತಾಕವಾದ ಪುನರ್ವಸು ನಕ್ಷತ್ರದಲ್ಲಿ, ಐದು ಗ್ರಹಗಳು ಉಚ್ಚಸ್ಥಾನದಲ್ಲಿರುವಾಗ, ಚಂದ್ರಸಮೇತ ನಾಗಿ ಬೃಹಸ್ಪತಿಯು ವಿಜೃಂಭಿಸುತ್ತಿರಲಾಗಿ–ಸರ್ವಲೋಕನಮಸ್ಕೃತನೂ, ಜಗನ್ನಾಯಕನೂ, ಸರ್ವಲಕ್ಷಣಸಂಪನ್ನನೂ ಆಗಿದ್ದ, ಇಕ್ಷ್ವಾಕುಕುಲ ವರ್ಧನನಾದ, ವಿಷ್ಣುವಿನ ಅರ್ಧಾಂಶದಿಂದ ಕೂಡಿದ್ದ, ಮಹಾಭಾಗನಾದ ಮಹಾಪುರುಷನನ್ನು ಕೌಸಲ್ಯಾದೇವಿಯು ಪ್ರಸವಿಸಿದಳು. ಅದಿತಿಯು ಯಾವ ರೀತಿಯಲ್ಲಿ ದೇವತೆಗಳಲ್ಲಿ ಶ್ರೇಷ್ಠನಾದ ಇಂದ್ರನನ್ನು ಪ್ರಸವಿಸಿ ಯಶಸ್ವಿನಿ ಯಾದಳೋ–ಅದೇ ರೀತಿಯಲ್ಲಿ ಕೌಸಲ್ಯಾದೇವಿಯು ತೇಜಃಪುಂಜವಾದ ಶಿಶುವನ್ನು ಪ್ರಸವಿಸಿ ಕಂಗೊಳಿಸಿದಳು.* ಸಾಕ್ಷಾದ್ವಿಷ್ಣುವಿನ ನಾಲ್ಕನೇ ಒಂದು ಅಂಶದಿಂದ ಕೂಡಿ ಸಕಲಕಲ್ಯಾಣಗುಣಸಂಪನ್ನನಾದ, ಸತ್ಯಪರಾಕ್ರಮನಾದ ಭರತನೆಂಬ ಹೆಸರಿನ ರಾಜಪುತ್ರನು ಕೈಕೇಯಿಯಲ್ಲಿ ಹುಟ್ಟಿದನು. ಸರ್ವಾಸ್ತ್ರ ಕುಶಲರಾದ, ವೀರರಾದ, ವಿಷ್ಣುವಿನ ಅರ್ಧಾಂಶಸಮನ್ವಿತರಾದ ಲಕ್ಷ್ಮಣ-ಶತ್ರುಘ್ನರೆಂಬ ಯಮಳರನ್ನು ಸುಮಿತ್ರಾದೇವಿಯು ಪ್ರಸವಿಸಿದಳು. ಪುಷ್ಯ ನಕ್ಷತ್ರದಲ್ಲಿ ಮೀನಲಗ್ನದಲ್ಲಿ ದಶಮಿಯ ದಿನ ಪ್ರಸನ್ನಮನಸ್ಕನಾದ ಭರ ತನೂ, ಸರ್ಪದೇವತಾಕವಾದ ಆಶ್ಲೇಷಾನಕ್ಷತ್ರದಲ್ಲಿ ಕರ್ಕಾಟಕಲಗ್ನದಲ್ಲಿ ದಶ ಮಿಯ ದಿನ ಲಕ್ಷ್ಮಣ-ಶತ್ರುಘ್ನರೂ ಜನಿಸಿದರು. ಮಹಾತ್ಮರೂ, ಸಕಲಗುಣ ಪರಿಪೂರ್ಣರೂ, ಗುಣಗಳಿಗೆ ಅನುಗುಣವಾದ ರೂಪವಂತರೂ, ಪ್ರೋಷ್ಠ ಪದಕ್ಕೆ[1] ಅನುರೂಪವಾದ ಕಾಂತಿಯಿಂದ ಕೂಡಿದ್ದವರೂ ಆಗಿದ್ದ ನಾಲ್ವರು ಮಕ್ಕಳು ಪ್ರತ್ಯೇಕವಾಗಿ ಜನಿಸಿದರು. ಮಹಾಮಹಿಮರಾದ ರಾಮ-ಲಕ್ಷ್ಮಣ-

---

* ವಜ್ರಪಾಣಿನಾ–ಎಂಬುದಕ್ಕೆ ವಜ್ರಾಯುಧಧರನಾದ ದೇವೇಂದ್ರನೆಂದೂ ಮತ್ತು ವಜ್ರರೇಖಾಂಕಿತವಾದ ಹಸ್ತಗಳಿಂದ ಕೂಡಿದ ಉಪೇಂದ್ರ ಅಥವಾ ವಿಷ್ಣುವೆಂದೂ ವ್ಯಾಖ್ಯಾನಕಾರರು ವ್ಯಾಖ್ಯಾನಮಾಡಿರುತ್ತಾರೆ. ಈ ಎರಡು ಪರ್ಯಾಯಗಳಲ್ಲಿಯೂ 'ಅದಿತಿ' ಪದವು ಸಮನ್ವಯವಾಗುತ್ತದೆ.

[1] "ಪ್ರೋಷ್ಠಃ = ಗೌಃ, ತಸ್ಯೇವ ಪದೇ ಯೇಷಾಂ ತೇ ಪ್ರೋಷ್ಠಪದಾಃ"– ಗೋವಿನ

ಭರತ-ಶತ್ರುಘ್ನರು ಹುಟ್ಟಿದ ಕಾಲದಲ್ಲಿ ಗಂಧರ್ವರು ಮಧುರವಾಗಿ ಗಾಯನ ಮಾಡಿದರು. ಅಪ್ಸರೆಯರು ನರ್ತನಮಾಡಿದರು. ದೇವದುಂದುಭಿಗಳು ಮೊಳಗಿದುವು. ಆಕಾಶದಿಂದ ಪುಷ್ಪವೃಷ್ಟಿಯಾಯಿತು. ಅಯೋಧ್ಯಾಪಟ್ಟಣದಲ್ಲಿಯೂ ಜನರು ಆನಂದಭರಿತರಾಗಿ ಮನೆಗಳಲ್ಲಿ ಉತ್ಸವವನ್ನು ನಡೆಸಿದರು. ಪ್ರಜೆಗಳ ಸಮೂಹದಿಂದಲೂ, ನಟ-ನರ್ತಕರ ಸಮೂಹದಿಂದಲೂ, ಗಾಯಕರಿಂದಲೂ, ನಾಗಸ್ವರಾದಿ ಸುಮಧುರಶಬ್ದಗಳಿಂದಲೂ ಅಯೋಧ್ಯಾಪಟ್ಟಣದ ಎಲ್ಲ ಬೀದಿಗಳೂ ತುಂಬಿಹೋದುವು. ಶ್ರೀರಾಮನ ಜನನವಾಯಿತೆಂದು ಕೇಳಿದೊಡನೆಯೇ ಆನಂದಭರಿತರಾದ ಪ್ರಜೆಗಳು ಕುಣಿದಾಡಿದರು. ಗಾಯಕರು ವೀಣಾ-ಮೃದಂಗಗಳೊಡನೆ ಸುಮಧುರವಾಗಿ ಗಾನಮಾಡಿದರು. ಗಾನವನ್ನನುಸರಿಸಿ ನರ್ತಕರು ನೃತ್ಯಮಾಡಿದರು. ಪ್ರಜೆಗಳೆಲ್ಲರೂ ಸಂತೋಷಾಧಿಕ್ಯದಿಂದ ರತ್ನಹಾರಗಳನ್ನು ಧರಿಸಿ ವಿಶೇಷವಾಗಿ ಪ್ರಕಾಶಿಸಿದರು. ಪೌರಾಣಿಕರಿಗೂ, ವಂಶಾವಳಿಯನ್ನು ಕೀರ್ತನಮಾಡುವವರಿಗೂ, ಸ್ತುತಿಪಾಠಕರಿಗೂ ಅವರವರಿಗೆ ಯೋಗ್ಯವಾದ ಬಹುಮಾನಗಳನ್ನು ಪುತ್ರೋತ್ಸವ ಸಮಾರಂಭದಲ್ಲಿ ದಶರಥನು ವಿತರಣೆಮಾಡಿದನು. ಬ್ರಾಹ್ಮಣರಿಗೆ ಸಾವಿರಾರು ಗೋವುಗಳನ್ನೂ, ಧನವನ್ನೂ ದಾನಮಾಡಿದನು. ಹನ್ನೊಂದನೆಯ ದಿನವು ಕಳೆದ ನಂತರ ದಶರಥರಾಜನು ನಾಲ್ವರು ಮಕ್ಕಳಿಗೂ ನಾಮಕರಣವನ್ನು ಮಾಡಿದನು.* ಪರಮಪ್ರೀತರಾದ ವಸಿಷ್ಠರು ಮಹಾತ್ಮನಾದ ಹಿರಿಯ ಮಗನಿಗೆ

ಕಾಲಿನಂತೆ ಇರುವ ಕಾಲುಗಳುಳ್ಳವು ಪ್ರೋಷ್ಠಪದಗಳು. ೨) ಪೂರ್ವಾಭಾದ್ರ ಮತ್ತು ಉತ್ತರಾಭಾದ್ರನಕ್ಷತ್ರಗಳಲ್ಲಿರುವ ಎಂಟು ಪಾದಗಳನ್ನೂ ಎರಡೆರಡು ಪಾದಗಳಾಗಿ ವಿಂಗಡಿಸಿದರೆ ಪ್ರಾಪ್ತವಾಗುವ ನಾಲ್ಕು ಭಾಗಗಳಿಗೆ 'ಪ್ರೋಷ್ಠಪದಾಃ' ಎಂದು ಜ್ಯೋತಿಷಶಾಸ್ತ್ರದಲ್ಲಿ ಹೇಳಿದೆ. ವೇದದಲ್ಲಿಯೂ ಸಹ– "ಚತ್ವಾರ ಏಕಮಭಿಕರ್ಮ ದೇವಾಃ । ಪ್ರೋಷ್ಠಪದಾಸ ಇತಿ ಯಾನ್ ವದನ್ತಿ ॥" –ಎಂದು ಹೇಳಿದೆ. ೩) ಪ್ರೋಷ್ಠಃ = ಹಸು, ಅದರ ಪಾದಗಳಂತೆ ಉಪಮೆಯುಳ್ಳ ನಾಲ್ವರು ಮಕ್ಕಳು; ಎಂದರೆ ಹಸುವಿನ ಪ್ರತಿಯೊಂದು ಕಾಲಿನ ಎರಡು ಗೊರಸುಗಳು ಹೊಂದಿಕೊಂಡಿರುವಂತೆ ರಾಮ-ಲಕ್ಷ್ಮಣರು ಮತ್ತು ಭರತ-ಶತ್ರುಘ್ನರು ಒಬ್ಬರಿಗೊಬ್ಬರು ಹೊಂದಿಕೊಂಡಿದ್ದರೆಂದು ತಾತ್ಪರ್ಯ.

* ಹನ್ನೊಂದನೆಯ ದಿನವೆಂದು ಹೇಳಿರುವುದು ಸ್ವಲ್ಪ ಜಿಜ್ಞಾಸೆಗೆ ಕಾರಣವಾಗಿದೆ. ಏಕೆಂದರೆ : "ಕ್ಷತ್ರಿಯಸ್ಯ ದ್ವಾದಶಾಹಂ ಸೂತಕಂ", "ತ್ರಯೋದಶೇ ರಾಜ್ಞೋ

ಶ್ರೀರಾಮನೆಂದೂ, ಕೈಕೇಯಿಯ ಮಗನಿಗೆ ಭರತನೆಂದೂ, ಸುಮಿತ್ರೆಯ ಮಕ್ಕಳಿಗೆ ಲಕ್ಷ್ಮಣ-ಶತ್ರುಘ್ನರೆಂದೂ ಹೆಸರುಗಳನ್ನಿಟ್ಟರು. ನಾಲ್ವರು ಮಕ್ಕಳಿಗೂ ನಾಮಕರಣವಾದನಂತರ ದಶರಥರಾಜನು ಪಟ್ಟಣದಲ್ಲಿದ್ದ ಬ್ರಾಹ್ಮಣ ರಿಗೆಲ್ಲರಿಗೂ ಮೃಷ್ಟಾನ್ನಭೋಜನವನ್ನು ಮಾಡಿಸಿದನು. ಅನರ್ಘ ವಾದ ರತ್ನ ಗಳನ್ನು ಭೂರಿದಕ್ಷಿಣೆಯಾಗಿ ಕೊಟ್ಟನು. ಕಾಲಕ್ರಮದಲ್ಲಿ ದಶರಥರಾಜನು ಮಕ್ಕಳ ಅನ್ನಪ್ರಾಶನ–ಚೌಲೋಪನಯನಾದಿಗಳೆಲ್ಲವನ್ನೂ ವಸಿಷ್ಠರಿಂದ ಮಾಡಿಸಿದನು. ದಶರಥನ ನಾಲ್ವರು ಮಕ್ಕಳಲ್ಲಿ ಧ್ವಜಪ್ರಾಯನಾಗಿದ್ದ (ಕುಲಪ್ರಕಾಶಕನಾಗಿದ್ದ), ಜ್ಯೇಷ್ಠಪುತ್ರನಾದ ಶ್ರೀರಾಮನು ತಂದೆಗೆ ಬಹಳ ಪ್ರಿಯನಾಗಿದ್ದನು. ತಂದೆಗೆ ಮಾತ್ರವಲ್ಲ–ಸಕಲಪ್ರಾಣಿಗಳಿಗೂ ಬ್ರಹ್ಮನು ಪೂಜ್ಯ ನಾಗಿರುವಂತೆ–ಪ್ರಜೆಗಳೆಲ್ಲರಿಗೂ ಅವನು ಪ್ರಿಯತಮನಾಗಿದ್ದನು. ರಾಮ-ಲಕ್ಷ್ಮಣ-ಭರತ-ಶತ್ರುಘ್ನರೆಲ್ಲರೂ ವೇದಾಧ್ಯಯನಸಂಪನ್ನರಾಗಿದ್ದರು. ತತ್ತ್ವಜ್ಞಾನ ವನ್ನು ಪಡೆದವರಾಗಿದ್ದರು. ಕ್ಷತ್ರಿಯರಿಗಿರಬೇಕಾದ ಸಕಲಗುಣಗಳಿಂದ ಅವರು ಪರಿಪೂರ್ಣರಾಗಿದ್ದರು. ಆ ನಾಲ್ವರ ಮಧ್ಯದಲ್ಲೂ ಶ್ರೀರಾಮನು ಮಹಾತೇಜಸ್ವಿಯೂ, ಸತ್ಯವಾದ ಪರಾಕ್ರಮವುಳ್ಳವನೂ, ಶರಚ್ಚಂದ್ರನಂತೆ ಸಕಲ ರಿಗೂ ಆನಂದದಾಯಕನೂ ಆಗಿದ್ದನು. ಶ್ರೀರಾಮಚಂದ್ರನು ಆನೆಗಳ ಮೇಲೆ ಸವಾರಿ ಮಾಡುವುದರಲ್ಲಿಯೂ ಮತ್ತು ರಥಾರೋಹಣದಲ್ಲಿಯೂ ಕುಶಲ ನಾಗಿದ್ದನು. ಶ್ರೀರಾಮಚಂದ್ರನಿಗೆ ಗಜಶಾಸ್ತ್ರ-ಅಶ್ವಶಾಸ್ತ್ರ-ರಥಶಾಸ್ತ್ರಗಳೆಲ್ಲವೂ

ನಾಮಕರಣಮ್ " ಎಂಬುದಾಗಿ ಸ್ಮೃತಿವಚನವಿದೆ. ಆದುದರಿಂದ ಅತೀತ್ಯೈಕಾದಶಾಹಂ ಎಂದರೆ ಹನ್ನೆರಡನೆಯ ದಿನವನ್ನು ಕಳೆದು ಎಂದು ಅರ್ಥಮಾಡಲು ವ್ಯಾಖ್ಯಾನಕಾರರು ಪ್ರಯತ್ನಿಸಿದ್ದಾರೆ. ೧) ಹುಟ್ಟಿದ ದಿನ ಬಿಟ್ಟು ಹನ್ನೊಂದು ದಿನಗಳನ್ನು ಕಳೆದು ಅರ್ಥಾತ್ ಹನ್ನೆರಡು ದಿನಗಳ ಸೂತಕವು ಕಳೆದನಂತರ ಹದಿಮೂರನೆಯ ದಿನ ೨) ಏಕಶ್ಚೈಕಸ್ಯ = ಏಕೌ ಒಂದು + ಒಂದು ಎಂದರೆ ಎರಡು. ತೌ ಚ ದಶ ಚ = ಏಕಾದಶ. ತೇಷಾಂ ಸಂಖ್ಯಾ ಪೂರಕಮೇಕಾದಶಂ. ತದೇವ ಅಹಂ ದ್ವಾದಶದಿನಾನೀತ್ಯರ್ಥಃ –ಎರಡು ಮತ್ತು ಹತ್ತು = ಹನ್ನೆರಡು. ಈ ರೀತಿಯಾಗಿ ವ್ಯುತ್ಪತ್ತಿಮಾಡಿ 'ಏಕಾದಶ' ಎಂಬುದಕ್ಕೆ ಹನ್ನೆರಡೆಂದು ವಿದ್ವಾಂಸರೊಬ್ಬರು ಅರ್ಥಮಾಡಿರುತ್ತಾರೆ. ೩) ಲಕ್ಷ್ಮಣನ ಜನ್ಮದಿನದಿಂದ ಹನ್ನೊಂದು ದಿನಗಳು ಕಳೆದಲ್ಲಿ ರಾಮನು ಹುಟ್ಟಿ ಹನ್ನೆರಡು ದಿನಗಳು ಕಳೆದಂತಾಗುತ್ತವೆ. ರಾಮನು ನವಮಿಯ ದಿನವೂ ಲಕ್ಷ್ಮಣ-ಭರತ-ಶತ್ರುಘ್ನರು ದಶಮಿಯ ದಿನವೂ ಹುಟ್ಟಿದರು.

ತಿಳಿದಿದ್ದುವು. ಅವನು ಧನುರ್ವೇದದಲ್ಲಿ ನಿಸ್ಸೀಮನಾಗಿದ್ದನು. ಪಿತೃಶುಶ್ರೂಷೆಯಲ್ಲಿ ಸರ್ವದಾ ನಿರತನಾಗಿದ್ದನು. ಸಂಪದ್ವರ್ಧಕನಾದ ಲಕ್ಷ್ಮಣನು ಚಿಕ್ಕಂದಿನಿಂದಲೂ ಹಿರಿಯಣ್ಣನಾದ, ಲೋಕಾಭಿರಾಮನಾದ ಶ್ರೀರಾಮಚಂದ್ರನಿಗೆ ಹೆಚ್ಚು ಪ್ರಿಯನಾಗಿದ್ದನು. ಶೋಭಾಯುಕ್ತನಾದ ಲಕ್ಷ್ಮಣನು–ಸಕಲಪ್ರಜೆಗಳಿಗೂ, ಸಕಲಪ್ರಾಣಿಗಳಿಗೂ ಶರಚ್ಚಂದ್ರನಂತೆ ನೇತ್ರಾನಂದಕರನಾದ ಶ್ರೀರಾಮಚಂದ್ರನಿಗೆ ಶರೀರಕ್ಕಿಂತಲೂ ಪ್ರಿಯತರನಾಗಿದ್ದನು. ತನ್ನ ಮತ್ತೊಂದು ಪ್ರಾಣವು ಹೊರಗೆ ಬಂದು ಲಕ್ಷ್ಮಣನ ರೂಪದಲ್ಲಿದೆಯೆಂದೇ ಶ್ರೀರಾಮಚಂದ್ರನು ಭಾವಿಸಿದ್ದನು. ಪುರುಷೋತ್ತಮನಾದ ಶ್ರೀರಾಮಚಂದ್ರನು, ಲಕ್ಷ್ಮಣನು ತನ್ನ ಜೊತೆಯಲ್ಲಿ ಮಲಗಿರದಿದ್ದರೆ ನಿದ್ರೆಯನ್ನೇ ಮಾಡುತ್ತಿರಲಿಲ್ಲ. ಜೊತೆಯಲ್ಲಿ ಊಟಕ್ಕೆ ಕುಳಿತಿರದಿದ್ದರೆ ಮೃಷ್ಟಾನ್ನವನ್ನೂ ತಿನ್ನುತ್ತಿರಲಿಲ್ಲ. "**ರಾಮಸ್ಯ ದಕ್ಷಿಣೋಬಾಹುರ್ನಿತ್ಯಂ ಪ್ರಾಣೋ ಬಹಿ ಶ್ಚರಃ॥**" ರಾಮನಿಗೆ ಲಕ್ಷ್ಮಣನು ಬಲಗೈಯಂತಿದ್ದನು. ಹೊರಗೆ ಓಡಾಡುವ ಪ್ರಾಣದಂತಿದ್ದನು. ಶ್ರೀರಾಮಚಂದ್ರನು ಕುದುರೆಯನ್ನು ಹತ್ತಿ ಮೃಗಗಳ ಬೇಟೆಗಾಗಿ ಹೊರಟನೆಂದರೆ–ಲಕ್ಷ್ಮಣನೂ ಧನುರ್ಧಾರಿಯಾಗಿ ಅವನ ಹಿಂದೆಯೇ ಹೊರಡುತ್ತಿದ್ದನು. ಲಕ್ಷ್ಮಣನು ಹೇಗೆ ರಾಮನಿಗೆ ಪ್ರಿಯತಮನಾಗಿದ್ದನೋ ಲಕ್ಷ್ಮಣನ ಒಡಹುಟ್ಟಿದ ಶತ್ರುಘ್ನನೂ ರಾಮನನ್ನು ಅನುಸರಿಸಿ ಹುಟ್ಟಿದ ಭರತನಿಗೆ ಪ್ರಾಣಪ್ರಿಯನಾಗಿದ್ದನು. ಮಹಾಭಾಗ್ಯವಂತರಾದ ಆ ನಾಲ್ವರು ಪರಮಪ್ರಿಯರಾದ ಮಕ್ಕಳಿಂದ ದಶರಥರಾಜನು–ನಾಲ್ಕು ವೇದಗಳಿಂದ ಕೂಡಿದ ಬ್ರಹ್ಮನಂತೆ–ಆನಂದಭರಿತನಾದನು. ಅವರು ಜ್ಞಾನಸಂಪನ್ನರೂ, ಸಕಲಸದ್ಗುಣಸಂಪನ್ನರೂ, ದುಷ್ಟಕಾರ್ಯಗಳಲ್ಲಿ ನಾಚಿಕೆಪಡುವವರೂ, ಲೋಕಮರ್ಯಾದೆಯನ್ನು ಕಾಪಾಡುವ ಕೀರ್ತಿಯನ್ನು ಗಳಿಸಿದವರೂ ಸಕಲವಿಧವಾದ ನೀತಿಶಾಸ್ತ್ರಗಳನ್ನು ತಿಳಿದವರೂ ದೂರಾಲೋಚನೆಯುಳ್ಳವರೂ ಆಗಿದ್ದರು. ಅತುಲಪ್ರಭಾವಯುಕ್ತರೂ, ಮಹಾತೇಜಸ್ವಿಗಳೂ ಆದ ಅವರನ್ನು ಕಂಡು ತಂದೆಯಾದ ದಶರಥನು ಲೋಕಗಳಿಗೆ ಒಡೆಯನಾದ ಬ್ರಹ್ಮನಂತೆಯೇ ಸಂತುಷ್ಟನಾದನು. ಪುರುಷವ್ಯಾಘ್ರರಾದ ರಾಮ-ಲಕ್ಷ್ಮಣ-ಭರತ-ಶತ್ರುಘ್ನರು ವೇದ-ವೇದಾಂಗಗಳ ಮತ್ತು ಸ್ಮೃತಿ-ಪುರಾಣಾದಿಗಳ ಅಧ್ಯಯನದಲ್ಲಿಯೂ ತಾಯಿ-ತಂದೆಗಳ ಮತ್ತು ಗುರುಗಳ ಶುಶ್ರೂಷೆಗಳಲ್ಲಿಯೂ ನಿರತರಾಗಿದ್ದರು. ಧನುರ್ವಿದ್ಯೆಯಲ್ಲಿಯೂ ನೈಪುಣ್ಯವನ್ನು ಹೊಂದಿ

ದ್ದರು. ಹೀಗೆ ಮಕ್ಕಳು ಪ್ರಾಪ್ತವಯಸ್ಕರಾಗಲು ಧರ್ಮಾತ್ಮನಾದ ದಶರಥರಾಜನು ಆಚಾರ್ಯರೊಡನೆ ಮತ್ತು ಬಂಧುಗಳೊಡನೆ ಮಕ್ಕಳ ವಿವಾಹದ ವಿಷಯವಾಗಿ ಸಮಾಲೋಚಿಸುತ್ತಿದ್ದನು. ಆಗ ಇದ್ದಕ್ಕಿದ್ದಂತೆ ಅವನ ಅರಮನೆಯ ಬಾಗಿಲಿಗೆ ಮಹಾತೇಜಸ್ವಿಗಳಾದ, ಮುನಿಶ್ರೇಷ್ಠರಾದ ವಿಶ್ವಾಮಿತ್ರರು ಆಗಮಿಸಿದರು. ದಶರಥನ ದರ್ಶನಾಕಾಂಕ್ಷಿಗಳಾಗಿದ್ದ ವಿಶ್ವಾಮಿತ್ರರು ದ್ವಾರಪಾಲಕರಿಗೆ ಹೇಳಿದರು :

"ಗಾಧಿಯ ಮಗನಾದ, ಕುಶಿಕಗೋತ್ರೋತ್ಪನ್ನನಾದ, ವಿಶ್ವಾಮಿತ್ರನು ರಾಜನ ದರ್ಶನಕಾಂಕ್ಷಿಯಾಗಿ ಬಂದಿರುವನೆಂದು ಒಡನೆಯೇ ದಶರಥನಿಗೆ ಹೇಳಿರಿ."

ಮಹರ್ಷಿಗಳ ಮಾತನ್ನು ಕೇಳಿದೊಡನೆಯೇ ಸಂಭ್ರಮಗೊಂಡ ದ್ವಾರ ಪಾಲಕರು ಅವರ ಮಾತಿನಂತೆ ಮಹರ್ಷಿಗಳು ಬಂದಿರುವ ವಾರ್ತೆಯನ್ನು ರಾಜನಿಗೆ ತಿಳಿಸುವ ಸಲುವಾಗಿ ಅರಮನೆಯೊಳಗೆ ಧಾವಿಸಿ, ವಿಶ್ವಾಮಿತ್ರರು ಬಂದಿರುವುದನ್ನು ತಿಳಿಸಿ ಅವರು ಹೇಳಿಕಳುಹಿಸಿದ್ದ ವಾಕ್ಯವನ್ನೇ ಇಕ್ಷ್ವಾಕು ವಂಶಜನಾದ ರಾಜನಿಗೆ ಹೇಳಿದರು. ದ್ವಾರಪಾಲಕರ ಮಾತನ್ನು ಕೇಳಿದೊಡ ನೆಯೇ ಏಕಾಗ್ರಚಿತ್ತನಾದ, ಆನಂದಭರಿತನಾದ ದಶರಥನು ಪುರೋಹಿತ ರಿಂದೊಡಗೂಡಿ–ಇಂದ್ರನು ಬ್ರಹ್ಮನನ್ನು* (ಬೃಹಸ್ಪತಿಯನ್ನು) ಎದುರು ಗೊಂಡು ಕರೆತರುವಂತೆ–ವಿಶ್ವಾಮಿತ್ರರನ್ನು ಅರಮನೆಯೊಳಗೆ ಕರೆತರುವ ಸಲುವಾಗಿ ಮಹಾದ್ವಾರದ ಕಡೆಗೆ ಹೊರಟನು. ತಪೋಜನಿತವಾದ ಪ್ರಕಾಶ ದಿಂದ ಪ್ರಜ್ವಲಿಸುತ್ತಿದ್ದ, ತೀಕ್ಷ್ಣವಾದ ವ್ರತಾನುಷ್ಠಾನವುಳ್ಳ, ತಪಸ್ವಿಗಳಾದ ವಿಶ್ವಾಮಿತ್ರರನ್ನು ಸಂದರ್ಶಿಸಿ ಆನಂದಭರಿತನಾದ ದಶರಥನು ವಸಿಷ್ಠರ ಮೂಲಕ ಅರ್ಘ್ಯ-ಪಾದ್ಯಾದಿಗಳನ್ನು ವಿಶ್ವಾಮಿತ್ರರಿಗೆ ಸಮರ್ಪಿಸಿದನು. ರಾಜನಿಂದ ಯಥಾಶಾಸ್ತ್ರವಾಗಿ ಕೊಡಲ್ಪಟ್ಟ ಅರ್ಘ್ಯ-ಪಾದ್ಯಾಚಮನೀಯಾದಿ

---

* ಇಲ್ಲಿ 'ಬ್ರಹ್ಮಾಣಂ' ಎಂಬುದಕ್ಕೆ ವ್ಯಾಖ್ಯಾನಕಾರರು 'ಬೃಹಸ್ಪತಿ' ಎಂದು ಅರ್ಥ ಮಾಡುತ್ತಾರೆ. 'ಬೃಹಸ್ಪತಿರ್ದೇವಾನಾಂ ಬ್ರಹ್ಮಾ' ಎಂಬ ಶ್ರುತ್ಯುಕ್ತಿಯೇ ಇದಕ್ಕೆ ಆಧಾರವಾಗಿದೆ.

ಗಳನ್ನು ವಿಶ್ವಾಮಿತ್ರರು ಪ್ರತಿಗ್ರಹಿಸಿ, ಕುಶಲಪ್ರಶ್ನೆಯನ್ನೂ ರಾಜ್ಯದ ಅಭಿವೃದ್ಧಿಯ ವಿಷಯವನ್ನೂ ಕೇಳಿದರು. ಪರಮಧಾರ್ಮಿಕರಾದ ವಿಶ್ವಾಮಿತ್ರರು ಅಯೋಧ್ಯಾನಗರಿಯ ಮತ್ತು ಕೋಸಲದೇಶದ ಪ್ರಜೆಗಳ, ರಾಜನ ಬಂಧುವರ್ಗದವರ ಮತ್ತು ಸ್ನೇಹಿತರ ಯೋಗಕ್ಷೇಮಗಳನ್ನೂ ವಿವರವಾಗಿ ಕೇಳಿ ತಿಳಿದುಕೊಂಡರು.

"ಮಹಾರಾಜ! ಸಾಮಂತರಾಜರು ನಿನಗೆ ವಿಧೇಯರಾಗಿರುವರೇ? ಆಶ್ರಿತರಾಜರಾಗದ ಶತ್ರುರಾಜರನ್ನು ನಿಗ್ರಹಿಸಿ ಆಶ್ರಿತರನ್ನಾಗಿ ಮಾಡಿಕೊಂಡಿರುವೆಯಾ? ದೇವಸಂಬಂಧವಾದ ಯಜ್ಞ-ಯಾಗಾದಿಗಳೂ ಮಾನುಷಸಂಬಂಧವಾದ ಅತಿಥಿ-ಅಭ್ಯಾಗತರ ಸತ್ಕಾರಾದಿಕರ್ಮಗಳೂ ಸರಿಯಾಗಿ ನಡೆಯುತ್ತಿವೆಯೇ?"

ದಶರಥನು ಎಲ್ಲ ಪ್ರಶ್ನೆಗಳಿಗೂ ಯಥೋಚಿತವಾಗಿ ಉತ್ತರಿಸಿದ ನಂತರ ವಿಶ್ವಾಮಿತ್ರರು ಮಹಾಭಾಗರಾದ ವಸಿಷ್ಠರನ್ನೂ, ವಾಮದೇವಾದಿ ಇತರ ಋಷಿಗಳನ್ನೂ ಸಂಧಿಸಿ ಕುಶಲಪ್ರಶ್ನೆಗಳನ್ನು ಮಾಡಿದರು. ವಿಶ್ವಾಮಿತ್ರರ ಆಗಮನದಿಂದ ಸಕಲರೂ ಸಂತೋಷಗೊಂಡು ರಾಜಸಭೆಯನ್ನು ಪ್ರವೇಶಿಸಿದರು. ದಶರಥನಿಂದ ಎಲ್ಲ ಋಷಿಗಳೂ ಸತ್ಕೃತರಾಗಿ ಯಥಾಯೋಗ್ಯವಾದ ಆಸನಗಳಲ್ಲಿ ಕುಳಿತುಕೊಂಡರು. ವಿಶ್ವಾಮಿತ್ರರ ಆಗಮನದಿಂದಾದ ಆನಂದದಿಂದ ಪುಲಕಿತನಾದ ದಶರಥನು ಮಹರ್ಷಿಗಳನ್ನು ನಾನಾವಿಧವಾಗಿ ಸ್ತೋತ್ರಮಾಡುತ್ತಾ ಹೇಳಿದನು :

ಯಥಾಮೃತಸ್ಯ ಸಂಪ್ರಾಪ್ತಿರ್ಯಥಾ ವರ್ಷಮನೂದಕೇ ।
ಯಥಾ ಸದೃಶದಾರೇಷು ಪುತ್ರಜನ್ಮಾಪ್ರಜಸ್ಯ ಚ ॥೫೦॥

ಪ್ರಣಷ್ಟಸ್ಯ ಯಥಾ ಲಾಭೋ ಯಥಾ ಹರ್ಷೋ ಮಹೋದಯೇ ।
ತಥೈವಾಗಮನಂ ಮನ್ಯೇ ಸ್ವಾಗತಂ ತೇ ಮಹಾಮುನೇ ॥೫೧॥

"ಮಹರ್ಷಿಗಳೇ! ಅಮೃತಪ್ರಾಪ್ತಿಯಿಂದ ಎಷ್ಟು ಸಂತೋಷವುಂಟಾಗುವುದೋ, ಅನಾವೃಷ್ಟಿಕಾಲದಲ್ಲಿ ಮಳೆಯು ಬಂದರೆ ಎಷ್ಟು ಸಂತಸವಾಗುವುದೋ, ಮಕ್ಕಳಿಲ್ಲದೇ ಪರಿತಪಿಸುತ್ತಿರುವವನಿಗೆ ಸಮಾನಕುಲ-ಶೀಲವಿಶಿಷ್ಟಳಾದ, ಸಾಧ್ವಿಯಾದ ಪತ್ನಿಯಲ್ಲಿ ಮಗನು ಹುಟ್ಟಿದರೆ ಎಷ್ಟು ಸಂತೋಷವಾಗುವುದೋ, ಸರ್ವಥಾ ನಷ್ಟವಾಯಿತೆಂದು ಭಾವಿಸಿದ್ದ ಅಮೂಲ್ಯವಸ್ತು

ವಿನ ಲಾಭವುಂಟಾದರೆ ಎಷ್ಟು ಸಂತೋಷವಾಗುವುದೋ, ಮಹೋದಯಾದಿ ಪುಣ್ಯಕಾಲಗಳು ಮತ್ತು ಪುತ್ರವಿವಾಹಾದ್ಯುತ್ಸವಗಳು ಮನುಷ್ಯನಿಗೆ ಎಷ್ಟೊಂದು ಆನಂದವನ್ನುಂಟುಮಾಡುವುವೋ–ಅಂತಹ ಅನಿರ್ವಚನೀಯವಾದ ಆನಂದವು ಇಂದು ನನಗೆ ತಮ್ಮ ಆಗಮನದಿಂದ ಉಂಟಾಗಿದೆ. ಮಹಾನುಭಾವರೇ! ತಮಗೆ ಸ್ವಾಗತವನ್ನು ಬಯಸುತ್ತೇನೆ. ಮಹರ್ಷಿಗಳೇ! ನೀವು ಇಚ್ಛಿಸಿ ಬಂದಿರುವ ಕಾರ್ಯವೇನು? ಆ ನಿಮ್ಮ ಕಾರ್ಯವನ್ನು ಪರಮ ಸಂತೋಷದಿಂದ ಮಾಡಿಕೊಡುವೆನು. ನನ್ನ ಸಕಲವಿಧವಾದ ಸೇವೆಗೂ ನೀವು ಸತ್ಪಾತ್ರರಾಗಿರುವಿರಿ. ಬ್ರಾಹ್ಮಣೋತ್ತಮರೇ! ನಿಶ್ಚಯವಾಗಿಯೂ ಇಂದು ನನ್ನ ಅತ್ಯಂತ ಒಳ್ಳೆಯ ಅದೃಷ್ಟದಿಂದಲೇ ನೀವು ಆಗಮಿಸಿರುವಿರಿ.

ಅದ್ಯ ಮೇ ಸಫಲಂ ಜನ್ಮ ಜೀವಿತಂ ಚ ಸುಜೀವಿತಮ್ ।
ಯಸ್ಮಾದ್ವಿಪ್ರೇನ್ದ್ರಮದ್ರಾಕ್ಷಂ ಸುಪ್ರಭಾತಾ ನಿಶಾ ಮಮ ॥೫೩॥

ಪೂರ್ವಂ ರಾಜರ್ಷಿಶಬ್ದೇನ ತಪಸಾ ದ್ಯೋತಿತಪ್ರಭಃ ।
ಬ್ರಹ್ಮರ್ಷಿತ್ವಮನುಪ್ರಾಪ್ತಃ ಪೂಜ್ಯೋಽಸಿ ಬಹುಧಾ ಮಯಾ ॥

ತದದ್ಭುತಮಿದಂ ಬ್ರಹ್ಮನ್ಪವಿತ್ರಂ ಪರಮಂ ಮಮ ।
ಶುಭಕ್ಷೇತ್ರಗತಶ್ಚಾಹಂ ತವ ಸಂದರ್ಶನಾತ್ಪ್ರಭೋ ॥೫೫॥

ನನ್ನ ಜನ್ಮವಿಂದು ಸಫಲವಾಯಿತು. ನನ್ನ ಜೀವಿತವೂ ಸುಜೀವಿತವೆನಿಸಿತು. ವಿಪ್ರೋತ್ತಮರೇ! ಇಂದು ನಿಮ್ಮನ್ನು ಸಂದರ್ಶಿಸಿದ ಕಾರಣದಿಂದಾಗಿ ರಾತ್ರಿಯು ಸುಖವಾಗಿ ಕಳೆದು ನನಗೆ ಸುಪ್ರಭಾತವಾಯಿತು. ಮಹಾನುಭಾವರೇ! ಮೊದಲು ನೀವು ರಾಜರ್ಷಿಗಳೆಂದು ಅಭಿಧಾನವನ್ನು ಪಡೆದಿರಿ. ಅನಂತರದಲ್ಲಿ ಅನೇಕ ವರ್ಷಗಳ ಕಾಲ ತಪಶ್ಚರಣೆಮಾಡಿ ಜಾಜ್ವಲ್ಯಮಾನವಾದ ತೇಜಸ್ಸನ್ನು ಪಡೆದು ಬ್ರಹ್ಮರ್ಷಿಗಳಾದಿರಿ. ಅಂತಹ ನೀವು ನನಗೆ ಪರಮಪೂಜ್ಯರಾಗಿರುವಿರಿ. ಮಹರ್ಷಿಗಳೇ! ನಿಮ್ಮ ಆಗಮನವು ಪರಮ ಪವಿತ್ರವೂ ಮತ್ತು ಅದ್ಭುತವೂ ಆಗಿದೆ. ನಿಮ್ಮ ದಿವ್ಯದರ್ಶನದಿಂದಾಗಿ ನಾನು ಇರುವ ಜಾಗವೇ ಪವಿತ್ರಕ್ಷೇತ್ರವಾಗಿದೆ. ಶುಭಕ್ಷೇತ್ರಕ್ಕೆ ಯಾತ್ರೆ ಮಾಡಿದಂತೆಯೇ ಆಗಿದೆ. ಆ ಫಲವೇ ದೊರಕಿದೆ. ನನ್ನ ಶರೀರವೂ ಪವಿತ್ರವಾಗಿದೆ.

ಬ್ರೂಹಿ ಯತ್ಪ್ರಾರ್ಥಿತಂ ತುಭ್ಯಂ ಕಾರ್ಯಮಾಗಮನಂ ಪ್ರತಿ ।
ಇಚ್ಛಾಮ್ಯನುಗೃಹೀತೋಽಹಂ ತ್ವದರ್ಥಪರಿವೃದ್ಧಯೇ ॥೫೬॥

ಕಾರ್ಯಸ್ಯ ನ ವಿಮರ್ಶಂ ಚ ಗನ್ತುಮರ್ಹಸಿ ಕೌಶಿಕ ।
ಕರ್ತಾ ಚಾಹಮಶೇಷೇಣ ದೈವತಂ ಹಿ ಭವಾನ್ಮಮ ॥೫೭॥

ಮಮ ಚಾಯಮನುಪ್ರಾಪ್ತೋ ಮಹಾನಭ್ಯುದಯೋ ದ್ವಿಜ ।
ತವಾಗಮನಜಃ ಕೃತ್ಸ್ನೋ ಧರ್ಮಶ್ಚಾನುತ್ತಮೋ ಮಮ ॥೫೮॥

ಮಹರ್ಷಿಗಳೇ! ನಿಮ್ಮ ಆಗಮನದ ಕಾರಣವೇನೆಂಬುದನ್ನು ದಯೆಯಿಟ್ಟು ಹೇಳಿ ಅನುಗ್ರಹಿಸಿರಿ. ನಿಮ್ಮ ಆಜ್ಞೆಯಿಂದ ಅನುಗೃಹೀತನಾದ ನಾನು ನಿಮ್ಮ ಇಷ್ಟಾರ್ಥವನ್ನು ಕೂಡಲೇ ಈಡೇರಿಸಲು ಬಯಸುತ್ತೇನೆ. 'ಈ ಕಾರ್ಯವು ದಶರಥನಿಂದ ಆಗುವುದೇ? ಈ ಕಾರ್ಯವನ್ನು ದಶರಥನಿಗೆ ಹೇಳಬಹುದೇ?' ಎಂದು ಸ್ವಲ್ಪವೂ ಸಂಶಯಿಸಬೇಡಿರಿ. ಸುವ್ರತರೇ! ನೀವು ನನಗೆ ನಿಯೋಜಿಸಲಿರುವ ಕಾರ್ಯವು ಎಂತಹ ಕ್ಲಿಷ್ಟವಾದ ಕಾರ್ಯವಾದರೂ ಆ ಕಾರ್ಯವನ್ನು ಸಂಪೂರ್ಣವಾಗಿ ಸಾಧಿಸಿಕೊಡುತ್ತೇನೆ. ಏಕೆಂದರೆ : ನೀವೇ ನನಗೆ ಪರದೈವವಾಗಿರುವಿರಿ. ನನಗೆ ನಿಮ್ಮ ಆಗಮನ ದಿಂದ ಉಂಟಾಗಿರುವ ಮಹಾಪುಣ್ಯವಿಶೇಷವು ನನ್ನ ಮುಂದಿನ ದೊಡ್ಡ ಅಭ್ಯುದಯಕ್ಕೆ ಕಾರಣವಾಗಿದೆ. ನಿಮ್ಮ ಆಗಮನದಿಂದ ಶ್ರೇಷ್ಠವಾದ ಧರ್ಮವೂ ನನಗೆ ಸಮಗ್ರವಾಗಿ ಉಂಟಾಗಿದೆ."

ಆತ್ಮಗುಣಸಂಪನ್ನನಾದ ದಶರಥನ ಆ ವಿನಯದ ಮಾತುಗಳು, ಹೃದಯಕ್ಕೆ ಸುಖಕರವಾಗಿದ್ದುವು. ಕಿವಿಗಳಿಗೆ ಆನಂದಕರವಾಗಿದ್ದುವು. ಅವುಗಳನ್ನು ಕೇಳಿದೊಡನೆಯೇ ಪ್ರಸಿದ್ಧಗುಣಕೀರ್ತಿಸಂಪನ್ನರಾದ ಮಹರ್ಷಿಗಳಿಗೆ ಪರಮಾನಂದವುಂಟಾಯಿತು.

ಗ೮ನೆಯ ಸರ್ಗವು ಮುಗಿಯಿತು.

ವಿಶ್ವಾಮಿತ್ರರು ರಾಮ-ಲಕ್ಷ್ಮಣರನ್ನು ಕಳುಹಿಸಿಕೊಡುವಂತೆ ಕೇಳಿದುದು : ದಶರಥನ ದುಃಖ

ತಚ್ಛ್ರುತ್ವಾ ರಾಜಸಿಂಹಸ್ಯ ವಾಕ್ಯಮದ್ಭುತವಿಸ್ತರಮ್ ।
ಹೃಷ್ಟರೋಮಾ ಮಹಾತೇಜಾ ವಿಶ್ವಾಮಿತ್ರೋಽಭ್ಯಭಾಷತ ॥೧॥

ಅದ್ಭುತವಾಗಿಯೂ, ವಿಸ್ತಾರವಾಗಿಯೂ ಇದ್ದ ರಾಜಾಧಿರಾಜನಾದ ದಶರಥನ ಮಾತುಗಳನ್ನು ಕೇಳಿ ರೋಮಾಂಚಹೊಂದಿದ ಮಹಾತೇಜಸ್ವಿಗಳಾದ ವಿಶ್ವಾಮಿತ್ರರು ಹೇಳಿದರು :

"ಮಹಾರಾಜ! ನಿನ್ನೀ ಮಾತುಗಳು ಭೂಮಿಯಲ್ಲಿ ಮಹಾವಂಶದಲ್ಲಿ ಜನಿಸಿರುವ ಮತ್ತು ವಸಿಷ್ಠರ ನಿರ್ದೇಶದಂತೆ ಕಾರ್ಯಮಾಡುತ್ತಿರುವ ನಿನಗೆ ಅನುರೂಪವಾಗಿಯೇ ಇವೆ. ರಾಜಶ್ರೇಷ್ಠನೇ! ನನ್ನ ಮನಸ್ಸಿನಲ್ಲಿರುವ ಮತ್ತು ಈಗ ನಾನು ಹೇಳಲಿರುವ ಕಾರ್ಯವನ್ನು ನಿಶ್ಚಯವಾಗಿ ಮಾಡುತ್ತೇನೆಂದು ಸತ್ಯಪ್ರತಿಜ್ಞೆಯನ್ನು ಮಾಡುವವನಾಗು. ಪುರುಷರ್ಷಭನೇ! ನಾನು ಸಿದ್ಧಿಯನ್ನು ಪಡೆಯುವ ಸಲುವಾಗಿ ವ್ರತನಿಯಮದಿಂದಿರುತ್ತೇನೆ. ಈ ನನ್ನ ವ್ರತಾನುಷ್ಠಾನಕ್ಕೆ ಕಾಮರೂಪಿಗಳಾದ ಇಬ್ಬರು ರಾಕ್ಷಸರು ವಿಘ್ನವನ್ನುಂಟು ಮಾಡುತ್ತಿರುತ್ತಾರೆ. ನನ್ನ ವ್ರತಾನುಷ್ಠಾನವು ಪ್ರಾರಂಭವಾಗಿ ಅದು ಮುಗಿಯುವುದರೊಳಗಾಗಿ ಮಹಾಪರಾಕ್ರಮಿಗಳಾದ, ಯುದ್ಧಪ್ರಕ್ರಿಯೆಯಲ್ಲಿ ಸುಶಿಕ್ಷಿತರಾದ, ಸುಬಾಹು-ಮಾರೀಚರೆಂಬ ಇಬ್ಬರು ರಾಕ್ಷಸರು ರಕ್ತ-ಮಾಂಸಗಳನ್ನು ಸುರಿದು ಯಜ್ಞವೇದಿಕೆಯನ್ನು ಅಪವಿತ್ರಗೊಳಿಸಿಬಿಡುತ್ತಾರೆ. ಅದರಿಂದ ನನ್ನ ನಿಯಮ-ನಿಶ್ಚಯಗಳೆಲ್ಲವೂ ರಾಕ್ಷಸರಿಂದ ವಿನಷ್ಟವಾಗಿ, ನನ್ನ ಪ್ರಯತ್ನಗಳೆಲ್ಲವೂ ಶ್ರಮದಲ್ಲಿಯೇ ಪರ್ಯವಸಾನವನ್ನು ಹೊಂದಲು, ನಿರುತ್ಸಾಹನಾದ ನಾನು ನನ್ನ ಆಶ್ರಮಪ್ರದೇಶದಿಂದ ಇಲ್ಲಿಗೆ ಬಂದಿರುವೆನು.

ನ ಚ ಮೇ ಕ್ರೋಧಮುತ್ಸ್ರಷ್ಟುಂ ಬುದ್ಧಿರ್ಭವತಿ ಪಾರ್ಥಿವ ।
ತಥಾಭೂತಾ ಹಿ ಸಾ ಚರ್ಯಾ ನ ಶಾಪಸ್ತತ್ರ ಮುಚ್ಯತೇ ॥೨॥

ಮಹಾರಾಜ! 'ಆ ರಾಕ್ಷಸರನ್ನು ಶಪಿಸಕೂಡದೇಕೆ?' ಎಂದು ನೀನು ಕೇಳಬಹುದು. ನನಗೆ ಅವರ ಮೇಲೆ ಕೋಪಿಸಿಕೊಳ್ಳುವ ಬುದ್ಧಿಯೇ ಉಂಟಾಗುವುದಿಲ್ಲ. ಏಕೆಂದರೆ : ನಾನು ಕೈಗೊಂಡಿರುವ ವ್ರತಾನುಷ್ಠಾನದ ಸಮಯದಲ್ಲಿ ಕೋಪಮಾಡಿಕೊಳ್ಳುವುದಾಗಲೀ, ಶಾಪಕೊಡುವುದಾಗಲೀ ಯೋಗ್ಯವಲ್ಲ. ಹಾಗೆ ಮಾಡಿದರೆ ವ್ರತಭಂಗವಾಗುತ್ತದೆ.

ಸ್ವಪುತ್ರಂ ರಾಜಶಾರ್ದೂಲ ರಾಮಂ ಸತ್ಯಪರಾಕ್ರಮಮ್ ।
ಕಾಕಪಕ್ಷಧರಂ ಶೂರಂ ಜ್ಯೇಷ್ಠಂ ಮೇ ದಾತುಮರ್ಹಸಿ ॥೮॥

ಶಕ್ತೋ ಹ್ಯೇಷ ಮಯಾ ಗುಪ್ತೋ ದಿವ್ಯೇನ ಸ್ವೇನ ತೇಜಸಾ ।
ರಾಕ್ಷಸಾ ಯೇ ವಿಕರ್ತಾರಸ್ತೇಷಾಮಪಿ ವಿನಾಶನೇ ॥೯॥

ಮಹಾರಾಜ! ಸತ್ಯಪರಾಕ್ರಮಿಯಾದ, ಕಾಕಪಕ್ಷಧರನಾದ,* ಮಹಾ ಶೂರನಾದ, ನಿನ್ನ ಜ್ಯೇಷ್ಠಪುತ್ರನಾದ ರಾಮನನ್ನು ನನ್ನ ಸಹಾಯಕ್ಕೆ ಕಳುಹಿಸಿಕೊಡುವುದು ಸಾಧುವಾಗಿದೆ. ದಿವ್ಯವಾದ ತೇಜಸ್ಸಿನಿಂದ ಕೂಡಿರುವ ರಾಮನು ನನ್ನಿಂದಲೂ ರಕ್ಷಿಸಲ್ಪಟ್ಟವನಾಗಿ, ಯಾರು ಯಾರು ನನ್ನ ಯಜ್ಞಕ್ಕೆ ವಿಘ್ನವುಂಟುಮಾಡಲು ಬರುವರೋ–ಆ ರಾಕ್ಷಸರೆಲ್ಲರನ್ನೂ ಸಂಪೂರ್ಣ ವಾಗಿ ವಿನಾಶಮಾಡಲು ಸಮರ್ಥನಾಗಿದ್ದಾನೆ.

ಶ್ರೇಯಶ್ಚಾಸ್ಮೈ ಪ್ರದಾಸ್ಯಾಮಿ ಬಹುರೂಪಂ ನ ಸಂಶಯಃ ।
ತ್ರಯಾಣಾಮಪಿ ಲೋಕಾನಾಂ ಯೇನ ಖ್ಯಾತಿಂ ಗಮಿಷ್ಯತಿ ॥೧೦॥

ನ ಚ ತೌ ರಾಮಮಾಸಾದ್ಯ ಶಕ್ತೌ ಸ್ಥಾತುಂ ಕಥಂಚನ ।
ನ ಚ ತೌ ರಾಘವಾದನ್ಯೋ ಹನ್ತುಮುತ್ಸಹತೇ ಪುಮಾನ್ ॥೧೧॥

ವೀರ್ಯೋತ್ಸಿಕ್ತೌ ಹಿ ತೌ ಪಾಪೌ ಕಾಲಪಾಶವಶಂ ಗತೌ ।
ರಾಮಸ್ಯ ರಾಜಶಾರ್ದೂಲ ನ ಪರ್ಯಾಪ್ತೌ ಮಹಾತ್ಮನಃ ॥೧೨॥

---

* '**ಕಾಕಪಕ್ಷಧರಃ**'ಎಂದರೆ ಎರಡು ಕಪೋಲಗಳ ಸಮೀಪದಲ್ಲಿ ಕೂದಲುಗಳುಳ್ಳವನು. ರಾಮನಿನ್ನೂ ಕಿರಿಯಪ್ರಾಯದವನಾಗಿರುವುದರಿಂದ ಗಡ್ಡವು ಬೆಳೆದಿರುವುದಿಲ್ಲ. ಕಪೋಲಗಳೆರಡರ ಮೇಲ್ಭಾಗದಲ್ಲಿ ಮಾತ್ರ ಕೂದಲುಗಳಿರುತ್ತವೆ. ಇದಕ್ಕೆ ಕಾಕಪಕ್ಷವೆಂದು ಹೆಸರು.

ನ ಚ ಪುತ್ರಕೃತಂ ಸ್ನೇಹಂ ಕರ್ತುಮರ್ಹಸಿ ಪಾರ್ಥಿವ ।
ಅಹಂ ತೇ ಪ್ರತಿಜಾನಾಮಿ ಹತೌ ತೌ ವಿದ್ಧಿ ರಾಕ್ಷಸೌ ॥೧೩॥

ಅಹಂ ವೇದ್ಮಿ ಮಹಾತ್ಮಾನಂ ರಾಮಂ ಸತ್ಯಪರಾಕ್ರಮಮ್ ।
ವಸಿಷ್ಠೋಽಪಿ ಮಹಾತೇಜಾ ಯೇ ಚೇಮೇ ತಪಸಿ ಸ್ಥಿತಾಃ ॥೧೪॥

ಯದಿ ತೇ ಧರ್ಮಲಾಭಂ ಚ ಯಶಶ್ಚ ಪರಮಂ ಭುವಿ ।
ಸ್ಥಿರಮಿಚ್ಛಸಿ ರಾಜೇನ್ದ್ರ ರಾಮಂ ಮೇ ದಾತುಮರ್ಹಸಿ ॥೧೫॥

ಮಹಾರಾಜ! ರಾಮಚಂದ್ರನಿಗೆ ಬಹುವಿಧವಾದ ಶ್ರೇಯಸ್ಸು ಅಥವಾ ಕೀರ್ತಿಯು ಲಭಿಸುವಂತೆ ಮಾಡುತ್ತೇನೆ. ಇವನ ಈ ಶ್ರೇಯಸ್ಸು ಮೂರು ಲೋಕಗಳಲ್ಲಿಯೂ ಖ್ಯಾತಿಹೊಂದುತ್ತದೆ. ರಾಕ್ಷಸರಾದ ಆ ಇಬ್ಬರು ಸುಬಾಹು-ಮಾರೀಚರು ರಾಮನ ಎದುರಾಗಿ ನಿಂತು ಯುದ್ಧಮಾಡಲು ಖಂಡಿತವಾಗಿಯೂ ಸಮರ್ಥರಲ್ಲ. ರಾಮನ ಹೊರತಾಗಿ ಬೇರಾರಿಗೂ ಅವರನ್ನು ಕೊಲ್ಲುವ ಸಾಮರ್ಥ್ಯವಿಲ್ಲ. ವೀರ್ಯದಿಂದ ಮದಿಸಿದ ಆ ರಾಕ್ಷಸರು ಅನೇಕ ಪಾಪಕಾರ್ಯಗಳನ್ನು ಮಾಡಿ ಮಹಾಪಾಪಿಷ್ಠರಾಗಿದ್ದಾರೆ. ಈ ಕಾರಣದಿಂದಲೇ ಯಮಪಾಶವಶರಾಗಿರುವ ಅವರು ಶ್ರೀರಾಮನಿಗೆದುರಾಗಿ ನಿಂತು ಯುದ್ಧ ಮಾಡಿ ಜಯಗಳಿಸಲು ಸಮರ್ಥರಾಗುವುದಿಲ್ಲ. ರಾಮನನ್ನು ನನಗೆ ಒಪ್ಪಿಸುವುದರಲ್ಲಿ ನಿನಗಿರುವ ಪ್ರತಿಬಂಧಕವೆಂದರೆ ಅವನಲ್ಲಿ ನಿನಗಿರುವ ವಿಶೇಷ ವಾತ್ಸಲ್ಯ ; ಪುತ್ರಸ್ನೇಹ. ಈ ಕಾರಣದಿಂದಲೇ ನಿನಗೆ ರಾಮನ ಪರಾಕ್ರಮದ ವಿಷಯದಲ್ಲಿ ಸಂಶಯಹುಟ್ಟಿ–'ಇಬ್ಬರು ರಾಕ್ಷಸರನ್ನು ಬಾಲಕನಾದ ಇವನು ಕೊಲ್ಲಬಲ್ಲನೇ?'–ಎಂಬ ಭ್ರಾಂತಿಯೂ ಉಂಟಾಗಬಹುದು. ಆದರೆ ಇವನನ್ನು ಕಳುಹಿಸುವುದರಲ್ಲಿ ನಿನ್ನ ಆ ಪುತ್ರಸ್ನೇಹವು ಅಡ್ಡಿಪಡಿಸದಿರಲಿ. ಆ ಇಬ್ಬರು ರಾಕ್ಷಸರು ಈಗಾಗಲೇ ಈ ರಾಮನಿಂದ ಕೊಲ್ಲಲ್ಪಟ್ಟಿದ್ದಾರೆಂದೇ ಭಾವಿಸು. ದಶರಥ! ಈ ಮಾತುಗಳನ್ನು ನಾನು ನಿನ್ನ ಮುಂದೆ ಸ್ಪಷ್ಟವಾಗಿ ಹೇಳುತ್ತಿದ್ದೇನೆ. ಸತ್ಯವಾದ ಪರಾಕ್ರಮವುಳ್ಳ ಮಹಾತ್ಮನಾದ ರಾಮನಾರೆಂಬುದನ್ನು ನಾನು ತಿಳಿದಿರುವೆನು. ಮಹಾತೇಜಸ್ವಿಗಳಾದ ವಸಿಷ್ಠರಿಗೂ ಅವನಾರೆಂಬ ವಿಷಯವು ತಿಳಿದಿರುವುದು. ಇಲ್ಲಿ ಉಪಸ್ಥಿತರಾಗಿರುವ ತಪೋನಿಷ್ಠರಾದ ವಾಮದೇವಾದಿ ಮಹರ್ಷಿಗಳೂ

ರಾಮನ ನಿಜಸ್ವರೂಪವನ್ನು ತಿಳಿದಿರುವರು. ನಿನಗೆ ಧರ್ಮಲಾಭವು ಸ್ಥಿರವಾಗಿ ಅಭಿವೃದ್ಧಿಹೊಂದುತ್ತಿರಬೇಕೆಂಬ ಆಶಯವಿರುವುದಾದರೆ–ಪ್ರಪಂಚದಲ್ಲಿ ಅತ್ಯುತ್ಕೃಷ್ಟವಾದ ಯಶಸ್ಸನ್ನು ಪಡೆಯಬೇಕೆಂಬ ಅಭಿಪ್ರಾಯವಿದ್ದರೆ–ರಾಮನನ್ನು ಕಳುಹಿಸಿಕೊಡುವುದು ಯೋಗ್ಯವಾಗಿದೆ.

ಯದಿ ಹ್ಯನುಜ್ಞಾಂ ಕಾಕುತ್ಸ್ಥ ದದತೇ ತವ ಮನ್ತ್ರಿಣಃ ।
ವಸಿಷ್ಠಪ್ರಮುಖಾಃ ಸರ್ವೇ ತತೋ ರಾಮಂ ವಿಸರ್ಜಯ ॥೧೬॥

ಕಕುತ್ಸ್ಥಕುಲಾವತಂಸನೇ! ನಿನ್ನ ಮಂತ್ರಿಗಳನ್ನೂ ಮತ್ತು ವಸಿಷ್ಠಾದಿ ಪುರೋಹಿತರನ್ನೂ ಏಕಾಂತದಲ್ಲಿ ಕರೆದು ರಾಮನನ್ನು ಕಳುಹಿಸುವ ವಿಷಯವಾಗಿ ಸಮಾಲೋಚಿಸು. ಅವರೆಲ್ಲರೂ ರಾಮನನ್ನು ನನ್ನೊಡನೆ ಕಳುಹಿಸಲು ಒಪ್ಪಿದಲ್ಲಿ ಕಳುಹಿಸಿಕೊಡು.

ಅಭಿಪ್ರೇತಮಸಂಸಕ್ತಮಾತ್ಮಜಂ ದಾತುಮರ್ಹಸಿ ।
ದಶರಾತ್ರಂ ಹಿ ಯಜ್ಞಸ್ಯ ರಾಮಂ ರಾಜೀವಲೋಚನಮ್ ॥೧೭॥

ರಾಮನು ನನಗೆ ಬೇಕಾಗಿರುತ್ತಾನೆ. ಅವನೇನೂ ನಿಮ್ಮನ್ನು ಕ್ಷಣ ಕಾಲವೂ ಬಿಟ್ಟಿರಲಾರದೇ ನಿಮ್ಮೊಡನೆ ಅಂಟಿಕೊಂಡಿಲ್ಲ. ಮೇಲಾಗಿ ನಾನು ಮಾಡಬೇಕಾಗಿರುವ ಯಜ್ಞಕಾಲದ ಅವಧಿಯು ಕೇವಲ ಹತ್ತು ದಿನಗಳು ಮಾತ್ರ. ಆದುದರಿಂದ ರಾಜೀವಲೋಚನನಾದ ರಾಮನನ್ನು ನನ್ನೊಡನೆ ಕಳುಹಿಸಿಕೊಡುವುದು ನಿನಗೆ ಯೋಗ್ಯವಾಗಿದೆ.

ನಾತ್ಯೇತಿ ಕಾಲೋ ಯಜ್ಞಸ್ಯ ಯಥಾಯಂ ಮಮ ರಾಘವ ।
ತಥಾ ಕುರುಷ್ವ ಭದ್ರಂ ತೇ ಮಾ ಚ ಶೋಕೇ ಮನಃ ಕೃಥಾಃ ॥

ನಾನು ಪ್ರಾರಂಭಿಸಬೇಕಾಗಿರುವ ಯಜ್ಞದ ಮುಹೂರ್ತವು ಮೀರದ ರೀತಿಯಲ್ಲಿ ರಾಮನನ್ನು ಒಡನೆಯೇ ನನ್ನೊಡನೆ ಕಳುಹಿಸಿಕೊಡು, ಮಹಾರಾಜ! ಇದರಿಂದ ನಿನಗೆ ಮಂಗಳವಾಗುತ್ತದೆ. ಶ್ರೇಯಸ್ಸುಂಟಾಗುವ ಕಾರ್ಯಮಾಡಲು ವೃಥಾ ದುಃಖಿಸಬೇಡ."

ಧರ್ಮಾತ್ಮರಾದ, ಮಹಾತೇಜಸ್ವಿಗಳಾದ, ಮಹಾಬುದ್ಧಿಶಾಲಿಗಳಾದ ವಿಶ್ವಾಮಿತ್ರರು ಧರ್ಮಾರ್ಥಪ್ರಾಪ್ತಿಗೆ ಮೂಲಾಧಾರವಾದ ಮಾತುಗಳನ್ನು ಹೇಳಿ ಸುಮ್ಮನಾದರು.

ದಶರಥರಾಜನು ವಿಶ್ವಾಮಿತ್ರರ ಶುಭಕರವಾದ ಆ ಮಾತುಗಳನ್ನು ಕೇಳಿ ನಡುಗಿದನು. ಶೋಕಾವಿಷ್ಟನಾಗಿ ಭಯದಿಂದ ವಿಷಾದಿಸತೊಡಗಿದನು. ದಶರಥನು ಮಹಾತ್ಮನೆಂದೂ ಮಹಾಧೀರನೆಂದೂ ಪ್ರಸಿದ್ಧಿಪಡೆದಿದ್ದನು. ಆದರೂ ಹೃದಯ-ಮನಸ್ಸುಗಳನ್ನು ಸೀಳುವ ಮಹರ್ಷಿಯ ಮಾತುಗಳನ್ನು ನೆನೆದು ತಡೆಯಲಾರದ ದುಃಖದಿಂದ ಸಿಂಹಾಸನದಿಂದ ಕೆಳಗುರುಳಿದನು.

ೞನೆಯ ಸರ್ಗವು ಮುಗಿಯಿತು.

ಬಾಲಕಾಂಡ ೨೦ನೆಯ ಸರ್ಗ

ರಾಮನನ್ನು ಕಳುಹಿಸಿಕೊಡಲು ದಶರಥನ ಅಸಮ್ಮತಿ : ವಿಶ್ವಾಮಿತ್ರರ ಕೋಪ

ತಚ್ಛ್ರುತ್ವಾ ರಾಜಶಾರ್ದೂಲೋ ವಿಶ್ವಾಮಿತ್ರಸ್ಯ ಭಾಷಿತಮ್ ।
ಮುಹೂರ್ತಮಿವ ನಿಃಸಂಜ್ಞಃ ಸಂಜ್ಞಾವಾನಿದಮಬ್ರವೀತ್ ॥೧॥

ವಿಶ್ವಾಮಿತ್ರರ ಮಾತುಗಳನ್ನು ಕೇಳಿ ಮತ್ತು ಅವುಗಳನ್ನು ಬಾರಿ-ಬಾರಿಗೂ ಜ್ಞಾಪಿಸಿಕೊಂಡು ಕಡುದುಃಖಗೊಂಡ ರಾಜನು ಮುಹೂರ್ತಕಾಲ ಮೂರ್ಛಿತನಾಗಿ ಬಿದ್ದಿದ್ದನು. ಸಂಜ್ಞೆಬಂದ ಬಳಿಕ ವಿಶ್ವಾಮಿತ್ರರಿಗೆ ಹೇಳಿದನು:

"ಮಹರ್ಷಿಗಳೇ! ರಾಜೀವಲೋಚನನಾದ ನನ್ನ ಈ ರಾಮನು ಹದಿನಾರು ವರ್ಷಗಳೂ ತುಂಬದ ಬಾಲಕ. ಇಂತಹವನಿಗೆ ರಾಕ್ಷಸರೊಡನೆ ಯುದ್ಧಮಾಡುವ ಯೋಗ್ಯತೆಯಿದೆಯೆಂಬುದನ್ನು ನಾನು ಹೇಗೆ ನಂಬಲಿ? ಆದರೆ ಇವನನ್ನು ಕಳುಹಿಸಲಾಗದ ಮಾತ್ರಕ್ಕೆ ತಮ್ಮ ಯಜ್ಞದ ರಕ್ಷಣೆಯಾಗಲಾರದೆಂದು ಭಾವಿಸಬೇಕಾಗಿಲ್ಲ. ನನ್ನಲ್ಲಿ ಒಂದು* ಅಕ್ಷೌಹಿಣೀ ಸೈನ್ಯವಿದೆ.

---

* ಏಕೋ ರಥೋ ಗಜಶ್ಚೈಕೋ ನರಾಃ ಪಞ್ಚ ಪದಾತಯಃ । ತ್ರಯಶ್ಚ ತುರಗಾಸ್ತಜ್ಜ್ಞೈಃ ಪತ್ತಿರಿತ್ಯಭಿಧೀಯತೇ ॥ ಪತ್ತಿಂ ತು ತ್ರಿಗುಣಾಮೇಕಂ ವಿದುಃ ಸೇನಾಮುಖಂ

ಈ ಅಪಾರಸೈನ್ಯಕ್ಕೆ ನಾನು ಒಡೆಯನಾಗಿದ್ದೇನೆ. ಈ ಸೈನ್ಯದೊಡನೆ ಬಂದು ಆ ರಾಕ್ಷಸರೊಡನೆ ನಾನೇ ಯುದ್ಧಮಾಡುತ್ತೇನೆ. ಮಹರ್ಷಿಗಳೇ! ನನ್ನ ಸೇನಾಪತಿಗಳೇನೂ ಸಾಮಾನ್ಯರಲ್ಲ. ಶೂರರಾಗಿದ್ದಾರೆ. ಅಸ್ತ್ರವಿಶಾರದರೂ ಆಗಿರುವ ಇವರು ರಾಕ್ಷಸರೊಡನೆ ಯುದ್ಧ ಮಾಡಲು ಸಮರ್ಥರಾಗಿದ್ದಾರೆ. ಆದರೆ ರಾಮನನ್ನು ಮಾತ್ರ ಕರೆದೊಯ್ಯ ಬೇಡಿರಿ. ವಿಶ್ವಾಮಿತ್ರರೇ! ಸೈನ್ಯಗಳನ್ನು ಮಾತ್ರವೇ ಕಳುಹಿಸುವೆನೆಂದು ತಿಳಿಯಬೇಡಿರಿ. ನಾನೇ ಧನುಷ್ಪಾಣಿಯಾಗಿ ಯಜ್ಞರಕ್ಷಣಾರ್ಥವಾಗಿ ಬರು ವೆನು. ಸೈನ್ಯಕ್ಕೆ ನಾನೇ ಮುಂದಾಳಾಗಿ ನಿಂತು ಎಲ್ಲಿಯವರೆಗೆ ನನ್ನ ಪ್ರಾಣಗಳು ಉಳಿದಿರುವುವೋ–ಅಲ್ಲಿಯವರೆಗೂ ನಿಮ್ಮ ಯಜ್ಞಕ್ಕೆ ವಿಘ್ನವನ್ನುಂಟು ಮಾಡುವ ರಾಕ್ಷಸರೊಡನೆ ಎಡೆಬಿಡದೆ ಹೋರಾಡುತ್ತೇನೆ. ಮುನಿಪುಂಗ ವರೇ! ನಾನೇ ಅಲ್ಲಿಗೆ ಬರುತ್ತೇನೆ. ತಮ್ಮ ವ್ರತಾನುಷ್ಠಾನವು ಸುರಕ್ಷಿತವಾಗಿ ನಿರ್ವಿಘ್ನವಾಗಿ ನೆರವೇರುತ್ತದೆ. ಇದರಲ್ಲಾವ ಸಂಶಯವೂ ಇಲ್ಲ. ಆದರೆ ನನ್ನ ಕಂದ ರಾಮನನ್ನು ಮಾತ್ರ ಕರೆದುಕೊಂಡು ಹೋಗಬೇಡಿರಿ. ನನ್ನ ರಾಮನ ವಿಷಯವು ತಮಗೆ ನೋಡಿದ ಮಾತ್ರದಿಂದಲೇ ಅರಿವಾಗುವು ದಿಲ್ಲವೇ? ಇವನಿನ್ನೂ ಬಾಲಕ ; ಚಿಕ್ಕಹುಡುಗ. ಇವನ ಧನುರ್ವಿದ್ಯಾಭ್ಯಾಸ ವಿನ್ನೂ ಪೂರ್ಣವಾಗಿಲ್ಲ. ಇವನಿಗೆ ಎದುರಾಳಿಯ ಬಲವನ್ನು ತಿಳಿಯುವ ಪರಿಶ್ರಮವಿಲ್ಲ. ಮಹಾಸ್ತ್ರಗಳ ಉಪದೇಶವಾಗಿಲ್ಲ. ಇವನಿಗೆ ಅಸ್ತ್ರಬಲವೂ ಇರುವುದಿಲ್ಲ. ಆದುದರಿಂದ ಇವನು ಖಂಡಿತವಾಗಿಯೂ ಯುದ್ಧವಿಶಾರದ

ಬುಧಾಃ । ತ್ರೀಣಿ ಸೇನಮುಖಾನ್ಯೇಕೋ ಗುಲ್ಮ ಇತ್ಯಭಿಧೀಯತೇ ॥ ತ್ರಯೋ ಗುಲ್ಮಾ ಗಣೋ ನಾಮ ವಾಹಿನೀ ತು ಗಣಾಸ್ತ್ರಯಃ ।ಸ್ಮೃತಾಸ್ತಿಸ್ರಸ್ತು ವಾಹಿನ್ಯಃ ಪೃತನೇತಿ ವಿಚಕ್ಷಣೈಃ ॥ ಚಮೂಸ್ತು ಪೃತನಾಸ್ತಿಸ್ರಃ ಚಮ್ವಸ್ತಿಸ್ರಸ್ತ್ವನೀಕಿನೀ । ಅನೀಕಿನೀಂ ದಶಗುಣಾಂ ಪ್ರಾಹುರಕ್ಷೌಹಿಣೀಂ ಬುಧಾಃ ॥ 1 ರಥ 1 ಆನೆ 5 ಕಾಲಾಳುಗಳು 3 ಕುದುರೆಗಳು = ಪತ್ತಿ. 3 ಪತ್ತಿಗಳು = 1 ಸೇನಾಮುಖ. 3 ಸೇನಾಮುಖಗಳು = 1 ಗುಲ್ಮ. 3 ಗುಲ್ಮಗಳು = 1 ಗಣ. 3 ಗಣಗಳು = 1 ವಾಹಿನೀ. 3 ವಾಹಿನಿಗಳು = 1 ಪೃತನಾ. 3 ಪೃತನಾಗಳು = 1 ಚಮೂ. 3 ಚಮೂಗಳು = 1 ಅನೀಕಿನೀ. 10 ಅನೀಕಿನಿಗಳು = 1 ಅಕ್ಷೌಹಿಣೀ. 1 ಅಕ್ಷೌಹಿಣೀಸೈನ್ಯದಲ್ಲಿ 21,870 ರಥಗಳೂ, 21,870 ಆನೆಗಳೂ, 1,09,350 ಕಾಲಾಳುಗಳೂ, 65,610 ಕುದುರೆಗಳೂ ಇರುತ್ತವೆ. ಒಟ್ಟು 2,18,700 ಪ್ರಾಣಿಗಳ ಸಮೂಹ.

ನಲ್ಲ. ಮೇಲಾಗಿ ನಮ್ಮ ರಾಮನು ರಾಕ್ಷಸರೊಡನೆ ಖಂಡಿತವಾಗಿಯೂ ಯುದ್ಧಮಾಡಲಾರನು. ಏಕೆಂದರೆ : ರಾಕ್ಷಸರು ಕಪಟಯುದ್ಧಮಾಡು ವವರು. ನಮ್ಮರಾಮನಿಗೆ ಕಪಟವೆಂಬುದೇ ತಿಳಿಯದು. ಒಂದು ವೇಳೆ ನೀವೇ ಇವನಿಗೆ ಸಕಲವಾದ ಅಸ್ತ್ರಗಳನ್ನೂ ಉಪದೇಶಿಸಿ ಸಂರಕ್ಷಿಸುವುದಾಗಿ ಹೇಳಿದರೂ ನಾನು ರಾಮನನ್ನು ಬಿಟ್ಟು ಕ್ಷಣಮಾತ್ರವಾದರೂ ಜೀವಿಸಿರಲು ಇಚ್ಛಿಸುವುದಿಲ್ಲ. ಈ ಒಂದು ಕಾರಣದಿಂದಲಾದರೂ ನೀವು ರಾಮನನ್ನು ಕರೆದುಕೊಂಡು ಹೋಗುವುದು ಯುಕ್ತವೆನಿಸುವುದಿಲ್ಲ. ಇಷ್ಟು ಹೇಳಿದರೂ ನೀವು ರಾಮನನ್ನೇ ಕರೆದುಕೊಂಡು ಹೋಗಬೇಕೆನ್ನುವಿರಾದರೆ ಚತುರಂಗ ಬಲಸಮೇತನಾದ ನನ್ನೊಡನೆ ಅವನನ್ನೂ ಕರೆದುಕೊಂಡು ಹೋಗ ಬಹುದು. 'ಏಕಿಷ್ಟೊಂದು ಮಮತೆ?'–ಎಂದು ಕೇಳಬಹುದಲ್ಲವೇ? ಮಹರ್ಷಿಗಳೇ! ನಾನು ಹುಟ್ಟಿ ಅರುವತ್ತು ಸಾವಿರ ವರ್ಷಗಳವರೆಗೆ ನನಗೆ ಮಕ್ಕಳೇ ಇರಲಿಲ್ಲ. ಅನಂತರ ಬಹಳ ಕಠಿಣವಾದ ವ್ರತಾನುಷ್ಠಾನಗಳನ್ನೂ ಯಾಗಾದಿಗಳನ್ನೂ ಮಾಡಿ ಇವನನ್ನು ಪಡೆದಿರುತ್ತೇನೆ. ಈ ನನ್ನ ಕೋರಿಕೆ ಯಿಂದಲಾದರೂ ನೀವು ರಾಮನನ್ನು ನನ್ನಿಂದ ಪ್ರತ್ಯೇಕಿಸಿ ಕರೆದೊಯ್ಯು ವುದು ಯುಕ್ತವಲ್ಲ. 'ನಿನಗೆ ನಾಲ್ವರು ಮಕ್ಕಳಿರುವರಲ್ಲಾ? ಅವರಲ್ಲಿ ಒಬ್ಬ ನಾದ ರಾಮನನ್ನು ತಾನೇ ನಾನು ಕೇಳಿರುವುದು?'–ಎಂದೂ ನೀವು ಹೇಳಬಹುದು. ಈ ನಾಲ್ವರಲ್ಲಿ ನನಗೆ ಅತ್ಯಂತಪ್ರಿಯನು ರಾಮನೇ. ಇದಕ್ಕೆ ಕಾರಣವಿಷ್ಟೆ : ಇವನು ಜ್ಯೇಷ್ಠಪುತ್ರನಾಗಿರುವನು ; ಧರ್ಮರಕ್ಷಕನಾಗಿರು ವನು. ಆದುದರಿಂದ ನೀವು ರಾಮನನ್ನು ಒಯ್ಯುವುದು ಖಂಡಿತವಾಗಿಯೂ ಯೋಗ್ಯವಲ್ಲ. ಅದಿರಲಿ, ನಿಮ್ಮ ವ್ರತಾನುಷ್ಠಾನಕ್ಕೆ ವಿಘ್ನಮಾಡುತ್ತಿರುವ ರಾಕ್ಷಸರ ಪರಾಕ್ರಮವು ಎಂತಹುದು? ಅವರು ಯಾರ ಮಕ್ಕಳು? ಅವರ ಕುಲ-ಗೋತ್ರಗಳೇನು? ಅವರ ಶರೀರಸ್ವರೂಪವೇನು? ಅವರ ರಕ್ಷಕನು ಅಥವಾ ಪ್ರಭುವು ಯಾರು? ಮಾಯಾಯುದ್ಧದಲ್ಲಿ ನಿಪುಣರಾದ ಅವರ ವಿಧ್ವಂಸನಕ್ಕೆ ಅಥವಾ ಪ್ರತಿಬಂಧನಕ್ಕೆ ನಾನಾಗಲೀ ರಾಮನೇ ಆಗಲೀ–ಏನು ಮಾಡಬೇಕು? ರಾಕ್ಷಸರು ಪರಾಕ್ರಮದಿಂದ ಕೊಬ್ಬಿರುತ್ತಾರೆ. ಅಂತಹ ನಿಷಿದ್ಧ ವಿಚಾರಶೀಲರಾದ ದುಷ್ಟರಾದ ರಾಕ್ಷಸರನ್ನು ಯಾವ ವ್ಯೂಹವನ್ನು ರಚಿಸಿ ಎದುರಿಸಬೇಕೆಂಬುದನ್ನೂ ನನಗೆ ದಯೆಯಿಟ್ಟು ಹೇಳಿರಿ."

ದಶರಥನ ಮಾತುಗಳಿಗೆ ವಿಶ್ವಾಮಿತ್ರರು ಹೀಗೆ ಉತ್ತರಿಸಿದರು :

"ದಶರಥಮಹಾರಾಜ! ಪುಲಸ್ತ್ಯವಂಶದಲ್ಲಿ ಹುಟ್ಟಿರುವ ರಾವಣ ನೆಂಬ ರಾಕ್ಷಸನು ಬ್ರಹ್ಮನಿಂದ ವರವನ್ನು ಪಡೆದು ಮೂರು ಲೋಕಗಳನ್ನೂ ಬಾರಿ-ಬಾರಿಗೂ ಹಿಂಸಿಸುತ್ತಿದ್ದಾನೆ. ಅವನು ಅಪಾರವಾದ ಸೇನಾಬಲದಿಂದ ಕೂಡಿರುತ್ತಾನೆ. ಅವನೇ ಸ್ವತಃ ಮಹಾಪರಾಕ್ರಮಿಯೂ ಆಗಿರುವನು. ಅನೇಕ ಬಲಿಷ್ಠರಾದ ರಾಕ್ಷಸರು ಅವನ ಅನುಯಾಯಿಗಳಾಗಿದ್ದಾರೆ. ಅವನು ವಿಶ್ರವಸಮುನಿಯ ಮಗ. ಕುಬೇರನ ಅನುಜ. ಅವನು ಯಾವಾಗಲೂ ನನ್ನ ಯಜ್ಞಕ್ಕೆ ನೇರವಾಗಿ ಬಂದು ವಿಘ್ನವನ್ನುಂಟುಮಾಡುತ್ತಿಲ್ಲ. ಅವನಿಂದ ಪ್ರೇರಿತರಾದ ಮಹಾಬಲರಾದ ಮಾರೀಚ-ಸುಬಾಹುಗಳೆಂಬ ರಾಕ್ಷಸರು ಯಾವಾಗಲೂ ನನ್ನ ಯಜ್ಞಕ್ಕೆ ವಿಘ್ನವನ್ನುಂಟುಮಾಡುತ್ತಿರುತ್ತಾರೆ."

ಅದನ್ನು ಕೇಳಿ ದಶರಥನು ವಿಶ್ವಾಮಿತ್ರರಿಗೆ ಹೇಳಿದನು :

"ಮಹರ್ಷಿಗಳೇ! ಈಗ ನಾನು ನಿಶ್ಚಯವಾಗಿಯೂ ಹೇಳುತ್ತೇನೆ. ದುರಾತ್ಮನಾದ ರಾವಣನ ಎದುರಾಗಿ ಅಥವಾ ಅವನಿಂದ ಪ್ರೇರಿತರಾಗಿ ಬಂದು ಯಜ್ಞಕ್ಕೆ ವಿಘ್ನವನ್ನುಂಟುಮಾಡುವ ಮಾರೀಚ-ಸುಬಾಹುಗಳಿಗೆದು ರಾಗಿ ನಿಂತು ಯುದ್ಧಮಾಡಲು ನಾನು ಖಂಡಿತವಾಗಿಯೂ ಶಕ್ತನಲ್ಲ. ಇತ್ತೀಚೆಗೆ ಪುತ್ರಸಂಪತ್ತಿಯನ್ನು ಪಡೆದಿರುವ ನನಗೆ ನೀವೇ ಪರದೈವವಾಗಿಯೂ, ಗುರುಗಳಾಗಿಯೂ ಇರುವಿರಿ. ಧರ್ಮಜ್ಞರಾದ ನೀವು ನನ್ನ ಬಾಲರಾಮನ ವಿಷಯದಲ್ಲಿ ಕರುಣೆಯನ್ನು ತೋರಿರಿ. ಮಹಾನುಭಾವರೇ! ದೇವ-ದಾನವ-ಗಂಧರ್ವ-ಯಕ್ಷ-ಪನ್ನಗರೇ ಯುದ್ಧದಲ್ಲಿ ರಾವಣನನ್ನು ಎದುರಿ ಸಲು ಸಮರ್ಥರಲ್ಲದಿರುವಾಗ–ಮಾನವರಿಂದ ಅಂತಹ ಅಜೇಯನಾದ ರಾವಣನನ್ನು ಎದುರಿಸುವ ಸಾಧ್ಯತೆಯಿದೆಯೇ? ರಾವಣನು ತನ್ನೆದುರಾಗಿ ನಿಲ್ಲುವವರ ಪರಾಕ್ರಮವೆಲ್ಲವನ್ನೂ ಧ್ವಂಸಮಾಡುವ ಸಾಮರ್ಥ್ಯವುಳ್ಳವನಾಗಿದ್ದಾನೆ. ಅವನೊಡನೆ ನೇರವಾಗಿಯೇ ಆಗಲೀ, ಪ್ರಮುಖರಾದ-ಮಾರೀಚ-ಸುಬಾಹು ಮುಂತಾದವರೊಡನೆಯೇ ಆಗಲೀ ನಾನು ಯುದ್ಧಮಾಡಲು ಖಂಡಿತವಾಗಿಯೂ ಸಮರ್ಥನಲ್ಲ. ನಾನು ಸೈನ್ಯಸಮೇತನಾಗಿ ಬಂದರೂ, ನನ್ನ ಮಕ್ಕಳೊಡನೆ ಬಂದರೂ ನಾನವರನ್ನು ಎದುರಿಸಲಾರೆನು. ಒಂದು

ವೇಳೆ ನೀವು ಬಹಳವಾಗಿ ಆಗ್ರಹಮಾಡುವುದಾದರೆ ಪ್ರಾಣತೊರೆಯಲು ಸಿದ್ಧನಾಗಿ ನಾನಾದರೂ ಬಂದೇನು ; ಆದರೆ ದೇವತೆಯಂತೆ ದಿವ್ಯಸುಂದರ ಮೂರ್ತಿಯಾಗಿರುವ, ಯುದ್ಧಗಳಲ್ಲಿ ಸ್ವಲ್ಪವೂ ಪರಿಶ್ರಮವಿಲ್ಲದ, ಬಾಲ ನಾದ ನನ್ನ ಮಗನಾದ ರಾಮನನ್ನು ಖಂಡಿತವಾಗಿಯೂ ಕಳುಹಿಸುವುದಿಲ್ಲ. ಮಹರ್ಷಿಗಳೇ! ಮಾರೀಚ-ಸುಬಾಹುಗಳೇನು ಸಾಮಾನ್ಯರಲ್ಲ. ಯಜ್ಞಕ್ಕೆ ವಿಘ್ನವನ್ನುಂಟುಮಾಡುತ್ತಿರುವ ಅವರು ಸುಪ್ರಸಿದ್ಧರಾದ ಸುಂದೋಪ ಸುಂದರ ಮಕ್ಕಳು. ಸಾಕ್ಷಾತ್ ಕಾಲಪುರುಷನಿಗೆ ಸಮನಾದ ಪರಾಕ್ರಮ ವುಳ್ಳವರು. ಅಂತಹವರೊಡನೆ ಯುದ್ಧಮಾಡಲು ನನ್ನ ಬಾಲರಾಮನನ್ನು ಖಂಡಿತವಾಗಿಯೂ ಕಳುಹಿಸುವುದಿಲ್ಲ. ಮಾರೀಚ-ಸುಬಾಹುಗಳಿಬ್ಬರೂ ಮಹಾವೀರ್ಯವಂತರು ಮತ್ತು ಮಾಯಾಯುದ್ಧದಲ್ಲಿ ನಿಪುಣರು. ಬೇಕಾದರೆ ಅವರಲ್ಲಿ ಒಬ್ಬನೊಡನೆ ಯುದ್ಧಮಾಡಲು ನನ್ನ ಸ್ನೇಹಿತರೊಡನೆ ನಾನು ಮಾತ್ರ ಬರುತ್ತೇನೆ.”

ಹೀಗೆ ದಶರಥನು ಅಸಂಗತವಾಗಿ ಮಾತುಗಳನ್ನಾಡಲು ಕೌಶಿಕರಿಗೆ ಪರಮಕ್ರೋಧವುಂಟಾಯಿತು. ಯಜ್ಞದಲ್ಲಿ ಚೆನ್ನಾಗಿ ಹುತವಾಗಿರುವ ಅಗ್ನಿಗೆ ತುಪ್ಪವನ್ನು ಸುರಿದರೆ ಅದು ಭುಗಿಲೇಳುವಂತೆ–ಮಹರ್ಷಿಯೆಂಬ ಬೆಂಕಿಯು ರೋಷದಿಂದ ಭುಗಿಲೆದ್ದಿತು.

೨೦ನೆಯ ಸರ್ಗವು ಮುಗಿಯಿತು.

ವಿಶ್ವಾಮಿತ್ರರ ರೋಷದ ಮಾತುಗಳು : ವಸಿಷ್ಠರು ದಶರಥನನ್ನು ಸಂತೈಸಿದುದು

ತಚ್ಛ್ರುತ್ವಾ ವಚನಂ ತಸ್ಯ ಸ್ನೇಹಪರ್ಯಾಕುಲಾಕ್ಷರಮ್ ।
ಸಮನ್ಯುಃ ಕೌಶಿಕೋ ವಾಕ್ಯಂ ಪ್ರತ್ಯುವಾಚ ಮಹೀಪತಿಮ್ ॥೧॥

ದಶರಥನಿಗೆ ಪುತ್ರವಾತ್ಸಲ್ಯವೊಂದೆಡೆ ; ಮತ್ತೊಂದೆಡೆಯಲ್ಲಿ ಮಹರ್ಷಿಯ ಶಾಪದ ಭಯ. ಇದರಿಂದಾಗಿ ದಶರಥನು ಮಾತನಾಡುತ್ತಿದ್ದಾಗ ಗದ್ಗದಸ್ವರದಿಂದ ಮಾತನಾಡುತ್ತಿದ್ದನು. ಅದನ್ನು ಕೇಳಿ ಕೋಪಗೊಂಡ ವಿಶ್ವಾಮಿತ್ರರು ರಾಜನಿಗೆ ಹೇಳಿದರು :

ಪೂರ್ವಮರ್ಥಂ ಪ್ರತಿಶ್ರುತ್ಯ ಪ್ರತಿಜ್ಞಾಂ ಹಾತುಮಿಚ್ಛಸಿ ।
ರಾಘವಾಣಾಮಯುಕ್ತೋಽಯಂ ಕುಲಸ್ಯಾಸ್ಯ ವಿಪರ್ಯಯಃ ॥

ಯದೀದಂ ತೇ ಕ್ಷಮಂ ರಾಜನ್ಗಮಿಷ್ಯಾಮಿ ಯಥಾಗತಮ್ ।
ಮಿಥ್ಯಾಪ್ರತಿಜ್ಞಃ ಕಾಕುತ್ಸ್ಥ ಸುಖೀ ಭವ ಸಬಾನ್ಧವಃ ॥೩॥

“ಮಹಾರಾಜ! ಹಿಂದೆ ನಾನು ಕೇಳಿದಾಗ ಯಾವ ಕಾರ್ಯವನ್ನಾದರೂ ಮಾಡಿಕೊಡುವೆನೆಂದು ಮೊದಲು ವಾಗ್ದಾನಮಾಡಿ ಈಗ ಆ ಪ್ರತಿಜ್ಞೆಯನ್ನು ಪರಿತ್ಯಜಿಸಲು ಯತ್ನಿಸುತ್ತಿರುವೆ. ಈ ವಿಧವಾದ ಪ್ರತಿಜ್ಞಾಭಂಗವು ರಘುವಂಶೀಯರಿಗೆ ಉಚಿತವಲ್ಲ. ‘ಸತ್ಯಪ್ರತಿಜ್ಞರ ಮಹಾವಂಶದಲ್ಲಿ ಮಿಥ್ಯಾವಾದಿಯೊಬ್ಬನು ಹುಟ್ಟಿದನು’–ಎಂಬ ಅಪಯಶಸ್ಸೂ ನಿನಗುಂಟಾಗುವುದು. ಮಹಾರಾಜ! ಈ ಪ್ರತಿಜ್ಞಾತ್ಯಾಗವು ನಿನಗೆ ಯುಕ್ತವೆನಿಸಿದರೆ–ಬಂದ ಹಾದಿಯನ್ನು ಹಿಡಿದು ನಾನಿನ್ನು ಹೊರಡುತ್ತೇನೆ. ಬಂಧು-ಬಾಂಧವರೊಡನೆ ಸುಖವಾಗಿರು. ನಾನಿನ್ನು ಹೊರಡುವೆನು.”

ಧೀಮಂತರಾದ ವಿಶ್ವಾಮಿತ್ರರು ಕ್ರೋಧಾವಿಷ್ಟರಾದುದನ್ನು ಕಂಡು ಭೂಮಿಯೇ ನಡುಗಿತು. ದೇವತೆಗಳೂ ಭೀತರಾದರು. ವಿಶ್ವಾಮಿತ್ರರ

ಕೋಪದ ಕಾರಣದಿಂದಾಗಿ ಜಗತ್ತೇ ಭಯಗೊಂಡುದನ್ನು ಕಂಡ ಮಹರ್ಷಿಗಳಾದ, ಸುವ್ರತರಾದ, ಧೀರರಾದ ವಸಿಷ್ಠರು ದಶರಥರಾಜನಿಗೆ ಹೇಳಿದರು:

"ಮಹಾರಾಜ! ನೀನು ಮಹಾವಂಶವಾದ ಇಕ್ಷ್ವಾಕುವಂಶದಲ್ಲಿ ಹುಟ್ಟಿರುವೆ. ಸದ್ಧರ್ಮಾಚರಣೆಯಲ್ಲಿ ಸಾಕ್ಷಾತ್ ಧರ್ಮದೇವತೆಗೆ ಸಮಾನನೆನಿಸಿರುವೆ. ಧೈರ್ಯಶಾಲಿಯಾಗಿರುವೆ. ಮೇಲಾಗಿ ಸತ್ಯಸಂಕಲ್ಪನಾಗಿರುವೆ. ಸಕಲ ಸಂಪತ್ತುಗಳಿಂದಲೂ ಕೂಡಿರುವೆ. ಇಂತಹ ನೀನು ಇಂದು ಪ್ರತಿಜ್ಞಾವಚನ ಭಂಗವೆಂಬ ಅಧರ್ಮಕಾರ್ಯವನ್ನು ಮಾಡಿ ನಿನ್ನ ಸ್ವಭಾವಜನ್ಯವಾದ ಧರ್ಮನಿಷ್ಠೆಯನ್ನು ಪರಿತ್ಯಜಿಸಬೇಡ. ಮೂರು ಲೋಕಗಳಲ್ಲಿಯೂ ರಘುಕುಲೋತ್ಪನ್ನನಾದ ದಶರಥನು ಧರ್ಮಾತ್ಮನೆಂಬುದಾಗಿ ವಿಖ್ಯಾತವಾಗಿದೆ. ಸತ್ಯವಾಕ್ಯಪರಿಪಾಲನವೆಂಬ ಆ ಸ್ವಧರ್ಮವನ್ನು ಪರಿಪಾಲಿಸು. ಈ ಅಧರ್ಮದ ಭಾರವನ್ನು ತಲೆಯ ಮೇಲೆ ಹೊತ್ತುಕೊಳ್ಳಬೇಡ.

ಸಂಶ್ರುತ್ಯೈವಂ ಕರಿಷ್ಯಾಮೀತ್ಯಕುರ್ವಾಣಸ್ಯ ರಾಘವ ।
ಇಷ್ಟಾಪೂರ್ತವಧೋ ಭೂಯಾತ್ತಸ್ಮಾದ್ರಾಮಂ ವಿಸರ್ಜಯ ॥೮॥

ಮಹಾರಾಜ! 'ತಮ್ಮ ಕಾರ್ಯವನ್ನು ಮಾಡಿಕೊಡುವೆನು'–ಎಂದು ಪ್ರತಿಜ್ಞಾವಚನವನ್ನು ಕೊಟ್ಟನಂತರ ಕೊಟ್ಟಭಾಷೆಯನ್ನು ಪರಿಪಾಲನೆಮಾಡದಿದ್ದರೆ ಅಶ್ವಮೇಧಾದಿ ಯಾಗಗಳನ್ನು ಮಾಡಿದ ಮತ್ತು ವಾಪೀ-ಕೂಪ-ತಟಾಕಾದಿಗಳನ್ನು ನಿರ್ಮಿಸಿದ ಫಲಗಳೆಲ್ಲವೂ ನಾಶವಾದೀತು.* ಈ ವಿಧವಾದ ಅನರ್ಥಕ್ಕೆ ಅವಕಾಶವಾಗದ ರೀತಿಯಲ್ಲಿ ಒಡನೆಯೇ ರಾಮನನ್ನು ವಿಶ್ವಾಮಿತ್ರರೊಡನೆ ಕಳುಹಿಸಿಕೊಡು. ಮಹಾರಾಜ! ರಾಮನು ಅಸ್ತ್ರವಿದ್ಯೆಯನ್ನು ತಿಳಿದಿರಲಿ ಅಥವಾ ತಿಳಿಯದಿರಲಿ–ಕುಶಿಕಪುತ್ರನಾದ ವಿಶ್ವಾಮಿತ್ರನಿಂದ ರಕ್ಷಿಸಲ್ಪಡುವ ರಾಮನನ್ನು ಎದುರಿಸಲು ರಾಕ್ಷಸರು ಖಂಡಿತವಾಗಿಯೂ ಸಮರ್ಥರಾಗುವುದಿಲ್ಲ. ಅಗ್ನಿಚಕ್ರದಿಂದ ಆವೃತವಾಗಿರುವ ಅಮೃತವನ್ನು ಮುಟ್ಟಲು ಯಾರಿಂದಲಾದರೂ ಸಾಧ್ಯವಾಗುವುದೇ? ಅದೇ ರೀತಿಯಲ್ಲಿ ವಿಶ್ವಾಮಿತ್ರ

* ಇಷ್ಟವೆಂದರೆ ಯಜ್ಞ-ಯಾಗಾದಿಗಳು. ಪೂರ್ತವೆಂದರೆ ಬಾವಿ ತೋಡಿಸುವುದು, ಅನ್ನದಾನ ಇತ್ಯಾದಿ. ವಾಪೀಕೂಪತಟಾಕಾದಿಪ್ರತಿಷ್ಠಾಸೇತುಬನ್ಧನಮ್ । ಅನ್ನಪ್ರದಾನಮಾರಾಮಃ ಪೂರ್ತಮಿತ್ಯಭಿಧೀಯತೇ ॥

ನಿಂದ ರಕ್ಷಿಸಲ್ಪಡುವ ರಾಮನನ್ನು ರಾಕ್ಷಸರೇನೂ ಮಾಡಲಾರರು. ವಿಶ್ವಾಮಿತ್ರನನ್ನು ಸಾಧಾರಣನೆಂದು ತಿಳಿಯಬೇಡ. ಇವನು ಸಶರೀರನಾದ ಧರ್ಮ ದೇವತೆಯೆಂದೇ ತಿಳಿ. ಪ್ರಪಂಚದಲ್ಲಿರುವ ವೀರ್ಯವಂತರಲ್ಲಿಯೇ ಇವನು ಶ್ರೇಷ್ಠನಾಗಿದ್ದಾನೆ. ವಿದ್ಯೆಯಲ್ಲಿ ಎಲ್ಲರಿಗಿಂತಲೂ ಅಧಿಕನಾಗಿರುತ್ತಾನೆ. ತಪಸ್ಸಿಗೆ ಆಶ್ರಯನಾಗಿರುತ್ತಾನೆ. ನಾನಾವಿಧವಾದ ಅಸ್ತ್ರಗಳನ್ನು ಇವನು ತಿಳಿದವನಾಗಿರುತ್ತಾನೆ. ಚರಾಚರಗಳುಳ್ಳ ಮೂರು ಲೋಕಗಳಲ್ಲಿ ನನ್ನ ಹೊರತಾಗಿ ಯಾವನೊಬ್ಬ ಪುರುಷನೂ ವಿಶ್ವಾಮಿತ್ರನ ಮಹಿಮೆಯನ್ನು ತಿಳಿದವನಾಗಿಲ್ಲ. ಮುಂದೆ ಯಾರಿಂದಲೂ ತಿಳಿಯಲು ಕೂಡ ಸಾಧ್ಯವಿಲ್ಲ. ದೇವತೆಗಳೇ ಆಗಲೀ, ಋಷಿಗಳೇ ಆಗಲೀ, ಅಸುರರಾಕ್ಷಸರೇ ಆಗಲೀ, ಗಂಧರ್ವ-ಯಕ್ಷರೇ ಆಗಲೀ, ಉರಗ-ಕಿನ್ನರರೇ ಆಗಲೀ–ಯಾರೂ ವಿಶ್ವಾಮಿತ್ರನು ತಿಳಿದಿರುವಷ್ಟು ಅಸ್ತ್ರವಿದ್ಯೆಯನ್ನು ತಿಳಿದವರಾಗಿಲ್ಲ. ಕೃಶಾಶ್ವನೆಂಬ ಪ್ರಜಾಪತಿಯ ಪರಮಧಾರ್ಮಿಕರಾದ ಮಕ್ಕಳಾಗಿ ಅಸ್ತ್ರಗಳೆಲ್ಲವೂ ಅವತರಿಸಿದುವು. ವಿಶ್ವಾಮಿತ್ರನು ರಾಜ್ಯವಾಳುತ್ತಿದ್ದಾಗ ಪರಮೇಶ್ವರನು ಕೃಶಾಶ್ವನ ಅಸ್ತ್ರರೂಪರಾದ ಮಕ್ಕಳನ್ನು ವಿಶ್ವಾಮಿತ್ರನಿಗೆ ಅನುಗ್ರಹಿಸಿದನು. ಕೃಶಾಶ್ವನ ಪುತ್ರರೂಪರಾದ ಮಹಾಸ್ತ್ರಗಳಿಗೆ ದಕ್ಷಬ್ರಹ್ಮನ ಇಬ್ಬರು ಕನ್ಯೆಯರು ತಾಯಿಯರು. ಅಸ್ತ್ರರೂಪರಾದ ಆ ಮಕ್ಕಳೆಲ್ಲರೂ ಒಂದೇ ರೂಪದವರಲ್ಲ ; ನಾನಾರೂಪಧಾರಿಗಳು. ಮಹಾವೀರ್ಯವಂತರು. ತೇಜಸ್ಸಿನಿಂದ ಪ್ರಕಾಶಿಸುತ್ತಿರುವವರು. ತಮ್ಮನ್ನು ಮಂತ್ರಪೂರ್ವಕವಾಗಿ ಪ್ರಯೋಗಿಸಿದೊಡನೆಯೇ ಎದುರಾಳಿಯನ್ನು ಧ್ವಂಸಮಾಡಿ ಪ್ರಯೋಕ್ತೃವಿಗೆ ವಿಜಯವನ್ನುಂಟುಮಾಡುವವರು. ಹಿಂದೆ ಹೇಳಿದಂತೆ ದಕ್ಷಕನ್ಯೆಯರಾದ, ಕೃಶವಾದ ನಡುವುಳ್ಳ ಜಯಾ ಮತ್ತು ಸುಪ್ರಭೆಯರು ಮಹಾತೇಜಸ್ಸಿನಿಂದ ಕೂಡಿದ್ದ ನೂರು ಶಸ್ತ್ರಾಸ್ತ್ರಗಳನ್ನು ಪ್ರಸವಿಸಿದರು. ಅವರಲ್ಲಿ ಜಯಾ ಎಂಬ ದಕ್ಷಕನ್ಯೆಯು ಅಸುರಸೈನ್ಯಗಳ ವಧೆಗೋಸ್ಕರ ವರವನ್ನು ಪಡೆದು ಶ್ರೇಷ್ಠರಾದ, ಅಮಿತಪರಾಕ್ರಮವುಳ್ಳ, ಕಾಮರೂಪಿಗಳಾದ ಐವತ್ತು ಮಂದಿ ಅಸ್ತ್ರಪುತ್ರರನ್ನು ಪಡೆದಳು. ಸುಪ್ರಭೆಯೆಂಬ ದಕ್ಷಕನ್ಯೆಯೂ ದುರ್ಧರ್ಷರಾದ, ದುಸ್ಸಾಧ್ಯರಾದ, ಮಹಾಬಲಿಷ್ಠರಾದ 'ಸಂಹಾರ'ರೆಂಬ ಐವತ್ತು ಮಕ್ಕಳನ್ನು ಪ್ರಸವಿಸಿದಳು. ಸಂಹಾರಾಸ್ತ್ರಗಳು ಇಂತಹವನಲ್ಲಿ ಇವೆಯೆಂದು ತಿಳಿದೊಡನೆಯೇ ಶತ್ರುಗಳು ಹಿಮ್ಮೆಟ್ಟುತ್ತಿದ್ದರು.

ಆ ಅಸ್ತ್ರಗಳ ಪ್ರಭಾವವು ಅಂತಹುದಾಗಿದೆ. ಆ ನೂರು ಅಸ್ತ್ರಗಳನ್ನೂ ವಿಶ್ವಾಮಿತ್ರನು ಯಥಾವತ್ತಾಗಿ ತಿಳಿದಿರುವನು. ಇಷ್ಟುಮಾತ್ರವಲ್ಲ, ಮಹಾ ರಾಜ! ಅಪೂರ್ವವಾದ ಅಸ್ತ್ರಗಳ ಉತ್ಪಾದನೆಯಲ್ಲಿಯೂ ಇವನು ಮಹಾಸಮರ್ಥನು. ರಘುಕುಲಾವತಂಸನೇ! ನಾನು ಮೇಲೆಹೇಳಿದಂತೆ ಋಷಿಗಳಲ್ಲಿ ಅಗ್ರಗಣ್ಯನಾದ, ಧರ್ಮಜ್ಞನಾದ, ಮಹಾತ್ಮನಾದ ವಿಶ್ವಾಮಿತ್ರ ನಿಗೆ ಭೂತ-ಭವಿಷ್ಯದ್ವರ್ತಮಾನಗಳೆಲ್ಲವೂ ಪೂರ್ಣವಾಗಿ ತಿಳಿದಿವೆ. ಇವನು ತ್ರಿಕಾಲಜ್ಞಾನಿಯು. ಇವನಿಗೆ ತಿಳಿಯದ ವಿಷಯವೇ ಇಲ್ಲ. ಮಹಾತಪಸ್ವಿ ಯಾದ ವಿಶ್ವಾಮಿತ್ರನು ಈ ವಿಧವಾದ ವೀರ್ಯಸಂಪತ್ತಿನಿಂದ ಕೂಡಿರು ವನು. ಆದುದರಿಂದ ರಾಮನನ್ನು ಕಳುಹಿಸಿದರೆ–'ಬಾಲರಾಮನಿಗೆ ಏನಾಗಿ ಬಿಡುವುದೋ?'–ಎಂದು ಗಾಬರಿಗೊಳ್ಳುವುದು ಯುಕ್ತವಲ್ಲ. ಮಹಾರಾಜ! ಆ ರಾಕ್ಷಸರನ್ನು ನಿಗ್ರಹಮಾಡಲು ಸ್ವಯಂ ವಿಶ್ವಾಮಿತ್ರನೇ ಸಮರ್ಥ ನೆಂಬುದರಲ್ಲಿ ಸ್ವಲ್ಪವಾದರೂ ಸಂಶಯವಿಲ್ಲ. ಕ್ಷಣಮಾತ್ರದಲ್ಲಿ ಅವರನ್ನು ಪರಿವಾರದೊಡನೆ ಭಸ್ಮೀಭೂತರನ್ನಾಗಿ ಮಾಡಬಲ್ಲನು. ಆದರೆ ನಿನ್ನ ಮಗ ನಿಗೆ ಹಿತವನ್ನುಂಟುಮಾಡುವ ಸಲುವಾಗಿ ನಿನ್ನ ಬಳಿಗೆ ಬಂದು ಮಗನನ್ನು ಕಳುಹಿಸುವಂತೆ ಯಾಚಿಸುತ್ತಿರುವನು."

ಪುರೋಹಿತರಾದ ವಸಿಷ್ಠರ ಮಾತುಗಳನ್ನು ಕೇಳಿ ರಘುಕುಲಾವತಂಸ ನಾದ ದಶರಥನ ಮನಸ್ಸು ಪ್ರಸನ್ನವಾಯಿತು. ಅವರ ಮಾತುಗಳನ್ನು ಕೇಳಿ ಪ್ರಸಿದ್ಧವಾದ ಯಶಸ್ಸುಳ್ಳ ರಾಜೇಂದ್ರನು ಬಹುವಾಗಿ ಆನಂದಿಸಿದನು. ಶ್ರೀರಾಮನನ್ನು ವಿಶ್ವಾಮಿತ್ರರಿಗೊಪ್ಪಿಸಲು ಮನಸ್ಸುಮಾಡಿದನು.

೨೧ನೆಯ ಸರ್ಗವು ಮುಗಿಯಿತು.*

---

* ಲವ-ಕುಶರು ೩.೨ ದಿವಸಗಳು ವಾಲ್ಮೀಕಿಪ್ರಣೀತವಾದ ಶ್ರೀಮದ್ರಾಮಾಯಣವನ್ನು ರಾಮನ ಸನ್ನಿಧಿಯಲ್ಲಿ ಹಾಡಿದರೆಂಬ ಪ್ರತೀತಿಯಿದೆ. ಮೊದಲನೆಯ ದಿವಸ ಇಲ್ಲಿಗೆ ನಿಲ್ಲಿಸಿದರು. ಪಾಲ್ಘಾಟಿನ ವಾಧ್ಯಾರ್ ಪ್ರೆಸ್ಸಿನವರು ಪ್ರಕಟಿಸಿರುವ ರಾಮಾಯಣ ಮಾಹಾತ್ಮ್ಯದ ಪ್ರಕಾರ ಇಲ್ಲಿಗೆ ೭೫೫ ಶ್ಲೋಕಗಳಾಗುತ್ತವೆ.

ಬಾಲಕಾಂಡ ೨೨ನೆಯ ಸರ್ಗ

ದಶರಥನಿಂದ ರಾಮ-ಲಕ್ಷ್ಮಣರ ಬೀಳ್ಕೊಡುಗೆ: ಮಾರ್ಗದಲ್ಲಿ ರಾಮನಿಗೆ ವಿಶ್ವಾಮಿತ್ರರಿಂದ ಬಲಾ-ಅತಿಬಲಾ ಎಂಬ ವಿದ್ಯೆಗಳ ಉಪದೇಶ

ತಥಾ ವಸಿಷ್ಠೇ ಬ್ರುವತಿ ರಾಜಾ ದಶರಥಃ ಸ್ವಯಮ್ ।
ಪ್ರಹೃಷ್ಟವದನೋ ರಾಮಮಾಜುಹಾವ ಸಲಕ್ಷ್ಮಣಮ್ ॥೧॥

ವಸಿಷ್ಠರು ಮೇಲೆ ಹೇಳಿದಂತೆ ರಾಜನಿಗೆ ಬೋಧನೆಮಾಡಿದನಂತರ ಸಂತುಷ್ಟಹೃದಯನಾದ ದಶರಥನು ಲಕ್ಷ್ಮಣಸಮೇತನಾದ ಶ್ರೀರಾಮನನ್ನು

ಕರೆಕಳುಹಿಸಿದನು. ಶ್ರೀರಾಮನು, ತಾಯಿಯಾದ ಕೌಸಲ್ಯೆಯಿಂದಲೂ–ತಂದೆಯಾದ ದಶರಥನಿಂದಲೂ ಆಶೀರ್ವಾದಗಳನ್ನು ಪಡೆದನು. ಪುರೋಹಿತರಾದ ವಸಿಷ್ಠರು ಮಂಗಲಪ್ರದವಾದ ಮಂತ್ರಗಳಿಂದ ರಾಜಪುತ್ರನನ್ನು ಅಭಿಮಂತ್ರಿಸಿದರು. ದಶರಥರಾಜನು ತನ್ನ ಪ್ರೇಮಪುತ್ರನನ್ನು ಬಿಗಿದಪ್ಪಿ ನೆತ್ತಿಯನ್ನು ಆಘ್ರಾಣಿಸಿ, ಪ್ರೇಮದಿಂದ ಪರಿಪೂರ್ಣವಾದ ಹೃದಯದಿಂದ ಶ್ರೀರಾಮನನ್ನು ವಿಶ್ವಾಮಿತ್ರರಿಗೆ ಒಪ್ಪಿಸಿದನು. ರಾಜೀವಲೋಚನನಾದ ಶ್ರೀರಾಮನು ವಿಶ್ವಾಮಿತ್ರರ ಬಳಿಗೆ ಹೋದುದನ್ನು ಕಂಡು ಶುಭಶಕುನಸೂಚಕವಾಗಿ ವಾಯುವು ಧೂಳಿಲ್ಲದೆ ಮೆಲ್ಲಗೆ ಹಿಂದುಗಡೆಯಿಂದ ಮುಂದಕ್ಕೆ ಬೀಸಿತು. ರಾಮ-ಲಕ್ಷ್ಮಣ-ವಿಶ್ವಾಮಿತ್ರರು ಪ್ರಯಾಣಮಾಡುತ್ತಿರುವಾಗ ದೇವದುಂದುಭಿಗಳೊಡನೆ ಪುಷ್ಪವೃಷ್ಟಿಯಾಯಿತು. ಶಂಖ-ದುಂದುಭಿಗಳ ಮಧುರವಾದ ನಿನಾದವು ಕೇಳಿಸುತ್ತಿದ್ದಿತು. ವಿಶ್ವಾಮಿತ್ರರು ಮುಂದೆ ಹೋಗುತ್ತಿದ್ದರು. ಮಹಾಯಶಸ್ವಿಯಾದ, ಕಪೋಲಗಳ ಮೇಲೆ ಸಣ್ಣ-ಸಣ್ಣ ಕೂದಲುಗಳಿಂದ ಕೂಡಿದ್ದ ಮತ್ತು ಧನುರ್ಧಾರಿಯಾದ ಶ್ರೀರಾಮನು ಅವರನ್ನನುಸರಿಸಿ ನಡೆದುಹೋಗುತ್ತಿದ್ದನು. ಲಕ್ಷ್ಮಣನು ಶ್ರೀರಾಮನನ್ನು ಹಿಂಬಾಲಿಸಿ ನಡೆದನು. ಶ್ರೀರಾಮ-ಲಕ್ಷ್ಮಣರು ತಮ್ಮ ಎರಡು ಹೆಗಲುಗಳಿಗೆ ಎರಡು ಬತ್ತಳಿಕೆಗಳನ್ನು ಕಟ್ಟಿಕೊಂಡಿದ್ದರು. ಧನುಸ್ಸನ್ನು ಹಿಡಿದಿದ್ದರು. ತಮ್ಮ ದಿವ್ಯತೇಜಸ್ಸಿನಿಂದ ಹತ್ತು ದಿಕ್ಕುಗಳನ್ನೂ ಪ್ರಕಾಶಗೊಳಿಸುತ್ತಿದ್ದರು. ಆಗಿನ ಅವರ ವೇಷ-ಆಕಾರಗಳನ್ನು ನೋಡಿದರೆ ಮೂರು ತಲೆಗಳ ಸರ್ಪಗಳಂತೆ ಕಾಣುತ್ತಿದ್ದರು.* ಇಂತಹ ಅದ್ಭುತವಾದ ರೂಪ-ವೀರ್ಯಾದಿ ವೈಭವಯುಕ್ತರಾದ, ಶ್ರೀರಾಮ-ಲಕ್ಷ್ಮಣರು-ದೇವಲೋಕದಲ್ಲಿ ಪಿತಾಮಹನನ್ನನುಸರಿಸಿ ಅಶ್ವಿನೀದೇವತೆಗಳು ಹೋಗುತ್ತಿರುವಂತೆ–ವಿಶ್ವಾಮಿತ್ರರನ್ನು ಅನುಸರಿಸಿ ಹೋಗುತ್ತಿದ್ದರು. ಧನುಷ್ಪಾಣಿಗಳಾಗಿ, ದಿವ್ಯಾಲಂಕಾರವಿಶಿಷ್ಟರಾಗಿ, ನೀರುಡದ ಚರ್ಮದಿಂದ ಮಾಡಿರುವ ಬೆರಳು ರಕ್ಷಣೆಯ ಚೀಲವನ್ನು ಧರಿಸಿದ್ದ, ಖಡ್ಗಪಾಣಿಗಳಾದ, ಮಹಾಕಾಂತಿಮಂತರಾದ, ಸುಕುಮಾರರಾದ, ಸುಮನೋಹರವಾದ ಶರೀರಗಳಿಂದ ಕೂಡಿದ್ದ, ಶರೀರಕಾಂತಿಯಿಂದ ಪ್ರಕಾಶಿತ

ಎರಡು ಹೆಗಲುಗಳ ಮೇಲ್ಭಾಗದಲ್ಲಿ ಕಾಣುವ ಎರಡು ಬತ್ತಳಿಕೆಗಳು ಮತ್ತು ಅವುಗಳ ನಡುಭಾಗದಲ್ಲಿ ಕಾಣುವ ಶಿರಸ್ಸಿನಿಂದ ಕೂಡಿ ಮೂರು ತಲೆಗಳ ಸರ್ಪಗಳಂತೆ ಕಾಣುತ್ತಿದ್ದರು.

ರಾದ, ನಿಷ್ಕಳಂಕರಾದ ಸಹೋದರರು–ಯಜ್ಞೇಶ್ವರನಿಂದ ಉದ್ಭವಿಸಿದ ಸ್ಕಂದ–ವಿಶಾಖರು ಅಚಿಂತ್ಯನಾದ ಮಹಾದೇವನನ್ನು ಅನುಸರಿಸಿ ಹೋದಂತೆ–ಕುಶಿಕಸುತರಾದ ವಿಶ್ವಾಮಿತ್ರರನ್ನು ಅನುಸರಿಸಿ ನಡೆಯುತ್ತಾ ವಿಶೇಷವಾಗಿ ಶೋಭಿಸಿದರು. ಸರಯೂನದಿಯ ದಕ್ಷಿಣತೀರದಲ್ಲಿ ಒಂದೂವರೆ ಯೋಜನ ದಷ್ಟು ಪ್ರಯಾಣಮಾಡಿದ ವಿಶ್ವಾಮಿತ್ರರು–'ರಾಮ!' ಎಂದು ಸಂಬೋಧಿಸಿ, ಸುಮಧುರವಾದ ಈ ಮಾತನ್ನಾಡಿದರು :

"ರಾಮ! ಶುದ್ಧಾಚಮನಮಾಡು, ಮಗು! ಈಗ ನಿನಗೆ ಮಹಾವಿದ್ಯೆ ಯನ್ನು ಉಪದೇಶಿಸಲಿರುವ ಮುಹೂರ್ತವು ಮೀರಿಹೋಗಬಾರದು. ಬಲಾ-ಅತಿಬಲಾ ಎಂಬ ಮಹಾವಿದ್ಯೆಗಳ ಸಾಧನೆಗೆ ಮೂಲಮಂತ್ರಗಳನ್ನು ಉಪದೇಶಿಸುವೆನು, ಸ್ವೀಕರಿಸು. ಈ ಮಂತ್ರಗಳ ಪುನಶ್ಚರಣೆಯಿಂದಾಗಿ ನಿನಗೆ ಬಲಾ ಮತ್ತು ಅತಿಬಲಾವಿದ್ಯೆಗಳು ಸಿದ್ಧಿಸುವುವು. ಅದರ ಫಲವೇನೆಂಬು ದನ್ನು ಹೇಳುವೆನು ; ಕೇಳು. ಎಷ್ಟೇ ನಡೆದರೂ ಎಷ್ಟೇ ಯುದ್ಧ ಮಾಡಿದರೂ ಶ್ರಮವಾಗುವುದಿಲ್ಲ. ಜ್ವರವೇ ಮೊದಲಾದ ಉಪದ್ರವಗಳೊಂದೂ ಹತ್ತಿರ ಕೂಡ ಸುಳಿಯಲಾರವು. ಈ ವಿದ್ಯೆಗಳುಳ್ಳ ಮನುಷ್ಯನು ಯಾವಾಗಲೂ ಕಾಂತಿಹೀನನಾಗುವುದಿಲ್ಲ. ಮಲಗಿರಲಿ, ಅನ್ಯಮನಸ್ಕನಾಗಿರಲಿ–ರಾಕ್ಷಸರು ಅವನನ್ನು ಪರಾಭವಗೊಳಿಸಲಾರರು. ಈ ಮಹಾಮಂತ್ರ ಪುನಶ್ಚರಣೆಮಾಡಿ ಈ ಎರಡು ವಿದ್ಯೆಗಳನ್ನೂ ಸಾಧಿಸಿಕೊಂಡವನ ಬಾಹುಬಲವು ಪೃಥ್ವಿ ಯಲ್ಲಿಯೇ ಬೇರಾರಿಗೂ ಇರುವುದಿಲ್ಲ. ರಾಮ! ನೀನೀ ವಿದ್ಯೆಯನ್ನು ಸಾಧನೆಮಾಡಿಕೊಳ್ಳುವುದರಿಂದ ಮೂರು ಲೋಕಗಳಲ್ಲಿಯೂ ನಿನಗೆ ಸಮಾ ನರು ಯಾರೂ ಇರಲಾರರು. ಸೌಭಾಗ್ಯದಲ್ಲಿ, ಸಾಮರ್ಥ್ಯದಲ್ಲಿ, ಐಹಿಕಾ ಮುಷ್ಮಿಕಜ್ಞಾನದಲ್ಲಿ, ಬುದ್ಧಿಶಕ್ತಿಯಲ್ಲಿ ಮತ್ತು ವಾದ-ವಿವಾದಗಳು ಉಂಟಾ ದಾಗ ಪ್ರತ್ಯುತ್ತರ ಕೊಡುವುದರಲ್ಲಿ-ನಿನ್ನ ಸಮಾನರು ಈ ತ್ರಿಭುವನದಲ್ಲಿಯೇ ಯಾರೂ ಇರುವುದಿಲ್ಲ. ಈ ಬಲಾ ಮತ್ತು ಅತಿಬಲಾವಿದ್ಯೆಗಳು ಸಕಲಜ್ಞಾನ ಗಳಿಗೂ ತಾಯಿಯಂತಿವೆ. ಇವು ನಿನಗೆ ದೊರೆತರೆ ನಿನ್ನ ಸಮಾನರೇ ಯಾರೂ ಇರುವುದಿಲ್ಲ. ಇಷ್ಟು ಮಾತ್ರವಲ್ಲ. ಈ ಎರಡು ಮಹಾವಿದ್ಯೆಗಳ ಸಿದ್ಧಿಯಿಂದ ನಿನಗೆ ಹಸಿವು-ಬಾಯಾರಿಕೆಗಳುಂಟಾಗುವುದಿಲ್ಲ. ಸರ್ವಲೋಕ ಗಳ ರಕ್ಷಣಾರ್ಥವಾಗಿ ಈ ಎರಡು ಮಹಾವಿದ್ಯೆಗಳ ಮೂಲಮಂತ್ರಗಳನ್ನು

ಸ್ವೀಕರಿಸು. ಇದರ ಪುನಶ್ಚರಣೆಯಿಂದ ನಿನಗೆ ಯಶಸ್ಸೂ ಪ್ರಾಪ್ತವಾಗುವುದು. ಕಾಕುತ್ಸ್ಥ! ಈ ಎರಡು ವಿದ್ಯೆಗಳು ಸಾಕ್ಷಾತ್ ಪಿತಾಮಹನ ಮಕ್ಕಳು. ನೀನು ಈ ವಿದ್ಯಾಗ್ರಹಣಕ್ಕೆ ಸತ್ಪಾತ್ರನಾಗಿರುವುದರಿಂದ ನಿನಗೆ ಇವುಗಳನ್ನು ಉಪದೇಶಿಸಬೇಕೆಂಬುದು ನನ್ನ ಆಶಯವಾಗಿದೆ. ರಾಘವ! ಈ ವಿದ್ಯೆಗಳ ಸಾಧನೆಯಾದ ಮೇಲೆ ಪ್ರಾಪ್ತವಾಗುವ ಅನೇಕ ಗುಣಗಳು ನಿನ್ನಲ್ಲಿ ಈಗಲೇ ಮೂರ್ತಿಮತ್ತಾಗಿ ನೆಲೆಸಿವೆ. ಆದರೂ ಮಹಾತಪಸ್ಸನ್ನು ಮಾಡಿ ಪಡೆದಿರುವ ಈ ವಿದ್ಯೆಗಳನ್ನು ನಿನಗೆ ಉಪದೇಶಿಸಿದಲ್ಲಿ–ಅವು ಪ್ರಪಂಚದಲ್ಲಿ ದುಷ್ಟನಿಗ್ರಹ-ಶಿಷ್ಟಪರಿಪಾಲನೆಗಳಿಗೆ ಬಹುವಿಧವಾದ ಕಾರ್ಯಮಾಡಲು ಸಮರ್ಥವಾಗುವುವು."

ಪರಂಧಾಮನಾದ ಶ್ರೀರಾಮನು ಕೈ-ಕಾಲುಗಳನ್ನು ತೊಳೆದುಕೊಂಡು ಶುದ್ಧಾಚಮನಮಾಡಿ, ವಿಕಸಿತಮುಖಾರವಿಂದವುಳ್ಳವನಾಗಿ, ಮಹಾಮುನಿಗಳಾದ ವಿಶ್ವಾಮಿತ್ರರ ಸಮ್ಮುಖದಲ್ಲಿ ಕುಳಿತು ಪ್ರಣವಪೂರ್ವಕವಾಗಿ ಬಲಾ-ಅತಿಬಲಾವಿದ್ಯೆಗಳ ಮೂಲಮಂತ್ರಗಳ ಉಪದೇಶವನ್ನು ಆತ್ಮಜ್ಞಾನಿಗಳಾದ ವಿಶ್ವಾಮಿತ್ರಮಹರ್ಷಿಗಳಿಂದ ಪಡೆದನು. ಉಪದೇಶಿಸುತ್ತಿದ್ದಂತೆಯೇ ಬಲಾ-ಅತಿಬಲಾ ವಿದ್ಯಾಭಿಮಾನಿ ದೇವತೆಗಳು ಮಂದಹಾಸದಿಂದ ರಾಮನಲ್ಲಿ ಸೇರಿಕೊಂಡುವು. ಅದರಿಂದಾಗಿ ಮಹಾಪರಾಕ್ರಮಿಯಾದ ಶ್ರೀರಾಮನು ಶರತ್ಕಾಲದ ಸೂರ್ಯನಂತೆ ತೊಳತೊಳಗಿ ಬೆಳಗಿದನು. ಉಪದೇಶಾನಂತರ ಶ್ರೀರಾಮನು ವಿದ್ಯಾಗುರುಗಳಿಗೆ ಮಾಡಬೇಕಾದ ಶುಶ್ರೂಷೆಗಳೆಲ್ಲವನ್ನೂ ಅವರಿಗೆ ಮಾಡಿದನು. ಸರಯೂನದಿಯ ತೀರದಲ್ಲಿಯೇ ರಾಮ-ಲಕ್ಷ್ಮಣ-ವಿಶ್ವಾಮಿತ್ರರು ಆ ರಾತ್ರಿಯನ್ನು ಸುಖವಾಗಿ ಕಳೆದರು. ಚಕ್ರವರ್ತಿಯ ಪುತ್ರರಾಗಿ ತಮಗೆ ಮಲಗಲು ಯೋಗ್ಯವಲ್ಲದ ದರ್ಭೆಯ ಹಾಸಿಗೆಯಲ್ಲಿ ಮಲಗಿದ್ದರೂ–ವಿಶ್ವಾಮಿತ್ರರ ಮಾತುಗಳನ್ನು ಬಹಳ ಆಸಕ್ತಿಯಿಂದ ಕೇಳುತ್ತಿದ್ದ, ದಶರಥನ ಪುತ್ರಶ್ರೇಷ್ಠರಿಗೆ ಆ ರಾತ್ರಿಯು ಸುಖವಾಗಿ ಕಳೆಯಿತು.

೨೨ನೆಯ ಸರ್ಗವು ಮುಗಿಯಿತು.

ವಿಶ್ವಾಮಿತ್ರ-ರಾಮ-ಲಕ್ಷ್ಮಣರು ಸರಯೂ-ಗಂಗಾನದಿಗಳ ಸಮೀಪದಲ್ಲಿದ್ದ ಆಶ್ರಮದಲ್ಲಿ ರಾತ್ರಿ ತಂಗಿದುದು

ಪ್ರಭಾತಾಯಾಂ ತು ಶರ್ವರ್ಯಾಂ ವಿಶ್ವಾಮಿತ್ರೋ ಮಹಾಮುನಿಃ ।
ಅಭ್ಯಭಾಷತ ಕಾಕುತ್ಸ್ಥೌ ಶಯಾನೌ ಪರ್ಣಸಂಸ್ತರೇ ॥೧॥

ರಾತ್ರಿಯು ಕಳೆದು ಸುಪ್ರಭಾತವಾಯಿತು. ದರ್ಭೆ ಮತ್ತು ತರಗೆಲೆಗಳ ಹಾಸಿಗೆಯಲ್ಲಿ ಮಲಗಿದ್ದ ಶ್ರೀರಾಮ-ಲಕ್ಷ್ಮಣರಿಗೆ ಮುನಿಪುಂಗವರಾದ ವಿಶ್ವಾಮಿತ್ರರು ಹೇಳಿದರು :

ಕೌಸಲ್ಯಾ ಸುಪ್ರಜಾ ರಾಮ ಪೂರ್ವಾ ಸಂಧ್ಯಾ ಪ್ರವರ್ತತೇ ।
ಉತ್ತಿಷ್ಠ ನರಶಾರ್ದೂಲ ಕರ್ತವ್ಯಂ ದೈವಮಾಹ್ನಿಕಮ್ ॥೨॥

"ರಾಮ! ನಿನ್ನಿಂದ ಕೌಸಲ್ಯೆಯು ಸುಪುತ್ರವತಿಯಾದಳು, ಮಗು! ಪ್ರಾತಸ್ಸಂಧ್ಯೆಯು ಉದಯಿಸಿದೆ. ದೈವಸಂಬಂಧವಾದ ಆಹ್ನಿಕವನ್ನು ಮಾಡ ಬೇಕಾಗಿದೆ. ನರಪುಂಗವನೇ! ಹಾಸಿಗೆಯಿಂದ ಎದ್ದೇಳು."

ಮಹರ್ಷಿಯ ಪರಮಗಂಭೀರವಾದ ಮಾತನ್ನು ಕೇಳಿ ರಾಮ-ಲಕ್ಷ್ಮಣರಿಬ್ಬರೂ ಹಾಸಿಗೆಯಿಂದೆದ್ದು, ಸ್ನಾನಮಾಡಿ, ಅರ್ಘ್ಯಪ್ರದಾನ ಪೂರ್ವಕವಾಗಿ ಗಾಯತ್ರೀಮಂತ್ರವನ್ನು ಜಪಿಸಿದರು. ಮಹಾವೀರರಾದ ನಿತ್ಯಾನಂದವಿಶಿಷ್ಟರಾದ ಶ್ರೀರಾಮ-ಲಕ್ಷ್ಮಣರಿಬ್ಬರೂ ಪ್ರಾತರಾಹ್ನಿಕವನ್ನು ಮುಗಿಸಿ ತಪೋಧನರಾದ ವಿಶ್ವಾಮಿತ್ರರಿಗೆ ಅಭಿವಾದನಮಾಡಿ, ಮುಂದಿನ ಪ್ರಯಾಣಕ್ಕೆ ಸಿದ್ಧರಾಗಿ ನಿಂತರು. ಮಹಾಪರಾಕ್ರಮಶಾಲಿಗಳಾದ ಅವರು ಗುರುಗಳಾದ ವಿಶ್ವಾಮಿತ್ರರನ್ನನುಸರಿಸಿ ಪ್ರಯಾಣಮಾಡುತ್ತಾ, ಶುಭಪ್ರದ ವಾದ ಸರಯೂ-ಗಂಗಾನದಿಗಳ ಸಂಗಮಸ್ಥಾನದಲ್ಲಿ ದಿವ್ಯವಾದ ಗಂಗಾನದಿ ಯನ್ನು ಕಂಡರು. ಆ ಗಂಗಾಸಂಗಮಸ್ಥಾನದಲ್ಲಿ ಅನೇಕಸಹಸ್ರವರ್ಷ ಗಳಿಂದಲೂ ತಪಸ್ಸಿನಲ್ಲಿ ನಿರತರಾಗಿದ್ದ, ಉಗ್ರತೇಜಸ್ವಿಗಳಾದ, ಮಹಾತ್ಮ ರಾದ ಮಹರ್ಷಿಗಳ ಪುಣ್ಯಪ್ರದವಾದ ಆಶ್ರಮವನ್ನು ಸಂದರ್ಶಿಸಿದರು.

ಪುಣ್ಯತಮವಾದ ಆಶ್ರಮಸ್ಥಾನವನ್ನು ನೋಡಿ, ಶ್ರೀರಾಮ-ಲಕ್ಷ್ಮಣರು ಪರಮಪ್ರೀತರಾಗಿ ಮಹಾತ್ಮರಾದ ವಿಶ್ವಾಮಿತ್ರರನ್ನು ಕೇಳಿದರು :

"ಪೂಜ್ಯರೇ! ಪವಿತ್ರವಾದ ಈ ಆಶ್ರಮವು ಯಾರದು ಮತ್ತು ಇಲ್ಲಿ ಈಗ ಯಾರು ವಾಸವಾಗಿದ್ದಾರೆ? ಈ ವಿಷಯಗಳನ್ನು ಕೇಳಬಯಸುತ್ತೇವೆ. ಈ ಆಶ್ರಮದ ವಿಷಯವನ್ನು ತಿಳಿದುಕೊಳ್ಳಲು ನಮಗೆ ಹೆಚ್ಚು ಕುತೂಹಲ ವುಂಟಾಗಿದೆ."

ಶ್ರೀರಾಮ-ಲಕ್ಷ್ಮಣರ ಆ ಮಾತುಗಳನ್ನು ಕೇಳಿ ಮುನಿಪುಂಗವರಾದ ವಿಶ್ವಾಮಿತ್ರರೊಮ್ಮೆ ನಸುನಕ್ಕು ಹೇಳಿದರು :

"ಕುಮಾರರೇ! ಪೂರ್ವಕಾಲದಲ್ಲಿ ಈ ಆಶ್ರಮವು ಯಾರದ್ದಾಗಿತ್ತು? ಇಲ್ಲಿ ಯಾರು ತಪಸ್ಸನ್ನು ಮಾಡುತ್ತಿದ್ದರು? ಎಂಬುದನ್ನು ಹೇಳುವೆನು, ಕೇಳಿರಿ. ವಿದ್ವಾಂಸರು ಯಾವನನ್ನು–ಕಾಮ, ಕಂದರ್ಪ–ಎಂದು ಕರೆಯುವರೋ ಆ ಮನ್ಮಥನಿಗೆ ಹಿಂದೆ ದೇಹವೂ ಇದ್ದಿತು. ಒಂದಾನೊಂದು ಕಾಲದಲ್ಲಿ ದೇವೇಶ್ವರನಾದ ಶಿವನು ಇಲ್ಲಿ ನಿಯಮಪೂರ್ವಕವಾಗಿ ತಪಸ್ಸನ್ನು ಮಾಡುತ್ತಿದ್ದನು. ಅವನು ವಿವಾಹಮಾಡಿಕೊಂಡು ಮರುದ್ಗಣಗಳೊಡನೆ ಇಲ್ಲಿಗೆ ಬರುತ್ತಿದ್ದಾಗ ಆ ದುಷ್ಟಮನ್ಮಥನು ಅವನನ್ನು ಕೆಣಕಿದನು. ಆಗ ರುದ್ರನು ಕೋಪಗೊಂಡು ಹೂಂಕಾರವನ್ನು ಮಾಡಿದನು. ಆ ಮಹಾತ್ಮನು ಫಾಲನೇತ್ರದಿಂದ ನೋಡಿದೊಡನೆಯೇ ಮನ್ಮಥನ ಎಲ್ಲ ಅವಯವಗಳೂ ಸುಟ್ಟು ಭಸ್ಮವಾದುವು. ಅಂದಿನಿಂದ ಅವನ ಅಶರೀರನಾದನು. ಅವನಿಗೆ 'ಅನಂಗ' ಎಂಬ ಹೆಸರು ಬಂದಿತು.* ರುದ್ರನ ಕೋಪದಿಂದಾಗಿ ಯಾವ ಸ್ಥಳದಲ್ಲಿ ಕಂದರ್ಪನು ತನ್ನ ಅಂಗವನ್ನು ಬಿಟ್ಟನೋ–ಅಂತಹ ಸಂಪದ್ಯುಕ್ತ ವಾದ ಈ ಪ್ರದೇಶವು 'ಅಂಗದೇಶ'ವೆಂದು ಪ್ರಖ್ಯಾತವಾಗಿದೆ. ರಾಮ! ಈ ಆಶ್ರಮವು ಮಹಾನುಭಾವನಾದ ಸ್ಥಾಣುವಿನ ಪುಣ್ಯಪ್ರದವಾದ ಆಶ್ರಮ ವಾಗಿದೆ. ಇಲ್ಲಿರುವ ತಪಸ್ವಿಗಳೂ ಸ್ಥಾಣುವಿನ ಶಿಷ್ಯಪರಂಪರೆಯಿಂದ

---

* ಈಶ್ವರನು ಘೋರವಾದ ತಪಸ್ಸಿನಲ್ಲಿ ಕುಳಿತಿರುತ್ತಾನೆ. ಆಗ ದೇವತೆಗಳ ಪ್ರೇರಣೆಯಂತೆ ಕಂದರ್ಪನು ಬಂದು ಶಿವನ ಮೇಲೆ ಬಾಣಪ್ರಯೋಗಮಾಡಿ ಶಿವ ನನ್ನು ಸಮಾಧಿಸ್ಥಿತಿಯಿಂದ ಪರಾಙ್ಮುಖನನ್ನಾಗಿ ಮಾಡುತ್ತಾನೆ. ಒಡನೆಯೇ ಶಿವನು ತನ್ನ ಮೂರನೆಯ ಕಣ್ಣನ್ನು ಬಿಟ್ಟು ಕಂದರ್ಪನನ್ನು ಸುಟ್ಟುಬಿಡುತ್ತಾನೆ. ಅನಂತರ ಶಿವನನ್ನು ಪಡೆಯುವ ಸಲುವಾಗಿಯೇ ಹಿಮವತ್ಪರ್ವತದಲ್ಲಿ ತಪಸ್ಸುಮಾಡುತ್ತಿದ್ದ

ಬಂದವರಾಗಿದ್ದಾರೆ. ಇವರು ಸದಾ ಧರ್ಮಪರರಾಗಿರುವರು. ಆದುದ ರಿಂದಲೇ ಇವರು ಪಾಪರಹಿತರೂ ಆಗಿದ್ದಾರೆ. ಶುಭದರ್ಶನನೇ! ಸರಯೂ-ಗಂಗಾನದಿಗಳ ಮಧ್ಯದಲ್ಲಿರುವ ಈ ಪುಣ್ಯತಮವಾದ ಆಶ್ರಮದಲ್ಲಿಯೇ ಈ ರಾತ್ರಿಯನ್ನು ಕಳೆಯೋಣ. ನಾಳೆ ಗಂಗಾನದಿಯನ್ನು ದಾಟಿ ಮುಂದೆ ಹೋಗೋಣ. ರಾಮ! ಪುಣ್ಯತಮವಾದ ಈ ಆಶ್ರಮವನ್ನು ನಾವೆಲ್ಲರೂ ಪರಿಶುದ್ಧರಾಗಿ ಪ್ರವೇಶಿಸೋಣ. ನಮಗೆ ಈ ಆಶ್ರಮವಾಸವು ಅತ್ಯುತ್ಕೃಷ್ಟ ವಾದುದು. ಈ ರಾತ್ರಿಯನ್ನು ಇಲ್ಲಿ ಸುಖವಾಗಿ ಕಳೆಯೋಣ. ಈಗ ಸರಯೂ-ಗಂಗಾಸಂಗಮದಲ್ಲಿ ಮಿಂದು, ಸಂಧ್ಯಾವಂದನೆ-ಜಪಾದಿಗಳನ್ನು ಮಾಡಿ, ಹೋಮ-ಹವನಾದಿಗಳನ್ನೂ ಮುಗಿಸಿ, ಅನಂತರ ಈ ಪುಣ್ಯತಮ ವಾದ ಆಶ್ರಮವನ್ನು ಪ್ರವೇಶಿಸೋಣ."

ಆಶ್ರಮದ ಸಮೀಪದಲ್ಲಿ ಮಾತನಾಡುತ್ತಿದ್ದ ವಿಶ್ವಾಮಿತ್ರಾದಿಗಳ ಆಗ ಮನದ ವಿಷಯವನ್ನು ಅಲ್ಲಿದ್ದ ಮುನಿಗಳು ತಿಳಿದು ಸಂತೋಷಗೊಂಡರು. ಒಡನೆಯೇ ಎಲ್ಲರೂ ಆಶ್ರಮದ ಬಾಗಿಲಿಗೆ ಬಂದ ರಾಮ-ಲಕ್ಷ್ಮಣಸಮೇತ ರಾದ ವಿಶ್ವಾಮಿತ್ರರನ್ನು ಆದರದಿಂದ ಸ್ವಾಗತಿಸಿ, ಅರ್ಘ್ಯ-ಪಾದ್ಯ-ಆಚಮನೀ ಯಾದಿಗಳಿಂದಲೂ ಫಲಾಹಾರಗಳಿಂದಲೂ ಸತ್ಕರಿಸಿದನಂತರ ರಾಮ-ಲಕ್ಷ್ಮಣರಿಗೂ ಯಥೋಚಿತವಾಗಿ ಸತ್ಕಾರವನ್ನು ಮಾಡಿದರು. ಹಾಗೆ ಸತ್ಕಾರ ವನ್ನು ಪಡೆದನಂತರ ವಿಶ್ವಾಮಿತ್ರರು ಸಂದರ್ಭೋಚಿತವಾದ ಅನೇಕ ಕಥೆ ಗಳಿಂದ ತಪಸ್ವಿಗಳನ್ನು ಸಂತೋಷಗೊಳಿಸಿದರು. ಅನಂತರ ಏಕಾಗ್ರಚಿತ್ತರಾದ

ಉಮೆಗೂ ಮಹೇಶ್ವರನಿಗೂ ವಿವಾಹವಾಗುತ್ತದೆ. ಇದು ಪುರಾಣಾಂತರದ ಕಥೆ. ಇಲ್ಲಿ ಕಥೆಗಳಲ್ಲಿ ವ್ಯತ್ಯಾಸವಿದ್ದರೂ ತತ್ತ್ವದಲ್ಲಿ ವ್ಯತ್ಯಾಸವಿಲ್ಲ. ಇವು ಬೇರೆ ಬೇರೆ ಕಲ್ಪಗಳಲ್ಲಿ ನಡೆದ ಘಟನೆಗಳಾದುದರಿಂದ ಕಥೆಗಳಲ್ಲಿ ವ್ಯತ್ಯಾಸವಿದೆ. ಈ ಸಂದರ್ಭದಲ್ಲಿ 'ತಪಸ್ಯನ್ತಮಿಹ ಸ್ಥಾಣುಂ' ಆದೊಡನೆಯೇ 'ಕೃತೋದ್ವಾಹಂ' ಶ್ಲೋಕವು ಬಂದಿರುವುದರಿಂದಲೂ ಅನಂತರದಲ್ಲಿ '**ಧರ್ಷಯಾಮಾಸ ದುರ್ಮೇಧಾಃ**' ಎಂದು ಬಂದಿರುವುದರಿಂದಲೂ ಇದನ್ನು ಪುರಾಣಾಂತರಗಳಲ್ಲಿರುವ ಕಥೆಗೆ ಸಮನ್ವಯಮಾಡಲು ವ್ಯಾಖ್ಯಾನಕಾರರು ಬಹಳ ಶ್ರಮಿಸಿರುತ್ತಾರೆ. 'ಉದ್ವಾಹಃ' ಎಂದರೆ 'ವಿವಾಹ' ಎಂದು ಸ್ವಾಭಾವಿಕವಾದ ಅರ್ಥ. **ಕೃತೋದ್ವಾಹಂ** ಎಂದರೆ' ವಿವಾಹಕರ್ಮವನ್ನು ಮುಗಿಸಿಕೊಂಡವನು' ಅರ್ಥಾತ್ 'ಮದುವೆಯಾದವನು' ಎಂದಾಗುತ್ತದೆ.

ತಪಸ್ವಿಗಳೆಲ್ಲರೂ ರಾಮಾದಿಗಳೊಡನೆ ನದೀತೀರಕ್ಕೆ ಹೋಗಿ ಸಂಧ್ಯಾವಂದನೆಯನ್ನು ಮಾಡಿ, ಗಾಯತ್ರೀ ಮಹಾಮಂತ್ರವನ್ನು ಜಪಿಸಿದರು. ಬಳಿಕ ಸುವ್ರತರಾದ ಆಶ್ರಮವಾಸಿಗಳೊಡನೆ ಶ್ರೀರಾಮ-ಲಕ್ಷ್ಮಣ-ವಿಶ್ವಾಮಿತ್ರರು ಪುಣ್ಯಾಶ್ರಮವನ್ನು ಪ್ರವೇಶಿಸಿದರು. ಆ ಕಾಮಾಶ್ರಮದಲ್ಲಿ ಆ ರಾತ್ರಿ ಶ್ರೀರಾಮ-ಲಕ್ಷ್ಮಣ-ವಿಶ್ವಾಮಿತ್ರರೂ ಮತ್ತು ಇತರ ಮಹರ್ಷಿಗಳೂ ಸುಖವಾಗಿದ್ದರು. ಧರ್ಮಾತ್ಮರಾದ, ಮುನಿಪುಂಗವರಾದ ಕೌಶಿಕರು ಲೋಕಾಭಿರಾಮವಾದ ಕಥೆಗಳಿಂದ ಲೋಕಾಭಿರಾಮರಾದ ರಾಮ-ಲಕ್ಷ್ಮಣರನ್ನು ಸಂತೋಷಗೊಳಿಸಿದರು.

ಇಪ್ಪತ್ತಮೂರನೆಯ ಸರ್ಗವು ಮುಗಿಯಿತು.

ಬಾಲಕಾಂಡ ೨೪ನೆಯ ಸರ್ಗ

ಗಂಗೆಯನ್ನು ದಾಟುತ್ತಿದ್ದಾಗ ನೀರಿನಿಂದ ಹೊರಬರುತ್ತಿದ್ದ ಶಬ್ದದ ವಿಷಯವಾಗಿ ರಾಮ-ಲಕ್ಷ್ಮಣರ ಪ್ರಶ್ನೆ: ವಿಶ್ವಾಮಿತ್ರರಿಂದ ವಿವರಣೆ: ಮಲದ-ಕರೂಷ ಮತ್ತು ತಾಟಕಾವನಗಳ ಪರಿಚಯ ಮಾಡಿಕೊಡುತ್ತಾ ತಾಟಕಿಯನ್ನು ಸಂಹರಿಸುವಂತೆ ವಿಶ್ವಾಮಿತ್ರರು ಶ್ರೀರಾಮನಿಗೆ ಆಜ್ಞಾಪಿಸಿದುದು

ತತಃ ಪ್ರಭಾತೇ ವಿಮಲೇ ಕೃತಾಹ್ನಿಕಮರಿಂದಮೌ ।
ವಿಶ್ವಾಮಿತ್ರಂ ಪುರಸ್ಕೃತ್ಯ ನದ್ಯಾಸ್ತೀರಮುಪಾಗತೌ ॥೧॥

ಈ ವಿಧವಾದ ಸ್ವಾಭಾವಿಕವಾದ ಅರ್ಥವನ್ನು ಬಿಟ್ಟು ವ್ಯಾಖ್ಯಾನಕಾರರು 'ಕೃತೋದ್ವಾಹಃ' ಎಂಬುದಕ್ಕೆ ಕೃತಃ = ಮಾಡಲ್ಪಟ್ಟ, ಉದಿ = ನಿರಾಕೃತಿ ಪರಮಾತ್ಮ ವಿಚಾರದಲ್ಲಿ [ಉದ್ಯತೇ ತಾತ್ಪರ್ಯವೃತ್ತ್ಯಾ ವೇದೈಃ ಪ್ರತಿಪಾದ್ಯತೇ ಅಸಾವಿತಿ ಉತ್] ವಾಹಃ = ಪ್ರಯತ್ನವು ಯಾವನಿಂದ ಮಾಡಲ್ಪಡುತ್ತದೆಯೋ–ಅವನು 'ಕೃತೋದ್ವಾಹಃ ಎಂದರೆ ಪರಮಾತ್ಮ ವಿಚಾರತತ್ಪರನು. 'ಗಚ್ಛನ್ತಂ' ಎಂಬುದಕ್ಕೂ ಪ್ರಸಿದ್ಧಾರ್ಥವಾದ ಗಮನಾರ್ಥವನ್ನು ಬಿಟ್ಟು 'ಗಮಿಬೋಧನೆ' ಎಂಬ ಧಾತ್ವರ್ಥದ ಪ್ರಕಾರ ಬೋಧನಾರ್ಥವನ್ನಿಟ್ಟುಕೊಂಡು ಈಶ್ವರನು ವಿಷ್ಣುವಿನ ಪರತತ್ತ್ವವನ್ನು ನಿಯಮದಿಂದ ಬೋಧಿಸುತ್ತಿದ್ದಾನೆಂದೂ ವ್ಯಾಖ್ಯಾನ ಮಾಡಿರುತ್ತಾರೆ. ಮತ್ತೊಬ್ಬರು 'ಕೃತೋದ್ವಾಹಂ' ಎಂಬುದಕ್ಕೆ ಸಮಾಧೇಃ ಕೃತ ವ್ಯುತ್ಥಾನಂ, ಕಾಲೋಚಿತವಿಲಾಸದೇಶಂ ಗಚ್ಛನ್ತಂ = ಸಮಾಧಿಯಿಂದ ಎದ್ದು ಕಾಲೋಚಿತ ವಾದ ವಿಲಾಸದೇಶಕ್ಕೆ ಹೋಗುತ್ತಿರುವವನು–ಎಂದು ಅರ್ಥಮಾಡಿರುತ್ತಾರೆ.

ಸುಪ್ರಭಾತವಾದನಂತರ ನಿರ್ಮಲವಾದ ಗಂಗೆಯಲ್ಲಿ ಆಹ್ನಿಕಾದಿಗಳನ್ನು ಮಾಡಿ ಮುಗಿಸಿದ ವಿಶ್ವಾಮಿತ್ರಮಹರ್ಷಿಗಳನ್ನು ಮುಂದುಮಾಡಿಕೊಂಡು ಗಂಗಾನದಿಯನ್ನು ದಾಟುವ ಸ್ಥಳಕ್ಕೆ ಶ್ರೀರಾಮ-ಲಕ್ಷ್ಮಣರಿಬ್ಬರೂ ಬಂದರು. ಮಹೇಶ್ವರನ ಆಶ್ರಮದಲ್ಲಿ ಉಗ್ರವ್ರತರಾದ, ಮಹಾತ್ಮರಾದ ಮಹರ್ಷಿಗಳು ಶುಭಪ್ರದವಾದ ಮತ್ತು ದೃಢವಾದ ನಾವೆಯೊಂದನ್ನು ಗಂಗಾತರಣ ಪ್ರದೇಶದಲ್ಲಿ ನಿಲ್ಲಿಸಿ ವಿಶ್ವಾಮಿತ್ರರಿಗೆ ಹೇಳಿದರು :

"ಮಹರ್ಷಿಗಳೇ! ರಾಜಪುತ್ರರನ್ನು ಮುಂದುಮಾಡಿಕೊಂಡು ನೀವು ಈ ನಾವೆಯನ್ನು ಹತ್ತಿರಿ. ನಿರ್ವಿಘ್ನವಾಗಿ, ಮಂಗಳಪ್ರದವಾದ ಗಂಗಾನದಿಯನ್ನು ದಾಟಿ ಮುಂದಿನ ಮಾರ್ಗವನ್ನು ಕುರಿತು ಹೋಗಿರಿ. ಕಾಲವಿಳಂಬವಾಗುವುದು ಬೇಡ."*

ವಿಶ್ವಾಮಿತ್ರಮಹರ್ಷಿಗಳು–'ಹಾಗೆಯೇ ಆಗಲಿ'–ಎಂದು ಹೇಳಿ, ತಮ್ಮನ್ನನುಸರಿಸಿ ಬಂದಿದ್ದ ಮಹರ್ಷಿಗಳನ್ನು ಯಥೋಚಿತವಾಗಿ ಸತ್ಕರಿಸಿ, ರಾಮ-ಲಕ್ಷ್ಮಣರೊಡನೆ ಸಾಗರಗಾಮಿನಿಯಾದ ಗಂಗಾನದಿಯನ್ನು ದಾಟಲನುವಾದರು.

ನಾವೆಯು ನದಿಯ ನಡುಭಾಗಕ್ಕೆ ಬಂದಿತು. ಅಲೆಗಳ ಹೊಡೆತದಿಂದಾಗಿ ನದಿಯ ಭೋರ್ಗರೆಯುವ ಶಬ್ದವು ಕೇಳುತ್ತಿದ್ದಿತು. ಅದರ ಕಾರಣವನ್ನು ತಿಳಿಯಬೇಕೆಂಬ ಕುತೂಹಲವು ರಾಮ-ಲಕ್ಷ್ಮಣರಿಬ್ಬರಿಗೂ ಉಂಟಾಯಿತು. ನದಿಯ ಮಧ್ಯದಲ್ಲಿ ನಾವೆಯು ಹೋಗುತ್ತಿದ್ದಾಗಲೇ ರಾಮನು ವಿಶ್ವಾಮಿತ್ರರನ್ನು ಕೇಳಿದನು :

"ಮಹರ್ಷಿಗಳೇ! ಭೋರ್ಗರೆಯುತ್ತಿರುವ ಈ ಶಬ್ದವು ಅಲೆಗಳ ಪರಸ್ಪರ ಸಂಘಟ್ಟನೆಯಿಂದ ಉಂಟಾಗಿರುವುದೋ ಅಥವಾ ಈ ಶಬ್ದಕ್ಕೆ ಬೇರಾವುದಾದರೂ ಕಾರಣವಿರುವುದೋ? ಈ ಶಬ್ದವು ಹುಟ್ಟಲು ಕಾರಣವಾದರೂ ಏನು? ದಯೆಯಿಟ್ಟು ಹೇಳಿರಿ."

ಕುತೂಹಲಯುಕ್ತನಾದ ಶ್ರೀರಾಮನ ಮಾತನ್ನು ಕೇಳಿ ಧರ್ಮಾತ್ಮರಾದ ಮಹರ್ಷಿಗಳು ಅದರ ಸರಿಯಾದ ಕಾರಣವನ್ನು ಹೇಳತೊಡಗಿದರು :

---

* 'ಅರಿಷ್ಟಂ ಪಾಪಶುಭಯೋಃ' ಎಂಬ ಹಲಾಯುಧಕೋಶದ ಪ್ರಕಾರ ಅರಿಷ್ಟಪದವು ಶುಭಪರ್ಯಾಯದಲ್ಲಿಯೂ ಇದೆ.

"ರಾಮ! ಕೈಲಾಸಪರ್ವತದಲ್ಲಿ ಚತುರ್ಮುಖಬ್ರಹ್ಮನ ಮನಸ್ಸಂಕಲ್ಪ ದಿಂದಲೇ ಒಂದು ಸರೋವರವು ಹುಟ್ಟಿತು. ಅದರಿಂದ ಆ ಸರಸ್ಸಿಗೆ 'ಮಾನಸ ಸರೋವರ' ಎಂದೇ ಹೆಸರಾಯಿತು. ಆ ಮಾನಸಸರೋವರದಿಂದ ಒಂದು ಪ್ರವಾಹವು ಹರಿಯತೊಡಗಿತು. ಅದು ಅಯೋಧ್ಯೆಯನ್ನು ಸುತ್ತುವರಿದು ಮುಂದೆ ಹೋಗಿರುತ್ತದೆ. ಮಾನಸಸರೋವರದಿಂದ ಪ್ರಸ್ರುತವಾದ ಆ ನದೀ ಪ್ರವಾಹಕ್ಕೆ 'ಸರಯೂ' ಎಂದೇ ಹೆಸರಾಯಿತು. ಸರಯೂನದಿಯು ಪುಣ್ಯ ತಮವಾದುದು ; ಪಾಪವನ್ನು ಹೋಗಲಾಡಿಸತಕ್ಕುದು. ಈ ಅತುಲವಾದ ಮಹಾಶಬ್ದವು ಆ ಸರಯೂನದಿಯ ಅಲೆಗಳ ಬಡಿತದಿಂದ ಹುಟ್ಟಿರುತ್ತದೆ. ಅದು ಇಲ್ಲಿ ಗಂಗಾನದಿಯನ್ನು ಸೇರುತ್ತದೆ. ಸರಯೂ-ಗಂಗಾನದಿಗಳು ಸೇರುವ ಸ್ಥಳದಲ್ಲಿ ನೀರಿನ ಪರಸ್ಪರ ಸಂಘಟ್ಟನೆಯಿಂದ ಈ ಶಬ್ದವುಂಟಾಗಿದೆ. ನಿಯತಮನಸ್ಕರಾಗಿ ಆ ಎರಡು ನದಿಗಳಿಗೂ ನಮಸ್ಕರಿಸಿರಿ."

ವಿಶ್ವಾಮಿತ್ರರು ಹೇಳಿದಂತೆ ಧಾರ್ಮಿಕರಾದ ಇಬ್ಬರು ರಾಜಪುತ್ರರೂ ಸರಯೂ-ಗಂಗಾನದಿಗಳಿಗೆ ಪ್ರಣಾಮಮಾಡಿ, ನದಿಯ ದಕ್ಷಿಣತೀರದಲ್ಲಿ ನಾವೆಯಿಂದಿಳಿದು, ವಿಶ್ವಾಮಿತ್ರರೊಡನೆ ಶೀಘ್ರವಾಗಿ ಅರಣ್ಯದ ಮಧ್ಯದಲ್ಲಿ ನಡೆದುಹೋಗುತ್ತಿದ್ದರು. ಆ ಅರಣ್ಯವು ಅತಿಘೋರವಾಗಿ ಕಾಣುತ್ತಿದ್ದಿತು. ಮಾನವಸಂಚಾರದ ಕುರುಹೇ ಅಲ್ಲಿ ಇರಲಿಲ್ಲ. ಅಂತಹ ಮಹಾರಣ್ಯವನ್ನು ಕಂಡು ಇಕ್ಷ್ವಾಕುಕುಲಸಂಭೂತನಾದ, ರಾಜಪುತ್ರನಾದ ಶ್ರೀರಾಮನು ಮಹರ್ಷಿಗಳಾದ ವಿಶ್ವಾಮಿತ್ರರನ್ನು ಪ್ರಶ್ನಿಸಿದನು : "ಮಹರ್ಷಿಗಳೇ! ಈ ಅರಣ್ಯವು ಎಷ್ಟೊಂದು ದುರ್ಗಮವಾಗಿರುವುದು! ಜೀರುಂಡೆಗಳನಾದ ದಿಂದ ತುಂಬಿಹೋಗಿದೆ. ಭಯಂಕರವಾದ ಕ್ರೂರಮೃಗಗಳಿಂದಲೂ ಕರ್ಣ ಕಠೋರವಾಗಿ ಶಬ್ದಮಾಡುತ್ತಿರುವ ಭಾಸಪಕ್ಷಿಗಳಿಂದಲೂ ಈ ಅರಣ್ಯವು ನಿಬಿಡವಾಗಿದೆ. ಭಯಂಕರವಾಗಿ ಧ್ವನಿಮಾಡುವ ಪಕ್ಷಿಗಳಿಂದಲೂ ವ್ಯಾಘ್ರ-ವರಾಹ-ಗಜಾದಿ ದುಷ್ಟಮೃಗಗಳಿಂದಲೂ ಈ ವನವು ಪರಿಶೋಭಿಸುತ್ತಿದೆ. ಧವ, ಅಶ್ವಕರ್ಣ, ಕಕುಭ ಮುಂತಾದ ವೃಕ್ಷವಿಶೇಷಗಳಿಂದಲೂ ಬಿಲ್ವ-ತಿಂದುಕ-ಪಾಟಲ-ಬದರೀವೃಕ್ಷಗಳಿಂದಲೂ ನಿಬಿಡವಾಗಿರುವ ದಾರುಣವಾದ ಈ ಅರಣ್ಯವು ಯಾವುದು?"

ಹೀಗೆ ಪ್ರಶ್ನಿಸಿದ ರಾಮನಿಗೆ ಮಹಾತೇಜಸ್ವಿಗಳಾದ ವಿಶ್ವಾಮಿತ್ರರು ಹೇಳಿದರು :

"ವತ್ಸ, ಕಾಕುತ್ಸ್ಥ! ಈ ಮಹಾರಣ್ಯವು ಯಾರದೆಂಬುದನ್ನು ಹೇಳುವೆನು ಕೇಳು: ದೇವತೆಗಳಿಂದ ನಿರ್ಮಿತವಾದಂತಿದ್ದ, ಧನ-ಧಾನ್ಯಸಮೃದ್ಧಿಯಿಂದ ಕೂಡಿದ್ದ, ಜನರಿಂದ ನಿಬಿಡವಾಗಿದ್ದ 'ಮಲದ-ಕರೂಷ' ಎಂಬ ಎರಡು ದೇಶಗಳು ಹಿಂದೆ ಬಹಳ ಪ್ರಸಿದ್ಧವಾಗಿದ್ದುವು. ವೃತ್ರಾಸುರನ ವಧೆಯಾದ ನಂತರ ಅಶುಚಿತ್ವವೂ, ಹಸಿವೂ ಮತ್ತು ಬ್ರಹ್ಮಹತ್ಯಾದೋಷವೂ ವೃತ್ರನನ್ನು ಸಂಹರಿಸಿದ ಇಂದ್ರನಿಗೆ ಪ್ರಾಪ್ತವಾದುವು. ಇದೇ ಸ್ಥಳದಲ್ಲಿ ಬ್ರಹ್ಮಹತ್ಯಾ ದೋಷದಿಂದ ಕೂಡಿದ್ದ ದೇವೇಂದ್ರನಿಗೆ ತಪೋಧನರಾದ ಮಹರ್ಷಿಗಳು ಗಂಗೆಯೇ ಮೊದಲಾದ ಸರ್ವತೀರ್ಥಗಳಿಂದ ತರಲ್ಪಟ್ಟ ಕಲಶೋದಕಗಳಿಂದ ಅಭಿಷೇಕಮಾಡಿ ಅವನಿಗೆ ಬಂದಿದ್ದ ಪಾಪವನ್ನು ಕಳೆದು ಅಮಿತಾನಂದವನ್ನು ಹೊಂದಿದರು. ಇಂದ್ರನು ನಿರ್ಮಲನೂ, ಪರಿಶುದ್ಧನೂ, ಕ್ಷುದ್ಬಾಧಾರಹಿತನೂ ಮತ್ತು ಬ್ರಹ್ಮಹತ್ಯಾಪಾಪವಿಮುಕ್ತನೂ ಆದನು. ತನ್ನ ಪಾಪವನ್ನು ಧರಿಸಿದ ಈ ದೇಶದ ವಿಷಯದಲ್ಲಿ ಸುಪ್ರೀತನಾದ ಇಂದ್ರನು ಈ ದೇಶಕ್ಕೆ ಅನರ್ಘವಾದ ವರದಾನ ಮಾಡಿದನು :

"ನನ್ನ ಶರೀರದ ಮಲವನ್ನೂ ಮತ್ತು ನನ್ನ ಹಸಿವನ್ನೂ ಈ ಪ್ರದೇಶವು ಧಾರಣೆಮಾಡಿರುವುದರಿಂದ ಮುಂದೆ ಈ ಪ್ರದೇಶವು ಜನನಿಬಿಡವಾಗಿ ಮತ್ತು ಧನ-ಧಾನ್ಯಸಮೃದ್ಧವಾಗಿ 'ಮಲದ' ಮತ್ತು 'ಕರೂಷ' ಎಂಬ ಅಭಿಧಾನದಿಂದಲೇ ಪ್ರಸಿದ್ಧವಾಗಲಿ."

ಇಂದ್ರನು ಈ ಪ್ರದೇಶಕ್ಕೆ ಹೀಗೆ ಮಹಾವರದಾನ ಮಾಡಿ ಪುರಸ್ಕಾರ ವಿತ್ತುದನ್ನು ಕಂಡು ದೇವತೆಗಳು–'ಸಾಧು! ನೀನು ಮಾಡಿದ ಕಾರ್ಯವು ಸಾಧುವಾಗಿದೆ'–ಎಂದು ಪ್ರಶಂಸಿಸಿದರು. ಇಂದ್ರನ ವರಪ್ರಸಾದದ ಕಾರಣ ಈ ಪ್ರದೇಶವು ಸ್ವಲ್ಪಕಾಲದಲ್ಲಿಯೇ ಜನಸ್ತೋಮದಿಂದ ನಿಬಿಡವೂ ಧನ-ಧಾನ್ಯಸಮೃದ್ಧವೂ ಆಯಿತು. ಅನೇಕ ಕಾಲದವರೆಗೆ ಇಲ್ಲಿಯ ಪ್ರಜೆಗಳು ಧನ-ಧಾನ್ಯ ಸಮೃದ್ಧಿಯಿಂದ ಕೂಡಿ ಆನಂದಭರಿತರಾಗಿದ್ದರು. ಕೆಲವು ಕಾಲಾ ನಂತರದಲ್ಲಿ–ಇಚ್ಛೆಪಡುವ ರೂಪವನ್ನು ಹೊಂದಲು ಸಮರ್ಥಳಾದ, ಯಕ್ಷ

ಕನ್ಯೆಯಾದ, ಒಂದು ಸಾವಿರ ಆನೆಗಳ ಬಲವನ್ನು ಹೊಂದಿದ್ದ 'ತಾಟಕಾ' ಎಂಬ ಹೆಸರಿನವಳೊಬ್ಬಳು ಹುಟ್ಟಿದಳು. ಅವಳು ಸುಂದನೆಂಬ ರಾಕ್ಷಸನ ಹೆಂಡತಿ. ಇಂದ್ರನಿಗೆ ಸಮಾನವಾದ ಪರಾಕ್ರಮವುಳ್ಳ ಮಾರೀಚನೆಂಬ ರಾಕ್ಷಸನು ಅವಳ ಮಗ. ದುಂಡು-ದುಂಡಾದ ತೋಳುಗಳಿಂದಲೂ, ಅತಿ ದೊಡ್ಡದಾದ ತಲೆಯಿಂದಲೂ, ವಿಸ್ತಾರವಾದ ಮುಖದಿಂದಲೂ, ಅದ್ಭುತ ವಾದ ಶರೀರದಿಂದಲೂ ಕೂಡಿದ್ದ ಭೈರವಾಕಾರದ ಮಾರೀಚರಾಕ್ಷಸನು ಅನುದಿನವೂ ಈ ದೇಶದ ಪ್ರಜೆಗಳಿಗೆ ಹಿಂಸೆಕೊಡುತ್ತಿರುವನು. ಮಲದ ಮತ್ತು ಕರೂಷ ಎಂಬ ಈ ಎರಡು ರಾಜ್ಯಗಳನ್ನೂ ದುಷ್ಟಚಾರಿಣಿಯಾದ ತಾಟಕಿಯು ಧ್ವಂಸಮಾಡುತ್ತಿರುವಳು. ಆ ದುಷ್ಟೆಯು ಒಂದೂವರೆ ಯೋಜನ ದೂರದಲ್ಲಿ ಹಾದಿಯನ್ನು ಅಡ್ಡಗಟ್ಟಿ ನಿಂತಿದ್ದಾಳೆ. ಆದರೂ ನಾವು ನಮ್ಮ ಆಶ್ರಮಕ್ಕೆ ಈ ತಾಟಕಾವನದ ಮೂಲಕವಾಗಿಯೇ ಹೋಗಬೇಕಾಗಿದೆ. ನಿನ್ನ ಬಾಹುಬಲದ ಅವಲಂಬನೆಯಿಂದ ದುಷ್ಟಚಾರಿಣಿಯಾದ ತಾಟಕಿಯನ್ನು ಸಂಹರಿಸು. ನನ್ನ ಆದೇಶದಂತೆ ಅವಳನ್ನು ಸಂಹರಿಸಿ ಈ ದೇಶವನ್ನು ಪುನಃ ಕಂಟಕರಹಿತವನ್ನಾಗಿ ಮಾಡು, ರಾಘವ! ಈ ದೇಶಕ್ಕೆ ಬರಲು ಯಾರಿಗೂ ಸಾಧ್ಯವಿಲ್ಲವಾಗಿದೆ. ಏಕೆಂದರೆ : ಈ ಪ್ರದೇಶವು ಯಕ್ಷಕನ್ಯೆಯಾದ, ಘೋರ ದರ್ಶನಳಾದ, ಇತರರಿಂದ ಸಂಹರಿಸಲು ಅಶಕ್ಯಳಾದ ತಾಟಕಿಯಿಂದ ಬಹುವಾಗಿ ಪೀಡಿಸಲ್ಪಡುತ್ತಿದೆ. ಈ ವನದ ದಾರುಣಪರಿಸ್ಥಿತಿಯನ್ನು ನಿನಗೆ ವಿವರವಾಗಿ ಹೇಳಿರುವೆನು. ತಾಟಕಿಯು ಈ ಪ್ರದೇಶಗಳೆಲ್ಲವನ್ನೂ ವಿನಾಶಮಾಡಿದ ಮೇಲೂ ಹೊರಟುಹೋಗದೇ ಇಲ್ಲೇ ಇರುವಳು."

೨೪ನೆಯ ಸರ್ಗವು ಮುಗಿಯಿತು.

ವಿಶ್ವಾಮಿತ್ರ-ರಾಮರ ಸಂಭಾಷಣೆ : ತಾಟಕಾ-ಮಾರೀಚರ ಜನ್ಮವೃತ್ತಾಂತಕಥನ : ತಾಟಕಿಯ ವಧೆಗೆ ವಿಶ್ವಾಮಿತ್ರರ ಪ್ರೋತ್ಸಾಹ

ಅಥ ತಸ್ಯಾಪ್ರಮೇಯಸ್ಯ ಮುನೇರ್ವಚನಮುತ್ತಮಮ್ ।
ಶ್ರುತ್ವಾ ಪುರುಷಶಾರ್ದೂಲಃ ಪ್ರತ್ಯುವಾಚ ಶುಭಾಂ ಗಿರಮ್ ॥೧॥

ಅಪ್ರಮೇಯರಾದ ವಿಶ್ವಾಮಿತ್ರಮಹರ್ಷಿಗಳ ಮಾತನ್ನು ಕೇಳಿ ನರಪುಂಗವನಾದ ಶ್ರೀರಾಮನು ಮಹರ್ಷಿಗಳನ್ನು ಕುರಿತು ಶುಭಾವಹಗಳಾದ ಈ ಮಾತುಗಳನ್ನು ಹೇಳಿದನು :

"ಮುನಿಶ್ರೇಷ್ಠರೇ! ಯಕ್ಷರು ಸಾಮಾನ್ಯವಾಗಿ ಅಲ್ಪವೀರ್ಯರು ಅಥವಾ ದುರ್ಬಲರು ಎಂದು ನಾನು ಪುರಾಣೇತಿಹಾಸಗಳಲ್ಲಿ ಕೇಳಿರುವೆನು. ಮೇಲಾಗಿ ತಾಟಕಿಯಾದರೋ ಅಬಲೆಯು. ಇಂತಹವಳು ಸಾವಿರ ಆನೆಗಳ ಬಲವನ್ನು ಹೇಗೆ ಪಡೆದಳು? ಈ ವಿಷಯವನ್ನು ದಯೆಯಿಟ್ಟು ಹೇಳಿರಿ."

ಮಹಾತ್ಮನಾದ ರಾಘವನ ಮಾತುಗಳನ್ನು ಕೇಳಿ ವಿಶ್ವಾಮಿತ್ರರು ಹೇಳಿದರು :

"ರಾಮ! ಯಾವ ಕಾರಣದಿಂದ ಈ ಯಕ್ಷಿಯು ಬಲಾಧಿಕಳಾದಳೆಂಬುದನ್ನು ಹೇಳುವೆನು ಕೇಳು : ಅಬಲೆಯಾದ ಇವಳು ವರದಾನದಿಂದ ಶಕ್ತಿಯನ್ನು ಪಡೆದು ಸಬಲಳಾದಳು. ಹಿಂದೆ ಸುಕೇತುವೆಂಬ ಸದ್ಗುಣಸಂಪನ್ನನಾದ ಆಚಾರಶೀಲನಾದ ಯಕ್ಷನಿದ್ದನು. ಅವನಿಗೆ ಮಕ್ಕಳಿರಲಿಲ್ಲ. ಮಕ್ಕಳನ್ನು ಪಡೆಯಲು ಉಗ್ರವಾದ ತಪಸ್ಸನ್ನು ಮಾಡಿದನು. ಸುಕೇತುವು ಮಾಡಿದ ಮಹಾತಪಸ್ಸಿಗೆ ಬ್ರಹ್ಮನು ಮೆಚ್ಚಿ 'ತಾಟಕಾ' ಎಂಬ ಹೆಸರಿನ ಕನ್ಯಾರತ್ನವನ್ನು ಅನುಗ್ರಹಿಸಿದನು. ಪಿತಾಮಹನೇ ತಾಟಕಿಗೆ ಸಾವಿರ ಆನೆಗಳ ಬಲವನ್ನು ದಯಪಾಲಿಸಿದನು. ಆದರೆ ಸುಕೇತುವಿಗೆ ಮಗನನ್ನು ಮಾತ್ರ ಅನುಗ್ರಹಿಸಲಿಲ್ಲ. ಸುಕೇತುವು ರೂಪ-ಯೌವನಸಂಪನ್ನೆಯಾದ, ದಿನೇ-ದಿನೇ ಪ್ರವರ್ಧಮಾನಳಾಗುತ್ತಿದ್ದ, ಯಶಸ್ವಿನಿಯಾದ ತನ್ನ ಮಗಳಾದ

ತಾಟಕಿಯನ್ನು, ಝುಂಭಪುತ್ರನಾದ ಸುಂದನಿಗೆ ಪಾಣಿಗ್ರಹಣಮಾಡಿ ಕೊಟ್ಟನು. ಕಾಲಾನಂತರದಲ್ಲಿ ತಾಟಕಿಯು ಮಹಾದುರಭಿಮಾನಿಯಾದ ಮಾರೀಚನೆಂಬ ಪುತ್ರನನ್ನು ಪ್ರಸವಿಸಿದಳು. ಅವನು ಶಾಪದ ಕಾರಣದಿಂದ ರಾಕ್ಷಸನಾದನು. ಅಗಸ್ತ್ಯರ ಶಾಪದಿಂದ ಸುಂದನು ಮೃತನಾಗಲು, ಅವನ ಹೆಂಡತಿಯಾದ ತಾಟಕಿಯು ಪುತ್ರನೊಡನೆ ಗಂಡನ ಮರಣಕ್ಕೆ ಕಾರಣರಾದ ಅಗಸ್ತ್ಯರನ್ನು ಹಿಂಸಿಸಲು ನಿಶ್ಚಯಿಸಿದಳು. ಕೋಪದಿಂದ ಪರಿಭ್ರಾಂತಳಾದ ತಾಟಕಿಯು ಗರ್ಜನೆಮಾಡುತ್ತಾ ಅಗಸ್ತ್ಯರನ್ನು ಭಕ್ಷಿಸಲು ವೇಗದಿಂದ ಧಾವಿ ಸಿದಳು. ತನ್ನ ಮೇಲೆ ಬೀಳಲು ರಭಸದಿಂದ ತನ್ನೆದುರಾಗಿ ಬರುತ್ತಿದ್ದ ಸಪುತ್ರ ಳಾದ ತಾಟಕಿಯನ್ನು ಕಂಡು ಪೂಜ್ಯರಾದ ಅಗಸ್ತ್ಯರು ಮಾರೀಚನಿಗೆ– 'ರಾಕ್ಷಸತ್ವವನ್ನು ಹೊಂದು'–ಎಂದು ಶಾಪವನ್ನಿತ್ತರು. ಪರಮಕ್ರುದ್ಧರಾಗಿದ್ದ ಅಗಸ್ತ್ಯರು ತಾಟಕಿಯನ್ನೂ ಶಪಿಸಿದರು.

"ಮಹಾಯಕ್ಷಿಯೇ! ನೀನು ನರಮಾಂಸಭಕ್ಷಕಳಾಗು. ಕರಾಳ ರೂಪವು ನಿನಗುಂಟಾಗಲಿ. ವಿಕಾರವಾದ ಮುಖವುಳ್ಳವಳಾಗು. ಈ ನಿನ್ನ ಸುಂದರರೂಪವು ಹೋಗಿ ಘೋರರೂಪವು ನಿನಗೀಗಲೇ ಉಂಟಾಗಲಿ."

ಅಗಸ್ತ್ಯರ ಶಾಪಕ್ಕೆ ಗುರಿಯಾದ ತಾಟಕಿಯು ಒಡನೆಯೇ ವಿಕಾರ ಸ್ವರೂಪಳಾದಳು. ತಾಟಕಿಗೆ ಮಹಾಕೋಪವುಂಟಾಯಿತು. ಕ್ರೋಧ ಮೂರ್ಛಿತಳಾಗಿ ಅಗಸ್ತ್ಯರು ಆಗ ಸಂಚರಿಸುತ್ತಿದ್ದ ಮತ್ತು ಅಗಸ್ತ್ಯರ ಆಶ್ರಮಕ್ಕೆ ಅನತಿದೂರದಲ್ಲಿದ್ದ ಶುಭಪ್ರದವಾದ ಈ ಮಲದ-ಕರೂಷದೇಶಗಳ ಮೂಲೋತ್ಪಾಟನ ಮಾಡುತ್ತಿದ್ದಾಳೆ. ರಾಘವ! ದುರ್ವೃತ್ತಳಾದ, ಪರಮ ದಾರುಣಳಾದ, ಘೋರರೂಪಳಾದ, *ಅತಿದುಷ್ಟವಾದ ಪರಾಕ್ರಮವುಳ್ಳ ಈ ಯಕ್ಷಿಯನ್ನು ಗೋ-ಬ್ರಾಹ್ಮಣರ ಹಿತಾರ್ಥವಾಗಿ ಸಂಹರಿಸು. ಋಷಿಶಾಪ ವಿಶಿಷ್ಟಳಾಗಿರುವ ಈ ತಾಟಕಿಯನ್ನು ಸಂಹರಿಸಲು ನಿನ್ನೊಬ್ಬನನ್ನು ಬಿಟ್ಟರೆ

---

* 'ದುಷ್ಟಪರಾಕ್ರಮ', 'ಸತ್ಯಪರಾಕ್ರಮ' ಎಂಬ ಎರಡು ಶಬ್ದಗಳು ಆಗಾಗ ಪ್ರಯೋಗಿಸಲ್ಪಡುತ್ತಿರುತ್ತವೆ. ಪರಾಕ್ರಮವು ಎರಡು ಕಡೆಗಳಲ್ಲೂ ಸಮಾನಾರ್ಥವನ್ನು ಕೊಡುವುದಾಗಿದೆ. ಆದರೆ 'ದುಷ್ಟ' ಎಂಬುದಕ್ಕೆ ಪ್ರಕೃತದಲ್ಲಿ (ಗೋ-ಬ್ರಾಹ್ಮಣಾದಿ ಹಿಂಸಕತ್ವೇನ) ದೋಷವಿಶಿಷ್ಟವಾದುದಕ್ಕೆ ದುಷ್ಟವೆಂದು ವ್ಯಾಖ್ಯಾನಮಾಡಿರುತ್ತಾರೆ.

ಮೂರು ಲೋಕಗಳಲ್ಲಿ ಯಾವನೂ ಮುಂದೆ ಬರಲಾರನು. ತಾಟಕಿಗೆ ಬ್ರಹ್ಮನ ವರದಾನದಿಂದಾಗಿ ಸಾವಿರ ಆನೆಗಳ ಬಲವಿದೆ. ಅಗಸ್ತ್ಯರ ಶಾಪದಿಂದಾಗಿ ಪುರುಷಾದಿಯೂ ಆಗಿದ್ದಾಳೆ. ಇಂತಹವಳ ಎದುರಾಗಿ ನಿಲ್ಲಲು ಯಾವ ವೀರನಿಗೆ ತಾನೇ ಸಾಧ್ಯವಾದೀತು? ರಾಮ! 'ತಾಟಕಿಯು ಸ್ತ್ರೀ ಯಾಗಿದ್ದಾಳೆ; ಅಬಲೆಯಾಗಿದ್ದಾಳೆ ; ಇವಳನ್ನು ಹೇಗೆ ತಾನೇ ಸಂಹರಿಸಲಿ?'–ಎಂದು ದಯಾಪರನಾಗಬೇಡ. ಪ್ರಜೆಗಳಿಗೆ ಉಪದ್ರವ ಕೊಡುತ್ತಿರುವ ಇವಳನ್ನು ಚಾತುರ್ವರ್ಣ್ಯದ ಹಿತಾರ್ಥವಾಗಿ ಸಂಹರಿಸುವುದೇ ರಾಜ ಪುತ್ರನಾದ ನಿನ್ನ ಮುಖ್ಯ ಕರ್ತವ್ಯವಾಗಿದೆ. ನರೋತ್ತಮನೇ! ರಾಜನಿಗೆ ಪ್ರಜಾರಕ್ಷಣವೆಂಬುದು ಮುಖ್ಯ ಧರ್ಮ. ಈ ಅತಿಮುಖ್ಯವಾದ ಧರ್ಮಾಚರಣೆ ಮಾಡುವಾಗ–ಪ್ರಜೆಗಳ ಹಿತವನ್ನು ರಕ್ಷಿಸಲು ಹೋದಾಗ–ಮಾಡಬೇಕಾದ ಕಾರ್ಯವು ಕ್ರೂರವಾಗಿರಲಿ, ಇಲ್ಲದಿರಲಿ–ವಿವೇಚಿಸಬೇಕಾಗಿಲ್ಲ. ಪ್ರಜೆಗಳ ರಕ್ಷಣೆಗಾಗಿ ಮಾಡುವ ಕಾರ್ಯವು ದೋಷಯುಕ್ತವಾಗಿದ್ದರೂ, ಪಾಪಹೇತುವಾಗಿದ್ದರೂ ವಿವೇಚನೆ ಮಾಡದೇ ಮುಖ್ಯಧರ್ಮವಾದ ಪ್ರಜಾ ರಕ್ಷಣಧರ್ಮವನ್ನೇ ಪಾಲಿಸಬೇಕು. ರಾಜ್ಯಭಾರದಲ್ಲಿ ನಿಯುಕ್ತರಾದ ರಾಜರಿಗೆ ಅದೇ ನಿತ್ಯಧರ್ಮವಾಗಿದೆ. ಮೇಲಾಗಿ ತಾಟಕಿಯಲ್ಲಿ ಯಾವ ವಿಧವಾದ ಧರ್ಮವೂ ಇಲ್ಲ. ಧರ್ಮಬಾಹಿರಳಾಗಿದ್ದಾಳೆ. ಇಂತಹ ಧರ್ಮಭ್ರಷ್ಟಳನ್ನು ಕೂಡಲೇ ಸಂಹರಿಸು. ದುಷ್ಟಸ್ತ್ರೀಯನ್ನು ವಧೆಮಾಡುವುದರಲ್ಲಿ ನೀನು ಮೊದಲನೆಯವನೂ ಆಗುವುದಿಲ್ಲ. ಸ್ತ್ರೀಯು ದುಷ್ಟಳಾದರೆ ಅವಳನ್ನು ವಧೆ ಮಾಡುವ ಶಿಷ್ಟಾಚಾರವೂ ಇದೆ. ಹಿಂದೆ ಭೂದೇವಿಯನ್ನೇ ಸಂಹರಿಸಲು ಹೋಗಿದ್ದ ವಿರೋಚನನ ಮಗಳಾದ ಮಂಥರೆ ಎಂಬುವಳನ್ನು ಇಂದ್ರನು ಸಂಹಾರಮಾಡಿದನೆಂಬ ಕಥೆಯನ್ನು ನಾವು ಕೇಳಿದ್ದೇವೆ. ಲೋಕರಕ್ಷಣಾರ್ಥ ವಾಗಿ ವಿಷ್ಣುವು ಸ್ತ್ರೀವಧೆಮಾಡಿದ ಮತ್ತೊಂದು ಸನ್ನಿವೇಶವನ್ನೂ ಹೇಳು ವೆನು ಕೇಳು : ಭೃಗುಋಷಿಗಳ ಪತ್ನಿಯಾದ ಮಹಾಪತಿವ್ರತೆಯಾದ ಶುಕ್ರನ ತಾಯಿಯು ಒಮ್ಮೆ ಇಂದ್ರನಿಲ್ಲದ ಲೋಕವನ್ನು ಬಯಸಿದಳು. ಇಂದ್ರನನ್ನು ಸಂಹರಿಸಬೇಕೆಂದು ಆಶಿಸಿದಳು. ಆ ಸಮಯದಲ್ಲಿ ಇಂದ್ರನ ಪ್ರಾರ್ಥನೆ

' ಸತ್ಯಪರಾಕ್ರಮ ' ಎಂಬುದಕ್ಕೆ ಹಿಂದೆ ಅನೇಕರು ಹೇಳಿರುವಂತೆ–' ಕಾಪಟ್ಯರಹಿತ ಪರಾಕ್ರಮ '–ಎಂದು ವ್ಯಾಖ್ಯಾನಕಾರರು ಹೇಳಿದ್ದಾರೆ.

ಯಂತೆ ವಿಷ್ಣುವು ಅವಳನ್ನು ಸಂಹರಿಸಿದನು. ಶಕ್ರ-ವಿಷ್ಣುಗಳಲ್ಲದೇ ಅನೇಕ ಮಹಾತ್ಮರಿಂದಲೂ ಅಧರ್ಮಯುಕ್ತರಾದ ಸ್ತ್ರೀಯರು ಸಂಹೃತರಾಗಿದ್ದಾರೆ. ಆದುದರಿಂದ ನೀನು ನನ್ನ ಶಾಸನದಂತೆ–ತಾಟಕಿಯು ಸ್ತ್ರೀಮಾತ್ರಳೆಂಬ ಭಾವನೆಯಿಂದ ನಿನ್ನಲ್ಲುಂಟಾಗಬಹುದಾದ ಕರುಣೆಯನ್ನು ತೊರೆದು ಈ ದುಷ್ಟೆಯನ್ನು ಈಗಲೇ ಸಂಹರಿಸು."

೨೫ನೆಯ ಸರ್ಗವು ಮುಗಿಯಿತು.

ಬಾಲಕಾಂಡ ೨೬ನೆಯ ಸರ್ಗ

ಶ್ರೀರಾಮನಿಂದ ತಾಟಕಿಯ ಸಂಹಾರ

ಮುನೇರ್ವಚನಮಕ್ಲೀಬಂ ಶ್ರುತ್ವಾ ನರವರಾತ್ಮಜಃ ।
ರಾಘವಃ ಪ್ರಾಞ್ಜಲಿರ್ಭೂತ್ವಾ ಪ್ರತ್ಯುವಾಚ ದೃಢವ್ರತಃ ॥೧॥

ದೌರ್ಬಲ್ಯನಿವಾರಕವಾದ ಮತ್ತು ವೀರ್ಯೋತ್ತೇಜಕವಾದ ಮಹರ್ಷಿಗಳ ಮಾತುಗಳನ್ನು ಕೇಳಿ ರಾಜಪುತ್ರನಾದ ಶ್ರೀರಾಮನು, ತಂದೆಯ ನಿರ್ದೇಶದಂತೆಯೂ ಮತ್ತು ತಂದೆಯ ಮಾತಿಗೆ ಗೌರವ ಕೊಡುವ ಸಲುವಾಗಿಯೂ ವಿಶ್ವಾಮಿತ್ರರು ಹೇಳಿದಂತೆ ನಿಶ್ಶಂಕೆಯಿಂದ ಕಾರ್ಯಮಾಡುವುದೇ ತನ್ನ ಕರ್ತವ್ಯವೆಂದು ಮನದಲ್ಲಿ ನಿಶ್ಚಯಿಸಿದವನಾಗಿ, ಕೈಮುಗಿದು ಕೊಂಡು ವಿಶ್ವಾಮಿತ್ರರಿಗೆ ಹೇಳಿದನು :

"ಮಹರ್ಷಿಗಳೇ! ಅಯೋಧ್ಯೆಯಲ್ಲಿ ವಸಿಷ್ಠ-ವಾಮದೇವಾದಿ ಆಚಾರ್ಯರ ಮಧ್ಯದಲ್ಲಿ ನನ್ನ ತಂದೆಯಾದ ದಶರಥನು–'ವಿಶ್ವಾಮಿತ್ರರ ಮಾತನ್ನು ಮೀರದೇ ಅವರು ಹೇಳಿದಂತೆ ನಡೆಯಬೇಕು'–ಎಂದು ಆಜ್ಞೆ ಮಾಡಿದ್ದಾನೆ. ಅದರಂತೆ ಜೊತೆಯಲ್ಲಿ ಬಂದಿರುವ ನಾನು ಬ್ರಹ್ಮನಿಷ್ಠರಾದ ತಮ್ಮ ಆಜ್ಞೆಯಂತೆ ಪ್ರಜಾಪಾಲನರೂಪವಾದ, ಉತ್ತಮವಾದ ಈ ತಾಟಕಾವಧೆಯನ್ನು ಮಾಡುತ್ತೇನೆ. ಇದರಲ್ಲಾವ ಸಂಶಯವೂ ಇಲ್ಲ. ಗೋ-ಬ್ರಾಹ್ಮಣರ ಹಿತಾರ್ಥವಾಗಿಯೂ–ಈ ದೇಶದ ಹಿತಕ್ಕಾಗಿಯೂ ಅಪ್ರಮೇಯರಾದ ನಿಮ್ಮ ಆಜ್ಞೆಯನ್ನು ನಿರ್ವಹಿಸಲು ಸಿದ್ಧನಾಗಿಯೇ ಇದ್ದೇನೆ."

ಶತ್ರುನಿಷೂದನನಾದ ಶ್ರೀರಾಮನು ವಿಶ್ವಾಮಿತ್ರರಿಗೆ ಹೀಗೆ ಹೇಳಿ ಧನುಸ್ಸಿನ ಮಧ್ಯವನ್ನು ಎಡಮುಷ್ಟಿಯಿಂದ ಬಿಗಿಯಾಗಿ ಹಿಡಿದು, ನಾಲ್ಕು ದಿಕ್ಕುಗಳನ್ನೂ ಜ್ಯಾಘೋಷದಿಂದ ತುಂಬುತ್ತಾ ಧನುಷ್ಟೇಂಕಾರ ಮಾಡಿದನು. ರಾಮನ ಜ್ಯಾಘೋಷದಿಂದ ತಾಟಕಾವನನಿವಾಸಿಗಳು ಭ್ರಾಂತರಾದರು. ದುಷ್ಟಚಿತ್ತಳಾದ ತಾಟಕಿಯೂ ಆ ಮಹಾಶಬ್ದವನ್ನು ಕೇಳಿ ಕೋಪಗೊಂಡಳು. ಆ ಶಬ್ದವು ಎಲ್ಲಿಂದ ಹೊರಟಿದೆಯೆಂಬುದನ್ನು ನಿಶ್ಚಯಿಸಿ, ಶಬ್ದವು ಹೊರಟ ಸ್ಥಳಕ್ಕೆ ಕೋಪಾವಿಷ್ಟಳಾಗಿ ಧಾವಿಸಿದಳು. ವಿಕೃತಾಕಾರಳಾದ ಮತ್ತು ವಿಕಾರವಾದ ಮುಖದಿಂದ ಕೂಡಿದ್ದ, ಬಹಳ ಎತ್ತರವಾದ ದೇಹದಿಂದ ಕೂಡಿದ್ದ, ಕೋಪಗೊಂಡಿದ್ದ ತಾಟಕಿಯನ್ನು ನೋಡಿ, ರಾಘವನು ಲಕ್ಷ್ಮಣನಿಗೆ ಹೇಳಿದನು :

"ಲಕ್ಷ್ಮಣ! ಯಕ್ಷಸ್ತ್ರೀಯ ಅತಿಭಯಂಕರವಾದ, ದಾರುಣವಾದ ಶರೀರವನ್ನಾದರೂ ನೋಡು. ನಿಶ್ಚಯವಾಗಿಯೂ ಭೀರುಗಳಾದವರ ಹೃದಯಗಳು ಇವಳ ಕರಾಳಸ್ವರೂಪವನ್ನು ನೋಡಿದ ಮಾತ್ರದಿಂದಲೇ ಒಡೆದುಹೋಗುತ್ತವೆ. ಅನ್ಯರಿಂದ ಎದುರಿಸಲು ಅಸಾಧ್ಯಳಾದ, ಮಾಯಾ ಬಲಸಮನ್ವಿತಳಾದ ಇವಳನ್ನು ನೋಡು. ನಾನೀಗಲೇ ಇವಳ ಕಿವಿ ಮತ್ತು ಮೂಗುಗಳನ್ನು ಕತ್ತರಿಸಿ ಇಲ್ಲಿಂದ ಇವಳು ಹಿಂದಿರುಗುವಂತೆ ಮಾಡಿಬಿಡು ವೆನು. ಇವಳ ಎಷ್ಟೇ ದುಷ್ಟೆಯಾಗಿರಲಿ ; ಸರ್ವಜನಪೀಡಕಳಾಗಿರಲಿ– ಇವಳಂತೂ ಸ್ತ್ರೀಮಾತ್ರಳು. ಆದರಿಂದಾಗಿ ಇವಳ ಪ್ರಾಣಹರಣಮಾಡಲು ನನಗೆ ಉತ್ಸಾಹವಿಲ್ಲ. ಆದರೆ ಇವಳ ದುಷ್ಟತನಕ್ಕೆ ಕಾರಣವಾದ ವೀರ್ಯ ವನ್ನೂ ಗಮನವನ್ನೂ ಧ್ವಂಸಮಾಡುವೆನು. ವೀರ್ಯವನ್ನು ಬಾಹುಚ್ಛೇದನ ದಿಂದಲೂ–ಗಮನವನ್ನು ಪಾದಚ್ಛೇದನದಿಂದಲೂ ಧ್ವಂಸಮಾಡಿ ಇವಳನ್ನು ಬಿಟ್ಟುಬಿಡುವೆನು. ಇದು ನನ್ನ ನಿಶ್ಚಯವಾಗಿದೆ."

ರಾಮನು ಈ ರೀತಿಯಲ್ಲಿ ಲಕ್ಷ್ಮಣನಿಗೆ ಹೇಳುತ್ತಿರುವಾಗಲೇ ಪರಮ ಕ್ರುದ್ಧಳಾದ ತಾಟಕಿಯು ಎರಡು ತೋಳುಗಳನ್ನೂ ಮೇಲೆತ್ತಿಕೊಂಡು, ಘೋರನಿನಾದಮಾಡುತ್ತಾ ರಾಮನ ಕಡೆಗೆ ರಭಸದಿಂದ ನುಗ್ಗಿದಳು. ಬ್ರಹ್ಮರ್ಷಿಗಳಾದ ವಿಶ್ವಾಮಿತ್ರರು ತಾಟಕಿಯು ಅತಿವೇಗವಾಗಿ ರಾಮನ ಕಡೆಗೆ

ಬರುತ್ತಿರುವುದನ್ನು ಕಂಡು ಒಡನೆಯೇ ಹುಂಕಾರಮಾಡಿದರು. “ರಾಮ-ಲಕ್ಷ್ಮಣರಿಗೆ ಶುಭವುಂಟಾಗಲಿ ; ಜಯವಾಗಲಿ!” ಎಂದು ಹರಸಿದರು. ತಾಟಕಿಯು ಒಡನೆಯೇ ಅಪಾರವಾದ ಧೂಳು ಸರ್ವತ್ರವ್ಯಾಪಿಸುವಂತೆ ಮಾಡಿ, ಮೇಘಸದೃಶವಾದ ಧೂಳಿನ ರಾಶಿಯಿಂದ ರಾಮ-ಲಕ್ಷ್ಮಣರನ್ನು ಮುಚ್ಚಿ, ಮುಹೂರ್ತಕಾಲದವರೆಗೆ ಅವರನ್ನು ಭ್ರಾಂತರನ್ನಾಗಿ ಮಾಡಿದಳು. ಅನಂತರ ತಾಟಕಿಯು ಅಂತರ್ಧಾನಹೊಂದಿ, ರಾಮ-ಲಕ್ಷ್ಮಣರ ಮೇಲೆ ಅಪಾರವಾದ ಕಲ್ಲಿನ ಮಳೆಗರೆದಳು. ಆ ಶಿಲಾವರ್ಷದಿಂದ ಪೀಡಿತನಾದ ರಾಘವನು ಬಹುವಾಗಿ ಕೋಪಗೊಂಡನು. ಶ್ರೀರಾಮನು ಶಿಲಾವರ್ಷವನ್ನು ಶರವರ್ಷಗಳಿಂದ ನಿವಾರಣೆಮಾಡಿ, ತನ್ನ ಸಮೀಪಕ್ಕೆ ರಭಸದಿಂದ ಬರುತ್ತಿದ್ದ ತಾಟಕಿಯ ತೋಳುಗಳೆರಡನ್ನೂ ನಿಶಿತಾಸ್ತ್ರಗಳಿಂದ ಕತ್ತರಿಸಿದನು. ಭುಜಗಳಿಲ್ಲದೇ ಸಂಕಟಪಡುತ್ತಾ ಸಮೀಪದಲ್ಲಿಯೇ ಘೋರಗರ್ಜನೆ ಮಾಡುತ್ತಿದ್ದ ತಾಟಕಿಯನ್ನು ನೋಡಿದ ಲಕ್ಷ್ಮಣನು ಕೋಪಗೊಂಡು ಅವಳ ಮೂಗು ಮತ್ತು ಕಿವಿಗಳನ್ನೂ ತನ್ನ ನಿಶಿತಾಸ್ತ್ರಗಳಿಂದ ಕತ್ತರಿಸಿದನು. ರಾಮನು ನಿರೀಕ್ಷಿಸಿದ್ದಂತೆ ಕರ್ಣ-ನಾಸಿಕಾಚ್ಛೇದನಗಳಿಂದ ತಾಟಕಿಯು ಪರಾಙ್ಮುಖಳಾಗಲಿಲ್ಲ. ಇಚ್ಛಿಸಿದ ರೂಪಗಳನ್ನು ಪಡೆಯಲು ಸಮರ್ಥಳಾದ ಅವಳು ಒಡನೆಯೇ ಅಂತರ್ಧಾನಳಾಗಿ, ಮರುಕ್ಷಣದಲ್ಲಿಯೇ ಹಲವಾರು ರೂಪಗಳನ್ನು ಧರಿಸಿಕೊಂಡು, ತನ್ನ ಮಾಯಾವಿಶೇಷದಿಂದ ರಾಮ-ಲಕ್ಷ್ಮಣರನ್ನು ಭ್ರಾಂತರನ್ನಾಗಿ ಮಾಡುತ್ತಾ, ಕ್ಷಣ-ಕ್ಷಣಕ್ಕೂ ಭಯಂಕರವಾದ ಕಲ್ಲಿನ ಮಳೆಗರೆಯುತ್ತಾ ಅಲ್ಲಿಂದಿಲ್ಲಿಗೆ ಸಂಚರಿಸುತ್ತಿದ್ದಳು. ತಾಟಕಿಯು ಸುರಿಸುತ್ತಿದ್ದ ಅಶ್ಮವರ್ಷದಿಂದ ಮುಚ್ಚಿಹೋಗಿದ್ದ ರಾಮ-ಲಕ್ಷ್ಮಣರನ್ನು ಕಂಡು, ತಪಸ್ಸಂಪತ್ತಿನಿಂದ ಶ್ರೀಮಂತರಾಗಿದ್ದ, ಗಾಧಿಯ ಮಕ್ಕಳಾದ ವಿಶ್ವಾಮಿತ್ರರು ಹೇಳಿದರು :

“ವತ್ಸ! ಇವಳ ವಿಷಯದಲ್ಲಿ ಕರುಣೆಯನ್ನು ಇನ್ನಾದರೂ ಸಾಕು ಮಾಡು. ಇವಳು ಮಹಾಪಾಪಿಷ್ಠಳಾಗಿರುವಳು. ದುಷ್ಟಕರ್ಮವುಳ್ಳವಳಾಗಿರುವಳು. ಮೇಲಾಗಿ ಈ ಯಕ್ಷಿಯು ಅನವರತವೂ ಯಜ್ಞಕ್ಕೆ ವಿಘ್ನವನ್ನುಂಟುಮಾಡುತ್ತಲೇ ಇರುವಳು. ಇವಳ ಮಾಯೆಯು ಕ್ಷಣ-ಕ್ಷಣಕ್ಕೂ ಅಭಿವೃದ್ಧಿಯಾಗುತ್ತಿರುವುದು. ಆದುದರಿಂದ ಸಂಧ್ಯಾಕಾಲವಾಗುವುದರೊಳ

ಗಾಗಿ ಇವಳನ್ನು ಸಂಹರಿಸು. ರಾಕ್ಷಸರು ಯಾವಾಗಲೂ ಸಂಧ್ಯಾಕಾಲಗಳಲ್ಲಿ ಹೆಚ್ಚು ಬಲವುಳ್ಳವರಾಗುತ್ತಾರೆ."

ವಿಶ್ವಾಮಿತ್ರರಿಂದ ಪುನಃ ಹೀಗೆ ಶಾಸನಮಾಡಲ್ಪಟ್ಟ ಶ್ರೀರಾಮನು ಕಲ್ಲಿನ ಮಳೆಯನ್ನು ಅನವರತವಾಗಿ ಸುರಿಸುತ್ತಿದ್ದ, ಅದೃಶ್ಯಳಾಗಿದ್ದ ತಾಟಕಿಯನ್ನು–ತನ್ನ ಶಬ್ದವೇಧಿತ್ವದ ನೈಪುಣ್ಯವನ್ನು ತೋರ್ಪಡಿಸುತ್ತಾ, ಅಸ್ತ್ರಗಳ ಅನವರತಪ್ರಯೋಗದಿಂದ ತಡೆದನು. ಮಾಯಾಬಲಸಮನ್ವಿತಳಾದ ತಾಟಕಿಯು ರಾಮನು ಪ್ರಯೋಗಿಸಿದ ಬಾಣಜಾಲಗಳಿಂದ ನಿರೋಧಿಸಲ್ಪಟ್ಟವಳಾಗಿ ಅತಿಘೋರವಾಗಿ ಗರ್ಜನೆಮಾಡುತ್ತಾ ರಾಮ-ಲಕ್ಷ್ಮಣರ ಬಳಿಗೆ ಧಾವಿಸಿ ಬಂದಳು. ಸಿಡಿಲಿನೋಪಾದಿಯಲ್ಲಿ ರಾಮ-ಲಕ್ಷ್ಮಣರ ಮೇಲೆ ರಭಸದಿಂದ ಬೀಳುತ್ತಿದ್ದ ತಾಟಕಿಯ ಹೃದಯಕ್ಕೆ ರಾಘವನು ಗುರಿಯಿಟ್ಟು ಬಾಣ ಪ್ರಯೋಗಮಾಡಿದನು. ಒಡನೆಯೇ ತಾಟಕಿಯು ಕೆಳಗೆ ಬಿದ್ದು ಮೃತಳಾದಳು. ಭಯಂಕರಾಕಾರಳಾಗಿದ್ದ ತಾಟಕಿಯು ಹತಳಾಗಿ ಕೆಳಗೆ ಬಿದ್ದುದನ್ನು ಕಂಡು ಸುರಪತಿಯಾದ ದೇವೇಂದ್ರನು "ಸಾಧು, ಸಾಧು"–ಎಂದು ರಾಮನನ್ನು ಶ್ಲಾಘಿಸಿದನು. ದೇವತೆಗಳೂ ರಾಮನನ್ನು ಅಭಿನಂದಿಸಿದರು. ಪರಮಪ್ರೀತನಾದ ಸಹಸ್ರಾಕ್ಷನಾದ, ಪುರಂದರನೂ ಮತ್ತು ತಾಟಕಾವಧೆಯಿಂದ, ಸಂತುಷ್ಟರಾದ ದೇವತೆಗಳೂ ವಿಶ್ವಾಮಿತ್ರರಿಗೆ ಹೇಳಿದರು :

"ಕೌಶಿಕಮಹಾಮುನಿಯೇ! ನಿನಗೆ ಮಂಗಳವಾಗಲಿ. ತಾಟಕಾವಧರೂಪವಾದ ಕರ್ಮದಿಂದ ಇಂದ್ರನೇ ಮೊದಲಾಗಿ ನಾವೆಲ್ಲರೂ ಸುಪ್ರೀತರಾದೆವು. ಆದುದರಿಂದ ರಾಘವನಲ್ಲಿ ಹೆಚ್ಚಿನ ಸ್ನೇಹವನ್ನು ತೋರಿಸು. ಸತ್ಯಪರಾಕ್ರಮವಿರುವ, ತಪೋಬಲದಿಂದ ಪ್ರಾಪ್ತರಾಗಿರುವ, ಕೃಶಾಶ್ವ ಪ್ರಜಾಪತಿಯ ನೂರು ಅಸ್ತ್ರಕುಮಾರರನ್ನೂ ರಾಮನಿಗೆ ದಯಪಾಲಿಸು.* ಬ್ರಹ್ಮರ್ಷೇ! ತಪಸ್ಸಿನಿಂದಲೂ, ಜ್ಞಾನದಿಂದಲೂ, ಬಲದಿಂದಲೂ ಪೂರ್ಣನಾಗಿರುವ ಮತ್ತು ನಿನ್ನ ಶುಶ್ರೂಷೆಯಲ್ಲಿ ಆಸಕ್ತನಾಗಿರುವ ಶ್ರೀರಾಮನು ನಿನ್ನಲ್ಲಿರುವ ನೂರು ಅಸ್ತ್ರಗಳನ್ನೂ ಧಾರಣೆಮಾಡಲು ಸತ್ಪಾತ್ರನಾಗಿರುವನು.

---

* ದಕ್ಷಕನ್ಯೆಯರಾದ ಜಯಾ ಮತ್ತು ಸುಪ್ರಭೆಯರಲ್ಲಿ ಪುತ್ರರೂಪರಾಗಿ ನೂರು ಮಹಾಸ್ತ್ರಗಳು ಹುಟ್ಟಿದುವೆಂದೂ, ಆ ನೂರು ಅಸ್ತ್ರಗಳೂ ವಿಶ್ವಾಮಿತ್ರನಿಗೆ ಪ್ರಾಪ್ತವಾಗಿರುವು

ಈ ರಾಜಕುಮಾರನಿಂದ ದೇವತೆಗಳ ಮಹಾಕಾರ್ಯವೊಂದರ ಸಾಧನೆ ಯಾಗಬೇಕಾಗಿದೆ.”

ಹೀಗೆ ಹೇಳಿ ದೇವತೆಗಳೆಲ್ಲರೂ ಸಂತುಷ್ಟಹೃದಯರಾಗಿ, ವಿಶ್ವಾಮಿತ್ರ ರನ್ನು ಶ್ಲಾಘನೆಮಾಡುತ್ತಾ ಸ್ವರ್ಗಲೋಕಕ್ಕೆ ತೆರಳಿದರು. ಸಂಧ್ಯಾಕಾಲವು ಪ್ರಾಪ್ತವಾಯಿತು. ಮುನಿವರರಾದ ವಿಶ್ವಾಮಿತ್ರರೂ ತಾಟಕಾವಧೆಯಿಂದಾಗಿ ಅಮಿತಾನಂದವನ್ನು ಹೊಂದಿದರು. ಶ್ರೀರಾಮನನ್ನು ಬಾಚಿತಬ್ಬಿಕೊಂಡು ನೆತ್ತಿಯನ್ನು ಆಘ್ರಾಣಿಸಿ ಹೇಳಿದರು :

“ರಾಮ! ಇಲ್ಲಿಯೇ ನಾವು ಈ ರಾತ್ರಿಯನ್ನು ಕಳೆಯೋಣ. ನಾಳೆ ಬೆಳಿಗ್ಗೆ ನನ್ನ ಆಶ್ರಮಕ್ಕೆ ಪ್ರಯಾಣಮಾಡೋಣ.”

ವಿಶ್ವಾಮಿತ್ರರ ಮಾತನ್ನು ಕೇಳಿ ಸಂತುಷ್ಟನಾದ ದಾಶರಥಿಯು ಲಕ್ಷ್ಮಣ ಸಮೇತನಾಗಿ ತಾಟಕಾವನದಲ್ಲಿ ಆ ರಾತ್ರಿಯನ್ನು ಕಳೆದನು. ತಾಟಕಿಯ ಉಪ ದ್ರವದಿಂದ ಬಿಡುಗಡೆಹೊಂದಿದ ಆ ಮಹಾರಣ್ಯವು ಆ ದಿನ ಮೊದಲ್ಗೊಂಡು ರಮಣೀಯವಾದ ಕುಬೇರನ ಚೈತ್ರರಥದಂತೆ ಕಂಗೊಳಿಸಿತು. ಶ್ರೀರಾಮನು ಯಕ್ಷಸುತೆಯಾದ ತಾಟಕಿಯನ್ನು ಸಂಹರಿಸಿ, ಸಿದ್ಧ-ಚಾರಣರೇ ಮೊದಲಾದ ದೇವತೆಗಳಿಂದ ಪ್ರಶಂಸೆಮಾಡಲ್ಪಟ್ಟವನಾಗಿ, ಆ ರಾತ್ರಿಯಲ್ಲಿ ವಿಶ್ವಾಮಿತ್ರ ಮಹರ್ಷಿಗಳೊಡನೆ ಅಲ್ಲಿಯೇ ಮಲಗಿದ್ದು, ಪ್ರಭಾತವಾಗುತ್ತಲೇ ವಿಶ್ವಾಮಿತ್ರ ಮುನಿಯ–“ಕೌಸಲ್ಯಾ ಸುಪ್ರಜಾ ರಾಮ”–ಎಂಬ ಮಾತಿನಿಂದ ಎಚ್ಚರ ಗೊಂಡನು.

೨೬ನೆಯ ಸರ್ಗವು ಮುಗಿಯಿತು.

ದೆಂದೂ ಈ ಹಿಂದಿನ ಕಥೆಯಿಂದ ತಿಳಿದುಬರುತ್ತದೆ. ಇಂದ್ರಾದಿಗಳೂ ಆ ನೂರು ಅಸ್ತ್ರಗಳನ್ನೇ ರಾಮನಿಗೆ ಉಪದೇಶಿಸುವಂತೆ ವಿಶ್ವಾಮಿತ್ರನಿಗೆ ಹೇಳಿದರು.

ಬಾಲಕಾಂಡ ೨೭ನೆಯ ಸರ್ಗ

ವಿಶ್ವಾಮಿತ್ರರಿಂದ ಶ್ರೀರಾಮನಿಗೆ ದಿವ್ಯಾಸ್ತ್ರಗಳ ಉಪದೇಶ

ಅಥ ತಾಂ ರಜನೀಮುಷ್ಯ ವಿಶ್ವಾಮಿತ್ರೋ ಮಹಾಯಶಾಃ ।
ಪ್ರಹಸ್ಯ ರಾಘವಂ ವಾಕ್ಯಮುವಾಚ ಮಧುರಾಕ್ಷರಮ್ ॥೧॥

ತಾಟಕಾವನದಲ್ಲಿ ಆ ರಾತ್ರಿಯನ್ನು ಸುಖವಾಗಿ ಕಳೆದನಂತರ ಮಹಾ ಯಶಸ್ವಿಗಳಾದ ವಿಶ್ವಾಮಿತ್ರರು ಮಂದಸ್ಮಿತರಾಗಿ, ರಾಮನಿಗೆ ಮಧುರಾಕ್ಷರ ಯುಕ್ತವಾದ ಈ ಮಾತನ್ನು ಹೇಳಿದರು :

"ಯಶೋವಂತನಾದ ರಾಜಪುತ್ರನೇ! ನೀನು ಮಾಡಿದ ತಾಟಕಾ ಸಂಹಾರದಿಂದ ನಾನು ಸುಪ್ರೀತನಾಗಿದ್ದೇನೆ. ನಿನಗೆ ಮಂಗಳವುಂಟಾಗಲಿ. ನಿನ್ನ ವಿಷಯದಲ್ಲಿ ವಿಶೇಷವಾದ ಅನುರಾಗವುಳ್ಳ ನಾನು–ನನ್ನಲ್ಲಿರುವ ಸಕಲ ವಾದ ಅಸ್ತ್ರಗಳನ್ನೂ ನಿನಗೆ ಉಪದೇಶಿಸುತ್ತೇನೆ. ಈ ಅಸ್ತ್ರಗಳಿಂದ ನಿನಗಾಗುವ ಪ್ರಯೋಜನವನ್ನು ಹೇಳುವೆನು, ಕೇಳು : ದೇವ-ದಾನವ-ಗಂಧರ್ವರಾಗಲೀ, ಯಕ್ಷ-ಕಿನ್ನರ-ಕಿಂಪುರುಷ-ಪನ್ನಗರೇ ಆಗಲೀ–ನಿನ್ನೆದುರಾಗಿ ಯುದ್ಧಕ್ಕೆ ನಿಲ್ಲುವ ಶತ್ರುಗಳು ಯಾರೇ ಆಗಿದ್ದರೂ–ಅವರ ಮೇಲೆ ಈ ದಿವ್ಯಾಸ್ತ್ರಗಳ ಪ್ರಯೋಗದಿಂದ, ಯುದ್ಧದಲ್ಲಿ ಅವರನ್ನು ವಶಪಡಿಸಿಕೊಂಡು ಜಯಿಸುವ ಸಾಮರ್ಥ್ಯವು ನಿನಗುಂಟಾಗುತ್ತದೆ. ಅಂತಹ ಸಕಲವಾದ ದಿವ್ಯಾಸ್ತ್ರಗಳೆಲ್ಲ ವನ್ನೂ ನಿನಗೆ ಕೊಡುತ್ತೇನೆ. ದಿವ್ಯವಾದ ಮಹಾದಂಡಚಕ್ರವನ್ನು ಕೊಡುತ್ತೇನೆ. ಧರ್ಮಚಕ್ರ, ಕಾಲಚಕ್ರ, ವಿಷ್ಣುಚಕ್ರ, ಅತ್ಯುಗ್ರವಾದ ಇಂದ್ರಚಕ್ರ, ವಜ್ರಾಯುಧ, ಶಿವನ ಶೂಲಾಯುಧ, ಬ್ರಹ್ಮಶಿರ, ಐಷೀಕ–ಇವೆಲ್ಲವನ್ನೂ ನಿನಗೆ ಅನುಗ್ರಹಿಸುತ್ತೇನೆ. ಉತ್ತಮೋತ್ತಮವಾದ ಬ್ರಹ್ಮಾಸ್ತ್ರವನ್ನೂ, ಶುಭಾವಹಗಳಾದ ಮೋದಕೀ, ಶಿಖರೀ ಎಂಬ ಎರಡು ಗದೆಗಳನ್ನೂ ನಿನಗೆ ಕೊಡುವೆನು. ಧರ್ಮಪಾಶ, ಕಾಲಪಾಶ, ವರುಣನ ಪಾಶಾಯುಧ–ಇವುಗಳನ್ನೂ ನಿನಗೆ ಉಪದೇಶಿಸುತ್ತೇನೆ. ಶುಷ್ಕ-ಆರ್ದ್ರ ಗಳೆಂಬ ಹೆಸರಿನ ಎರಡು ಅಶನಿಗಳನ್ನು ಕೊಡುತ್ತೇನೆ. ಶಿವನ ಪೈನಾಕಾಸ್ತ್ರವನ್ನೂ, ನಾರಾಯಣಾಸ್ತ್ರವನ್ನೂ ಉಪದೇಶಿಸುತ್ತೇನೆ. ಅಗ್ನಿ ದೇವನಿಗೆ ಪರಮಪ್ರಿಯವಾದ ಶಿಖರವೆಂಬ ಆಗ್ನೇಯಾಸ್ತ್ರ, ಪ್ರಖ್ಯಾತವಾದ

ಪ್ರಥನವೆಂಬ ಹೆಸರಿನ ವಾಯವ್ಯಾಸ್ತ್ರ, ಹಯಶಿರ, ಕ್ರೌಂಚ, ವಿಷ್ಣುಶಕ್ತಿ ಮತ್ತು ರುದ್ರಶಕ್ತಿ ಎಂಬ ಎರಡು ಶಕ್ತ್ಯಾಯುಧಗಳು, ಕಂಕಾಲ, ಘೋರತಮವಾದ ಮುಸಲ, ಕಾಪಾಲ, ಕಂಕಣ–ಇವೇ ಮೊದಲಾದ ರಾಕ್ಷಸರಲ್ಲಿರುವ ಅಸ್ತ್ರಗಳೆಲ್ಲವನ್ನೂ ಕೊಡುತ್ತೇನೆ. ಮಹಾಸ್ತ್ರವಾದ ವೈದ್ಯಾಧರ, ನಂದನವೆಂಬ ಅಸಿರತ್ನ, ಪ್ರಸ್ವಾಪನ-ಪ್ರಶಮನಗಳೆಂಬ ಗಂಧರ್ವರಿಗೆ ಅತಿಪ್ರಿಯವಾದ ಅಸ್ತ್ರಗಳು–ಇವೆಲ್ಲವನ್ನೂ ನಿನಗೆ ಉಪದೇಶಿಸುತ್ತೇನೆ. ಸೌಮ್ಯ, ಮರ್ಷಣ, ಶೋಷಣ, ಸಂತಾಪನ, ವಿಲಾಪನಗಳೆಂಬ ಅಸ್ತ್ರಗಳನ್ನೂ ಕೊಡುತ್ತೇನೆ. ಕಂದರ್ಪನಿಗೆ ಅತಿಪ್ರಿಯವಾದ ದುರಾಸದವಾದ ಮದನಾಸ್ತ್ರ, ಮೋಹನವೆಂಬ ಹೆಸರಿನ ಪೈಶಾಚಾಸ್ತ್ರ–ಇವನ್ನೂ ನೀನು ಪ್ರತಿಗ್ರಹಿಸು. ತಾಮಸ, ಸೌಮನ, ಸಂವರ್ತ, ದುಸ್ಸಹವಾದ ಮೌಸಲ, ಸತ್ಯಾಸ್ತ್ರ, ಮಾಯಾಧರ, ಎದುರಾಳಿಯ ತೇಜಸ್ಸನ್ನು ಅಪಹರಿಸುವ ತೇಜಃಪ್ರಭವೆಂಬ ಹೆಸರಿನ ಮಹಾಸ್ತ್ರ, ಶಿಶಿರವೆಂಬ ಹೆಸರಿನ ಸೋಮಾಸ್ತ್ರ, ದಾರುಣವಾದ ತ್ವಾಷ್ಟ್ರವೆಂಬ ಅಸ್ತ್ರ, ಭಗದೇವತಾತ್ಮಕ ವಾದ ಶೀತೇಷುವೆಂಬ ಅಸ್ತ್ರ, ಮಾನವಾಸ್ತ್ರ–ಇವೆಲ್ಲವನ್ನೂ ನಿನಗೆ ಉಪದೇಶಿಸುತ್ತೇನೆ. ಮಹಾಬಲಯುಕ್ತವಾದ, ಕಾಮರೂಪವನ್ನು ಧರಿಸಿರುವ ಈ ಮಹಾಸ್ತ್ರಗಳನ್ನು ಪರಮೋದಾರನಾದ, ರಾಜಪುತ್ರನಾದ ನೀನು ಕೂಡಲೇ ಪರಿಗ್ರಹಿಸು."

ಮುನಿಶ್ರೇಷ್ಠರಾದ ವಿಶ್ವಾಮಿತ್ರರು ಶುಚಿಯಾಗಿ ಪೂರ್ವಾಭಿಮುಖ ವಾಗಿ ಕುಳಿತುಕೊಂಡು, ಪ್ರೇಮಪೂರ್ವಕವಾಗಿ ಶ್ರೀರಾಮನಿಗೆ ಸಕಲಾಸ್ತ್ರಗಳ ಮಹಾಮಂತ್ರಗಳನ್ನೂ ಉಪದೇಶಿಸಿದರು. ತ್ರಿಭುವನಗಳಲ್ಲಿ ಯಾವೊಬ್ಬ ನಲ್ಲಿಯೇ ಆಗಲೀ ಇಷ್ಟೊಂದು ಅಸ್ತ್ರಗಳಿರಲು ಸಾಧ್ಯವೇ ಇಲ್ಲ. ದೇವತೆಗಳ ಲ್ಲಿಯೂ ಇಷ್ಟೊಂದು ಅಸ್ತ್ರಗಳಿರುವುದಿಲ್ಲ. ಅಂತಹ ಅಮೋಘವಾದ ದಿವ್ಯಾಸ್ತ್ರ ಗಳೆಲ್ಲವನ್ನೂ ವಿಶ್ವಾಮಿತ್ರರು ರಾಮನಿಗೆ ಉಪದೇಶಿಸಿದರು.* ವಿಶ್ವಾಮಿತ್ರರು ಮಹಾಮಂತ್ರಗಳನ್ನು ಒಂದೊಂದನ್ನಾಗಿ ಶ್ರೀರಾಮನಿಗೆ ಉಪದೇಶಿಸುತ್ತಿ ದ್ದಂತೆಲ್ಲಾ ಆಯಾ ಅಸ್ತ್ರದ ಅಧಿದೇವತೆಗಳು ಮೂರ್ತಿಮತ್ತಾಗಿ ಬಂದು

---

* ಒಂದೊಂದು ಅಸ್ತ್ರಕ್ಕೂ ಒಂದೊಂದು ಮೂಲಮಂತ್ರವಿರುತ್ತದೆ. ಮೂಲ ಮಂತ್ರವನ್ನು ಜಪಮಾಡುತ್ತಿದ್ದರೆ ಆ ಅಸ್ತ್ರಗಳ ಅಧಿದೇವತೆಗಳು ಒಲಿದು ಮಂತ್ರಜಪವನ್ನು ಮಾಡುವವರಲ್ಲಿ ಉಪಸ್ಥಿತವಾಗುತ್ತವೆ.

ರಾಮನ ಸಮೀಪದಲ್ಲಿ ಉಪಸ್ಥಿತರಾದರು. ಆ ಮಹಾಸ್ತ್ರಗಳ ಅಧಿದೇವತೆಗಳು ಕೈಮುಗಿದು ನಿಂತು ರಾಮನಿಗೆ ಹೇಳಿದರು :

"ಶ್ರೀರಾಮ! ನಿನ್ನ ವಿಷಯದಲ್ಲಿ ಪರಮೋದಾರರಾಗಿ ನಾವಿಂದು ನಿನ್ನ ಕಿಂಕರರಾಗಿದ್ದೇವೆ. ನೀನು ಏನು ಮಾಡಬೇಕೆಂದು ಆಜ್ಞೆಮಾಡುವೆಯೋ ಆ ಆಜ್ಞೆಯನ್ನು ಶಿರಸಾವಹಿಸಿ ಮಾಡಲು ಸಿದ್ಧರಾಗಿದ್ದೇವೆ."

ಅಸ್ತ್ರಾಧಿದೇವತೆಗಳು ಹೀಗೆ ಹೇಳಲು, ಶ್ರೀರಾಮನು ಪ್ರಸನ್ನಾತ್ಮನಾಗಿ ಅಸ್ತ್ರಾಧಿದೇವತೆಗಳೆಲ್ಲರನ್ನೂ ಸ್ವೀಕರಿಸಿ ಕೈಯಿಂದ ಸ್ಪರ್ಶಮಾಡಿ ಹೇಳಿದನು :

"ನೀವು ನನ್ನ ಮನಸ್ಸಿನಲ್ಲಿ ವಾಸಮಾಡುತ್ತಿರಿ."

ಅಸ್ತ್ರಗಳೆಲ್ಲವೂ ರಾಮನಲ್ಲಿ ಸೇರಿಕೊಂಡುವು. ಶ್ರೀರಾಮನಿಗೆ ಅಮಿತಾನಂದವುಂಟಾಯಿತು. ಪ್ರೀತಾತ್ಮನಾದ ಶ್ರೀರಾಮನು ಮಹಾತೇಜಸ್ವಿಗಳಾದ ಪರಮಗುರುಗಳಾದ ವಿಶ್ವಾಮಿತ್ರರನ್ನು ಅಭಿವಾದನಪೂರ್ವಕವಾಗಿ ನಮಸ್ಕರಿಸಿ ಮುಂದಿನ ಪ್ರಯಾಣಕ್ಕೆ ಸಿದ್ಧನಾಗಿ ನಿಂತನು.

೨೭ನೆಯ ಸರ್ಗವು ಮುಗಿಯಿತು.

ಬಾಲಕಾಂಡ ೨೮ನೆಯ ಸರ್ಗ

ವಿಶ್ವಾಮಿತ್ರರು ರಾಮನಿಗೆ ಪ್ರತ್ಯಸ್ತ್ರಸಂಹಾರಗಳನ್ನೂ ಇನ್ನೂ ಇತರ ಅಸ್ತ್ರಗಳನ್ನೂ ಉಪದೇಶಿಸಿದುದು : ಹಾದಿಯಲ್ಲಿ ಸಿಕ್ಕಿದ ಆಶ್ರಮದ ವಿಷಯವಾಗಿ ಶ್ರೀರಾಮನು ವಿಶ್ವಾಮಿತ್ರರನ್ನು ಪ್ರಶ್ನಿಸಿದುದು

ಪ್ರತಿಗೃಹ್ಯ ತತೋಽಸ್ತ್ರಾಣಿ ಪ್ರಹೃಷ್ಟವದನಃ ಶುಚಿಃ ।
ಗಚ್ಛನ್ನೇವ ಚ ಕಾಕುತ್ಸ್ಥೋ ವಿಶ್ವಾಮಿತ್ರಮಥಾಬ್ರವೀತ್ ॥೧॥

ಅಸ್ತ್ರಗಳನ್ನು ಸ್ವೀಕರಿಸಿದ ಬಳಿಕ ಪರಮಸಂತುಷ್ಟನಾದ, ಶುಚಿಯಾದ ಶ್ರೀರಾಮನು ತಾಟಕಾವನವನ್ನು ಬಿಟ್ಟು ಮುಂದೆ ಪ್ರಯಾಣಮಾಡುತ್ತಿರುವಾಗ ಹಾದಿಯಲ್ಲಿ ವಿಶ್ವಾಮಿತ್ರರನ್ನು ಕೇಳಿದನು :

"ಪೂಜ್ಯರೇ, ಮುನಿವರೇಣ್ಯರೇ! ತಮ್ಮ ದಿವ್ಯಾನುಗ್ರಹದಿಂದಾಗಿ ಸಕಲಾಸ್ತ್ರಗಳನ್ನೂ ಪಡೆದಿರುತ್ತೇನೆ. ಈ ಮಹಾಸ್ತ್ರಗಳ ಸಂಪಾದನೆಯಿಂದಾಗಿ ನನ್ನನ್ನಿಂದು ದೇವ-ದಾನವರೂ ಎದುರಿಸಿ ನಿಲ್ಲಲಾರರು. ಸುಪ್ರಭೆಯ ಮಕ್ಕಳಾದ ಸಂಹಾರರೆಂಬ ಹೆಸರಿನ ಅಸ್ತ್ರಗಳ ಉಪದೇಶವನ್ನೂ ತಮ್ಮಿಂದ ನಾನು ಪಡೆಯಲು ಇಚ್ಛಿಸುತ್ತೇನೆ."

ಶ್ರೀರಾಮನು ಹೀಗೆ ಪ್ರಾರ್ಥಿಸಲು, ಧೃತಿಮಂತರಾದ, ಸುವ್ರತರಾದ, ಪರಿಶುದ್ಧರಾದ, ಮಹಾತಪಸ್ವಿಗಳಾದ ವಿಶ್ವಾಮಿತ್ರರು ಸಂಹಾರಾಸ್ತ್ರಾಧಿದೇವತೆಗಳ ಹೆಸರುಗಳನ್ನು ಹೇಳತೊಡಗಿದರು : "ಸತ್ಯವಂತ, ಸತ್ಯಕೀರ್ತಿ, ಧೃಷ್ಟ, ರಭಸ, ಪ್ರತಿಹಾರತರ, ಪರಾಙ್ಮುಖ, ಅವಾಙ್ಮುಖ, ಲಕ್ಷಾಕ್ಷ, ವಿಷಮ, ದೃಢನಾಭ, ಸುನಾಭ, ದಶಾಕ್ಷ, ಶತವಕ್ತ್ರ, ದಶಶೀರ್ಷ, ಶತೋದರ, ಪದ್ಮನಾಭ, ಮಹಾನಾಭ, ದುಂದುನಾಭ, ಸುನಾಭ, ಜ್ಯೋತಿಷ, ಕೃಶನ, ನೈರಾಶ್ಯ, ವಿಮಲ, ಯೋಗಂಧರ, ವಿನಿದ್ರ, ದೈತ್ಯ, ಪ್ರಮಥನ, ಶುಚಿ, ಬಾಹು, ಮಹಾಬಾಹು, ನಿಷ್ಕುಲಿ, ವಿರುಚಿ, ಸಾರ್ಚಿರ್ಮಾಲೀ, ಧೃತಿ ರ್ಮಾಲೀ, ವೃತ್ತಿವಂತ, ರುಚಿರ, ಪಿತ್ರ್ಯಸೌಮನಸ, ವಿಧೂತ, ಮಕರ ಕರವೀರಕರ, ಧನ, ಧಾನ್ಯ, ಕಾಮರೂಪ, ಕಾಮರುಚಿ, ಮೋಹ, ಆವರಣ, ಜೃಂಭಕ, ಸರ್ಪನಾಭ, ಸಂತಾನ, ವರುಣ–ಇವರೇ ಕೃಶಾಶ್ವನಿಗೆ ದಕ್ಷಕನ್ಯೆ ಯಾದ ಸುಪ್ರಭೆಯಲ್ಲಿ ಹುಟ್ಟಿದ ಐವತ್ತು ಮಂದಿ ಮಕ್ಕಳು. ಇವರೆಲ್ಲರೂ ಕಾಮರೂಪಿಗಳಾಗಿಯೂ ಮಹಾತೇಜಸ್ವಿಗಳಾಗಿಯೂ ಇರುವರು. ಇವರೆಲ್ಲರನ್ನೂ ನನ್ನಿಂದ ಸ್ವೀಕರಿಸು ; ರಾಮ! ಇದಕ್ಕೆ ನೀನು ಸತ್ಪಾತ್ರನಾಗಿರುವೆ. ನಿನಗೆ ಮಂಗಳವಾಗಲಿ."

ರಾಘವನು ವಿಶ್ವಾಮಿತ್ರರ ಆದೇಶಕ್ಕೆ ಸಂತುಷ್ಟವಾದ ಹೃದಯದಿಂದ 'ಬಾಢಂ' 'ಹಾಗೆಯೇ ಆಗಲಿ'–ಎಂದು ಉತ್ತರವಿತ್ತು. ಹಿಂದಿನಂತೆಯೇ ಮಹಾಮಂತ್ರದ ಉಪದೇಶವನ್ನು ವಿಶ್ವಾಮಿತ್ರರಿಂದ ಪಡೆದನು. ಒಡನೆಯೇ ಅಸ್ತ್ರಗಳ ಅಧಿದೇವತೆಗಳು ದಿವ್ಯಕಾಂತಿಯಿಂದ ಕೂಡಿದ ಶರೀರಗಳಿಂದ ಕೂಡಿ ಸುಖಪ್ರದಗಳಾಗಿ, ಮೂರ್ತಿಮತ್ತಾಗಿ ರಾಮನ ಸಮೀಪದಲ್ಲಿ ಉಪಸ್ಥಿತವಾದುವು. ಅವುಗಳಲ್ಲಿ ಕೆಲವು ಕೆಂಡದಂತೆ ಕಂಗೊಳಿಸುತ್ತಿದ್ದುವು. ಕೆಲವು

ಹೊಗೆಯಂತೆಯೂ ಮತ್ತೆ ಕೆಲವು ಚಂದ್ರ ಮತ್ತು ಸೂರ್ಯರ ಕಾಂತಿಯಿಂದಲೂ ಪ್ರಕಾಶಿಸುತ್ತಿದ್ದುವು. ಕೆಲವು ಸ್ವಾಭಾವಿಕವಾಗಿಯೇ ವಿನಮ್ರವಾದ ಅಂಜಲಿಪುಟಗಳುಳ್ಳವುಗಳಾಗಿಯೂ ಇದ್ದುವು. ಆ ಅಸ್ತ್ರಾಧಿದೇವತೆಗಳೆಲ್ಲವೂ ಕೈಮುಗಿದು ನಿಂತು ರಾಮನೊಡನೆ ಮಧುರವಾದ ಈ ಮಾತುಗಳನ್ನಾಡಿದುವು.

"ನರವ್ಯಾಘ್ರನೇ! ನಾವು ನಿನ್ನ ಕಿಂಕರರಾಗಿದ್ದೇವೆ. ನಾವೇನು ಮಾಡಬೇಕೆಂಬುದನ್ನು ಆಜ್ಞಾಪಿಸು."

"ಅಸ್ತ್ರಾಧಿದೇವತೆಗಳೇ! ನಿಮ್ಮ ಇಚ್ಛೆಯಿದ್ದಲ್ಲಿಗೆ ನೀವು ತೆರಳ ಬಹುದು. ಕಾರ್ಯಕಾಲದಲ್ಲಿ ನನ್ನ ಮನಸ್ಸಿನಲ್ಲಿ ಸುಸ್ಥಿರರಾಗಿದ್ದು ಶತ್ರು ಸಂಹಾರಕ್ಕೆ ಸಹಾಯಮಾಡಿರಿ."

ಅನಂತರ ಸಂಹಾರಾಸ್ತ್ರಾಧಿದೇವತೆಗಳು 'ಹಾಗೆಯೇ ಆಗಲಿ' ಎಂದು ರಾಮನಿಗೆ ಪ್ರತಿವಚನವಿತ್ತು, ಮಹಾನುಭಾವನಾದ ಶ್ರೀರಾಮನನ್ನು ಪ್ರದಕ್ಷಿಣೆ ಮಾಡಿ ತಲೆಬಾಗಿ ನಮಸ್ಕರಿಸಿ ಅನುಜ್ಞೆಯನ್ನು ಪಡೆದು ತಮ್ಮ-ತಮ್ಮ ಸ್ಥಾನಗಳಿಗೆ ತೆರಳಿದರು. ಬಳಿಕ ರಾಮನು ವಿಶ್ವಾಮಿತ್ರರ ಅನುಜ್ಞೆಯಂತೆ ಸಮಸ್ತವಾದ ಅಸ್ತ್ರಗಳನ್ನೂ–ಸಂಹಾರಾಸ್ತ್ರಗಳನ್ನೂ ಪರಮಸಂತೋಷದಿಂದ ಲಕ್ಷ್ಮಣನಿಗೆ ಉಪದೇಶಿಸಿದನು. ಸಂಹಾರಾಸ್ತ್ರಗಳನ್ನೂ ಪ್ರತಿಗ್ರಹಮಾಡಿದನಂತರ ವಿಶ್ವಾಮಿತ್ರರೊಡನೆ ಮುಂದೆ ನಡೆದುಹೋಗುತ್ತಿರುವಾಗ ರಾಘವನು ಮಹಾಮುನಿಗಳಾದ ವಿಶ್ವಾಮಿತ್ರರನ್ನು ಕುರಿತು, ಶ್ರವಣಮಾತ್ರದಿಂದಲೇ ಸುಖದಾಯಕವಾದ, ಸುಮಧುರವಾದ ಮಾತುಗಳನ್ನಾಡಿದನು :

"ಮುನಿಪುಂಗವರೇ! ನಮ್ಮ ಎದುರಾಗಿ ಕಾಣುವ ಪರ್ವತಕ್ಕೆ ಹತ್ತಿರದಲ್ಲಿಯೇ ಮೇಘಸದೃಶವಾದ ವೃಕ್ಷಗಳ ಸಮೂಹವು ಪ್ರಕಾಶಿಸುತ್ತಿದೆ. ಅಲ್ಲಿರುವ ನಾನಾಮೃಗಗಳ ಸಮೂಹವು ದರ್ಶನೀಯವಾಗಿದೆ. ನಾನಾಪ್ರಕಾರವಾದ ಪಕ್ಷಿಸಮೂಹದಿಂದಲೂ, ಅವುಗಳ ಮಧುರನಿನಾದಗಳಿಂದಲೂ ಆ ಪ್ರದೇಶವು ಅಲಂಕೃತವಾಗಿದ್ದು, ಅತಿಮನೋಹರವಾಗಿ ಕಾಣುತ್ತಿದೆ. ಆ ಪ್ರದೇಶವು ಯಾವುದೆಂಬುದನ್ನು ತಿಳಿಯಲು ಅತ್ಯಂತ ಕುತೂಹಲವುಂಟಾಗಿದೆ. ದಯೆಯಿಟ್ಟು ಹೇಳಿರಿ. ಮಹರ್ಷಿಗಳೇ! ರೋಮಾಂಚವನ್ನುಂಟು

ಮಾಡುವ ತಾಟಕಾವನದಿಂದ ಹೊರಬಂದಿರುತ್ತೇವೆ. ಇಲ್ಲಿ ಕಾಣುತ್ತಿರುವ ವಾತಾವರಣದಿಂದ ಈ ದೇಶದ ಸೌಖ್ಯವೆಷ್ಟೆಂಬುದನ್ನು ಮನಗಾಣುತ್ತಿದ್ದೇನೆ. ಈ ಮುಂದೆ ಕಾಣುತ್ತಿರುವ ಆಶ್ರಮವು ಯಾರದೆಂಬುದನ್ನು ಹೇಳಿರಿ. ಪಾಪಿಷ್ಠರಾದ, ಬ್ರಹ್ಮಘ್ನರಾದ, ದುಷ್ಟಚಾರಿಗಳಾದ, ದುರಾತ್ಮರಾದ ರಾಕ್ಷಸರು ನಿಮ್ಮ ಯಜ್ಞಕ್ಕೆ ವಿಘ್ನವನ್ನುಂಟುಮಾಡುವ ಸಲುವಾಗಿ ಯಾವಾಗ ಬರು ತ್ತಾರೆ? ಎಲ್ಲಿಗೆ ಬರುತ್ತಾರೆ? ನೀವು ಯಜ್ಞ ಮಾಡಲಿರುವ ದೇಶವಾವುದು? ನಾನು ರಕ್ಷಿಸಬೇಕಾಗಿರುವ ಯಜ್ಞವು ಯಾವುದು? ನಾನು ಸಂಹರಿಸಬೇಕಾದ ರಾಕ್ಷಸರು ಯಾರು? ಎಲ್ಲಿರುತ್ತಾರೆ?–ಈ ಎಲ್ಲ ವಿಷಯಗಳನ್ನೂ ವಿಸ್ತಾರವಾಗಿ ನಿಮ್ಮಿಂದ ತಿಳಿದುಕೊಳ್ಳಲು ಬಯಸುತ್ತೇನೆ.”

೨೮ನೆಯ ಸರ್ಗವು ಮುಗಿಯಿತು.

ಬಾಲಕಾಂಡ ೨೯ನೆಯ ಸರ್ಗ

ವಾಮನರೂಪಿಯಾದ ಮಹಾವಿಷ್ಣುವಿನ ಸಿದ್ಧಾಶ್ರಮದರ್ಶನ : ವಿಶ್ವಾಮಿತ್ರರಿಂದ ಸಿದ್ಧಾಶ್ರಮದ ಉಪಾಖ್ಯಾನಕಥನ

ಅಥ ತಸ್ಯಾಪ್ರಮೇಯಸ್ಯ ತದ್ವನಂ ಪರಿಪೃಚ್ಛತಃ ।
ವಿಶ್ವಾಮಿತ್ರೋ ಮಹಾತೇಜಾ ವ್ಯಾಖ್ಯಾತುಮುಪಚಕ್ರಮೇ ॥೧॥

ಅನಂತರ ವನದ ವಿಷಯವಾಗಿ ಪ್ರಶ್ನಿಸಿದ, ಅಪ್ರಮೇಯನಾದ ಶ್ರೀರಾಮನಿಗೆ ಮಹಾತೇಜಸ್ವಿಗಳಾದ ವಿಶ್ವಾಮಿತ್ರರು ಉತ್ತರಿಸಲು ಉಪಕ್ರಮಿಸಿದರು :

“ಮಹಾಬಾಹುವಾದ ಶ್ರೀರಾಮನೇ! ಸಕಲದೇವವಂದ್ಯನಾದ ಶ್ರೀಮಹಾವಿಷ್ಣುವು ತಪಶ್ಚರಣೆಯ ಫಲಸಿದ್ಧಿಗಾಗಿ ನೂರಾರು ಯುಗಗಳನ್ನು ಇಲ್ಲಿಯೇ ಕಳೆದನು. ಇದೇ ಆ ವಾಮನನ ದಿವ್ಯಾಶ್ರಮ. ಈ ಆಶ್ರಮಕ್ಕೆ ‘ಸಿದ್ಧಾಶ್ರಮ’ ವೆಂದೇ ಹೆಸರು. ಮಹಾತಪಸ್ವಿಯಾದ ಕಾಶ್ಯಪನು (ವಾಮನನು) ಇಲ್ಲಿ ಸಿದ್ಧಿಯನ್ನು ಪಡೆದುದರಿಂದ ಇದಕ್ಕೆ ‘ಸಿದ್ಧಾಶ್ರಮ’ ವೆಂದೂ ಹೆಸರಾಯಿತು. ವಿಷ್ಣುವು ತಪಸ್ಸುಮಾಡುತ್ತಿದ್ದ ಕಾಲದಲ್ಲಿಯೇ ವಿರೋಚನನ ಮಗನಾದ ಬಲಿಚಕ್ರವರ್ತಿಯು ಅತುಲಪರಾಕ್ರಮದಿಂದ

ಇಂದ್ರಸಮೇತರಾದ ದೇವತೆಗಳನ್ನೂ, ಮರುದ್ಗಣಗಳನ್ನೂ ಪರಾಜಯ ಗೊಳಿಸಿ, ಇಂದ್ರನ ರಾಜ್ಯವನ್ನು ತನ್ನ ರಾಜ್ಯವನ್ನಾಗಿ ಮಾಡಿಕೊಂಡನು. ಮಹಾಬಲಿಷ್ಠನಾದ, ಅಸುರೇಂದ್ರನಾದ ಬಲಿಚಕ್ರವರ್ತಿಯು ತ್ರಿಭುವನ ಗಳನ್ನೂ ಜಯಿಸಿ ಯಜ್ಞವನ್ನು ಮಾಡಲು ಉಪಕ್ರಮಿಸಿದನು. ಯಜ್ಞದ ಯಜಮಾನನಾದ ಬಲಿಚಕ್ರವರ್ತಿಯ ವ್ಯವಹಾರವನ್ನು ಕಂಡು ಭೀತರಾದ ದೇವತೆಗಳು ಅಗ್ನಿಯನ್ನು ಮುಂದುಮಾಡಿಕೊಂಡು ಈ ಸಿದ್ಧಾಶ್ರಮದಲ್ಲಿ ತಪಸ್ಸುಮಾಡುತ್ತಿದ್ದ ವಿಷ್ಣುವಿನ ಬಳಿಗೆ ಬಂದು ಹೇಳಿದರು :

"ವಿಷ್ಣುದೇವನೇ! ವಿರೋಚನನ ಮಗನಾದ ಬಲಿಯು ಉತ್ತಮೋ ತ್ತಮವಾದ ಯಜ್ಞವನ್ನು ಆರಂಭಿಸಿದ್ದಾನೆ. ಆ ಯಜ್ಞವು ಮುಗಿಯುವುದ ರೊಳಗಾಗಿ ನಮ್ಮ ಕಾರ್ಯವನ್ನು ನೀನು ಪೂರೈಸಿಕೊಡಬೇಕು. ಈ ದೇಶದಲ್ಲಿಯೂ ದೇಶಾಂತರಗಳಲ್ಲಿಯೂ ಇರುವ ಯಾಚಕರು ಬಂದು ಆ ಸಮಯದಲ್ಲಿ ಬಲಿಚಕ್ರವರ್ತಿಯನ್ನು ಏನೇ ಕೇಳಿದರೂ ಅವನು ಅದನ್ನು ಅವರಿಗೆ ಕೊಟ್ಟುಬಿಡುವನು. ಪರಮಪುರುಷನಾದ ನೀನು ದೇವತೆಗಳ ಹಿತಾರ್ಥವಾಗಿ ಮಹಾಯೋಗದಿಂದ ವಾಮನಾವತಾರವನ್ನು ತಾಳಿ ನಮಗೆ ಕಲ್ಯಾಣವನ್ನುಂಟುಮಾಡು."

ವಿಶ್ವಾಮಿತ್ರರು ಹೇಳುತ್ತಾರೆ :

"ರಾಮ! ಆ ಸಮಯಕ್ಕೆ ಸರಿಯಾಗಿ ಓಜಸ್ಸಿನಿಂದ ಬೆಳಗುತ್ತಿರುವನೋ ಎಂಬಂತಿದ್ದ, ಅಗ್ನಿಗೆ ಸಮಾನವಾದ ತೇಜಸ್ಸಿನಿಂದ ಪ್ರಜ್ವಲಿಸುತ್ತಿದ್ದ ಕಶ್ಯಪನು ಅದಿತಿಯೊಡನೆ ಒಂದು ಸಾವಿರ ವರ್ಷಗಳವರೆಗೆ ತಪಸ್ಸುಮಾಡಿ, ವ್ರತಾನುಷ್ಠಾನವನ್ನು ಮುಗಿಸಿದನಂತರ ಪ್ರತ್ಯಕ್ಷನಾದ, ವರದನಾದ ಮಧು ಸೂದನನನ್ನು, ಪತ್ನಿಯಾದ ಅದಿತಿಯಿಂದೊಡಗೂಡಿ ಧ್ಯಾನ-ಸ್ತೋತ್ರಾದಿ ಗಳಿಂದ ಸಂತೋಷಗೊಳಿಸಿ ಹೇಳಿದನು :

ತಪೋಮಯಂ ತಪೋರಾಶಿಂ ತಪೋಮೂರ್ತಿಂ ತಪಾತ್ಮಕಮ್ ।
ತಪಸಾ ತ್ವಾಂ ಸುತಪ್ತೇನ ಪಶ್ಯಾಮಿ ಪುರುಷೋತ್ತಮಮ್ ॥೧೨॥

ಶರೀರೇ ತವ ಪಶ್ಯಾಮಿ ಜಗತ್ಸರ್ವಮಿದಂ ಪ್ರಭೋ ।
ತ್ವಮನಾದಿರನಿರ್ದೇಶ್ಯಸ್ತ್ವಾಮಹಂ ಶರಣಂ ಗತಃ ॥೧೩॥

"ಮಹಾನುಭಾವನೇ! ತಪೋಮಯನೂ, ತಪಸ್ಸಿನಿಂದ ಆರಾಧಿಸಲ್ಪಡತಕ್ಕವನೂ, ತಪಸ್ಸಿನ ರಾಶಿಯೂ, ಪರಮಪುರುಷನೂ ಆಗಿರುವ ಪುಣ್ಯಮೂರ್ತಿಯನ್ನು, ಜ್ಞಾನಮೂರ್ತಿಯನ್ನು, ತಪಸ್ಸೇ ಮೂರ್ತಿಮತ್ತಾಗಿರುವ ದಿವ್ಯಮೂರ್ತಿಯನ್ನು, ಮಹಾಜ್ಞಾನಿಯನ್ನು, ಪುರುಷೋತ್ತಮನನ್ನು–ನಿಯತವ್ರತಾನುಷ್ಠಾನಗಳನ್ನೊಳಗೊಂಡ ತಪಶ್ಚರಣೆಯ ಫಲವಾಗಿ ಇಂದು ಪ್ರತ್ಯಕ್ಷವಾಗಿ ನೋಡುತ್ತಿದ್ದೇನೆ. ನಿನ್ನ ಶರೀರದಲ್ಲಿ ಸಕಲಚರಾಚರಗಳನ್ನೊಳಗೊಂಡ ತ್ರಿಭುವನಗಳನ್ನೂ ನೋಡುತ್ತಿರುವೆನು. 'ನೀನು ಜರಾಮರಣೋತ್ಪತ್ತಿರಹಿತನು. ನಿನಗೆ ಆದಿ-ಅಂತ್ಯಗಳೆಂಬುದೇ ಇಲ್ಲ. ನೀನು ಇಂತಹವನು; ನಿನ್ನ ಸ್ವರೂಪವಿಂತಹುದು'–ಎಂದು ಅಳೆಯುವ ಸಾಧ್ಯತೆಯೂ ಇಲ್ಲ. ಅಂತಹ ಅಪ್ರಮೇಯನಾದ ನಿನಗೆ ನಾನು ಶರಣಾಗತನಾಗಿದ್ದೇನೆ."

ಇವೇ ಮುಂತಾಗಿ ಕಶ್ಯಪನು ಪ್ರಾರ್ಥಿಸಲಾಗಿ ಪರಮಪ್ರೀತನಾದ ಹರಿಯು ಪಾಪರಹಿತನಾದ ಕಶ್ಯಪನಿಗೆ ಹೇಳಿದನು :

ವರಂ ವರಯ ಭದ್ರಂ ತೇ ವರಾರ್ಹೋऽಸಿ ಮತೋ ಮಮ ॥೧೪॥

"ಮಹರ್ಷೇ! ನೀನು ಮಾಡಿದ ತಪಸ್ಸಿಗೂ ಮತ್ತು ಸ್ತೋತ್ರಕ್ಕೂ ಸುಪ್ರೀತನಾಗಿರುವೆನು. ಬೇಕಾದ ವರವನ್ನು ಕೇಳು. ವರವನ್ನು ಪಡೆಯಲು ನೀನು ಯೋಗ್ಯನಾಗಿರುವೆಯೆಂದು ನಾನು ಭಾವಿಸುತ್ತೇನೆ. ನಿನಗೆ ಮಂಗಳವಾಗಲಿ."

ಮಹಾವಿಷ್ಣುವಿನ ಆ ದಿವ್ಯವಾಣಿಯನ್ನು ಕೇಳಿ ಮರೀಚಿಋಷಿಗಳ ಮಗನಾದ ಕಶ್ಯಪನು ಹೇಳಿದನು :

"ಪ್ರಭುವೇ! ವರವನ್ನು ಯಾಚನೆಮಾಡುತ್ತಿರುವ ನನ್ನ ವಿಷಯದಲ್ಲಿಯೂ, ದೇವತೆಗಳ ಮತ್ತು ಅದಿತಿಯ ವಿಷಯದಲ್ಲಿಯೂ ಸುಪ್ರೀತನಾಗಿರುವ ನೀನು ವರದಾನಮಾಡಲು ಅರ್ಹನಾಗಿರುವೆ.

ಪುತ್ರತ್ವಂ ಗಚ್ಛ ಭಗವನ್ನದಿತ್ಯಾ ಮಮ ಚಾನಘ ।
ಭ್ರಾತಾ ಭವ ಯವೀಯಾಂಸ್ತ್ವಂ ಶಕ್ರಸ್ಯಾಸುರಸೂದನ ।
ಶೋಕಾರ್ತಾನಾಂ ತು ದೇವಾನಾಂ ಸಾಹಾಯ್ಯಂ ಕರ್ತುಮರ್ಹಸಿ ॥

ಅಯಂ ಸಿದ್ಧಾಶ್ರಮೋ ನಾಮ ಪ್ರಸಾದಾತ್ತೇ ಭವಿಷ್ಯತಿ ।
ಸಿದ್ಧೇ ಕರ್ಮಣಿ ದೇವೇಶ ಉತ್ತಿಷ್ಠ ಭಗವನ್ನಿತಃ ॥೧೮॥

ಅದಿತಿಗೂ ನನಗೂ ನೀನು ಪುತ್ರನಾಗಿ ಜನಿಸು. ನನಗೆ ಮಗನಾಗಿ ಹುಟ್ಟುವುದರಿಂದ ಇಂದ್ರನಿಗೂ ನೀನು ತಮ್ಮನಾಗುವೆ. ಅಸುರಹಂತಕನೇ! ನೀನು ನನ್ನಲ್ಲಿ ಅವತರಿಸಿ ಶೋಕಾರ್ತರಾಗಿರುವ ಈ ದೇವತೆಗಳಿಗೆ ಸಹಾಯ ಮಾಡಲು ಯೋಗ್ಯನಾಗಿರುವೆ. ನಿನ್ನ ಅನುಗ್ರಹದಿಂದ ನನ್ನ ತಪಶ್ಚರಣೆಯು ಸಿದ್ಧಿಹೊಂದಲಾಗಿ (ನೀನು ನನಗೆ ಪುತ್ರನಾಗಲಾಗಿ) ಈ ಆಶ್ರಮವು ಸಿದ್ಧಾಶ್ರಮವೆಂದೇ ಪ್ರಸಿದ್ಧವಾಗುತ್ತದೆ. ಆದುದರಿಂದ ಮುಂದಿನ ಅವತಾರ ಕ್ಕಾಗಿ ಈ ಆಶ್ರಮವನ್ನು ಬಿಟ್ಟು ಬಾ."

ಪರಮಕಾರುಣಿಕನಾದ ಮಹಾತೇಜಸ್ವಿಯಾದ ಮಹಾವಿಷ್ಣುವು ಅದಿತಿ-ಕಶ್ಯಪರ ಮತ್ತು ದೇವತೆಗಳ ಪ್ರಾರ್ಥನೆಯಂತೆ ಅದಿತಿಯಲ್ಲಿ ಕಶ್ಯಪನ ಮಗನಾಗಿ ಅವತರಿಸಿ ವಾಮನರೂಪವನ್ನು ಧರಿಸಿ ದೇವತೆಗಳ ಕಾರ್ಯವನ್ನು ಸಾಧಿಸಲು ಬಲಿಚಕ್ರವರ್ತಿಯ ಬಳಿಗೆ ಹೋದನು. ಮಾನದನಾದ* ವಾಮ ನನು ದಾನಶೀಲನಾದ ರಾಕ್ಷಸರಾಜನ ಬಳಿಗೆ ಹೋಗಿ, ಮೂರು ಹೆಜ್ಜೆಗಳಷ್ಟು ಭೂಮಿಯನ್ನು ಯಾಚಿಸಿ ಬಲಿಯಿಂದ ದಾನಪಡೆದು, ಒಡನೆಯೇ ತ್ರಿವಿಕ್ರ ಮಾವತಾರವನ್ನು ತಾಳಿ ತನ್ನ ಎರಡು ಹೆಜ್ಜೆಗಳ ಅಳತೆಯಿಂದ ಸಕಲಲೋಕ ಗಳನ್ನೂ ಅಳೆದು, ಮೂರನೆಯ ಹೆಜ್ಜೆಯನ್ನು ಬಲಿಚಕ್ರವರ್ತಿಯ ತಲೆಯ ಮೇಲಿಟ್ಟು, ಅವನನ್ನು ಪಾತಾಳಕ್ಕೆ ತುಳಿದನು. ಸಕಲಲೋಕಹಿತರಕ್ಷಕ ನಾದ ಶ್ರೀಹರಿಯು ಈ ರೀತಿಯಲ್ಲಿ ಪಡೆದ ತ್ರಿಭುವನಗಳನ್ನು ಇಂದ್ರನಿಗೆ ಕೊಟ್ಟು, ಅವನನ್ನು ಪುನಃ ತ್ರೈಲೋಕ್ಯಾಧಿಪತಿಯನ್ನಾಗಿ ಮಾಡಿದನು. ವಾಮನನು ಶ್ರಮವಿನಾಶಕವಾದ ಈ ದಿವ್ಯಾಶ್ರಮದಲ್ಲಿಯೇ ವಾಸಮಾಡುತ್ತಿ ದ್ದನು. ನಾನು ಕೂಡ ಭಕ್ತಿಭಾವದಿಂದ ವಾಮನನ ಆಶ್ರಮದಲ್ಲಿಯೇ ಇರುವೆನು. ಪುರುಷವ್ಯಾಘ್ರನೇ! ವಿಘ್ನಕಾರಿಗಳಾದ ರಾಕ್ಷಸರು ಈ ಆಶ್ರಮ

---

* 'ಮಾನದಃ' ಎಂಬ ಶಬ್ದಕ್ಕೆ ತನ್ನನ್ನಾಶ್ರಯಿಸಿದವರಿಗೆ ಪ್ರತಿಷ್ಠೆಯನ್ನು ಕೊಡ ತಕ್ಕವನು (ಮಾನಂ ದದಾತೀತಿ ಮಾನದಃ) ಎಂದರೆ ಇವನನ್ನು ಆಶ್ರಯಿಸಿದವರಿಗೆ ಜೀವನದಲ್ಲಿ ಸೋಲೆಂಬುದೇ ಇಲ್ಲ ಎಂದು ಅರ್ಥವಾಗುತ್ತದೆ. ಆದರೆ ಒಬ್ಬ ವ್ಯಾಖ್ಯಾನ

ಭೂಮಿಯನ್ನು ಪದೇ-ಪದೇ ಪ್ರವೇಶಿಸಿ ಉಪದ್ರವಕೊಡುತ್ತಿರುವರು. ಇಂತಹ ದುಷ್ಟಕಾರ್ಯಮಾಡುವ ಪ್ರಭಾವವುಳ್ಳವರು ನಿನ್ನಿಂದ ಹತರಾಗ ಬೇಕಾಗಿದೆ. ಈಗ ನಾವು ಉತ್ತಮೋತ್ತಮವಾದ, ಶ್ರಮನಾಶಕವಾದ ಸಿದ್ಧಾಶ್ರಮಕ್ಕೆ ಹೋಗೋಣ. ರಾಘವ! ಆ ಆಶ್ರಮಪದವು ನನ್ನದಾಗಿರುವಂತೆಯೇ ನಿನ್ನದೂ ಆಗಿರುವುದು."

ವಿಶ್ವಾಮಿತ್ರರು ರಾಮನಿಗೆ ಹೀಗೆ ಹೇಳಿ, ರಾಮ-ಲಕ್ಷ್ಮಣರನ್ನು ಕರೆದುಕೊಂಡು, ಆಶ್ರಮವನ್ನು ಪ್ರವೇಶಿಸಿ–ಹಿಮದಿಂದ ಮುಚ್ಚಲ್ಪಡದ ಮತ್ತು ಪುನರ್ವಸೂ ನಕ್ಷತ್ರಗಳಿಂದ ಕೂಡಿ ಪ್ರಕಾಶಮಾನವಾಗಿರುವ ಚಂದ್ರ ನಂತೆಯೇ ರಾಮ-ಲಕ್ಷ್ಮಣರೊಡನೆ ಪ್ರಕಾಶಿಸಿದರು.* ವಿಶ್ವಾಮಿತ್ರರು ರಾಮ-ಲಕ್ಷ್ಮಣರೊಡನೆ ಸಿದ್ಧಾಶ್ರಮಕ್ಕೆ ಬಂದಿರುವರೆಂಬುದನ್ನು ತಿಳಿದೊಡ ನೆಯೇ ಸಿದ್ಧಾಶ್ರಮನಿವಾಸಿಗಳಾದ ಮುನಿಗಳು ಒಬ್ಬೊಬ್ಬರಾಗಿ ಬಂದು ವಿಶ್ವಾ ಮಿತ್ರರನ್ನು ಕುಶಲಪ್ರಶ್ನೆಗಳಿಂದ ಸಂಮಾನಿಸಿದರು. ಎಲ್ಲರೂ ವಿಶ್ವಾಮಿತ್ರರಿಗೆ ಯಥಾಯೋಗ್ಯವಾದ ಸತ್ಕಾರವನ್ನು ಮಾಡಿದುದಲ್ಲದೇ ರಾಜಕುಮಾರರಾದ ರಾಮ-ಲಕ್ಷ್ಮಣರಿಗೂ ಯಥಾಯೋಗ್ಯವಾಗಿ ಅತಿಥಿಸತ್ಕಾರ ಮಾಡಿದರು. ಒಂದು ಮುಹೂರ್ತಕಾಲ ವಿಶ್ರಾಂತಿಯನ್ನು ಪಡೆದು ಅನಂತರ ಶತ್ರುಧ್ವಂಸಕ ರಾದ ರಘುಕುಲ ರಾಜಕುಮಾರರು ಕೈಮುಗಿದು ನಿಂತು ಮುನಿಪುಂಗವರಾದ ವಿಶ್ವಾಮಿತ್ರರಿಗೆ ಹೇಳಿದರು :

"ಮುನಿಪುಂಗವರೇ! ಈಗಲೇ ಯಜ್ಞದೀಕ್ಷೆಯನ್ನು ಕೈಗೊಳ್ಳಿರಿ. ನಿಮ್ಮ ಯಜ್ಞದ ಸಿದ್ಧಿಯಿಂದಾಗಿ ಈ ಸಿದ್ಧಾಶ್ರಮವು ಅನ್ವರ್ಥನಾಮವನ್ನು ಪುನಃ ಪಡೆಯಲಿ. 'ಹನ್ತವ್ಯಾ ದುಷ್ಟಚಾರಿಣಃ'–'ದುಷ್ಟಕರ್ಮಿಗಳು ನಿನ್ನಿಂದ ಹತರಾಗಬೇಕು'–ಎಂದು ನೀವು ಹೇಳಿರುವ ಮಾತುಗಳು ಸತ್ಯವಚನ ವಾಗಲಿ. ನಾವು ಈ ಕೂಡಲೇ ಆ ರಾಕ್ಷಸರನ್ನು ಸಂಹರಿಸುತ್ತೇವೆ."

ಕಾರರು (ಮಾನಂ-ದ್ಯತಿ = ಖಂಡಯತಿ ಇತಿ ಮಾನದಃ) ನಿರಭಿಮಾನೀ, ಅಭಿಮಾನ ಶೂನ್ಯ ಎಂದು ಅರ್ಥಮಾಡಿರುತ್ತಾರೆ. ಅಭಿಮಾನಶೂನ್ಯನಾಗದಿದ್ದರೆ ಯಾಚಿಸುವ ಸಾಧ್ಯತೆಯಿಲ್ಲ–ಎಂಬುದು ಅವರ ಅಭಿಪ್ರಾಯವಾಗಿದೆ.

* ಎರಡು ನಕ್ಷತ್ರಗಳು ಸೇರಿ 'ಪುನರ್ವಸೂ' ಎಂಬ ಅಭಿಧಾನವನ್ನು ಪಡೆಯುತ್ತವೆ.

ರಾಮ-ಲಕ್ಷ್ಮಣರು ಹೀಗೆ ಹೇಳಿದೊಡನೆಯೇ ಮಹಾತೇಜಸ್ವಿಗಳಾದ, ಮಹರ್ಷಿಗಳಾದ, ನಿಯತವಾದ ವ್ರತಾನುಷ್ಠಾನವುಳ್ಳ, ಜಿತೇಂದ್ರಿಯರಾದ ವಿಶ್ವಾಮಿತ್ರರು ಯಜ್ಞದೀಕ್ಷಾಬದ್ಧರಾದರು. ಸ್ಕಂದ ಮತ್ತು ವಿಶಾಖರಂತೆ ಮಹಾತೇಜಸ್ವಿಗಳಾಗಿರುವ ರಾಮ-ಲಕ್ಷ್ಮಣರು ಆ ರಾತ್ರಿಯನ್ನು ಸುಖನಿದ್ರೆ ಯಿಂದ ಕಳೆದು, ಸುಪ್ರಭಾತವಾದೊಡನೆಯೇ ಎದ್ದು ಸ್ನಾನಾದಿಗಳನ್ನು ಮಾಡಿ, ಶುಚೀಭೂತರಾಗಿ ಪ್ರಾತಸ್ಸಂಧ್ಯೆಯನ್ನು ಮಾಡಿ, ಮಹರ್ಷಿಗಳಿಂದ ಉಪದಿಷ್ಟವಾದ ಮಹಾಮಂತ್ರಗಳನ್ನೂ ಗಾಯತ್ರಿಯನ್ನೂ ನಿಯಮದಿಂದ ಜಪಿಸಿ, ಅಗ್ನಿಹೋತ್ರವನ್ನು ಮುಗಿಸಿ, ದೀಕ್ಷಾಬದ್ಧರಾಗಿ ಕುಳಿತಿದ್ದ ವಿಶ್ವಾಮಿತ್ರ ರಿಗೆ ನಮಸ್ಕರಿಸಿದರು.

೨೯ನೆಯ ಸರ್ಗವು ಮುಗಿಯಿತು.

ಬಾಲಕಾಂಡ ೩೦ನೆಯ ಸರ್ಗ

ಶ್ರೀರಾಮನಿಂದ ವಿಶ್ವಾಮಿತ್ರರ ಯಜ್ಞದ ರಕ್ಷಣೆ : ರಾಕ್ಷಸರ ಸಂಹಾರ

ಅಥ ತೌ ದೇಶಕಾಲಜ್ಞೌ ರಾಜಪುತ್ರಾವರಿಂದಮೌ ।
ದೇಶೇ ಕಾಲೇ ಚ ವಾಕ್ಯಜ್ಞಾವಬ್ರೂತಾಂ ಕೌಶಿಕಂ ವಚಃ ॥೧॥

ಶತ್ರುಗಳ ದರ್ಪವನ್ನು ಮುರಿಯಲು ಸಮರ್ಥರಾಗಿದ್ದ, ಯಾವ ಕಾಲ ದಲ್ಲಿ ಯಾವ ಕಾರ್ಯಮಾಡಬೇಕೆಂಬ ವಿವೇಕದಿಂದ ಕೂಡಿದ್ದ, ದೇಶ-ಕಾಲ ಗಳನ್ನನುಸರಿಸಿ ಯಾರಿಗೆ ಯಾವ ಮಾತನ್ನಾಡಬೇಕೆಂಬುದನ್ನು ಚೆನ್ನಾಗಿ ತಿಳಿ ದಿದ್ದ ರಾಜಕುಮಾರರಾದ ರಾಮ-ಲಕ್ಷ್ಮಣರು ವಿಶ್ವಾಮಿತ್ರರಿಗೆ ಹೇಳಿದರು :

ಭಗವನ್ ಶ್ರೋತುಮಿಚ್ಛಾವೋ ಯಸ್ಮಿನ್ಕಾಲೇ ನಿಶಾಚರೌ ।
ಸಂಶಿಕ್ಷಣೀಯೌ ತೌ ಬ್ರಹ್ಮನ್ನಾತಿವರ್ತೇತ ತತ್ಕ್ಷಣಮ್ ॥೨॥

"ಪೂಜ್ಯರೇ! ಯಾವ ಕಾಲದಲ್ಲಿ ನಾವು ರಾಕ್ಷಸರನ್ನು ದಂಡಿಸಿ ಯಜ್ಞ ವನ್ನು ಸಂರಕ್ಷಿಸಬೇಕಾಗಿದೆ? ಆ ಕಾಲವು ಮೀರದಂತಾಗಲಿ. ಇವೆಲ್ಲವನ್ನೂ ಸಾವಕಾಶಮಾಡದೇ ಹೇಳಿರಿ."*

---

* ಇಲ್ಲಿ 'ನಿಶಾಚರೌ ಸಂರಕ್ಷಣೀಯೌ' ಎಂಬ ಪಾಠವೂ ಇದೆ. " ನಿಶಾಚರರಿಂದ

ಈ ರೀತಿಯಾಗಿ ಪದೇಪದೇ ಹೇಳುತ್ತಿದ್ದ, ಯುದ್ಧಮಾಡುವ ಉತ್ಸಾಹ ದಿಂದ ತ್ವರೆಮಾಡುತ್ತಿದ್ದ ರಾಜಕುಮಾರರನ್ನು ಕಂಡು, ಸಿದ್ಧಾಶ್ರಮವಾಸಿ ಗಳಾದ ಋಷಿಗಳೆಲ್ಲರೂ ಪರಮಪ್ರೀತರಾಗಿ ರಾಮ-ಲಕ್ಷ್ಮಣರನ್ನು ಪ್ರಶಂಸಿ ಸಿದರು. ವಿಶ್ವಾಮಿತ್ರರ ಬಳಿಯಲ್ಲಿದ್ದ ಋಷಿಗಳು ರಾಮ-ಲಕ್ಷ್ಮಣರಿಗೆ ಹೇಳಿದರು :

"ರಾಜಕುಮಾರರೇ! ಇಂದು ಮೊದಲ್ಗೊಂಡು ಆರು ರಾತ್ರಿಗಳವರೆಗೆ ನೀವು ಯಾಗವನ್ನು ರಕ್ಷಣೆಮಾಡಿರಿ. ದೀಕ್ಷಾಬದ್ಧರಾದೊಡನೆಯೇ ವಿಶ್ವಾ ಮಿತ್ರರು ಮೌನವ್ರತವನ್ನು ಅನುಷ್ಠಾನಮಾಡುತ್ತಾರೆ." ಮಹರ್ಷಿಗಳ ಮಾತನ್ನು ಕೇಳಿ ರಾಮ-ಲಕ್ಷ್ಮಣರು ನಿದ್ದೆಯನ್ನೇ ಮಾಡದೇ ಆರು ರಾತ್ರಿಗಳ ವರೆಗೆ ತಪೋವನವನ್ನು ನಿರ್ಬಾಧಕವಾಗಿ ಸಂರಕ್ಷಿಸಿದರು. ವೀರ್ಯವಿಶಿಷ್ಟರಾದ, ಕವಚಧಾರಿಗಳಾದ, ಧನುರ್ವಿದ್ಯೆಯಲ್ಲಿ ಪ್ರವೀಣರಾದ, ಶತ್ರುನಿಬ ರ್ಹಣರಾದ, ಜಾಗರೂಕರಾದ ರಾಮ-ಲಕ್ಷ್ಮಣರು ವಿಶ್ವಾಮಿತ್ರರ ಸಮೀಪ ದಲ್ಲಿಯೇ ಇದ್ದು ಅವರನ್ನು ಹಗಲಿರುಳೂ ಸಂರಕ್ಷಿಸುತ್ತಿದ್ದರು. ಐದು ರಾತ್ರಿ ಗಳು ಕಳೆದು ಆರನೆಯ ದಿನವೂ ಬರಲಾಗಿ ರಾಮನು ಸೌಮಿತ್ರಿಗೆ ಹೇಳಿದನು:

"ಲಕ್ಷ್ಮಣ! ಏಕಾಗ್ರವಾದ ಮನಸ್ಸಿನಿಂದ ಯುದ್ಧಕ್ಕೆ ಸಜ್ಜಾಗಿನಿಲ್ಲು."

ಯುದ್ಧಮಾಡುವ ಆತುರದಿಂದ ಕೂಡಿದ್ದ ರಾಮನು ಲಕ್ಷ್ಮಣನಿಗೆ ಹೀಗೆ ಹೇಳುತ್ತಿರಲಾಗಿ ಉಪಾಧ್ಯಾಯನಿಂದಲೂ, ಪುರೋಹಿತನಿಂದಲೂ ಮತ್ತು ಋತ್ವಿಜರಿಂದಲೂ ಸಮಾವೃತವಾಗಿದ್ದ ಯಜ್ಞವೇದಿಯು ಒಡನೆಯೇ

ಯಜ್ಞವು ಯಾವ ಕಾಲದಲ್ಲಿ ಸಂರಕ್ಷಿಸಲ್ಪಡಬೇಕೆಂಬ" ನೇರವಾದ ಅರ್ಥವು ಇದರಿಂದ ಪ್ರಾಪ್ತವಾಗುವುದಿಲ್ಲ. ಅದಕ್ಕೆ ಬದಲಾಗಿ "ಯಾವ ಕಾಲದಲ್ಲಿ ನಿಶಾಚರರು ಸಂರಕ್ಷಿಸಲ್ಪಡಬೇಕು?" ಎಂಬ ಸ್ವಾಭಾವಿಕವಾದ ಅರ್ಥವು ಈ ಸಮಯಕ್ಕೆ ಬಹಳ ವಿರುದ್ಧಾರ್ಥವಾಗುತ್ತದೆ. ಆದುದರಿಂದ ಒಬ್ಬೊಬ್ಬ ವ್ಯಾಖ್ಯಾನಕಾರರು ಒಂದೊಂದು ವಿಧವಾಗಿ ಅರ್ಥಮಾಡುತ್ತಾರೆ. ೧) **ಸಂರಕ್ಷ್ಯತೇ ಯಾಗಃ ಆಭ್ಯಾಂ** (ಯಾಗವು ಇವರ ಉಪಟಳದಿಂದ ರಕ್ಷಿಸಲ್ಪಡುತ್ತದೆ) ಎಂದು ಅಪಾದಾನಾರ್ಥದಲ್ಲಿ ಅನೀಯರ್ ಪ್ರತ್ಯಯವು ಬಂದು 'ಸಂರಕ್ಷಣೀಯೌ' ಆಗಿದೆ. ೨) ದುಷ್ಟಕರ್ಮಹೇತುಕವಾದ ನರಕ ದಿಂದ ರಾಕ್ಷಸರು ತಡೆಯಲ್ಪಡುತ್ತಾರೆ. ಅವರು ಯಜ್ಞಕ್ಕೆ ಮಾಡುವ ವಿಘ್ನವನ್ನು ತಡೆಮಾಡಿದಲ್ಲಿ ಯಜ್ಞವಿನಾಶದೋಷವು ಪ್ರಾಪ್ತವಾಗದೇ ಇರುವುದರಿಂದ ಅವರಿಗೆ

ಪ್ರಜ್ವಲಿಸತೊಡಗಿತು. ದರ್ಭೆ-ಚಮಸ-ಸ್ರುಕ್ಕುಗಳಿಂದಲೂ ನಾನಾವಿಧವಾದ ಸಮಿತ್ತುಗಳಿಂದಲೂ, ನಾನಾಜಾತಿಯ ಹೂವುಗಳಿಂದಲೂ ಕೂಡಿದ್ದ, ವಿಶ್ವಾಮಿತ್ರರೇ ಮೊದಲಾಗಿ ಎಲ್ಲ ಋತ್ವಿಜರಿಂದಲೂ ಅಲಂಕೃತವಾಗಿದ್ದ ಯಜ್ಞವೇದಿಯು ಇದ್ದಕ್ಕಿದ್ದಂತೆ ಹತ್ತಿ ಉರಿಯಲಾರಂಭಿಸಿತು.* ವೇದಮಂತ್ರವು ಯಾವ ರೀತಿಯಲ್ಲಿ ಸ್ವರಸಹಿತವಾಗಿ ಅನೂಚಾನವಾದ ರೀತಿಯಲ್ಲಿ ಯಥಾಕ್ರಮವಾಗಿ ಹೇಳಲ್ಪಡುವುದೋ–ಅದೇ ರೀತಿಯಲ್ಲಿ ವಿಶ್ವಾಮಿತ್ರರು ಆರಂಭಿಸಿದ ಯಜ್ಞವು ಆರು ದಿನಗಳವರೆಗೆ ಯಥಾವಿಧಿಯಾಗಿ ಯಥಾಶಾಸ್ತ್ರವಾಗಿ ನಡೆಯುತ್ತಿದ್ದಿತು. ಆರನೆಯ ದಿವಸ ಆಕಾಶದಲ್ಲಿ ಭಯಾನಕವಾದ ಘೋರ ಶಬ್ದವುಂಟಾಯಿತು. ವರ್ಷರ್ತುವಿನಲ್ಲಿ ಆಕಾಶವನ್ನು ಮೇಘವು ಹೇಗೆ ಆವರಿಸಿಕೊಂಡಿರುತ್ತದೋ–ಅದೇ ರೀತಿಯಲ್ಲಿ ಮಾಯಾವಿದ್ಯೆಯಿಂದ ಅಂತರಿಕ್ಷವನ್ನೇ ಆವರಿಸಿಕೊಂಡು ಸುಬಾಹು-ಮಾರೀಚರೆಂಬ ಇಬ್ಬರು ರಾಕ್ಷಸರು ಯಜ್ಞಭೂಮಿಯ ಸಮೀಪಕ್ಕೆ ಧಾವಿಸಿ ಬಂದರು. ಭಯಂಕರಾಕಾರವುಳ್ಳ ಮಾರೀಚ-ಸುಬಾಹುಗಳು ಅನುಚರರ ಸಮೇತರಾಗಿ ಬಂದು ಯಜ್ಞವೇದಿಕೆಯ ಮೇಲೆ ರಕ್ತದ ಮಳೆಯನ್ನೇ ಕರೆದರು. ರಕ್ತದಿಂದ ತೋಯಿಸಲ್ಪಟ್ಟ ವೇದಿಕೆಯನ್ನು ನೋಡಿ ರಾಮನು ಒಡನೆಯೇ ಆಕಾಶದ ಕಡೆಗೆ ತಿರುಗಿ ಅಲ್ಲಿ ರಕ್ತದ ಮಳೆಗರೆಯುತ್ತಿರುವವರನ್ನು ಕಂಡನು. ತನಗೆ ಅಭಿಮುಖವಾಗಿ ಬಹಳ ರಭಸದಿಂದ ಬೀಳುತ್ತಿದ್ದ ಸುಬಾಹು-ಮಾರೀಚರನ್ನು ಕಂಡು ಒಡನೆಯೇ ರಾಘವನು ಲಕ್ಷ್ಮಣನಿಗೆ ಹೇಳಿದನು :

"ಲಕ್ಷ್ಮಣ! ದುರ್ವೃತ್ತರಾದ, ಮಾಂಸಾಶನರಾದ, ನಮ್ಮೆದುರಾಗಿ ಬರುತ್ತಿರುವ ಈ ರಾಕ್ಷಸರನ್ನು ನೋಡು. ವಾಯುವಿನಿಂದ ಮೋಡಗಳು ಚದುರಿ ಹೋಗುವಂತೆ–ಮಾನವಾಸ್ತ್ರದಿಂದ ಇವರು ಬಹಳ ದೂರ ಹೋಗಿ ಬೀಳು

ನರಕಪ್ರಾಪ್ತಿಯಾಗುವುದಿಲ್ಲ. ೩) ಧಾತುಗಳಿಗೆ ಅನೇಕಾರ್ಥಗಳಿರುವುದರಿಂದ 'ಸಂರಕ್ಷಣೀಯೌ' ಎಂಬುದಕ್ಕೆ 'ನಿವಾರಣೀಯೌ' ಎಂದೂ ಅರ್ಥವಾಗುತ್ತದೆ. ಯಜ್ಞರಕ್ಷಣಾಯ ಸಂರಕ್ಷಣೀಯೌ = ನಿವಾರಣೀಯೌ. ನಾವು ಸಂಶಿಕ್ಷಣೀಯೌ ಎಂಬ ಪಾಠವನ್ನಿಟ್ಟುಕೊಂಡು ಅನುವಾದ ಮಾಡಿದ್ದೇವೆ.

* ಚಮಸಂ = ಪಾನಪಾತ್ರೆ. ಸ್ರುಕ್ = ಹೋಮಪಾತ್ರೆ.

ವಂತೆ ಮಾಡುವೆನು. ಇದರಲ್ಲಾವ ಸಂಶಯವೂ ಇಲ್ಲ. ಆದರೆ ಇವರನ್ನು ಕೊಲ್ಲುವ ಉತ್ಸಾಹವು ನನಗಿಲ್ಲ."

ಲಕ್ಷ್ಮಣನಿಗೆ ಹೀಗೆ ಹೇಳಿ ಪ್ರಶಸ್ತವಾದ ಹಸ್ತಲಾಘವವುಳ್ಳ ಶ್ರೀರಾಮನು ಪರಮಶ್ರೇಷ್ಠವಾದ, ಅತ್ಯಂತಕಾಂತಿಯುಕ್ತವಾದ ಮಾನವಾಸ್ತ್ರವನ್ನು ಧನುಸ್ಸಿನಲ್ಲಿ ಹೂಡಿ ನಾಣನ್ನು ಸೆಳೆದು ಅತಿಕೋಪಾವಿಷ್ಟನಾಗಿ ಮಾರೀಚನ ಎದೆಗೆ ಗುರಿಯಿಟ್ಟು ಹೊಡೆದನು.

ಮಾರೀಚನು ಆ ಶ್ರೇಷ್ಠವಾದ ಮಾನವಮಹಾಸ್ತ್ರದಿಂದ ಪೀಡಿತನಾಗಿ, ನೂರು ಯೋಜನಗಳಷ್ಟು ದೂರಕ್ಕೆ ಎಸೆಯಲ್ಪಟ್ಟವನಾಗಿ, ಸಮುದ್ರಮಧ್ಯ ದಲ್ಲಿ ಬಿದ್ದನು. ಮಹಾಸ್ತ್ರದ ಆಘಾತದಿಂದ ಚೇತನಾರಹಿತನಾಗಿ, ಗರ-ಗರನೆ ತಿರುಗುತ್ತಾ ಬಹಳ ದೂರ ಎಸೆಯಲ್ಪಟ್ಟ ಆ ಮಾರೀಚನನ್ನು ಕಂಡು ರಾಮನು ಲಕ್ಷ್ಮಣನಿಗೆ ಹೇಳಿದನು :

"ಲಕ್ಷ್ಮಣ! ಈ ಶೀತೇಷುವಿನ ಪ್ರಭಾವವನ್ನಾದರೂ ನೋಡು! ಮನುಪ್ರಯುಕ್ತವಾದ ಈ ಮಾನವಾಸ್ತ್ರವು ಮಾರೀಚನನ್ನು ತನ್ನ ಪ್ರಹಾರ ದಿಂದ ಮೂರ್ಛಿತನಾಗುವಂತೆ ಮಾಡಿ, ಬಹಳ ದೂರಕ್ಕೆ ಒಯ್ಯುತ್ತಿದೆ. ಆದರೆ ಈ ಅಸ್ತ್ರವು ಅವನ ಪ್ರಾಣಹರಣವನ್ನು ಮಾಡುವುದಿಲ್ಲ. ದಯಾರಹಿತ ರಾದ, ದುಷ್ಟಕರ್ಮಿಗಳಾದ, ಪಾಪಕರ್ಮಿಗಳಾದ ಯಜ್ಞಧ್ವಂಸಕರಾದ, ರಕ್ತ ಪಾನಮಾಡುವ, ಮಾಂಸಾಶಿಗಳಾದ ಇತರ ರಾಕ್ಷಸರನ್ನೂ ಸಂಹರಿಸು ತ್ತೇನೆ."*

ಹೀಗೆ ಶ್ರೀರಾಮನು ತನ್ನೆದುರಾಗಿದ್ದ ರಾಕ್ಷಸರೆಲ್ಲರನ್ನೂ ಕೊಲ್ಲುವು ದಾಗಿ ಲಕ್ಷ್ಮಣನಿಗೆ ಹೇಳಿ, ಕೈಚಳಕವನ್ನು ತೋರಿಸುತ್ತಿರುವನೋ ಎಂಬಂತೆ– ಆಗ್ನೇಯಾಸ್ತ್ರವನ್ನು ಧನುಸ್ಸಿಗೆ ಹೂಡಿ ನಾಣನ್ನು ಸೆಳೆದು ಸುಬಾಹುವಿನ ಎದೆಗೆ ಗುರಿಯಿಟ್ಟು ಹೊಡೆದನು. ಆಗ್ನೇಯಾಸ್ತ್ರದ ಘಾತವಾದೊಡನೆಯೇ ಸುಬಾಹುವು ಪ್ರಾಣವನ್ನು ತೊರೆದು ಕೆಳಗುರುಳಿದನು. ಮಹಾ ಯಶೋವಂತನಾದ ಮಹೋದಾರಿಯಾದ ರಾಮನು ತನ್ನ ಕೈಚಳಕವನ್ನು

---

* ಇಲ್ಲಿ 'ವಧಿಷ್ಯಾಮಿ = ಕೊಲ್ಲುತ್ತೇನೆ.' ಎಂದು ರಾಮನು ಸ್ಪಷ್ಟವಾಗಿಯೇ ಹೇಳುತ್ತಾನೆ. ಕೆಲವು ವ್ಯಾಖ್ಯಾನಕಾರರು 'ವಧಿಷ್ಯಾಮಿ = ತಾಡಯಿಷ್ಯಾಮಿ - ಹೊಡೆಯುತ್ತೇನೆ' - ಎಂದು ಅರ್ಥಮಾಡುತ್ತಾರೆ.

ನೋಡುತ್ತಿದ್ದ ಋಷಿಗಳಿಗೆ ಆನಂದವನ್ನುಂಟುಮಾಡುತ್ತಾ ಉಳಿದ ರಾಕ್ಷಸರೆಲ್ಲರನ್ನೂ ವಾಯವ್ಯವೆಂಬ ಒಂದೇ ಮಹಾಸ್ತ್ರವನ್ನು ಪ್ರಯೋಗಮಾಡಿ ಸಂಹರಿಸಿದನು. ಇಂದ್ರನು ಅಸುರರನ್ನು ಜಯಿಸಿದಾಗ ಯಾವ ರೀತಿಯಲ್ಲಿ ದೇವ-ಗಂಧರ್ವ-ಯಕ್ಷ-ಕಿನ್ನರ-ಕಿಂಪುರುಷರೂ ಮಹರ್ಷಿಗಳೂ ಅವನನ್ನು ಶ್ಲಾಘಿಸಿ-ಪೂಜಿಸಿ ಸತ್ಕರಿಸಿದರೋ ಅದೇ ರೀತಿಯಲ್ಲಿ ರಾಮನೂ ಯಜ್ಞಧ್ವಂಸಕರಾದ ಅನೇಕಾನೇಕ ರಾಕ್ಷಸರನ್ನು ಕೊಂದು, ಸಿದ್ಧಾಶ್ರಮದ ಋಷಿಗಳಿಂದ ಸತ್ಕೃತನಾದನು. ಏಳು ದಿನಗಳ ಕಾಲದ ವಿಶ್ವಾಮಿತ್ರರ ಯಜ್ಞದ ಅವಭೃಥವಾದನಂತರ ಮಹಾಮುನಿಗಳಾದ ವಿಶ್ವಾಮಿತ್ರರು–ಬಾಧಾರಹಿತವಾದ ನಾಲ್ಕು ದಿಕ್ಕುಗಳನ್ನೂ ನೋಡಿ ರಾಘವನಿಗೆ ಹೇಳಿದರು :

"ವತ್ಸ, ಶ್ರೀರಾಮ! ಮನಸ್ಸಂಕಲ್ಪಿತವಾದ ಯಜ್ಞವನ್ನು ನಿರಾತಂಕ ವಾಗಿ ಮಾಡಿ ನಾನು ಕೃತಾರ್ಥನಾದೆನು. ನಿನ್ನಿಂದ ಗುರ್ವಾಜ್ಞೆಯು ನಿರ್ವಹಿಸಲ್ಪಟ್ಟಿತು. ನಿನ್ನ ಅಭಿಲಾಷೆಯಂತೆ ಇಂದು ಈ ಸಿದ್ಧಾಶ್ರಮದ ಅನ್ವರ್ಥನಾಮವು ಪುನಃ ನಿನ್ನಿಂದ ಸತ್ಯವಾಗಿ ಮಾಡಲ್ಪಟ್ಟಿತು." ಇದೇ ಮುಂತಾಗಿ ಶ್ರೀರಾಮನನ್ನು ಪ್ರಶಂಸೆಮಾಡಿ ರಾಮ-ಲಕ್ಷ್ಮಣರೊಡನೆ ಸಾಯಂಸಂಧ್ಯಾವಂದನೆಗೆ ಹೊರಟರು.

೩೦ನೆಯ ಸರ್ಗವು ಮುಗಿಯಿತು.

ಬಾಲಕಾಂಡ ೩೧ನೆಯ ಸರ್ಗ

ಋಷಿಗಳೊಡನೆ ರಾಮ-ಲಕ್ಷ್ಮಣ-ವಿಶ್ವಾಮಿತ್ರರು ಮಿಥಿಲಾಪಟ್ಟಣದ ಕಡೆಗೆ ಪ್ರಯಾಣಮಾಡಿದುದು : ಮಾರ್ಗದಲ್ಲಿ ಶೋಣಾನದಿಯ ತೀರದಲ್ಲಿ ವಿಶ್ರಾಂತಿ

ಅಥ ತಾಂ ರಜನೀಂ ತತ್ರ ಕೃತಾರ್ಥೌ ರಾಮಲಕ್ಷ್ಮಣೌ ।
ಊಷತುರ್ಮುದಿತೌ ವೀರೌ ಪ್ರಹೃಷ್ಟೇನಾನ್ತರಾತ್ಮನಾ ॥೧॥

ಸಾಯಂಸಂಧ್ಯಾವಂದನಾದಿಗಳು ಮುಗಿದನಂತರ, ಮಹರ್ಷಿಗಳಾದ ವಿಶ್ವಾಮಿತ್ರರು ನಿಯೋಜಿಸಿದ್ದ ಕಾರ್ಯದಲ್ಲಿ ಕೃತಕೃತ್ಯರಾದ, ಆ ಮಹಾ

ಕಾರ್ಯದ ಪೂರಣದಿಂದ ಸಂತುಷ್ಟರಾಗಿದ್ದ, ಪರಾಕ್ರಮಿಗಳಾದ ರಾಮ-ಲಕ್ಷ್ಮಣರು ಪ್ರಹೃಷ್ಟಾಂತಃಕರಣವುಳ್ಳವರಾಗಿ, ವಿಶ್ವಾಮಿತ್ರರ ಯಜ್ಞಶಾಲೆಯಲ್ಲಿಯೇ ಆ ರಾತ್ರಿ ಮಲಗಿದರು. ರಾತ್ರಿಯು ಕಳೆದು ಸುಪ್ರಭಾತವಾಗಲಾಗಿ ರಾಮ-ಲಕ್ಷ್ಮಣರೆದ್ದು ಶೌಚಮುಖಮಾರ್ಜನಪೂರ್ವಕ ಸ್ನಾನಮಾಡಿ, ಪ್ರಾತರಾಹ್ನಿಕಾದಿಗಳನ್ನು ಮುಗಿಸಿದವರಾಗಿ, ಇಬ್ಬರೂ ಜೊತೆಯಲ್ಲಿಯೇ ವಿಶ್ವಾಮಿತ್ರಪ್ರಮುಖರಾದ ಮಹರ್ಷಿಗಳನ್ನು ಸಂದರ್ಶಿಸುವ ಸಲುವಾಗಿ ತೆರಳಿದರು. ಸಾಕ್ಷಾತ್ ಅಗ್ನಿಪುರುಷನಂತೆ ದಿವ್ಯವಾದ ಬ್ರಹ್ಮತೇಜಸ್ಸಿನಿಂದ ಪ್ರಜ್ವಲಿಸುತ್ತಿದ್ದ ವಿಶ್ವಾಮಿತ್ರಮಹರ್ಷಿಗಳನ್ನು ಅಭಿವಾದನಪೂರ್ವಕವಾಗಿ ನಮಸ್ಕರಿಸಿ, ಮಧುರಭಾಷಿಗಳಾದ ರಾಮ-ಲಕ್ಷ್ಮಣರಿಬ್ಬರೂ ಸುಮಧುರವಾದ ಈ ಮಾತನ್ನು ಹೇಳಿದರು :

"ಮುನಿಪುಂಗವರೇ! ನಿಮ್ಮ ಸೇವಕರಾಗಿ ನಾವಿಲ್ಲಿಗೆ ಬಂದಿದ್ದೇವೆ. ನಾವೀಗ ನಿಮಗಾಗಿ ಪುನಃ ಏನು ಮಾಡಬೇಕೆಂಬುದನ್ನು ಆಜ್ಞಾಪಿಸಿರಿ. ಇಚ್ಛಾನುಸಾರವಾಗಿ ಏನಾದರೂ ನಿರ್ದೇಶಿಸಿರಿ."

ರಾಮ-ಲಕ್ಷ್ಮಣರು ಹೀಗೆ ವಿಶ್ವಾಮಿತ್ರರಿಗೆ ಮಧುರವಾದ ಮತ್ತು ಉದಾರವಾದ ಮಾತನ್ನು ಹೇಳಿದನಂತರ ಅಲ್ಲಿ ಕುಳಿತಿದ್ದ ಇತರ ಮಹರ್ಷಿಗಳು ವಿಶ್ವಾಮಿತ್ರರ ಅನುಮತಿಯನ್ನು ಪಡೆದು ರಾಮನಿಗೆ ಹೇಳಿದರು : "ಪುರುಷೋತ್ತಮ! ಮಿಥಿಲಾಧಿಪತಿಯಾದ ಜನಕನ ಅತಿಪುಣ್ಯಕರವಾದ ಯಜ್ಞವು ಮಿಥಿಲಾಪಟ್ಟಣದಲ್ಲಿ ನಡೆಯಲಿದೆ. ಆ ಯಜ್ಞದಲ್ಲಿ ಭಾಗವಹಿಸಲು ನಾವೆಲ್ಲರೂ ಅಲ್ಲಿಗೆ ಹೋಗಲಿದ್ದೇವೆ. ನೀನೂ ನಮ್ಮೊಡನೆ ಬಂದೆಯಾದರೆ ಆ ಯಜ್ಞವನ್ನು ನೋಡಬಹುದು. ಅಲ್ಲಿರುವ ಅತ್ಯದ್ಭುತವಾದ, ಪ್ರಸಿದ್ಧವಾದ ಮತ್ತು ಶ್ರೇಷ್ಠವಾದ ಧನುಸ್ಸನ್ನೂ ನೀನು ನೋಡಬಹುದು. ಆ ಧನುಸ್ಸಿನ ವೃತ್ತಾಂತವನ್ನು ಹೇಳುವೆವು ; ಕೇಳು. ಅಸಾಧಾರಣ ಬಲವಿಶಿಷ್ಟವಾದ, ಘೋರತಮವಾದ, ತೇಜೋಯುಕ್ತವಾದ ಆ ಧನುಸ್ಸಿನ ಸಹಾಯದಿಂದ ಪರಶಿವನು ದಕ್ಷನ ಯಜ್ಞವನ್ನು ಧ್ವಂಸಮಾಡಿದನು. ಕಾಲಾಂತರದಲ್ಲಿ ಆ ಧನುಸ್ಸು ದೇವರಾತನೆಂಬ ಮಿಥಿಲಾಧಿಪತಿಗೆ ಶಿವನಿಂದ ಕೊಡಲ್ಪಟ್ಟಿತು. ದೇವರಾತನ ವಂಶದಲ್ಲಿ ಹುಟ್ಟಿದ ಜನಕಮಹಾರಾಜನು

ಅತ್ಯಮೋಘವಾದ ಒಂದು ಯಜ್ಞವನ್ನು ಮಾಡಿದನು. ಅವನು ಮಾಡಿದ ಯಜ್ಞದಿಂದ ಸುಪ್ರೀತರಾದ ದೇವತೆಗಳು ಜನಕರಾಜನಿಗೆ ಆ ಶಿವಧನುಸ್ಸನ್ನು ಯಜ್ಞಮಂಟಪದಲ್ಲಿ ಬಹುಮಾನರೂಪವಾಗಿ ಕೊಟ್ಟರು. ರಾಮ! ಆ ಮಹಾ ಧನುಸ್ಸಿನ ಶಿಂಜಿನಿಯನ್ನು ಸೆಳೆದು ಕಟ್ಟಲೂ ದೇವ-ದಾನವ-ಗಂಧರ್ವ-ರಾಕ್ಷಸ-ಮಾನವರಲ್ಲಿ ಯಾರೂ ಸಮರ್ಥರಲ್ಲ. ದೇವದತ್ತವಾದ ಆ ಶಿವ ಧನುಸ್ಸಿನ ಮಹಾಶಕ್ತಿಯನ್ನು ತಿಳಿಯಲಪೇಕ್ಷಿಸಿದ ಮಹಾಬಲಿಷ್ಠರಾದ ಭೂಪಾಲಕರೂ ಮತ್ತು ರಾಜಪುತ್ರರೂ ಎಷ್ಟೇ ಪ್ರಯತ್ನಿಸಿದರೂ ಹೆದೆಯೇರಿ ಸಲೂ ಸಮರ್ಥರಾಗಲಿಲ್ಲ. ಪುರುಷವ್ಯಾಘ್ರನೇ! ನೀನು ನಮ್ಮೊಡನೆ ಬಂದೆ ಯಾದರೆ ಮಹಾತ್ಮನಾದ ಜನಕರಾಜನ ಶೈವಧನುಸ್ಸನ್ನೂ ಮತ್ತು ಪರಮಾ ದ್ಭುತವಾದ ಯಜ್ಞವನ್ನೂ ಸಂದರ್ಶಿಸುವೆ. ನಾವು ಹಿಂದೆಯೇ ಹೇಳಿದಂತೆ ತನ್ನ ಪೂರ್ವಜನಾದ ದೇವರಾತನಿಗೆ ನ್ಯಾಸರೂಪವಾಗಿ ಶಿವನು ಕೊಟ್ಟಿದ್ದ ಆ ಮಹಾಶಿವಧನುಸ್ಸನ್ನು ಪಡೆಯುವ ಸಲುವಾಗಿಯೇ ಜನಕರಾಜನು ಯಜ್ಞ ಮಾಡಿದನು. ಅವನು ಮಾಡಿದ ಯಜ್ಞದಿಂದ ಸುಪ್ರೀತರಾದ ದೇವತೆಗಳು ಶಿವನೊಡನೆ ಬಂದು ರಮಣೀಯವಾದ ಮುಷ್ಟಿಬಂಧನಸ್ಥಾನವಿರುವ ಆ ಮಹಾಧನುಸ್ಸನ್ನು ಮಿಥಿಲಾಧಿಪತಿಯಾದ ಜನಕನಿಗೆ ಯಜ್ಞದ ಫಲರೂಪ ವಾಗಿ ಅನುಗ್ರಹಿಸಿದರು.* ಯಾಗದ ಫಲರೂಪವಾಗಿ ಪ್ರಾಪ್ತವಾಗಿರುವ ಆ ಶೈವಧನುಸ್ಸು ದೇವತಾಮೂರ್ತಿರೂಪವಾಗಿದ್ದು, ಜನಕರಾಜನ ಅರಮನೆ ಯಲ್ಲಿ ಅನುದಿನವೂ ನಾನಾವಿಧವಾದ ಗಂಧ-ಮಾಲ್ಯ-ಧೂಪಾಗುರುಗಳಿಂದ ಅರ್ಚಿಸಲ್ಪಡುತ್ತಿದೆ."

ಶ್ರೀರಾಮ-ಲಕ್ಷ್ಮಣರಿಗೆ ವಿಶ್ವಾಮಿತ್ರರ ಆಶ್ರಮದಲ್ಲಿದ್ದ ಮಹರ್ಷಿಗಳು ಹೀಗೆ ಹೇಳಿದನಂತರ, ವಿಶ್ವಾಮಿತ್ರರು ಮುನಿಗಳ ಸಮೂಹದೊಡನೆಯೂ ರಾಮ-ಲಕ್ಷ್ಮಣರೊಡನೆಯೂ, ಮಹಾಮಂತ್ರಗಳ ಪುನಶ್ಚರಣೆಮಾಡಿ ವನ ದೇವತೆಗಳನ್ನು ಆಮಂತ್ರಿಸಿ ಪ್ರಯಾಣಸನ್ನದ್ಧರಾದರು. ವಿಶ್ವಾಮಿತ್ರರು ವನದೇವತೆಗಳನ್ನು ಮನಸ್ಸಿನಿಂದಲೇ ನಮಿಸಿ-ಪೂಜಿಸಿ ಹೇಳಿದರು :

---

* ಶಿವನು ದೇವರಾತನೆಂಬ ಮಿಥಿಲಾಧಿಪತಿಗೆ ಶಿವಧನುಸ್ಸನ್ನು ಕೊಟ್ಟನೆಂಬುದಕ್ಕೆ ಪುರಾಣಾಂತರಗಳಲ್ಲಿ ಆಧಾರಗಳೂ ಇವೆ. 'ಚಾಪಂ ಶಂಭೋರ್ದಯಾದತ್ತಂ' ಶಂಭು ವಿನ ದಯೆಯಿಂದಾಗಿ ದೇವರಾತನಿಗೆ ಕೊಡಲ್ಪಟ್ಟ ಧನುಸ್ಸು–ಪದ್ಮಪುರಾಣ. 'ಪ್ರೀತಶ್ಚ

"ವನದೇವತೆಗಳಿರಾ! ನಿಮಗೆ ಮಂಗಳವಾಗಲಿ. ಸಿದ್ಧಾಶ್ರಮದಿಂದ ಜಾಹ್ನವೀನದಿಯ ಉತ್ತರದಲ್ಲಿರುವ ಪರ್ವತರಾಜನಾದ ಹಿಮವತ್ಪರ್ವತಕ್ಕೆ ಹೋಗಿಬರುತ್ತೇನೆ."

ಅನಂತರ ಮಹರ್ಷಿಗಳಾದ ವಿಶ್ವಾಮಿತ್ರರು ಸಕಲಕಾರ್ಯಸಾಧನ ಭೂತವಾದ ಉತ್ತಮೋತ್ತಮವಾದ ಸಿದ್ಧಾಶ್ರಮವನ್ನು ಪ್ರದಕ್ಷಿಣೆಮಾಡಿ ರಾಮ-ಲಕ್ಷ್ಮಣರಿಂದಲೂ ಮತ್ತು ಮಹರ್ಷಿಗಳಿಂದಲೂ ಕೂಡಿದವರಾಗಿ ಉತ್ತರದಿಕ್ಕಿನ ಕಡೆಗೆ ಪ್ರಯಾಣಮಾಡತೊಡಗಿದರು. ಹಾಗೆ ಪ್ರಯಾಣ ಮಾಡುತ್ತಿದ್ದ ಮುನಿಶ್ರೇಷ್ಠರಾದ ವಿಶ್ವಾಮಿತ್ರರನ್ನು ನೂರು ಗಾಡಿಗಳಲ್ಲಿ ಕುಳಿತು ಪ್ರಯಾಣಮಾಡಬೇಕಾದಷ್ಟು ಬ್ರಹ್ಮರ್ಷಿಗಳ ಸಮೂಹವು ಪ್ರಯಾಣ ಕಾಲದಲ್ಲಿ ಅನುಸರಿಸಿ ಹೋಗುತ್ತಿದ್ದಿತು. ಅಗ್ನಿಹೋತ್ರಸಂಭಾರಾದಿಗಳನ್ನು ಹೊತ್ತ ನೂರು ಗಾಡಿಗಳು ವಿಶ್ವಾಮಿತ್ರರನ್ನನುಸರಿಸಿ ಹೋದುವು. ಸಿದ್ಧಾ ಶ್ರಮದಲ್ಲಿದ್ದ ಮೃಗ-ಪಕ್ಷಿಸಮೂಹಗಳೂ ಮಹಾತ್ಮರಾದ ಮುನಿಶ್ರೇಷ್ಠರಾದ ವಿಶ್ವಾಮಿತ್ರರನ್ನು ಅನುಸರಿಸಿ ನಡೆದುವು. ವಿಶ್ವಾಮಿತ್ರರು ತಮ್ಮನ್ನನುಸರಿಸಿ ಬರುತ್ತಿದ್ದ ಮೃಗಪಕ್ಷಿಸಮೂಹವನ್ನು ಸಿದ್ಧಾಶ್ರಮಪ್ರದೇಶಕ್ಕೆ ಹಿಂದಿರುಗ ಬೇಕೆಂದು ಸಂಜ್ಞೆಮಾಡಿ ಕಳುಹಿಸಿಕೊಟ್ಟರು. ಅನಂತರ ವಿಶ್ವಾಮಿತ್ರ ಪ್ರಮುಖರಾದ ಮಹರ್ಷಿಗಳು ಬಹಳ ದೂರದವರೆಗೂ ನಡೆದು ಸೂರ್ಯನು ಅಸ್ತನಾಗುತ್ತಿರಲಾಗಿ ಶೋಣಾನದಿಯ ತೀರಪ್ರದೇಶದಲ್ಲಿ ತಂಗಿ ದರು. ಮಹಾತೇಜಸ್ವಿಗಳಾದ ಆ ಮಹರ್ಷಿಗಳೆಲ್ಲರೂ ಪುಣ್ಯತೀರ್ಥವಾದ ಶೋಣಾನದಿಯಲ್ಲಿ ಮಿಂದು, ಸೂರ್ಯನು ಅಸ್ತನಾದನಂತರ ಅಗ್ನಿಹೋತ್ರ-ಔಪಾಸನಾದಿಗಳನ್ನು ಮಾಡಿ ಒಂದೆಡೆಯಲ್ಲಿ ಕುಳಿತುಕೊಂಡರು. ರಾಮನೂ

ಭಗವಾನೀಶಸ್ತ್ರಿಶೂಲೀ ನೀಲಲೋಹಿತಃ । ಪ್ರದದೌ ಶತ್ರುನಾಶಾರ್ಥಂ ಜನಕಾಯಾದ್ಭುತಂ ಧನುಃ ॥ ಪ್ರೀತನಾದ ಪರಮಶಿವನು ಶತ್ರುವಿನಾಶಾರ್ಥವಾಗಿ ದೇವರಾತನಿಗೆ ಅದ್ಭುತವಾದ ಆ ಧನುಸ್ಸನ್ನು ಕೊಟ್ಟನು–ಕೂರ್ಮಪುರಾಣ. ರಾಮನ ವಂಶೀಯರೆಲ್ಲರೂ ಸಾಮಾನ್ಯವಾಗಿ 'ಕಾಕುತ್ಸ್ಥರು' ಎಂದು ಕರೆಯಲ್ಪಡುವಂತೆ ಜನಕವಂಶೀಯರು 'ಜನಕ', 'ಮಿಥಿಲಾಧಿಪತಿ' ಎಂದು ಪುರಾಣೇತಿಹಾಸಗಳಲ್ಲಿ ಕರೆಯಲ್ಪಟ್ಟಿರುತ್ತಾರೆ. ಆದುದರಿಂದ ಕೂರ್ಮಪುರಾಣದಲ್ಲಿ ಹೇಳಿರುವ 'ಜನಕ' ಶಬ್ದಕ್ಕೆ ಜನಕವಂಶಜನಾದ ದೇವರಾತನೆಂದೇ ಅರ್ಥಮಾಡಬೇಕು.

ಲಕ್ಷ್ಮಣನೊಡನೆ ಸಾಯಂಕಾಲದ ಸಂಧ್ಯಾವಂದನಾದಿ ಕರ್ಮಗಳನ್ನು ಮುಗಿಸಿ, ತಪಸ್ವಿಗಳಿಗೆ ಅಭಿವಾದನಮಾಡಿ, ಧೀಮಂತರಾದ ವಿಶ್ವಾಮಿತ್ರರಿಗೆ ನಮಸ್ಕರಿಸಿ, ಅವರಿಗೆ ಅಭಿಮುಖವಾಗಿ ಕುಳಿತನು. ವಿಶ್ವಾಮಿತ್ರರು ಮಂದಹಾಸದಿಂದ ರಾಮ-ಲಕ್ಷ್ಮಣರನ್ನು ನೋಡುತ್ತಿರಲು ಕೌತೂಹಲದಿಂದ ಕೂಡಿದ ಶ್ರೀರಾಮನು ಮಹಾತೇಜಸ್ವಿಗಳಾದ, ತಪೋಧನರಾದ, ಮುನಿಪುಂಗವರಾದ ವಿಶ್ವಾಮಿತ್ರರನ್ನು ಕೇಳಿದನು : "ಪೂಜ್ಯರೇ! ಮಹಾನುಭಾವರೇ! ಮಹರ್ಷಿಗಳೇ! ನಿಮಗೆ ಮಂಗಳವಾಗಲಿ. ಈ ಶೋಣಾನದಿಯ ತೀರಪ್ರದೇಶದಲ್ಲಿರುವ ಸುಂದರವನಗಳಿಂದ ಪರಿಶೋಭಿಸುತ್ತಿರುವ ಈ ದೇಶವು ಯಾವುದು? ಮತ್ತು ಯಾರದು? ಈ ವಿಷಯವನ್ನು ತಮ್ಮಿಂದ ಕೇಳಿ ತಿಳಿದುಕೊಳ್ಳುವ ಅಭಿಪ್ರಾಯವಿದೆ. ಈ ದೇಶದ ಚರಿತ್ರೆಯನ್ನು ವಿಸ್ತಾರವಾಗಿ ತಿಳಿಯಪಡಿಸುವ ಕೃಪೆಮಾಡಿರಿ."

ಮಹಾತಪಸ್ವಿಗಳಾದ, ವ್ರತನಿಷ್ಠರಾದ ವಿಶ್ವಾಮಿತ್ರರು ರಾಮನ ಈ ಸುಮಧುರವಾದ ವಾಕ್ಯದಿಂದ ಚೋದಿತರಾಗಿ, ಆ ದೇಶದ ನಿಖಿಲವಾದ ಚರಿತ್ರೆಯನ್ನೂ ಋಷಿಗಳ ಮಧ್ಯದಲ್ಲಿ ಕುಳಿತು ಹೇಳಲು ಉಪಕ್ರಮಿಸಿದರು.

ಇ೧ನೆಯ ಸರ್ಗವು ಮುಗಿಯಿತು.

ಬಾಲಕಾಂಡ ಇ೨ನೆಯ ಸರ್ಗ

ಬ್ರಹ್ಮಪುತ್ರನಾದ ಕುಶನ ನಾಲ್ಕು ಮಕ್ಕಳ ವಿಚಾರ : ಶೋಣಾನದಿಯ ತೀರಪ್ರದೇಶಕ್ಕೆ ವಸುವಿನ ಭೂಮಿ ಎಂದು ಹೆಸರು ಬರಲು ಕಾರಣ : ವಾಯುವಿನ ಕೋಪದಿಂದ ಕುಶನಾಭನ ನೂರು ಕನ್ಯೆಯರೂ ಕುಬ್ಜೆಯರಾದುದು

ವಿಶ್ವಾಮಿತ್ರರು ಹೇಳುತ್ತಾರೆ :

ಬ್ರಹ್ಮಯೋನಿರ್ಮಹಾನಾಸೀತ್ಕುಶೋ ನಾಮ ಮಹಾಯಶಾಃ ।
ಅಕ್ಲಿಷ್ಟವ್ರತಧರ್ಮಜ್ಞಃ ಸಜ್ಜನಪ್ರತಿಪೂಜಕಃ ॥೧॥

"ರಾಮಚಂದ್ರ! ಮಹಾತಪಸ್ವಿಯಾದ ಮತ್ತು ಮಹಾಯಶಸ್ವಿಯಾದ

ಕುಶನೆಂಬ ರಾಜನಿದ್ದನು.* ಅವನು ಬ್ರಹ್ಮನ ಮಗ. ಕುಶನು ವ್ರತನಿಷ್ಠನೂ ಧರ್ಮಜ್ಞನೂ ಆಗಿದ್ದನು. ಸಜ್ಜನರನ್ನೂ ಮಹಾತ್ಮರನ್ನೂ ಪೂಜಿಸಿ ಸತ್ಕರಿಸುತ್ತಿದ್ದನು. ಮಹಾತ್ಮನಾದ ಅವನು ಸತ್ಕುಲಪ್ರಸೂತೆಯಾದ, ಸಕಲ ಗುಣಸಂಪನ್ನೆಯಾದ ವೈದರ್ಭೀ ಎಂದ ಭಾರ್ಯೆಯಲ್ಲಿ ಮಹಾಬಲಿಷ್ಠರಾದ, ತನಗೆ ಅನುರೂಪರಾದ ಕುಶಾಂಬ, ಕುಶನಾಭ, ಅಮೂರ್ತರಜಸ ಮತ್ತು ವಸು ಎಂಬ ನಾಲ್ವರು ಮಕ್ಕಳನ್ನು ಪಡೆದನು. ತೇಜೋವಿಶಿಷ್ಟರಾದ, ಅತಿಶಯಧರ್ಮವಿಶಿಷ್ಟರಾದ, ಸತ್ಯವಾದಿಗಳಾದ, ಉತ್ಸಾಹಶಾಲಿಗಳಾದ ಆ ನಾಲ್ವರು ಮಕ್ಕಳಲ್ಲಿಯೂ ಕ್ಷತ್ರಿಯಧರ್ಮದ ಅಥವಾ ಪ್ರಜಾಪರಿಪಾಲನಾ ಧರ್ಮದ ಪ್ರವೃತ್ತಿಯನ್ನು ಉಂಟುಮಾಡುವ ಅಪೇಕ್ಷೆಯಿಂದ ಕುಶನು ಹೇಳಿದನು :

"ಮಕ್ಕಳಿರಾ! ಪ್ರಜಾಪಾಲನೆಮಾಡಿ ಪುಷ್ಕಲವಾದ ಧರ್ಮವನ್ನು (ಪುಣ್ಯವನ್ನು) ಪಡೆಯಿರಿ."

ಕುಶರಾಜನ ಆ ಮಾತುಗಳನ್ನು ಕೇಳಿ ಲೋಕೋತ್ತರರಾದ ಆ ನಾಲ್ವರೂ ಭೂಮಿಯಲ್ಲಿ ಪಟ್ಟಣಗಳನ್ನು ನಿರ್ಮಾಣಮಾಡಿದರು. ಮಹಾ ತೇಜಸ್ವಿಯಾದ ಕುಶಾಂಬನು 'ಕೌಶಾಂಬೀ' ಎಂಬ ಪಟ್ಟಣವನ್ನೂ, ಧರ್ಮಾತ್ಮನಾದ ಕುಶನಾಭನು, 'ಮಹೋದಯ'ವೆಂಬ ಹೆಸರಿನ ಪಟ್ಟಣ ವನ್ನೂ ನಿರ್ಮಿಸಿದರು. ಮಹಾಬುದ್ಧಿಶಾಲಿಯಾದ ಅಮೂರ್ತರಜಸನು 'ಧರ್ಮಾರಣ್ಯ' ವೆಂಬ ಪಟ್ಟಣವನ್ನೂ, ವಸುರಾಜನು ಎಲ್ಲ ಪಟ್ಟಣಗಳಿಗೂ ಶ್ರೇಷ್ಠವಾದ 'ಗಿರಿವ್ರಜ'ವೆಂಬ ಸುಂದರವಾದ ಪಟ್ಟಣವನ್ನೂ ನಿರ್ಮಿಸಿದರು. ರಾಮ! ಈಗ ನಾವಿರುವ ಈ ಪ್ರದೇಶವು ಮಹಾತ್ಮನಾದ ವಸುವಿನ ಪಟ್ಟಣ ವಾದ ಗಿರಿವ್ರಜಕ್ಕೆ ಸೇರಿದೆ. ಈ ಪಟ್ಟಣದ ಸುತ್ತಲೂ ಐದು ಪರ್ವತಗಳು ಕಂಗೊಳಿಸುತ್ತಿವೆ. ಇವು ಪಟ್ಟಣವನ್ನು ಸುತ್ತುವರಿದು ಇರುವುದರಿಂದಲೇ ಈ ಪಟ್ಟಣಕ್ಕೆ ಗಿರಿವ್ರಜವೆಂದು ಹೆಸರಾಯಿತು. ಈ ಐದು ಪರ್ವತಗಳ ಮಧ್ಯ ದಲ್ಲಿ ಮಾಲೆಯಂತೆ ಪರಿಶೋಭಿಸುತ್ತಾ ಹರಿದುಬರುತ್ತಿರುವ ರಮಣೀಯ

---

* ಕೌ = 'ಭೂಮೌ ಶೇತೇ ಇತಿ ಕುಶಃ'–ಬ್ರಹ್ಮಲೋಕದಲ್ಲಿ ಬ್ರಹ್ಮನ ಪುತ್ರನಾಗಿ ಹುಟ್ಟಿದ್ದರೂ ಪ್ರಜಾಪಾಲನೆಗೋಸ್ಕರ ಭೂಮಿಯಲ್ಲಿ ಇದ್ದ ಕಾರಣದಿಂದ ಇವನಿಗೆ ಕುಶನೆಂದು ಹೆಸರಾಯಿತು.

ವಾದ ಮತ್ತು ಪ್ರಸಿದ್ಧವಾದ ಈ ನದಿಯ ಹೆಸರು ಸುಮಾಗಧೀ ಅಥವಾ ಶೋಣಾ. ಈ ನದಿಯು ಮಾಗಧದೇಶದಲ್ಲಿ ಹರಿದುಬರುತ್ತದೆ. ನಾವಿರುವ ಈ ಭೂಮಿಯು ಮಹಾತ್ಮನಾದ ವಸುವಿನ ರಾಜ್ಯವಾಗಿದ್ದ ಮಗಧಭೂಮಿ ಯಾಗಿದೆ. ಈ ಭೂಮಿಯು ಒಳ್ಳೆಯ ಕ್ಷೇತ್ರಗಳಿಂದ ಕೂಡಿ, ಕಂಗೊಳಿಸುವ ಸಸ್ಯಗಳ ಮಾಲೆಯನ್ನು ಧರಿಸಿದೆ. ಈ ಪ್ರದೇಶದಲ್ಲಿ ನಾನು ಹಿಂದೆ ಹಲವು ಬಾರಿ ಸಂಚರಿಸಿದ್ದೇನೆ. ಕುಶಪುತ್ರನಾದ, ರಾಜರ್ಷಿಯಾದ ಕುಶನಾಭನು ಘೃತಾಚೀ ಎಂಬ ಅಪ್ಸರೆಯಲ್ಲಿ ನೂರು ಮಂದಿ ಶ್ರೇಷ್ಠರಾದ ಹೆಣ್ಣು ಮಕ್ಕಳನ್ನು ಪಡೆದನು. ಆ ಹೆಣ್ಣುಮಕ್ಕಳು ಪ್ರಾಪ್ತವಯಸ್ಕರಾದರು. ಅವರು ಅತ್ಯಂತರೂಪವತಿಯರಾಗಿದ್ದರು. ಕುಂಕುಮ-ಕಸ್ತೂರಿಗಳೇ ಮೊದಲಾದ ಸುಗಂಧದ್ರವ್ಯಗಳಿಂದಲೂ ಬಗೆಬಗೆಯ ಒಡವೆಗಳಿಂದಲೂ ತಮ್ಮ ಶರೀರ ವನ್ನು ಅಲಂಕರಿಸಿಕೊಂಡು ಉದ್ಯಾನವನಕ್ಕೆ ಹೋಗಿ–ವರ್ಷರ್ತುವಿನಲ್ಲಿ ಮಿಂಚುಗಳು ಥಳಥಳಿಸುವಂತೆ-ಉದ್ಯಾನವನದಲ್ಲಿ ಹಾಡುತ್ತಲೂ, ನೃತ್ಯ ಮಾಡುತ್ತಲೂ, ಕೆಲವರು ವೀಣಾದಿ ವಾದ್ಯಗಳನ್ನು ಬಾರಿಸುತ್ತಲೂ ಇದ್ದರು. ಕನಕಾಂಗದ-ನೂಪುರಾದಿ ಶ್ರೇಷ್ಠಾಭರಣಗಳನ್ನು ಧರಿಸಿದ್ದ ಅವರೆಲ್ಲರೂ ಆನಂದಭರಿತರಾಗಿ ಸುಂದರವಾದ ಉದ್ಯಾನವನದಲ್ಲಿ ಸ್ವೇಚ್ಛೆಯಿಂದ ನಲಿ ಯುತ್ತಿದ್ದರು. ರಾಘವ! ಕುಶನಾಭನ ನೂರು ಹೆಣ್ಣುಮಕ್ಕಳೂ ಸರ್ವಾಂಗ ಸುಂದರಿಯರಾಗಿದ್ದರು. ಈ ಭೂಮಿಯಲ್ಲಿಯೇ ಅವರಿಗೆ ಸಮಾನವಾದ ರೂಪವುಳ್ಳ ಕನ್ಯೆಯರು ಮತ್ತಾರೂ ಇರಲಿಲ್ಲ. ಉದ್ಯಾನವನದಲ್ಲಿ ನಲಿದಾಡು ತ್ತಿದ್ದ ಆ ಯುವತೀಮಣಿಯರು ನಿಶ್ಚಯವಾಗಿಯೂ-ಆಕಾಶದಲ್ಲಿ ಮೋಡ ಗಳ ನಡುವೆ ಶೋಭಿಸುವ ತಾರಾಮಣಿಗಳಂತೆಯೇ ಪರಿಶೋಭಿಸುತ್ತಿದ್ದರು. ಸುಗುಣೆಯರಾದ, ರೂಪ-ಯೌವನಸಂಪನ್ನೆಯರಾದ, ಉದ್ಯಾನವನದಲ್ಲಿ ಸ್ವೇಚ್ಛೆಯಿಂದ ನಲಿದಾಡುತ್ತಿದ್ದ ಕುಶನಾಭನ ನೂರು ಹೆಣ್ಣುಮಕ್ಕಳನ್ನೂ ನೋಡಿ ಸರ್ವಾತ್ಮನಾದ ವಾಯುದೇವನು ನಿಜರೂಪವನ್ನು ಧರಿಸಿ ಬಂದು ಕನ್ಯೆಯರಿಗೆ ಹೇಳಿದನು :

“ಕುಶನಾಭಕುಮಾರಿಯರೇ! ನಾನು ನಿಮ್ಮನ್ನು ಕಾಮಿಸಿ ಬಂದಿದ್ದೇನೆ. ನೀವು ನನ್ನ ಭಾರ್ಯೆಯರಾಗಿರಿ. ನನ್ನ ಪತ್ನಿಯರಾಗುವುದರಿಂದ ನಿಮಗೆ ಈಗಿರುವ ಮಾನುಷರೂಪವು ಹೋಗಿ ದೇವತ್ವವು ಉಂಟಾಗುತ್ತದೆ. ಇದರ

ಫಲವಾಗಿ ದೀರ್ಘಾಯುಷ್ಯವನ್ನೂ ಪಡೆಯುವಿರಿ. ಸುಕುಮಾರಿಯರೇ! ಮಾನವರಲ್ಲಿ ಯೌವನವು ಅನುದಿನವೂ ಕ್ಷೀಣಿಸುತ್ತಿರುತ್ತದೆ. ಆದುದರಿಂದ ನೀವು ನನ್ನ ಭಾರ್ಯೆಯರಾಗಿ ಅಮರತ್ವವನ್ನು ಪಡೆದು ಅಕ್ಷಯವಾದ ಯೌವನವನ್ನು ಪಡೆಯಿರಿ."

ಕಾಕುತ್ಸ್ಥ! ನಿರಾತಂಕವಾಗಿ ತನ್ನ ಕಾರ್ಯದಲ್ಲಿ ಸದಾ ಪ್ರವೃತ್ತನಾಗಿರುವ ವಾಯುದೇವನ ಮಾತುಗಳನ್ನು ಕೇಳಿ ನೂರು ಹೆಣ್ಣುಮಕ್ಕಳೂ ಅಪಹಾಸ್ಯಮಾಡಿ ನಕ್ಕು, ವಾಯುದೇವನಿಗೆ ಹೇಳಿದರು :

"ಸುರೇಶ್ವರನೇ! ನೀನು ಸಕಲಪ್ರಾಣಿಗಳ ಹೃದಯಗಳಲ್ಲಿಯೂ ಸಂಚರಿಸುವೆ. ನಮ್ಮಲ್ಲಿಯೂ ನೀನು ವ್ಯಾಪ್ತನಾಗಿರುವೆ. ಹೀಗಿದ್ದೂ ನಮ್ಮ ಹೃದಯದ ಆಶಯವೇನೆಂಬುದು ನಿನಗೆ ತಿಳಿಯದೇ ಹೋಯಿತೇ? ನಿನ್ನ ಪ್ರಭಾವವೆಷ್ಟೆಂಬುದನ್ನು ನಾವು ಸಂಪೂರ್ಣವಾಗಿ ತಿಳಿದಿರುತ್ತೇವೆ. ಆದುದರಿಂದ ನಮ್ಮ ಹೃದಯದ ಆಶಯವೂ ನಿನಗೆ ತಿಳಿದೇ ಇರುವುದು. ಅದನ್ನು ತಿಳಿದೂ ನಮ್ಮನ್ನು ನಿನ್ನ ಪತ್ನಿಯರಾಗುವಂತೆ ಹೇಳಿ ಏಕೆ ಅವಮಾನ ಪಡಿಸುವೆ? ದೇವೋತ್ತಮನೇ! ನೀನು ದೇವದೇವನೆಂಬುದೂ ಮಹಾ ಪ್ರಭಾವಿಯೆಂಬುದೂ ನಮಗೆ ತಿಳಿದಿದೆ. ಆದರೆ ನಮ್ಮನ್ನೂ ಸಾಮಾನ್ಯರೆಂದು ಪರಿಗಣಿಸಿ ಅನುಚಿತವಾದ ಮಾತುಗಳನ್ನಾಡಿ ಅವಮಾನಪಡಿಸಲು ಯತ್ನಿಸ ಬೇಡ. ನಾವು ಮಹಾತ್ಮನಾದ ಕುಶನಾಭನ ಪುತ್ರಿಯರು. ನೀನಾಡಿದ ಈ ಮಾತುಗಳಿಗಾಗಿ ನಿನ್ನನ್ನು ಸ್ಥಾನಭ್ರಷ್ಟನನ್ನಾಗಿ ಮಾಡಲು ಕೂಡ ನಮಗೆ ಸಾಮರ್ಥ್ಯವಿದೆ. ಆದರೆ ನಿನಗೆ ಶಾಪಕೊಟ್ಟು ನಮ್ಮ ತಪಃಫಲವನ್ನು ವ್ಯಯಿಸುವ ಇಷ್ಟವು ನಮಗಿಲ್ಲ. ನಮ್ಮ ತಪಃಫಲವನ್ನು ರಕ್ಷಿಸಿಕೊಳ್ಳುತ್ತೇವೆ.

ಮಾ ಭೂತ್ಸ ಕಾಲೋ ದುರ್ಮೇಧ ಪಿತರಂ ಸತ್ಯವಾದಿನಮ್ ।
ಅವಮನ್ಯ ಸ್ವಧರ್ಮೇಣ ಸ್ವಯಂವರಮುಪಾಸ್ಮಹೇ ॥೨೧॥

ದುಷ್ಟಬುದ್ಧಿಯುಳ್ಳ ವಾಯುದೇವನೇ! ಸತ್ಯನಿಷ್ಠನಾದ, ಸತ್ಯವಾದಿಯಾದ, ಮಹಾತ್ಮನಾದ ತಂದೆಯನ್ನು ಅನಾದರಣೆಮಾಡಿ–ಕಾಮಿನಿಯ ರಾಗಿ, ಸ್ವೇಚ್ಛಾಚಾರಿಣಿಯರಾಗಿ, ಸ್ವಯಂವರಮಾಡಿಕೊಳ್ಳುವ ಅಂತಹ ದುಷ್ಕಾಲವು ನಮಗೆ ಬರದಿರಲಿ.

ಪಿತಾ ಹಿ ಪ್ರಭುರಸ್ಮಾಕಂ ದೈವತಂ ಪರಮಂ ಚ ನಃ ।
ಯಸ್ಯ ನೋ ದಾಸ್ಯತಿ ಪಿತಾ ಸ ನೋ ಭರ್ತಾ ಭವಿಷ್ಯತಿ ॥೨೨॥

ದೇವೋತ್ತಮನೇ! ತಂದೆಯೇ ನಮಗೆ ಕನ್ಯಾವಸ್ಥೆಯಲ್ಲಿ ಪ್ರಭುವೂ ಪರದೈವವೂ ಆಗಿರುವನು. ಅವನು ಯಾರಿಗೆ ನಮ್ಮನ್ನು ಕೊಟ್ಟು ಮದುವೆ ಮಾಡುವನೋ–ಅವನೇ ನಮಗೆ ಪತಿಯಾಗುವನು."

ರಾಘವ! ಕುಶನಾಭಕನ್ಯೆಯರ ಆ ಮಾತುಗಳನ್ನು ಕೇಳಿ ವಾಯು ದೇವನು ಕುಪಿತನಾದನು. ಭಗವಂತನಾದ ಸರ್ವವ್ಯಾಪಿಯಾದ ವಾಯು ದೇವನು ಒಡನೆಯೇ ನೂರು ಮಂದಿ ಹೆಣ್ಣುಮಕ್ಕಳ ಅಂಗಾಂಗಗಳಲ್ಲಿಯೂ ಪ್ರವೇಶಿಸಿ ಅವರನ್ನು ವಾತರೋಗಪೀಡಿತರನ್ನಾಗಿ ಮಾಡಿದನು. ಆ ಕನ್ಯೆ ಯರು ಭ್ರಾಂತರಾಗಿ, ಲಜ್ಜಾನ್ವಿತೆಯರಾಗಿ, ಕಂಬನಿಗರೆಯುತ್ತಾ ತಂದೆಯಾದ ಕುಶನಾಭನ ಅರಮನೆಗೆ ಹೋಗಿ ರಾಜನ ಮುಂದೆ ನೆಲದ ಮೇಲೆ ಬಿದ್ದರು. ವಾಯುವಿನ ಉಪಟಳದಿಂದ, ವಿಕಾರಹೊಂದಿದ ಅವಯವಗಳಿಂದ ಕೂಡಿದ್ದ, ದೀನಭಾವದಿಂದ ತನ್ನ ಮುಂದೆ ನಿಂತಿದ್ದ, ಪರಮಕಾಂತಿಮತಿಯ ರಾದ, ತನಗೆ ಅತ್ಯಂತಪ್ರಿಯರಾದ ತನ್ನ ಹೆಣ್ಣುಮಕ್ಕಳನ್ನು ಕಂಡು ಭ್ರಾಂತ ನಾದ ಕುಶನಾಭನು ಹೇಳಿದನು :

"ಕುವರಿಯರೇ! ನಿಮ್ಮ ಈ ಅವಸ್ಥೆಯೇನು? ಯಾರು ನಿಮ್ಮನ್ನು ಬಲಾತ್ಕರಿಸಿ ಅವಮಾನಮಾಡಿದರು? ಶರೀರದ ಈ ವಕ್ರತೆಯು ಹೇಗೆ ಉಂಟಾಯಿತು? ಎಲ್ಲರೂ ಸುಮ್ಮನೆ ಅಳುತ್ತಿರುವಿರಿ. ಮಾತನಾಡುವುದಿಲ್ಲ ವೇಕೆ?" ಹೀಗೆ ಹೇಳಿ ರಾಜನೊಮ್ಮೆ ದೀರ್ಘವಾಗಿ ನಿಟ್ಟುಸಿರುಬಿಟ್ಟು, ಅವರು ಏನು ಹೇಳುವರೆಂಬುದನ್ನೇ ಏಕಾಗ್ರತೆಯಿಂದ ಗಮನಿಸುತ್ತಾ ಕುಳಿತನು.

ಇ೨ನೆಯ ಸರ್ಗವು ಮುಗಿಯಿತು.

ಕುಶನಾಭನು ಕನ್ಯೆಯರಿಗೆ ಧೈರ್ಯಹೇಳಿದುದು : ಕ್ಷಮಾಗುಣದ ಪ್ರಶಂಸೆ : ಬ್ರಹ್ಮದತ್ತನ ಜನ್ಮ : ಅವನೊಡನೆ ಕುಶನಾಭಕನ್ಯೆಯರ ವಿವಾಹ

ತಸ್ಯ ತದ್ವಚನಂ ಶ್ರುತ್ವಾ ಕುಶನಾಭಸ್ಯ ಧೀಮತಃ ।
ಶಿರೋಭಿಶ್ಚರಣೌ ಸ್ಪೃಷ್ಟ್ವಾ ಕನ್ಯಾಶತಮಭಾಷತ ॥೧॥

ಧೀಮಂತನಾದ ಕುಶನಾಭನ ಮಾತುಗಳನ್ನು ಕೇಳಿ, ಕುಶನಾಭಕನ್ಯೆಯರು ತಂದೆಯ ಕಾಲುಗಳನ್ನು ತಲೆಯಿಂದ ಮುಟ್ಟಿ ನಮಸ್ಕರಿಸಿ ಹೇಳಿದರು :

"ತಾತ! ಸರ್ವಾತ್ಮಕನಾದ ವಾಯುದೇವನು ಅನುಚಿತವಾದ ಮಾರ್ಗವನ್ನನುಸರಿಸಿ ನಮ್ಮನ್ನು ಅವಮಾನಪಡಿಸಲು ಇಚ್ಛಿಸಿದನು. ನಾವು ಅವನಿಗೆ ಧರ್ಮಮಾರ್ಗವನ್ನು ತಿಳಿಯಪಡಿಸಿದರೂ ಅವನು ಅದನ್ನು ವಿವೇಚಿಸಲಿಲ್ಲ. 'ವಾಯುದೇವನೇ! ನಾವು ಕನ್ಯೆಯರಾಗಿರುವುದರಿಂದ ನಮ್ಮ ತಂದೆಯ ಅಧೀನಕ್ಕೆ ಒಳಪಟ್ಟಿರುತ್ತೇವೆ. ಸ್ವತಂತ್ರರಲ್ಲ. ಆದುದರಿಂದ ನೀನು ನಮ್ಮ ತಂದೆಯ ಬಳಿ ಹೋಗಿ ನಮ್ಮನ್ನು ವಿವಾಹಮಾಡಿಕೊಡುವಂತೆ ಪ್ರಾರ್ಥಿಸು. ನಮ್ಮ ತಂದೆಯು ಒಪ್ಪಿ ನಮ್ಮನ್ನು ನಿನಗೆ ವಿವಾಹಮಾಡಿಕೊಟ್ಟರೆ ನಿನ್ನ ಧರ್ಮಪತ್ನಿಯರಾಗುವೆವು. ನಿನಗೆ ಮಂಗಳವಾಗಲಿ"–ಹೀಗೆ ನಾವು ವಾಯುದೇವನಿಗೆ ಹೇಳಿದೆವು. ಆದರೆ ಅವನಿಗೆ ನಮ್ಮ ಧರ್ಮಸೂಕ್ತಿಗಳು ಹಿಡಿಸಲಿಲ್ಲ. ನಾವು ಹೀಗೆ ಹೇಳುತ್ತಿರುವಾಗಲೇ ಪಾಪಬುದ್ಧಿಯಿಂದ ಕೂಡಿದ, ನಮ್ಮ ಹಿತೋಕ್ತಿಯನ್ನು ಒಪ್ಪದ ಮತ್ತು ಪರಿಶೀಲಿಸಲೂ ಸಹನೆಯಿಲ್ಲದ ವಾಯುವು ಕುಪಿತನಾಗಿ ನಮಗೆ ಈ ಅವಸ್ಥೆಯನ್ನುಂಟುಮಾಡಿದನು. ನಾವು ಗಳು ಒಡನೆಯೇ ಹೀಗೆ ಪೀಡಿತರಾದೆವು."

ಕುಮಾರಿಯರು ಹೇಳಿದ ಆ ಮಾತುಗಳನ್ನು ಕೇಳಿ ಮಹಾತೇಜಸ್ವಿಯಾದ, ಪರಮಧಾರ್ಮಿಕನಾದ ಕುಶನಾಭನು ಅವರಿಗೆ ಧೈರ್ಯತುಂಬುತ್ತಾ ಕ್ಷಮಾಗುಣಯುಕ್ತವಾದ ಈ ಮಾತನ್ನಾಡಿದನು :

"ಪುತ್ರಿಯರೇ! ನೀವೆಲ್ಲರೂ ಐಕ್ಯಮತ್ಯದಿಂದ ಮಾಡಿದ ಈ

ಕಾರ್ಯವು ಬಹಳ ಶ್ಲಾಘನೀಯವಾಗಿದೆ. ಮಹಾತ್ಮರಾದ ಕ್ಷಮಾವಂತರಿಗಿರುವ ಸಹನೆಯನ್ನು ತಾಳಿ ನೀವು ಮಹಾಕಾರ್ಯವನ್ನೇ ಮಾಡಿರುವಿರಿ. ದೇವದೇವನಾದ ವಾಯುವೇ ಬಂದು ಯಾಚಿಸಿದರೂ ಕುಲಧರ್ಮವನ್ನು ನೆನೆದು, ಕಾಮಕ್ಕೆ ಅಡಿಯಾಳುಗಳಾಗದೇ ಅವನಿಗೆ ಧರ್ಮೋಪದೇಶವನ್ನು ಮಾಡಿರುವಿರಿ. ಪ್ರಪಂಚದಲ್ಲಿ ಶರೀರದ ವಕ್ರತೆಯನ್ನು ಯಾರೂ ಸಹಿಸರು. ನೀವು ವಾಯುವಿನಿಂದ ಪೀಡಿತರಾಗಿ ಅವನಿಗೆ ಪ್ರತಿಪೀಡೆಯನ್ನುಂಟು ಮಾಡುವ ಸಾಮರ್ಥ್ಯವುಳ್ಳವರಾಗಿದ್ದರೂ ಶಾಪಕೊಡದೆ ತಾಳ್ಮೆಯಿಂದಿರು ವಿರಿ. ಕಾಮ-ಕ್ರೋಧಗಳೆರಡನ್ನೂ ಜಯಿಸಿರುವಿರಿ. ನೀವು ಮಾಡಿರುವ ಕಾರ್ಯವು ನಿಶ್ಚಯವಾಗಿಯೂ ಸಾಧುವಾಗಿದೆ. ನಮ್ಮ ಕುಲಕ್ಕೆ ಅನುರೂಪ ವಾಗಿದೆ. ಪ್ರಶಂಸನೀಯವೂ ಆಗಿದೆ.

ಪುರುಷರಿಗೇ ಆಗಲೀ, ಸ್ತ್ರೀಯರಿಗೇ ಆಗಲೀ–ಕ್ಷಮಾಗುಣವೆಂಬುದು ಅಲಂಕಾರಪ್ರಾಯವಾಗಿರುವುದು. ನೀವೆಲ್ಲರೂ ಒಂದಾಗಿ ವಾಯುವು ಮಾಡಿದ ಅಪರಾಧದಿಂದ ಕೋಪಗೊಳ್ಳದೇ ಅವನ ಮೇಲೆ ಕ್ಷಮೆತೋರಿರುವುದು ಅನ್ಯಾದೃಶವಾದುದು.

ಕ್ಷಮಾ ದಾನಂ ಕ್ಷಮಾ ಸತ್ಯಂ ಕ್ಷಮಾ ಯಜ್ಞಶ್ಚ ಪುತ್ರಿಕಾಃ ।
ಕ್ಷಮಾ ಯಶಃ ಕ್ಷಮಾ ಧರ್ಮಃ ಕ್ಷಮಯಾ ವಿಷ್ಠಿತಂ ಜಗತ್ ॥೮॥

ಕ್ಷಮೆಯೇ ದಾನ ; ಕ್ಷಮೆಯೇ ಸತ್ಯ ; ಕ್ಷಮೆಯೇ ಯಜ್ಞ; ಕ್ಷಮೆಯೇ ಯಶಸ್ಸಿಗೆ ಕಾರಣಭೂತವಾದುದು. ತಟಾಕನಿರ್ಮಾಣವೇ ಮುಂತಾದ ಧರ್ಮಕಾರ್ಯಗಳ ಫಲವೂ ಕ್ಷಮಾವಂತನಿಗೆ ಲಭಿಸುತ್ತದೆ. ಹೆಚ್ಚೇನು ಹೇಳಲಿ, ಮಕ್ಕಳಿರಾ! ಚರಾಚರಾತ್ಮಕವಾದ ಈ ಜಗತ್ತು ಕ್ಷಮಾಗುಣ ದಿಂದಲೇ ಸ್ಥಿರವಾಗಿ ನಿಂತಿದೆ."

ವಿಶ್ವಾಮಿತ್ರರು ಹೇಳುತ್ತಾರೆ :

"ರಾಘವ! ದೇವತೆಗಳಿಗೆ ಅನುರೂಪಪರಾಕ್ರಮವುಳ್ಳ, ಮಂತ್ರಜ್ಞನಾದ ಕುಶನಾಭನು ಹೀಗೆ ತನ್ನ ಪುತ್ರಿಯರನ್ನು ಪ್ರಶಂಸಿಸಿ, ಸಂತೈಸಿ ಕಳುಹಿಸಿ ಕೊಟ್ಟನು. 'ಮಕ್ಕಳ ಮದುವೆಮಾಡಲು ಉತ್ತಮವಾದ ಕಾಲ ಯಾವುದು? ವರಾರ್ಥಿಯಾಗಿ ಯಾವದೇಶಕ್ಕೆ ಹೋಗಬೇಕು? ತನಗೆ ಸಮಾನಕುಲಗೌರವ

ವುಳ್ಳವರು ಪೃಥ್ವಿಯಲ್ಲಿ ಯಾರಿದ್ದಾರೆ? ರೂಪ-ಯೌವನಸಂಪನ್ನರಾದ ರಾಜ ಕುಮಾರರನ್ನು ಆರಿಸಲು ಬ್ರಾಹ್ಮಣರನ್ನು ಯಾವಾಗ ಕಳುಹಿಸಬೇಕು?'– ಮುಂತಾದ ಕನ್ಯೆಯರ ವಿವಾಹಕ್ಕೆ ಸಂಬಂಧಿಸಿದ ಸಕಲವಿಷಯಗಳನ್ನೂ ಮಂತ್ರಿಗಳೊಡನೆ ಸಮಾಲೋಚಿಸಿದನು. ಅದೇ ಕಾಲದಲ್ಲಿ ಅಸ್ಖಲಿತರೇತಸ್ಕ ನಾದ, ಬ್ರಹ್ಮಚಾರಿಯಾದ, ಸದಾಚಾರಶೀಲನಾದ 'ಚೂಲೀ' ಎಂಬ ಹೆಸರಿನ ಬ್ರಾಹ್ಮಣನು ಬ್ರಹ್ಮಜ್ಞಾನದ ಸಾಧನೆಗಾಗಿ ತಪಶ್ಚರಣೆಮಾಡುತ್ತಿದ್ದನು.* ಊರ್ಮಿಳೆಯ ಮಗಳಾದ ಸೋಮದಾ ಎಂಬ ಗಂಧರ್ವಕನ್ಯೆಯು ತಪಸ್ಸಿ ನಲ್ಲಿ ನಿರತನಾಗಿದ್ದ ಚೂಲೀಮಹರ್ಷಿಯ ಅನುಗ್ರಹವನ್ನು ಪಡೆಯುವ ಸಲು ವಾಗಿ ಅವನನ್ನು ಸೇವಿಸುತ್ತಿದ್ದಳು. ಸೋಮದೆಯು ಅನನ್ಯಶರಣಳಾಗಿ ಮಹರ್ಷಿಯನ್ನೇ ಶುಶ್ರೂಷೆಮಾಡುತ್ತಾ ಕಾಲಕಳೆಯುತ್ತಿದ್ದಳು. ಧರ್ಮಿಷ್ಠ ನಾದ, ಬ್ರಹ್ಮರ್ಷಿನಾದ ಚೂಲಿಯು ಅವಳ ಶುಶ್ರೂಷೆಯಿಂದ ತುಷ್ಟನಾದನು. ಸೋಮದೆಯು ಶುಶ್ರೂಷೆಮಾಡಿದುದರ ಫಲಪ್ರಾಪ್ತಿಯ ಕಾಲವು ಸನ್ನಿಹಿತ ವಾಯಿತು. ಚೂಲಿಯು ಗಂಧರ್ವಿಗೆ ಹೇಳಿದನು : "ಸೋಮದೇ! ನಿನಗೆ ಮಂಗಳವಾಗಲಿ. ನಿನ್ನ ಶುಶ್ರೂಷೆಯಿಂದ ನಾನು ಸುಪ್ರೀತನಾಗಿದ್ದೇನೆ. ನಿನಗೆ ಪ್ರಿಯವಾದ ಯಾವ ಕಾರ್ಯಮಾಡಿಕೊಡಬೇಕೆಂಬುದನ್ನು ಹೇಳು."

ಮಹರ್ಷಿಯು ತಾನು ಮಾಡಿದ ಶುಶ್ರೂಷೆಯಿಂದ ಸುಪ್ರೀತನಾಗಿ ರುವನೆಂದು ತಿಳಿದು ಪರಮಪ್ರೀತೆಯಾದ, ಯಾರೊಡನೆ ಹೇಗೆ ಮಾತನಾಡ ಬೇಕೆಂಬುದನ್ನು ತಿಳಿದಿದ್ದ ಸೋಮದೆಯು, ವಾಕ್ಯಕೋವಿದನಾದ ಚೂಲಿಗೆ ಸುಮಧುರವಾದ ಈ ಮಾತುಗಳನ್ನು ಹೇಳಿದಳು :

"ಮಹಾನುಭಾವನೇ! ನೀನು ಬ್ರಹ್ಮತೇಜಸ್ಸೆಂಬ ಲಕ್ಷ್ಮಿಯಿಂದ ಕೂಡಿರುವೆ. ಬ್ರಹ್ಮಸಾಕ್ಷಾತ್ಕಾರಕ್ಕಾಗಿ ಅನವರತವೂ ಮಹಾತಪಸ್ಸನ್ನು ಮಾಡುತ್ತಿರುವ ನೀನು ಸಾಕ್ಷಾತ್ ಬ್ರಹ್ಮನೇ ಆಗಿರುವೆ. ನಿನ್ನಂತೆಯೇ

---

* ಬ್ರಹ್ಮಜ್ಞಾನಸಾಧನೆಗೆ ಮಾಡಬೇಕಾದ ತಪಸ್ಸು ಸ್ಮೃತಿಯಲ್ಲಿ ಹೀಗೆ ಉಕ್ತವಾಗಿದೆ. "ಮನಸಶ್ಚೇನ್ದ್ರಿಯಾಣಾಂ ಚ ಏಕಾಗ್ರ್ಯಂ ಪರಮಂ ತಪಃ" ಮನಸ್ಸು ಮತ್ತು ಇಂದ್ರಿಯಗಳ ಏಕಾಗ್ರತೆಯೇ ಬ್ರಹ್ಮಸಾಕ್ಷಾತ್ಕಾರಕ್ಕೆ ಸಾಧನಭೂತವಾದ ಮಹಾತಪಸ್ಸು.

ಬ್ರಹ್ಮನಿಷ್ಠನಾದ, ಪರಮಧಾರ್ಮಿಕನಾದ, ಪುತ್ರನನ್ನು ನಾನು ಅಪೇಕ್ಷಿಸು ತ್ತೇನೆ. ಬ್ರಹ್ಮರ್ಷಿಯೇ! ನಾನು ಪತಿಯಿಲ್ಲದವಳು. ಆದರೆ ವಿಧವೆಯಲ್ಲ. ನಾನು ಇದುವರೆಗೂ ಯಾರೊಬ್ಬರನ್ನೂ ಮದುವೆಯಾಗಿಲ್ಲ. ಬ್ರಹ್ಮಚಾರಿಣಿ ಯಾಗಿದ್ದೇನೆ. ಅನನ್ಯಶರಣಳಾಗಿ ಬಂದಿರುವ ನನಗೆ–ನಿನ್ನ ತಪಸ್ಸಿನ ಮಹಿಮೆ ಯಿಂದ ನಾನು ಪ್ರಾರ್ಥಿಸಿದಂತೆ–ಬ್ರಹ್ಮನಿಷ್ಠನಾದ, ಧಾರ್ಮಿಕನಾದ ಮಗ ನನ್ನು ಅನುಗ್ರಹಿಸು." ಬ್ರಹ್ಮರ್ಷಿಯಾದ ಚೂಲಿಯು ಪ್ರಸನ್ನನಾಗಿ ಸೋಮ ದೆಗೆ ಸರ್ವಶ್ರೇಷ್ಠನಾದ ಬ್ರಹ್ಮನಿಷ್ಠನಾದ ಒಬ್ಬ ಮಗನನ್ನು ಅನುಗ್ರಹಿಸಿದನು. ತನ್ನ ಸದ್ಗುಣಾತಿಶಯಗಳಿಂದ ಸರ್ವತ್ರ ಖ್ಯಾತನಾದ ಚೂಲಿಯ ಮಾನಸ ಪುತ್ರನು 'ಬ್ರಹ್ಮದತ್ತ' (ಬ್ರಾಹ್ಮಣನಿಂದ ಕೊಡಲ್ಪಟ್ಟವನು) ಎಂದೇ ಪ್ರಸಿದ್ಧಿ ಯನ್ನು ಹೊಂದಿದನು. ಸ್ವರ್ಗವನ್ನು ದೇವೇಂದ್ರನು ಆಳುತ್ತಿರುವಂತೆ–ರಾಜ ನಾದ, ಕ್ಷತ್ರಿಯತೇಜಸ್ಸಿನಿಂದ ಕೂಡಿದ್ದ ಬ್ರಹ್ಮದತ್ತನು ಕಾಂಪಿಲ್ಯವೆಂಬ ಪಟ್ಟಣ ವನ್ನು ಆಳುತ್ತಿದ್ದನು. ಧರ್ಮಿಷ್ಠನಾದ ಕುಶನಾಭನು ತನ್ನ ನೂರು ಮಂದಿ ಕನ್ಯೆಯರನ್ನೂ ಸೋಮದೆಯ ಮಗನಾದ ಬ್ರಹ್ಮದತ್ತನಿಗೆ ಮದುವೆಮಾಡಿ ಕೊಡಲು ನಿಶ್ಚಯಿಸಿದನು. ಮಹಾತೇಜಸ್ವಿಯಾದ ಮಹೀಪಾಲನಾದ ಕುಶನಾಭನು ಒಡನೆಯೇ ಬ್ರಹ್ಮದತ್ತನನ್ನು ಆಹ್ವಾನಿಸಿ ತನ್ನ ನೂರು ಹೆಣ್ಣು ಮಕ್ಕಳನ್ನೂ ಸಂತುಷ್ಟವಾದ ಮನಸ್ಸಿನಿಂದ ಬ್ರಹ್ಮದತ್ತನಿಗೆ ಯಥಾವಿಧಿಯಾಗಿ ವಿವಾಹಮಾಡಿಕೊಟ್ಟನು. ದೇವಪತಿಯಾದ ಇಂದ್ರನಂತೆ ಸಕಲವೈಭವ ಗಳಿಂದಲೂ ಕೂಡಿದ್ದ ಮಹೀಪಾಲನಾದ ಬ್ರಹ್ಮದತ್ತನು ಜ್ಯೇಷ್ಠಾನುಕ್ರಮ ವಾಗಿ ಕುಶನಾಭನ ಆ ನೂರು ಕನ್ಯೆಯರ ಪಾಣಿಗ್ರಹಣಮಾಡಿದನು. ಬ್ರಹ್ಮ ರ್ಷಿಯ ಮಾನಸಪುತ್ರನಾದ, ಬ್ರಹ್ಮನಿಷ್ಠನಾದ ಬ್ರಹ್ಮದತ್ತನು ಕುಶನಾಭನ ಕನ್ಯೆಯರ ಪಾಣಿಗಳನ್ನು ಸ್ಪರ್ಶಮಾಡುತ್ತಲೇ ವಾಯುವಿನ ಪ್ರಕೋಪದಿಂದ ಪ್ರಾಪ್ತವಾಗಿದ್ದ ಆ ಕನ್ಯೆಯರ ಕುಬ್ಜತ್ವವು ನಿವಾರಣೆಯಾಯಿತು. ವಾಯು ಪೀಡೆಯಿಂದ ವಿಮುಕ್ತರಾದ ನೂರು ಮಂದಿ ಕನ್ಯೆಯರೂ ವಿಶೇಷವಾದ ಕಾಂತಿಯಿಂದ ಪ್ರಕಾಶಿಸಿದರು. ವಾಯುವಿನ ಪೀಡೆಯಿಂದ ವಿಮುಕ್ತರಾಗಿ, ಹೆಚ್ಚಿನ ಕಾಂತಿಯಿಂದ ಕೂಡಿದ್ದ ತನ್ನ ಹೆಣ್ಣುಮಕ್ಕಳನ್ನು ನೋಡಿ ಕುಶ ನಾಭನು ಪರಮಪ್ರೀತನಾದನು. ಅವನ ಆನಂದಕ್ಕೆ ಪಾರವೇ ಇರಲಿಲ್ಲ. ಅನಂತರ ಕುಶನಾಭನು–ವಿವಾಹಿತನಾದ, ಮಹೀಪಾಲನಾದ, ಬ್ರಹ್ಮದತ್ತ

ನನ್ನು ಅವನ ಪತ್ನಿಯರೊಡನೆಯೂ, ಪುರೋಹಿತ-ಮಂತ್ರಿ-ಸೇನಾಪತಿ ಗಳೊಡನೆಯೂ ಕಾಂಪಿಲ್ಯಪಟ್ಟಣಕ್ಕೆ ಕಳುಹಿಸಿಕೊಟ್ಟನು. ಹಾಗೆ ವೈಭವ ದಿಂದಲೂ ಮತ್ತು ನೂರು ಮಂದಿ ರಾಜಕುಮಾರಿಯರೊಡನೆಯೂ ಆಗಮಿ ಸಿದ ಮಗನನ್ನು ಕಂಡು ಸೋಮದೆಗೂ ಬಹಳ ಸಂತೋಷವಾಯಿತು. ತನ್ನ ಮಗನಿಗೆ ಅನುರೂಪರಾದ ಕನ್ಯೆಯರೊಡನೆ ವಿವಾಹವಾದುದನ್ನು ತಿಳಿದು, ಸೊಸೆಯರು ಒಬ್ಬೊಬ್ಬರಾಗಿ ಕಾಲುಮುಟ್ಟಿ ನಮಸ್ಕರಿಸುತ್ತಿದ್ದಂತೆ ಅವರನ್ನು ಅತ್ಯಾದರದಿಂದ ವೀಕ್ಷಿಸಿ, ಹರಸಿ, ಮೈದಡವಿ ಸಂತೈಸಿ, ಅವರ ತಂದೆಯಾದ ಮಹಾತ್ಮನಾದ ಕುಶನಾಭನನ್ನೂ ಪ್ರಶಂಸೆಮಾಡಿದಳು.

೩೩ನೆಯ ಸರ್ಗವು ಮುಗಿಯಿತು.

ಬಾಲಕಾಂಡ ೩೪ನೆಯ ಸರ್ಗ

ಗಾಧಿ-ವಿಶ್ವಾಮಿತ್ರ-ಸತ್ಯವತಿಯರ ಜನ್ಮವೃತ್ತಾಂತ

ಕೃತೋದ್ವಾಹೇ ಗತೇ ತಸ್ಮಿನ್ಬ್ರಹ್ಮದತ್ತೇ ಚ ರಾಘವ ।
ಅಪುತ್ರಃ ಪುತ್ರಲಾಭಾಯ ಪೌತ್ರೀಮಿಷ್ಟಿಮಕಲ್ಪಯತ್ ॥೧॥

ರಾಘವ! ಚೂಲೀಮಹರ್ಷಿಯ ಮಗನಾದ ಬ್ರಹ್ಮದತ್ತನು ಕುಶನಾಭನ ನೂರು ಕನ್ಯೆಯರನ್ನೂ ವಿವಾಹಮಾಡಿಕೊಂಡು ತನ್ನ ಪಟ್ಟಣವಾದ ಕಾಂಪಿಲ್ಯೆಗೆ ಪ್ರಯಾಣಮಾಡಿದನು. ಇತ್ತಲಾಗಿ ಅಪುತ್ರವಂತನಾದ ಕುಶನಾಭನು ಪುತ್ರಪ್ರಾಪ್ತಿಗಾಗಿ ಪುತ್ರಕಾಮೇಷ್ಟಿಯಾಗವನ್ನು ಮಾಡಿದನು. ಯಾಗವು ನಡೆಯುತ್ತಿದ್ದ ಸಮಯದಲ್ಲಿ ಬ್ರಹ್ಮಮಾನಸಪುತ್ರನಾದ, ಕುಶನಾಭನ ತಂದೆಯಾದ, ಉದಾರನಾದ ಕುಶನು ಮಹೀಪಾಲನಾದ ಕುಶನಾಭನಿಗೆ ಹೇಳಿದನು :

"ಮಗು, ಕುಶನಾಭ! ಪರಮಧಾರ್ಮಿಕನಾದ ಮತ್ತು ನಿನಗೆ ಅನು ರೂಪನಾದ ಮಗನು ಹುಟ್ಟುತ್ತಾನೆ. 'ಗಾಧಿ', ಎಂದು ಅವನನ್ನು ಕರೆಯುತ್ತಾರೆ. ಅವನಿಂದ ನೀನು ಲೋಕದಲ್ಲಿ ಶಾಶ್ವತವಾದ ಕೀರ್ತಿಯನ್ನು ಪಡೆಯುವೆ."

ರಾಮ! ಕುಶನು ಮಗನಿಗೆ ಹೀಗೆ ಹೇಳಿ ಆಕಾಶದ ಮಾರ್ಗವಾಗಿ

ಸನಾತನವಾದ, ನಿತ್ಯವಾದ, ಶಾಶ್ವತವಾದ ಬ್ರಹ್ಮಲೋಕಕ್ಕೆ ತೆರಳಿದನು. (ಕುಶನು ಕುಶನಾಭನಿಗೆ ಅನುಗ್ರಹಮಾಡುವುದಕ್ಕಾಗಿಯೇ ಬ್ರಹ್ಮಲೋಕದಿಂದ ಭೂಲೋಕಕ್ಕೆ ಬಂದಿದ್ದನು.) ಕೆಲವು ದಿನಗಳು ಕಳೆದನಂತರ ಧೀಮಂತನಾದ ಕುಶನಾಭನಿಗೆ ಭಾರ್ಯೆಯಾದ ಘೃತಾಚಿಯಲ್ಲಿ ಪರಮಧರ್ಮಿಷ್ಠನಾದ, ಗಾಧಿಯೆಂದು ಪ್ರಸಿದ್ಧನಾದ ಮಗನು ಹುಟ್ಟಿದನು. ಆ ಗಾಧಿಯೇ ನನ್ನ ತಂದೆ. ಬ್ರಹ್ಮಮಾನಸಪುತ್ರನಾದ ಕುಶನ ವಂಶದಲ್ಲಿ ನಾನು ಜನ್ಮ ತಾಳಿರುವುದರಿಂದ ನನ್ನನ್ನು 'ಕೌಶಿಕ'ನೆಂದೂ ಕರೆಯುತ್ತಾರೆ. ನನಗಿಂತಲೂ ಮೊದಲು ಹುಟ್ಟಿದ, ಸುವ್ರತೆಯಾದ ಸತ್ಯವತೀ ಎಂಬ ಹೆಸರಿನ ನಮ್ಮಕ್ಕನನ್ನು ಋಚೀಕನು ಪಾಣಿಗ್ರಹಣಮಾಡಿಕೊಂಡನು. ಕಾಲಾನಂತರದಲ್ಲಿ ಋಚೀಕಮಹರ್ಷಿಯು ಪರಲೋಕವನ್ನೈದಿದನು. ಪತ್ಯನುಸರಣಶೀಲಳಾದ ಸತ್ಯವತಿಯೂ ಸಶರೀರಳಾಗಿಯೇ ಋಚೀಕನನ್ನನುಸರಿಸಿ ಸ್ವರ್ಗಕ್ಕೆ ಹೋದಳು. ಪತಿ ಶುಶ್ರೂಷೆಯ ಮಹಾಪುಣ್ಯವಿಶೇಷದಿಂದಲೂ, ಲೋಕಕ್ಕೆ ಹಿತವನ್ನುಂಟು ಮಾಡುವ ಅಪೇಕ್ಷೆಯಿಂದಲೂ ಉದಾರಳಾದ ಸತ್ಯವತಿಯೇ ಪುನಃ ಹಿಮ ವತ್ಪರ್ವತಕ್ಕೆ ಹೋಗಿ ದಿವ್ಯವಾದ ಮತ್ತು ಪರಿಶುದ್ಧವಾದ ತೀರ್ಥದಿಂದ ಕೂಡಿದ, ರಮಣೀಯವಾದ 'ಕೌಶಿಕೀ' ಎಂಬ ಮಹಾನದಿಯಾಗಿ ಪ್ರವಹಿಸಿ ದಳು. ಆ ಕೌಶಿಕಿಯಲ್ಲಿ ಅತ್ಯಂತ ಅಕ್ಕರೆಯುಳ್ಳ ನಾನು ಹಿಮವತ್ಪರ್ವತದ ತಪ್ಪಲಿನಲ್ಲಿ ಯಾವಾಗಲೂ ಅವಳ (ಆ ನದಿಯ) ಜೊತೆಯಲ್ಲಿಯೇ ಇರುತ್ತಾ ಸುಖದಿಂದಿದ್ದೆನು. ಮಹಾಭಾಗಳಾದ, ಮಹಾಪತಿವ್ರತೆಯಾದ ಸತ್ಯವತಿಯು ಭೂಮಿಯಲ್ಲಿ ಪುನಃ ಕೌಶಿಕೀನದಿಯಾಗಿ ಅವತರಿಸಿ, ಪುಣ್ಯತಮಳಾಗಿ, ತನ್ನಲ್ಲಿ ಮಿಂದು-ತೀರ್ಥಪ್ರಾಶನ ಮಾಡಿದವರನ್ನು ಸತ್ಯನಿಷ್ಠರನ್ನಾಗಿಯೂ, ಧರ್ಮನಿಷ್ಠರನ್ನಾಗಿಯೂ ಮಾಡುವ ಸಾಮರ್ಥ್ಯವುಳ್ಳವಳಾಗಿದ್ದಾಳೆ. ರಾಘವ! ನಾನೊಂದು ಯಜ್ಞಮಾಡಬೇಕೆಂದು ನಿಶ್ಚಯಿಸಿದೆನು. ಆ ಯಜ್ಞದ ಸಿದ್ಧಿಯು ಸಿದ್ಧಾಶ್ರಮದಲ್ಲಿಯೇ ಆಗಬೇಕಾಗಿದ್ದಿತು.* ಈ ಒಂದು ನಿಯಮ ವಿದ್ದುದರಿಂದ ನಾನು ನನ್ನ ಪ್ರಿಯ ಭಗಿನಿಯಾದ ಕೌಶಿಕಿಯನ್ನು ಬಿಟ್ಟು

---

* ನಮ್ಮ ಊರಿನಲ್ಲಿಯೇ ವೆಂಕಟರಮಣಸ್ವಾಮಿಯ ದೇವಾಲಯಗಳು, ಸುಬ್ರಹ್ಮಣ್ಯ ಸ್ವಾಮಿಯ ದೇವಾಲಯಗಳು ಅನೇಕವಿದ್ದರೂ ತಿರುಪತಿಗೆ ಅಥವಾ ಪಳಿನಿ, ಸುಬ್ರಹ್ಮಣ್ಯಕ್ಕೆ ಹೋಗುವಂತೆ ಒಂದು ಕಾರ್ಯದ ಸಿದ್ಧಿಯು ಇಂತಹುದೇ ಸ್ಥಳದಲ್ಲಿ ಆಗಬೇಕೆಂಬ

ಸಿದ್ಧಾಶ್ರಮಕ್ಕೆ ಬಂದೆನು. ಅಲ್ಲಿ ಬಹಳ ದಿನಗಳವರೆಗೂ ರಾಕ್ಷಸರ ಉಪಟಳದಿಂದ ನನ್ನ ಯಜ್ಞದ ಸಿದ್ಧಿಯಾಗದೇ ಕಡೆಗೆ ನಿನ್ನನ್ನು ಅಯೋಧ್ಯೆಯಿಂದ ಕರೆತಂದು, ನಿನ್ನ ಪರಾಕ್ರಮದ ಪರಿಣಾಮವಾಗಿ ಸಂಕಲ್ಪಿಸಿದ್ದ ಯಜ್ಞವನ್ನು ನಿರ್ವಿಘ್ನವಾಗಿ ಪೂರೈಸಿ, ನಾನಿಂದು ಸಿದ್ಧನಾಗಿರುವೆನು. ಈ ಗಿರಿವ್ರಜಪ್ರದೇಶದ ವಿಷಯವಾಗಿ ನೀನು ನನ್ನನ್ನು ಕೇಳಿದೆಯಲ್ಲವೇ? ನಾನೀಗ ಈ ಗಿರಿವ್ರಜದ ವಿಷಯವನ್ನೂ, ಹಾಗೂ ನನ್ನ ವಂಶಾವಳೀ ಮತ್ತು ಜನ್ಮದ ವಿಷಯವನ್ನೂ ನಿನಗೆ ವಿವರವಾಗಿ ಹೇಳಿರುವೆನು. ರಾಮ! ನಾನು ಕಥೆಯನ್ನು ಹೇಳುತ್ತಿದ್ದಂತೆ ಅರ್ಧರಾತ್ರಿಯೇ (ರಾತ್ರಿಯ ಮೊದಲನೆಯ ಯಾಮವೇ) ಕಳೆದುಹೋಯಿತು. ಪುನಃ ಮತ್ತಾವ ಪ್ರಶ್ನೆಯನ್ನೂ ಕೇಳಬೇಡ. ಏಕೆಂದರೆ : ರಾತ್ರಿಯಲ್ಲಿ ನಾವು ನಿದ್ದೆಮಾಡದಿದ್ದರೆ ದಾರಿ ನಡೆಯಲು ತೊಂದರೆಯಾಗಬಹುದು. ನಮ್ಮ ಮುಂದಿನ ಪ್ರಯಾಣಕ್ಕೆ ಯಾವ ವಿಧದಿಂದಲೂ ತೊಂದರೆಯಾಗಕೂಡದು. ಆದುದರಿಂದ ನೀನಿನ್ನು ನಿದ್ದೆಹೋಗು. ನಿನಗೆ ಮಂಗಳವಾಗಲಿ. ಆ ವೃಕ್ಷಗಳ ಸಮೂಹವನ್ನು ನೋಡು. ಯಾವ ಮರದ ಎಲೆಗಳೂ ಅಲುಗಾಡುತ್ತಿಲ್ಲ. ಮೃಗಪಕ್ಷಿಗಳೆಲ್ಲವೂ ಮಲಗಿ ನಿದ್ರೆಹೋಗಿವೆ. ರಾತ್ರಿಯ ಕತ್ತಲೆಯು ನಾಲ್ಕು ದಿಕ್ಕುಗಳಲ್ಲಿಯೂ ವ್ಯಾಪಿಸಿದೆ. ಸಂಧ್ಯಾಕಾಲವು* ಕಳೆದುಹೋಗುತ್ತಿದೆ. ಅಶ್ವಿನ್ಯಾದಿ ನಕ್ಷತ್ರಗಳಿಂದಲೂ, ತಾರೆಗಳ ಸಮೂಹ

ನಿಯಮವಿರುತ್ತದೆ. ಗಯೆಯಲ್ಲಿ ಶ್ರಾದ್ಧಮಾಡಿದರೆ ಪಿತೃದೇವತೆಗಳು ತೃಪ್ತರಾಗುವ ರೆಂದು ಸ್ಮೃತಿಗಳು ಸಾರುತ್ತವೆ. ವಿವೇಕಾನಂದರು ಕನ್ಯಾಕುಮಾರಿಯ ಸಮೀಪದಲ್ಲಿರುವ ಬಂಡೆಯ ಮೇಲೆ ಕುಳಿತಾಗಲೇ ಅವರಿಗೆ ವಿದೇಶಗಳಿಗೆ ಧರ್ಮಪ್ರಚಾರಕ್ಕಾಗಿ ಹೋಗಬೇಕೆಂಬ ಸ್ಫುರಣೆಯಾಯಿತು. ಇದಕ್ಕೆ ನಮ್ಮ ಹಿರಿಯರು 'ಸ್ಥಳ ಮಾಹಾತ್ಮೆ' ಎನ್ನುತ್ತಾರೆ.

* **ಸಂಧ್ಯಾ = ಸಮ್ಯಕ್ ಏಕಾಗ್ರತಾಂ ಪ್ರಾಪ್ನುವನ್ತಿ ಧಿಯಃ = ಚಿತ್ತವೃತ್ತಯಃ ಯಸ್ಯಾಂ ಸಾ ಸಂಧ್ಯಾ.** ಧ್ಯಾನಾಸಕ್ತರಾದವರ ಚಿತ್ತವನ್ನು ಏಕಾಗ್ರತೆಯಲ್ಲಿ ನಿಯೋಜಿಸುವ ಸಾಮರ್ಥ್ಯವಿರುವ ಕಾಲಕ್ಕೆ [ಹಗಲು ಮತ್ತು ರಾತ್ರಿಯ ಸಂಧಿಕಾಲ] ಸಂಧ್ಯಾ ಎಂದು ಹೆಸರು. ಆ ಕಾಲದಲ್ಲಿ ಮಾಡುವ ಧ್ಯಾನೋಪಾಸನೆಗಳು ಬಹುಬೇಗ ಸಿದ್ಧಿಸುವುವು. ಈ ಶ್ಲೋಕದಲ್ಲಿ "ವಿಸೃಜ್ಯತೇ ಸಂಧ್ಯಾ" ಎಂದು ಹೇಳಿರುವುದರಿಂದಲೂ ಮತ್ತು ಹುಣ್ಣಿಮೆಯ ದಿನ ಯಜ್ಞವನ್ನು ಮುಗಿಸಿ ಬಿದಿಗೆಯ

ದಿಂದಲೂ ಕೂಡಿರುವ ಈ ನಭೋಮಂಡಲವು ಸಹಸ್ರನೇತ್ರಗಳಿಂದ ಆವೃತ್ತವಾಗಿದೆಯೋ ಎನ್ನುವಂತೆ ಶೋಭಾಯಮಾನವಾಗಿದೆ. ಪ್ರಪಂಚದ ಕತ್ತಲೆಯನ್ನು ಹೋಗಲಾಡಿಸಲು ಸಮರ್ಥನಾದ ಶೀತಾಂಶುವಾದ ಚಂದ್ರನು ತನ್ನ ಕಾಂತಿಯಿಂದ ಜಗತ್ತಿನ ಸಕಲಪ್ರಾಣಿಗಳ ಮನಸ್ಸನ್ನೂ ಆಹ್ಲಾದ ಗೊಳಿಸುತ್ತಾ, ಉದಯಿಸುತ್ತಿದ್ದಾನೆ.* ರಾತ್ರಿಯಲ್ಲಿಯೇ ಸಂಚಾರವಿರುವ ಸರ್ವಭೂತಗಳೂ, ಸಕಲಪ್ರಾಣಿಗಳೂ, ಭಯಂಕರರಾದ ಮಾಂಸಾಶನರಾದ ಯಕ್ಷ-ರಾಕ್ಷಸರ ಸಮೂಹಗಳೂ ಇತ್ತಲತ್ತ ಸಂಚರಿಸುತ್ತಿವೆ."

ಮಹಾತೇಜಸ್ವಿಗಳಾದ ವಿಶ್ವಾಮಿತ್ರರು ಹೀಗೆ ಹೇಳಿ ವಿರಮಿಸಿದರು. ಕಥೆಯನ್ನು ಕೇಳುತ್ತಿದ್ದ ಋಷಿ-ಮಹರ್ಷಿಗಳೆಲ್ಲರೂ ಸಂತೋಷಭರಿತರಾಗಿ "ಸಾಧು" "ಸಾಧು" "ಇತಿಹಾಸವು ಬಹಳ ಸೊಗಸಾಗಿದೆ"–ಎಂದು ಶ್ಲಾಘನೆಮಾಡುತ್ತಾ ವಿಶ್ವಾಮಿತ್ರರನ್ನು ಅಭಿನಂದಿಸತೊಡಗಿದರು :

ಕುಶಿಕಾನಾಮಯಂ ವಂಶೋ ಮಹಾನ್ಧರ್ಮಪರಃ ಸದಾ ।
ಬ್ರಹ್ಮೋಪಮಾ ಮಹಾತ್ಮಾನಃ ಕುಶವಂಶ್ಯಾ ನರೋತ್ತಮಾಃ ॥೨೦॥

ವಿಶೇಷೇಣ ಭವಾನೇವ ವಿಶ್ವಾಮಿತ್ರ ಮಹಾಯಶಾಃ ।
ಕೌಶಿಕೀ ಸರಿತಾಂ ಶ್ರೇಷ್ಠಾ ಕುಲೋದ್ಯೋತಕರೀ ತವ ॥೨೧॥

"ಕುಶಿಕರ ಈ ವಂಶವು ಯಾವಾಗಲೂ ಧರ್ಮದ ಉತ್ಥಾನಕ್ಕಾಗಿಯೇ ಶ್ರಮಿಸುವ ರಾಜರುಗಳಿಂದ ಕೂಡಿದ ಮಹಾವಂಶವಾಗಿರುತ್ತದೆ. ಕುರು ವಂಶದ ಮಹಾತ್ಮರಾದ ರಾಜರು ನಿಶ್ಚಯವಾಗಿಯೂ ಬ್ರಹ್ಮನಿಗೆ ಸಮಾನರೆನಿ ಸಿದ್ದಾರೆ. ವಿಶ್ವಾಮಿತ್ರಮಹರ್ಷಿಗಳೇ! ನೀವೇನು ಸಾಮಾನ್ಯರಲ್ಲ. ಕ್ಷತ್ರಿಯ

ದಿನ ಪ್ರಯಾಣಮಾಡುವ ಸಂಪ್ರದಾಯವಿರುವುದರಿಂದಲೂ ಅರ್ಧರಾತ್ರವೆಂಬುದು ಪ್ರದೋಷಪರವಾದ ಅರ್ಥವೆಂದು ಒಬ್ಬ ವ್ಯಾಖ್ಯಾನಕಾರರು ಹೇಳುತ್ತಾರೆ. ಪೂರ್ವ ರಾತ್ರ-ಅಪರರಾತ್ರಗಳ ಮಧ್ಯದ ಸಂಧಿಕಾಲವೇ ಇಲ್ಲಿಯ ಸಂಧ್ಯಾಕಾಲವೆಂದು ವ್ಯಾಖ್ಯಾನ ಮಾಡಿರುತ್ತಾರೆ. ೧೪ನೆಯ ಶ್ಲೋಕದಲ್ಲಿ ಹೇಳಿರುವ "ಅರ್ಧರಾತ್ರ" ಶಬ್ದಕ್ಕೆ ಪ್ರಥಮ ಯಾಮವೆಂದು ಅರ್ಥಮಾಡುವುದು ಸೂಕ್ತವಾಗಿ ಕಾಣುತ್ತದೆ.

* ಈ ಶ್ಲೋಕದಿಂದ ವಿಶ್ವಾಮಿತ್ರ-ರಾಮ-ಲಕ್ಷ್ಮಣರು ಕೃಷ್ಣಪಕ್ಷದಲ್ಲಿ ಬಿದಿಗೆಯ ದಿನ ಪ್ರಯಾಣಮಾಡುತ್ತಿದ್ದರೆಂದು ತಿಳಿಯಬಹುದಾಗಿದೆ.

ರಾಗಿ ಜನಿಸಿದರೂ ಸುದೀರ್ಘಕಾಲ ಘೋರವಾದ ತಪಸ್ಸನ್ನು ಮಾಡಿ ಬ್ರಹ್ಮರ್ಷಿಗಳಾದ ಮಹಾಮಹಿಮರು ನೀವು. ನಿಮ್ಮ ವಂಶದ ಸ್ತ್ರೀಯರೂ ಸಾಮಾನ್ಯರಲ್ಲ. ಮಹಾಪತಿವ್ರತೆಯಾದ, ನಿಮ್ಮ ಕುಲದ ಉದ್ಧಾರಕಳಾದ ಸತ್ಯವತಿಯು ಕೌಶಿಕೀನದಿಯಾಗಿ ನದಿಗಳಲ್ಲಿ ಶ್ರೇಷ್ಠಳೆನಿಸಿ ಸಕಲಜಗತ್ತನ್ನೂ ತನ್ನ ಪವಿತ್ರೋದಕದಿಂದ ಉದ್ಧಾರಮಾಡುತ್ತಿದ್ದಾಳೆ."

ಹೀಗೆ ಮುನಿಪುಂಗವರಿಂದ ಪ್ರಶಂಸೆಮಾಡಲ್ಪಟ್ಟ ವಿಶ್ವಾಮಿತ್ರರು ಅಸ್ತಂಗತನಾದ ಸೂರ್ಯನಂತೆ ನಿದ್ದೆಹೋದರು. ಲಕ್ಷ್ಮಣಸಮೇತನಾದ ರಾಮನೂ ವಿಶ್ವಾಮಿತ್ರಮಹರ್ಷಿಗಳ ವಂಶದ ಚರಿತ್ರೆಯನ್ನು ಕೇಳಿ ನಸು ನಗುತ್ತಾ ಮಹರ್ಷಿಗಳನ್ನು ಪ್ರಶಂಸಿಸಿ, ಲಕ್ಷ್ಮಣನೊಡನೆ ಮಲಗಿದನು.

ಮುಗಿಯಿತು ೩೪ನೆಯ ಸರ್ಗವು ಮುಗಿಯಿತು.

ರಾಮ-ವಿಶ್ವಾಮಿತ್ರರ ಸಂವಾದ : ಗಂಗೆಯ ಜನ್ಮವೃತ್ತಾಂತವನ್ನು ತಿಳಿಯಲು ರಾಮನ ಕುತೂಹಲ : ವಿಶ್ವಾಮಿತ್ರರಿಂದ ಗಂಗಾ-ಉಮೆಯರ ಜನ್ಮಕಥನ

ಉಪಾಸ್ಯ ರಾತ್ರಿಶೇಷಂ ತು ಶೋಣಾಕೂಲೇ ಮಹರ್ಷಿಭಿಃ ।
ನಿಶಾಯಾಂ ಸುಪ್ರಭಾತಾಯಾಂ ವಿಶ್ವಾಮಿತ್ರೋಽಭ್ಯಭಾಷತ ॥೧॥

ವಿಶ್ವಾಮಿತ್ರರು ಮಹರ್ಷಿಗಳೊಡನೆಯೂ ರಾಮ-ಲಕ್ಷ್ಮಣರೊಡನೆಯೂ ಶೋಣಾನದಿಯ ತೀರದಲ್ಲಿ ರಾತ್ರಿಯ ಉಳಿದ ಭಾಗವನ್ನು ಕಳೆದು ಸುಪ್ರಭಾತವಾದನಂತರ ರಾಮನಿಗೆ ಹೇಳಿದರು :

ಸುಪ್ರಭಾತಾ ನಿಶಾ ರಾಮ ಪೂರ್ವಾ ಸಂಧ್ಯಾ ಪ್ರವರ್ತತೇ ।
ಉತ್ತಿಷ್ಠೋತ್ತಿಷ್ಠ ಭದ್ರಂ ತೇ ಗಮನಾಯಾಭಿರೋಚಯ ॥೨॥

"ರಾಮ! ರಾತ್ರಿಯು ಕಳೆದು ಸುಪ್ರಭಾತವಾಗಿದೆ. ಪ್ರಾತಃಸ್ಸಂಧ್ಯಾ ಕಾಲವು ಪ್ರಾಪ್ತವಾಗಿದೆ. ಏಳು ; ಎದ್ದೇಳು ರಾಮ! ನಿನಗೆ ಮಂಗಳವಾಗಲಿ. ಪ್ರಾತಃಸಂಧ್ಯಾದಿಗಳನ್ನು ಮುಗಿಸಿ ಪ್ರಯಾಣಕ್ಕೆ ಸಿದ್ಧನಾಗು."

ಶ್ರೀರಾಮನು ವಿಶ್ವಾಮಿತ್ರರ ಸುಮಧುರವಾದ ಆ ಮಾತುಗಳನ್ನು ಕೇಳಿ ಒಡನೆಯೇ ಹಾಸಿಗೆಯಿಂದ ಮೇಲೆದ್ದು, ಸ್ನಾನ-ಸಂಧ್ಯಾದಿಕ್ರಿಯೆಗಳನ್ನು ಯಥಾವಿಧಿಯಾಗಿ ಮುಗಿಸಿ, ವಿಶ್ವಾಮಿತ್ರರ ಆಜ್ಞೆಯಂತೆ ಪ್ರಯಾಣಕ್ಕೆ ಸಿದ್ಧನಾಗಿ ಹೇಳಿದನು :

"ಬ್ರಹ್ಮರ್ಷಿಗಳೇ! ಶೋಣಾನದಿಯ ಈ ಮಂಗಳೋದಕವು ಹೆಚ್ಚು ಆಳವಾಗಿಲ್ಲ. ಮೇಲಾಗಿ ವಿಶೇಷವಾದ ಮಳಲಿನಿಂದ ಅಲಂಕೃತವಾಗಿದೆ. ಈ ನದಿಯನ್ನು ದಾಟಲು ದೋಣಿಯು ಬೇಕಾಗಿಲ್ಲ. ಯಾವ ಮಾರ್ಗದಿಂದ ಈ ನದಿಯನ್ನು ದಾಟೋಣ?"

ರಾಮನಿಂದ ಹೀಗೆ ಪ್ರಶ್ನಿಸಲ್ಪಟ್ಟ ವಿಶ್ವಾಮಿತ್ರರು ಹೇಳಿದರು : "ರಾಮ! ಇಲ್ಲಿ ಕಾಣುತ್ತಿರುವ ಈ ಮಾರ್ಗದಿಂದಲೇ ಮಹರ್ಷಿಗಳು ನದಿಯನ್ನು ಯಾವಾಗಲೂ ದಾಟುತ್ತಾರೆ. ಇದೇ ಮಾರ್ಗದಿಂದಲೇ ಈ ಮಹಾ ನದಿಯನ್ನು ದಾಟಬೇಕೆಂಬುದು ನನ್ನ ನಿಶ್ಚಯವೂ ಆಗಿದೆ."

ವಿಶ್ವಾಮಿತ್ರರು ಹೇಳಿದಂತೆಯೇ ರಾಮ-ಲಕ್ಷ್ಮಣರು ಮತ್ತು ವಿಶ್ವಾಮಿತ್ರಪುರಸ್ಸರರಾದ ಮಹರ್ಷಿಗಳು ಶೋಣಾನದಿಯನ್ನು ದಾಟಿ ಮುಂದೆ ಬಹಳ ದೂರ ನಡೆದು, ಮಧ್ಯಾಹ್ನದ ವೇಳೆಗೆ ಎಲ್ಲ ನದಿಗಳಿಗೂ ಶ್ರೇಷ್ಠತಮಳಾದ, ಅನೇಕಾನೇಕ ಋಷಿ-ಮಹರ್ಷಿಗಳಿಂದ ಸಂಸೇವ್ಯಮಾನಳಾದ ಜಾಹ್ನವೀನದಿಯನ್ನು ಸಂದರ್ಶಿಸಿದರು. ಪುಣ್ಯಕರವಾದ ತೀರ್ಥದಿಂದ ಕೂಡಿರುವ, ಮಹಾಪುಣ್ಯಶಾಲಿನಿಯಾದ, ಹಂಸ-ಸಾರಸಪಕ್ಷಿಗಳಿಂದ ಸಂಸೇವ್ಯಮಾನಳಾದ, ಜಾಹ್ನವೀನದಿಯನ್ನು ಸಂದರ್ಶಿಸಿ ರಾಮ-ಲಕ್ಷ್ಮಣರೂ ಮತ್ತು ವಿಶ್ವಾಮಿತ್ರಪುರಸ್ಸರರಾದ ಮಹರ್ಷಿಗಳೂ ಆನಂದಭರಿತರಾದರು. ಗಂಗಾನದಿಯ ತೀರದಲ್ಲಿಯೇ ಅವರೆಲ್ಲರೂ ಬಿಡಾರಮಾಡಿದರು. ಪವಿತ್ರತಮಳಾದ ಗಂಗಾನದಿಯಲ್ಲಿ ಮಿಂದು, ಯಥಾಶಾಸ್ತ್ರವಾಗಿ ಪಿತೃದೇವತೆಗಳಿಗೆ ತರ್ಪಣಾದಿಗಳನ್ನಿತ್ತು, ಅಗ್ನಿಹೋತ್ರಾದಿಗಳನ್ನು ಮಾಡಿ *ಅಮೃತಸ್ವರೂಪ

---

* 'ಯಜ್ಞಶಿಷ್ಟಾಮೃತಭುಜೋ ಯಾನ್ತಿ ಬ್ರಹ್ಮಸನಾತನಮ್' ಎಂಬ ಸ್ಮೃತ್ಯುಕ್ತಿಯಂತೆ ಯಜ್ಞಶೇಷದ ಹವಿಸ್ಸಿಗೆ ಅಮೃತವೆಂದೇ ಹೆಸರು. ಈ ಅಮೃತವನ್ನು ಭುಂಜಿಸಿದವರು ಸನಾತನವಾದ ಬ್ರಹ್ಮಲೋಕವನ್ನು ಪಡೆಯುತ್ತಾರೆ.

ವಾದ ಯಜ್ಞಶೇಷವನ್ನು (ಹವಿಸ್ಸನ್ನು) ಭುಂಜಿಸಿ, ಜಾಹ್ನವೀನದಿಯ ಪರಿಶುದ್ಧ ವಾದ ತೀರಪ್ರದೇಶದಲ್ಲಿದ್ದ ಆಶ್ರಮದಲ್ಲಿ ಮಹರ್ಷಿಗಳು ಸಂತುಷ್ಟಹೃದಯ ರಾಗಿ ವಿಶ್ವಾಮಿತ್ರಮಹರ್ಷಿಗಳನ್ನು ಸುತ್ತುವರಿದು ಕುಳಿತರು. ರಾಮ-ಲಕ್ಷ್ಮಣರೂ ಶಿಷ್ಯರು ಕುಳಿತುಕೊಳ್ಳಬೇಕಾದ ಸ್ಥಳದಲ್ಲಿ ಕುಳಿತರು. ಸಂತುಷ್ಟ ಹೃದಯನಾದ ಶ್ರೀರಾಮನು ವಿಶ್ವಾಮಿತ್ರರನ್ನು ಕೇಳಿದನು :

"ಮಹರ್ಷಿಗಳೇ! ಮೂರು ಲೋಕಗಳಲ್ಲಿಯೂ ಪ್ರವಹಿಸುವ ಗಂಗಾ ನದಿಯ ದಿವ್ಯಚರಿತ್ರೆಯನ್ನು ಕೇಳಬಯಸುತ್ತೇನೆ. ಈ ಪವಿತ್ರತಮಳಾದ ಗಂಗೆಯು ಮೂರು ಲೋಕಗಳನ್ನೂ ಆಕ್ರಮಿಸಿ ಕಡೆಗೆ ನದೀ-ನದ ಗಳೊಡೆಯನಾದ ಸಮುದ್ರರಾಜನನ್ನು ಹೇಗೆ ಸೇರಿದಳೆಂಬುದನ್ನು ದಯೆಯಿಟ್ಟು ವಿವರವಾಗಿ ತಿಳಿಯಪಡಿಸಿರಿ."

ಗಂಗಾವತರಣವನ್ನು ಹೇಳಲು ಶ್ರೀರಾಮನಿಂದ ಪ್ರೇರಿತರಾದ, ಮಹಾ ಮುನಿಗಳಾದ ವಿಶ್ವಾಮಿತ್ರರು–ಗಂಗಾದೇವಿಯು ಜಲರೂಪದಿಂದ ಮೂರು ಲೋಕಗಳಲ್ಲಿಯೂ ಪ್ರವಹಿಸಿದ ಕಾರಣವನ್ನೂ ಮತ್ತು ಅವಳ ಜನ್ಮಚರಿತ ವನ್ನೂ ಹೇಳಲು ಉಪಕ್ರಮಿಸಿದರು :

"ರಾಮ! ಲೋಹಗಳಿಂದಲೂ, ಗೈರಿಕಾದಿಧಾತುಗಳಿಂದಲೂ ಪರಿ ಪೂರ್ಣನಾಗಿರುವ, ಮಹಾತ್ಮನಾದ ಹಿಮವಂತನೆಂಬ ಪರ್ವತರಾಜನಿರು ವನು. ಅವನಿಗೆ ತ್ರಿಭುವನಗಳಲ್ಲಿಯೇ ಅತಿಶಯವಾದ ರೂಪ-ಲಾವಣ್ಯ ಗಳಿಂದ ಕೂಡಿದ, ಅಪ್ರತಿಮಸೌಂದರ್ಯಾತಿಶಯವುಳ್ಳ ಇಬ್ಬರು ಕನ್ಯೆಯ ರಿರುವರು. ಸುಂದರವಾದ ಕಟಿಪ್ರದೇಶವುಳ್ಳ, ಮೇರುಪರ್ವತರಾಜನ ಮಗಳಾದ, ಮನೋಹರಳಾದ, ಹಿಮವಂತನ ಧರ್ಮಪತ್ನಿಯಾದ ಮೇನೆಯು ಆ ಹೆಣ್ಣುಮಕ್ಕಳ ತಾಯಿಯು. ಮೇನಾದೇವಿಯಲ್ಲಿ ಹಿಮವಂತನಿಗೆ ಗಂಗೆಯು ಹಿರಿಯಮಗಳಾಗಿ ಹುಟ್ಟಿದಳು. 'ಉಮಾ' ಎಂಬ ಕನ್ಯಾಮಣಿಯು ಹಿಮವಂತನಿಗೆ ಮೇನೆಯಲ್ಲಿ ದ್ವಿತೀಯಪುತ್ರಿಯಾಗಿ ಜನಿಸಿದಳು. ಇಬ್ಬರು ಹೆಣ್ಣುಮಕ್ಕಳೂ ಹುಟ್ಟಿದನಂತರ ತ್ರಿಲೋಕಗಾಮಿನಿಯಾದ, ಹಿಮವಂತನ ಹಿರಿಯಮಗಳಾದ ಗಂಗಾದೇವಿಯನ್ನು–ದೇವತೆಗಳ ಕಾರ್ಯಸಾಧನೆಗಾಗಿ ಕಳು ಹಿಸಿಕೊಡಬೇಕೆಂದು–ಸರ್ವದೇವತೆಗಳೂ ಹಿಮವಂತನನ್ನು ಯಾಚಿಸಿದರು.

ಲೋಕಪಾವನೆಯಾದ, ಸ್ವೇಚ್ಛಾಮಾರ್ಗಗಾಮಿನಿಯಾದ, ಮಗಳಾದ ಗಂಗಾ ದೇವಿಯನ್ನು ಮೂರು ಲೋಕಗಳಿಗೂ ಹಿತವನ್ನುಂಟುಮಾಡುವ ಅಪೇಕ್ಷೆ ಯಿಂದ ಹಿಮವಂತನು ದೇವತೆಗಳಿಗೆ ದಾನವಾಗಿ ಕೊಟ್ಟುಬಿಟ್ಟನು. ಮೂರು ಲೋಕಗಳ ಹಿತಾಕಾಂಕ್ಷಿಗಳಾದ ದೇವತೆಗಳು ತಾವು ಕೃತಾರ್ಥರಾದೆವೆಂಬ ಆತ್ಮಸಂತೋಷದಿಂದ ಕೂಡಿ ತ್ರೈಲೋಕ್ಯದ ಹಿತಕ್ಕೋಸ್ಕರ ಹಿಮವಂತನ ಮಗಳನ್ನು ಪ್ರತಿಗ್ರಹಿಸಿ, ಬ್ರಹ್ಮಲೋಕಕ್ಕೆ ಗಂಗೆಯೊಡನೆ ತೆರಳಿದರು.* ಹಿಮವಂತನಿಗೆ ಗಂಗಾದೇವಿಯಲ್ಲದೇ ಉಮಾದೇವಿಯೆಂಬ ಮತ್ತೊಬ್ಬ ಮಗಳಿರುವಳೆಂದು ಹೇಳಿದೆನಲ್ಲವೇ? ಅವಿವಾಹಿತಳಾದ ತಪೋಧನಳಾದ ಉಮಾದೇವಿಯು ಸಕಲಲೋಕವಂದ್ಯನಾದ ಶಿವನನ್ನೇ ಪತಿಯನ್ನಾಗಿ ವರಿಸಬೇಕೆಂದು ದೃಢಸಂಕಲ್ಪಮಾಡಿ ಉಗ್ರವಾದ ತಪಸ್ಸನ್ನು ಮಾಡಿದಳು.

---

* ಹಿಮವಂತನ ಹಿರಿಯ ಮಗಳಾದ ಗಂಗೆಯು ಹುಟ್ಟುವಾಗಲೇ ನದೀರೂಪದಲ್ಲಿದ್ದಳೇ? ಅಥವಾ ಅನಂತರದಲ್ಲಿ ನದೀರೂಪವಾಗಿ ಪರಿವರ್ತಿತಳಾದಳೇ? ಎಂಬ ಜಿಜ್ಞಾಸೆಗೆ ಉತ್ತರವನ್ನು ನಾವು ಪುರಾಣಾಂತರಗಳಲ್ಲಿ ಕಾಣಬಹುದಾಗಿದೆ. ತಾರಕಾಸುರನನ್ನು ಸಂಹಾರಮಾಡಲು ಷಣ್ಮುಖನ ಸೃಷ್ಟಿಯಾಗಬೇಕಾಯಿತು. ಶಿವತೇಜಸ್ಸನ್ನು ಧರಿಸಲು ಸಮರ್ಥಳಾದ ಮಹಾಮಾತೆಯು ಯಾರೆಂಬುದನ್ನು ದೇವತೆಗಳು ಸಮಾಲೋಚಿಸಿ, ಹಿಮವಂತನ ಹಿರಿಯ ಮಗಳಾದ ಕುಟಿಲೆಯೇ ಶಿವತೇಜಸ್ಸನ್ನು ಧರಿಸಲು ಸಮರ್ಥಳೆಂದು ಹಿಮವಂತನ ಬಳಿಗೆ ಬಂದು, ಅವನನ್ನು ಯಾಚಿಸಿ ಕುಟಿಲೆಯನ್ನು ಬ್ರಹ್ಮಲೋಕಕ್ಕೆ ಕರೆದೊಯ್ದರು. ಬ್ರಹ್ಮನು ಕುಟಿಲೆಯನ್ನು ನೋಡಿ–"ಇವಳು ಶಿವತೇಜಸ್ಸನ್ನು ಧಾರಣೆ ಮಾಡಲು ಅಸಮರ್ಥಳು"–ಎಂದು ಹೇಳಿದನು. ಕುಟಿಲೆಯು–'ನಾನು ಧರಿಸಬಲ್ಲೆನು' ಎಂದು ಹೇಳಿದರೂ ಬ್ರಹ್ಮನು ಪರಿಗಣಿಸದೆ–"ಜಲರೂಪಾ ಭವ"–ನೀನು ಜಲರೂಪಳಾಗು–ಎಂದು ಶಾಪವಿತ್ತನು. ಕುಟಿಲೆಯು ಜಲರೂಪಳಾಗಿ ವಿಷ್ಣುಪದೀ ಎಂಬ ಅಭಿಧಾನವನ್ನು ಪಡೆದಳು. ಅದರಿಂದಲೇ ಮುಂದೆ ಶಿವತೇಜಸ್ಸನ್ನು ಧರಿಸುವ ಸಾಮರ್ಥ್ಯವೂ ಅವಳಿಗುಂಟಾಯಿತು. **ವಿಷ್ಣ್ವಂಘ್ರಿಣಾ ಪ್ರಸರತಾ ಕಟಾಹೇ ಭೇದಿತೇಽಮ್ಬರಾತ್ ಛ ಕುಟಿಲಾ ವಿಷ್ಣುಪಾದಾನ್ತಾತ್ಪಾತಾಕುಲಿತಾ ತತಃ। ತಸ್ಮಾದ್ವಿಷ್ಣುಪದೀಖ್ಯಾತಾ....."** ಪ್ರಸರಿಸುತ್ತಿರುವ ವಿಷ್ಣುವಿನ ಪಾದದಿಂದ ಬ್ರಹ್ಮಾಂಡ ಕಟಾಹವು ಒಡೆಯಲು, ವಿಷ್ಣುಪಾದದಿಂದ ಆಕ್ರಮಿಸಲ್ಪಟ್ಟ ಆಕಾಶದಿಂದ ಕುಟಿಲೆಯು ('ಜಲರೂಪಿಣಿ') ಕೆಳಗೆ ಬಿದ್ದು 'ವಿಷ್ಣುಪದೀ' ಎನಿಸಿಕೊಂಡಳು.

(ವಾಮನಪುರಾಣ)

ಉಗ್ರತಪಸ್ವಿನಿಯಾದ, ಸರ್ವಲೋಕನಮಸ್ಕೃತಳಾದ ಉಮಾದೇವಿಯನ್ನು ಹಿಮವಂತನು–ಅವಳ ತಪಸ್ಸಿಗೆ ಮೆಚ್ಚಿ ಸುಪ್ರೀತನಾಗಿ ಬಂದ ರೂಪಸಂಪನ್ನನಾದ ಪರಮೇಶ್ವರನಿಗೆ ವಿವಾಹಮಾಡಿಕೊಟ್ಟನು. ನದಿಗಳಿಗೆಲ್ಲಾ ಶ್ರೇಷ್ಠತಮಳಾದ ಗಂಗಾದೇವಿ ಮತ್ತು ತ್ರೈಲೋಕ್ಯಮಾತೆಯಾದ ಉಮಾದೇವಿ–ಈ ಇಬ್ಬರು ಹಿಮವಂತನ ಹೆಣ್ಣುಮಕ್ಕಳನ್ನು ಸರ್ವಲೋಕದ ಜನರೂ ಪೂಜಿಸುತ್ತಾರೆ. ತ್ರಿಪಥಗಾಮಿನಿಯಾದ ಗಂಗಾದೇವಿಯು ಮೊದಲು ಯಾವ ಕಾರಣದಿಂದ ಆಕಾಶಮಾರ್ಗಕ್ಕೆ ತೆರಳಿದಳು ಎಂಬುದನ್ನು ನಿನಗೆ ಹೇಳಿರುವೆನು. ಹಿಮವಂತನ ಮಗಳಾದ, ಪಾಪಪರಿಹಾರಕಳಾದ, ಮನೋಹರೆಯಾದ ಈ ಗಂಗೆಯೇ ದೇವಲೋಕಕ್ಕೆ ಹೋಗಿ 'ದೇವನದೀ' ಎನಿಸಿಕೊಂಡಳು.

೩೫ನೆಯ ಸರ್ಗವು ಮುಗಿಯಿತು.

ಬಾಲಕಾಂಡ ೩೬ನೆಯ ಸರ್ಗ

ದೇವತೆಗಳು ಶಿವ-ಪಾರ್ವತಿಯರನ್ನು ಸುರತಕ್ರೀಡೆಯಿಂದ ವಿಮುಖರನ್ನಾಗಿ ಮಾಡಿದುದು : ದೇವತೆಗಳಿಗೂ ಮತ್ತು ಭೂದೇವಿಗೂ ಉಮಾದೇವಿಯ ಶಾಪ

ಉಕ್ತವಾಕ್ಯೇ ಮುನೇ ತಸ್ಮಿನ್ನುಭೌ ರಾಘವಲಕ್ಷ್ಮಣೌ ।
ಅಭಿನನ್ದ್ಯ ಕಥಾಂ ವೀರಾವೂಚತುರ್ಮುನಿಪುಙ್ಗವಮ್ ॥೧॥

ವಿಶ್ವಾಮಿತ್ರಮಹರ್ಷಿಗಳು ಇಷ್ಟು ಹೇಳಿ ವಿರಮಿಸಿದರು. ಶ್ರೀರಾಮ-ಲಕ್ಷ್ಮಣರಿಬ್ಬರೂ ಗಂಗೆಯ ಕಥೆಯನ್ನು ಪ್ರಶಂಸೆಮಾಡುತ್ತಾ ಮುನಿಪುಂಗವರಿಗೆ ಹೇಳಿದರು :

"ಮಹರ್ಷಿಗಳೇ! ಧರ್ಮಮೂಲವಾದ, ಅತಿಶ್ರೇಷ್ಠವಾದ, ಪರಮ ಪವಿತ್ರವಾದ, ಹಿಮವಂತನ ಹಿರಿಯ ಮಗಳಾದ ಗಂಗಾದೇವಿಯ ಕಥೆಯನ್ನು ನೀವೀಗ ಹೇಳಿದಿರಿ. ಆದರೆ ಈ ಸಂಕ್ಷೇಪವಾದ ಕಥಾಶ್ರವಣದಿಂದ ನಮಗೆ ತೃಪ್ತಿಯುಂಟಾಗಿಲ್ಲ. ಮಹಾಮಹಿಮಳಾದ ಗಂಗಾದೇವಿಯು ದೇವಲೋಕಕ್ಕೆ ಹೇಗೆ ಹೋದಳು? ದೇವಲೋಕದಿಂದ ಮನುಷ್ಯಲೋಕಕ್ಕೆ ಹೇಗೆ ಬಂದಳು? ಎಂಬುದೆಲ್ಲವನ್ನೂ ವಿಸ್ತಾರವಾಗಿಯೇ ಹೇಳಿರಿ. ಸರ್ವಜ್ಞರಾದ

ತಮಗೆ ಈ ಚರಿತ್ರೆಯ ವಿವರಣೆಯು ಪೂರ್ಣವಾಗಿ ತಿಳಿದಿರುವುದು. ಲೋಕ ಪಾವನಿಯಾದ ಗಂಗಾದೇವಿಯು ಯಾವ ಕಾರಣದಿಂದಾಗಿ ಮೂರು ಮಾರ್ಗ ಗಳಿಂದ ಪ್ರವಹಿಸಿದಳು? ತ್ರಿಪಥಗೆಯಾದ ಗಂಗಾದೇವಿಯು ಎಲ್ಲ ನದಿ ಗಳಿಗೂ ಶ್ರೇಷ್ಠತಮಳಾದ ನದಿಯೆಂದು ಹೇಗೆ ಪ್ರಸಿದ್ಧಳಾದಳು? ಮೂರು ಲೋಕಗಳಲ್ಲಿಯೂ ಅವಳಿಗೆ ಈ ವಿಧವಾದ ಕೀರ್ತಿಯುಂಟಾಗಲು ಅವಳು ಮಾಡಿದ ಕಾರ್ಯಗಳಾದರೂ ಯಾವುವು?–ಇವುಗಳೆಲ್ಲವನ್ನೂ ದಯ ಮಾಡಿ ಹೇಳಿರಿ."

ರಾಮ-ಲಕ್ಷ್ಮಣರು ವಿಶ್ವಾಮಿತ್ರರನ್ನು ಹೀಗೆ ಕೇಳಲಾಗಿ, ತಪೋಧನರಾದ ವಿಶ್ವಾಮಿತ್ರರು ಋಷಿಗಳ ಮಧ್ಯದಲ್ಲಿ ಗಂಗಾವತರಣದ ಕಥೆಯನ್ನು ವಿವರವಾಗಿ ಹೇಳತೊಡಗಿದರು :

"ರಾಮ! ಪೂರ್ವದಲ್ಲಿ ತ್ರಿಲೋಕವಂದ್ಯನಾದ, ಮಹಾತಪಸ್ವಿಯಾದ ನೀಲಕಂಠನು ಉಮಾದೇವಿಯನ್ನು ಮದುವೆಯಾದನು. ತನ್ನ ಪತ್ನಿಯನ್ನು ಕಂಡೊಡನೆಯೇ ಪರಮೇಶ್ವರನಿಗೆ ಕಾಮೇಚ್ಛೆಯುಂಟಾಗಿ ಉಮಾದೇವಿ ಯೊಡನೆ ಸುರತಕ್ರೀಡೆಯಾಡಲು ಉಪಕ್ರಮಿಸಿದನು. ಧೀಮಂತನಾದ, ದೇವ ದೇವನಾದ, ಮಹಾದೇವನಾದ ಶಿತಿಕಂಠನಿಗೆ ದಿವ್ಯಶತವರ್ಷಗಳು ಸುರತ ಕ್ರೀಡೆಯಲ್ಲಿಯೇ ಕಳೆದುಹೋದುವು. ತಾರಕಾಸುರನ ಸಂಹಾರವನ್ನು ಸಾಧಿಸುವ ಸಲುವಾಗಿ ಉಮಾ-ಮಹೇಶ್ವರರ ವಿವಾಹವಾಯಿತು. ಪರಶಿವನು ಉಮೆಯೊಡನೆ ದಿವ್ಯಶತವರ್ಷಗಳು ಸುರತಕ್ರೀಡೆಯಲ್ಲಿ ನಿರತನಾಗಿದ್ದರೂ ಪಾರ್ವತಿಯಲ್ಲಿ ಮಗನು ಹುಟ್ಟಲಿಲ್ಲ. ದೇವತೆಗಳಿಗೂ ಇದೊಂದು ಸಮ ಸ್ಯೆಯೇ ಆಯಿತು. ಪಿತಾಮಹಪ್ರಭೃತಿಗಳಾದ ಸಕಲದೇವತೆಗಳೂ ಉದ್ವಿಗ್ನ ರಾದರು. ನೂರು ವರ್ಷಗಳ ಸುರತಕ್ರಿಯೆಯಿಂದಲೂ ಪ್ರಾದುರ್ಭೂತ ವಾಗದ ಮಹಾತೇಜಸ್ಸು (ರೇತಸ್ಸು) ಒಂದು ವೇಳೆ ಸ್ಖಲನವಾಗಿಬಿಟ್ಟರೆ–ಆ ಮಹಾತೇಜಸ್ಸನ್ನು ಧರಿಸಲು ಸಮರ್ಥರಾರೆಂಬುದೇ ಅವರ ಉದ್ವಿಗ್ನತೆಗೆ ಮುಖ್ಯಕಾರಣ. ಶಿವನ ಮಹಾತೇಜಸ್ಸು ಹೊರಬರಬೇಕು. ಅದನ್ನು ಧರಿಸಲು ಸಮರ್ಥರಾರೆಂಬುದನ್ನು ತಿಳಿಯಬೇಕು ಮತ್ತು ಅದೇ ಮಹಾತೇಜಸ್ಸಿನಿಂದ ತಾರಕಾಸುರಸಂಹಾರಕನ ಜನನವಾಗಬೇಕು. ಈ ದೇವರಹಸ್ಯವನ್ನು ತಿಳಿಯುವ ಸಲುವಾಗಿ ಬ್ರಹ್ಮಪ್ರಮುಖರಾದ ದೇವತೆಗಳು ಶಿವನ ಸಮೀಪಕ್ಕೆ ಹೋಗಿ ಹೇಳಿದರು :

"ದೇವದೇವನೇ! ಮಹಾದೇವ! ತ್ರಿಭುವನಗಳ ಹಿತರಕ್ಷಣೆ ಯಲ್ಲಿಯೇ ಯಾವಾಗಲೂ ನಿರತನಾಗಿರುವ ಪರಮೇಶ್ವರನೇ! ದೇವತೆ ಗಳಾದ ನಾವು ನಿನ್ನ ಪಾದಮುಟ್ಟಿ ಮಾಡುತ್ತಿರುವ ಪ್ರಣಾಮಕ್ಕೆ ಪ್ರಸನ್ನನಾಗು. ಮಹಾನುಭಾವ! ಸುರೋತ್ತಮ! ನಿನ್ನ ದಿವ್ಯತೇಜಸ್ಸನ್ನು ಚತುರ್ದಶಭುವನ ಗಳಲ್ಲಿ ಯಾರೂ ಧರಿಸಲಾರರು. ಆದುದರಿಂದ ನೀನೀಗಲೇ ದೇವಿಯೊಡನೆ ಸುರತಕ್ರೀಡೆಯನ್ನು ನಿಲ್ಲಿಸಿ, ಉಮಾಸಮೇತನಾಗಿ ಲೋಕಗಳ ಹಿತದ ಆಶಯದಿಂದ ಮಹಾತೇಜಸ್ವಿಯಾದ ಪುತ್ರನ ಉತ್ಪತ್ತಿಗೆ ಕಾರಣವಾಗುವ ದಿವ್ಯವಾದ ರೇತಸ್ಸನ್ನು ನಿನ್ನ ತೇಜೋಮಯವಾದ ಶರೀರದಲ್ಲಿಯೇ ಧರಿಸು. ಈ ಮೂರು ಲೋಕಗಳನ್ನೂ ಸಂರಕ್ಷಿಸು. ನಿನ್ನ ದಿವ್ಯತೇಜಸ್ಸಿನ ವಿಸರ್ಜನೆ ಯಿಂದ ಸಕಲಲೋಕಗಳ ವಿನಾಶಕ್ಕೆ ಕಾರಣನಾಗಬೇಡ."*

ದೇವತೆಗಳ ಈ ಮಾತನ್ನು ಕೇಳಿ ದಯಾಮಯನಾದ ಸರ್ವಲೋಕೇ ಶ್ವರನಾದ ಶಿವನು " ಬಾಢಂ " "ಹಾಗೆಯೇ ಆಗಲಿ" ಎಂದು ಸಮ್ಮತಿಸಿ ಪುನಃ ಹೇಳಿದನು :

"ದೇವತೆಗಳೇ! ನಿಮ್ಮ ಪ್ರಾರ್ಥನೆಯಂತೆ ನನ್ನ ರೇತಸ್ಸನ್ನು ತೇಜೋ ಮಯವಾದ ನನ್ನ ಶರೀರದಲ್ಲಿಯೇ ಧಾರಣೆಮಾಡುತ್ತೇನೆ. ಇಷ್ಟು ಮಾತ್ರ ವಲ್ಲ ; ಉಮೆಯೂ ಅಗ್ನಿರೂಪವಾದ[1] ತನ್ನ ತೇಜಸ್ಸನ್ನು ತೇಜೋಮಯ ವಾದ ತನ್ನ ಶರೀರದಲ್ಲಿಯೇ ಧರಿಸುತ್ತಾಳೆ. ನಮ್ಮ ರೇತಸ್ಸಿನ ನಿರೋಧ ದಿಂದಾಗಿ ಸಕಲಭುವನಗಳೂ ಸುಖವನ್ನು ಪಡೆಯಲಿ. ಆದರೆ ನೂರು ವರ್ಷ

---

* ದೇವತೆಗಳು ರೇತೋವಿಮುಂಚನದ ವಿಷಯವಾಗಿ ಇಷ್ಟು ಉದ್ವಿಗ್ನರಾಗಬೇಕೇ? ಹಾಗಾದರೆ ಆ ರೇತಸ್ಸಿನ ಸ್ವರೂಪವೇನು? ಎಂಬುದಕ್ಕೆ ಉತ್ತರವಾಗಿ ಶ್ರುತಿವಾಕ್ಯವು ಹೀಗಿರುವುದು : 'ಯದೇತತ್ಪುರುಷೇ ರೇತೋ ಭವತಿ ಆದಿತ್ಯಸ್ಯ ತದ್ರೂಪಮ್' ಪರಮೇಶ್ವರನ ರೇತಸ್ಸು ಆದಿತ್ಯಸ್ವರೂಪವಾಗಿರುವುದು. ಅಂತಹ ರೇತಸ್ಸಿನ ಉತ್ಸರ್ಜನೆಯಿಂದ ಮೂರು ಲೋಕಗಳೂ ಸುಟ್ಟುಹೋಗುವುವು. [ಜಗನ್ನಿಯಾಮಕನಾದ ಪರಮೇಶ್ವರನಿಗೆ ಸೂರ್ಯನು ರೇತಸ್ಸಿನ ರೂಪದಲ್ಲಿರುವನು. ಅದು ಸ್ಖಲನವಾಯಿತೆಂದರೆ ಸಕಲಭುವನಗಳೂ ವಿನಾಶಹೊಂದುವುವು.] ಇದು ವ್ಯಾಖ್ಯಾನಕಾರರ ಅಭಿಪ್ರಾಯವಾಗಿದೆ.

1 'ಯದೇತತ್ ಸ್ತ್ರಿಯಾಂ ಲೋಹಿತಂ ಭವತಿ ಅಗ್ನೇಸ್ತದ್ರೂಪಮ್' ಸ್ತ್ರೀಯ ರಲ್ಲಿರುವ ಲೋಹಿತವು ಅಗ್ನಿರೂಪವಾಗಿರುತ್ತದೆ.

ಗಳ ಸುರತಕ್ರೀಡೆಯಿಂದಾಗಿ ನನ್ನ ಅನರ್ಘವಾದ ದಿವ್ಯರೇತಸ್ಸು ಪರಿಭ್ರಮಣ ಗೊಂಡಿರುವುದು. ದೇವಕಾರ್ಯದ ಪೂರಣಕ್ಕಾಗಿಯೇ ಮಹಾತೇಜಸ್ವಿಯಾದ ಪುತ್ರರೂಪದಲ್ಲಿ ಪ್ರಾದುರ್ಭಾವವಾಗಲಿರುವ ಈ ದಿವ್ಯರೇತಸ್ಸು ನನ್ನಲ್ಲಿಯೇ ಹೆಚ್ಚು ಕಾಲ ಉಳಿಯಲಾರದು. ಆದುದರಿಂದ ಈ ದಿವ್ಯ ರೇತಸ್ಸನ್ನು ಧರಿಸಲು ಸಮರ್ಥರಾರೆಂಬುದನ್ನು ನೀವೇ ಸೂಚಿಸಿರಿ."

ಮಹಾದೇವನು ದೇವತೆಗಳಿಗೆ ಹೀಗೆ ಹೇಳಲಾಗಿ ದೇವತೆಗಳು ತಮ್ಮ ಲ್ಲಿಯೇ ಕ್ಷಣಕಾಲ ಯೋಚಿಸಿ ವೃಷಭಧ್ವಜನಾದ ಪರಶಿವನಿಗೆ ಹೇಳಿದರು :

"ಮಹಾದೇವ! ಸಕಲವನ್ನೂ ಧಾರಣೆ ಮಾಡುವ ಸಾಮರ್ಥ್ಯವಿರುವ ಈ ವಸುಂಧರೆಯು ಕ್ಷುಭಿತವಾದ ನಿನ್ನ ದಿವ್ಯರೇತಸ್ಸನ್ನು ಧರಿಸಲು ಸಿದ್ಧಳಾ ಗಿರುವಳು."

ದೇವತೆಗಳು ಶಿವನ ಪ್ರಶ್ನೆಗೆ ಹೀಗೆ ಹೇಳಲು ಸುರೇಶ್ವರನಾದ ಪರ ಶಿವನು ಭೂಮಿಯಲ್ಲಿ ರೇತಸ್ಸನ್ನು ವಿಸರ್ಜಿಸಿದನು. ಒಡನೆಯೇ ಆ ಮಹಾ ತೇಜಸ್ಸಿನಿಂದ, ಗಿರಿ-ದುರ್ಗ-ಪರ್ವತಗಳಿಂದ ಕೂಡಿರುವ ಭೂಮಂಡಲವೇ ವ್ಯಾಪ್ತವಾಯಿತು. ಆ ಮಹಾತೇಜಸ್ಸಿನ ಭವ್ಯಸ್ವರೂಪವನ್ನು ಕಂಡೊಡನೆಯೇ ದೇವತೆಗಳಿಗೆ–"ಭೂದೇವಿಯೆಲ್ಲಿ ಭಗ್ನಳಾಗುವಳೋ?"–ಎಂಬ ಭ್ರಾಂತಿ ಯುಂಟಾಗಿ ಪೃಥಿವಿಗೆ ಅಭಿಮಾನಿದೇವತೆಯಾದ ಅಗ್ನಿದೇವನಿಗೆ ಹೇಳಿದರು : "ಯಜ್ಞೇಶ್ವರ! ಸರ್ವತ್ರ ವ್ಯಾಪ್ತವಾಗುತ್ತಿರುವ ರುದ್ರಸಂಬಂಧವಾದ ಈ ಮಹಾತೇಜಸ್ಸನ್ನು ನೀನೀಗಲೇ ವಾಯುವಿನಿಂದೊಡಗೂಡಿ ಆವರಿಸಿಕೋ."

ದೇವತೆಗಳ ಪ್ರಾರ್ಥನೆಯಂತೆ ಅಗ್ನಿಯಿಂದ ಪುನರಾವೃತವಾದ, ಸೂರ್ಯಾಗ್ನಿರೂಪವಾದ ಆ ಮಹಾತೇಜಸ್ಸು ಶ್ವೇತಪರ್ವತವಾಗಿ ಪರಿ ವರ್ತಿತವಾಯಿತು. ಆ ಪರ್ವತದಲ್ಲಿ ದಿವ್ಯವಾದ ಜೊಂಡು ಬೆಳೆಯಿತು. ಕೆಲವು ಕಾಲಾನಂತರ ಆ ಜೊಂಡಿನ ಮಧ್ಯದಲ್ಲಿಯೇ ಮಹಾತೇಜಸ್ವಿಯಾದ ಅಗ್ನಿಸಂಭವನಾದ ಕಾರ್ತಿಕೇಯನು ಜನಿಸಿದನು.* ತಮ್ಮ ಕಾರ್ಯದ ಸಾಧನೆ

---

* "ಕಿಂಚಿದ್ಧಾರಣತ್ವಾತ್ ಕಾರ್ತಿಕೇಯಃ ಅಗ್ನಿಸಂಭವಃ" ರುದ್ರನ ದಿವ್ಯತೇಜ ಸ್ಸನ್ನು ಅಗ್ನಿಯು ಸ್ವಲ್ಪಕಾಲ ಧಾರಣೆಮಾಡಿದ್ದುದರಿಂದ ಅಗ್ನಿಸಂಭವನೆಂದೂ,

ಯಿಂದಾಗಿ ಪರಮಪ್ರೀತರಾದ ದೇವತೆಗಳು ಋಷಿ-ಮಹರ್ಷಿಗಳಿಂದೊಡಗೂಡಿ ಉಮಾದೇವಿಯನ್ನೂ ಶಿವನನ್ನೂ ಯಥಾವಿಧಿಯಾಗಿ ಪೂಜಿಸಿ ಸ್ತೋತ್ರಮಾಡಿದರು.

ಪೂಜಾದಿಗಳಿಂದ ಪ್ರಸನ್ನಳಾಗದ ಪಾರ್ವತಿಯು ದೇವತೆಗಳಿಗೆ ಹೇಳಿದಳು :

"ದೇವತೆಗಳೇ! ನನಗೆ ಅಪ್ರಿಯಕಾರ್ಯವನ್ನು ಮಾಡಿರುವುದಕ್ಕೆ ತಕ್ಕ ಪ್ರತಿಫಲವನ್ನು ನೀವೀಗಲೇ ಅನುಭವಿಸಿರಿ." ಹೀಗೆ ಹೇಳಿ ಕಮಂಡಲುವಿನಲ್ಲಿದ್ದ ಪವಿತ್ರೋದಕವನ್ನು ಕೈಗೆ ಸುರಿದುಕೊಂಡು ಸೂರ್ಯನಿಗೆ ಸಮಾನವಾದ ತೇಜಸ್ಸಿನಿಂದ ಕೂಡಿದ್ದ ಪಾರ್ವತಿಯು ಕ್ರೋಧಮೂರ್ಛಿತಳಾಗಿ, ರಕ್ತನೇತ್ರಳಾಗಿ ದೇವತೆಗಳನ್ನು ಶಪಿಸುತ್ತಾ ಹೇಳಿದಳು :

ಯಸ್ಮಾನ್ನಿವಾರಿತಾ ಚಾಹಂ ಸಂಗತಾ ಪುತ್ರಕಾಮ್ಯಯಾ ।
ಅಪತ್ಯಂ ಸ್ವೇಷು ದಾರೇಷು ನೋತ್ಪಾದಯಿತುಮರ್ಹಥ ।
ಅದ್ಯಪ್ರಭೃತಿ ಯುಷ್ಮಾಕಮಪ್ರಜಾಃ ಸನ್ತು ಪತ್ನಯಃ ॥೨೩॥

"ದೇವತೆಗಳೇ! ನಾನು ಪುತ್ರಕಾಮನೆಯಿಂದ ನನ್ನ ಪತಿಯೊಡನೆ ಸೇರಿದ್ದೆನು. ನನ್ನ ಇಷ್ಟಪ್ರಾಪ್ತಿಗೆ ನೀವಿಂದು ವಿಘ್ನವನ್ನುಂಟುಮಾಡಿರುವಿರಿ. ಆದುದರಿಂದ ಇನ್ನು ಮುಂದೆ ನಿಮ್ಮ ಪತ್ನಿಯರಲ್ಲಿ ಮಕ್ಕಳನ್ನು ಪಡೆಯುವ ಸಾಮರ್ಥ್ಯವು ನಿಮಗೆ ಇಲ್ಲದಂತಾಗಲಿ. ಇದರಿಂದಾಗಿ ಇನ್ನು ಮುಂದೆ ನಿಮ್ಮ ಪತ್ನಿಯರೂ ನನ್ನಂತೆಯೇ ಅಪುತ್ರವತಿಯರಾಗಲಿ"–ಎಂದು ಹೇಳಿ ಕೈಲಿದ್ದ ನೀರನ್ನು ಚೆಲ್ಲಿದಳು.

ತನಗುಂಟಾಗಬೇಕಾಗಿದ್ದ ಪುತ್ರಪ್ರಾಪ್ತಿರೂಪವಾದ ಆನಂದಕ್ಕೆ ಅಡ್ಡಿಪಡಿಸಲು ಸಹಕರಿಸಿದ ಭೂದೇವಿಯ ಕಡೆಗೂ ಉಮಾದೇವಿಯ ದೃಷ್ಟಿ ಪಥವು ಹೊರಳಿತು. ಕ್ರೋಧಮೂರ್ಛಿತೆಯಾದ ಉಮಾದೇವಿಯು ಭೂದೇವಿಗೂ ಶಾಪವನ್ನಿತ್ತಳು.

ಅವನೇ ನೈಕರೂಪಾ ತ್ವಂ ಬಹುಭಾರ್ಯಾ ಭವಿಷ್ಯಸಿ ।

"ಕೃತ್ತಿಕಾನಾಂ ಅಪತ್ಯಂ-ಪುಮಾನ್ = ಕಾರ್ತಿಕೇಯಃ' ಕೃತ್ತಿಕಾನಕ್ಷತ್ರಾಧಿದೇವತೆಗಳ ಮಗನಾದುದರಿಂದ ಕಾರ್ತಿಕೇಯನೆಂದೂ ಹೇಳುತ್ತಾರೆ.

ನ ಚ ಪುತ್ರಕೃತಾಂ ಪ್ರೀತಿಂ ಮತ್ಕೋಧಕಲುಷೀಕೃತಾ ।
ಪ್ರಾಪ್ಸ್ಯಸಿ ತ್ವಂ ಸುದುರ್ಮೇಧೇ ಮಮ ಪುತ್ರಮನಿಚ್ಛತೀ ॥೨೫॥

"ಭೂದೇವಿ! ನೀನಿಂದು ನನಗೆ ಮಾಡಿರುವ ಅಪರಾಧಕ್ಕೆ ತಕ್ಕ ಶಿಕ್ಷೆಯನ್ನು ಅನುಭವಿಸಿಯೇ ತೀರಬೇಕು. ನಿನಗೆ ಒಂದು ರೂಪವಿಲ್ಲದಿರಲಿ ; ಒಂದು ಸ್ವಭಾವವಿಲ್ಲದಿರಲಿ ; ನೀನು ಅನೇಕರಿಗೆ ಭಾರ್ಯೆಯಾಗು. ನನ್ನ ಕೋಪದಿಂದ ಕಲುಷಿತವಾಗುವ ನಿನ್ನ ಪ್ರಕೃತಿಯಿಂದಾಗಿ ಪುತ್ರಸಂಬಂಧವಾದ ಆನಂದವು ನಿನಗೆ ಶೂನ್ಯವಾಗಿ ಹೋಗಲಿ. ದುಷ್ಟಚಿತ್ತಳೇ! ನಾನು ನನ್ನ ಪತಿಯಿಂದ ಪುತ್ರನನ್ನು ಪಡೆಯಬೇಕೆಂಬ ಆಕಾಂಕ್ಷೆಯನ್ನು ಹೊಂದಿದ್ದಾಗ ದುಷ್ಟೆಯಾದ ನೀನು ನನ್ನ ಆಶಯವನ್ನು ಘಾಸಿಗೊಳಿಸಿದ್ದಕ್ಕಾಗಿ ನೀನಿಂದು ಇವುಗಳೆಲ್ಲವನ್ನೂ ಅನುಭವಿಸಿಯೇ ತೀರಬೇಕು."

ದೇವತೆಗಳೂ ಮತ್ತು ಭೂದೇವಿಯೂ ಉಮಾದೇವಿಯ ಶಾಪದಿಂದ ಪರಿತಪ್ತರಾದುದನ್ನು ಕಂಡು ಮಹೇಶನು ವರುಣಪಾಲಿತವಾದ ಪಶ್ಚಿಮದಿಕ್ಕಿನ ಕಡೆಗೆ ಹೊರಟನು. ಹಿಮವತ್ಪರ್ವತದ ಉತ್ತರಪಾರ್ಶ್ವದಲ್ಲಿದ್ದ 'ಹಿಮವತ್ಪ್ರಭವ'ವೆಂಬ ಶೃಂಗಕ್ಕೆ ಹೋಗಿ ಅಲ್ಲಿ ಉಮಾಸಮೇತನಾಗಿ ತಪಶ್ಚರಣೆಯಲ್ಲಿ ಆಸಕ್ತನಾದನು.

ರಾಮ! ಈಗ ನಾನು ನಿನಗೆ ಹಿಮವಂತನ ದ್ವಿತೀಯಪುತ್ರಿಯಾದ ಉಮಾದೇವಿಯ ಕಥೆಯನ್ನು ವಿಸ್ತಾರವಾಗಿ ಹೇಳಿದೆನಲ್ಲವೇ! ನಾನು ಇನ್ನು ಮುಂದೆ ಹೇಳಲಿರುವ ಗಂಗಾವತರಣದ ಕಥೆಯನ್ನೂ ಲಕ್ಷ್ಮಣಸಮೇತನಾಗಿ ಕೇಳು.

ಮೂವತ್ತಾರನೆಯ ಸರ್ಗವು ಮುಗಿಯಿತು.

ಗಂಗೆಯಿಂದ ಕಾರ್ತಿಕೇಯನ ಉತ್ಪತ್ತಿಪ್ರಸಂಗ

ತಪ್ಯಮಾನೇ ತಪೋ ದೇವೇ ಸೇನ್ದ್ರಾಃ ಸಾಗ್ನಿಪುರೋಗಮಾಃ ।
ಸೇನಾಪತಿಮಭೀಪ್ಸನ್ತಃ ಪಿತಾಮಹಮುಪಾಗಮನ್ ॥೧॥

ಪರಶಿವನು ಹಿಮವತ್ಪ್ರಭವಶಿಖರದಲ್ಲಿ ತಪಸ್ಸನ್ನು ಮಾಡುತ್ತಿರಲಾಗಿ, ಅಗ್ನಿಪ್ರಮುಖರಾದ ದೇವತೆಗಳು ಇಂದ್ರಸಮೇತರಾಗಿ ಸಮರ್ಥನಾದ ಸೇನಾ ಪತಿಯನ್ನು ಪಡೆಯುವ ಅಭಿಲಾಷೆಯಿಂದ ಪಿತಾಮಹನಲ್ಲಿಗೆ ತೆರಳಿದರು. ಅಗ್ನಿಪುರೋಗರಾದ ಇಂದ್ರಾದಿದೇವತೆಗಳು ಭಗವಂತನಾದ ಪಿತಾಮಹನಿಗೆ ನಮಸ್ಕರಿಸಿ ಹೇಳಿದರು :

“ದೇವೇಶ! ಹಿಂದೆ ನಮಗೆ ಸೇನಾಪತಿಯನ್ನು ಬೀಜರೂಪದಲ್ಲಿ ಕೊಟ್ಟ ಪರಮೇಶ್ವರನು ಉಮೆಯೊಡನೆ ಮೌನಿಯಾಗಿ ಹಿಮವತ್ಪರ್ವತದ ಶಿಖರದಲ್ಲಿಯೇ ಘೋರವಾದ ತಪಸ್ಸನ್ನು ಮಾಡುತ್ತಿರುವನು. ಲೋಕದ ಹಿತಾರ್ಥವಾಗಿ ದುಷ್ಟಶಿಕ್ಷಣ-ಶಿಷ್ಟಪರಿಪಾಲನೆಗಳಿಗಾಗಿ ಸಮರ್ಥನಾದ ಸೇನಾ ಪತಿಯನ್ನು ನಾವು ಪಡೆಯಲು ಮುಂದೆ ಮಾಡಬೇಕಾದ ಕಾರ್ಯವನ್ನು ಆಲೋಚಿಸು. ನೀನು ಈ ವಿಧಾನವನ್ನೂ ಮತ್ತು ಇದರ ರಹಸ್ಯವನ್ನೂ ಸಂಪೂರ್ಣವಾಗಿ ತಿಳಿದವನಾಗಿರುವೆ. ನೀನೇ ನಮಗೆ ಶರಣ್ಯನು.”

ತ್ರಿಭುವನಗಳಿಗೂ ಪಿತಾಮಹನಾದ ಬ್ರಹ್ಮನು ದೇವತೆಗಳ ಮಾತನ್ನು ಕೇಳಿ, ಸುಮಧುರೋಕ್ತಿಗಳಿಂದ ಅವರನ್ನು ಸಂತೈಸುತ್ತಾ ಹೇಳಿದನು :

“ದೇವತೆಗಳೇ! ‘**ನ ಪ್ರಜಾಃ ಸ್ವಾಸು ಪತ್ನಿಷು**’ ‘ನಿಮ್ಮ ಪತ್ನಿಯರಲ್ಲಿ ನಿಮಗಿನ್ನು ಪುತ್ರಪ್ರಾಪ್ತಿಯಿಲ್ಲ’–ಎಂಬ ಶೈಲಪುತ್ರಿಯಾದ ಉಮಾದೇವಿಯ ಶಾಪಕ್ಕೆ ಪ್ರತಿಯೇ ಇಲ್ಲ. ಅದು ಸತ್ಯವಚನ. ಇದರಲ್ಲಾವ ಸಂಶಯವೂ ಇಲ್ಲ. ಆದುದರಿಂದ ನೀವಿನ್ನು ನಿಮ್ಮ ಪತ್ನಿಯರಲ್ಲಿ ಪುತ್ರರನ್ನು ಪಡೆಯಲಾರಿರಿ. ಆದರೆ ನೀವು ನಿರಾಶರಾಗುವ ಕಾರಣವಿಲ್ಲ. ಶತ್ರುನಿಷೂದನ ನಾದ ದೇವತೆಗಳ ಸೇನಾಪತಿಯನ್ನು ಅಗ್ನಿದೇವನು ಯಾವಳಲ್ಲಿ ಪಡೆಯು ವನೋ–ಆ ಮಹಾಮಹಿಮಳು ಆಕಾಶಗಾಮಿನಿಯಾದ ಗಂಗಾದೇವಿಯೇ

ಆಗುವಳು. ಅಗ್ನಿದೇವನಿಗೆ ತನ್ನಲ್ಲಿ ಹುಟ್ಟಿದ ಸೇನಾಪತಿಯನ್ನು ಶೈಲೇಂದ್ರನ ಹಿರಿಯಮಗಳಾದ ಗಂಗಾದೇವಿಯು ಸ್ವಾಭಾವಿಕವಾಗಿಯೇ ಆದರಿಸುತ್ತಾಳೆ. ಇದರಿಂದ ಉಮೆಗೂ ಕೋಪವುಂಟಾಗದು. ಏಕೆಂದರೆ : ಸೇನಾಪತಿಯ ಬೀಜರೂಪವಾದ ದಿವ್ಯತೇಜಸ್ಸು ಉಮಾ-ಶಿವರ ಸಂಗಮದಿಂದಲೇ ಪ್ರಾಪ್ತ ವಾದುದಲ್ಲವೇ? ಆ ದಿವ್ಯಶಿಶುವು ತನ್ನ ಅಕ್ಕನ ಮಗುವಾಗುವುದು ಉಮೆಗೂ ಇಷ್ಟವಾಗುವುದು. ಈ ವಿಷಯದಲ್ಲಿ ಸ್ವಲ್ಪವಾದರೂ ಸಂಶಯ ಪಡುವ ಕಾರಣವಿಲ್ಲ."

ರಾಮ! ಪಿತಾಮಹನ ಸುಮಧುರವಾದ ಆ ಮಾತುಗಳನ್ನು ಕೇಳಿ ದೇವತೆಗಳು ಕೃತಾರ್ಥರಾಗಿ ಪಿತಾಮಹನಿಗೆ ಪುನಃ ನಮಸ್ಕರಿಸಿ ಪೂಜಿಸಿದರು. ಅನಂತರ ಎಲ್ಲ ದೇವತೆಗಳೂ ಅನೇಕವಿಧವಾದ ಲೋಹಗಳ ಗಣಿ ಗಳಿಂದಲೂ ಗೈರಿಕಾದಿ ಧಾತುಗಳಿಂದಲೂ ಕೂಡಿರುವ, ಸರ್ವಶ್ರೇಷ್ಠವಾದ ಕೈಲಾಸಪರ್ವತಕ್ಕೆ ಹೋಗಿ ಬ್ರಹ್ಮನ ಮಾತಿನಂತೆ ಸೇನಾಪತಿಯ ಪ್ರಾಪ್ತಿಗಾಗಿ ಅಗ್ನಿಯನ್ನು ಪ್ರಾರ್ಥಿಸಿದರು.

"ಯಜ್ಞೇಶ್ವರ! ಸೇನಾಪತಿಯ ಪ್ರಾಪ್ತಿರೂಪವಾದ ಈ ದೇವಕಾರ್ಯ ವನ್ನು ಸಾಧಿಸು. ಶ್ವೇತಪರ್ವತದಲ್ಲಿ ನಿಕ್ಷಿಪ್ತವಾಗಿರುವ ಕಾರ್ತಿಕೇಯನ ಬೀಜ ರೂಪವಾದ ಶಿವರೇತಸ್ಸನ್ನು ಗಂಗಾನದಿಯಲ್ಲಿ ಬಿಡು."

"ಹಾಗೆಯೇ ಆಗಲಿ ; ನೀವುಗಳು ಹೇಳಿದಂತೆಯೇ ಮಾಡುವೆನು."– ಎಂದು ಯಜ್ಞೇಶ್ವರನು ದೇವತೆಗಳ ಸಮ್ಮುಖದಲ್ಲಿ ಪ್ರತಿಜ್ಞೆಮಾಡಿ, ಶಿವನ ರೇತಸ್ಸನ್ನು ಧರಿಸಿ ಆಕಾಶಗಂಗೆಯ ಬಳಿಗೆ ಹೋಗಿ ಅವಳನ್ನು ಪ್ರಾರ್ಥಿಸಿ ಹೇಳಿದನು :

"ಶೈಲಪುತ್ರಿ! ನಾನು ತಂದಿರುವ ಈ ದಿವ್ಯವಾದ ಶಿವನ ರೇತಸ್ಸನ್ನು ನಿನ್ನ ಗರ್ಭದಲ್ಲಿ ಧರಿಸು. ಈ ಕಾರ್ಯವು ದೇವತೆಗಳಿಗೆ ಅತ್ಯಂತಪ್ರಿಯ ವನ್ನುಂಟುಮಾಡುತ್ತದೆ."

ಅಗ್ನಿದೇವನ ಈ ಮಾತುಗಳನ್ನು ಕೇಳಿ ಗಂಗೆಯು ಸಮ್ಮತಿಸಿ ದಿವ್ಯ ರೂಪವನ್ನು ಧರಿಸಿದಳು. ಅಗ್ನಿದೇವನು ಗಂಗಾದೇವಿಯ ರೂಪಾತಿಶಯವನ್ನು ಕಂಡೊಡನೆಯೇ ಶಿವನ ರೇತಸ್ಸನ್ನು ಅವಳ ಸುತ್ತಲೂ ಚೆಲ್ಲಿಬಿಟ್ಟನು. ಗಂಗಾ ದೇವಿಯ ಸುತ್ತಲೂ ಶಿವನ ರೇತಸ್ಸನ್ನು ಚೆಲ್ಲಿ ಅವಳನ್ನು ಅಭಿಷೇಚಿಸಿದನು.

ಆದರಿಂದಾಗಿ ಗಂಗಾಪ್ರವಾಹವೆಲ್ಲವೂ ಶಿವನ ತೇಜಸ್ಸಿನಿಂದ ಪೂರ್ಣವಾಗಿ ಹೋಯಿತು. ಅಗ್ನಿದೇವನು ಶಿವನ ರೇತಸ್ಸನ್ನು ಅಭಿಷೇಚಿಸಿದೊಡನೆಯೇ ಗಂಗಾದೇವಿಯು ಆ ರೇತಸ್ಸಿನ ಉಗ್ರತೆಯನ್ನು ಸಹಿಸಲಾರದೇ ಹೋದಳು. ಮುಖಾರವಿಂದವು ಕುಂದಿತು. ಶರೀರಾದ್ಯಂತವೂ ಸುಡುತ್ತಿರುವಂತೆ ಭಾಸ ವಾಯಿತು. ಶಿವನ ರೇತಸ್ಸಿನ ಜ್ವಾಲೆಗಳಿಂದ ಸಂಕಟಪಡುತ್ತಾ, ವ್ಯಥಿತ ಮನಸ್ಕಳಾದ ಗಂಗಾದೇವಿಯು ದೇವತೆಗಳ ಪುರೋಹಿತನಾದ ಅಗ್ನಿಗೆ ಹೇಳಿದಳು :

"ಅಗ್ನಿದೇವ! ನಿನ್ನಿಂದ ಹುಟ್ಟಿರುವ ಈ ದಿವ್ಯತೇಜಸ್ಸನ್ನು ಹೆಚ್ಚು ಹೊತ್ತು ಧರಿಸಲು ನಾನು ಅಶಕ್ತಳಾಗಿರುವೆನು."

ಸರ್ವದೇವತೆಗಳಿಗೂ ಅರ್ಪಿಸುವ ಆಹುತಿಯನ್ನು ಭಕ್ಷಿಸುವ ಅಗ್ನಿಯು ಗಂಗಾದೇವಿಯ ಮಾತುಗಳನ್ನು ಕೇಳಿ ಹೇಳಿದನು :

"ದೇವಿ! ನೀನು ಈ ಗರ್ಭವನ್ನು ಧರಿಸಲು ಅಸಮರ್ಥಳಾದರೆ–ಈ ಪರ್ವತದ ಪಾರ್ಶ್ವದಲ್ಲಿರುವ ಶ್ವೇತಪರ್ವತದಲ್ಲಿ ಈ ಗರ್ಭವನ್ನು ವಿಸರ್ಜಿಸು."

ಅಗ್ನಿದೇವನ ಮಾತುಗಳನ್ನು ಕೇಳಿದೊಡನೆಯೇ ಗಂಗಾದೇವಿಯು ಪ್ರವಾಹದಿಂದ ಹೊರಬಂದು ದಿವ್ಯತೇಜಸ್ಸಿನಿಂದ ಕೂಡಿದ್ದ ಗರ್ಭವನ್ನು ಅಗ್ನಿ ದೇವನು ಹೇಳಿದ ಸ್ಥಳದಲ್ಲಿಯೇ ವಿಸರ್ಜಿಸಿದಳು. ಗಂಗಾದೇವಿಯಿಂದ ವಿಸರ್ಜಿತವಾದ ಆ ಗರ್ಭವು ಕರಗಿದ ಸುವರ್ಣದಂತೆ ಪ್ರಕಾಶಮಾನವಾಗಿದ್ದು ಪರ್ವತದ ತಪ್ಪಲಿನಲ್ಲಿಟ್ಟೊಡನೆಯೇ ಅದರೊಡನಿದ್ದ ಶೋಣಿತಾದಿಗಳು ಭೂಮಿಯೊಳಗೆ ಪ್ರವೇಶಿಸಿ ಚಿನ್ನ-ಬೆಳ್ಳಿಗಳಾಗಿ ಪರಿಣಮಿಸಿದುವು. ಗರ್ಭದ ತೀಕ್ಷ್ಣತೆಯಿಂದಾಗಿ ತಾಮ್ರ ಮತ್ತು ಕಬ್ಬಿಣಗಳ ಉತ್ಪಾದನೆಯಾಯಿತು. ಗರ್ಭದೊಡನಿದ್ದ ಮಲದ ಸಂಪರ್ಕದಿಂದಾಗಿ ತ್ರಪು (ತವರ), ಸೀಸ ಮುಂತಾ ದುವು ಭೂಮಿಯಲ್ಲಿ ಪ್ರಾಪ್ತವಾದುವು. ಅವುಗಳೆಲ್ಲವೂ ಬೀಜರೂಪವಾಗಿ ಭೂಮಿಯೊಳಗೆ ಪ್ರವೇಶಿಸಿ ಕಾಲಾನಂತರದಲ್ಲಿ ಖನಿಜಗಳಾದುವು. ಗಂಗಾ ದೇವಿಯು ಗರ್ಭವನ್ನು ಶ್ವೇತಪರ್ವತದಲ್ಲಿ ಪುನಃ ನಿಕ್ಷೇಪಿಸಿದೊಡನೆಯೇ ಪರ್ವತದ ಸಕಲಭಾಗಗಳೂ, ಜೊಂಡಿನ ವನ, ತೃಣ, ವೃಕ್ಷ, ಲತಾಗುಲ್ಮ ಗಳೂ ಗರ್ಭದ ಅನುಪಮವಾದ ತೇಜಸ್ಸಿನಿಂದಾಗಿ ಸುವರ್ಣಮಯ

ವಾದುವು. ಯಜ್ಞೇಶ್ವರನಿಗೆ ಸಮಾನವಾದ ಪ್ರಭೆಯುಳ್ಳ ಸುವರ್ಣವು ಅದು ಮೊದಲು (ಗರ್ಭದ ತೇಜಸ್ಸಿನಿಂದ ಪರ್ವತ-ವನಗಳೆಲ್ಲವೂ ಸುವರ್ಣ ಮಯವಾದನಂತರ) "ಜಾತರೂಪ" ವೆಂಬುದಾಗಿ ಪೃಥ್ವಿಯಲ್ಲಿ ಖ್ಯಾತ ವಾಯಿತು.* ಕಾಲಾನಂತರದಲ್ಲಿ ಜೊಂಡಿನ ಮಧ್ಯದಲ್ಲಿ ಗಂಗಾದೇವಿಯಿಂದ ಇಡಲ್ಪಟ್ಟಿದ್ದ ಆ ಗರ್ಭವು ಶಿಶುವಾಯಿತು. ಶಿಶುವು ಹುಟ್ಟಿದೊಡನೆಯೇ ಇಂದ್ರಪ್ರಮುಖರಾದ ದೇವತೆಗಳೆಲ್ಲರೂ ಆನಂದಪರವಶರಾಗಿ ಮಗು ವಿದ್ದೆಡೆಗೆ ಧಾವಿಸಿ ಬಂದು ಹಾಲು ಕುಡಿಸಲು ಆರು ಮಂದಿ ಕೃತ್ತಿಕಾನಕ್ಷತ್ರಾಧಿ ದೇವತೆಗಳನ್ನು ನಿಯೋಜಿಸಿದರು.

"ಈ ಶಿಶುವು ಕೃತ್ತಿಕಾನಕ್ಷತ್ರಾಧಿದೇವತೆಗಳ ಮಗನೆಂದು ಖ್ಯಾತ ನಾಗುವುದಾದರೆ ನಾವು ಇವನಿಗೆ ಸ್ತನ್ಯಕೊಡುವೆವು"-ಎಂಬುದಾಗಿ ಇಂದ್ರಾದಿ ಗಳೊಡನೆ ಕೃತ್ತಿಕಾನಕ್ಷತ್ರಾಧಿದೇವತೆಗಳು ಉತ್ತಮೋತ್ತಮವಾದ ನಿಬಂಧನೆ ಯನ್ನು ಮಾಡಿಕೊಂಡು, ತಮ್ಮ ಮಗನೆಂದು ಪ್ರಸಿದ್ಧನಾಗುವನೆಂಬ ದೃಢ ನಿಶ್ಚಯದಿಂದ ಸಂತೋಷಭರಿತರಾಗಿ, ಹುಟ್ಟಿದ ಶಿಶುವಿಗೆ ಸ್ತನ್ಯಪಾನ ಮಾಡಿ ಸಲು ನಿಶ್ಚಯಿಸಿದರು. ದೇವತೆಗಳೂ ಶಿಶುವಿಗೆ ಕಾರ್ತಿಕೇಯನೆಂದು ನಾಮ ಕರಣಮಾಡಿ–"ಇವನು ಮೂರು ಲೋಕಗಳಲ್ಲಿಯೂ 'ಕಾರ್ತಿಕೇಯ'ನೆಂದೇ ಖ್ಯಾತನಾಗುತ್ತಾನೆ. ಇದರಲ್ಲಾವ ಸಂಶಯವೂ ಇಲ್ಲ"–ಎಂಬುದಾಗಿ ಘೋಷಿಸಿದರು. ಅದನ್ನು ಕೇಳಿ ಸಂತುಷ್ಟರಾದ ಕೃತ್ತಿಕಾನಕ್ಷತ್ರಾಧಿ ದೇವತೆಗಳು ದೇವಿಯ ಗರ್ಭಸ್ರಾವದಿಂದ ಪ್ರಾಪ್ತನಾದ, ಯಜ್ಞೇಶ್ವರನಂತೆ ಅತಿಶಯವಾದ ಕಾಂತಿಯಿಂದ ದೀಪ್ಯಮಾನನಾಗಿದ್ದ ಕುಮಾರನಿಗೆ ಯಥೋಚಿತವಾಗಿ ಸ್ನಾನ ಮಾಡಿಸಿದರು.

ಸ್ಕನ್ದ ಇತ್ಯಬ್ರುವನ್ದೇವಾಃ ಸ್ಕನ್ನಂ ಗರ್ಭಪರಿಸ್ರವಾತ್ ।
ಕಾರ್ತಿಕೇಯಂ ಮಹಾಬಾಹುಂ ಕಾಕುತ್ಸ್ಥಂ ಜ್ವಲನೋಪಮಮ್ ॥

ರಾಮ! ದೇವತೆಗಳು ಮಹಾಬಾಹುವಾದ, ಯಜ್ಞೇಶ್ವರನಿಗೆ ಸದೃಶ ನಾದ ಕಾರ್ತಿಕೇಯನನ್ನು–ಗರ್ಭದಿಂದ ಸ್ಕನ್ನನಾದ ಕಾರಣ (ಕೆಳಗೆ ಬಿದ್ದ ಕಾರಣ) 'ಸ್ಕಂದ' ನೆಂದೂ ಕರೆದರು.

---

* ಜಾತಂ = ಪ್ರಕಟೀಭೂತಂ ರೂಪಂ = ಅಪೂರ್ವಸ್ವರೂಪಂ ಯಸ್ಯ ತತ್ = ಜಾತರೂಪಂ, ಯಾವ ವಸ್ತುವಿನ (ಚಿನ್ನದ) ಅಪೂರ್ವರೂಪವು ಪ್ರಕಟವಾಯಿತೋ ಅದು ಜಾತರೂಪ.

ಕೃತ್ತಿಕಾನಕ್ಷತ್ರಾಧಿದೇವತೆಗಳ ಸ್ತನಗಳಲ್ಲಿ ಉತ್ತಮವಾದ, ಪರಿಶುದ್ಧವಾದ ಹಾಲು ಪ್ರಾದುರ್ಭೂತವಾಯಿತು. ಆರು ಮಂದಿ ತಾಯಿಯರೂ ಕುಮಾರನಿಗೆ ಸ್ತನ್ಯವುಣಿಸಲು ಕುಳಿತರು. ಮಹಾನುಭಾವನಾದ ಸ್ಕಂದನು ಆರು ಮುಖಗಳನ್ನು ಹೊಂದಿ ಷಡಾನನನಾಗಿ ಆರು ಮಾತೆಯರ ಸ್ತನ್ಯ ಗಳನ್ನೂ ಕುಡಿದನು. ಸುಕೋಮಲಶರೀರನಾದ, ವಿಭುವಾದ ಷಡಾನನನು ತನ್ನ ಆರು ಮುಖಗಳಿಂದ ಆರು ತಾಯಂದಿರ ಸ್ತನ್ಯಗಳನ್ನು ಒಂದು ದಿನ ಪೂರ್ತಿ ಕುಡಿದು, ತನ್ನ ಭುಜಬಲ-ಪರಾಕ್ರಮಗಳಿಂದ ದೈತ್ಯಸೇನೆಯನ್ನು ಜಯಿಸಿದನು. ಅಗ್ನಿಪ್ರಮುಖರಾದ ಸಕಲದೇವತೆಗಳೂ ಆಗಮಿಸಿ ಮಹಾ ತೇಜಸ್ವಿಯಾದ, ಅತುಲಪ್ರಭನಾದ ಕಾರ್ತಿಕೇಯನಿಗೆ ಸುರಸೇನಾಗಣಕ್ಕೆ ಅಧಿಪತಿಯಾಗಿ ಪಟ್ಟಗಟ್ಟಿದರು. ಧನ್ಯತೆಗೆ ಕಾರಣವಾದ ಮತ್ತು ಪುಣ್ಯಪ್ರಾಪ್ತಿಗೆ ಸಾಧನವಾದ ಗಂಗಾದೇವಿಯ ವೈಭವವನ್ನೂ ಮತ್ತು ಕುಮಾರಸಂಭವದ ಕಥೆಯನ್ನೂ ನಾನು ನಿಮಗೆ ವಿಸ್ತಾರವಾಗಿ ಹೇಳಿರುತ್ತೇನೆ.

ಭಕ್ತಶ್ಚ ಯಃ ಕಾರ್ತಿಕೇಯೇ ಕಾಕುತ್ಸ್ಥ ಭುವಿ ಮಾನವಃ ।
ಆಯುಷ್ಮಾನ್ಪುತ್ರಪೌತ್ರೈಶ್ಚ ಸ್ಕನ್ದಸಾಲೋಕ್ಯತಾಂ ವ್ರಜೇತ್ ॥

ರಾಮ! ಪ್ರಪಂಚದಲ್ಲಿ ಯಾವ ಮಾನವನು ಕಾರ್ತಿಕೇಯನಿಗೆ ಭಕ್ತನಾಗಿರುವನೋ, ಅನನ್ಯಶರಣನಾಗಿರುವನೋ–ಅವನು ದೀರ್ಘಾಯುಷ್ಮಂತನೂ, ಪುತ್ರ-ಪೌತ್ರರುಳ್ಳವನೂ, ಸುಖಿಯೂ ಆಗಿದ್ದು, ಕಡೆಗೆ ಸ್ಕಂದ ಸಾಲೋಕ್ಯವನ್ನೇ ಹೊಂದುತ್ತಾನೆ.”

ಇಂನೆಯ ಸರ್ಗವು ಮುಗಿಯಿತು.

ಬಾಲಕಾಂಡ ೩೮ನೆಯ ಸರ್ಗ

ಸಗರನ ಮಕ್ಕಳ ಜನನ: ಯಜ್ಞದ ಸಿದ್ಧತೆ

ತಾಂ ಕಥಾಂ ಕೌಶಿಕೋ ರಾಮೇ ನಿವೇದ್ಯ ಮಧುರಾಕ್ಷರಮ್ ।
ಪುನರೇವಾಪರಂ ವಾಕ್ಯಂ ಕಾಕುತ್ಸ್ಥಮಿದಮಬ್ರವೀತ್ ॥೧॥

"ತ್ರಿಸ್ಪಥೋ ಹೇತುನಾ ಕೇನ?" "ಯಾವ ಕಾರಣದಿಂದ ಗಂಗಾ ದೇವಿಯು ಮೂರು ಮಾರ್ಗವುಳ್ಳವಳಾದಳು?"–ಎಂಬ ರಾಮನ ಪ್ರಶ್ನೆಗೆ ಉತ್ತರವಾಗಿ ವಿಶ್ವಾಮಿತ್ರರು, ಗಂಗೆಯು ಹೇಗೆ ದೇವಲೋಕವನ್ನು ಸೇರಿದಳು ಎಂಬುದನ್ನು ಹೇಳಿ, ಅದಕ್ಕೆ ಸಂಬಂಧಿಸಿದಂತೆಯೇ ಕಾರ್ತಿಕೇಯನ ಜನ್ಮ ವೃತ್ತಾಂತವನ್ನೂ ವಿಸ್ತಾರವಾಗಿ ಹೇಳಿದನಂತರ ಗಂಗೆಯು ಭೂ-ಪಾತಾಳ ಗಳಿಗೆ ಬರಲು ಕಾರಣವಾದ ಮಧುರಾಕ್ಷರಯುತವಾದ ಮತ್ತೊಂದು ಕಥಾ ಪ್ರಸಂಗವನ್ನು ರಾಮನಿಗೆ ಹೇಳಲು ಉಪಕ್ರಮಿಸಿದರು.

"ವತ್ಸ! ಹಿಂದೆ ಸಗರನೆಂಬ ಹೆಸರಿನ ಧರ್ಮಾತ್ಮನಾದ, ಶೂರನಾದ ಅರಸನು ಅಯೋಧ್ಯೆಯ ಅಧಿಪತಿಯಾಗಿದ್ದನು. ಅವನಿಗೆ ಬಹಳ ದಿನಗಳ ವರೆಗೂ ಮಕ್ಕಳಿರಲಿಲ್ಲ. ಮಕ್ಕಳನ್ನು ಪಡೆಯಬೇಕೆನ್ನುವ ಅಭಿಲಾಷೆಯು ರಾಜನಿಗುಂಟಾಯಿತು. ಧರ್ಮಿಷ್ಠಳೂ, ಸತ್ಯವಾದಿನಿಯೂ ಆದ ವಿದರ್ಭ ರಾಜನ ಮಗಳಾದ ಕೇಶಿನೀ ಎಂಬ ಹೆಸರಿನ ರಾಜಕುಮಾರಿಯು ಸಗರನ ಹಿರಿಯ ಹೆಂಡತಿಯಾಗಿದ್ದಳು. ಅರಿಷ್ಟನೇಮಿಯ (ಕಶ್ಯಪನ) ಮಗಳೂ ಮತ್ತು ಗರುಡನ ಸಹೋದರಿಯೂ ಆಗಿದ್ದ ಸುಮತಿ ಎಂಬುವಳು ರಾಜನ ಎರಡನೆಯ ಹೆಂಡತಿಯಾಗಿದ್ದಳು. ಸಗರನು ತನ್ನ ಇಬ್ಬರು ಪತ್ನಿಯರೊಡನೆ ಹಿಮವತ್ಪರ್ವತದ ಪಕ್ಕದಲ್ಲಿದ್ದ ಭೃಗುಪ್ರವಣವೆಂಬ ಉಪಪರ್ವತದಲ್ಲಿ ಪುತ್ರಪ್ರಾಪ್ತಿಗಾಗಿ ಭೃಗುಮಹರ್ಷಿಯನ್ನೇ ಕುರಿತು ತಪಸ್ಸನ್ನು ಮಾಡಲು ಉಪಕ್ರಮಿಸಿದನು. ನೂರು ವರ್ಷಗಳವರೆಗೆ ಸಗರನ ತಪಸ್ಸಿನ ಮೂಲಕ ಆರಾಧಿತನಾದ, ಸತ್ಯವಂತರಲ್ಲಿ ಶ್ರೇಷ್ಠನಾದ ಭೃಗುಮಹರ್ಷಿಯು ಸುಪ್ರೀತ ನಾಗಿ ರಾಜನಿಗೆ ವರದಾನ ಮಾಡಿದನು.

ಅಪತ್ಯಲಾಭಃ ಸುಮಹಾನ್ಭವಿಷ್ಯತಿ ತವಾನಘ ।
ಕೀರ್ತಿಂ ಚಾಪ್ರತಿಮಾಂ ಲೋಕೇ ಪ್ರಾಪ್ಸ್ಯಸೇ ಪುರುಷರ್ಷಭ ॥೨॥

"ಪಾಪರಹಿತನಾದ ಪುರುಷಶ್ರೇಷ್ಠನೇ! ನಿನಗೆ ಲೋಕಪ್ರಶಂಸೆಗೆ ಅರ್ಹರಾದ ಬಹುಮಂದಿ ಮಕ್ಕಳು ಹುಟ್ಟುತ್ತಾರೆ ಮತ್ತು ನೀನು ಆ ಪುತ್ರರಿಂದ ಅಸಮಾನವಾದ ಕೀರ್ತಿಯನ್ನೂ ಪಡೆಯುವೆ. ಈ ನಿನ್ನ ಇಬ್ಬರು ಹೆಂಡತಿಯರಲ್ಲಿ ಒಬ್ಬಳು ವಂಶಕರನಾದ ಒಬ್ಬ ಮಗನನ್ನು ಮಾತ್ರ ಪಡೆಯುತ್ತಾಳೆ. ಮತ್ತೊಬ್ಬಳು ಅರುವತ್ತು ಸಾವಿರ ಮಕ್ಕಳನ್ನು ಪಡೆಯುತ್ತಾಳೆ." ಈ ರೀತಿಯಲ್ಲಿ ವರದಾನ ಮಾಡಿದ ಮಹಾತ್ಮನಾದ ಭೃಗುಮಹರ್ಷಿಯನ್ನು–ಪರಮಪ್ರೀತರಾದ, ರಾಜಕುಮಾರಿಯರಾದ ಕೇಶಿನೀ-ಸುಮತಿಯರು ಯಥೋಚಿತವಾಗಿ ಪೂಜಿಸಿ, ಕೈಮುಗಿದು ಹೇಳಿದರು :

"ಪೂಜ್ಯರೇ! ನಿಮ್ಮ ವರದಾನವು ಸತ್ಯವಾಗಿ ಪರಿಣಮಿಸಲಿ. ಆದರೆ ನಮ್ಮಿಬ್ಬರಲ್ಲಿ ಯಾರಿಗೆ ಒಬ್ಬನೇ ಮಗನು ಹುಟ್ಟುತ್ತಾನೆ ಮತ್ತು ಯಾರು ಅರುವತ್ತು ಸಾವಿರ ಮಕ್ಕಳನ್ನು ಪಡೆಯುತ್ತಾರೆಂಬುದನ್ನು ನಿಮ್ಮಿಂದ ಕೇಳಿ ತಿಳಿದುಕೊಳ್ಳುವ ಆಶಯದಿಂದಿದ್ದೇವೆ."

ಅವರ ಮಾತುಗಳನ್ನು ಕೇಳಿ ಪರಮಧಾರ್ಮಿಕನಾದ ಭೃಗುಮಹರ್ಷಿಯು ಉತ್ತಮವಾದ ಮತ್ತು ರಮಣೀಯವಾದ ಈ ಮಾತುಗಳನ್ನು ಹೇಳಿದನು :

"ರಾಜಪುತ್ರಿಯರೇ! ಈ ವಿಷಯದ ನಿರ್ಧಾರವು ನಿಮ್ಮ ಇಚ್ಛೆಗೇ ಸೇರಿದ್ದಾಗಿರುವುದು. ನಿಮ್ಮ ಆಶಯವನ್ನು ನೀವೇ ನಿರ್ಧರಿಸಿ ಹೇಳಿರಿ."

ರಾಮ! ಭೃಗುಮಹರ್ಷಿಯ ಮಾತುಗಳನ್ನು ಕೇಳಿ ವಿದರ್ಭರಾಜಕುಮಾರಿಯಾದ ಕೇಶಿನಿಯು ಪತಿಯಾದ ಸಗರರಾಜನ ಸಮ್ಮುಖದಲ್ಲಿ ವಂಶಕರನಾದ ಏಕಮಾತ್ರಪುತ್ರನನ್ನೇ ಅಪೇಕ್ಷಿಸಿದಳು. ಉತ್ಸಾಹಶಾಲಿಗಳಾದ, ಕೀರ್ತಿಮಂತರಾದ ಅರುವತ್ತು ಸಾವಿರ ಮಕ್ಕಳನ್ನು ಪಡೆಯುವ ವರವನ್ನು ಗರುಡನ ಸೋದರಿಯಾದ ಸುಮತಿಯು ಆದರದಿಂದ ಸ್ವೀಕರಿಸಿದಳು. ಅನಂತರ ಸಗರನು ಭೃಗುಮಹರ್ಷಿಗೆ ಪ್ರದಕ್ಷಿಣೆಮಾಡಿ, ಅಭಿವಾದನಪೂರ್ವಕವಾದ ಸಾಷ್ಟಾಂಗಪ್ರಣಾಮಮಾಡಿ, ಇಬ್ಬರು ಭಾರ್ಯೆಯರೊಡನೆ ಅಯೋಧ್ಯೆಗೆ ತೆರಳಿದನು. ಕಾಲಾನಂತರದಲ್ಲಿ ಸಗರನ ಹಿರಿಯ ಹೆಂಡತಿಯಾದ ಕೇಶಿನಿಯು ಅಸಮಂಜನೆಂದು ಪ್ರಸಿದ್ಧನಾದ ಮಗನನ್ನು ಪ್ರಸವಿ

ಸಿದಳು. ಸುಮತಿಯಾದರೋ ಸೋರೇಕಾಯಿಯಂತೆ ವೃತ್ತಾಕಾರದ ಗರ್ಭಪಿಂಡವನ್ನೇ ಪ್ರಸವಿಸಿದಳು. ಆ ಗರ್ಭಪಿಂಡದ ಭೇದನದಿಂದಾಗಿ ಅರುವತ್ತು ಸಾವಿರ ಮಕ್ಕಳು ಹುಟ್ಟಿದರು. ಮಕ್ಕಳೆಲ್ಲರನ್ನೂ ದಾದಿಯರು ಪ್ರತ್ಯೇಕವಾಗಿ ಘೃತಕುಂಭಗಳಲ್ಲಿಟ್ಟು ಪೋಷಿಸಿದರು. ಅನೇಕ ವರ್ಷಗಳು ಈ ವಿಧವಾಗಿ ಪೋಷಿಸಿದನಂತರ ಅಣುರೂಪಗಳಲ್ಲಿದ್ದ ಶಿಶುಗಳು ಯೌವನವನ್ನು ಪಡೆದುವು. ಸಗರನ ಆ ಅರುವತ್ತು ಸಾವಿರ ಮಕ್ಕಳೂ ರೂಪ-ಯೌವನಶಾಲಿಗಳಾಗಿ ಅತಿಸಮರ್ಥರಾದ ರಾಜಕುಮಾರರಾದರು. ಸಗರನ ಹಿರಿಯಹೆಂಡತಿಯಾದ ಕೇಶಿನಿಯಲ್ಲಿ ವಂಶಕರನಾದ ಅಸಮಂಜನೆಂಬ ಮಗನು ಹುಟ್ಟಿದನೆಂದು ಹೇಳಿದೆನಲ್ಲವೇ? ಅವನು ಪ್ರತಿನಿತ್ಯವೂ ಬೀದಿಯಲ್ಲಿ ಆಡುತ್ತಿದ್ದ ಮಕ್ಕಳನ್ನು ಸರಯೂನದಿಯಲ್ಲಿ ಎಸೆದು ಆ ಮಕ್ಕಳು ಚೀರುತ್ತಾ, ಕೈ-ಕಾಲುಗಳನ್ನು ಒದರುತ್ತಾ ಮುಳುಗುವುದನ್ನು ನೋಡಿ ನಗುತ್ತಿದ್ದನು. ಹೀಗೆ ಮಾಡುವುದು ಅವನಿಗೊಂದು ವಿನೋದವಾಗಿದ್ದಿತು. ಈ ರೀತಿಯಾಗಿ ಅನುದಿನವೂ ಪಾಪಕಾರ್ಯದಲ್ಲಿ ಪ್ರವೃತ್ತನಾದ, ಸಜ್ಜನಕಂಟಕನಾದ, ಪ್ರಜೆಗಳ ಅಹಿತದಲ್ಲಿಯೇ ಆಸಕ್ತನಾಗಿದ್ದ ಅಸಮಂಜನನ್ನು–ಧರ್ಮಿಷ್ಠನಾದ, ಪ್ರಜೆಗಳ ಹಿತರಕ್ಷಣೆಯಲ್ಲಿಯೇ ನಿರತನಾದ ಸಗರರಾಜನು ದೇಶದಿಂದ ಹೊರಗಟ್ಟಿದನು. ಅಸಮಂಜನಿಗೆ ವೀರ್ಯವಂತನಾದ, ಸಕಲಪ್ರಜೆಗಳ ಪ್ರೀತಿಗೂ ಪಾತ್ರನಾದ, ಪ್ರಿಯಭಾಷಿಯಾದ ಅಂಶುಮಂತನೆಂಬ ಮಗ ನಿದ್ದನು.

ಅನೇಕವರ್ಷಗಳು ಕಳೆದನಂತರ ಸಗರನಿಗೆ ಯಜ್ಞಮಾಡಬೇಕೆಂಬ ಬುದ್ಧಿಯುಂಟಾಯಿತು. ವೇದಜ್ಞನಾದ ಸಗರನು ಯಜ್ಞಮಾಡಬೇಕೆಂದು ನಿಶ್ಚಯಮಾಡಿ ಋತ್ವಿಜರುಗಳೊಡನೆ ಯಜ್ಞಮಾಡಲು ಉಪಕ್ರಮಿಸಿದನು.”

ಽ೩೮ನೆಯ ಸರ್ಗವು ಮುಗಿಯಿತು.

ಸಗರನ ಅಶ್ವಮೇಧಾಶ್ವದ ಅಪಹರಣ : ಸಗರನ ಮಕ್ಕಳು ಕುದುರೆಯನ್ನು ಹುಡುಕಲು ಪೃಥ್ವಿಯನ್ನೇ ಭೇದಿಸಿದುದು : ಸಂಭ್ರಾಂತರಾದ ದೇವತೆಗಳು ಬ್ರಹ್ಮನನ್ನು ಪ್ರಾರ್ಥಿಸಿದುದು

ವಿಶ್ವಾಮಿತ್ರವಚಃ ಶ್ರುತ್ವಾ ಕಥಾನ್ತೇ ರಘುನನ್ದನಃ ।
ಉವಾಚ ಪರಮಪ್ರೀತೋ ಮುನಿಂ ದೀಪ್ತಮಿವಾನಲಮ್ ॥೧॥

ಕಥೆಯ ಕೊನೆಯಲ್ಲಿ, ಸಗರಮಹಾರಾಜನ ಯಜ್ಞಾರಂಭದ ವಾಕ್ಯವನ್ನು ಕೇಳಿ ರಾಘವನು ಪರಮಪ್ರೀತನಾಗಿ ಯಜ್ಞೇಶ್ವರನಂತೆ ಪ್ರಜ್ವಲಿಸುತ್ತಾ ತೇಜೋವಿಶಿಷ್ಟರಾಗಿ ಕುಳಿತಿದ್ದ ವಿಶ್ವಾಮಿತ್ರಮುನಿಗಳಿಗೆ ಹೇಳಿದನು :

"ಮಹರ್ಷಿಗಳೇ! ನಿಮಗೆ ಮಂಗಳವಾಗಲಿ. ನಮ್ಮ ಪೂರ್ವಜನಾದ ಸಗರಮಹಾರಾಜನು ತಾನು ಆರಂಭಿಸಿದ ಯಜ್ಞವನ್ನು ಹೇಗೆ ಪೂರ್ಣಮಾಡಿದನೆಂಬ ಕಥೆಯನ್ನು ವಿಸ್ತಾರವಾಗಿ ಕೇಳುವ ಅಪೇಕ್ಷೆಯಿದೆ. ತಿಳಿಸಿರಿ."

ರಾಮಭದ್ರನ ಮಾತುಗಳನ್ನು ಕೇಳಿ ಕುತೂಹಲದಿಂದ ಕೂಡಿದ ವಿಶ್ವಾಮಿತ್ರರು, ನಸುನಗುತ್ತಾ ಶ್ರೀರಾಮನಿಗೆ ಹೇಳಿದರು :

"ರಾಮ! ಸಗರನ ಯಜ್ಞದ ಕಥೆಯನ್ನು ವಿಶದವಾಗಿ ಹೇಳುವೆನು ; ಸಾವಧಾನದಿಂದ ಕೇಳು. ದೇವದೇವನಾದ ಶಂಕರನ ಮಾವನೂ, ಹಿಮವಂತನೆಂಬ ಹೆಸರಿನಿಂದ ವಿಖ್ಯಾತನೂ ಆದ ಪರ್ವತರಾಜನು–ವಿಂಧ್ಯಪರ್ವತದ ಸಮೀಪಕ್ಕೆ ಹೋಗಿ ಅವನನ್ನು ವೀಕ್ಷಿಸುತ್ತಾನೆ. ವಿಂಧ್ಯನೂ ಹಿಮವತ್ಪರ್ವತದ ಸಮೀಪಕ್ಕೆ ಹೋಗಿ ಉನ್ನತಶಿಖರವುಳ್ಳ ಹಿಮವಂತನನ್ನು ನೋಡುತ್ತಾನೆ.* ಪುರುಷೋತ್ತಮನೇ! ಹಿಮಾಚಲ ಮತ್ತು ವಿಂಧ್ಯಪರ್ವತಗಳ

---

* ಈ ಶ್ಲೋಕದ ಭಾವಾರ್ಥವನ್ನು ಹೀಗೆ ಹೇಳಬಹುದಾಗಿದೆ. ವಿಂಧ್ಯ-ಹಿಮಾಚಲಗಳು ಪರಸ್ಪರವಾಗಿ ವೀಕ್ಷಿಸುತ್ತಿದ್ದವೆಂಬ ಸೂಚನೆಯಿಂದ ಆ ಎರಡು ಪರ್ವತಗಳ ನಡುವೆ ಮತ್ತಾವ ಪರ್ವತಗಳೂ ಇರಲಿಲ್ಲವೆಂಬುದೂ, "ವಿಂಧ್ಯಪರ್ವತಮಾಸಾದ್ಯ"

ಮಧ್ಯದಲ್ಲಿರುವ ಆರ್ಯಾವರ್ತವು* ಯಜ್ಞಮಾಡಲು ಬಹಳ ಪ್ರಶಸ್ತವಾದ ಭೂಮಿಯಾಗಿರುವುದು. ಅದೇ ಸ್ಥಳದಲ್ಲಿಯೇ ಸಗರನ ಯಜ್ಞವು ಪ್ರಾರಂಭವಾಯಿತು. ಆ ಪುಣ್ಯಭೂಮಿಯಲ್ಲಿ ಸಗರನು ಯಜ್ಞಮಾಡಲು ಪ್ರಾರಂಭಿಸಿ ಯಜ್ಞಾಶ್ವವನ್ನು ವಿಧಿಪೂರ್ವಕವಾಗಿ ದೇಶಪರ್ಯಟನಕ್ಕೆ ಕಳುಹಿಸಿದನು. ಯಜ್ಞಾಶ್ವದ ರಕ್ಷಣೆಯನ್ನು ಧನುಷ್ಪಾಣಿಯಾದ ಮಹಾರಥನಾದ, ಸಗರನಿಗೆ ಅತ್ಯಂತವಿಧೇಯನಾಗಿದ್ದ ಅಂಶುಮಂತನು ವಹಿಸಿಕೊಂಡಿದ್ದನು. ಇಂದ್ರನು ಆ ಯಜ್ಞಕ್ಕೆ ತಡೆಮಾಡುವ ಇಚ್ಛೆಯಿಂದ ಸಗರನ ಯಜ್ಞದ ಅಶ್ವಾಲಂಭನದ ದಿನ ರಾಕ್ಷಸರೂಪವನ್ನು ತಾಳಿ ಕುದುರೆಯನ್ನು ಅಪಹರಿಸಿದನು. ಕುದುರೆಯು ಕಳೆದುಹೋಗಲಾಗಿ ಭ್ರಾಂತಿಗೊಂಡ ಋತ್ವಿಜರೆಲ್ಲರೂ ಯಜಮಾನನಾದ ಸಗರಚಕ್ರವರ್ತಿಯ ಬಳಿಗೆ ಬಂದು ಹೇಳಿದರು :

"ಮಹಾರಾಜ! ನಮ್ಮ ಅಶ್ವಮೇಧಾಶ್ವವನ್ನು ಅಶ್ವಾಲಂಭನದಿನದಲ್ಲಿ ಮಿಂಚಿನ ವೇಗದಲ್ಲಿ ಅಪಹರಿಸಿದ್ದಾರೆ. ಅಶ್ವಾಪಹಾರಿಯನ್ನು ಧ್ವಂಸಮಾಡಿ ಕುದುರೆಯು ಕೂಡಲೇ ನಮ್ಮ ಸಮೀಪಕ್ಕೆ ಬರುವಂತೆ ಮಾಡು. ಅಪಹೃತವಾಗಿರುವ ಕುದುರೆಯನ್ನು ಕರೆತರದಿದ್ದರೆ ಈ ಮಹಾಯಜ್ಞಕ್ಕೆ ವಿಘ್ನವುಂಟಾಗುತ್ತದೆ. ಇದು ಯಜಮಾನನಿಗೂ ಮತ್ತು ಋತ್ವಿಜರುಗಳಾದ ನಮಗೂ ಅಶುಭವೆಂದು ಹೇಳುತ್ತಾರೆ. ಆದುದರಿಂದ ಯಜ್ಞಕ್ಕೆ ವಿಘ್ನವಾಗದ ರೀತಿ ಯಲ್ಲಿ ಒಡನೆಯೇ ಕಾರ್ಯವನ್ನು ಪ್ರಾರಂಭಿಸು."

ಸಗರನು ಯಾಗಮಂಟಪದಲ್ಲಿ ಪುರೋಹಿತಪ್ರಮುಖರಾದ ಋತ್ವಿ

ಎಂಬುವುದರಿಂದ ಆ ಪ್ರದೇಶವು ಪ್ರಾಯಶಃ ಸಮಭೂಮಿಯಾಗಿತ್ತೆಂಬುದೂ ಬೋಧ್ಯವಾಗುತ್ತದೆ. ಈಗಲೂ ಆ ಭಾಗವು ಸಮಭೂಮಿಯಾಗಿಯೇ ಇದೆ. ಏರಿಳಿತಗಳಿದ್ದರೆ ಹಿಮವಂತನು ವಿಂಧ್ಯನನ್ನು ನೋಡುವ ಸಾಧ್ಯತೆಯಿರಲಿಲ್ಲ.

* "ಆರ್ಯಾವರ್ತಃ ಪುಣ್ಯಭೂಮಿಃ ಮಧ್ಯಂ ವಿಂಧ್ಯಹಿಮಾಲಯೋಃ" ಹಿಮಾಲಯಪರ್ವತಕ್ಕೂ ವಿಂಧ್ಯಪರ್ವತಕ್ಕೂ ಮಧ್ಯೆ ಇರುವ ಪ್ರದೇಶಕ್ಕೆ–ಆರ್ಯಾವರ್ತ, ಪುಣ್ಯಭೂಮಿ, ಎಂದು ಹೆಸರು. (ಅಮರಕೋಶ)

ಜರು ಹೇಳಿದ ಮಾತುಗಳನ್ನು ಕೇಳಿ ತನ್ನ ಅರುವತ್ತುಸಾವಿರ ಮಕ್ಕಳನ್ನೂ ಕರೆದು ಹೇಳಿದನು :

"ಮಕ್ಕಳಿರಾ! ಈ ಮಹಾಕ್ರತುವು ಪೂತಾತ್ಮರಾದ, ಮಹಾಭಾಗರಾದ, ಪುರೋಹಿತ-ಋತ್ವಿಜರುಗಳಿಂದ ಅನುಷ್ಠಿತವಾಗುತ್ತಿದ್ದರೂ ರಾಕ್ಷಸರ ಮಾಯೆಯಿಂದಾಗಿ ಯಜ್ಞಾಶ್ವವು ಅಪಹರಿಸಲ್ಪಟ್ಟು ನಾನು ಮುಂದಿನ ಮಾರ್ಗವನ್ನು ಕಾಣದವನಾಗಿದ್ದೇನೆ. ಆದುದರಿಂದ ನೀವೆಲ್ಲರೂ ಈಗಲೇ ಹೊರಟು ಸಮುದ್ರವೇ ಆವರಣವಾಗಿರುವ ಈ ಭೂವಲಯವನ್ನು ಸುತ್ತಾಡಿ ಅಶ್ವಮೇಧಾಶ್ವವನ್ನು ಹುಡುಕಿಕೊಂಡು ಬನ್ನಿರಿ. ನಿಮಗೆ ಮಂಗಳವಾಗಲಿ. ಒಂದು ವೇಳೆ ಈ ಭೂವಲಯದಲ್ಲಿ ಎಲ್ಲಿಯೂ ಕುದುರೆಯು ಸಿಕ್ಕದೆಯೇ ಹೋದರೆ ನನ್ನ ಆಜ್ಞಾನುಸಾರವಾಗಿ ಅಶ್ವಾಪಹಾರಿಯನ್ನು ಹುಡುಕುತ್ತಾ ಅಶ್ವದ ದರ್ಶನವಾಗುವವರೆಗೂ ಈ ಭೂಮಿಯನ್ನೇ ಅಗೆಯಿರಿ. ಯಜ್ಞ ದೀಕ್ಷೆಯನ್ನು ಕೈಗೊಂಡಿರುವ ನಾನು ನಿಮ್ಮ ಜೊತೆಯಲ್ಲಿ ಬರುವುದು ಸರಿ ಯಲ್ಲ. ಆದುದರಿಂದ ಅಪಹೃತವಾಗಿರುವ ಕುದುರೆಯ ಪುನರ್ದರ್ಶನವಾಗು ವವರೆಗೂ ನನ್ನ ಮೊಮ್ಮಗನಾದ ಅಂಶುಮಂತನೊಡನೆಯೂ ಮತ್ತು ಪುರೋಹಿತ-ಋತ್ವಿಜರುಗಳೊಡನೆಯೂ ನಾನು ಇಲ್ಲಿಯೇ ಇರುತ್ತೇನೆ. ನಿಮಗೆ ಮಂಗಳವಾಗಲಿ. ನೀವಿನ್ನು ಹೋಗಿಬನ್ನಿರಿ."

ರಾಘವ! ಮಹಾಬಲಶಾಲಿಗಳಾದ ಅರುವತ್ತುಸಾವಿರ ರಾಜಕುಮಾ ರರೂ ಸಂತುಷ್ಟಾಂತಃಕರಣರಾಗಿ ತಂದೆಯಾದ ಸಗರನಿಂದ ಆಜ್ಞಪ್ತರಾಗಿ ಕುದುರೆಯನ್ನರಸುವ ಸಲುವಾಗಿ ಭೂಮಂಡಲದ ನಾನಾಕಡೆಗಳಿಗೆ ಧಾವಿಸಿ ದರು. ಭೂಮಂಡಲದ ಎಲ್ಲೆಡೆಗಳಲ್ಲಿಯೂ ಅಶ್ವಮೇಧಾಶ್ವವನ್ನು ಹುಡುಕಿ ದರು. ಆದರೆ ಭೂಮಿಯ ಮೇಲೆ ಕುದುರೆಯು ಸಿಕ್ಕಲಿಲ್ಲ. ಅನಂತರದಲ್ಲಿ ಸಗರನ ಆಜ್ಞಾನುಸಾರವಾಗಿ ಒಬ್ಬೊಬ್ಬನೂ ಒಂದು ಯೋಜನ ಅಗಲ ಮತ್ತು ಒಂದು ಯೋಜನ ಉದ್ದ ಭೂಭಾಗವನ್ನು ವಿಂಗಡಿಸಿಕೊಂಡು ವಜ್ರಾ ಯುಧಕ್ಕೆ ಸಮನಾದ ತಮ್ಮ ಉಗುರುಗಳಿಂದಲೂ, ಸಿಡಿಲಿಗೆ ಸಮಾನವಾಗಿ ಶಬ್ದಮಾಡುವ ಶೂಲಾಯುಧಗಳಿಂದಲೂ, ಭೂಮಿಯನ್ನು ಸುಲಭವಾಗಿ ಉಳಲು ಸಮರ್ಥವಾದ ಬೃಹದಾಕಾರದ ನೇಗಿಲುಗಳಿಂದಲೂ ಆಗೆಯಲು

ಪ್ರಾರಂಭಿಸಿದರು. ಅವರಿಂದ ಭೇದಿಸಲ್ಪಡುತ್ತಿದ್ದ ಭೂದೇವಿಯು ಘೋರ ಧ್ವನಿಮಾಡಿದಳು. ಆ ಅರುವತ್ತುಸಾವಿರ ರಾಜಕುಮಾರರೂ ಭೂಮಿಯನ್ನು ಅಗೆಯುತ್ತಿದ್ದಾಗ ಅವರ ಪ್ರಹಾರಕ್ಕೆ ಸಿಕ್ಕಿ ಸಾಯುತ್ತಿದ್ದ, ಪಾತಾಳಲೋಕ ನಿವಾಸಿಗಳಾದ, ಮಹಾಸತ್ವರಾದ ಸರ್ಪಗಳ, ಅಸುರರ, ರಾಕ್ಷಸರ ಘೋರ ನಿನಾದವುಂಟಾಯಿತು. ಅತ್ಯಲ್ಪಕಾಲದಲ್ಲಿಯೇ ಮಹಾಶೂರರಾದ ಸಗರನ ಮಕ್ಕಳು ಅರುವತ್ತುಸಾವಿರ ಯೋಜನದಗಲವೂ, ಅರುವತ್ತುಸಾವಿರ ಯೋಜನದುದ್ದವೂ ಇರುವ ಭೂಭಾಗವನ್ನು–ಲೋಕೋತ್ತಮವಾದ ರಸಾತಲವನ್ನು ಜಯಿಸಲೋ–ಎಂಬಂತೆ ಅಗೆದರು.* ರಾಮಭದ್ರ! ಈ ರೀತಿಯಾಗಿ ಪರ್ವತಗಳಿಂದ ನಿಬಿಡವಾದ ಈ ಜಂಬೂದ್ವೀಪವನ್ನು ಸಗರನ ಮಕ್ಕಳು ಅಗೆಯುತ್ತಾ, ಕುದುರೆಯನ್ನು ಹುಡುಕುವ ಸಲುವಾಗಿ ಎಲ್ಲೆಡೆಗಳಲ್ಲಿಯೂ ಸಂಚರಿಸಿದರು. ಪಾತಾಳಲೋಕವಾಸಿಗಳಾದ ಸರ್ಪಗಳೂ, ಅಸುರ-ರಾಕ್ಷಸರೂ ಸಗರನ ಮಕ್ಕಳಿಂದ ಸಾವಿರಾರು ಸಂಖ್ಯೆಯಲ್ಲಿ ಕೊಲ್ಲಲ್ಪಡುತ್ತಿರುವುದನ್ನು ಕಂಡು ಭ್ರಾಂತರಾದ ದೇವತೆಗಳೂ, ಗಂಧರ್ವಾಪ್ಸರೆಯರೂ ಮತ್ತು ಸರ್ಪಾಧಿದೇವತೆಗಳೂ ಪಿತಾಮಹನಾದ ಬ್ರಹ್ಮನ ಸಮೀಪಕ್ಕೆ ಹೋದರು. ಮಹಾತ್ಮನಾದ ಪಿತಾಮಹನನ್ನು ಪೂಜೆ ಮತ್ತು ಸ್ತೋತ್ರಗಳಿಂದ

---

* ಈ ಶ್ಲೋಕದಲ್ಲಿ–"ಅನುತ್ತಮಂ ರಸಾತಲಂ ಧರಣೀಂ ಬಿಭಿದುಃ" 'ಉತ್ತಮೋತ್ತಮವಾದ ರಸಾತಲವನ್ನು, ಭೂಮಿಯನ್ನು ಭೇದಿಸಿದರು ಅಥವಾ ಅಗೆದರು'–ಎಂದಿರುತ್ತದೆ. ಇದರಿಂದ ವಾಕ್ಯವು ಪೂರ್ಣವಾಗುವುದಿಲ್ಲ. ಆದುದರಿಂದ ಒಬ್ಬೊಬ್ಬ ವ್ಯಾಖ್ಯಾನಕಾರರು ತಮಗೆ ಸರಿ ಎನಿಸಿದ ಪದವನ್ನು ಅಧ್ಯಾಹಾರ ಮಾಡಿಕೊಂಡಿರುತ್ತಾರೆ. ೧) ಅನುತ್ತಮಂ ರಸಾತಲಂ ವಿಜೇತುಂ ೨) ಅನುತ್ತಮಂ ರಸಾತಲಂ ಕರ್ತುಂ ೩) ಅನುತ್ತಮಂ ರಸಾತಲಂ ಯಥಾ ತಥಾ ೧) ರಸಾತಲವನ್ನು ಜಯಿಸಲೋ ಎಂಬಂತೆ ೨) ರಸಾತಲವನ್ನು ಸೃಷ್ಟಿಸಲು ೩) ರಸಾತಲದ ರೀತಿಯಲ್ಲಿ ಇವುಗಳಲ್ಲಿ 'ವಿಜೇತುಂ' ಎಂಬುದೇ ಹೃದ್ಯವಾಗಿದೆಯೆಂಬುದು ನಮ್ಮ ಅಭಿಪ್ರಾಯವಾಗಿದೆ. "ಬಿಭಿದುರ್ನರಶಾರ್ದೂಲ' ಎಂಬ ಪಾಠವನ್ನು ಅಂಗೀಕರಿಸಿ, 'ರಸಾತಲಂ = ಭೂತಲಂ ಬಿಭಿದುಃ –ಭೂತಲವನ್ನು ಅಗೆದರು'–ಎಂದೂ ಅರ್ಥಮಾಡಬಹುದು. 'ರಸಾ ವಿಶ್ವಂಭರಾಸ್ಥಿರಾ' ಎಂಬ ಅಮರಕೋಶದಂತೆ 'ರಸಾ' ಶಬ್ದಕ್ಕೆ ಭೂಮಿಯೆಂದೂ ಅರ್ಥವಾಗುತ್ತದೆ.

ಯಥಾವಿಧಿಯಾಗಿ ಆರಾಧಿಸಿ, ಕುಂದಿದ ಮುಖಾರವಿಂದಗಳಿಂದ ಕೂಡಿ ಭ್ರಾಂತರಾಗಿದ್ದ ದೇವತೆಗಳು ಬ್ರಹ್ಮನಿಗೆ ಹೇಳಿದರು :

"ಮಹಾಮಹಿಮನೇ! ಸಗರರಾಜನ ಅರುವತ್ತುಸಾವಿರ ಮಕ್ಕಳೂ ಈ ಜಂಬೂದ್ವೀಪವನ್ನು ಅಗೆಯುತ್ತಿದ್ದಾರೆ. ಇದರಿಂದಾಗಿ ರಸಾತಲನಿವಾಸಿಗಳಾದ ಅನೇಕಮಹಾತ್ಮರು ನಾಶಹೊಂದುತ್ತಿದ್ದಾರೆ. ಮಹಾನುಭಾವ! ಅವರು ಭೂಮಿಯನ್ನು ಅಗೆಯುವಾಗ ಸಿಕ್ಕಿದ ರಸಾತಲದ ಜೀವಿಗಳನ್ನು ಹಿಡಿದು–'ಇವನೇ ನಮ್ಮ ಕುದುರೆಯನ್ನು ಅಪಹರಿಸಿರುವವನು. ಆದುದ ರಿಂದ ನಮ್ಮ ಯಜ್ಞದ ವಿನಾಶಕನೂ ಇವನೇ ಆಗಿರುವನು'–ಎಂದು ಹೇಳುತ್ತಾ ಕೊಂದುಹಾಕುತ್ತಿದ್ದಾರೆ. ಹೀಗೆ ಅವರು ಸಕಲಪ್ರಾಣಿಗಳನ್ನೂ ಹಿಂಸಿಸುತ್ತಿದ್ದಾರೆ."

ಳ೯ನೆಯ ಸರ್ಗವು ಮುಗಿಯಿತು.

ಬಾಲಕಾಂಡ ೪೦ನೆಯ ಸರ್ಗ

ಸಗರಪುತ್ರರು ವಿನಾಶಹೊಂದುವರೆಂಬುದನ್ನು ಸೂಚಿಸಿ ಬ್ರಹ್ಮನು ದೇವತೆಗಳನ್ನು ಸಮಾಧಾನಗೊಳಿಸಿದುದು : ಸಗರನ ಮಕ್ಕಳು ಭೂಮಿಯನ್ನು ಅಗೆಯುತ್ತಾ ಕಪಿಲಮಹರ್ಷಿಗಳ ಬಳಿಗೆ ಹೋದುದು : ಕಪಿಲರು ಕುಪಿತರಾಗಿ ಸಗರನ ಮಕ್ಕಳನ್ನು ದಹಿಸಿದುದು

ದೇವತಾನಾಂ ವಚಃ ಶ್ರುತ್ವಾ ಭಗವಾನ್ಸ್ವೈ ಪಿತಾಮಹಃ ।
ಪ್ರತ್ಯುವಾಚ ಸುಸಂತ್ರಸ್ತಾನ್ಕೃತಾನ್ತಬಲಮೋಹಿತಾನ್ ॥೧॥

ದೇವತೆಗಳ ಆ ಮಾತುಗಳನ್ನು ಕೇಳಿ ಭಗವಂತನಾದ ಚತುರ್ಮುಖ ಬ್ರಹ್ಮನು–ಯಮನಂತೆಯೇ ಸರ್ವವನ್ನೂ ವಿನಾಶಮಾಡುವ ಸಾಮರ್ಥ್ಯವುಳ್ಳ ಸಗರಪುತ್ರರ ಅಪ್ರತಿಮಪರಾಕ್ರಮದಿಂದ ಭ್ರಾಂತರಾದ ಮತ್ತು ಭೀತರಾದ ದೇವತೆಗಳಿಗೆ ಹೇಳಿದನು :

"ದೇವತೆಗಳೇ! ನೀವು ಭಯಪಡುವ ಕಾರಣವಿಲ್ಲ. ಸರ್ವತ್ರ

ವ್ಯಾಪ್ತಳಾಗಿರುವ ಈ ಭೂದೇವಿಯು–ಜ್ಞಾನಪ್ರಭುವೂ, ಬುದ್ಧಿನಿಯಾಮಕನೂ, ರಮಾಪತಿಯೂ ಆದ ವಾಸುದೇವನ ಮಹಿಷಿಯಾಗಿದ್ದಾಳೆ. ಭಗವಂತನಾದ, ಪ್ರಭುವಾದ ವಾಸುದೇವನೇ ಕಾಪಿಲರೂಪವನ್ನು ಧರಿಸಿ ಈ ಭೂದೇವಿಯನ್ನು ಯೋಗಬಲದಿಂದ ಧರಿಸಿರುವವನು. ಅಪ್ರತಿಮಪರಾಕ್ರಮಿಗಳಾಗಿರುವ ಸಗರನ ಅರುವತ್ತುಸಾವಿರ ಮಕ್ಕಳೂ ಕಪಿಲಮಹರ್ಷಿಗಳ ಕೋಪಾಗ್ನಿಯಿಂದ ಭಸ್ಮೀಭೂತರಾಗುತ್ತಾರೆ. ಮೇಲಾಗಿ ಪೃಥ್ವಿಯ ಅಗೆತವೆಂಬುದು ಪ್ರತಿಯೊಂದು ಕಲ್ಪದಲ್ಲಿಯೂ ಆಗುತ್ತಲೇ ಇರುತ್ತದೆ. ಇದು ಸನಾತನವಾದುದು. ಅಗೆತದ ಕಾರಣದಿಂದಾಗಿ ಅಲ್ಪಾಯುಗಳಾದ ಸಗರನ ಮಕ್ಕಳು ವಿನಾಶವಾಗುವರೆಂಬುದೂ ಸನಾತನವಾದುದು. ಪ್ರತಿಯೊಂದು ಕಲ್ಪದಲ್ಲಿಯೂ ನಡೆಯುತ್ತಲೇ ಇರುತ್ತದೆ. ಆದುದರಿಂದ ನೀವಾರೂ ಭ್ರಾಂತರಾಗುವ ಅಥವಾ ಶೋಕಪಡುವ ಕಾರಣವಿಲ್ಲ.”

ರಾಮ! ಶತ್ರುಗಳ ಅಹಂಕಾರವನ್ನು ದಮನಮಾಡುವ ಸಾಮರ್ಥ್ಯವುಳ್ಳ ಮೂವತ್ತುಮೂರು ದೇವತೆಗಳೂ* ಪಿತಾಮಹನ ಆ ಮಾತುಗಳನ್ನು ಕೇಳಿ ಪರಮಸಂತುಷ್ಟರಾಗಿ ತಮ್ಮ ತಮ್ಮ ಲೋಕಗಳಿಗೆ ತೆರಳಿದರು. ಇತ್ತಲಾಗಿ ಸಗರಪುತ್ರರು ಭೂಮಿಯನ್ನು ಅಗೆಯುತ್ತಲೇ ಇದ್ದರು. ಮಹಾತ್ಮರಾದ ಸಗರನ ಮಕ್ಕಳಿಂದ ಭೂದೇವಿಯು ಭಗ್ನವಾಗುತ್ತಿರಲು ಅಶುಭಸೂಚಕ ವಾದ, ಸಿಡಿಲಿಗೆ ಸಮನಾದ ಘೋರಶಬ್ದವು ಕೇಳಿಬಂದಿತು. ಮೊದಲು ಕುದುರೆಯನ್ನು ಹುಡುಕಲು ಭೂಮಂಡಲವೆಲ್ಲವನ್ನೂ ಪ್ರದಕ್ಷಿಣೆಮಾಡಿ ಕುದುರೆಯನ್ನು ಕಾಣದೇ ಅನಂತರ ಭೂಮಿಯನ್ನು ಅರುವತ್ತುಸಾವಿರ ಯೋಜನಪರ್ಯಂತವಾಗಿ ಅಗೆದು ಅಲ್ಲಿಯೂ ಕುದುರೆಯನ್ನು ಕಾಣದೇ ಅಶುಭಸೂಚಕವಾದ ಘೋರಶಬ್ದವನ್ನು ಕೇಳಿದ ಸಗರನ ಮಕ್ಕಳು ತಮ್ಮ ತಂದೆಯ ಬಳಿಗೆ ಹೋಗಿ ಹೇಳಿದರು :

“ತಂದೆಯೇ! ನಿನ್ನಿಂದ ಆಜ್ಞಪ್ತರಾದ ನಾವು ಅಶ್ವವನ್ನೂ ಮತ್ತು ಅಶ್ವಾಪಹಾರಕನನ್ನೂ ಹುಡುಕುವ ಸಲುವಾಗಿ ಅಖಂಡಭೂಮಂಡಲವನ್ನೂ

---

* ರುದ್ರರು ೧೧, ಆದಿತ್ಯರು ೧೨, ವಸುಗಳು ೮, ಅಶ್ವಿನೀ ದೇವತೆಗಳು ೨–ಇವರುಗಳೇ ೩೩ ದೇವತೆಗಳು.

ಪ್ರದಕ್ಷಿಣೆಮಾಡಿದೆವು. ಪೃಥ್ವಿಯ ಮೇಲೆ ಅಶ್ವವು ಸಿಕ್ಕದೇ ಇದ್ದುದರಿಂದ ಭೂಮಿಯನ್ನಗೆಯಲು ಪ್ರಾರಂಭಿಸಿದೆವು. ನಾವು ಹಾಗೆಯೇ ಅಗೆಯುತ್ತಿದ್ದಾಗ ಬಲಿಷ್ಠರಾದ ಅನೇಕ ದೇವ-ದಾನವ-ರಾಕ್ಷಸರೂ, ಪಿಶಾಚ-ಉರಗ-ಕಿನ್ನರರೂ ವಿನಾಶಹೊಂದಿದರು. ಅರುವತ್ತು ಸಾವಿರ ಯೋಜನಗಳಷ್ಟು ಭೂಮಿಯನ್ನಗೆದರೂ ನಮಗೆ ಆ ಅಶ್ವವಾಗಲೀ, ಅಶ್ವದ ಅಪಹಾರಕನಾಗಲೀ ಸಿಕ್ಕಲಿಲ್ಲ. ಇನ್ನು ಮುಂದೆ ನಾವು ಅಶ್ವಾಹರಣಕ್ಕೆ ಯಾವ ಉಪಾಯವನ್ನು ಮಾಡಬೇಕೆಂಬುದನ್ನು ಪರ್ಯಾಲೋಚಿಸಿ ಹೇಳು. ನೀನು ಹೇಳಿದಂತೆ ಮಾಡಲು ಸಿದ್ಧರಾಗಿರುವೆವು. ನಿನಗೆ ಮಂಗಳವಾಗಲಿ."

ತಾನು ಹೇಳಿದ ಕಾರ್ಯದಲ್ಲಿ ಕೃತಕೃತ್ಯರಾಗದೇ ಹಿಂದಿರುಗಿ ಬಂದ ಮಕ್ಕಳ ಮಾತುಗಳನ್ನು ಕೇಳಿ ರಾಜಸತ್ತಮನಾದ ಸಗರನು ಕೋಪಾವಿಷ್ಟನಾಗಿ ಹೇಳಿದನು :

"ರಾಜಕುಮಾರರೇ! ನೀವುಗಳೀಗಲೇ ಹೋಗಿ ಭೂಮಿಯನ್ನು ಪುನಃ ಅಗೆಯಿರಿ. ವಸುಧಾತಲವನ್ನೇ ಭೇದಿಸಿರಿ. ಅಲ್ಲಿಯಾದರೂ ನಮ್ಮ ಅಶ್ವವೂ ಅಶ್ವಾಪಹಾರಕನೂ ಸಿಕ್ಕಬಹುದು. ಅಶ್ವಾಪಹಾರಿಯನ್ನು ಹುಡುಕಿ ಕೃತಾರ್ಥರಾಗಿ ಹಿಂದಿರುಗಿರಿ. ನಿಮಗೆ ಮಂಗಳವಾಗಲಿ."

ರಾಮ! ಮಹಾತ್ಮನಾದ ಸಗರನ ಮಾತನ್ನು ಅಂಗೀಕರಿಸಿ ಸಗರನ ಮಕ್ಕಳು ಪುನಃ ಭೂಮಿಯನ್ನು ಭೇದಿಸುತ್ತಾ ರಸಾತಲದ ಕಡೆಗೆ ಧಾವಿಸಿದರು. ಹಾಗೆ ಅಗೆಯುತ್ತಿದ್ದ ಸಮಯದಲ್ಲಿ ಭೂಮಿಯನ್ನು ತನ್ನ ತಲೆಯಲ್ಲಿ ಧರಿಸಿದ್ದ ಪರ್ವತೋಪಮವಾದ 'ವಿರೂಪಾಕ್ಷ' ವೆಂಬ ದಿಗ್ಗಜವನ್ನು ಕಂಡರು. ಗಿರಿ-ದುರ್ಗ-ಪರ್ವತಗಳಿಂದಲೂ ವನಗಳಿಂದಲೂ ನಿಬಿಡವಾದ, ವಿಶಾಲವಾದ ಈ ಪೃಥ್ವಿಯನ್ನು ವಿರೂಪಾಕ್ಷವೆಂಬ ಮಹಾದಿಗ್ಗಜವು ಶಿರಸ್ಸಿನಿಂದ ಧರಿಸಿರುವುದು.

ಆ ಮಹಾಗಜವು ಅನವರತವಾದ ಭೂಧಾರಣೆಯಿಂದ ಆಯಾಸಪಟ್ಟು ಒಂದು ಕ್ಷಣವಾದರೂ ವಿಶ್ರಾಂತಿಹೊಂದುವ ಆಶಯದಿಂದ ತಲೆ ಯನ್ನು ಯಾವ ಸಮಯದಲ್ಲಿ ಅಳ್ಳಾಡಿಸುವುದೋ ಆಗಲೇ ಭೂಮಿಯ ಕಂಪನವಾಗುವುದು. ಸಗರಪುತ್ರರು ದಿಶಾಪಾಲನಾದ ವಿರೂಪಾಕ್ಷಮಹಾಗಜ

ವನ್ನು ಪ್ರದಕ್ಷಿಣೆಮಾಡಿ ಯಥಾವಿಧಿಯಾಗಿ ಪೂಜಿಸಿ, ಕುದುರೆಗಾಗಿ ಪುನಃ ರಸಾತಲವನ್ನು ಭೇದಿಸುತ್ತಾ ಮುಂದೆ ನಡೆದರು. ಪೂರ್ವದಿಕ್ಕಿನ ಭೂಭಾಗ ವನ್ನೆಲ್ಲಾ ಪೂರ್ಣವಾಗಿ ಅಗೆದು ಮುಗಿಸಿದನಂತರ ಸಗರನ ಮಕ್ಕಳು ದಕ್ಷಿಣ ದಿಕ್ಕಿನ ಭೂಭಾಗವನ್ನು ಅಗೆಯಲು ಪ್ರಾರಂಭಿಸಿದರು. ಅಲ್ಲಿ ಅವರು ಮಹಾತ್ಮನಾದ, ಮಹಾಪರ್ವತಸದೃಶನಾದ, ತಲೆಯ ಮೇಲೆ ಭೂಮಿಯನ್ನು ಧರಿಸಿದ್ದ 'ಮಹಾಪದ್ಮ'ವೆಂಬ ಹೆಸರಿನ ಮಹಾಗಜವನ್ನು ಕಂಡು ವಿಸ್ಮಿತರಾದರು. ಆ ಆನೆಗೂ ಸಗರನ ಮಕ್ಕಳು ಪೂಜಾ-ಪ್ರದಕ್ಷಿಣೆಗಳನ್ನು ಯಥಾವಿಧಿಯಾಗಿ ಮಾಡಿ, ಭೂಮಿಯ ದಕ್ಷಿಣಭಾಗವನ್ನು ಪೂರ್ಣವಾಗಿ ಅಗೆದು ಮುಗಿಸಿ ಪಶ್ಚಿಮದಿಕ್ಕನ್ನಗೆಯಲು ಉಪಕ್ರಮಿಸಿದರು. ಆ ದಿಕ್ಕಿನಲ್ಲಿ ಮಹಾಕಾರವುಳ್ಳ, ಪರ್ವತೋಪಮವಾದ, 'ಸೌಮನಸ'ವೆಂಬ ದಿಗ್ಗಜವನ್ನು ಮಹಾಬಲರಾದ ಸಗರನ ಮಕ್ಕಳು ಕಂಡರು. ಸೌಮನಸದಿಗ್ಗಜವನ್ನೂ ಪೂಜಾ-ಪ್ರದಕ್ಷಿಣೆಗಳಿಂದ ಯಥಾವಿಧಿಯಾಗಿ ಪೂಜಿಸಿ, ಪಶ್ಚಿಮದಿಕ್ಕನ್ನು ಅಗೆದು ಪೂರೈಸಿ, ಭೂಮಿಯ ಉತ್ತರಭಾಗವನ್ನಗೆಯಲು ಉಪಕ್ರಮಿಸಿ ದರು. ಅಲ್ಲಿ ಹಿಮದಂತೆ ಬಿಳುಪಾದ ರೂಪಕಾಂತಿಯಿಂದ ಕೂಡಿದ್ದ, ಮಂಗಳಕರವಾದ ಶರೀರಲಕ್ಷಣವುಳ್ಳ, ಭೂಲೋಕವನ್ನು ಉತ್ತರದಿಕ್ಕಿನಲ್ಲಿ ಧರಿಸಿರುವ 'ಭದ್ರ'ವೆಂಬ ದಿಗ್ಗಜವನ್ನು ಕಂಡರು. ಆ ಮಹಾಗಜವನ್ನೂ ಸ್ಪರ್ಶಿಸಿ, ಪೂಜಿಸಿ ಪ್ರದಕ್ಷಿಣೆಮಾಡಿದನಂತರ, ಉತ್ತರದಿಕ್ಕಿನ ಭೂಮಿಯನ್ನು ಸಂಪೂರ್ಣವಾಗಿ ಅಗೆದು ಮುಗಿಸಿದರು. ಅಲ್ಲಿಯೂ ಅಶ್ವವನ್ನಾಗಲೀ, ಅಶ್ವಾಪಹಾರಿಯನ್ನಾಗಲೀ ಕಾಣದೇ ರೋಷಾವಿಷ್ಟರಾಗಿ, ಪ್ರಸಿದ್ಧವಾದ ಈಶಾನ್ಯದಿಕ್ಕಿಗೆ ಹೋಗಿ, ಅಲ್ಲಿ ಭೂಮಿಯನ್ನು ಅಗೆಯತೊಡಗಿದರು. ರಾಘವ! ಅತಿವೇಗಶಾಲಿಗಳಾದ, ಮಹಾಬಲರಾದ, ಮಹಾತ್ಮರಾದ ಸಗರನ ಪುತ್ರರು ಈಶಾನ್ಯದಿಕ್ಕಿನಲ್ಲಿ ಸನಾತನಾದ ಕಪಿಲರೂಪಧಾರಿಯಾದ ವಾಸು ದೇವನನ್ನು ಕಂಡರು. ಕಪಿಲಮಹರ್ಷಿಗೆ ಹತ್ತಿರದಲ್ಲಿಯೇ ಅತ್ತಲಿತ್ತ ಸಂಚರಿ ಸುತ್ತಿದ್ದ ಅಶ್ವಮೇಧಾಶ್ವವನ್ನೂ ಕಂಡರು. ಕುದುರೆಯನ್ನು ಕಂಡೊಡನೆಯೇ ಅವರ ಸಂತೋಷಕ್ಕೆ ಪಾರವಿಲ್ಲವಾಯಿತು. ಆದರೆ, ರಘುನಂದನ! ಅವರ ಆ ಆನಂದವು ಹೆಚ್ಚುಕಾಲ ಉಳಿಯಲಿಲ್ಲ. ಕುದುರೆಯ ಸಮೀಪದಲ್ಲಿದ್ದ ಕಪಿಲಮುನಿಯೇ ಅಶ್ವಾಪಹಾರಕನು ; ಯಜ್ಞಘಾತಕನು–ಎಂದು ಭ್ರಮಿಸಿದ

ಅವರು ಕೋಪದಿಂದ ಹಿಗ್ಗಿದ ಕಣ್ಣುಗಳಿಂದ ಕಪಿಲನನ್ನು ದುರ-ದುರನೆ ನೋಡುತ್ತಾ, ತಮ್ಮ ಕೈಲಿದ್ದ ಗುದ್ದಲಿ, ನೇಗಿಲು, ಮರ ಮತ್ತು ಕಲ್ಲುಗಳನ್ನು ಮೇಲೆತ್ತಿ–“ನಿಲ್ಲು, ನಿಲ್ಲು”–ಎಂದು ಕೂಗಿಕೊಳ್ಳುತ್ತಾ ಮಹರ್ಷಿಯ ಸಮೀಪಕ್ಕೆ ಧಾವಿಸಿದರು.



“ದುಷ್ಟಬುದ್ಧಿಯೇ! ನೀನೇ ನಮ್ಮ ಅಶ್ವಮೇಧಾಶ್ವದ ಅಪಹಾರಕನು. ಯಜ್ಞದೀಕ್ಷೆಯಲ್ಲಿರುವ ಮಹಾತ್ಮನಾದ ಸಗರನ ಮಕ್ಕಳಾದ ನಾವು ನಿನ್ನನ್ನು ಹುಡುಕಲೆಂದೇ ಬಂದಿರುತ್ತೇವೆ.” ಸಗರಪುತ್ರರ ಘೋರಶಬ್ದದಿಂದಾಗಿ ಮಹರ್ಷಿಯು ಯೋಗಮುದ್ರೆಯಿಂದ ವಿಮುಖನಾಗಿ ಅವರ ದುಷ್ಟವಾದ ಕೂಗಾಟವನ್ನು ಕೇಳಿ ಉಗ್ರಮೂರ್ತಿಯಾದನು. ಅಮಿತವಾದ ತೇಜಸ್ಸಿನಿಂದಲೂ ಮತ್ತು ಉಗ್ರವಾದ ಕೋಪದಿಂದಲೂ ಕೂಡಿದ್ದ ಅವನೊಮ್ಮೆ

'ಹೂಂ' ಕರಿಸಿದನು. ಅಪರಿಮಿತವಾದ ತೇಜಸ್ಸಿನಿಂದ ಕೂಡಿದ್ದ ಮಹಾತ್ಮನಾದ ಕಪಿಲನ 'ಹೂಂ' ಕಾರಮಾತ್ರದಿಂದಲೇ ಸಗರನ ಅರುವತ್ತು ಸಾವಿರ ಮಕ್ಕಳೂ ನಿಮಿಷಮಾತ್ರದಲ್ಲಿ ಭಸ್ಮರಾಶಿಯಾಗಿಬಿಟ್ಟರು.

೪೦ನೆಯ ಸರ್ಗವು ಮುಗಿಯಿತು.

ಬಾಲಕಾಂಡ ೪೧ನೆಯ ಸರ್ಗ

ಸಗರನ ಆಜ್ಞೆಯಂತೆ ಅಂಶುಮಂತನು ರಸಾತಲಕ್ಕೆ ಹೋಗಿ ಕುದುರೆಯನ್ನು ತಂದುದು : ಮಕ್ಕಳ ನಿಧನವಾರ್ತೆಯನ್ನು ತಿಳಿದು ಸಗರನು ಶೋಕಾಕುಲನಾಗಿ ಯಜ್ಞವನ್ನು ಪೂರ್ಣಮಾಡಿದುದು

ಪುತ್ರಾಂಶ್ಚಿರಗತಾನ್ ಜ್ಞಾತ್ವಾ ಸಗರೋ ರಘುನನ್ದನ ।
ನಪ್ತಾರಮಬ್ರವೀದ್ರಾಜಾ ದೀಪ್ಯಮಾನಂ ಸ್ವತೇಜಸಾ ॥೧॥

ರಘುನಂದನನೇ! ಇತ್ತಲಾಗಿ ಬಹಳ ದಿನಗಳು ಕಳೆದರೂ ತನ್ನ ಮಕ್ಕಳು ಬರದಿರುವುದನ್ನು ತಿಳಿದು ಸಗರನು ದಿವ್ಯತೇಜಸ್ಸಿನಿಂದ ಕಂಗೊಳಿ ಸುತ್ತಿದ್ದ ಮೊಮ್ಮಗನಾದ ಅಂಶುಮಂತನಿಗೆ ಹೇಳಿದನು :

"ಅಂಶುಮಂತ! ನೀನು ವಿದ್ಯಾಸಂಪನ್ನನೂ, ಶೂರನೂ, ನಮ್ಮ ಪೂರ್ವಜರಂತೆ ಅಮಿತವಾದ ತೇಜಸ್ವಿಯೂ ಆಗಿರುವೆ. ನೀನೀಗಲೇ ಹೊರಟು ನಿನ್ನ ಚಿಕ್ಕಪ್ಪಂದಿರು ಏನಾದರು? ಎಲ್ಲಿಗೆ ಹೋದರು? ಕುದುರೆಯು ಎಲ್ಲಿದೆ? ಅಶ್ವಾಪಹಾರಕನಾರು?–ಇವೆಲ್ಲವನ್ನೂ ತಿಳಿದು ಬಾ. ಮಗು! ನೀನು ನಿನ್ನ ಚಿಕ್ಕಪ್ಪಂದಿರನ್ನು ಹುಡುಕಲು ಪಾತಾಳಲೋಕಕ್ಕೆ ಹೋಗಬೇಕಾಗಿದೆ. ಏಕೆಂದರೆ : ಪೃಥ್ವಿಯ ಯಾವ ಕಡೆಗಳಲ್ಲಿಯೂ ಅಶ್ವ ಮೇಧಾಶ್ವವು ಸಿಕ್ಕಲಿಲ್ಲವೆಂಬುದನ್ನು ಕೇಳಿ ಭೂಮಿಯನ್ನು ಸೀಳಿಯಾದರೂ ಅಶ್ವಮೇಧಾಶ್ವವನ್ನು ಹುಡುಕಿ ತನ್ನಿರೆಂದು ನಾನು ಅವರಿಗೆ ಆಜ್ಞಾಪಿಸಿದ್ದೆನು. ಆದುದರಿಂದ ಅವರು ಭೂಮಿಯನ್ನಗೆದು ಪಾತಾಳಕ್ಕೆ ಹೋಗಿರಬಹುದು. ಭೂಮಿಯ ಒಳಭಾಗದಲ್ಲಿ ಮಹಾವೀರ್ಯ-ಮಹಾಸತ್ವಗಳಿಂದ ಕೂಡಿರುವ ಅನೇಕ ಪ್ರಾಣಿವಿಶೇಷಗಳಿವೆ. ಅವುಗಳನ್ನು ಧ್ವಂಸಮಾಡುವ ಸಲುವಾಗಿ ಕತ್ತಿ

ಯನ್ನೂ ಮತ್ತು ಧನುರ್ಬಾಣಗಳನ್ನೂ ತೆಗೆದುಕೊಂಡು ಹೋಗು. ಪೂಜಾರ್ಹರಾದವರನ್ನು ಪೂಜಿಸಿ ಅಭಿವಾದನಮಾಡಿ, ಅಶ್ವಾಹರಣಕ್ಕೆ ವಿಘ್ನಮಾಡಲು ಬಂದವರನ್ನು ಸಂಹರಿಸಿ, ಸಿದ್ಧಾರ್ಥನಾಗಿ, ಅಶ್ವಸಮೇತನಾಗಿ ಹಿಂದಿರುಗು. ನಾನು ಆರಂಭಿಸಿರುವ ಈ ಯಜ್ಞವನ್ನು ಪೂರ್ಣಗೊಳಿಸು."

ರಾಘವ! ಮಹಾತ್ಮನಾದ ಸಗರನು ಅಂಶುಮಂತನಿಗೆ ಹೀಗೆ ಎಲ್ಲ ವಿಷಯಗಳನ್ನೂ ಹೇಳಿದನಂತರ ಶೀಘ್ರಗಾಮಿಯಾದ ಅಂಶುಮಂತನು ಸಗರನ ನಿರ್ದೇಶದಂತೆ ಖಡ್ಗವನ್ನೂ, ಧನುರ್ಬಾಣಗಳನ್ನೂ ತೆಗೆದುಕೊಂಡು ಅಶ್ವಾಹರಣಕ್ಕಾಗಿ ಹೊರಟನು. ರಾಜನ ಅಪ್ಪಣೆಯಂತೆ ಅಂಶುಮಂತನು ಮಹಾತ್ಮರಾದ ತನ್ನ ಪಿತೃಗಳಿಂದ ಅಗೆಯಲ್ಪಟ್ಟಿದ್ದ ಮಾರ್ಗದ ಮೂಲಕವಾಗಿ ಭೂಮಿಯ ಕೆಳಕ್ಕೆ ಹೋದನು. ಸಗರನ ಮಕ್ಕಳು ಭೂಮಿಯನ್ನು ಅಗೆಯುತ್ತಿದ್ದಾಗ ಸಂದರ್ಶಿಸಿದ್ದಂತೆಯೇ ದೇವ-ದಾನವ-ರಾಕ್ಷಸರಿಂದಲೂ, ಪಿಶಾಚ-ಪತಗ-ಸರ್ಪಗಳಿಂದಲೂ ಪೂಜಿಸಲ್ಪಡುವ ವಿರೂಪಾಕ್ಷವೆಂಬ ದಿಗ್ಗಜವನ್ನು ಅದೇ ಮಾರ್ಗವಾಗಿ ಹೊರಟ ತೇಜಸ್ವಿಯಾದ ಅಂಶಮಂತನೂ ಕಂಡನು. ದಿಗ್ಗಜಕ್ಕೆ ಪ್ರದಕ್ಷಿಣ-ನಮಸ್ಕಾರಗಳನ್ನು ಮಾಡಿ ಅದರ ಕುಶಲವನ್ನು ಕೇಳಿ, ತನ್ನ ಪಿತೃಗಳ ವಿಷಯವಾಗಿಯೂ ಮತ್ತು ಅಶ್ವಾಪಹಾರಕನ ವಿಷಯ ವಾಗಿಯೂ ಪ್ರಶ್ನಿಸಿದನು. ಮಹಾಮತಿಯಾದ ವಿರೂಪಾಕ್ಷದಿಗ್ಗಜವು ಅಂಶು ಮಂತನಿಗೆ ಉತ್ತರಿಸಿತು :

"ಅಸಮಂಜಪುತ್ರ! ನೀನು ಕೃತಾರ್ಥನಾಗಿ ಅತ್ಯಲ್ಪಕಾಲದಲ್ಲಿಯೇ ಕುದುರೆಯೊಡನೆ ನಿನ್ನ ತಾತನನ್ನು (ಸಗರನನ್ನು) ಸೇರಲಿರುವೆ."

ವಿರೂಪಾಕ್ಷದಿಗ್ಗಜದ ಮಾತನ್ನು ಕೇಳಿ ಅಂಶುಮಂತನು ಅಲ್ಲಿಂದ ಮುಂದೆ ಅದೇ ಮಾರ್ಗದಲ್ಲಿ ನಡೆದು ದಕ್ಷಿಣ, ಪಶ್ಚಿಮ ಮತ್ತು ಉತ್ತರ ದಿಕ್ಕುಗಳ ದಿಗ್ಗಜಗಳಾದ ಮಹಾಪದ್ಮ, ಸೌಮನಸ, ಭದ್ರಗಳೆಂಬ ಆನೆ ಗಳನ್ನೂ ಯಥಾಕ್ರಮವಾಗಿ ಸಂದರ್ಶಿಸಿ, ಪೂಜಿಸಿ, ಹಿಂದೆ ವಿರೂಪಾಕ್ಷದಿಗ್ಗಜ ವನ್ನು ಕೇಳಿದಂತೆಯೇ ಅವುಗಳನ್ನು ಪ್ರಶ್ನಿಸಿದನು :

"ನನ್ನ ಪಿತೃಗಳೆಲ್ಲಿರುವರು? ಅಶ್ವವೆಲ್ಲಿರುವುದು? ಅಶ್ವಾಪಹಾರಕ ನೆಲ್ಲಿರುವನು? ದಯೆಯಿಟ್ಟು ತಿಳಿಸಿರಿ."

ಮಾತಿನಿಂದಲೇ ಹೃದಯದ ಇಂಗಿತವನ್ನು ತಿಳಿಯಲು ಸಾಮರ್ಥ್ಯವುಳ್ಳ ಮತ್ತು ಯಾರೊಡನೆ ಹೇಗೆ ಮಾತನಾಡಬೇಕೆಂಬುದರಲ್ಲಿ ವಿಶೇಷ ಪ್ರಾವೀಣ್ಯವುಳ್ಳ ದಿಗ್ಗಜಗಳಿಂದ ಅಂಶುಮಂತನು ಸಮ್ಮಾನಿತನಾದನು. ವಿರೂಪಾಕ್ಷದಿಗ್ಗಜವು ಹೇಳಿದಂತೆಯೇ ಅವುಗಳೂ–"ಅಶ್ವಸಮೇತನಾಗಿ ನಿನ್ನ ಪಿತಾಮಹನ ಸಮೀಪಕ್ಕೆ ಅತ್ಯಲ್ಪಕಾಲದಲ್ಲಿಯೇ ಹೋಗಲಿರುವೆ"–ಎಂದು ಉತ್ತರಿಸಿದುವು. ದಿಗ್ಗಜಗಳು ಹೇಳಿದ ಆ ಮಾತುಗಳನ್ನು ಕೇಳಿ ಶೀಘ್ರಗಾಮಿಯಾದ ಅಂಶುಮಂತನು ಈಶಾನ್ಯದಿಕ್ಕಿನೆಡೆಗೆ ಹೊರಟು ಅತ್ಯಲ್ಪಕಾಲದಲ್ಲಿಯೇ ತನ್ನ ಚಿಕ್ಕಪ್ಪಂದಿರು ಭಸ್ಮೀಭೂತರಾಗಿ ಬಿದ್ದಿದ್ದ ಸ್ಥಳಕ್ಕೆ ಧಾವಿಸಿದನು. ಅಲ್ಲಿ ಅವನು ಪರ್ವತೋಪಮವಾಗಿ ಬಿದ್ದಿದ್ದ ಭಸ್ಮರಾಶಿಯನ್ನು ಕಂಡು ದುಃಖಿತನಾದನು. ಆ ಭಸ್ಮರಾಶಿಯು ತನ್ನ ಪಿತೃಗಳದೇ ಎಂದೂ, ಅವರೆಲ್ಲರೂ ಕಪಿಲಮಹರ್ಷಿಗಳಿಂದ ದಹಿಸಲ್ಪಟ್ಟಿರುವರೆಂದೂ ತಿಳಿದನಂತರ ಅವನ ದುಃಖವು ಮತ್ತಷ್ಟು ಉಲ್ಬಣಿಸಿತು. ಚಿಕ್ಕಪ್ಪಂದಿರನ್ನು ನೆನೆಯುತ್ತಾ ಗಟ್ಟಿಯಾಗಿ ಅಳತೊಡಗಿದನು. ದಾರುಣವಾದ ದುಃಖದಿಂದ ಶೋಕಿಸುತ್ತಿದ್ದ ಅಂಶುಮಂತನು ಅದೇ ಸಮಯದಲ್ಲಿ ತನಗೆ ಸ್ವಲ್ಪದೂರದಲ್ಲಿ ಅತ್ತಲಿತ್ತ ಸಂಚರಿಸುತ್ತಿದ್ದ ಅಶ್ವಮೇಧಾಶ್ವವನ್ನು ಕಂಡನು. ಅನಂತರ ಅಂಶುಮಂತನು ತನ್ನ ಪಿತೃಗಳಿಗೆ ಸಲಿಲಕ್ರಿಯೆಗಳನ್ನು* ಮಾಡಬೇಕೆಂದು ಬಯಸಿ ನೀರನ್ನರಸಿಕೊಂಡು ಬಹಳ ದೂರದವರೆಗೂ ನಡೆದನು. ಜಲಾಶಯವನ್ನು ಕಾಣದೇ ಅಂಶುಮಂತನು ಸುತ್ತಲೂ ನೋಡಿದನು. ಬಹಳ ದೂರದ ವಸ್ತುವನ್ನೂ ನೋಡಲು ಸಮರ್ಥವಾದ ತನ್ನ ದೃಷ್ಟಿಯನ್ನು ಪ್ರಸರಿಸಿ, ತನ್ನ ಚಿಕ್ಕಪ್ಪಂದಿರ ಸೋದರಮಾವನೂ, ವಾಯುವೇಗವುಳ್ಳವನೂ, ಪಕ್ಷಿಗಳಿಗೊಡೆಯನೂ ಆದ ಗರುಡನನ್ನು ಕಂಡನು. ಮಹಾಬಲನಾದ ಗರುಡನು ಕ್ಷಣಮಾತ್ರದಲ್ಲಿ ಅಂಶುಮಂತನ ಸಮೀಪಕ್ಕೆ ಬಂದು ಹೇಳಿದನು :

"ಅಂಶುಮಂತ! ಇವರ ವಧೆಗಾಗಿ ನೀನು ದುಃಖಿಸುವ ಕಾರಣವಿಲ್ಲ.

---

* ಸಲಿಲಕ್ರಿಯೆಯೆಂದರೆ :– ಚಿತಾಭಸ್ಮವನ್ನು ನೀರಿನಲ್ಲಿ ಕದಡುವುದೆಂದರ್ಥ. ತರ್ಪಣವೆಂದು ಒಬ್ಬರು ವ್ಯಾಖ್ಯಾನಮಾಡಿರುತ್ತಾರೆ. ಪ್ರಸಕ್ತಸಂದರ್ಭದಲ್ಲಿ ಎರಡು ಅರ್ಥಗಳೂ ಹೊಂದುತ್ತವೆ.

ಇವರ ವಧೆಯು ಲೋಕಹಿತಕ್ಕಾಗಿಯೇ ನಡೆದಿದೆ. ಪ್ರಾಜ್ಞನೇ! ಅಪ್ರಮೇಯನಾದ ಕಪಿಲಮಹರ್ಷಿಯಿಂದ ಭಸ್ಮೀಭೂತರಾದ, ಮಹಾಬಲಿಷ್ಠರಾದ ಇವರಿಗೆ ಧರ್ಮಸೂಕ್ಷ್ಮವನ್ನು ತಿಳಿದಿರುವ ನೀನು ಈಗ ಭೂಮಿಯಲ್ಲಿ ದೊರೆಯುವ ಯಾವ ಜಲಾಶಯದಿಂದಲೂ ಸಲಿಲಕ್ರಿಯೆಯನ್ನು ಮಾಡಬಾರದು.* ಹಿಮವಂತನ ಹಿರಿಯಮಗಳಾದ, ತ್ರಿಲೋಕಪಾವನಿಯಾದ ಗಂಗಾದೇವಿಯಿದ್ದಾಳೆ. ಅವಳ ಪವಿತ್ರೋದಕದಲ್ಲಿ ನೀನು ಇವರ ಸಲಿಲಕ್ರಿಯೆಯನ್ನು ಮಾಡು. ಬ್ರಾಹ್ಮಣನಿಂದ ಭಸ್ಮರಾಶಿಯಾಗಿ ಮಾಡಲ್ಪಟ್ಟ ಇವರನ್ನು ಲೋಕಪಾವನಿಯಾದ ಗಂಗೆಯು ತನ್ನ ಪವಿತ್ರೋದಕದಿಂದ ಮುಳುಗಿಸಿದಾಗ ಇವರ ಪಾಪವು ಪರಿಹಾರವಾಗಿ, ಇವರು ಸ್ವರ್ಗಲೋಕಕ್ಕೆ ಹೋಗುತ್ತಾರೆ. ಈಗ ನೀನು ಇಲ್ಲಿರುವ ಅಶ್ವಮೇಧಾಶ್ವವನ್ನು ತೆಗೆದುಕೊಂಡು ಹೋಗು. ಸಗರನು ಆರಂಭಿಸಿರುವ ಯಜ್ಞವು ಪೂರ್ಣವಾಗಲಿ."

ಗರುಡನ ಈ ಮಾತುಗಳನ್ನು ಕೇಳಿ ಮಹಾಪರಾಕ್ರಮಿಯಾದ ಅಂಶುಮಂತನು ಅಶ್ವಮೇಧಾಶ್ವವನ್ನು ಕರೆದುಕೊಂಡು ಬಹುಶೀಘ್ರವಾಗಿ ರಾಜಧಾನಿಗೆ ಹಿಂದಿರುಗಿದನು. ಯಜ್ಞದೀಕ್ಷಿತನಾದ, ಪಿತಾಮಹನಾದ ಸಗರನನ್ನು ಸಂದರ್ಶಿಸಿ, ತನ್ನ ಪ್ರಯಾಣದ ಕಥೆಗಳೆಲ್ಲವನ್ನೂ ಯಥಾವತ್ತಾಗಿ

* ಸತ್ತನಂತರ ಚಿತಾಭಸ್ಮವನ್ನು ಪವಿತ್ರನದಿಗಳಲ್ಲಿ ಬಿಡುವುದು ಸತ್ತವರ ಪಾಪಗಳ ನಿರಸನಕ್ಕಾಗಿ. ಇದಕ್ಕೆ ಸ್ಮೃತ್ಯಾಧಾರಗಳೂ ಇವೆ. ಪ್ರಕೃತಸಂದರ್ಭದಲ್ಲಿ ಭೂಮಿಯಲ್ಲಿರುವ ಜಲಾಶಯಗಳ ನೀರಿನಿಂದ ಸಲಿಲಕ್ರಿಯೆ ಮಾಡಿದರೆ ಸಗರಪುತ್ರರ ಪಾಪ ಪರಿಹಾರವಾಗಲಾರದೆಂದು ಗರುಡನ ಅಭಿಪ್ರಾಯವಾಗಿದೆ. ಅವರು ಬ್ರಾಹ್ಮಣನಿಗೆ ಅಪಮಾನ ಮಾಡಿ, ಬ್ರಾಹ್ಮಣನಿಂದ ಹತರಾಗಿರುವುದರಿಂದ ಹೆಚ್ಚಿನ ಪಾಪವುಳ್ಳವರಾಗಿರುತ್ತಾರೆ. **"ಚಣ್ಡಾಲಾದುದಕಾತ್ಸರ್ಪಾದ್ವೈದ್ಯುತಾದ್ಬ್ರಾಹ್ಮಣಾದಪಿ । ದಂಷ್ಟ್ರಿಭ್ಯಶ್ಚ ಪಶುಭ್ಯಶ್ಚ ಮರಣಂ ಪಾಪಕರ್ಮಣಾಮ್ ॥ ಉದಕಂ ಪಿಣ್ಡದಾನಂ ಚ ಏತೇಭ್ಯೋ ಯದ್ವಿಧೀಯತೇ । ನೋಪತಿಷ್ಠತಿ ತತ್ಸರ್ವಮನ್ತರಿಕ್ಷೇ ವಿನಶ್ಯತಿ ॥"** ಮಹಾಪಾಪಿಷ್ಠರುಗಳಿಗೆ–ಚಂಡಾಲನಿಂದಲೂ, ನೀರಿನಿಂದಲೂ, ಸರ್ಪಗಳಿಂದಲೂ ವಿದ್ಯುತ್ತಿನಿಂದಲೂ, ಬ್ರಾಹ್ಮಣರ ಕೋಪದಿಂದಲೂ, ಕೋರೆದಾಡೆಗಳುಳ್ಳ ದುಷ್ಟ ಪ್ರಾಣಿಗಳಿಂದಲೂ, ಪಶುಗಳಿಂದಲೂ ಮರಣವು ಪ್ರಾಪ್ತವಾಗುತ್ತದೆ. ಇವರುಗಳಿಗೆ ಮಾಡುವ ಸಲಿಲಕ್ರಿಯೆ–ಪಿಂಡಪ್ರದಾನಗಳೆಲ್ಲವೂ ಅಂತರಿಕ್ಷದಲ್ಲಿಯೇ ವಿನಾಶ ಹೊಂದುತ್ತವೆ. [ಯಾವ ವಿಧವಾದ ಫಲವನ್ನೂ ಕೊಡಲಾರವು.] ಕಪಿಲಮಹರ್ಷಿಯು

ತಿಳಿಸಿದುದಲ್ಲದೇ–ಸುಪರ್ಣನು ಹೇಳಿದ ಮಾತುಗಳನ್ನೂ ಯಥಾಶ್ರುತವಾಗಿ ಹೇಳಿದನು. ಸಗರನು ಅತಿಘೋರವಾದ, ಸಹಿಸಲಶಕ್ಯವಾದ ಪುತ್ರರ ವಿನಾಶವಾರ್ತೆಯನ್ನು ಅಂಶುಮಂತನಿಂದ ಕೇಳಿ ಆರಂಭಿಸಿದ ಯಜ್ಞವನ್ನು ಕಲ್ಪೋಕ್ತಪ್ರಕಾರವಾಗಿಯೂ, ವಿಧ್ಯುಕ್ತವಾಗಿಯೂ ಮುಗಿಸಿ ಪಟ್ಟಣಪ್ರವೇಶ ಮಾಡಿದನು. ತನ್ನ ಮಕ್ಕಳ ಸಲಿಲಕ್ರಿಯೆಗಾಗಿ ಸ್ವರ್ಗಲೋಕದಲ್ಲಿದ್ದ ಗಂಗಾದೇವಿಯನ್ನು ಭೂಮಿಗೆ ಕರೆತರುವ ಉಪಾಯವು ಎಷ್ಟುಕಾಲ ಯೋಚಿಸಿದರೂ ರಾಜನಿಗೆ ಹೊಳೆಯಲಿಲ್ಲ. ಗಂಗಾವತರಣದ ವಿಷಯವಾಗಿ ಎಷ್ಟು ಯೋಚಿಸಿದರೂ ಉಪಾಯವನ್ನು ತಿಳಿಯದೇ ಮೂವತ್ತು ಸಾವಿರ ವರ್ಷಗಳ ಕಾಲ ರಾಜ್ಯಭಾರಮಾಡಿ ಸ್ವರ್ಗಕ್ಕೆ ತೆರಳಿದನು.

ಳ೧ನೆಯ ಸರ್ಗವು ಮುಗಿಯಿತು.

ಬಾಲಕಾಂಡ ೪೨ನೆಯ ಸರ್ಗ

ಗಂಗೆಯನ್ನು ತರುವ ಸಲುವಾಗಿ ಅಂಶುಮಂತನ ಪ್ರಯತ್ನ: ಭಗೀರಥನ ತಪಸ್ಸಿನಿಂದ ಸುಪ್ರೀತನಾದ ಬ್ರಹ್ಮನು ವರವನ್ನಿತ್ತು ಗಂಗೆಯನ್ನು ಧರಿಸಲು ಈಶ್ವರನನ್ನು ಪ್ರಾರ್ಥಿಸುವಂತೆ ಸಲಹೆಯನ್ನಿತ್ತುದು

ಕಾಲಧರ್ಮಂ ಗತೇ ರಾಮ ಸಗರೇ ಪ್ರಕೃತೀಜನಾಃ ।
ರಾಜಾನಂ ರೋಚಯಾಮಾಸುರಂಶುಮನ್ತಂ ಸುಧಾರ್ಮಿಕಮ್ ॥೧॥

ರಾಘವ! ಸಗರಚಕ್ರವರ್ತಿಯು ಕಾಲಧರ್ಮವನ್ನೈದಲು ಅಯೋಧ್ಯಾ

ಬ್ರಾಹ್ಮಣನಾದುದರಿಂದ ಅವನ ಶಾಪದಿಂದ ದಗ್ಧರಾದ ಸಗರಪುತ್ರರು ಮಹಾಪಾಪಿಷ್ಠರು. ಸಾಧಾರಣಜಲಾಶಯದ ನೀರಿನಿಂದ ಮಾಡಲ್ಪಡುವ ಸಲಿಲಕ್ರಿಯೆಯು ಇವರ ಮಹಾಪಾಪವನ್ನು ತೊಳೆಯಲಾರದು.

* 'ಕಾಲೇನ ಅವಶ್ಯಂ ಪ್ರಾಪ್ತವ್ಯಃ ಧರ್ಮಃ = ಕಾಲಧರ್ಮಃ = ಮರಣಂ'– ಕಾಲಾನಂತರದಲ್ಲಿ ಪ್ರತಿಯೊಬ್ಬನಿಗೂ ಅವಶ್ಯವಾಗಿ ಪ್ರಾಪ್ತವಾಗುವ ಧರ್ಮ. ಕಾಲ ಧರ್ಮ = ಮರಣ.

ನಗರದ ಪ್ರಜಾಪ್ರಮುಖರೂ ಮತ್ತು *ಅಮಾತ್ಯರೂ ಪರಮಧಾರ್ಮಿಕನಾದ, ಅಸಮಂಜನ ಮಗನಾದ ಅಂಶುಮಂತನನ್ನು ರಾಜನನ್ನಾಗಿ ಮಾಡಿದರು. ಅಂಶುಮಂತನು ಪರಮಧಾರ್ಮಿಕನಾಗಿದ್ದನು. ಅವನ ಮಗನೂ ಸರ್ವಪೂಜ್ಯನಾಗಿ ದಿಲೀಪನೆಂಬ ಹೆಸರಿನಿಂದ ವಿಖ್ಯಾತನಾದನು. ಮಗನು ಪ್ರಾಪ್ತವಯಸ್ಕನಾದನಂತರ ಅಂಶುಮಂತನು ದಿಲೀಪನಿಗೆ ರಾಜ್ಯದ ಪಟ್ಟಾಭಿಷೇಕಮಾಡಿ ದೇವಗಂಗೆಯನ್ನು ಭೂಲೋಕಕ್ಕೆ ತರುವ ಸಲುವಾಗಿ ರಮ್ಯ ವಾದ ಹಿಮವತ್ಪರ್ವತದ ತಪ್ಪಲಿನಲ್ಲಿ ದಾರುಣವಾದ ತಪಸ್ಸನ್ನು ಮಾಡಿದನು. ಹೀಗೆ ಮೂವತ್ತೆರಡು ಸಾವಿರ ವರ್ಷಗಳ ಕಾಲ ತಪಸ್ಸು ಮಾಡುತ್ತಲಿದ್ದು ಕೃತಕೃತ್ಯನಾಗದೇ ಸ್ವರ್ಗಾರೋಹಣ ಮಾಡಿದನು. (ಗಂಗೆಯು ಮಾತ್ರ ಸ್ವರ್ಗದಿಂದಿಳಿಯಲಿಲ್ಲ.) ಮಹಾತೇಜಸ್ವಿಯಾದ ದಿಲೀಪನು ತನ್ನ ಪಿತಾಮಹರ ವಧೆಯ ವಿಷಯವನ್ನು ಕೇಳಿ ದುಃಖದಿಂದ ಪರಿತಪಿಸಿದನು. ಅವರಿಗೆ ಸದ್ಗತಿಯನ್ನುಂಟುಮಾಡಲು ಗಂಗಾದೇವಿಯನ್ನು ಭೂಲೋಕಕ್ಕೆ ಕರೆತರು ವುದು ಹೇಗೆಂಬ ವಿಷಯವಾಗಿ ಎಷ್ಟು ಚಿಂತಿಸಿದರೂ ಅವನಿಗೆ ಉಪಾಯವು ಹೊಳೆಯಲಿಲ್ಲ. "ಗಂಗಾವತರಣವು ಹೇಗೆ ತಾನೇ ಸಾಧ್ಯವಾಗುವುದು? ಗಂಗಾವತರಣವಿಲ್ಲದೇ ನನ್ನ ಪಿತಾಮಹರ ಸಲಿಲಕ್ರಿಯೆಯನ್ನು ಮಾಡುವುದಾದರೂ ಹೇಗೆ? ಹೇಗೆ ನಾನು ಇವರುಗಳಿಗೆ ಸದ್ಗತಿಯನ್ನುಂಟು ಮಾಡಲಿ?"–ಈ ವಿಷಯಗಳನ್ನೇ ದಿಲೀಪನು ಪ್ರತಿಕ್ಷಣದಲ್ಲಿಯೂ ಯೋಚಿಸುತ್ತಲೇ ಇದ್ದನು. ಪರಮಧಾರ್ಮಿಕನೆಂದು ಸುಪ್ರಸಿದ್ಧನಾದ, ಯಾವಾಗಲೂ ತನ್ನ ಪಿತಾಮಹರ ಸದ್ಗತಿಯ ವಿಷಯವಾಗಿಯೇ ಚಿಂತಿಸುತ್ತಿದ್ದ ದಿಲೀಪ ರಾಜನಿಗೆ ಭಗೀರಥನೆಂಬ ಹೆಸರಿನಿಂದ ಪ್ರಸಿದ್ಧನಾದ ಪರಮಧಾರ್ಮಿಕನಾದ ಪುತ್ರನು ಹುಟ್ಟಿದನು. ಮಹಾತೇಜಸ್ವಿಯಾದ ದಿಲೀಪನು ಅನೇಕ ವಿಧವಾದ ಯಜ್ಞಗಳನ್ನು ಮಾಡಿದನು. ಮೂವತ್ತು ಸಾವಿರ ವರ್ಷಗಳ ಕಾಲ ಅವನು ರಾಜ್ಯವಾಳಿದನು. ಅವನು ಗಂಗಾದೇವಿಯನ್ನು ಕರೆತಂದು ತನ್ನ ಪಿತಾಮಹರ ಸಲಿಲಕ್ರಿಯೆಯನ್ನು ನಡೆಸುವುದು ಹೇಗೆಂಬ ವಿಷಯದಲ್ಲಿ ಯಾವ ನಿರ್ಧಾರಕ್ಕೂ ಬರದೇ ಕೊನೆಗೆ ವ್ಯಾಧಿಪೀಡಿತನಾಗಿ ಪರಂಧಾಮವನ್ನೈದಿದನು.

---

* 'ಪ್ರಕೃತಿಃ ಸಹಜೇ ಯೋನಾವಮಾತ್ಯೇ ಪರಮಾತ್ಮನಿ' ಎಂಬ ವೈಜಯಂತೀ ಕೋಶಾನುಸಾರವಾಗಿ 'ಪ್ರಕೃತೀಜನಾಃ' ಎಂದರೆ ಅಮಾತ್ಯರುಗಳು ಎಂದಾಗುತ್ತದೆ.

ಪುರುಷಶ್ರೇಷ್ಠನಾದ ದಿಲೀಪನು ತನ್ನ ಮಗನಾದ ಭಗೀರಥನಿಗೆ ರಾಜ್ಯದ ಪಟ್ಟಾಭಿಷೇಕಮಾಡಿ ತಾನು ಸಂಪಾದಿಸಿದ ಕರ್ಮಫಲದ ಪ್ರಭಾವ ದಿಂದ ಇಂದ್ರಲೋಕವನ್ನು ಸೇರಿದನು.

ರಾಘವ! ರಾಜರ್ಷಿಯೂ ಪರಮಧಾರ್ಮಿಕನೂ ಆದ ಭಗೀರಥನಿಗೆ ಮಕ್ಕಳಿರಲಿಲ್ಲ. ಪುತ್ರಕಾಮನಾಗಿ ರಾಜ್ಯವನ್ನು ಮಂತ್ರಿಗಳಿಗೊಪ್ಪಿಸಿ ಗಂಗಾವತರಣದ ಸಾಧನೆಯಲ್ಲಿಯೇ ನಿಷ್ಠನಾಗಿ, ಗೋಕರ್ಣಮಹಾಕ್ಷೇತ್ರದಲ್ಲಿ *ಪಂಚಾಗ್ನಿಗಳ ಮಧ್ಯದಲ್ಲಿ ಊರ್ಧ್ವಬಾಹುವಾಗಿ ನಿಂತು ತಪಸ್ಸು ಮಾಡುತ್ತಾ ತಿಂಗಳಿಗೊಮ್ಮೆ ಆಹಾರವನ್ನು ಸೇವಿಸುತ್ತಾ ಜಿತೇಂದ್ರಿಯನಾಗಿ ಅನೇಕ ವರ್ಷಗಳನ್ನು ಕಳೆದನು. ಹೀಗೆ ಅವನು ಮಾಡಿದ ಘೋರತಪಸ್ಸಿ ನಿಂದ ಭಗವಂತನೂ, ಪ್ರಜಾಪತಿಯೂ, ಸರ್ವೇಶ್ವರನೂ, ಪಿತಾಮಹನೂ ಆದ ಚತುರ್ಮುಖಬ್ರಹ್ಮನು ಸುಪ್ರೀತನಾಗಿ, ದೇವತೆಗಳೊಡನೆ ಭಗೀರಥನ ಸಮೀಪಕ್ಕೆ ಆಗಮಿಸಿ ತಪಶ್ಚರಣೆಯಲ್ಲಿಯೇ ನಿರತನಾಗಿದ್ದ ಭಗೀರಥನಿಗೆ ಹೇಳಿದನು :

“ಮಹಾತೇಜಸ್ವಿಯಾದ ಜನೇಶ್ವರನೇ! ನೀನು ಮಾಡಿರುವ ಘೋರ ತಪಸ್ಸಿನಿಂದ ಸುಪ್ರೀತನಾಗಿದ್ದೇನೆ. ಸುವ್ರತನೇ! ನಿನಗೆ ಬೇಕಾದ ವರವನ್ನು ಕೇಳು. ಕೊಡಲು ಸಿದ್ಧನಾಗಿರುವೆನು.” ಮಹಾತೇಜಸ್ವಿಯೂ, ಮಹಾ ಬಾಹುವೂ ಆದ ಭಗೀರಥನು ಬದ್ಧಾಂಜಲಿಯಾಗಿ ನಿಂತು ಸಕಲಲೋಕ ಗಳಿಗೂ ಪಿತಾಮಹನಾದ ಬ್ರಹ್ಮನಿಗೆ ಹೇಳಿದನು :

“ಪೂಜ್ಯನೇ! ನೀನು ತಪಸ್ಸಿಗೆ ಮೆಚ್ಚಿರುವೆಯಾದರೆ, ನಾನು ಮಾಡಿರುವ ತಪಸ್ಸಿಗೆ ಫಲವಿರುವುದಾದರೆ–ನನ್ನ ವಂಶದ ಪೂರ್ವಜರಾದ ಸಗರನ ಅರುವತ್ತು ಸಾವಿರ ಮಂದಿ ಮಕ್ಕಳಿಗೂ ನಾನು ಸಲಿಲಕ್ರಿಯೆಯನ್ನು ಮಾಡುವಂತೆ ಅನುಗ್ರಹಿಸು.

ಬ್ರಹ್ಮದೇವನೇ! ಮಹಾತ್ಮರಾದ ಸಗರಪುತ್ರರ ಭಸ್ಮರಾಶಿಯು

---

* ನಡುನೆತ್ತಿಯಲ್ಲಿ ಸೂರ್ಯನು ಪ್ರಜ್ವಲಿಸುತ್ತಿರುವಾಗ ನಾಲ್ಕು ದಿಕ್ಕುಗಳಲ್ಲಿಯೂ ಅಗ್ನಿಯನ್ನು ಪ್ರತಿಷ್ಠೆಮಾಡಿ, ಅದರ ಮಧ್ಯದಲ್ಲಿ ಕುಳಿತು ತಪಸ್ಸು ಮಾಡುವುದಕ್ಕೆ ‘ಪಂಚತಪಸ್ಸು’ ಅಥವಾ ಪಂಚಾಗ್ನಿ ತಪಸ್ಸು ಎಂದು ಹೇಳುತ್ತಾರೆ.

ಗಂಗಾಜಲದಿಂದ ತೋಯಿಸಲ್ಪಟ್ಟಲ್ಲಿ, ನನ್ನ ಪಿತಾಮಹರು ಕ್ಷಯರಹಿತವಾದ ಸ್ವರ್ಗವನ್ನು ಪಡೆಯುತ್ತಾರೆ. ಇದಲ್ಲದೇ ನನಗೆ ಸಂತತಿಯನ್ನು ಅನುಗ್ರಹಿಸ ಬೇಕೆಂದೂ ಕೇಳಿಕೊಳ್ಳುತ್ತೇನೆ. ನಮ್ಮ ವಂಶವು ಯಾವ ಕಾರಣದಿಂದಲೂ ವಿನಾಶಹೊಂದಕೂಡದು. ಇಕ್ಷ್ವಾಕುವಿನ ವಂಶದಲ್ಲಿ ಹುಟ್ಟಿರುವ ನನಗೆ ಈ ಎರಡನೆಯ ವರವನ್ನೂ ಅನುಗ್ರಹಿಸು."

ರಾಘವ! ಹೀಗೆ ವರವನ್ನು ಯಾಚಿಸಿದ ಭಗೀರಥರಾಜನಿಗೆ ಸರ್ವ ಲೋಕಪಿತಾಮಹನಾದ ಬ್ರಹ್ಮನು ಮನೋಹರವಾಗಿಯೂ, ಮನೋಹ ರಾಕ್ಷರವಿಶಿಷ್ಟವಾಗಿಯೂ ಇದ್ದ ಈ ಮಾತುಗಳನ್ನು ಹೇಳಿದನು :

"ಮಹಾರಥನಾದ ಭಗೀರಥನೇ! ಇಕ್ಷ್ವಾಕುಕುಲವರ್ಧನನೇ! ಈ ನಿನ್ನ ಮಹಾಮನೋರಥವು ಸಿದ್ಧಿಯಾಗುವುದು. ನಿನಗೆ ಮಂಗಳವಾಗಲಿ. ಈ ಗಂಗಾದೇವಿಯು ಹಿಮವಂತನ ಹಿರಿಯ ಮಗಳು. 'ಹೈಮವತೀ' ಎಂದೂ ಪ್ರಸಿದ್ಧಳಾಗಿರುವಳು. ಪ್ರವಾಹರೂಪಳಾಗಿ ದೇವಲೋಕದಿಂದ ಬರುವ ಇವಳನ್ನು ಧರಿಸಲು ಈಶ್ವರನನ್ನು ಪ್ರಾರ್ಥಿಸು. ಗಂಗಾದೇವಿಯ ಪ್ರವಾಹರೂಪವಾದ ಪತನವನ್ನು ಭೂದೇವಿಯು ಧರಿಸಲಾರಳು. ಶೂಲಿ ಯಾದ ಶಿವನೊಬ್ಬನೇ ಅವಳನ್ನು ಧರಿಸಲು ಸಮರ್ಥನು. ಬೇರೆ ಯಾರೂ ಆ ವೇಗವನ್ನು ಧರಿಸಲಾರರು. ಆದುದರಿಂದ ಅವನನ್ನೇ ಪ್ರಾರ್ಥಿಸು."

ಲೋಕಸೃಷ್ಟಿಗೆ ಕಾರಣನಾದ ಬ್ರಹ್ಮನು ಭಗೀರಥನಿಗೆ ಹೀಗೆ ಹೇಳಿ ಸಂತೈಸಿ, ಗಂಗಾದೇವಿಗೂ ಭಗೀರಥನ ಪ್ರಾರ್ಥನೆಯನ್ನು ನಡೆಸಿಕೊಡುವಂತೆ ಹೇಳಿ, ದೇವತೆಗಳಿಂದಲೂ ಮರುದ್ಗಣಗಳಿಂದಲೂ ಕೂಡಿ ತನ್ನ ಲೋಕಕ್ಕೆ ತೆರಳಿದನು.

೪೨ನೆಯ ಸರ್ಗವು ಮುಗಿಯಿತು.

ಶ್ರೀಶಂಕರನು ಗಂಗೆಯನ್ನು ಧರಿಸುವುದಾಗಿ ಆಶ್ವಾಸನೆಯನ್ನಿತ್ತುದು : ಜಹ್ನುಮಹರ್ಷಿಯ ಕಿವಿಯಿಂದ ಹೊರಬಂದ ಗಂಗಾನದಿಯು ಏಳು ಪ್ರಕಾರವಾಗಿ ಹರಿದು ಭಗೀರಥನೊಡನೆ ಪಾತಾಳಕ್ಕೆ ಹೋಗಿ ಅವನ ಪ್ರಪಿತಾಮಹರನ್ನು ಉದ್ಧರಿಸಿದುದು

ದೇವದೇವೇ ಗತೇ ತಸ್ಮಿನ್ನೋಽಙ್ಗುಷ್ಠಾಗ್ರನಿಪೀಡಿತಾಮ್ ।
ಕೃತ್ವಾ ವಸುಮತೀಂ ರಾಮ ಸಂವತ್ಸರಮುಪಾಸತ ॥೧॥

ರಾಮ! ದೇವದೇವನಾದ ಬ್ರಹ್ಮನು–ಗಂಗೆಯನ್ನು ಧಾರಣೆಮಾಡಲು ಪರಮೇಶ್ವರನನ್ನು ಪ್ರಾರ್ಥಿಸುವಂತೆ ಭಗೀರಥನಿಗೆ ಹೇಳಿ ದೇವಲೋಕಕ್ಕೆ ತೆರಳಿದನಂತರ–ಭಗೀರಥನು ಬಲಗಾಲಿನ ಅಂಗುಷ್ಠದಿಂದ ಭೂಮಿಯನ್ನು ಪೀಡಿಸುತ್ತಾ ಒಂದು ವರ್ಷಕಾಲ ಉಮಾಪತಿಯನ್ನು ಕುರಿತು ತಪಸ್ಸನ್ನು ಮಾಡಿದನು.* ಕೈಗಳನ್ನೆತ್ತಿಕೊಂಡು ಆಶ್ರಯರಹಿತನಾಗಿ, ವಾಯುಭಕ್ಷನಾಗಿ, ಹಗಲಿನಲ್ಲಿಯೂ ಮತ್ತು ರಾತ್ರಿಯಲ್ಲಿಯೂ ಕಂಬದಂತೆಯೇ ಅಚಲನಾಗಿದ್ದು ಸ್ಥಾಣುವನ್ನು ಕುರಿತು ತಪಸ್ಸನ್ನು ಮಾಡಿದನು. ಹೀಗೆ ಒಂದು ವರ್ಷ ಪೂರ್ಣವಾಗಲಾಗಿ, ಸರ್ವಲೋಕನಮಸ್ಕೃತನಾದ, ಉಮಾಪತಿಯಾದ ಮತ್ತು ಪಶುಪತಿಯಾದ ಪರಶಿವನು ಪ್ರತ್ಯಕ್ಷನಾಗಿ ಭಗೀರಥನಿಗೆ ಹೇಳಿದನು :

"ಮಾನವಶ್ರೇಷ್ಠನಾದ ಭಗೀರಥನೇ! ನಿನ್ನ ತಪಸ್ಸಿಗೆ ಸುಪ್ರೀತನಾಗಿದ್ದೇನೆ. ನಿನಗೆ ಪ್ರಿಯವಾದ ಕಾರ್ಯವನ್ನು ಮಾಡಿಕೊಡುತ್ತೇನೆ. ನಿನ್ನ ಮನಸ್ಸಿನ ಆಶಯದಂತೆ ಪರ್ವತರಾಜನ ಹಿರಿಯಮಗಳಾದ ಗಂಗಾದೇವಿಯನ್ನು ನನ್ನ ಶಿರಸ್ಸಿನಿಂದ ಧಾರಣೆಮಾಡುತ್ತೇನೆ."

ಪರಶಿವನು ಭಗೀರಥನಿಗೆ ಹೀಗೆ ಹೇಳಿದೊಡನೆಯೇ ಸರ್ವಲೋಕ ನಮಸ್ಕೃತೆಯಾದ, ಹಿಮವಂತನ ಹಿರಿಯಮಗಳಾದ ಗಂಗಾದೇವಿಯು ಮಹಾರೂಪವನ್ನು ತಾಳಿ, ತಡೆಯಲಸಾಧ್ಯವಾದ ವೇಗದಿಂದ ಕೂಡಿ ಸಕಲ

---

* ಬಲಗಾಲಿನ ಅಂಗುಷ್ಠದಿಂದ ಭೂಮಿಯನ್ನು ಪೀಡಿಸುವುದೆಂದರೆ–ಬಲಗಾಲಿನ ಹೆಬ್ಬೆರಳಿನ ಮೇಲೆಯೇ ನಿಂತು ತಪಶ್ಚರಣೆ ಮಾಡುವುದು ಎಂದು ಅಭಿಪ್ರಾಯ.

ಕಲ್ಯಾಣಗಳಿಗೂ ಮೂಲಭೂತನಾದ ಪರಶಿವನ ತಲೆಯ ಮೇಲೆ ಆಕಾಶ ದಿಂದ ಧುಮುಕಿದಳು. ಧಾರಣೆಮಾಡಲು ದುಸ್ಸಾಧ್ಯವಾದ ವೇಗದಿಂದ ಬರುತ್ತಿದ್ದ ಗಂಗಾದೇವಿಯು ತನ್ನಲ್ಲಿಯೇ ಹೀಗೆ ಆಲೋಚಿಸಿದಳು :

"ನನ್ನೀ ವೇಗದ ಮತ್ತು ಅದ್ಭುತವಾದ ಪ್ರವಾಹದಿಂದ ನನ್ನನ್ನು ಧಾರಣೆಮಾಡಲು ಸಿದ್ಧನಾಗಿ ನಿಂತಿರುವ ಶಂಕರನನ್ನೂ ಎತ್ತಿಕೊಂಡು ಪಾತಾಳಲೋಕಕ್ಕೆ ಹೊರಟುಹೋಗುತ್ತೇನೆ."

ಗಂಗಾದೇವಿಯ ದುರಭಿಮಾನವನ್ನೂ ಮತ್ತು ಅವಳ ದುರಾ ಲೋಚನೆಯನ್ನೂ ತಿಳಿದು ಭಗವಂತನಾದ, ತ್ರಿಣೇತ್ರನಾದ ಹರನು ಕೋಪ ಗೊಂಡವನಾಗಿ, ಗಂಗೆಯನ್ನು ತನ್ನ ಮುಡಿಯಲ್ಲಿಯೇ ಉಡುಗಿಸಿಕೊಂಡು, ಅವಳನ್ನು ಪರಾಜಿತಳನ್ನಾಗಿ ಮಾಡಬೇಕೆಂದು ನಿಶ್ಚಯಿಸಿದನು. ಪರಮ ಪವಿತ್ರೆಯಾದ ಗಂಗಾದೇವಿಯು–ಪುಣ್ಯತಮವಾದ, ಹಿಮವತ್ಪರ್ವತ ದಂತಿದ್ದ, ಜಟಾಮಂಡಲವೆಂಬ ಗುಹೆಯಿಂದ ಕೂಡಿದ ಶಿವನ ಶಿರಸ್ಸಿನಲ್ಲಿ ಬಿದ್ದಳು. ಗಂಗೆಯು ಶಿವನ ಜಟಾಮಂಡಲವನ್ನು ಬಿಟ್ಟು ಭೂಮಿಗೆ ಹೋಗ ಬೇಕೆಂದು ಬಹುವಿಧವಾಗಿ ಪ್ರಯತ್ನಿಸಿದಳು. ಆದರೆ ಶಿವನ ಜಟಾಮಂಡಲ ದಿಂದ ಹೊರಬರಲು ಅವಳಿಗೆ ಸಾಧ್ಯವಾಗಲೇ ಇಲ್ಲ. ಅನೇಕ ಸಂವತ್ಸರಗಳ ವರೆಗೆ ಗಂಗಾದೇವಿಯು ಶಿವನ ಜಟೆಯಲ್ಲಿಯೇ ಪರಿಭ್ರಮಿಸುತ್ತಿದ್ದಳು. ಗಂಗಾದೇವಿಯು ಹೊರಗೆ ಬಾರದಿದ್ದುದನ್ನು ಕಂಡು ಭಗೀರಥರಾಜನು ಪರ ಶಿವನನ್ನು ಕುರಿತು ಪುನಃ ಘೋರವಾದ ತಪಸ್ಸನ್ನು ಮಾಡಲು ಉಪಕ್ರಮಿ ಸಿದನು. ರಾಜನು ಮಾಡಿದ ಆ ತಪಸ್ಸಿನಿಂದ ಪರಶಿವನು ಪರಮಪ್ರೀತನಾಗಿ, ಜಟಾಮಂಡಲಮಂಡಿತೆಯಾಗಿದ್ದ ಗಂಗಾದೇವಿಯನ್ನು ಬ್ರಹ್ಮನಿರ್ಮಿತವಾದ ಬಿಂದುಸರೋವರದಲ್ಲಿ ಬಿಟ್ಟನು. ಸರೋವರದಲ್ಲಿ ಬಿಡಲ್ಪಟ್ಟ ಗಂಗೆಯಿಂದ ಏಳು ಪ್ರವಾಹಗಳು ಹೊರಟುವು. ಮಂಗಳಕರವಾದ ತೀರ್ಥದಿಂದ ಕೂಡಿದ್ದ ಹ್ಲಾದಿನೀ, ಪಾವನೀ ಮತ್ತು ನಲಿನೀ ಎಂಬ ಮೂರು ಪ್ರವಾಹಗಳು ಪೂರ್ವ ದಿಕ್ಕಿಗೆ ಪ್ರವಹಿಸಿದುವು. ಶುಭಪ್ರದಗಳಾದ ಸುಚಕ್ಷು, ಸೀತಾ, ಮಹಾನದಿ ಯಾದ ಸಿಂಧು–ಈ ಮೂರು ಪ್ರವಾಹಗಳು ಪಶ್ಚಿಮದಿಕ್ಕಿಗೆ ಪ್ರವಹಿಸಿದುವು. ಏಳನೆಯ ಪ್ರವಾಹವು ಭಗೀರಥನನ್ನು ಅನುಸರಿಸಿ ಹೊರಟಿತು. ರಾಜರ್ಷಿ ಯಾದ ಭಗೀರಥನು ದಿವ್ಯವಾದ ರಥದಲ್ಲಿ ಕುಳಿತಿದ್ದನು. ರಥವು ಮುಂದೆ

ಹೋಗುತ್ತಿದ್ದಂತೆಲ್ಲಾ ಗಂಗಾದೇವಿಯ ಏಳನೆಯ ಪ್ರವಾಹವು ಅವನ ಹಿಂದೆಯೇ ಹರಿದುಹೋಗುತ್ತಿದ್ದಿತು.* ರಾಮಭದ್ರ! ನಾನು ಈ ಹಿಂದೆ ಹೇಳಿದಂತೆ ಗಂಗಾದೇವಿಯು ಆಕಾಶಮಾರ್ಗವಾಗಿ ಅತಿರಭಸದಿಂದ ಪ್ರವಹಿಸುತ್ತಾ ಶಂಕರನ ಜಟೆಯೊಳಗೆ ಸೇರಿಕೊಂಡಳು. ಅನಂತರ ಶಿವನ ಜಟೆಯಿಂದ ಹೊರಬಂದು ಭಗೀರಥನ ಜೊತೆಯಲ್ಲಿ ಹೋಗುತ್ತಿದ್ದಳು. ಅವಳ ಪುಣ್ಯೋದಕವು ಮಹಾರಭಸದಿಂದ ಕೂಡಿ ಸರ್ವತ್ರವ್ಯಾಪಿಸಿತು. ಆ ಪ್ರವಾಹದಲ್ಲಿ ಮೀನು, ಆಮೆ, ಶಿಂಶುಮಾರ (ಕಪಿಯ ಆಕಾರದ ಜಲಚರಪ್ರಾಣಿ) ಇವುಗಳೆಲ್ಲವೂ ಆಶ್ರಯವನ್ನು ಪಡೆದಿದ್ದುವು. ಪ್ರವಾಹದ ಜೊತೆಯಲ್ಲಿಯೇ ಅನೇಕ ಜಲಚರಗಳು ಬೀಳುತ್ತಿದ್ದುವು. ಈ ರೀತಿಯಲ್ಲಿ ಅನೇಕವಿಧವಾದ ಜಲಚರಪ್ರಾಣಿಗಳಿಂದ ಕೂಡಿದ ಆ ಗಂಗಾಪ್ರವಾಹದಿಂದ ಭೂಮಿಯು ಪರಿಶೋಭಿಸಿತು. ಗಗನದಲ್ಲಿ ಗಂಗೆಯು ಪ್ರವಹಿಸುತ್ತಿದ್ದಾಗ ಅವಳ ಸ್ವರೂಪ ಕಾಂತಿಯನ್ನು ಕಂಡು ಆನಂದಿಸಿದ್ದ ದೇವರ್ಷಿ-ಗಂಧರ್ವರೂ, ಯಕ್ಷರೂ, ಸಿದ್ಧರೂ ಗಂಗಾನದಿಯು ಭೂಮಿಯಲ್ಲಿ ಪ್ರವಹಿಸುತ್ತಿರುವುದನ್ನು ವೀಕ್ಷಿಸುತ್ತಿದ್ದರು. ಅದನ್ನು ನೋಡಲು ಆಕಾಶದಲ್ಲಿ ಉಪಸ್ಥಿತರಾಗಿದ್ದ ದೇವತೆಗಳ ವಿಮಾನಗಳು ನಗರಗಳಂತೆ ಕಂಗೊಳಿಸುತ್ತಿದ್ದುವು. ಕೆಲವು ದೇವತೆಗಳು ಕುದುರೆಗಳ ಮೇಲೆಯೂ, ಕೆಲವರು ಶ್ರೇಷ್ಠವಾದ ಆನೆಗಳ ಮೇಲೆಯೂ ಮಂಡಿಸಿದ್ದರು. ಅತ್ಯದ್ಭುತವಾದ, ಸರ್ವಶ್ರೇಷ್ಠವಾದ ಆ ಗಂಗಾವತರಣವನ್ನು ಸಮೀಪದಲ್ಲಿ ನಿಂತು ನೋಡುವ ಸಲುವಾಗಿ ವಿಶೇಷವಾದ ತೇಜಸ್ಸಿನಿಂದ ಪ್ರಕಾಶಿಸುತ್ತಿದ್ದ ದೇವತೆಗಳು ಗಂಗಾನದಿಯ ಸಮೀಪಕ್ಕೆ ಬಂದರು. ಬಹು ಶೀಘ್ರವಾಗಿ ಆಗಮಿಸುತ್ತಿದ್ದ ನೂರಾರು ದೇವತೆಗಳ ಅಮಿತವಾದ ತೇಜಸ್ಸಿನಿಂದಲೂ, ಅವರು ಧರಿಸಿದ್ದ ರತ್ನಾಭರಣಗಳ ಕಾಂತಿಯಿಂದಲೂ–ಆಕಾಶವು ಮೇಘರಹಿತವಾಗಿ ನೂರು ಸೂರ್ಯರನ್ನು ಒಳಗೊಂಡು ಶೋಭಿಸುತ್ತಿದೆಯೋ–ಎಂಬಂತೆ ಪ್ರಕಾಶಿಸಿತು. ಗಂಗಾಪ್ರವಾಹದ ರಭಸದಿಂದಾಗಿ

---

* ಸ್ವರ್ಗ, ಆಕಾಶ ಮತ್ತು ಭೂಮಿಗಳಲ್ಲಿ ಗಂಗಾದೇವಿಯು ಪ್ರವಹಿಸಿದ್ದರಿಂದ ಇವಳಿಗೆ 'ತ್ರಿಪಥಗಾ' ಎಂದು ಹೆಸರಾಯಿತೆಂದು ಕೆಲವರೂ, ಮೇಲಿನ ಶ್ಲೋಕಗಳಲ್ಲಿ ಹೇಳಿರುವಂತೆ ಪೂರ್ವ, ಪಶ್ಚಿಮ ಮತ್ತು ಪಾತಾಳ–ಈ ಮೂರು ಕಡೆಗಳಲ್ಲಿಯೂ ಪ್ರವಹಿಸಿದ್ದರಿಂದ 'ತ್ರಿಪಥಗಾ' ಎಂದು ಹೆಸರಾಯಿತೆಂದು ಮತ್ತೆ ಕೆಲವರೂ ಹೇಳುತ್ತಾರೆ.

ಗಂಗೆಯಲ್ಲಿದ್ದ ಶಿಂಶುಮಾರ, ಸರ್ಪ ಮತ್ತು ಮೀನುಗಳ ಸಮೂಹಗಳು ಪ್ರತಿಕ್ಷಣದಲ್ಲಿಯೂ ಒಂದು ಕಡೆಯಿಂದ ಮತ್ತೊಂದು ಕಡೆಗೆ ಚಲಿಸುತ್ತಿದ್ದುವು. ಥಳ-ಥಳನೆ ಮಿಂಚುತ್ತಿದ್ದ ಅವುಗಳನ್ನು ನೋಡಿದರೆ ಆಕಾಶವು ಮಿಂಚಿನ ಸಮೂಹದಿಂದ ಕೂಡಿರುವಂತೆ ಕಾಣುತ್ತಿದ್ದಿತು. ಗಂಗಾಪ್ರವಾಹದ ಕಾಲದಲ್ಲಿ ನೀರಿನ ಸಂಘಟ್ಟನೆಯಿಂದಾಗಿ ಬಿಳಿಯ ನೊರೆಯು ಹುಟ್ಟು ತ್ತಿದ್ದಿತು. ಆ ನೊರೆಯನ್ನು ಗಾಳಿಯು ಆಕಾಶದಲ್ಲೆಲ್ಲಾ ಹರಡುತ್ತಿದ್ದಿತು. ಆ ದೃಶ್ಯವನ್ನು ನೋಡಿದರೆ ಹಾರಾಡುತ್ತಿರುವ ಹಂಸಪಕ್ಷಿಗಳಿಂದ ಕೂಡಿದ ಶರತ್ಕಾಲದ ಮೋಡಗಳಿಂದ ಆಕಾಶವು ವ್ಯಾಪಿಸಿರುವುದೋ ಎಂಬಂತೆ ಭಾಸ ವಾಗುತ್ತಿದ್ದಿತು. ಗಂಗಾಪ್ರವಾಹವು ಕೆಲವೆಡೆಗಳಲ್ಲಿ ಬಹಳ ರಭಸದಿಂದ ಕೂಡಿರುತ್ತಿದ್ದಿತು. ಮತ್ತೆ ಕೆಲವೆಡೆಗಳಲ್ಲಿ ಡೊಂಕು-ಡೊಂಕಾಗಿ ಹರಿಯು ತ್ತಿದ್ದಿತು. ಕೆಲವೆಡೆಗಳಲ್ಲಿ ಪಾತ್ರವು ಬಹಳ ವಿಸ್ತಾರವಾಗಿದ್ದಿತು. ಮತ್ತೆ ಕೆಲವೆಡೆ ಗಳಲ್ಲಿ ಪಾತ್ರವು ಬಹಳ ಇಕ್ಕಟ್ಟಾಗಿದ್ದು ಬಹಳ ಆಳವಾಗಿದ್ದಿತು. ಕೆಲವು ಕಡೆ ಗಳಲ್ಲಿ ವೇಗವಾಗಿ ಹರಿಯುತ್ತಿದ್ದಿತು. ಕೆಲವು ಕಡೆಗಳಲ್ಲಿ ಬಹಳ ನಿಧಾನವಾಗಿ ಹರಿಯುತ್ತಿದ್ದಿತು. ಕೆಲವು ಸಮಯಗಳಲ್ಲಿ ಗಾಳಿಯಿಂದ ಮೇಲೇಳುತ್ತಿದ್ದ ಅಲೆಗಳ ಬಡಿತದಿಂದಾಗಿ ನೀರು ಮೇಲಕ್ಕೆ ಹಾರಿ, ಪುನಃ ಭೂಮಿಯ ಮೇಲೆ ಬೀಳುತ್ತಿದ್ದಿತು. ಉನ್ನತವಾದ ವಿಷ್ಣುಪಾದದಿಂದ ಬಂದು ಚಂದ್ರನನ್ನು ತೋಯಿಸಿ ಅನಂತರ ಪರಶಿವನ ತಲೆಗೆ ಜಾರಿ ಅಲ್ಲಿಂದ ಭೂಮಿಗೆ ಜಾರಿದ ಗಂಗೆಯು ಎರಡು ಭಾರಿ ಭ್ರಷ್ಟಳಾದರೂ ಅವಳ ನೀರು ನಿರ್ಮಲವಾಗಿಯೂ ಕಲ್ಮಷರಹಿತವಾಗಿಯೂ ಇದ್ದಿತು.

ತತ್ರರ್ಷಿಗಣಗನ್ಧರ್ವಾ ವಸುಧಾತಲವಾಸಿನಃ ।
ಭವಾಙ್ಗಪತಿತಂ ತೋಯಂ ಪವಿತ್ರಮಿತಿ ಪಸ್ಪೃಶುಃ ॥೨೫॥

ಈಶ್ವರನ ತಲೆಯಿಂದ ಹೊರಟ ಆ ತೀರ್ಥವನ್ನು ಋಷಿ-ಮಹರ್ಷಿ ಗಳ ಸಮೂಹಗಳೂ, ಗಂಧರ್ವ-ಯಕ್ಷರುಗಳೂ ಮತ್ತು ಭೂಲೋಕವಾಸಿ ಗಳೂ ಪವಿತ್ರವಾದುದೆಂದು ಸ್ಪರ್ಶಮಾಡಿದರು. ಯಾವ ದೇವ-ದಾನವ-ಗಂಧರ್ವರು ತಪಸ್ವಿಗಳಿಂದ ಶಪ್ತರಾಗಿ ಭೂಮಿಯಲ್ಲಿ ಜನ್ಮತಾಳಿದ್ದರೋ–ಅವರೆಲ್ಲರೂ ಗಂಗಾನದಿಯಲ್ಲಿ ಸ್ನಾನಮಾಡಿ ಪಾಪರಹಿತರಾದರು. ಶಾಪಾಭಿ ಭೂತರಾದ ಅವರು ಗಂಗಾಜಲದಲ್ಲಿ ಸ್ನಾನಮಾಡುವುದರಿಂದಲೂ, ಗಂಗಾ

ತೀರ್ಥವನ್ನು ಪಾನಮಾಡುವುದರಿಂದಲೂ ಶಾಪವಿಮುಕ್ತರಾಗಿ, ಪುಣ್ಯಾತ್ಮ ರಾಗಿ, ಆಕಾಶಮಾರ್ಗದಿಂದ ತಮ್ಮ-ತಮ್ಮ ಲೋಕಗಳನ್ನು ಸೇರಿದರು. ಆನಂದಭರಿತರಾದ ಜನರು ಪ್ರಕಾಶಮಾನವಾದ ಗಂಗಾನದಿಯ ನೀರಿನ ಅವಲೋಕನದಿಂದಲೇ ಸಂತುಷ್ಟರಾದರು. ಅವರು ಗಂಗೆಯಲ್ಲಿ ಸ್ನಾನಮಾಡಿ ದೊಡನೆಯೇ ಪಾಪರಹಿತರೂ ಆದರು. ಮಹಾತೇಜಸ್ವಿಯಾದ, ರಾಜರ್ಷಿ ಯಾದ ಭಗೀರಥನು ದಿವ್ಯವಾದ ರಥದಲ್ಲಿ ಕುಳಿತು ಮುಂದೆ-ಮುಂದೆ ಹೋಗುತ್ತಿದ್ದನು. ಅವನನ್ನನುಸರಿಸಿ ಗಂಗಾನದಿಯು ಹಿಂದೆ ಹರಿದು ಹೋಗುತ್ತಿದ್ದಿತು. ಮಹರ್ಷಿಸಮೇತರಾದ ದೇವತೆಗಳು, ದೈತ್ಯ-ದಾನವ-ರಾಕ್ಷಸರು, ಗಂಧರ್ವ-ಯಕ್ಷರು, ಕಿನ್ನರೋರಗರು, ಅಪ್ಸರೆಯರು, ಜಲಚರ ಗಳು—ಇವರೆಲ್ಲರೂ ಭಗೀರಥನ ರಥದ ಹಿಂದೆ ಹರಿಯುತ್ತಿದ್ದ ಗಂಗೆಯನ್ನೇ ಅನುಸರಿಸಿ ಹೋಗುತ್ತಿದ್ದರು. ರಾಜಾಧಿರಾಜನಾದ ಭಗೀರಥನು ರಥದಲ್ಲಿ ಕುಳಿತು ಯಾವ ಮಾರ್ಗವನ್ನನುಸರಿಸಿ ಪ್ರಯಾಣಮಾಡುತ್ತಿದ್ದನೋ—ಅದೇ ಮಾರ್ಗವನ್ನನುಸರಿಸಿ ಯಶಸ್ವಿನಿಯಾದ, ಆಶ್ರಯಿಸಿದವರ ಪಾಪಗಳನ್ನು ಪರಿಹರಿಸುವ, ಎಲ್ಲ ನದಿಗಳಿಗೂ ಶ್ರೇಷ್ಠಳಾದ ಗಂಗೆಯು ಹೋಗುತ್ತಿದ್ದಳು. ಹಾಗೆ ಹೋಗುತ್ತಿರುವಾಗ ಅಘಟಿತಘಟನಾಸಾಮರ್ಥ್ಯವುಳ್ಳ, ಯಾಗದಲ್ಲಿ ದೀಕ್ಷಿತನಾದ, ಮಹಾತ್ಮನಾದ ಜಹ್ನುಮಹರ್ಷಿಯ ಯಜ್ಞಶಾಲೆಯನ್ನು ಗಂಗಾದೇವಿಯು ಮುಳುಗಿಸಿಬಿಟ್ಟಳು. ಜಹ್ನುವು ಗಂಗಾದೇವಿಯು ಗರ್ವಿತ ಳಾಗಿದ್ದಾಳೆಂದು ತಿಳಿದು ಕೋಪಗೊಂಡು ತನ್ನ ಯೋಗಶಕ್ತಿಯಿಂದ, ಪರ ಮಾದ್ಭುತವಾದ ಗುಣಾತಿಶಯವುಳ್ಳ ಗಂಗಾನದಿಯ ನೀರೆಲ್ಲವನ್ನೂ ಪೂರ್ಣ ವಾಗಿ ಕುಡಿದುಬಿಟ್ಟನು. ಅನಂತರ ಗಂಗೆಯನ್ನನುಸರಿಸಿ ಬರುತ್ತಿದ್ದ ದೇವ-ದಾನವ-ಯಕ್ಷ-ಅಪ್ಸರೆಯರೂ ಋಷಿ-ಮಹರ್ಷಿಗಳೂ ಮಹರ್ಷಿಯ ಪರ ಮಾದ್ಭುತವಾದ ಆ ಕಾರ್ಯವನ್ನು ಕಂಡು ಆಶ್ಚರ್ಯಭರಿತರಾಗಿ, ಪುರುಷ ಶ್ರೇಷ್ಠನಾದ ಜಹ್ನುಮಹರ್ಷಿಯನ್ನು ನಾನಾವಿಧವಾಗಿ ಪೂಜಿಸಿ ಸ್ತೋತ್ರ ಮಾಡುತ್ತಾ—ಗಂಗೆಯನ್ನು ಹೊರಗೆಬಿಟ್ಟರೆ ಇನ್ನು ಮುಂದೆ ಅವಳು ನಿನ್ನ ಮಗಳೆಂದೇ (ಜಾಹ್ನವೀ ಎಂದೇ) ಪ್ರಸಿದ್ಧಳಾಗುವಳೆಂದೂ ಮಹರ್ಷಿಗೆ ನಿವೇದಿಸಿದರು. ದೇವತೆಗಳು ಹೇಳಿದ ಆ ಮಾತಿನಿಂದ ಸಂತುಷ್ಟನಾದ, ಮಹಾತೇಜಸ್ವಿಯಾದ ಜಹ್ನುಮಹರ್ಷಿಯು ತನ್ನೆರಡು ಕಿವಿಗಳ ಮೂಲಕ ಗಂಗಾನದಿಯನ್ನು ಹೊರಕ್ಕೆಬಿಟ್ಟನು. ಈ ಕಾರಣದಿಂದಾಗಿ ಗಂಗಾನದಿಯನ್ನು

‘ಜಹ್ನುಸುತಾ’ ‘ಜಾಹ್ನವೀ’ ಎಂದೂ ಕರೆಯುತ್ತಾರೆ. ಜಹ್ನುಮಹರ್ಷಿಯಿಂದ ಬಿಡಲ್ಪಟ್ಟ ಗಂಗಾದೇವಿಯು ಪುನಃ ಭಗೀರಥನ ರಥವನ್ನೇ ಅನುಸರಿಸಿ ಹೊರಟಳು. ಭಗೀರಥನ ರಥಮಾರ್ಗದಲ್ಲಿಯೇ ಪ್ರವಹಿಸಿ, ಸಗರನ ಮಕ್ಕಳು ಅಗೆದಿದ್ದ ಸಹಸ್ರಯೋಜನವಿಸ್ತೀರ್ಣದ ಭೂಭಾಗವನ್ನು ತನ್ನ ನೀರಿನಿಂದ ತುಂಬಿ ಸಾಗರವನ್ನಾಗಿ ಮಾಡಿದಳು. ಅನಂತರ ಇನ್ನೂ ಮುಂದೆ ಭಗೀರಥನ ರಥಾನುವರ್ತಿನಿಯಾಗಿ ಪ್ರವಹಿಸಿ, ಅವನ ಕಾರ್ಯಸಿದ್ಧಿಗಾಗಿ ರಸಾತಲವನ್ನು ಸೇರಿದಳು.* ರಾಜರ್ಷಿಯಾದ ಭಗೀರಥನೂ ಬಹಳ ಪ್ರಯತ್ನದಿಂದ ಗಂಗೆಯನ್ನು ರಸಾತಲಕ್ಕೆ ಕರೆತಂದು, ಭಸ್ಮೀಭೂತರಾಗಿ ಬಿದ್ದಿದ್ದ ತನ್ನ ಅರುವತ್ತು ಸಾವಿರ ಮಂದಿ ಮುತ್ತಜ್ಜಂದಿರನ್ನೂ ದೀನವಾದ ಅಂತಃಕರಣದಿಂದ ನೋಡಿದನು. ಅನಂತರ ಭಗೀರಥನ ಪ್ರಾರ್ಥನೆಯಂತೆ ಗಂಗೆಯು ತನ್ನ ನೀರಿನಿಂದ ಆ ಭಸ್ಮರಾಶಿಯನ್ನು ಮುಳುಗಿಸಿದಳು. ಭಸ್ಮರಾಶಿಯು ಗಂಗಾತೋಯದಲ್ಲಿ ಕದಡಿಹೋಯಿತು. ಅದರಿಂದಾಗಿ ಸಗರನ ಅರುವತ್ತು ಸಾವಿರ ಮಂದಿ ಮಕ್ಕಳೂ ಪೂತಾತ್ಮರಾಗಿ ಸ್ವರ್ಗವನ್ನು ಸೇರಿದರು.[1]

೪೩ನೆಯ ಸರ್ಗವು ಮುಗಿಯಿತು.

---

* ಸಾಗರವು ಮೊದಲು ಗಂಗಾದೇವಿಯ ಪವಿತ್ರೋದಕದಿಂದ ತುಂಬಿದ್ದು ಸಿಹಿನೀರಿನಿಂದಲೇ ಕೂಡಿತ್ತೆಂದೂ, ಅನಂತರದಲ್ಲಿ ಸಾಗರವನ್ನು ಅಗಸ್ತ್ಯರು ಪ್ರಾಶನಮಾಡಿ ಮೂತ್ರರೂಪದಲ್ಲಿ ಬಿಟ್ಟ ಕಾರಣದಿಂದ ಸಮುದ್ರದ ನೀರು ಉಪ್ಪಾಯಿತೆಂದೂ ಒಬ್ಬ ವ್ಯಾಖ್ಯಾನಕಾರರು ಅಭಿಪ್ರಾಯಪಟ್ಟಿದ್ದಾರೆ.

[1] ಚಿತಾಭಸ್ಮವನ್ನು ಕಾವೇರಿ, ಗಂಗಾ, ಯಮುನಾ ಮೊದಲಾದ ಮಹಾನದಿಗಳಲ್ಲಿ ಬಿಡುವುದರ ಐತಿಹ್ಯವನ್ನೂ ನಾವು ಈ ಆಖ್ಯಾನದಿಂದ ತಿಳಿಯಬಹುದಾಗಿದೆ.

ಬಾಲಕಾಂಡ ೪೪ನೆಯ ಸರ್ಗ

ಬ್ರಹ್ಮನು ಭಗೀರಥನನ್ನು ಪ್ರಶಂಸಿಸಿ ಗಂಗಾಜಲದಿಂದ ಪಿತೃಗಳಿಗೆ ತರ್ಪಣವನ್ನೀಯಲು ಅನುಜ್ಞೆಯನ್ನಿತ್ತುದು : ಭಗೀರಥನು ಎಲ್ಲ ಪಿತೃಕಾರ್ಯಗಳನ್ನೂ ಮುಗಿಸಿ ನಗರಪ್ರವೇಶಮಾಡಿದುದು : ಗಂಗಾವತರಣೋಪಾಖ್ಯಾನದ ಮಹಿಮೆ

ಸ ಗತ್ವಾ ಸಾಗರಂ ರಾಜಾ ಗಙ್ಗಯಾನುಗತಸ್ತದಾ ।
ಪ್ರವಿವೇಶ ತಲಂ ಭೂಮೇರ್ಯತ್ರ ತೇ ಭಸ್ಮಸಾತ್ಕೃತಾಃ ॥೧॥

ಭಗೀರಥರಾಜನು ರಥದಲ್ಲಿ ಕುಳಿತು, ಗಂಗಾದೇವಿಯಿಂದ ಅನುಸೃತನಾಗಿ, ಸಗರನ ಮಕ್ಕಳಿಂದ ಅಗೆಯಲ್ಪಟ್ಟ ಸಾಗರದ ಮೂಲಕವಾಗಿ ಭೂಮಿಯ ಈಶಾನ್ಯದಿಕ್ಕಿನಲ್ಲಿ ರಸಾತಲದಲ್ಲಿ ಸಗರಪುತ್ರರು ಭಸ್ಮೀಭೂತ ರಾಗಿದ್ದ ಸ್ಥಳಕ್ಕೆ ತೆರಳಿದನು. ಭಗೀರಥನ ಪ್ರಾರ್ಥನೆಯಂತೆ ಗಂಗಾದೇವಿಯು ತನ್ನ ಪುಣ್ಯೋದಕದಿಂದ ಭಸ್ಮರಾಶಿಯನ್ನು ಮುಳುಗಿಸುತ್ತಿದ್ದ ಸಮಯಕ್ಕೆ ಸರಿಯಾಗಿ ಸಕಲಲೋಕಗಳಿಗೂ ಪ್ರಭುವಾದ ಚತುರ್ಮುಖಬ್ರಹ್ಮನು ಪ್ರತ್ಯಕ್ಷನಾಗಿ ಭಗೀರಥರಾಜನಿಗೆ ಹೇಳಿದನು :

"ನರಶ್ರೇಷ್ಠನೇ! ಮಹಾತ್ಮನಾದ ಸಗರನ ಅರುವತ್ತು ಸಾವಿರ ಮಕ್ಕಳೂ ಈ ಸಲಿಲಕ್ರಿಯೆಯಿಂದಾಗಿ ಪ್ರೇತತ್ವದಿಂದ ವಿಮುಕ್ತರಾಗಿ, ದೇವತೆಗಳಂತೆಯೇ ಪ್ರಕಾಶಮಾನರಾಗಿ ದೇವಲೋಕಕ್ಕೆ ತೆರಳಿದರು. ಎಂದಿನವರೆಗೆ ಸಗರಪುತ್ರರು ತೋಡಿರುವ ಈ ಸ್ಥಳದಲ್ಲಿ ನೀರಿರುವುದೋ (ಗಂಗಾಜಲ ಪೂರಿತವಾದ ಸಾಗರವಿರುವುದೋ) ಅಂದಿನವರೆಗೂ ಸಗರಪುತ್ರರು ದೇವತೆಗಳಂತೆಯೇ ಸಕಲವಿಧವಾದ ಸುಖಗಳನ್ನೂ ಅನುಭವಿಸುತ್ತಾ ದೇವಲೋಕದಲ್ಲಿರುತ್ತಾರೆ. ನಿನ್ನನ್ನನುಸರಿಸಿ ಬಂದಿರುವ ಈ ಗಂಗಾದೇವಿಯು ನಿನ್ನ ಹಿರಿಯಮಗಳೆನಿಸಿಕೊಳ್ಳುತ್ತಾಳೆ. ಗಂಗಾವತರಣಕ್ಕಾಗಿ ನೀನು ಮಾಡಿರುವ ಮಹಾಯತ್ನದ ಸ್ಮರಣೆಯನ್ನುಂಟುಮಾಡುವ-'ಭಾಗೀರಥೀ'-ಎಂಬ ಹೆಸರಿನಿಂದಲೇ ಇವಳು ಈ ಲೋಕದಲ್ಲಿ ಪ್ರಸಿದ್ಧಳಾಗುತ್ತಾಳೆ. ಇವಳು ತ್ರಿಪಥಗಾ, ದಿವ್ಯಾ ಭಾಗೀರಥೀ-ಎಂಬ ಮೂರು ಹೆಸರುಗಳಿಂದಲೂ ಪ್ರಸಿದ್ಧಳಾಗುತ್ತಾಳೆ. ಸ್ವರ್ಗ, ಮರ್ತ್ಯ, ಪಾತಾಳ-ಈ ಮೂರು ಲೋಕಗಳಲ್ಲಿಯೂ ಪ್ರವಹಿಸುವ

ಇವಳಿಗೆ ತ್ರಿಪಥಗಾ ಎಂಬ ಅಭಿಧಾನವು ನಿನ್ನ ಪ್ರಯತ್ನದಿಂದಲೇ ಪ್ರಾಪ್ತವಾಗಿದೆ. ಈ ನಿನ್ನ ಪಿತಾಮಹರೆಲ್ಲರಿಗೂ ಇಲ್ಲಿಯೇ ನೀನು ಜಲಪ್ರದಾನ ಕ್ರಿಯೆಯನ್ನು ಮಾಡು. ಅಂತೆಯೇ ಗಂಗಾಜಲದಿಂದಲೇ ಇವರುಗಳ ಸಲಿಲಕ್ರಿಯೆಯನ್ನು ಮಾಡಬೇಕೆಂದು ನೀನು ಮತ್ತು ನಿನ್ನ ವಂಶಜರು ಹಿಂದೆ ಮಾಡಿದ್ದ ಪ್ರತಿಜ್ಞೆಯನ್ನು ಪೂರ್ಣಗೊಳಿಸು. ನಿನ್ನ ಪೂರ್ವಜನಾದ, ಅತಿಶಯಯಶೋವಂತನಾದ, ಧರ್ಮಿಷ್ಠರುಗಳಲ್ಲಿ ಶ್ರೇಷ್ಠನಾದ ಸಗರಚಕ್ರವರ್ತಿಯಿಂದಲೂ, ಗಂಗಾವತರಣಸಂಕಲ್ಪದ ಸಾಧನೆಯಾಗಿಲ್ಲ. ಅಂತೆಯೇ ಲೋಕದಲ್ಲಿ ಅಪ್ರತಿಮತೇಜಸ್ವಿಯೆನಿಸಿದ್ದ ಅಂಶುಮಂತನೂ ಗಂಗೆಯನ್ನು ಪ್ರಾರ್ಥಿಸಿ ರಸಾತಲಕ್ಕೆ ಕರೆದೊಯ್ಯುವ ತನ್ನ ಪ್ರತಿಜ್ಞೆಯನ್ನು ಪೂರ್ಣಗೊಳಿಸಲಿಲ್ಲ. ಅಲ್ಲಿಂದ ಮುಂದೆ ರಾಜರ್ಷಿಯಾದ, ಸಕಲಗುಣಪರಿಪೂರ್ಣನಾದ, ಮಹರ್ಷಿಗೆ ಸಮನಾದ ತೇಜಸ್ಸಿನಿಂದ ಕೂಡಿದ್ದ, ನನಗೆ ಸಮಾನವಾದ ತಪಃಪ್ರಭಾವವುಳ್ಳ, ಕ್ಷತ್ರಧರ್ಮನಿಷ್ಠನಾಗಿದ್ದ, ನಿನ್ನ ತಂದೆಯಾದ ದಿಲೀಪನಿಗೂ ಗಂಗೆಯನ್ನು ರಸಾತಲಕ್ಕೆ ಕರೆದೊಯ್ಯಬೇಕೆನ್ನುವ ಪ್ರತಿಜ್ಞೆಯ ವಿಷಯವಾಗಿ ಹೆಚ್ಚು ಯೋಚಿಸಲೂ ಸಾಧ್ಯವಾಗಲಿಲ್ಲ. ಪುರುಷಶ್ರೇಷ್ಠನಾದ ಭಗೀರಥನೇ! ಮಹಾತೇಜಸ್ವಿಗಳಾದ ನಿನ್ನ ಪೂರ್ವಜರಿಂದ ಪೂರ್ಣ ಮಾಡಲಾಗದ ಪ್ರತಿಜ್ಞೆಯನ್ನು ನೀನು ಇಂದು ಪೂರ್ಣಗೊಳಿಸಿರುವೆ. ಆದುದರಿಂದಲೇ ಉತ್ತಮಜನರಿಗೆ ಅತ್ಯಂತಪ್ರಿಯವಾದ, ಲೋಕದಲ್ಲಿ ಅತ್ಯಂತಶ್ರೇಷ್ಠವಾದ ಯಶಸ್ಸನ್ನು ನೀನು ಪಡೆದಿರುವೆ. ನೀನು ಅತಿಪ್ರಯತ್ನದಿಂದ ಸಾಧಿಸಿರುವ ಗಂಗಾವತರಣದಿಂದಾಗಿ ನಿನಗೆ ಧರ್ಮದ ದೊಡ್ಡ ಆಶ್ರಯವೇ ಸಿಕ್ಕಿರುತ್ತದೆ. ನರೋತ್ತಮನೇ! ಸರ್ವಕಾಲದಲ್ಲಿ ಸ್ನಾನಮಾಡಲು ಯೋಗ್ಯವಾದ ಈ ಗಂಗಾನದಿಯ ಶುಭಜಲದಲ್ಲಿ ಸ್ನಾನಮಾಡು. ಇದರಿಂದ ನೀನು ಪರಿಶುದ್ಧನಾಗಿ ಲೋಕಕ್ಕೂ ಪುಣ್ಯಸಂಪಾದನೆಯಲ್ಲಿ ಮಾರ್ಗದರ್ಶಕನಾಗು.* ನೀನು ನಿನ್ನ ಪಿತೃ-ಪಿತಾಮಹ-ಪ್ರಪಿತಾಮಹರೆಲ್ಲರಿಗೂ ಈ ಗಂಗಾ

---

*ಗಂಗಾ, ಯಮುನಾ, ಪ್ಲಕ್ಷಜಾ, ಸರಸ್ವತೀ—ಈ ನದಿಗಳಲ್ಲಿಯೂ ಮತ್ತು ಸಮುದ್ರಕ್ಕೆ ಸೇರುವ ನದಿಗಳಲ್ಲಿಯೂ ಸರ್ವಕಾಲದಲ್ಲಿಯೂ ಸ್ನಾನಮಾಡಬಹುದೆಂದೂ, ಇತರ ನದಿಗಳಿಗೆ ಕರ್ಕಾಟಕ-ಸಿಂಹಸಂಕ್ರಮಣಗಳ ಮಧ್ಯೆಯ ಒಂದು ತಿಂಗಳು ರಜೋದೋಷವಿರುವುದರಿಂದ ಸ್ನಾನಮಾಡಬಾರದೆಂದೂ ಸ್ಮೃತ್ಯುಕ್ತಿಯಿದೆ. “ಸಿಂಹ

ನದಿಯ ಪವಿತ್ರೋದಕದಿಂದ ತರ್ಪಣವನ್ನು ಕೊಡು. ನಿನಗೆ ಮಂಗಳ ವಾಗಲಿ. ನಾನಿನ್ನು ನನ್ನ ಲೋಕಕ್ಕೆ ಹೋಗುವೆನು. ನೀನೂ ಸಲಿಲಕ್ರಿಯೆ ಯನ್ನು ಮುಗಿಸಿ ನಿನ್ನ ದೇಶಕ್ಕೆ ಪ್ರಯಾಣಮಾಡು."

ಸಕಲಲೋಕಪಿತಾಮಹನಾದ ಬ್ರಹ್ಮನು ಭಗೀರಥನಿಗೆ ಹೀಗೆ ಹೇಳಿ ರಸಾತಲಕ್ಕೆ ಬಂದ ಮಾರ್ಗದಿಂದಲೇ ಪುನಃ ದೇವಲೋಕಕ್ಕೆ ಹಿಂದಿರುಗಿದನು. ಬ್ರಹ್ಮನ ನಿರ್ದೇಶದಂತೆ ರಾಜರ್ಷಿಯಾದ ಭಗೀರಥನು ಸಗರನ ಅರುವತ್ತು ಸಾವಿರ ಮಕ್ಕಳಿಗೂ ಜ್ಯೇಷ್ಠಾನುಕ್ರಮವಾಗಿ ಉತ್ತಮಲೋಕಪ್ರಾಪ್ತಿಗೆ ಸಾಧನಭೂತವಾದ ಸ್ಮೃತ್ಯುಕ್ತವಾದ ಸಲಿಲಕ್ರಿಯೆಯನ್ನು ಮಾಡಿ ತನ್ನ ವಂಶ ಸಂಭೂತರಾದ ಇತರ ರಾಜರುಗಳಿಗೂ ತರ್ಪಣಾದಿಗಳನ್ನು ಯಥಾಶಾಸ್ತ್ರ ವಾಗಿ ಶುಭಗಂಗಾಜಲದಿಂದ ಅರ್ಪಿಸಿ, ತನ್ನ ಪಟ್ಟಣಕ್ಕೆ ಹೋದನು. ಪಟ್ಟಣಿಗ ರಿಂದಲೂ ಮಂತ್ರಿಸತ್ತಮರಿಂದಲೂ ಆದರಪೂರ್ವಕವಾಗಿ ಸ್ವಾಗತಿಸಲ್ಪಟ್ಟ ಭಗೀರಥನು, ಸಮೃದ್ಧವಾದ ಅರ್ಥಸಂಪತ್ತಿಯಿಂದ ಕೂಡಿರುವ ತನ್ನ ರಾಜ್ಯ ವನ್ನು ವಿಚಕ್ಷಣತೆಯಿಂದ ಆಳುತ್ತಿದ್ದನು. ಧರ್ಮಾತ್ಮನಾದ ಭಗೀರಥನ ಶಾಸನದಿಂದಾಗಿ ಪ್ರಜೆಗಳು ಆನಂದಭರಿತರಾದರು. ಅವರಿಗೆ ದುಃಖ ವೆಂಬುದೇ ಇರಲಿಲ್ಲ. ರಾಜನ ಇಲ್ಲದಿರುವಿಕೆಯಿಂದ ಪ್ರಾಪ್ತವಾಗಿದ್ದ ದುಃಖವೂ ದೂರವಾಯಿತು. ಭಗೀರಥನ ವಿಚಕ್ಷಣತೆಯ ಆಳ್ವಿಕೆಯಿಂದಾಗಿ ಪ್ರಜೆಗಳು ಸಂಪತ್ಸಮೃದ್ಧಿಯುಳ್ಳವರೂ, ನೀರೋಗ ದೃಢಕಾಯರೂ ಆದರು. ರಾಮ! ಗಂಗಾದೇವಿಯ ಪರಮಪವಿತ್ರವಾದ, ಪುಣ್ಯಪ್ರದವಾದ ಈ ಚರಿತ್ರೆ ಯನ್ನು ಯಥಾವತ್ತಾಗಿ ನಿನಗೆ ಹೇಳಿರುವೆನು. ಇದರ ಶ್ರವಣದಿಂದಾಗಿ ನಿನಗೆ

ಕರ್ಕಟಯೋರ್ಮಧ್ಯೇ ಸರ್ವಾ ನದ್ಯೋ ರಜಸ್ವಲಾಃ। ತಾಸು ಸ್ನಾನಂ ನ ಕುರ್ವೀತ ವರ್ಜಯಿತ್ವಾ ಸಮುದ್ರಗಾಃ॥ ಗಂಗಾ ಚ ಯಮುನಾ ಚೈವ ಪ್ಲಕ್ಷಜಾ ಚ ಸರಸ್ವತೀ। ರಜಸಾ ನಾಭಿಭೂಯನ್ತೇ ಯೇ ಚಾನ್ಯೇ ನದಸಂಜ್ಞಕಾಃ॥" ಕರ್ಕಾಟಕ- ಸಿಂಹ ಸಂಕ್ರಮಣಗಳ ಮಧ್ಯದಲ್ಲಿ [ಒಂದು ತಿಂಗಳು] ನದಿಗಳಿಗೆ ರಜೋದೋಷ ವುಂಟು. ಆ ಕಾಲದಲ್ಲಿ ನದಿಗಳಲ್ಲಿ ಸ್ನಾನಮಾಡಬಾರದು. ಆದರೆ ಸಮುದ್ರವನ್ನು ಸೇರುವ ನದಿಗಳಿಗೆ ಈ ದೋಷವಿಲ್ಲ. ಗಂಗೆ, ಯಮುನೆ, ಪ್ಲಕ್ಷಜೆ, ಸರಸ್ವತೀ ಈ ನದಿಗಳಿಗೂ ನದ ಸಂಜ್ಞಕವಾದ ಪ್ರವಾಹಗಳಿಗೂ [ಪಶ್ಚಿಮ ಸಮುದ್ರಕ್ಕೆ ಸೇರುವ ಹೊಳೆಗಳು] ರಜೋದೋಷವಿಲ್ಲ.

ಸನ್ಮಂಗಳವೂ ಕಲ್ಯಾಣವೂ ಉಂಟಾಗಲಿ. ಸಂಧ್ಯಾಕಾಲವು ಕಳೆದುಹೋಗುವುದರಲ್ಲಿದೆ. ಕಾಲಾತೀತವಾಗದಂತೆ ಸಂಧ್ಯಾಕಾರ್ಯವನ್ನು ಮಾಡು.

ಧನ್ಯಂ ಯಶಸ್ಯಮಾಯುಷ್ಯಂ ಪುತ್ರ್ಯಂ ಸ್ವರ್ಗ್ಯಮತೀವ ಚ ।
ಯಃ ಶ್ರಾವಯತಿ ವಿಪ್ರೇಷು ಕ್ಷತ್ರಿಯೇಷ್ವಿತರೇಷು ಚ ।
ಪ್ರೀಯನ್ತೇ ಪಿತರಸ್ತಸ್ಯ ಪ್ರೀಯನ್ತೇ ದೈವತಾನಿ ಚ ॥೨೧॥

ಇದಮಾಖ್ಯಾನಮವ್ಯಗ್ರೋ ಗಙ್ಗಾವತರಣಂ ಶುಭಮ್ ।
ಯಃ ಶೃಣೋತಿ ಚ ಕಾಕುತ್ಸ್ಥ ಸರ್ವಾನ್ಕಾಮಾನವಾಪ್ನುಯಾತ್ ।
ಸರ್ವೇ ಪಾಪಾಃ ಪ್ರಣಶ್ಯನ್ತಿ ಆಯುಃ ಕೀರ್ತಿಶ್ಚ ವರ್ಧತೇ ॥೨೨॥

ರಾಮ! ಗಂಗಾವತರಣ ಕಥೆಯನ್ನು ಹೇಳುವವರಿಗೆ ಪ್ರಾಪ್ತವಾಗುವ ಫಲವನ್ನು ಹೇಳುವೆನು ; ಕೇಳು : ಯಾವನು ಈ ಪುಣ್ಯಕಥೆಯನ್ನು ಬ್ರಾಹ್ಮಣ ಸಭೆಯಲ್ಲಾಗಲೀ, ಕ್ಷತ್ರಿಯರಲ್ಲಾಗಲೀ, ವೈಶ್ಯರಲ್ಲಾಗಲೀ, ಶೂದ್ರರಲ್ಲಾಗಲೀ ಹೇಳುವನೋ–ಅವನಿಗೆ ಕಥಾಪ್ರವಚನವು ಧನ್ಯತೆಯನ್ನೂ (ಧನ-ಧಾನ್ಯ ಸಮೃದ್ಧಿಯನ್ನೂ) ಯಶಸ್ಸನ್ನೂ ಆಯುಷ್ಯವನ್ನೂ, ಪುಣ್ಯತಮವಾದ ಸ್ವರ್ಗವನ್ನೂ ಉಂಟುಮಾಡುತ್ತದೆ. ಕಥಾಪ್ರವಚನವನ್ನು ಮಾಡುವವನ ಪಿತೃಗಳು ಸುಪ್ರೀತರಾಗುತ್ತಾರೆ. ದೇವತೆಗಳೂ ಪ್ರಸನ್ನರಾಗುತ್ತಾರೆ. ಈ ಆಖ್ಯಾನವನ್ನು ಏಕಾಗ್ರಚಿತ್ತರಾಗಿ ಕೇಳುವವರಿಗೂ ಸಕಲವಾದ ಅಭಿಲಾಷೆಗಳೂ ಪೂರ್ಣವಾಗುತ್ತವೆ. ಅವರ ಪಾಪಗಳೆಲ್ಲವೂ ಪರಿಹಾರವಾಗಿ, ಆಯುಷ್ಯವೂ ಮತ್ತು ಕೀರ್ತಿಯೂ ವೃದ್ಧಿಯಾಗುತ್ತವೆ.”

ತಳನೆಯ ಸರ್ಗವು ಮುಗಿಯಿತು.

ದೇವ-ದಾನವರು ಸಮುದ್ರವನ್ನು ಕಡೆದುದು : ರುದ್ರನಿಂದ ಹಾಲಾಹಲವಿಷದ ಪಾನ : ಮಹಾವಿಷ್ಣುವಿನ ಸಹಾಯದಿಂದ ಮಂದರಪರ್ವತವನ್ನು ಮೇಲಕ್ಕೆತ್ತಿದುದು : ಧನ್ವಂತರಿಯೇ ಮೊದಲಾದವರ ಉತ್ಪತ್ತಿ : ದೇವಾಸುರಯುದ್ಧದಲ್ಲಿ ದೈತ್ಯರ ಸಂಹಾರ

ವಿಶ್ವಾಮಿತ್ರವಚಃ ಶ್ರುತ್ವಾ ರಾಘವಃ ಸಹಲಕ್ಷ್ಮಣಃ ।
ವಿಸ್ಮಯಂ ಪರಮಂ ಗತ್ವಾ ವಿಶ್ವಾಮಿತ್ರಮಥಾಬ್ರವೀತ್ ॥೧॥

ವಿಶ್ವಾಮಿತ್ರರು ಹೇಳಿದ ಕಥೆಯನ್ನು ಲಕ್ಷ್ಮಣನೊಡನೆ ಕೇಳಿ, ಶ್ರೀರಾಮನಿಗೆ ಬಹಳವಾದ ಆಶ್ಚರ್ಯವುಂಟಾಯಿತು. ವಿಶ್ವಾಮಿತ್ರರು ಗಂಗಾವತರಣದ ಕಥಾಶ್ರವಣ ಮತ್ತು ಪ್ರವಚನಗಳ ಫಲಶ್ರುತಿಯನ್ನು ಹೇಳಿ ಮುಗಿಸಿದ ನಂತರ, ಶ್ರೀರಾಮನು ವಿಶ್ವಾಮಿತ್ರರಿಗೆ ಹೇಳಿದನು :

"ಬ್ರಾಹ್ಮಣೋತ್ತಮರೇ! ತಾವು ಹೇಳಿದ ಗಂಗಾವತರಣ ಮತ್ತು ಸಗರನ ಮಕ್ಕಳು ಅಗೆದಿದ್ದ ಭೂಭಾಗವನ್ನು ಗಂಗೆಯು ತನ್ನ ಪುಣ್ಯೋದಕದಿಂದ ಪೂರಣಮಾಡಿದುದು–ಈ ಕಥೆಗಳು ನಿಶ್ಚಯವಾಗಿಯೂ ಪರಮಾದ್ಭುತವಾದ ಮತ್ತು ಪುಣ್ಯಕರವಾದ ಪ್ರವಚನಗಳಾಗಿವೆ."

ಹೀಗೆ ಕಥೆಯ ವಿಷಯವಾಗಿ ತನ್ನ ವಿಸ್ಮಯವನ್ನು ವಿಶ್ವಾಮಿತ್ರರಿಗೆ ಸೂಚಿಸಿ, ಶ್ರೀರಾಮನು ಗಂಗಾವತರಣ ಪುಣ್ಯಕಥೆಯನ್ನೇ ಮನದಲ್ಲಿ ಪುನರಾವೃತ್ತಿಮಾಡುತ್ತಾ, ಲಕ್ಷ್ಮಣನೊಡನೆ ಮುಖ್ಯಪ್ರಸಂಗಗಳನ್ನು ಪ್ರಸ್ತಾಪಿಸುತ್ತಾ ಇರುವಲ್ಲಿ ರಾತ್ರಿಯೇ ಕಳೆದುಹೋಯಿತು. ವಿಮಲವಾದ ಸುಪ್ರಭಾತವು ಉಂಟಾಗಲಾಗಿ ತಮ್ಮ ಆಹ್ನಿಕಕೃತ್ಯಗಳನ್ನು ಮುಗಿಸಿದ್ದ, ತಪೋಧನರಾದ ವಿಶ್ವಾಮಿತ್ರರಿಗೆ ರಾಘವನು ಲಕ್ಷ್ಮಣನೊಡನೆ ಅಭಿವಾದನ ಪೂರ್ವಕವಾಗಿ ನಮಸ್ಕರಿಸಿ ಹೇಳಿದನು :

"ತಪೋಧನರೇ! ಕೇಳಲು ಅರ್ಹವಾದ, ಪರಮಾದ್ಭುತವಾದ ಗಂಗಾವತರಣವನ್ನು ನಿಮ್ಮ ಮುಖಾರವಿಂದದಿಂದ ಕೇಳಿದೆವು. ಅನಂತರ ಈ ಕಥೆಯನ್ನು ಆಮೂಲಾಗ್ರವಾಗಿ ಪುನಃ ಸ್ಮರಿಸಿಕೊಳ್ಳುತ್ತಿದ್ದ ನಮಗೆ ರಾತ್ರಿಯು

ಒಂದು ಕ್ಷಣದಂತೆಯೇ ಕಳೆದುಹೋಯಿತು. ಪುಣ್ಯಪ್ರದಳಾದ, ನದಿಗಳ ಲ್ಲಿಯೇ ಶ್ರೇಷ್ಠಳಾದ, ಮೂರು ಲೋಕಗಳಲ್ಲಿಯೂ ಪ್ರವಹಿಸುವ ಗಂಗಾ ನದಿಯನ್ನು ನಾವಿನ್ನು ದಾಟಿ ಮುಂದೆ ಪ್ರಯಾಣಮಾಡೋಣ. ಸುಖಕರ ವಾದ ರತ್ನಗಂಬಳಿಗಳಿಂದ ಕೂಡಿರುವ, ಪುಣ್ಯಕರ್ಮರಾದ ಮಹರ್ಷಿಗಳ ಈ ನಾವೆಯು–ಪೂಜ್ಯರಾದ ನೀವು ಇಲ್ಲಿಗೆ ಬಂದಿರುವುದನ್ನು ತಿಳಿದು ನಿಮ್ಮನ್ನು ಒಯ್ಯುವ ಸಲುವಾಗಿಯೇ ಬಂದಿರುವುದು."

ರಾಘವನ ಆ ಮಾತುಗಳನ್ನು ಕೇಳಿ, ವಿಶ್ವಾಮಿತ್ರರು ಮಂದಹಾಸ ದಿಂದಲೇ ತಮ್ಮ ಅನುಮತಿಯನ್ನು ಸೂಚಿಸಿ, ಋಷಿಗಳ ಮತ್ತು ರಾಮ-ಲಕ್ಷ್ಮಣರ ಜೊತೆಯಲ್ಲಿ ನಾವೆಯಲ್ಲಿ ಕುಳಿತು ಪರಮಪವಿತ್ರಳಾದ ಗಂಗಾನದಿ ಯನ್ನು ದಾಟಿದರು. ಉತ್ತರ ದಿಕ್ಕಿನ ನದೀತೀರವನ್ನು ಸೇರಿದ ವಿಶ್ವಾಮಿತ್ರ ಪ್ರಮುಖರು ನಾವೆಯಲ್ಲಿ ತಮ್ಮನ್ನು ಕುಳ್ಳಿರಿಸಿ ಗಂಗಾನದಿಯನ್ನು ಸುಖವಾಗಿ ದಾಟಿಸಿದುದಕ್ಕಾಗಿ ಅಲ್ಲಿದ್ದ ಮಹರ್ಷಿಗಳನ್ನು ಯಥೋಚಿತವಾಗಿ ಸತ್ಕರಿಸಿ ದರು. ಬಳಿಕ ವಿಶ್ವಾಮಿತ್ರರೇ ಮೊದಲಾದವರು ಸಮೀಪದಲ್ಲೇ ಇದ್ದ ವಿಶಾಲಾ ಎಂಬ ನಗರಿಯನ್ನು ಕಂಡರು. ಅನಂತರ ಅದೇ ಮಾರ್ಗವಾಗಿ ಮುಂದೆ ಪ್ರಯಾಣಮಾಡುತ್ತಾ ಸ್ವರ್ಗಸದೃಶವಾದ, ರಮಣೀಯವಾದ, ದಿವ್ಯ ವಾದ ವಿಶಾಲಾನಗರಿಯನ್ನು ಸೇರಿದರು. ಮಹಾಪ್ರಾಜ್ಞನಾದ ಶ್ರೀರಾಮನು ಬದ್ಧಾಂಜಲಿಯಾಗಿ ಮಹಾಮುನಿಗಳಾದ ವಿಶ್ವಾಮಿತ್ರರನ್ನು ಕೇಳಿದನು :

"ಪಟ್ಟಣಗಳಲ್ಲೆಲ್ಲಾ ಶ್ರೇಷ್ಠತಮವಾದ ಈ ವಿಶಾಲಾಪಟ್ಟಣದ ಇತಿ ಹಾಸವೇನು ? ಈ ನಗರದಲ್ಲಿ ಸುಪ್ರಸಿದ್ಧವಾದ ಯಾವ ರಾಜವಂಶದ ಅರಸರು ರಾಜ್ಯವಾಳುತ್ತಿದ್ದಾರೆ ? ಈ ವಿಷಯಗಳನ್ನು ನಿಮ್ಮಿಂದ ಕೇಳಿ ತಿಳಿದು ಕೊಳ್ಳಲು ಬಹಳ ಕುತೂಹಲಿಯಾಗಿದ್ದೇನೆ. ನಿಮಗೆ ಮಂಗಳವುಂಟಾಗಲಿ. ದಯೆಯಿಟ್ಟು ಇವೆಲ್ಲವನ್ನೂ ವಿಶದವಾಗಿ ಹೇಳಿರಿ."

ಶ್ರೀರಾಮನ ಮಾತುಗಳನ್ನು ಕೇಳಿ ಮುನಿಪುಂಗವರಾದ ವಿಶ್ವಾಮಿತ್ರರು ವಿಶಾಲಾನಗರಿಯ ನಿರ್ಮಾಣದ ಪೂರ್ವವೃತ್ತಾಂತವನ್ನು (ಸ್ಥಳಮಹಿಮೆ ಯನ್ನು) ತಿಳಿಸಲು ಉಪಕ್ರಮಿಸಿದರು.

"ರಾಘವ! ಈ ಪಟ್ಟಣಕ್ಕೆ ಸಂಬಂಧಿಸಿದಂತೆ ನಾನು ಹೇಳಲಿರುವ

ಇಂದ್ರನ ಶುಭಪ್ರದವಾದ ಕಥೆಯನ್ನೂ ಮತ್ತು ಈಗ ಪಟ್ಟಣವಿರುವ ಈ ಪ್ರದೇಶದಲ್ಲಿ ಹಿಂದೆ ನಡೆದ ವೃತ್ತಾಂತವನ್ನೂ ಯಥಾವತ್ತಾಗಿ ಕೇಳು. ನಾನು ಇವೆಲ್ಲವನ್ನೂ ನಿನ್ನ ಆಶಯದಂತೆ ವಿವರಿಸಿ ಹೇಳುತ್ತೇನೆ.

ಹಿಂದೆ ಕೃತಯುಗದಲ್ಲಿ ದಿತಿಯ ಮಕ್ಕಳಾದ ದೈತ್ಯರು ಮಹಾಬಲಶಾಲಿಗಳಾಗಿಯೂ, ಅದಿತಿಯ ಮಕ್ಕಳಾದ ದೇವತೆಗಳು ಧಾರ್ಮಿಕರಾಗಿಯೂ ಇದ್ದರು. ಕಾಲಕ್ರಮದಲ್ಲಿ ಮಹಾತ್ಮರಾದ ದೇವಾಸುರರಿಗೆ ಜರಾ-ಮರಣ ರಹಿತರಾಗಿ, ನೀರೋಗದೃಢಕಾಯರಾಗಿ ಇರಬೇಕೆನ್ನುವ ಮತ್ತು ಅದರ ಸಾಧನೆಗಾಗಿ ಏನಾದರೂ ಕಾರ್ಯಮಾಡಬೇಕೆನ್ನುವ ಬುದ್ಧಿಯುಂಟಾಯಿತು. ದೇವ-ದೈತ್ಯರಲ್ಲಿ ಮಹಾವಿದ್ವಾಂಸರಾದ ಕೆಲವರು ಒಂದೆಡೆಯಲ್ಲಿ ಕುಳಿತು ಈ ವಿಷಯವಾಗಿ ಸಮಾಲೋಚಿಸಿದರು. 'ಸಮುದ್ರವನ್ನು ಮಥನ ಮಾಡಿದರೆ ಅಮರರಾಗುವ ಅಮೃತವನ್ನು ನಾವು ಪಡೆದುಕೊಳ್ಳಬಲ್ಲೆವು'– ಎಂದು ಭಾವಿಸಿ ಸಮುದ್ರವನ್ನು ಕಡೆಯಲು ನಿಶ್ಚಯಿಸಿ ಸರ್ಪರಾಜನಾದ ವಾಸುಕಿಯನ್ನೇ ಕಡೆಯುವ ಹಗ್ಗವನ್ನಾಗಿಯೂ, ಮಂದರಪರ್ವತವನ್ನೇ ಕಡೆಗೋಲನ್ನಾಗಿಯೂ ಮಾಡಿಕೊಂಡು ಕ್ಷೀರಸಮುದ್ರವನ್ನು ಕಡೆಯಲು ಉಪಕ್ರಮಿಸಿದರು. ದೇವತೆಗಳೊಂದು ಕಡೆ. ದೈತ್ಯರೊಂದು ಕಡೆ ನಿಂತು, ಒಂದು ಸಾವಿರ ವರ್ಷಗಳ ಕಾಲ ಕ್ಷೀರಸಾಗರವನ್ನು ಕಡೆದರು. ಅನೇಕ ವರ್ಷಗಳು ಕಳೆದ ನಂತರ ಕಾಲಾಗ್ನಿಗೆ ಸದೃಶವಾದ ಹಾಲಾಹಲವಿಷವು ಸಮುದ್ರದಿಂದ ಹೊರ ಹೊಮ್ಮಿತು. ಒಡನೆಯೇ ಆ ಮಹಾವಿಷವು ದೇವಾಸುರ-ಮಾನವರಿಂದ ಕೂಡಿದ ತ್ರಿಭುವನಗಳನ್ನೂ ಸುಡಲು ಆರಂಭಿಸಿತು. ವಿಷದ ಬೇಗೆಯನ್ನು ತಡೆಯಲಾರದೇ ಭಯಗೊಂಡ ದೇವತೆಗಳೆಲ್ಲರೂ ಶರಣಾರ್ಥಿಗಳಾಗಿ ಶರಣ್ಯನಾದ, ಮಹಾದೇವನಾದ ಶಂಕರನನ್ನು **"ರುದ್ರ! ತ್ರಾಹಿ। ಪಶು ಪತೇ! ತ್ರಾಹಿ।"** "ರುದ್ರನೇ! ಕಾಪಾಡು ಪಶುಪತಿಯೇ! ಕಾಪಾಡು"– ಎಂದು ಅಂಗಲಾಚಿ ಬೇಡಿಕೊಳ್ಳುತ್ತಾ ನಾನಾಪ್ರಕಾರವಾಗಿ ಸ್ತೋತ್ರಮಾಡಿ ದರು. ದೇವದೇವನಾದ, ಪ್ರಭುವಾದ ಪರಶಿವನು ದೇವತೆಗಳ ಸ್ತೋತ್ರಕ್ಕೆ ಸಂತುಷ್ಟನಾಗಿ ಪ್ರತ್ಯಕ್ಷನಾದನು. ಅದೇ ಸಮಯಕ್ಕೆ ಸರಿಯಾಗಿ ಶಂಖ-ಚಕ್ರ-ಗದಾಧಾರಿಯಾದ ಶ್ರೀಹರಿಯೂ ಅಲ್ಲಿಯೇ ಕಾಣಿಸಿಕೊಂಡು ಮಂದಸ್ಮಿತನಾಗಿ ಶೂಲಧರನಾದ ರುದ್ರನಿಗೆ ಹೇಳಿದನು :

"ಸುರಶ್ರೇಷ್ಠನೇ! ದೇವೇಶನೇ! ದೇವ-ದೈತ್ಯರಿಂದ ಸಮುದ್ರಮಥನ ಕಾಲದಲ್ಲಿ ಯಾವ ವಸ್ತುವು ಮೊದಲು ಹುಟ್ಟಿತೋ–ಅದು ನಿನಗೆ ಸೇರಿದ್ದಾಗಿದೆ. ಏಕೆಂದರೆ : ನೀನು ದೇವತೆಗಳೆಲ್ಲರಿಗೂ ಮೊದಲನೆಯವನಾಗಿರುವೆ. ಅಗ್ರಪೂಜಾರೂಪವಾದ ಈ ಹಾಲಾಹಲವಿಷವನ್ನು ಸ್ವೀಕರಿಸು." ಹರಿಯು ಹರನಿಗೆ ಹೀಗೆ ಹೇಳಿ ಅದೃಶ್ಯನಾದನು. ಪರಮದಯಾಳುವಾದ ಪರಶಿವನು ದೇವತೆಗಳ ಭಯವನ್ನು ಮನಗಂಡು, ಹರಿಯು ಹೇಳಿದ ಮಾತುಗಳನ್ನೂ ಕೇಳಿ, ಘೋರವಾದ ಹಾಲಾಹಲವಿಷವನ್ನು–ಅಮೃತವನ್ನು ಸ್ವೀಕರಿಸುವಷ್ಟೇ ಆಸಕ್ತಿಯಿಂದ ಮತ್ತು ಪ್ರೀತಿಯಿಂದ ಸ್ವೀಕರಿಸಿ ದೇವತೆಗಳಿಂದ ಬೀಳ್ಕೊಂಡು ಹೊರಟುಹೋದನು.

ಬಳಿಕ ದೇವ-ದಾನವರು ಪುನಃ ಸಮುದ್ರವನ್ನು ಕಡೆಯಲು ಉಪಕ್ರಮಿಸಿದರು. ಆದರೆ ಆ ಸಮಯಕ್ಕೆ ಸರಿಯಾಗಿ ಕಡೆಗೋಲಾಗಿದ್ದ ಮಂದರ ಪರ್ವತವು ಪಾತಾಳಕ್ಕೆ ಹೊರಟುಹೋಯಿತು. ದೇವತೆಗಳು ಪರಂಧಾಮನಾದ ಮಹಾವಿಷ್ಣುವೇ ಮಂದರಪರ್ವತದ ಉದ್ಧಾರಕ್ಕೆ ಸಮರ್ಥನೆಂದು ನಿಶ್ಚಯಿಸಿ ಮಧುಸೂದನನನ್ನು ನಾನಾವಿಧವಾದ ಸ್ತೋತ್ರಗಳಿಂದ ಸ್ತುತಿಸಿದರು.

ತ್ವಂ ಗತಿಃ ಸರ್ವಭೂತಾನಾಂ ವಿಶೇಷೇಣ ದಿವೌಕಸಾಮ್ ।
ಪಾಲಯಾಸ್ಮಾನ್ಮಹಾಬಾಹೋ ಗಿರಿಮುದ್ಧರ್ತುಮರ್ಹಸಿ ॥೨೮॥

"ಮಹಾನುಭಾವನೇ! ಸಕಲಪ್ರಾಣಿಗಳಿಗೂ ನೀನೇ ಆಶ್ರಯನು. ಅದರಲ್ಲಿಯೂ ವಿಶೇಷವಾಗಿ ದೇವತೆಗಳಿಗೆ ನೀನಲ್ಲದೇ ಮತ್ತಾರೂ ರಕ್ಷಕ ರಿಲ್ಲ. ನಮ್ಮನ್ನು ರಕ್ಷಿಸು. ಪಾತಾಳದಲ್ಲಿ ಹುದುಗಿರುವ ಈ ಮಂದರಪರ್ವತ ವನ್ನು ಮೇಲಕ್ಕೆತ್ತಲು ನೀನೇ ಸಮರ್ಥನು. ಅದನ್ನು ಮೇಲೆತ್ತಿ ನಮ್ಮನ್ನು ಕಾಪಾಡು."

ಹೀಗೆ ಪ್ರಾರ್ಥಿಸಿದ ದೇವತೆಗಳ ಮಾತುಗಳನ್ನು ಕೇಳಿ ಹೃಷೀಕೇಶನು ಆಮೆಯರೂಪವನ್ನು ತಾಳಿ ಮಂದರಪರ್ವತವನ್ನು ಬೆನ್ನಿನ ಮೇಲೆ ಹೊತ್ತುಕೊಂಡು ಸಮುದ್ರಮಧ್ಯದಲ್ಲಿ ಉಪಸ್ಥಿತನಾದನು. ಹಾಗೂ ಅಪ್ರಮೇಯ ಶಕ್ತಿವಿಶಿಷ್ಟನಾದ ಆ ಶ್ರೀಹರಿಯು ಪರ್ವತದ ತುದಿಯನ್ನು ತನ್ನ ಒಂದು

ಕೈಯಿಂದ ಹಿಡಿದುಕೊಂಡು ದೇವತೆಗಳ ಮಧ್ಯದಲ್ಲಿ ನಿಂತು ಸಮುದ್ರವನ್ನೂ
ಕಡೆದನು. ರಾಘವ! ಹೀಗೆ ಒಂದು ಸಾವಿರ ವರ್ಷಗಳ ಕಾಲ ಕಡೆದನಂತರ
ದಂಡಪಾಣಿಯಾದ, ಆಯುರ್ವೇದಸ್ವರೂಪನಾದ, ಕಮಂಡಲುಧರನಾದ,
ಧರ್ಮಾತ್ಮನಾದ 'ಧನ್ವಂತರಿ' ಎಂಬ ಹೆಸರಿನ ಪುರುಷಶ್ರೇಷ್ಠನು ಮೊದಲು
ಉದ್ಭವಿಸಿದನು. ಅನಂತರ ಶೋಭಾಯಮಾನವಾದ ಕಾಂತಿಯಿಂದ ಕೂಡಿದ್ದ
ಅಪ್ಸರೆಯರು ಉದ್ಭವಿಸಿದರು. ಕ್ಷೀರಸಮುದ್ರದ ಮಥನದಿಂದ ಹುಟ್ಟಿದ ರಸ
ದಿಂದ ಉದ್ಭೂತರಾದ ಆ ಶ್ರೇಷ್ಠ ಸ್ತ್ರೀಯರಿಗೆ ಅಪ್ಸರೆಯರೆಂದು* ಹೆಸರಾ
ಯಿತು. ಅರುವತ್ತುಕೋಟಿ ಅಪ್ಸರೆಯರು ಕ್ಷೀರಸಮುದ್ರದ ಮಂಥನದಿಂದ
ಉಂಟಾದ ರಸದಿಂದ ಹುಟ್ಟಿದರು. ಅವರ ಜೊತೆಯಲ್ಲಿ ಅಸಂಖ್ಯಾತರಾದ
ಅವರ ಪರಿಚಾರಿಕೆಯರೂ ಹುಟ್ಟಿದರು. ಅನುಪಮಸೌಂದರ್ಯಾತಿಶಯವುಳ್ಳ
ಆ ಅಪ್ಸರೆಯರನ್ನು ಸಮುದ್ರಮಥನ ಮಾಡುತ್ತಿದ್ದ ದೇವ-ದಾನವರಾರೂ
ಪ್ರತಿಗ್ರಹಿಸಲು ಮುಂದೆ ಬರಲಿಲ್ಲ. ಅದರಿಂದಲೇ ಅಪ್ಸರೆಯರು
ಸಾಧಾರಣರೆನಿಸಿದರು. ಸಮುದ್ರಾಧಿಪತಿಯಾದ ವರುಣನ ಮಗಳಾದ,
ಸುರೆಯ ಅಧಿದೇವತೆಯಾದ ವಾರುಣಿಯು ಸಮುದ್ರಮಥನದಿಂದ ಹುಟ್ಟಿ
ತನ್ನನ್ನು ಪರಿಗ್ರಹಿಸುವವರಾರೆಂದು ಅರಸುತ್ತಾ ಹೊರಟಳು. ವಾರುಣಿಯನ್ನು
ದೈತ್ಯರು ಪರಿಗ್ರಹಿಸಲಿಲ್ಲ. ಅದಿತಿಯ ಮಕ್ಕಳಾದ ದೇವತೆಗಳು ಅನಿಂದ್ಯಳಾದ,
ಸುರಾಧಿದೇವತೆಯಾದ ವಾರುಣಿಯನ್ನು ಆದರದಿಂದ ಪರಿಗ್ರಹಿಸಿದರು.[1]
ಸುರಾಧಿದೇವತೆಯಾದ ವಾರುಣಿಯನ್ನು ಪರಿಗ್ರಹಿಸದೇ ಇದ್ದುದರಿಂದ ದಿತಿಯ
ಮಕ್ಕಳು ಸುರಾರಹಿತರು ಅಥವಾ ಅಸುರರು ಎಂಬ, ಸುರೆಯನ್ನು
ಸ್ವೀಕರಿಸಿದ್ದರಿಂದ ಅದಿತಿಯ ಮಕ್ಕಳು ಸುರರು ಎಂಬ ಅಭಿಧಾನ ಹೊಂದಿ
ದರು. ಸುರಾಭಿಮಾನೀದೇವತೆಯ ಪರಿಗ್ರಹಣದಿಂದಾಗಿ ದೇವತೆಗಳು ಸಂತು
ಷ್ಟರೂ, ಆನಂದಭರಿತರೂ ಆದರು. ವಾರುಣಿಯು ಹುಟ್ಟಿದನಂತರ ಉಚ್ಚೈಃ

---

* ಅಪ್ಸು = ಕ್ಷೀರರೂಪಾಸು ಮಥನೋತ್ಪನ್ನಃ ರಸಃ ಉತ್ಪತ್ತಿಹೇತುಃ ಯಾಸಾಂ ತಾಃ ಅಪ್ಸರಸಃ । ಕ್ಷೀರಸಮುದ್ರಮಥನದಿಂದ ಹುಟ್ಟಿದ ರಸದಿಂದ ಹುಟ್ಟಿದ ಕಾರಣ ಅಪ್ಸರೆಯರೆಂದು ಹೆಸರು ಬಂದಿತು.

[1] ಜಗೃಹುಃ –ಹರಿಯ ನಿರ್ದೇಶಾನುಸಾರವಾಗಿ ಅಸುರರು ವರುಣಕನ್ಯೆಯಾದ ಸುರೆಯನ್ನು ಪ್ರತಿಗ್ರಹಿಸಲಿಲ್ಲ. ದೇವತೆಗಳೇ ಪ್ರತಿಗ್ರಹಿಸಿದರು.

ಶ್ರವಸ್ಸೆಂಬ ಶ್ರೇಷ್ಠವಾದ ಕುದುರೆಯೂ, ಕೌಸ್ತುಭವೆಂಬ ಉತ್ತಮೋತ್ತಮ ವಾದ ರತ್ನವೂ ಹಾಗೂ ಅಮೃತವೂ ಸಮುದ್ರಮಧ್ಯದಿಂದ ಹುಟ್ಟಿದುವು. ಅಮೃತದ ಪ್ರಾದುರ್ಭಾವವಾದೊಡನೆಯೇ ಅದು ಯಾರಿಗೆ ಸೇರಬೇಕೆಂಬುದರ ನಿರ್ಧಾರಕ್ಕಾಗಿ, ಕುಲಕ್ಷಯಕ್ಕೆ ಸಾಧನಭೂತವಾದ ಮಹಾಯುದ್ಧವೇ ಪ್ರಾರಂಭವಾಯಿತು. ಅದಿತಿಯ ಮಕ್ಕಳಾದ ದೇವತೆಗಳು ದಿತಿಯ ಮಕ್ಕಳಾದ ದೈತ್ಯರನ್ನು ಧ್ವಂಸಮಾಡತೊಡಗಿದರು. ಯುದ್ಧವು ಸರ್ವತ್ರವ್ಯಾಪ್ತವಾಯಿತು. ದೇವತೆಗಳೊಡನೆ ಯುದ್ಧಮಾಡುತ್ತಿದ್ದ ಅಸುರರ ಜೊತೆಗೆ ರಾಕ್ಷಸರೂ ಸೇರಿಕೊಂಡರು. ಮಹಾಘೋರವಾದ, ಮೂರು ಲೋಕಗಳಿಗೆ ಭ್ರಾಂತಿ ಯನ್ನು ಉಂಟುಮಾಡುವ ಯುದ್ಧವು ನಡೆಯುತ್ತಲಿದ್ದಿತು. ಅದರ ಪರಿಣಾಮವಾಗಿ ಎರಡು ಕಡೆಗಳಲ್ಲಿಯೂ ಸಾವು-ನೋವುಗಳುಂಟಾದುವು. ಆಗ ಶ್ರೀಹರಿಯು ತನ್ನ ಮಾಯೆಯಿಂದ ಜಗನ್ಮೋಹಕವಾದ ಮೋಹಿನೀ ರೂಪವನ್ನು ತಾಳಿ ಅಲ್ಲಿದ್ದ ಅಮೃತಕಲಶವನ್ನು ಒಡನೆಯೇ ಅಪಹರಿಸಿದನು. ಅಮೃತಕ್ಕಾಗಿ ವಿಷ್ಣುವಿನ ಮುಂದೆ ಹೋದ ಅಸುರರೆಲ್ಲರೂ ಚೂರ್ಣೀಕೃತ ರಾದರು. ದೇವತೆಗಳು ಅಕ್ಷಯನಾದ ಮಹಾವಿಷ್ಣುವನ್ನು ಶರಣುಹೊಂದಿ ಅಮೃತವನ್ನು ಪಡೆದರು. ದೇವತೆಗಳು ಅಮೃತವನ್ನು ಪ್ರಾಶನಮಾಡಿದ ನಂತರ ದೈತ್ಯರಿಗೂ, ದೇವತೆಗಳಿಗೂ ಪುನಃ ಪ್ರಾರಂಭವಾದ ಆ ಮಹಾಸಮರದಲ್ಲಿ (ಅಮೃತಪ್ರಾಶನದಿಂದ ವೀರ್ಯವಂತರಾಗಿದ್ದ) ಅದಿತಿಯ ಮಕ್ಕಳು ದಿತಿಯ ಮಕ್ಕಳಾದ ದೈತ್ಯರನ್ನು ಧ್ವಂಸ ಮಾಡಿದರು. ಹೀಗೆ ದೇವಪತಿಯಾದ ದೇವೇಂದ್ರನು ದೈತ್ಯರನ್ನು ಧ್ವಂಸಮಾಡಿ ತ್ರೈಲೋಕ್ಯಾಧಿಪತಿಯಾಗಿ, ಆನಂದ ಭರಿತನಾಗಿ, ಅನೇಕ ಋಷಿ-ಮಹರ್ಷಿಗಳಿಂದಲೂ, ಸಿದ್ಧ-ಚಾರಣರಿಂದಲೂ ಕೂಡಿದ ಮೂರು ಲೋಕಗಳನ್ನೂ ಧರ್ಮದಿಂದ ಪಾಲನೆ ಮಾಡತೊಡಗಿ ದನು.”

ಳ೫ನೆಯ ಸರ್ಗವು ಮುಗಿಯಿತು.

ಬಾಲಕಾಂಡ ೪೬ನೆಯ ಸರ್ಗ

ಮಕ್ಕಳ ಮರಣದಿಂದ ದುಃಖಿತಳಾದ ದಿತಿಯು ಇಂದ್ರನನ್ನು ಸಂಹರಿಸಲು ಸಮರ್ಥನಾದ ಪುತ್ರನನ್ನು ಪಡೆಯಲು ತಪಸ್ಸನ್ನು ಮಾಡಿದುದು : ಇಂದ್ರನ ಉಪಚಾರ : ದಿತಿಯು ಅಶುಚಿಯಾಗಿದ್ದ ಸಮಯದಲ್ಲಿ ಇಂದ್ರನು ಗರ್ಭವನ್ನು ಛೇದಿಸಿದುದು

ಹತೇಷು ತೇಷು ಪುತ್ರೇಷು ದಿತಿಃ ಪರಮದುಃಖಿತಾ ।
ಮಾರೀಚಂ ಕಶ್ಯಪಂ ರಾಮ ಭರ್ತಾರಮಿದಮಬ್ರವೀತ್ ॥೧॥

"ರಾಮ! ಇಂದ್ರನು ದೈತ್ಯರೆಲ್ಲರನ್ನೂ ವಿನಾಶಮಾಡಿದನು. ಮಕ್ಕಳ ವಿನಾಶದಿಂದಾಗಿ ದುಃಖಿತಳಾದ ದಿತಿಯು ಪತಿಯಾದ, ಮರೀಚಿಯ ಮಗನಾದ ಕಶ್ಯಪನಿಗೆ ಹೇಳಿದಳು :

"ಪೂಜ್ಯನೇ! ನಿನ್ನ ಮತ್ತೊಬ್ಬ ಪತ್ನಿಯಾದ ಅದಿತಿಯಲ್ಲಿ ಹುಟ್ಟಿದ, ಮಹಾಬಲಶಾಲಿಗಳಾದ ದೇವತೆಗಳಿಂದ ನನ್ನ ಮಕ್ಕಳಾದ ದೈತ್ಯರೆಲ್ಲರೂ ಸಂಹೃತರಾದರು. ನನ್ನ ಮಕ್ಕಳ ವಿನಾಶದಿಂದ ನಾನು ಬಹಳ ದುಃಖಿತಳಾಗಿದ್ದೇನೆ. ಬಹುಕಾಲ ತಪಸ್ಸಿನಿಂದ ಪ್ರವರ್ಧಮಾನನಾಗುವ, ಇಂದ್ರನನ್ನು ಸಂಹಾರಮಾಡಲು ಸಮರ್ಥನಾದ ಒಬ್ಬ ಮಗನನ್ನು ನಿನ್ನಿಂದ ಪಡೆಯಲು ಬಯಸಿದ್ದೇನೆ. ಇಂದ್ರವಧೆಯಿಂದ ಪುತ್ರಶೋಕವನ್ನು ನಿವಾರಣೆಮಾಡಿಕೊಳ್ಳುವ ಇಚ್ಛೆಯುಳ್ಳ ನಾನು ತಪಸ್ಸನ್ನು ಮಾಡುತ್ತೇನೆ. ಮಹಾನುಭಾವನಾದ ನೀನು–ಬಲಿಷ್ಠನಾದ, ಧನುರ್ಬಾಣಗಳಿಂದ ಕೂಡಿರುವ, ಸಮದರ್ಶಿಯಾದ, ಸರ್ವೇಶ್ವರನಾದ, ಇಂದ್ರಧ್ವಂಸಕನಾದ ಪುತ್ರನನ್ನು ಪಡೆಯುವ ಸಲುವಾಗಿ ನನ್ನಲ್ಲಿ ಗರ್ಭಾಧಾನಮಾಡು. ನಾನು ಇಂತಹ ಪರಮಾದ್ಭುತವಾದ ಗರ್ಭವನ್ನು ವೃದ್ಧಿಗೊಳಿಸುವ ಸಲುವಾಗಿಯೇ ಮಾಡಲಿರುವ ತಪಸ್ಸಿಗೂ ಅನುಜ್ಞೆಯನ್ನು ದಯಪಾಲಿಸು."

ದಿತಿಯ ಮಾತುಗಳನ್ನು ಕೇಳಿ, ಮಹಾತೇಜಸ್ವಿಯಾದ ಕಶ್ಯಪರು ಪುತ್ರಶೋಕದಿಂದ ಪರಮದುಃಖಿತೆಯಾಗಿದ್ದ ದಿತಿಗೆ ಹೇಳಿದರು :

"ತಪೋಧನಳೇ! ನಿನ್ನ ಇಚ್ಛಾನುಸಾರವಾಗಿಯೇ ಯುದ್ಧದಲ್ಲಿ ಇಂದ್ರನನ್ನು ಸಂಹರಿಸಲು ಸಮರ್ಥನಾದ ಪುತ್ರನನ್ನು ಪಡೆಯುವೆ. ನಿನಗೆ ಮಂಗಳವಾಗಲಿ. ಆದರೆ ನಿನಗೆ ಪುತ್ರೋತ್ಪತ್ತಿಯಾಗುವವರೆಗೂ ನೀನು ಶುಚಿ ಯಾಗಿರಬೇಕು. ಒಂದು ಸಾವಿರ ವರ್ಷಗಳವರೆಗೆ ಶುಚಿಯಾಗಿದ್ದು ತಪಶ್ಚರಣೆ ಮಾಡಿದೆಯಾದರೆ, ಆಗ ನನ್ನ ಅನುಗ್ರಹದಿಂದ ನೀನು ಇಂದ್ರಹಂತಕನನ್ನು ಪ್ರಸವಿಸುವೆ."

ಮಹಾತೇಜಸ್ವಿಗಳಾದ ಕಶ್ಯಪರು ಅದಿತಿಗೆ ಹೀಗೆ ಆಶ್ವಾಸನೆಯನ್ನಿತ್ತು, ಕಮಂಡಲುವಿನಲ್ಲಿದ್ದ ಶುಭೋದಕವನ್ನು ಕೈಯಲ್ಲಿ ತೆಗೆದುಕೊಂಡು, ದಿತಿಯ ಮೇಲೆ ಮಂತ್ರಪೂರ್ವಕವಾಗಿ ಪ್ರೋಕ್ಷಿಸಿ, ಸಮ್ಮಾರ್ಜನೆಮಾಡಿದರು. ಅನಂತರ ಅವಳನ್ನು ಕೈಯಿಂದ ಸ್ಪರ್ಶಮಾಡಿ–'ಸ್ವಸ್ತಿ ಭದ್ರಂ ತವಾಸ್ತು' 'ನಿನಗೆ ಮಂಗಳವಾಗಲಿ'–ಎಂದ ಹರಸಿ ತಪಸ್ಸಿಗೆ ಹೊರಟುಹೋದರು.

ನರೋತ್ತಮನೇ! ಕಶ್ಯಪರು ದಿತಿಯನ್ನು ಹರಸಿ ಹೊರಟುಹೋದ ನಂತರ ಪರಮಹರ್ಷಿತೆಯಾದ ದಿತಿಯು 'ಕುಶಪ್ಲವನ' ವೆಂಬ ಈ ಪ್ರದೇಶದಲ್ಲಿ ಘೋರವಾದ ತಪಸ್ಸನ್ನು ಮಾಡಲು ಉಪಕ್ರಮಿಸಿದಳು. ಆ ವಿಷಯವನ್ನು ತಿಳಿದ ಇಂದ್ರನು ಒಡನೆಯೇ ದಿತಿಯ ಬಳಿಗೆ ಬಂದು, ಶುಶ್ರೂಷೆಗೆ ಇರ ಬೇಕಾದ ವಿನಯಾದಿ ಸಕಲಗುಣಗಳನ್ನೂ ತೋರಿಸುತ್ತಾ, ತಪಶ್ಚರಣೆ ಮಾಡುತ್ತಿದ್ದ ದಿತಿದೇವಿಯ ಶುಶ್ರೂಷೆಯನ್ನು ಮಾಡುತ್ತಲಿದ್ದನು. ಇಂದ್ರನು ದಿತಿಯನ್ನು ಎಲ್ಲ ಸಮಯಗಳಲ್ಲಿಯೂ, ಎಲ್ಲ ವಿಧಗಳಲ್ಲಿಯೂ ಉಪಚರಿಸುತ್ತಿದ್ದನು. ಯಜ್ಞೇಶ್ವರನನ್ನು ಸಿದ್ಧಗೊಳಿಸುತ್ತಿದ್ದನು. ಹೋಮಕ್ಕೆ ಬೇಕಾಗುವ ದರ್ಭೆ ಮತ್ತು ಸಮಿತ್ತುಗಳನ್ನು ಕಾಡಿನಿಂದ ಹುಡುಕಿ ಹೊತ್ತು ತರುತ್ತಿದ್ದನು. ಆಶ್ರಮಕ್ಕೆ ಹತ್ತಿರದಲ್ಲಿದ್ದ ನದಿಯಿಂದ ನೀರನ್ನೂ ತರುತ್ತಿದ್ದನು. ಕಾಲ-ಕಾಲಕ್ಕೆ ಒಳ್ಳೊಳ್ಳೆಯ ಕಂದ-ಮೂಲ-ಫಲಾದಿಗಳನ್ನು ದಿತಿಗಾಗಿ ಸಿದ್ಧ ಪಡಿಸುತ್ತಿದ್ದನು. ಇಷ್ಟುಮಾತ್ರವಲ್ಲದೇ ದಿತಿಯು ಯಾವ ಕಾಲದಲ್ಲಿ ಏನೇ ಕೇಳಿದರೂ ಸ್ವಲ್ಪವಾದರೂ ತಡಮಾಡದೇ, ಬೇಸರಪಡದೇ ಸಿದ್ಧಪಡಿಸುತ್ತಿ ದ್ದನು. ದಿತಿ ದೇವಿಯ ಅಂಗಾಂಗಗಳನ್ನು ಒತ್ತುವುದು, ಗಾಳಿಬೀಸುವುದು ಇವೇ ಮುಂತಾದ ಸೇವೆಗಳಿಂದ ಅವಳ ಶ್ರಮವನ್ನು ಪರಿಹರಿಸುತ್ತಾ ಸರ್ವಕಾಲ

ದಲ್ಲಿಯೂ ಅವಳ ಶುಶ್ರೂಷೆಯನ್ನು ಬಹಳ ಜಾಗರೂಕತೆಯಿಂದ ಮಾಡು ತ್ತಿದ್ದನು. ಇದೇ ರೀತಿಯಲ್ಲಿ ಹತ್ತು ಕಡಿಮೆಯಾಗಿ ಒಂದು ಸಾವಿರ ವರ್ಷಗಳು ಕಳೆದುವು. ದಿತಿಯು ಇಂದ್ರನ ಅನವರತವಾದ ಶುಶ್ರೂಷೆಯಿಂದ ಪರಮಪ್ರೀತಳಾಗಿ, ಸಹಸ್ರಾಕ್ಷನಿಗೆ ಹೇಳಿದಳು :

"ದೇವಾಧಿಪನೇ! ಇಂದ್ರನನ್ನು ಧ್ವಂಸಮಾಡುವ ಪುತ್ರನನ್ನು ದಯ ಪಾಲಿಸುವಂತೆ ನಿನ್ನ ತಂದೆಯಾದ ಕಶ್ಯಪನನ್ನು ಪ್ರಾರ್ಥಿಸಿದೆನು. 'ಒಂದು ಸಾವಿರ ವರ್ಷಗಳು ಶುಚಿಯಾಗಿದ್ದು ತಪಶ್ಚರಣೆ ಮಾಡಿದನಂತರ ನೀನು ಅಪೇಕ್ಷಿಸುವ ಮಗನನ್ನು ಪಡೆಯುವೆ'–ಎಂಬ ವರವನ್ನು ಮಹಾತ್ಮನಾದ ನನ್ನ ಪತಿಯಿಂದ ನಾನು ಪಡೆದಿರುವೆನು. ವೀರಾಗ್ರಣಿಯೇ! ನನ್ನ ಪತಿಯ ನಿರ್ದೇಶದಂತೆ ಒಂದು ಸಾವಿರ ವರ್ಷಗಳ ಪರ್ಯಂತವಾಗಿ ಶುಚಿಯಾಗಿದ್ದು, ತಪಶ್ಚರಣೆ ಮಾಡಬೇಕೆಂದು ಸಂಕಲ್ಪಿಸಿ, ತಪಸ್ಸನ್ನು ಪ್ರಾರಂಭಿಸಿ ನಾನು ಒಂಭೈನೂರು ತೊಂಬತ್ತು ವರ್ಷಗಳನ್ನು ಕಳೆದಿರುತ್ತೇನೆ. ಸಂಕಲ್ಪವು ಪೂರ್ಣವಾಗಲು ಹತ್ತು ವರ್ಷಗಳು ಮಾತ್ರವೇ ಉಳಿದಿರುವುವು. ಹತ್ತು ವರ್ಷಗಳು ಮುಗಿದೊಡನೆಯೇ ಕಶ್ಯಪರ ಅನುಗ್ರಹದಂತೆ ಅನುಜನನ್ನು ನೀನು ಕಾಣುವೆ. ವಿಜಯಾಕಾಂಕ್ಷಿಯಾಗಿ, ಮೂರು ಲೋಕಗಳನ್ನೂ ಜಯಿಸಲು ಸಮರ್ಥನಾದ, ಯಾವ ಪುತ್ರನನ್ನು ನಾನು ನಿನ್ನ ವಿನಾಶಕ್ಕಾಗಿಯೇ ಪ್ರಾರ್ಥಿಸಿ ಪಡೆಯಲಿರುವೆನೋ–ಅವನೊಡನೆ ನೀನು ನಿರಾತಂಕವಾಗಿ ಈ ಮೂರು ಲೋಕಗಳ ಆಧಿಪತ್ಯವನ್ನೂ ಅನುಭವಿಸು."

ಒಂದು ದಿನ ಸೂರ್ಯನು ಆಕಾಶದ ನಡುಭಾಗವನ್ನು ಸೇರುತ್ತಿರಲಾಗಿ (ಮಧ್ಯಾಹ್ನವಾಗಲಾಗಿ) ಸೂರ್ಯತಾಪದ ಕಾರಣದಿಂದ ದಿತಿಯು ನಿದ್ರಾವಶ ಳಾಗಿ ತಲೆಯ ಸ್ಥಾನದಲ್ಲಿ (ತಲೆದಿಂಬಿನ ಮೇಲೆ) ಕಾಲುಗಳನ್ನಿಟ್ಟುಕೊಂಡು ನಿದ್ರೆಹೋದಳು. ತಲೆಯನ್ನಿಟ್ಟುಕೊಳ್ಳಬೇಕಾದ ಸ್ಥಳದಲ್ಲಿ ಕಾಲುಗಳನ್ನಿಟ್ಟು ಕೊಂಡು, ಹಗಲಿನಲ್ಲಿ ನಿದ್ರಿಸುತ್ತಿದ್ದ, ದೋಷವಿಶಿಷ್ಟಳಾದ ದಿತಿಯನ್ನು ಕಂಡು ಇಂದ್ರನು ನಕ್ಕನು. ಒಂಭೈನೂರು ತೊಂಬತ್ತು ವರ್ಷಗಳು ಕಳೆದನಂತರ ವಾದರೂ ಇಂತಹ ಒಂದು ಸಂದರ್ಭವು ಸಿಕ್ಕಿದುದಕ್ಕಾಗಿ ಸಂತೋಷಿಸಿದನು. ಒಡನೆಯೇ ಇಂದ್ರನು ಅಶುಚಿಯಾಗಿದ್ದ ದಿತಿಯ ಯೋನಿಯೊಳಗೆ ಪ್ರವೇಶಿಸಿ

ಅವಳ ಗರ್ಭವನ್ನು ಏಳು ಚೂರುಗಳಾಗಿ ಕತ್ತರಿಸಿಬಿಟ್ಟನು. ನೂರು ಅಲುಗುಗಳುಳ್ಳ ವಜ್ರಾಯುಧದಿಂದ ಭೇದಿಸಲ್ಪಟ್ಟ ದಿತಿಯ ಗರ್ಭವು ಸುಸ್ವರದಿಂದ ಅಳತೊಡಗಿತು. ಆ ರೋದನದಿಂದ ದಿತಿಯು ಎಚ್ಚೆತ್ತಳು. ಮಹಾತೇಜಸ್ವಿಯಾದ ಇಂದ್ರನು ಸುಸ್ವರದಿಂದ ಅಳುತ್ತಿದ್ದ ಗರ್ಭವನ್ನು ಕುರಿತು–" ಮಾರುದಃ –ಅಳಬೇಡ ; ಅಳಬೇಡ"–ಎಂದು ಹೇಳುತ್ತಲೇ ಇದ್ದನು. ಅಳುತ್ತಿದ್ದರೂ ಗರ್ಭವನ್ನು ಪುನಃ ಪುನಃ ಸೀಳುತ್ತಲೇ ಇದ್ದನು. ಎಚ್ಚೆತ್ತ ದಿತಿಯು ನಿಮಿಷಾರ್ಧದಲ್ಲಿ ಎಲ್ಲವನ್ನೂ ತಿಳಿದವಳಾಗಿ–"ಕತ್ತರಿಸಿದರೂ ಚಿಂತೆಯಿಲ್ಲ ; ಗರ್ಭವನ್ನು ಪ್ರಾಣರಹಿತವನ್ನಾಗಿ ಮಾತ್ರ ಮಾಡಬೇಡ"–ಎಂದು ಇಂದ್ರನಿಗೆ ಹೇಳಿದಳು. ತಾಯಿಯ ಮಾತಿಗೆ ಗೌರವ ಕೊಡಲು ಇಂದ್ರನು ಒಡನೆಯೇ ದಿತಿಯ ಹೊಟ್ಟೆಯಿಂದ ಹೊರಗೆ ಬಂದನು. ವಜ್ರಾಯುಧಸಮೇತನಾಗಿ ಇಂದ್ರನು ದಿತಿಯ ಮುಂದೆ ಬದ್ಧಾಂಜಲಿಯಾಗಿ ನಿಂತು ಹೇಳಿದನು : "ತಾಯೇ! ನೀನು ಕಾಲುಗಳನ್ನಿಟ್ಟುಕೊಳ್ಳುವ ಜಾಗದಲ್ಲಿ ತಲೆಯನ್ನೂ, ತಲೆಯನ್ನಿಡಬೇಕಾದ ಸ್ಥಳದಲ್ಲಿ ಕಾಲುಗಳನ್ನೂ ಇಟ್ಟುಕೊಂಡು ಕಾಲುಗಳ ಮೇಲೆ ತಲೆಗೂದಲನ್ನೂ ಹಾಕಿಕೊಂಡು ಮಲಗಿ ನಿದ್ರಿಸುತ್ತಿದ್ದೆ. ಇದರಿಂದಲೇ ನೀನಿಂದು ಅಶುಚಿಯಾದೆ. ನೂರು ವರ್ಷಗಳಿಂದಲೂ ಇದಕ್ಕಾಗಿಯೇ ಕಾಯುತ್ತಿದ್ದ ನಾನು, ಈ ಸಮಯದಲ್ಲಿ ನಿನ್ನೊಳಗೆ ಪ್ರವೇಶಿಸಿ ಸಮರದಲ್ಲಿ ಶಕ್ರಹಂತಕನಾಗಲಿದ್ದ ಶಿಶುವನ್ನು ಏಳು ಭಾಗಗಳಾಗಿ ಕತ್ತರಿಸಿ ಬಿಟ್ಟಿರುವೆನು. ಈ ನನ್ನ ಅಪರಾಧವನ್ನು ಕ್ಷಮಿಸು, ದೇವಿ!"

೪೬ನೆಯ ಸರ್ಗವು ಮುಗಿಯಿತು.

ದಿತಿಯ ಕೋರಿಕೆಯಂತೆ ಗರ್ಭದ ಏಳು ಭಾಗಗಳೂ ವಾತಸ್ಕಂಧಾಭಿಮಾನಿದೇವತೆಗಳಾಗಲು ಇಂದ್ರನ ಅಂಗೀಕಾರ : ವಿಶಾಲೋತ್ಪತ್ತಿ ಕಥನ : ಸುಮತಿ-ಕೌಶಿಕರ ಸಮಾಗಮ

ಸಪ್ತಧಾ ತು ಕೃತೇ ಗರ್ಭೇ ದಿತಿಃ ಪರಮದುಃಖಿತಾ ।
ಸಹಸ್ರಾಕ್ಷಂ ದುರಾಧರ್ಷಂ ವಾಕ್ಯಂ ಸಾನುನಯಾಬ್ರವೀತ್ ॥೧॥

"ರಾಮ! ಇಂದ್ರನು ದಿತಿಯ ಗರ್ಭವನ್ನು ಏಳು ವಿಭಾಗಗಳಾಗಿ ಸೀಳಿದನಂತರ ಪರಮದುಃಖಿತಳಾದ ವಿನಯಶೀಲಳಾದ ದಿತಿದೇವಿಯು ದುರ್ಜಯನಾದ ಇಂದ್ರನಿಗೆ ಹೇಳಿದಳು :

"ವತ್ಸ! ದೇವೇಶ! ನಾನು ಮಾಡಿದ ಅಪರಾಧದಿಂದಲೇ ಈ ಗರ್ಭವು ಏಳು ವಿಭಾಗಗಳಾಗಿ ಕತ್ತರಿಸಲ್ಪಟ್ಟಿತು. ನೀನು ಖಂಡಿತವಾಗಿಯೂ ಅಪರಾಧಿಯಲ್ಲ. ಆದರೆ ಗರ್ಭದ ವಿಷಯದಲ್ಲಿ ನೀನು ಮಾಡಿರುವ ಕಾರ್ಯವು ನಮ್ಮಿಬ್ಬರಿಗೂ ಪ್ರಿಯವನ್ನುಂಟುಮಾಡುವ ಕಾರ್ಯವಾಗಿ ಪರಿಣಮಿಸಲೆಂದು ಆಶಿಸುವೆನು. ಈ ಏಳು ವಿಭಾಗಗಳೂ ನಿನ್ನ ಅಧೀನದಲ್ಲಿರುವ ಸಪ್ತಮರುತ್ತುಗಳ ಸ್ಥಾನಪಾಲಕರಾಗಿರಲಿ.* ಗಾಳಿಯೇ ಹೆಗಲಾಗಿ ಉಳ್ಳ ವಾತಸ್ಕಂಧಾಭಿಮಾನಿದೇವತೆಗಳಾದ ನನ್ನ ಈ ಏಳು ಮಕ್ಕಳೂ 'ಮಾ ರುದಃ'

---

* **ಗಗನಃ ಸ್ಪರ್ಶನೋ ವಾಯುರನಿಲಶ್ಚ ತಥಾಪರಃ । ಪ್ರಾಣಃ ಪ್ರಾಣೇಶ್ವರೋ ಜೀವ ಇತ್ಯೇತೇ ಸಪ್ತಮಾರುತಾಃ ॥** ಗಗನ, ಸ್ಪರ್ಶನ, ವಾಯು, ಅನಿಲ, ಪ್ರಾಣ, ಪ್ರಾಣೇಶ್ವರ, ಜೀವ–ಈ ಏಳು ಸಪ್ತಮರುತ್ತುಗಳು. ವಿಷ್ಣುಪುರಾಣದಲ್ಲಿ ಸಪ್ತಮರುತ್ತು ಗಳನ್ನು ಬೇರೆಯ ಹೆಸರಿನಿಂದ ಹೀಗೆ ಕರೆದಿರುತ್ತಾರೆ–ಆವಹ, ಪ್ರವಹ, ಸಂವಹ, ಉದ್ವಹ, ವಿವಹ, ಪರಿವಹ, ಪರಾವಹಾ. ಸಪ್ತ ಸಪ್ತಾನಾಂ ಎಂಬುದಕ್ಕೆ ಏಳು ಏಳುಗಳು ಎಂದು ಅರ್ಥಮಾಡಿ, ನಲವತ್ತೊಂಬತ್ತು ಮರುತ್ತುಗಳ (ದೇವಾಂತರ್ಗತ ವಾಯುವಿಶೇಷಗಳ) ಸ್ಥಾನಪಾಲಕರುಗಳಾಗಲಿ ಎಂದು ಒಬ್ಬ ವ್ಯಾಖ್ಯಾನಕಾರರು ಅರ್ಥ ಮಾಡಿರುತ್ತಾರೆ. ಇಂದ್ರನು ಗರ್ಭವನ್ನು ಮೊದಲು ಏಳು ವಿಭಾಗ ಮಾಡಿ ಅನಂತರದಲ್ಲಿ ಪ್ರತಿಯೊಂದು ವಿಭಾಗವನ್ನೂ ಸಹ ಪುನಃ ಏಳು ಚೂರುಗಳಾಗಿ ಮಾಡಿದನೆಂದು ಪುರಾಣಾಂತರದಲ್ಲಿ ಕಥೆಯಿದೆ.

ಎಂದು ನೀನು ಹೇಳಿದ್ದರಿಂದ 'ಮಾರುತ'ರೆಂದೇ ವಿಖ್ಯಾತರಾಗಿ ದಿವ್ಯರೂಪ ಗಳನ್ನು ಪಡೆದು ಸ್ವರ್ಗದಲ್ಲಿ ಸಂಚರಿಸಲಿ. ಈ ಏಳು ಮಾರುತರಲ್ಲಿ ಒಬ್ಬನು ಬ್ರಹ್ಮಲೋಕದಲ್ಲಿ ಸಂಚರಿಸಲಿ. ಎರಡನೆಯವನೂ ಮತ್ತು ಅಂತರಿಕ್ಷವ್ಯಾಪಕ ನಾದ, ಮಹಾಯಶಸ್ವಿಯಾದ 'ವಾಯು'ವೆಂದು ಪ್ರಸಿದ್ಧನಾದ ಮೂರನೆ ಯವನೂ ಇಂದ್ರಲೋಕದಲ್ಲಿ ಸಂಚರಿಸಲಿ.* ದೇವತೆಗಳಿಗೆ ಸಮಾನವಾದ ರೂಪವುಳ್ಳ ಉಳಿದ ನನ್ನ ನಾಲ್ವರು ಮಕ್ಕಳು ನಿನ್ನ ಆಜ್ಞಾನುಸಾರವಾಗಿ ಪೂರ್ವ, ಪಶ್ಚಿಮ, ದಕ್ಷಿಣ, ಉತ್ತರದಿಕ್ಕುಗಳಲ್ಲಿ ನೀನು ಕರೆದಿರುವ ಮಾರುತರೆಂಬ ಅಭಿಧಾನದಿಂದಲೇ ವಿಖ್ಯಾತರಾಗಿ ಸಂಚರಿಸಲಿ."

ದಿತಿಯು ಹೇಳಿದ ಆ ಮಾತುಗಳನ್ನು ಕೇಳಿ ಸಹಸ್ರಾಕ್ಷನಾದ, ಪುರಂದರನಾದ, ಬಲಸೂದನನಾದ ದೇವೇಂದ್ರನು ಬದ್ಧಾಂಜಲಿಯಾಗಿ ಹೇಳಿದನು :

"ಅಮ್ಮ! ನೀನು ಹೇಳಿದಂತೆ ಎಲ್ಲವೂ ನಡೆಯುವುದು. ಇದರಲ್ಲಾವ ಸಂಶಯವೂ ಇಲ್ಲ. ದೇವರೂಪಿಗಳಾದ ನಿನ್ನ ಏಳು ಮಂದಿ ಮಕ್ಕಳೂ ಮಾರುತರೆಂಬ ಅಭಿಧಾನದಿಂದ ನಿನ್ನ ಅಪೇಕ್ಷೆಯಂತೆ ಬ್ರಹ್ಮಲೋಕ, ಇಂದ್ರ ಲೋಕ, ವಿಷ್ಣುಲೋಕ ಮತ್ತು ಪೂರ್ವ, ಪಶ್ಚಿಮ, ದಕ್ಷಿಣ, ಉತ್ತರ ದಿಕ್ಕುಗಳಲ್ಲಿ ಸ್ವೇಚ್ಛೆಯಿಂದ ಸಂಚರಿಸುವರು."

ಕುಶಪ್ಲವನ ತಪೋವನದಲ್ಲಿ ತಾಯಿ-ಮಕ್ಕಳಿಬ್ಬರೂ ಈ ರೀತಿಯಾಗಿ

---

* ದಿವ್ಯವಾಯುಃ ಎಂಬುದಕ್ಕೆ ದಿವಿ = ಅಂತರಿಕ್ಷೇ ಭವಃ ವಾಯುಃ = ಅಂತರಿಕ್ಷದಲ್ಲಿ ಹುಟ್ಟಿದ ವಾಯು ಎಂದು ವ್ಯಾಖ್ಯಾನಮಾಡಿರುತ್ತಾರೆ. ಪಾಠಾಂತರದಲ್ಲಿ–ದಿವಿ ವಾಯುರಿತಿ ಖ್ಯಾತಃ ಚರತು–ಎಂದಿದೆ. ಇದರ ಪ್ರಕಾರ ದಿವಿ–ಅಂತರಿಕ್ಷೇ ವಿಷ್ಣುಪದಾಖ್ಯೇ ವಿಷ್ಣುಲೋಕೇ ಚರತು. ದಿವಿ ಎಂಬುದಕ್ಕೆ ಪರ್ಯಾಯವಾಗಿ 'ವಿಷ್ಣುಲೋಕ' ವೆಂದು ಅರ್ಥ ಮಾಡಿರುತ್ತಾರೆ. ವಿಯದ್ವಿಷ್ಣುಪದಂ (ಅಮರ) ಮಹಾಯಶಸ್ವಿಯಾದ ವಾಯುವೆಂದು ಪ್ರಸಿದ್ಧವಾದ ನನ್ನ ಮೂರನೆಯ ಮಗನು ವಿಷ್ಣುಲೋಕದಲ್ಲಿ ಸಂಚರಿಸಲಿ. ಎರಡನೆಯ ಮತ್ತು ಮೂರನೆಯ ಮಕ್ಕಳಿಬ್ಬರೂ ಇಂದ್ರಲೋಕದಲ್ಲಿಯೇ ಸಂಚರಿಸಲಿ ಎಂಬುದ ಕ್ಕಿಂತಲೂ–'ಮೂರನೆಯವನು ವಿಷ್ಣುಲೋಕದಲ್ಲಿ ಸಂಚರಿಸಲಿ'–ಎಂಬುದು ಸಾಧುವಾಗಿ ಕಾಣುತ್ತದೆ. ಇಂದ್ರಲೋಕಂ ಎಂಬೆಡೆಯಲ್ಲಿ ರುದ್ರಲೋಕಂ ಎಂಬ ಪಾಠಾಂತರವೂ ಇದೆ.

ಪರಸ್ಪರವಾಗಿ ನಿಶ್ಚಯಮಾಡಿಕೊಂಡು ಕೃತಾರ್ಥರಾದೆವೆಂಬ ಸಂತೋಷ ದಿಂದ ಸ್ವರ್ಗಕ್ಕೆ ತೆರಳಿದರೆಂಬ ಇತಿಹಾಸವನ್ನು ನಾವು ಕೇಳಿದ್ದೆವು.* ಈಗ ನಾವಿರುವ ಈ ಪ್ರದೇಶದಲ್ಲಿಯೇ ಇಂದ್ರನು ವಾಸಮಾಡುತ್ತಿದ್ದನು. ಈ ತಪೋವನದಲ್ಲಿಯೇ ಹಿಂದೆ ಹೇಳಿದ ರೀತಿಯಲ್ಲಿ ಇಂದ್ರನು ದಿತಿಯನ್ನು ಉಪಚರಿಸುತ್ತಿದ್ದನು.

ನರವ್ಯಾಘ್ರನೇ! ಪೂರ್ವಕಾಲದಲ್ಲಿ ಇಕ್ಷ್ವಾಕುವಿಗೆ ಅಲಂಬುಷಾ ಎಂಬ ಭಾರ್ಯೆಯಲ್ಲಿ ಪರಮಧಾರ್ಮಿಕನಾದ 'ವಿಶಾಲ' ನೆಂಬ ಸುಪ್ರಸಿದ್ಧ ನಾದ ಮಗನು ಹುಟ್ಟಿದನು. ವಿಶಾಲರಾಜನು ಇದೇ ಸ್ಥಳದಲ್ಲಿ 'ವಿಶಾಲಾ' ಎಂಬ ಹೆಸರಿನ ಈ ಪಟ್ಟಣವನ್ನು ನಿರ್ಮಿಸಿದನು. ಮಹಾಬಲಿಷ್ಠನಾದ ಹೇಮ ಚಂದ್ರನು ವಿಶಾಲರಾಜನ ಮಗ. ಹೇಮಚಂದ್ರನ ಅನಂತರ ಅವನ ಮಗನು ಸುಚಂದ್ರನೆಂಬ ಹೆಸರಿನಿಂದ ವಿಖ್ಯಾತನಾಗಿದ್ದನು. ಧೂಮ್ರಾಶ್ವನು ಸುಚಂದ್ರನ ಮಗ. ಧೂಮ್ರಾಶ್ವನಿಗೆ ಸೃಂಜಯನೆಂಬ ಮಗನು ಹುಟ್ಟಿದನು. ಮಹಾಪ್ರತಾಪಶಾಲಿಯಾದ, ಶ್ರೀಮಂತನಾದ ಸಹದೇವನು ಸೃಂಜಯನ ಮಗ. ಪರಮಧಾರ್ಮಿಕನಾದ ಕುಶಾಶ್ವನು ಸಹದೇವನ ಮಗ. ಮಹಾತೇಜಸ್ವಿ ಯಾದ, ಮಹಾಪ್ರತಾಪಶಾಲಿಯಾದ ಸೋಮದತ್ತನು ಕುಶಾಶ್ವನ ಮಗ. ಸೋಮದತ್ತನ ಮಗನು 'ಕಾಕುತ್ಸ್ಥ' ಎಂಬ ಹೆಸರಿನಿಂದ ಪ್ರಸಿದ್ಧನಾಗಿದ್ದನು. ಮಹಾತೇಜಸ್ವಿಯಾದ, ದೇವತೆಗಳಿಗೆ ಸಮಾನನಾದ, ಶತ್ರುಗಳಿಂದ ಜಯಿ ಸಲು ಅಸಾಧ್ಯನಾದ, ಕಾಕುತ್ಸ್ಥನ ಮಗನಾದ ಸುಮತಿಯೆಂಬುವನು ಈಗ ಈ ಪಟ್ಟಣವನ್ನು ಆಳುತ್ತಿದ್ದಾನೆ. ಇಕ್ಷ್ವಾಕುಮಹಾರಾಜನ ಅನುಗ್ರಹದಿಂದಾಗಿ ಅವನ ವಂಶೀಯರಾದ, ವಿಶಾಲಾವಾಸಿಗಳಾದ ರಾಜರು ದೀರ್ಘಾ ಯುಷ್ಮಂತರೂ, ಮಹಾತ್ಮರೂ, ವೀರ್ಯವಂತರೂ, ಧಾರ್ಮಿಕರೂ ಆಗಿರು ತ್ತಾರೆ. ಈ ಪಟ್ಟಣದಲ್ಲಿಯೇ ನಾವು ಈ ರಾತ್ರಿ ಸುಖವಾಗಿ ಮಲಗಿ ವಿಶ್ರಾಂತಿ ಯನ್ನು ಪಡೆಯೋಣ. ನಾಳೆ ಬೆಳಿಗ್ಗೆ ಇಲ್ಲಿಂದ ಮಿಥಿಲಾಪಟ್ಟಣಕ್ಕೆ ಪ್ರಯಾಣ

---

* ಇಂದ್ರಹಂತಕನನ್ನು ಪಡೆಯಲಾಗದಿದ್ದರೂ ಲೋಕೋತ್ತರರಾದ ಸಪ್ತಮಾರುತ ರನ್ನು ಪಡೆದ ಕಾರಣದಿಂದ ದಿತಿಯು ಕೃತಾರ್ಥಳಾದಳು. ತನ್ನ ವಿನಾಶಕನು ಹುಟ್ಟುವುದಕ್ಕೆ ಬದಲಾಗಿ ತನ್ನ ಆಜ್ಞಾಪಾಲಕನು ದಿತಿಯಲ್ಲಿ ಹುಟ್ಟಿದ ಕಾರಣದಿಂದ ಇಂದ್ರನೂ ಕೃತಾರ್ಥನಾದನು.

ಮಾಡೋಣ. ಅಲ್ಲಿ ನೀನು ಪರಮಧಾರ್ಮಿಕನಾದ ಜನಕರಾಜನನ್ನು ನೋಡ ಬಹುದು."

ಹೀಗೆ ಮಾತನಾಡುತ್ತಿರುವಾಗಲೇ ಪರಮಧಾರ್ಮಿಕನಾದ ಸುಮ ತಿಯು, ವಿಶ್ವಾಮಿತ್ರರು ಶಿಷ್ಯರೊಡನೆ ತನ್ನ ಪಟ್ಟಣದ ಕಡೆಗೆ ಬರುತ್ತಿರುವ ರೆಂಬ ವಾತ್ರೆಯನ್ನು ಕೇಳಿ, ಮಂತ್ರಿ-ಪುರೋಹಿತರೊಡನೆ ಅರಮನೆಯಿಂದ ಹೊರಬಂದು ವಿಶ್ವಾಮಿತ್ರರನ್ನು ಎದುರ್ಗೊಂಡು ರಾಜಮರ್ಯಾದೆಗಳೊಡನೆ ಮಹರ್ಷಿಗಳನ್ನೂ ಮತ್ತು ಅವರ ಅನುಯಾಯಿಗಳನ್ನೂ ಅರಮನೆಯೊಳಕ್ಕೆ ಕರೆದೊಯ್ದನು. ಸುಖಾಸನದಲ್ಲಿ ಉಪವಿಷ್ಟರಾದ ವಿಶ್ವಾಮಿತ್ರರಿಗೂ ಮತ್ತು ಅವರ ಶಿಷ್ಯರಿಗೂ ಮಂತ್ರಿ-ಪುರೋಹಿತ-ಬಂಧು-ಪರಿವಾರಸಮೇತನಾದ ಸುಮತಿಯು ಯಥಾವಿಧಿಯಾಗಿ ಸತ್ಕಾರಮಾಡಿ, ಬದ್ಧಾಂಜಲಿಯಾಗಿ ನಿಂತು ಕುಶಲಪ್ರಶ್ನೆಮಾಡಿ ಹೇಳಿದನು :

"ಬ್ರಹ್ಮರ್ಷಿಗಳೇ! ತಾವು ಈ ಪಟ್ಟಣಕ್ಕೆ ಆಗಮಿಸಿರುವುದರಿಂದ ನಾನಿಂದು ನಿಶ್ಚಯವಾಗಿಯೂ ಧನ್ಯನಾಗಿದ್ದೇನೆ. ಅನುಗೃಹೀತನಾಗಿದ್ದೇನೆ. ನಿಮ್ಮ ದಿವ್ಯದರ್ಶನವಿಂದು ನನಗೆ ಅಯಾಚಿತವಾಗಿ ಪ್ರಾಪ್ತವಾಗಿದೆ. ಆದುದ ರಿಂದ ನನಗಿಂತಲೂ ಅದೃಷ್ಟಶಾಲಿಯಾದವನು ಖಂಡಿತವಾಗಿಯೂ ಬೇರೊಬ್ಬನಿರಲಾರನು."

೪೭ನೆಯ ಸರ್ಗವು ಮುಗಿಯಿತು.

ಬಾಲಕಾಂಡ ೪೮ನೆಯ ಸರ್ಗ

ಸುಮತಿರಾಜನಿಂದ ಸತ್ಕೃತರಾದ ಕೌಶಿಕ-ರಾಮ-ಲಕ್ಷ್ಮಣರ ಮಿಥಿಲಾಪ್ರಯಾಣ : ಗೌತಮಾಶ್ರಮದ ವಿವರಣೆ : ಇಂದ್ರನ ಅತ್ಯಾಚಾರ : ಇಂದ್ರ-ಅಹಲ್ಯೆಯರಿಗೆ ಗೌತಮರ ಶಾಪ

ಪೃಷ್ಟ್ವಾ ತು ಕುಶಲಂ ತತ್ರ ಪರಸ್ಪರಸಮಾಗಮೇ ।
ಕಥಾನ್ತೇ ಸುಮತಿರ್ವಾಕ್ಯಂ ವ್ಯಾಜಹಾರ ಮಹಾಮುನಿಮ್ ॥೧॥

ಸುಮತಿಯ ಮಾತುಗಳಿಗೆ ವಿಶ್ವಾಮಿತ್ರರೂ ಯಥೋಚಿತವಾಗಿ ಉತ್ತ

ರಿಸಿದರು. ಪರಸ್ಪರ ಕುಶಲಪ್ರಶ್ನೆಗಳೂ, ಗುಣಕಥನಗಳೂ ಆದನಂತರ ಸುಮತಿಯು ಪುನಃ ವಿಶ್ವಾಮಿತ್ರರನ್ನು ಕೇಳಿದನು :

"ಮಹರ್ಷಿಗಳೇ! ನಿಮಗೆ ಮಂಗಳವಾಗಲಿ. ದೇವತೆಗಳ ಪರಾಕ್ರಮಕ್ಕೆ ಅನುಗುಣವಾದ ಪರಾಕ್ರಮವುಳ್ಳ, ಆನೆಯಂತೆ ಗಂಭೀರಗತಿಯುಳ್ಳ, ಸಿಂಹ ದಂತೆ ಅಪ್ರತಿಹತವಾದ ಗಮನವುಳ್ಳ, ಹುಲಿಯಂತೆ ಎದುರಿಸಲು ಅಸಾಧ್ಯ ರಾದ, ಎತ್ತಿನಂತೆ ಉನ್ನತವಾದ ಹೆಗಲುಗಳುಳ್ಳ, ವೀರರಾದ, ಪದ್ಮಪತ್ರದಂತೆ ವಿಶಾಲವಾದ ಕಣ್ಣುಗಳುಳ್ಳ, ಖಡ್ಗವನ್ನೂ-ಧನುಸ್ಸು-ಬತ್ತಳಿಕೆಗಳನ್ನೂ ಧರಿಸಿ ರುವ, ಅಶ್ವಿನೀದೇವತೆಗಳಿಗೆ ಅನುರೂಪವಾದ ರೂಪಾತಿಶಯವುಳ್ಳ, ಪ್ರಾಪ್ತ ವಯಸ್ಕರಾಗಿರುವ, ದೇವಲೋಕದಿಂದ ಭೂಲೋಕಕ್ಕೆ ಸ್ವೇಚ್ಛೆಯಿಂದ ಬಂದಿ ರುವ ದೇವತೆಗಳೋಪಾದಿಯಲ್ಲಿರುವ ಈ ಇಬ್ಬರು ಸುಕುಮಾರರು ಯಾರು? ಇವರು ಕಾಲ್ನಡಿಗೆಯಿಂದಲೇ ನಮ್ಮ ದೇಶಕ್ಕೆ ಬಂದಿರುವ ಕಾರಣವಾದರೂ ಏನು? ಇವರು ಯಾವ ಪುಣ್ಯಪುರುಷನ ಮಕ್ಕಳು? ಇವೆಲ್ಲವನ್ನೂ ವಿಸ್ತಾರವಾಗಿ ತಿಳಿಸಿರಿ. ಚಂದ್ರ-ಸೂರ್ಯರು ಆಕಾಶವನ್ನು ಬೆಳಗುವಂತೆ ಇವರಿಂದು ನನ್ನ ದೇಶವನ್ನು ಪ್ರಕಾಶಗೊಳಿಸುತ್ತಿದ್ದಾರೆ. ರೂಪ-ಲಾವಣ್ಯಗಳಲ್ಲಿಯೂ, ಅಂತರ್ವ್ಯಾಪಾರ-ಬಹಿರ್ವ್ಯಾಪಾರಗಳಲ್ಲಿಯೂ ಇವರಿ ಬ್ಬರೂ ಪರಸ್ಪರವಾಗಿ ಅನುರೂಪರಾಗಿರುವರು. ಶ್ರೇಷ್ಠವಾದ ಧನುರ್ಬಾಣ ಗಳನ್ನೂ, ಖಡ್ಗ-ಆಯುಧಗಳನ್ನೂ ಧರಿಸಿರುವ ಈ ಪುರುಷೋತ್ತಮರು ಯಾವ ಕಾರಣದಿಂದ ದುರ್ಗಮವಾದ ಈ ಘೋರಾರಣ್ಯದ ಹಾದಿಯಲ್ಲಿ ನಡೆದು ಬಂದರು? ಈ ವಿಷಯಗಳೆಲ್ಲವನ್ನೂ ಯಥಾವತ್ತಾಗಿ, ವಿಸ್ತಾರವಾಗಿ ತಮ್ಮಿಂದ ಕೇಳಿ ತಿಳಿದುಕೊಳ್ಳುವ ಆಶಯದಿಂದಿರುವೆನು."

ಸುಮತಿಯು ಹೇಳಿದ ಆ ಮಾತುಗಳನ್ನು ಕೇಳಿ ವಿಶ್ವಾಮಿತ್ರರು ಪರಮ ಹರ್ಷಿತರಾಗಿ–ದಶರಥನ ಪೂರ್ವೇತಿಹಾಸ, ಅವನು ಮಕ್ಕಳಿಗಾಗಿ ಪುತ್ರಕಾ ಮೇಷ್ಟಿಯಾಗವನ್ನು ಮಾಡಿದುದು, ರಾಮ-ಲಕ್ಷ್ಮಣ-ಭರತ-ಶತ್ರುಘ್ನರ ಜನನ, ತಾನು ಸಿದ್ಧಾಶ್ರಮದಲ್ಲಿ ಮಾಡುತ್ತಿದ್ದ ಯಜ್ಞಕ್ಕೆ ರಾಕ್ಷಸರಿಂದ ಉಪ ದ್ರವ, ಯಜ್ಞರಕ್ಷಣೆಗಾಗಿ ರಾಮ-ಲಕ್ಷ್ಮಣರನ್ನು ಅಯೋಧ್ಯೆಯಿಂದ ಕರೆ ತಂದುದು, ದಾರಿಯಲ್ಲಿಯೇ ತಾಟಕಾಸಂಹಾರ, ಸಿದ್ಧಾಶ್ರಮದಲ್ಲಿ ರಾಕ್ಷಸರ ವಿನಾಶ ಮತ್ತು ಯಜ್ಞರಕ್ಷಣೆಯನ್ನು ವೀರರಾದ ಶ್ರೀರಾಮ-ಲಕ್ಷ್ಮಣರು

ಮಾಡಿದುದು, ಅಲ್ಲಿಂದ ಮುಂದೆ ಜನಕರಾಜನ ಶಿವಧನುಸ್ಸನ್ನು ರಾಮನಿಗೆ ತೋರಿಸುವ ಅಪೇಕ್ಷೆಯಿಂದ ಅವರನ್ನು ಮಿಥಿಲಾಪಟ್ಟಣಕ್ಕೆ ಕರೆದೊಯ್ಯು ತ್ತಿರುವುದು–ಇವಿಷ್ಟು ವಿಷಯಗಳನ್ನೂ ಸುಮತಿಗೆ ತಿಳಿಸಿದರು. ಅವರ ಮಾತುಗಳನ್ನು ಕೇಳಿ ಸುಮತಿಯು ಪರಮಹರ್ಷಿತನಾಗಿ ಸತ್ಕಾರಕ್ಕೆ ಅರ್ಹರೂ, ಶ್ರೇಷ್ಠರಾದ ಅತಿಥಿಗಳೂ, ಮಹಾಬಲರೂ ಆದ ದಶರಥನ ಆ ಇಬ್ಬರು ಮಕ್ಕಳನ್ನೂ ಯಥಾವಿಧಿಯಾಗಿ ಸತ್ಕರಿಸಿದನು. ಸುಮತಿಯ ಅಮೋಘವಾದ ಸತ್ಕಾರವನ್ನು ಪಡೆದನಂತರ ರಾಮ-ಲಕ್ಷ್ಮಣರು ಆ ರಾಜನ ಅರಮನೆಯಲ್ಲಿ ಒಂದು ರಾತ್ರಿ ತಂಗಿದ್ದು, ಬೆಳಗಾಗುತ್ತಲೇ ನಿತ್ಯಕರ್ಮ ಗಳನ್ನು ಮುಗಿಸಿ ವಿಶ್ವಾಮಿತ್ರರೊಡನೆ ಮಿಥಿಲಾಪಟ್ಟಣಕ್ಕೆ ಹೊರಟರು. ಮಿಥಿಲಾಪಟ್ಟಣವು ಸಮೀಪಿಸಿತು. ಪಟ್ಟಣದ ಸುಂದರಸೌಧಗಳು ಕಾಣುತ್ತಲಿ ದ್ದುವು. ಜನಕರಾಜನ ಆ ಮಿಥಿಲಾಪಟ್ಟಣವನ್ನು ಕಂಡು ವಿಶ್ವಾಮಿತ್ರರೊಡ ನಿದ್ದ ಮಹರ್ಷಿಗಳೆಲ್ಲರೂ–'ಸಾಧು! ಸಾಧು'–ಎಂದು ಪ್ರಶಂಸೆಮಾಡುತ್ತಾ ಮಹಾನಗರಿಯನ್ನು ದೂರದಿಂದಲೇ ಪ್ರಶಂಸಿಸಿದರು. ಪಟ್ಟಣಕ್ಕೆ ಹೋಗುವ ಮಾರ್ಗದಲ್ಲಿದ್ದ ಉಪವನದಲ್ಲಿ ಪುರಾತನವಾದ, ಜನರಹಿತವಾದ, ಆದರೂ ನೋಡಲು ಬಹುರಮ್ಯವಾಗಿದ್ದ ಆಶ್ರಮವೊಂದನ್ನು ಕಂಡು ರಾಮನು ಉತ್ಸುಕತೆಯಿಂದ ವಿಶ್ವಾಮಿತ್ರರನ್ನು ಕೇಳಿದನು :

"ಮಹರ್ಷಿಗಳೇ! ಈ ವನಮಧ್ಯದಲ್ಲಿ ಕಂಗೊಳಿಸುತ್ತಿರುವ ಈ ನಿವಾಸವು ಋಷ್ಯಾಶ್ರಮದಂತೆಯೇ ಇರುವುದು. ಆದರೆ ಇಲ್ಲಿ ಯಾವ ಮಹರ್ಷಿಯೂ ಕಾಣುತ್ತಿಲ್ಲ. ಇದು ಹಿಂದೆ ಯಾರ ಆಶ್ರಮವಾಗಿದ್ದಿತು? ಈಗ ಇಲ್ಲಿ ಮುನಿಗಳಿಲ್ಲದಿರಲು ಕಾರಣವೇನು? ಇವೆಲ್ಲವನ್ನೂ ವಿವರವಾಗಿ ತಿಳಿದುಕೊಳ್ಳಲು ಬಯಸುತ್ತೇನೆ."

ವಾಕ್ಯವಿಶಾರದರಾದ, ಮಹಾಮುನಿಗಳಾದ ವಿಶ್ವಾಮಿತ್ರರು ರಾಘವನ ಮಾತುಗಳನ್ನು ಕೇಳಿ ಪ್ರತ್ಯುತ್ತರಿಸಿದರು :

"ರಾಘವ! ನೀನು ಕೇಳಿದ ಪ್ರಶ್ನೆಗಳಿಗೆ ವಿವರವಾಗಿಯೇ ಉತ್ತರಿಸು ತ್ತೇನೆ. ಈ ಆಶ್ರಮವು ಯಾರದು? ಮತ್ತು ಕೋಪಾವಿಷ್ಟನಾದ ಯಾವ ಮಹಾತ್ಮನ ಶಾಪದಿಂದ ಈ ಆಶ್ರಮಪದವು ನಿರ್ಜನವಾಗಿ ಮಾಡಲ್ಪಟ್ಟಿತು? ಇವೆಲ್ಲವನ್ನೂ ಹೇಳುವೆನು ; ಕೇಳು :

ದೇವಲೋಕದ ಆಶ್ರಮಕ್ಕೆ ಅನುರೂಪವಾಗಿರುವ ಮತ್ತು ದೇವತೆಗಳಿಂದಲೂ ಪೂಜಿಸಲ್ಪಡುತ್ತಿದ್ದ ಈ ಆಶ್ರಮವು ಮಹಾತ್ಮರಾದ ಗೌತಮ ಮಹರ್ಷಿಗಳ ಆಶ್ರಮವಾಗಿದ್ದಿತು. ಅವರು ಭಾರ್ಯೆಯಾದ ಅಹಲ್ಯೆಯೊಡನೆ ಅನೇಕವರ್ಷಗಳವರೆಗೆ ಇಲ್ಲಿ ತಪಸ್ಸನ್ನು ಮಾಡುತ್ತಿದ್ದರು. ಒಮ್ಮೆ ಶಚೀಪತಿಯಾದ ಇಂದ್ರನು ಮಹರ್ಷಿಯು ಆಶ್ರಮದಲ್ಲಿರದ ವೇಳೆಯನ್ನು ನಿರೀಕ್ಷಿಸುತ್ತಿದ್ದು, ಗೌತಮರು ಆಶ್ರಮದಿಂದ ಬಹಳ ದೂರ ಹೋಗಿರುವ ಸಮಯದಲ್ಲಿ ಗೌತಮರ ವೇಷವನ್ನೇ ಧರಿಸಿ ಆಶ್ರಮವನ್ನು ಪ್ರವೇಶಿಸಿ ಅಹಲ್ಯೆಯ ಬಳಿಗೆ ಹೋಗಿ ಅವಳಿಗೆ ಹೇಳಿದನು :

"ಸುಂದರಾಂಗಿಯೇ! ಸುಮಧ್ಯಮೇ! ಮನ್ಮಥನಿಂದ ಪೀಡಿತರಾದವರು ತಾವು ಕಾಮಿಸಿದ ಯುವತಿಗೆ ಋತುಕಾಲವು ಪ್ರಾಪ್ತವಾಗಿರುವುದೇ–ಇಲ್ಲವೇ? ಎಂದು ವಿವೇಚನೆಯನ್ನು ಮಾಡಲಾರರು. ನಾನೀಗ ನಿನ್ನೊಡನೆ ಸಮಾಗಮವನ್ನು ಬಯಸುತ್ತೇನೆ."

ಅವನ ಈ ವಿಧವಾದ ಮಾತುಗಳಿಂದ ಅಹಲ್ಯೆಗೆ ತನ್ನೊಡನೆ ಮಾತನಾಡುತ್ತಿರುವವನು ಗೌತಮನಲ್ಲವೆಂಬುದು ಸ್ಪಷ್ಟವಾಗಿ ತಿಳಿಯಿತಲ್ಲದೇ ಮುನಿವೇಷಧಾರಿಯಾಗಿ ಇಂದ್ರನೇ ಬಂದಿರುವನೆಂದೂ ಅವಳು ನಿರ್ಧರಿಸಿದಳು. ದೇವರಾಜನು ಬಂದು ತನ್ನನ್ನು ರತಿಸುಖಕ್ಕಾಗಿ ಪ್ರಾರ್ಥಿಸುತ್ತಿರುವ ನೆಂಬ ಕುತೂಹಲದಿಂದ ಮೂಢಳಾದ ಅಹಲ್ಯೆಯು ಇಂದ್ರನೊಡನೆ ಸಂಗ ಮಾಡಲು ನಿಶ್ಚಯಿಸಿದಳು. ಅವನೊಡನೆ ರತಿಸುಖವನ್ನನುಭವಿಸಿ ಪರಮ ಸಂತುಷ್ಟಳಾದ ಅಹಲ್ಯೆಯು ಇಂದ್ರನಿಗೆ ಹೇಳಿದಳು :

"ದೇವೇಶ! ನಿನ್ನ ಸಮಾಗಮದಿಂದ ಕೃತಾರ್ಥಳಾದೆನು. ಮುಂದೆ ದುಷ್ಪರಿಣಾಮವಾಗದ ರೀತಿಯಲ್ಲಿ ನೀನೀಗಲೇ ಇಲ್ಲಿಂದ ಹೊರಟುಹೋಗು. ಗೌತಮರ ಶಾಪದಿಂದ ನನ್ನನ್ನೂ ರಕ್ಷಿಸು ಮತ್ತು ನೀನೂ ಅವರ ಶಾಪಕ್ಕೆ ಗುರಿಯಾಗಬೇಡ."

ಇಂದ್ರನು ನಸುನಗುತ್ತಾ ಉತ್ತರವಿತ್ತನು :

"ಸುಶ್ರೋಣಿ! ನೀನು ನನ್ನ ಪ್ರಾರ್ಥನೆಯನ್ನು ಅಂಗೀಕರಿಸಿ ನನ್ನೊಡನೆ

ಸಮಾಗಮಮಾಡಿದುದಕ್ಕಾಗಿ ನಾನೂ ಸಂತುಷ್ಟನಾಗಿದ್ದೇನೆ. ನಾನಿನ್ನು ಬಂದಂತೆಯೇ ಹೊರಟುಹೋಗುತ್ತೇನೆ."

ಇಂದ್ರನು ಅಹಲ್ಯೆಗೆ ಹೀಗೆ ಹೇಳಿ ಆಶ್ರಮದಿಂದ ಹೊರಬಿದ್ದನು. ಭೀತಭೀತನಾಗಿ ಗೌತಮರೆಲ್ಲಿ ಬಂದುಬಿಡುವರೋ ಎಂಬ ಅವಸರದಿಂದಲೇ ಇಂದ್ರನು ಆಶ್ರಮದಿಂದ ಹೊರಟ ವೇಳೆಗೆ ಸರಿಯಾಗಿ ಗೌತಮರು ಆಶ್ರಮ ವನ್ನು ಪ್ರವೇಶಿಸುತ್ತಿದ್ದುದನ್ನು ಕಂಡು ನಡುಗಿದನು. ಗೌತಮರಾದರೋ ಸಾಮಾನ್ಯರಲ್ಲ. ದೇವ-ದಾನವರುಗಳಿಂದಲೂ ಜಯಿಸಲಸಾಧ್ಯರಾದವರು ; ತಪೋಬಲದಿಂದ ಸಂಪನ್ನರಾದವರು. ಆಗ ಗೌತಮರು ತೀರ್ಥೋದಕದಲ್ಲಿ ಮಿಂದು, ಶುಚಿಯಾಗಿ ಬರುತ್ತಿದ್ದರು. ಯಜ್ಞೇಶ್ವರನಂತೆ ದೇದೀಪ್ಯಮಾನ ವಾದ ತೇಜಸ್ಸಿನಿಂದ ಕೂಡಿದ್ದರು. ಸಮಿತ್ಕುಶಗಳನ್ನು ಕೈಯಲ್ಲಿ ಹಿಡಿದಿದ್ದರು. ಮೈಗೆಲ್ಲಾ ಭಸ್ಮವನ್ನು ಲೇಪಿಸಿಕೊಂಡು ಮತ್ತೊಬ್ಬ ಶಿವನಂತೆ ಕಂಗೊಳಿಸು ತ್ತಿದ್ದರು. ಅಂತಹ ಮಹಾಮಹಿಮರಾದ ಗೌತಮರು ಎದುರಾಗಿ ಬಂದು ತನ್ನ ಮುಂದೆ ನಿಂತೊಡನೆಯೇ ಸುರಪತಿಯು ನಡುಗಿಹೋದನು. ಮುಖವು ವಿವರ್ಣವಾಯಿತು. ಮುನಿವೇಷಧರನಾದ, ದುಷ್ಕಾರ್ಯಪ್ರವೃತ್ತನಾದ ಇಂದ್ರನನ್ನು ಕಂಡು ಸದ್ವೃತ್ತಿಸಂಪನ್ನರಾದ ಗೌತಮರು ಕೋಪಾವಿಷ್ಟರಾಗಿ ಹೇಳಿದರು :

"ದುರ್ಮತಿಯೇ! ನನ್ನ ರೂಪವನ್ನು ಧರಿಸಿ ನೀನು ಈ ಅಕಾರ್ಯವನ್ನು ಮಾಡಿರುವೆ. ಆದುದರಿಂದ ನೀನೀಗಲೇ ಫಲರಹಿತನಾಗುವೆ. (ವೃಷಣರಹಿತನಾಗುವೆ.)"

ರಾಘವ! ಮಹಾತ್ಮರಾದ ಗೌತಮರು ಇಂದ್ರನಿಗೆ ಹೀಗೆ ಶಾಪ ಕೊಟ್ಟೊಡನೆಯೇ ಇಂದ್ರನ ವೃಷಣಗಳೆರಡೂ ಕಳಚಿ ಕೆಳಗೆ ಬಿದ್ದುವು. ಗೌತಮರು ಭಾರ್ಯೆಯಾದ ಅಹಲ್ಯೆಗೂ ಶಾಪವನ್ನಿತ್ತರು.

"ದುರ್ವೃತ್ತಿಯುಳ್ಳವಳೇ! ನೀನು ಸಾವಿರ ವರ್ಷಗಳ ಕಾಲ ಈ ಉಪವನದಲ್ಲಿಯೇ ಗಾಳಿಯನ್ನೇ ಆಹಾರವನ್ನಾಗಿ ಸೇವಿಸುತ್ತಾ, ನಿರಾಹಾರ ಳಾಗಿ, ಪಶ್ಚಾತ್ತಾಪದಿಂದ ತಪಿಸುತ್ತಾ ಭಸ್ಮರಾಶಿಯ ಮೇಲೆ ಮಲಗುತ್ತಾ ಸಕಲಪ್ರಾಣಿಗಳಿಗೂ ಅದೃಶ್ಯಳಾಗಿ ಈ ಆಶ್ರಮದಲ್ಲಿ ವಾಸಮಾಡುವೆ.

ಯಾವಾಗ ಈ ನಿರ್ಜನವಾದ ಘೋರಾರಣ್ಯದಲ್ಲಿರುವ ಈ ಆಶ್ರಮಕ್ಕೆ ದುರ್ಧರ್ಷಣನಾದ, ದಶರಥನ ಮಗನಾದ ರಾಮನು ಬರುವನೋ ಆಗ ನೀನು ಪೂತಾತ್ಮಳಾಗುವೆ. ದಯಾಮಯನಾದ ಶ್ರೀರಾಮನ ಆತಿಥ್ಯದಿಂದ ನೀನು ಲೋಭ-ಮೋಹಗಳಿಂದ ವಿಮುಕ್ತಳಾಗಿ, ನಿನ್ನ ಪೂರ್ವಶರೀರವನ್ನು ಧರಿಸಿ, ಸರ್ವರಿಂದಲೂ ಪ್ರೇಕ್ಷ್ಯಳಾಗಿ, ಸಂತೋಷದಿಂದ ನನ್ನನ್ನು ಸೇರುವೆ."

ರಾಮ! ಗೌತಮರು ದುಷ್ಟಚಾರಿಣಿಯಾದ ಅಹಲ್ಯೆಗೆ ಹೀಗೆ ಹೇಳಿ, ಈ ಆಶ್ರಮವನ್ನು ತ್ಯಜಿಸಿ ಸಿದ್ಧ-ಚಾರಣರಿಂದ ಸಂಸೇವ್ಯಮಾನವಾದ, ರಮ್ಯವಾದ ಹಿಮವತ್ಪರ್ವತದ ತಪ್ಪಲಿನಲ್ಲಿ ತಪಶ್ಚರಣೆಮಾಡಲು ಹೊರಟು ಹೋದರು."

ತಲನೆಯ ಸರ್ಗವು ಮುಗಿಯಿತು.

ಬಾಲಕಾಂಡ ೪೯ನೆಯ ಸರ್ಗ

ಪಿತೃದೇವತೆಗಳಿಂದ ಇಂದ್ರನಿಗೆ ಮೇಷವೃಷಣಗಳ ಸಂಯೋಜನೆ : ಶ್ರೀರಾಮನಿಂದ ಅಹಲ್ಯಾಶಾಪವಿಮೋಚನೆ : ಅಹಲ್ಯಾ-ಗೌತಮರಿಂದ ಶ್ರೀರಾಮನಿಗೆ ಸತ್ಕಾರ

ಅಫಲಸ್ತು ತತಃ ಶಕ್ರೋ ದೇವಾನಗ್ನಿಪುರೋಧಸಃ ।
ಅಬ್ರವೀತ್ರಸ್ತವದನಃ ಸರ್ಷಿಸಂಘಾನ್ಸಚಾರಣಾನ್ ॥೧॥

"ರಾಮ! ಇತ್ತಲಾಗಿ ವೃಷಣರಹಿತನಾಗಿ, ದೈನ್ಯಮುಖಭಾವದಿಂದ ಕೂಡಿದ್ದ ಇಂದ್ರನು ಅಗ್ನಿಪ್ರಮುಖರಾದ ದೇವತೆಗಳನ್ನೂ ಸಿದ್ಧ-ಚಾರಣ-ಗಂಧರ್ವರನ್ನೂ ಕುರಿತು ದೀನಧ್ವನಿಯಲ್ಲಿ ಹೇಳಿದನು :

"ಅಗ್ನಿಪ್ರಮುಖರಾದ ದೇವತೆಗಳೇ! ಸಿದ್ಧ-ಚಾರಣ-ಗಂಧರ್ವರೇ! ನಾನು ನಿಶ್ಚಯವಾಗಿಯೂ ಕಾಮೇಚ್ಛೆಯಿಂದ ಈ ಅಕಾರ್ಯವನ್ನು ಮಾಡಿದವನಲ್ಲ. ದೇವತೆಗಳ ಅನುಕೂಲಕ್ಕೆಂದೇ ಈ ಕಾರ್ಯವನ್ನು ಮಾಡಿದೆನು. ಗೌತಮರು ಮಾಡುತ್ತಿದ್ದ ಮಹಾತಪಸ್ಸಿನ ಫಲವು ವ್ಯಯವಾಗಲೆಂದೇ ಹೀಗೆ ಮಾಡಿದೆನು. ನನ್ನ ಕಾರ್ಯದ ಪರಿಣಾಮವಾಗಿ ಗೌತಮರಿಗೆ ಮಹಾಕೋಪ ವುಂಟಾಯಿತು. ನನ್ನನ್ನು ಶಪಿಸಿಯೂಬಿಟ್ಟರು. ಇದರಿಂದ ಅವರ ತಪಸ್ಸಿಗೆ

ವಿಘ್ನವಾಯಿತಲ್ಲದೇ, ತಪಃಫಲದ ವಿನಾಶವೂ ಆಯಿತು. ಗೌತಮರು ನಮ್ಮಿಬ್ಬರ ಮೇಲೂ ಕೋಪಗೊಂಡರು. ಇಬ್ಬರನ್ನೂ ಶಪಿಸಿದರು. ಶಾಪದಿಂದ ಅವರು ಅಫಲರಾದರು. (ಅವರ ತಪಃಫಲವು ಲುಪ್ತವಾಯಿತು.) ನಾನೂ ಅಫಲನಾದೆನು. (ವೃಷಣಹೀನನಾದೆನು.) ನಿಮ್ಮ ಹಿತಚಿಂತನೆಯಿಂದ ಮಾಡಿದ ಈ ಕಾರ್ಯಕ್ಕಾಗಿ ನಾನಿಂದು ಶಾಪಗ್ರಸ್ತನಾಗಿದ್ದೇನೆ. ದೇವಕಾರ್ಯದಲ್ಲಿ ಉದ್ಯುಕ್ತನಾದ ನನ್ನನ್ನು ಋಷಿಸಂಘದಿಂದಲೂ, ಚಾರಣರುಗಳಿಂದಲೂ ಕೂಡಿರುವ ಸರ್ವದೇವತೆಗಳೂ ಸೇರಿ ಸಫಲನನ್ನಾಗಿ (ವೃಷಣವುಳ್ಳವನನ್ನಾಗಿ) ಮಾಡುವುದು ನಿಮ್ಮೆಲ್ಲರ ಕರ್ತವ್ಯವೂ ಆಗಿರುತ್ತದೆ.”

ಇಂದ್ರನ ದೈನ್ಯಯುಕ್ತವಾದ ಆ ಮಾತುಗಳನ್ನು ಕೇಳಿ—ಅಗ್ನಿಪುರೋಗಮರಾದ ದೇವತೆಗಳು ಮರುದ್ಗಣಗಳಿಂದೊಡಗೂಡಿ, ಕವ್ಯವಾಹನಾದಿ ಪಿತೃದೇವತೆಗಳ ಬಳಿಗೆ ಹೋಗಿ ಹೇಳಿದರು :

“ಪಿತೃದೇವತೆಗಳೇ! ನಿಮಗೆ ಹವಿಸ್ಸಿನ ರೂಪವಾಗಿರುವ ಈ ಟಗರಿಗೆ ವೃಷಣಗಳಿವೆ. ನಮ್ಮ ಅಧಿಪತಿಯಾದ ಇಂದ್ರನು ಗೌತಮರಿತ್ತ ಶಾಪದ ಕಾರಣದಿಂದಾಗಿ ವೃಷಣವಿಲ್ಲದವನಾದನು. ಆದುದರಿಂದ ಈ ಟಗರಿನಲ್ಲಿರುವ ವೃಷಣಗಳನ್ನು ತೆಗೆದು ಒಡನೆಯೇ ಇಂದ್ರನಿಗೆ ಜೋಡಿಸಿರಿ. ವೃಷಣರಹಿತವಾದರೂ ಹವಿಸ್ಸಿನ ರೂಪದ ಈ ಟಗರು ನಿಮಗೆ ಅತಿಶಯವಾದ ತುಷ್ಟಿಯನ್ನು ಉಂಟುಮಾಡುತ್ತದೆ. ನಿಮ್ಮ ಪ್ರಸಾದಾಭಿಲಾಷಿಗಳಾದ ಯಾವ ಮಾನವರು ನಿಮಗೆ ಸಂತೋಷವನ್ನುಂಟುಮಾಡಲು ವೃಷಣರಹಿತವಾದ ಟಗರನ್ನು ಹವಿಸ್ಸಿನ ರೂಪದಲ್ಲಿ ಅರ್ಪಿಸುವರೋ—ಅವರಿಗೆ ನೀವು ಪುಷ್ಕಲವಾದ, ಕ್ಷಯರಹಿತವಾದ ಫಲವನ್ನು ದಯಪಾಲಿಸಿರಿ.”

ದೇವತೆಗಳ ಪ್ರಮುಖನಾದ ಅಗ್ನಿಯ ಮಾತುಗಳನ್ನು ಕೇಳಿ ಅಲ್ಲಿ ಉಪಸ್ಥಿತರಾಗಿದ್ದ ಪಿತೃದೇವತೆಗಳು ಒಡನೆಯೇ ಟಗರಿನ ವೃಷಣಗಳನ್ನು ಇಂದ್ರನಿಗೆ ಸಂಯೋಜಿಸಿದರು. ಅದು ಮೊದಲ್ಗೊಂಡು ಪಿತೃದೇವತೆಗಳು ಫಲರಹಿತವಾದ (ಹವಿಸ್ಸಿನ ಮೂಲಕ ದತ್ತವಾದ ವೃಷಣರಹಿತವಾದ) ಟಗರನ್ನು ಸೇವಿಸಿ ದಾತೃಗಳಿಗೆ ಫಲವನ್ನು ಕೊಡುವರು. ಮಹಾತ್ಮರಾದ ತಪಸ್ವಿಗಳಾದ ಗೌತಮರಿತ್ತ ಶಾಪಪ್ರಭಾವದಿಂದ ಅಫಲನಾಗಿದ್ದ ಇಂದ್ರನು

ಪಿತೃದೇವತೆಗಳ ಅನುಗ್ರಹದಿಂದ ಮೇಷವೃಷಣನಾದನು. ರಾಮ! ನಾನು ನಿನಗೆ ಅಹಲ್ಯೆಯ ವೃತ್ತಾಂತವೆಲ್ಲವನ್ನೂ ಪೂರ್ಣವಾಗಿ ಹೇಳಿದೆನಲ್ಲವೇ! ನೀನು ಪುಣ್ಯಾತ್ಮರಾದ ಗೌತಮರ ಈ ಆಶ್ರಮವನ್ನು ಪ್ರವೇಶಿಸಿ ಮಹಾಭಾಗೆಯಾದ, ದೇವರೂಪಿಣಿಯಾದ ಅಹಲ್ಯೆಯನ್ನು ಉದ್ಧರಿಸು."

ವಿಶ್ವಾಮಿತ್ರರ ಆ ಮಾತುಗಳನ್ನು ಕೇಳಿ ರಾಘವನು ವಿಶ್ವಾಮಿತ್ರಪುರಸ್ಸರನಾಗಿ ಲಕ್ಷ್ಮಣನೊಡನೆ ಗೌತಮರ ದಿವ್ಯಾಶ್ರಮವನ್ನು ಪ್ರವೇಶಿಸಿದನು. ಆಶ್ರಮದೊಳಗೆ ರಾಮನು ಕಾಲಿಟ್ಟೊಡನೆಯೇ ಮಹಾಭಾಗೆಯಾದ, ಸಾವಿರ ವರ್ಷಗಳು ಅನವರತವಾಗಿ ಮಾಡಿದ ತಪಸ್ಸಿನಿಂದ ಪ್ರಾಪ್ತವಾದ ಕಾಂತಿಯಿಂದ ದೇದೀಪ್ಯಮಾನಳಾಗಿದ್ದ, ದೇವ-ರಾಕ್ಷಸರಿಂದಲೂ ಮಾನವರಿಂದಲೂ ಸಮೀಪದಲ್ಲಿ ನಿಂತು ನೋಡಲೂ ಅಶಕ್ಯಳಾಗಿದ್ದ ಅಹಲ್ಯಾದೇವಿಯನ್ನು ನೋಡಿದನು. ಶಾಪದಿಂದ ವಿಮುಕ್ತಳಾದ ಅಹಲ್ಯಾದೇವಿಯ ಸೊಬಗು ಅನ್ಯಾದೃಶವಾಗಿದ್ದಿತು. ಬ್ರಹ್ಮನು ಅವಳನ್ನು ಅತ್ಯಂತ ಪ್ರಯತ್ನ ಪೂರ್ವಕವಾಗಿ ವಿಶೇಷ ಲಕ್ಷ್ಯವನ್ನಿತ್ತು, ದೇವಮಾಯೆಯಿಂದ ನಿರ್ಮಿಸಿರು ವನೋ ಎಂಬಂತೆ ಕಾಣುತ್ತಿದ್ದಳು. ಹೋಮಧೂಮದಂತಿರುವ ಧೂಳಿನಿಂದ ಆವೃತವಾದ ಶರೀರದಿಂದ ಕೂಡಿದ್ದ ಅಹಲ್ಯಾದೇವಿಯು ಅಗ್ನಿಯ ಜ್ವಾಲೆಯಂತೆ ಕಂಗೊಳಿಸುತ್ತಿದ್ದಳು. ಆಶ್ರಮಭೂಮಿಯಲ್ಲಿ ಹೂಗಿಡ-ಮರ-ಬಳ್ಳಿಗಳ ಮಧ್ಯದಲ್ಲಿದ್ದ ಹಿಮದ ಆವರಣದಿಂದ ಕೂಡಿದ್ದ ಅಹಲ್ಯೆಯು–ಮೋಡಗಳಿಂದ ಕೂಡಿದ್ದ ಪೂರ್ಣಚಂದ್ರನ ಪ್ರಭೆಯಂತೆ ಪ್ರಕಾಶಿಸಿದಳು. ನೀರಿನ ಮಧ್ಯದಲ್ಲಿ ಪ್ರಕಾಶಿಸುವ ಸೂರ್ಯನ ಪ್ರಭೆಯಂತೆ ದಿವ್ಯತೇಜಸ್ಸಿನಿಂದ ಬೆಳಗುತ್ತಿದ್ದಳು. ಅಂತಹ ಅನುಪಮವಾದ ತೇಜೋರಾಶಿಯಿಂದ ಕೂಡಿದ್ದ ಅಹಲ್ಯಾದೇವಿಯನ್ನು ಶ್ರೀರಾಮನು ಕಂಡನು. ಅಹಲ್ಯೆಯಾದರೋ ಗೌತಮರ ಶಾಪದಿಂದಾಗಿ ಶ್ರೀರಾಮನ ದರ್ಶನವಾಗುವವರೆಗೂ ತ್ರೈಲೋಕ್ಯವಾಸಿಗಳಲ್ಲಿ ಯಾರಿಂದಲೂ ನೋಡಲು ಅಶಕ್ಯಳಾಗಿದ್ದಳು. ಶ್ರೀರಾಮನ ದರ್ಶನವಾದೊಡನೆಯೇ ಶಾಪದಿಂದ ವಿಮುಕ್ತಳಾಗಿ ಎಲ್ಲರ ಕಣ್ಣಿಗೂ ಗೋಚರಳಾದಳು. ಮಹಾಮಹಿಮಳಾದ ಅಹಲ್ಯೆಯನ್ನು ಆಶ್ರಮದಲ್ಲಿ ಕಂಡೊಡನೆಯೇ ಶ್ರೀರಾಮ-ಲಕ್ಷ್ಮಣರು ಸಂತೋಷಭರಿತರಾಗಿ ಆ ಋಷಿಪತ್ನಿಯ ಕಾಲುಗಳನ್ನು ಮುಟ್ಟಿ ನಮಸ್ಕರಿಸಿದರು. ಅಹಲ್ಯೆಯು ಲಕ್ಷ್ಮಣಸಮೇತನಾದ ಶ್ರೀರಾಮನನ್ನು ಅರ್ಘ್ಯ-ಪಾದ್ಯ-ಆಚಮನೀಯಗಳಿಂದಲೂ, ಕಂದ-ಮೂಲ-

ಫಲಗಳಿಂದಲೂ ಯಥಾವಿಧಿಯಾಗಿ ಸತ್ಕರಿಸಿದಳು. ರಾಮನೂ ಅವಳು ಮಾಡಿದ ಸತ್ಕಾರವನ್ನು ಯಥಾವಿಧಿಯಾಗಿ ಆದರದಿಂದ ಸ್ವೀಕರಿಸಿದನು. ಪರಮಪವಿತ್ರವಾದ ಆ ಸನ್ನಿವೇಶದಲ್ಲಿ ದೇವದುಂದುಭಿಗಳೊಡನೆ ರಾಮನ ಮೇಲೆ ಪುಷ್ಪವೃಷ್ಟಿಯಾಯಿತು. ಗಂಧರ್ವಾಪ್ಸರೆಯರು ಸಂತೋಷಭರಿತ ರಾಗಿ, ನಾಟ್ಯವಾಡುತ್ತಾ ರಾಮನ ಗುಣಗಾನಮಾಡಿದರು. ಒಂದು ಸಾವಿರ ವರ್ಷಗಳವರೆಗೆ ತಪಸ್ಸುಮಾಡಿ ಪರಮಪಾವನೆಯಾಗಿ ಲೋಕಾಭಿರಾಮ ನಾದ ಶ್ರೀರಾಮನ ಆತಿಥ್ಯಮಾಡುತ್ತಿದ್ದ, ಗೌತಮರ ವಶಾನುವರ್ತಿನಿಯಾದ, ಅಹಲ್ಯಾದೇವಿಯನ್ನು ದೇವತೆಗಳು–"ಸಾಧು! ಸಾಧು"–ಎಂದು ಪ್ರಶಂಸಿಸಿದರು. ತಮ್ಮ ಆಶ್ರಮಕ್ಕೆ ರಾಮನು ಆಗಮಿಸಿರುವುದನ್ನು ದಿವ್ಯದೃಷ್ಟಿ ಯಿಂದ ತಿಳಿದ ಗೌತಮರು ಅಲ್ಲಿಗೆ ಬಂದು, ಶಾಪವಿಮುಕ್ತಳಾದ ಅಹಲ್ಯೆ ಯೊಡನೆ ಶ್ರೀರಾಮನನ್ನು ಯಥೋಚಿತವಾಗಿ ಸತ್ಕರಿಸಿ, ಅನಂತರ ಯಥಾ ಪೂರ್ವವಾಗಿ ತಪಸ್ಸಿನಲ್ಲಿ ನಿರತರಾದರು. ಶ್ರೀರಾಮನೂ ಮಹರ್ಷಿಗಳಾದ ಗೌತಮರಿಂದ ಪರಮಾದರದ ಸತ್ಕಾರವನ್ನು ಪಡೆದು, ಲಕ್ಷ್ಮಣ-ವಿಶ್ವಾಮಿತ್ರ ರೊಡನೆ ಮಿಥಿಲಾಪಟ್ಟಣಕ್ಕೆ ಪ್ರಯಾಣಮಾಡಿದನು.

೪೯ನೆಯ ಸರ್ಗವು ಮುಗಿಯಿತು.

ಬಾಲಕಾಂಡ ೫೦ನೆಯ ಸರ್ಗ

ಮಿಥಿಲಾಪಟ್ಟಣಕ್ಕೆ ವಿಶ್ವಾಮಿತ್ರರೊಡನೆ ರಾಮ-ಲಕ್ಷ್ಮಣರ ಪ್ರಯಾಣ : ಜನಕನ ಸತ್ಕಾರ : ರಾಜನಿಗೆ ವಿಶ್ವಾಮಿತ್ರರಿಂದ ರಾಜಪುತ್ರರ ಪರಿಚಯ

ತತಃ ಪ್ರಾಗುತ್ತರಾಂ ಗತ್ವಾ ರಾಮಃ ಸೌಮಿತ್ರಿಣಾ ಸಹ ।
ವಿಶ್ವಾಮಿತ್ರಂ ಪುರಸ್ಕೃತ್ಯ ಯಜ್ಞವಾಟಮುಪಾಗಮತ್ ॥೧॥

ಬಳಿಕ ರಾಮ-ಲಕ್ಷ್ಮಣರು ವಿಶ್ವಾಮಿತ್ರರನ್ನು ಮುಂದೆಮಾಡಿಕೊಂಡು ಮಿಥಿಲೋಪವನದ ಈಶಾನ್ಯದಿಕ್ಕಿನ ಕಡೆಗೆ ಪ್ರಯಾಣಮಾಡಿ, ಸ್ವಲ್ಪಕಾಲ ದಲ್ಲಿಯೇ ಜನಕರಾಜನ ಯಾಗಶಾಲೆಗೆ ಹೋದರು.

ಲಕ್ಷ್ಮಣಸಮೇತನಾದ ರಾಮನು ಯಜ್ಞಶಾಲೆಯಲ್ಲಿದ್ದ ಯಜ್ಞಸಂಭಾರ

ಗಳನ್ನೂ, ಬ್ರಹ್ಮತೇಜೋವಿಶಿಷ್ಟರಾಗಿದ್ದ ಋತ್ವಿಜರನ್ನೂ ಕಂಡು ಮುನಿ ಶಾರ್ದೂಲರಾದ ವಿಶ್ವಾಮಿತ್ರರಿಗೆ ಹೇಳಿದನು :

"ಮಹಾಭಾಗರೇ! ಮಹಾತ್ಮನಾದ ಜನಕರಾಜನ ಯಜ್ಞಸಮೃದ್ಧಿಯು ವೈಭವೋಪೇತವಾಗಿದೆ. ಇಲ್ಲಿ ವೇದಾಧ್ಯಯನಪರಾಯಣರಾದ, ನಾನಾ ದೇಶ ನಿವಾಸಿಗಳಾದ ಬ್ರಾಹ್ಮಣರು ಅನೇಕ ಸಹಸ್ರಸಂಖ್ಯೆಯಲ್ಲಿದ್ದಾರೆ. ಅಗ್ನಿಹೋತ್ರ ಸಾಮಗ್ರಿಗಳನ್ನು ತುಂಬಿಕೊಂಡು ತಂದಿರುವ ನೂರಾರು ಗಾಡಿಗಳಿಂದ ಆವೃತ ವಾದ ಋಷಿ-ಮಹರ್ಷಿಗಳ ಕುಟೀರಗಳು ನೂರಾರು ಸಂಖ್ಯೆಯಲ್ಲಿವೆ. ಬ್ರಾಹ್ಮಣರಿಂದಲೂ, ಋಷಿ-ಮಹರ್ಷಿಗಳಿಂದಲೂ ನಿಬಿಡವಾಗಿರುವ ಈ ಯಜ್ಞಭೂಮಿಯಲ್ಲಿ ನಾವು ಎಲ್ಲಿ ಬಿಡಾರಮಾಡಬೇಕೆಂಬುದನ್ನು ದಯೆ ಯಿಟ್ಟು ತಿಳಿಸಿರಿ."

ಶ್ರೀರಾಮನ ಮಾತುಗಳನ್ನು ಕೇಳಿ ವಿಶ್ವಾಮಿತ್ರರು ಜನರಹಿತವಾದ (ಪವಿತ್ರವಾದ) ಮತ್ತು ನೀರಿನ ಸೌಕರ್ಯವಿದ್ದ ಪ್ರದೇಶವೊಂದರಲ್ಲಿ ಬಿಡಾರ ಮಾಡಿದರು. ವಿಶ್ವಾಮಿತ್ರರು ಬಂದಿರುವ ವಾರ್ತೆಯು ಮಹಾತ್ಮನಾದ ಜನಕ ರಾಜನಿಗೆ ತಿಳಿಯಿತು. ಒಡನೆಯೇ ಜನಕನು ಪುರೋಹಿತನಾದ, ನಿಷ್ಕಳಂಕ ನಾದ ಶತಾನಂದನನ್ನು ಮುಂದುಮಾಡಿಕೊಂಡು ವಿನಯದಿಂದಲೂ ಭಕ್ತಿ ಯಿಂದಲೂ ಯುಕ್ತನಾಗಿ ವಿಶ್ವಾಮಿತ್ರರಿದ್ದ ಬಿಡಾರದೆಡೆಗೆ ಧಾವಿಸಿದನು. ಮಹಾತ್ಮರಾದ ಋತ್ವಿಜರು ಅರ್ಘ್ಯ-ಪಾದ್ಯಾದ್ಯುಪಕರಣಗಳನ್ನು ತೆಗೆದು ಕೊಂಡು ಜನಕನೊಡನೆ ಬಂದು ಯಥಾವಿಧಿಯಾಗಿ ಮಂತ್ರಪುರಸ್ಸರವಾಗಿ ವಿಶ್ವಾಮಿತ್ರರಿಗೆ ಸಮರ್ಪಿಸಿದರು. ವಿಶ್ವಾಮಿತ್ರರು ಎಲ್ಲವನ್ನೂ ಆದರ ಪೂರ್ವಕವಾಗಿ ಸ್ವೀಕರಿಸಿ ಜನಕರಾಜನ ಮತ್ತು ಅವನ ರಾಜ್ಯ-ಕೋಶಗಳ ಯೋಗ-ಕ್ಷೇಮಗಳನ್ನೂ ಮತ್ತು ಯಜ್ಞದ ನಿರಾತಂಕವಾದ ನಿರ್ವಹಣೆ ಯನ್ನೂ ಕುರಿತು ಪ್ರಶ್ನಿಸಿದರು. ಜನಕನು ವಿಶ್ವಾಮಿತ್ರರ ಕುಶಲಪ್ರಶ್ನೆಗೆ ಯಥೋಚಿತವಾಗಿ ಉತ್ತರಿಸಿದನು. ವಿಶ್ವಾಮಿತ್ರರು ತಮ್ಮನ್ನು ಸ್ವಾಗತಿಸಲು ರಾಜನೊಡನೆ ಆಗಮಿಸಿದ್ದ ಅಧ್ವರ್ಯುವೇ ಮೊದಲಾದ ಋತ್ವಿಜರನ್ನೂ ಪುರೋಹಿತನಾದ ಶತಾನಂದನನ್ನೂ ನೋಡಿ, ಅವರ ದರ್ಶನಲಾಭದಿಂದ

ಹೆಚ್ಚಾದ ಆನಂದವನ್ನು ಹೊಂದಿ, ಯಥಾಯೋಗ್ಯವಾಗಿ ಅವರೊಡನೆ ವ್ಯವಹರಿಸಿದರು. ಪರಸ್ಪರ ಕುಶಲಪ್ರಶ್ನೆಗಳಾದನಂತರ ಜನಕಮಹಾರಾಜನು ಕೈಮುಗಿದುಕೊಂಡು ವಿಶ್ವಾಮಿತ್ರರಿಗೆ ಹೇಳಿದನು :

"ಭಗವತ್ಸ್ವರೂಪರಾದ ತಾವು ಈ ಮುನಿಪುಂಗವರೊಡನೆ ಇಲ್ಲಿರುವ ಪವಿತ್ರಾಸನಗಳನ್ನು ಅಲಂಕರಿಸಿರಿ."

ಅದರಂತೆ ಮಹಾಮುನಿಗಳಾದ ವಿಶ್ವಾಮಿತ್ರರು ದಿವ್ಯಾಸನದಲ್ಲಿ ಉಪವಿಷ್ಟರಾದರು. ಮಹರ್ಷಿಗಳನ್ನನುಸರಿಸಿ ಶತಾನಂದನೇ ಮೊದಲಾದ ಪುರೋಹಿತರು, ಋತ್ವಿಜರು, ಜನಕರಾಜ ಮತ್ತು ಅವನ ಅಮಾತ್ಯಶ್ರೇಷ್ಠರು ಎಲ್ಲರೂ ಯಥೋಚಿತವಾದ ಆಸನಗಳಲ್ಲಿ ವಿಶ್ವಾಮಿತ್ರರ ಸುತ್ತಲೂ ಕುಳಿತರು. ವಿಶ್ವಾಮಿತ್ರರು ಸುಖಾಸನದಲ್ಲಿ ಕುಳಿತು ಪ್ರಸನ್ನವದನರಾಗಿರುವುದನ್ನು ಕಂಡು ಜನಕರಾಜನು ಹೇಳಿದನು :

"ಮಹಾನುಭಾವರೇ! ಇಂದು ಯಾವ ವಿಧವಾದ ನ್ಯೂನತೆಯೂ ಇಲ್ಲದ ಯಜ್ಞಸಮೃದ್ಧಿಯು ದೇವತೆಗಳಿಂದ ಅನುಗ್ರಹಿಸಲ್ಪಟ್ಟಿದೆ. ಭಗವತ್ಸ್ವರೂಪರಾದ ತಮ್ಮ ದರ್ಶನದಿಂದಾಗಿ ಯಜ್ಞದ ಪೂರ್ಣಫಲವು ಪ್ರಾಪ್ತವಾದಂತಾಯಿತು. ತಾವು ಈ ಮುನಿಪುಂಗವರೊಡನೆ ನನ್ನ ಯಜ್ಞಶಾಲೆಗೆ ದಯಮಾಡಿಸಿ ನನ್ನನ್ನು ಅನುಗ್ರಹಿಸಿದ್ದೀರಿ. ನಾನಿಂದು ನಿಶ್ಚಯವಾಗಿಯೂ ಧನ್ಯನು. ಈಗ ನಾನು ಆರಂಭಿಸಿರುವ ಯಜ್ಞದ ಸುತ್ಯಾಹೋಮಕ್ಕೆ ಹನ್ನೆರಡು ದಿವಸಗಳು ಉಳಿದಿವೆಯೆಂದು ಶ್ರೌತಪ್ರಯೋಗಪರಿಣತರು ಹೇಳಿದ್ದಾರೆ. ಹನ್ನೆರಡು ದಿವಸಗಳು ಕಳೆದನಂತರ ಸುತ್ಯಾಹೋಮವು ನಡೆಯಲಿದೆ. ಆ ಹೋಮದಲ್ಲಿ ಹವಿರ್ಭಾಗಗಳನ್ನು ಸ್ವೀಕರಿಸಲು ದೇವತೆಗಳು ಪ್ರತ್ಯಕ್ಷವಾಗಿ ಬರುವುದನ್ನು ತಾವೂ ಕಾಣಬಹುದು."

ಜನಕರಾಜನು ಸಂತಸದಿಂದ ಕೂಡಿದ ಮುಖಾರವಿಂದವುಳ್ಳವನಾಗಿ ವಿಶ್ವಾಮಿತ್ರಮಹರ್ಷಿಗಳಿಗೆ ಹೀಗೆ ಹೇಳಿ ಬದ್ಧಾಂಜಲಿಯಾಗಿ ಪುನಃ ಅವರನ್ನು ಪ್ರಶ್ನಿಸಿದನು :

"ಮಹರ್ಷಿಗಳೇ! ನಿಮಗೆ ಮಂಗಳವಾಗಲಿ. ದೇವತೆಗಳಿಗಿರುವ ಪರಾಕ್ರಮಕ್ಕೆ ಸಮಾನವಾದ ಪರಾಕ್ರಮವುಳ್ಳ, ಆನೆಯಂತೆ ವೀರಮಂದಗತಿ

ಯುಳ್ಳ, ಸಿಂಹದಂತೆ ಅಪ್ರತಿಹತವಾದ ಗಮನವುಳ್ಳ, ಶಾರ್ದೂಲದಂತೆ ದುರ್ಧರ್ಷರಾದ, ವೃಷಭದಂತೆ ಉನ್ನತವಾದ ಹೆಗಲುಗಳುಳ್ಳ, ವೀರರಾದ, ಪದ್ಮಪತ್ರದಂತೆ ವಿಶಾಲವಾದ ಕಣ್ಣುಗಳುಳ್ಳ, ಖಡ್ಗವನ್ನೂ ಬಿಲ್ಲು-ಬತ್ತಳಿಕೆ ಗಳನ್ನೂ ಧರಿಸಿರುವ, ಅಶ್ವಿನೀದೇವತೆಗಳಿಗೆ ಅನುರೂಪವಾದ ರೂಪಾತಿ ಶಯವುಳ್ಳ, ಪ್ರಾಪ್ತವಯಸ್ಕರಾದ, ದೇವಲೋಕದಿಂದ ಭೂಲೋಕಕ್ಕೆ ಸ್ವೇಚ್ಛೆ

ಯಿಂದ ಬಂದಿರುವ ದೇವತೆಗಳೋಪಾದಿಯಲ್ಲಿರುವ ಈ ಸುಕುಮಾರರು ಯಾರು? ಇವರು ಕಾಲ್ನಡಿಗೆಯಲ್ಲಿಯೇ ನಮ್ಮ ದೇಶಕ್ಕೆ ಬರಲು ಕಾರಣ ವಾದರೂ ಏನು? ಈ ಸುಕುಮಾರರು ಇಷ್ಟು ದೂರ ಹೇಗೆ ನಡೆದು ಬಂದರು? ಇವರು ಯಾವ ಪುಣ್ಯಪುರುಷನ ಮಕ್ಕಳು? ಇವೆಲ್ಲವನ್ನೂ ವಿಸ್ತಾರವಾಗಿ ತಿಳಿಸಿರಿ. ಸೂರ್ಯ-ಚಂದ್ರರು ಆಕಾಶವನ್ನು ಅಲಂಕರಿಸುವಂತೆ

ಇವರಿಂದು ನಮ್ಮ ದೇಶವನ್ನು ಅಲಂಕರಿಸಿದ್ದಾರೆ. ರೂಪ-ಯೌವನ-ಲಾವಣ್ಯಗಳಲ್ಲಿಯೂ, ಒಳ-ಹೊರ ವ್ಯಾಪಾರಗಳಲ್ಲಿಯೂ ಇವರಿಬ್ಬರೂ ಪರಸ್ಪರ ವಾಗಿ ಅನುರೂಪರಾಗಿದ್ದಾರೆ. ಹೀಗೆ ಪರಸ್ಪರವಾಗಿ ಅತ್ಯಂತ ಸಮತೆಯನ್ನು ಹೊಂದಿರುವ, ಕಾಕಪಕ್ಷಧರರಾದ, ವೀರರಾದ ಇವರು ಯಾರೆಂಬುದನ್ನು ತಿಳಿಯುವ ಅಭಿಲಾಷೆಯು ನನಗಿದೆ."

ಮಹಾತ್ಮನಾದ ಜನಕರಾಜನ ಮಾತುಗಳನ್ನು ಕೇಳಿ, ವಿಶ್ವಾಮಿತ್ರರು–"ಜನಕರಾಜ! ಈ ಸುಕುಮಾರರು ಅಯೋಧ್ಯಾಧಿಪತಿಯಾದ ದಶರಥನ ಮಕ್ಕಳು"–ಎಂದು ಹೇಳಿ, ರಾಮ-ಲಕ್ಷ್ಮಣರ ಸೂಕ್ಷ್ಮ ಪರಿಚಯವನ್ನು ಮಾಡಿಕೊಟ್ಟರು. ಅನಂತರ ಜನಕರಾಜನ ಉಳಿದ ಪ್ರಶ್ನೆಗಳಿಗೆ ಉತ್ತರವೀಯುತ್ತಾ–ರಾಮ-ಲಕ್ಷ್ಮಣರನ್ನು ಸಿದ್ಧಾಶ್ರಮಕ್ಕೆ ಕರೆತಂದುದು, ಅಲ್ಲಿ ಅವರು ಮಾಡಿದ ರಾಕ್ಷಸರ ವಧೆ ಮತ್ತು ಯಜ್ಞರಕ್ಷಣೆ, ಸಾವಿರಾರು ರಾಕ್ಷಸರಿಂದ ನಿಬಿಡವಾದ ಕಾಡುಗಳಲ್ಲಿ ನಿರ್ಭಯರಾಗಿ ಋಷಿಸಮೂಹವನ್ನು ರಕ್ಷಿಸುತ್ತಾ ಪ್ರಯಾಣ ಮಾಡಿದುದು, ವಿಶಾಲಾನಗರಿಯ ದರ್ಶನ ಮತ್ತು ಸುಮತಿಯಿಂದ ಆತಿಥ್ಯ ಸ್ವೀಕಾರ, ಮಿಥಿಲೋಪವನದಲ್ಲಿ ಅಹಲ್ಯಾದರ್ಶನ ಮತ್ತು ಶಾಪವಿಮೋಚನೆ, ಮಹರ್ಷಿಗೌತಮರೊಡನೆ ಸಮಾಗಮ–ಇವೆಲ್ಲವನ್ನೂ ವಿಸ್ತಾರವಾಗಿ ತಿಳಿಸಿ, ಅಪೂರ್ವವಾದ ಮಹಾಧನುಸ್ಸಿನ ಬಲವನ್ನು ಪರೀಕ್ಷಿಸಲೋಸುಗ ರಾಮ-ಲಕ್ಷ್ಮಣರು ಮಿಥಿಲಾಪಟ್ಟಣಕ್ಕೆ ಬಂದಿರುವರೆಂಬುದನ್ನೂ ಜನಕರಾಜನಿಗೆ ವಿಶ್ವಾಮಿತ್ರರು ತಿಳಿಸಿ ವಿರಮಿಸಿದರು.

೫೦ನೆಯ ಸರ್ಗವು ಮುಗಿಯಿತು.

ಬಾಲಕಾಂಡ ೫೧ನೆಯ ಸರ್ಗ

ಶತಾನಂದನ ಪ್ರಶ್ನೆ: ಶ್ರೀರಾಮನಿಂದಾದ ಅಹಲ್ಯೋದ್ಧಾರವನ್ನು ವಿಶ್ವಾಮಿತ್ರರು ತಿಳಿಸಿದುದು : ಶತಾನಂದನು ಶ್ರೀರಾಮನನ್ನು ಅಭಿನಂದಿಸಿದುದು : ಶತಾನಂದನಿಂದ ವಿಶ್ವಾಮಿತ್ರ ಚರಿತ್ರೆಯ ಕಥನ

ತಸ್ಯ ತದ್ವಚನಂ ಶ್ರುತ್ವಾ ವಿಶ್ವಾಮಿತ್ರಸ್ಯ ಧೀಮತಃ ।
ಹೃಷ್ಟರೋಮಾ ಮಹಾತೇಜಾಃ ಶತಾನನ್ದೋ ಮಹಾತಪಾಃ ॥೧॥

ವಿಶ್ವಾಮಿತ್ರರು ಹೇಳಿದ ಅಹಲ್ಯಾಶಾಪವಿಮೋಚನೆಯ ವೃತ್ತಾಂತವನ್ನು ಕೇಳಿ ಜನಕರಾಜನ ಪುರೋಹಿತನಾದ, ಗೌತಮಮಹರ್ಷಿಯ ಜ್ಯೇಷ್ಠಪುತ್ರನಾದ, ಮಹಾತಪಸ್ವಿಯಾದ, ಅಪೂರ್ವತೇಜೋವಿಶಿಷ್ಟನಾಗಿದ್ದ ಶತಾನಂದನಿಗೆ ರೋಮಾಂಚನವಾಯಿತು. ಕಣ್ಣುಗಳಿಂದ ಆನಂದಬಾಷ್ಪಗಳುದುರಿದುವು. ತಮ್ಮ ತಾಯಿಯ ಶಾಪವಿಮೋಚನೆಮಾಡಿದ, ಮಹಾನುಭಾವನಾದ, ದಿವ್ಯರೂಪನಾದ ರಾಮನನ್ನು ಕಂಡು ಅತ್ಯಾಶ್ಚರ್ಯಭರಿತನಾದನು. ಸುಖಾಸೀನರಾಗಿ ಕುಳಿತಿದ್ದ ರಾಮ-ಲಕ್ಷ್ಮಣರನ್ನು ವಿಸ್ಮಯಾನ್ವಿತನಾಗಿ ನೋಡುತ್ತಾ ವಿಶ್ವಾಮಿತ್ರರಿಗೆ ಹೇಳಿದನು :

"ಮುನಿಪುಂಗವರೇ! ಸಹಸ್ರವರ್ಷಪರ್ಯಂತವಾಗಿ ಕೇವಲ ವಾಯುಭಕ್ಷಳಾಗಿದ್ದು, ನಿರಾಹಾರಳಾಗಿ, ಭಸ್ಮಶಾಯಿನಿಯಾಗಿ ತಪಶ್ಚರಣೆಮಾಡುತ್ತಿದ್ದ, ಯಶಸ್ವಿನಿಯಾದ ನಮ್ಮ ತಾಯಿಯನ್ನು ನೀವು ಮಹಾನುಭಾವನಾದ, ರಾಜಪುತ್ರನಾದ ಈ ರಾಮನಿಗೆ ತೋರಿಸಿದಿರಾ? ಪುರುಷೋತ್ತಮನಾದ ಇವನ ದಿವ್ಯದರ್ಶನವಾದೊಡನೆಯೇ ಮಹಾತೇಜಸ್ವಿನಿಯಾದ, ಯಶಸ್ವಿನಿಯಾದ, ಪರಮಪೂಜ್ಯಳಾದ ನಮ್ಮ ತಾಯಿಯು ಸಕಲಜಗದ್ವಂದ್ಯನಾದ ರಾಮನಿಗೆ ಕಂದ-ಮೂಲ-ಫಲಗಳನ್ನಿತ್ತು ಯಥಾವಿಧಿಯಾಗಿ ಸತ್ಕರಿಸಿದಳೇ? ದೇವೇಂದ್ರನು ನಮ್ಮ ತಾಯಿಯ ವಿಷಯದಲ್ಲಿ ಮಾಡಿದ ಅಪಚಾರವೇ ಮೊದಲಾದ ಪೂರ್ವವೃತ್ತಾಂತಗಳೆಲ್ಲವನ್ನೂ ಮಹಾನುಭಾವನಾದ ರಾಮನಿಗೆ ವಿಸ್ತಾರವಾಗಿ ಹೇಳಿದಿರಾ? ರಾಮಸಂದರ್ಶನವಾದ ಬಳಿಕ ನನ್ನ ತಾಯಿಯು ಶಾಪವಿಮುಕ್ತಳಾಗಿ, ಪವಿತ್ರಾತ್ಮಳಾಗಿ ನನ್ನ ತಂದೆಯಾದ ಗೌತಮರೊಡನೆ ಸೇರಿದಳೇ? ನನ್ನ ಗುರುವಾದ (ತಂದೆಯಾದ) ಗೌತಮರು ರಾಮನನ್ನು ಸತ್ಕರಿಸಿದರೇ? ಅನಂತರ ತಾನೇ ರಾಮನಿಲ್ಲಿಗೆ ಬಂದಿರುವುದು? ರಾಮನ ದಿವ್ಯದರ್ಶನದಿಂದ ನನ್ನ ತಾಯಿಯ ಶಾಪವಿಮೋಚನೆಯಾದೊಡನೆಯೇ ಮಿಥಿಲೋಪವನಕ್ಕೆ ಆಗಮಿಸಿದ ರಾಮನು ಶಾಂತಚಿತ್ತನಾದ ನನ್ನ ತಂದೆಗೆ ಅಭಿವಾದನ ಮಾಡಿದನೇ? ಇವೆಲ್ಲವನ್ನೂ ವಿಸ್ತಾರವಾಗಿ ನನಗೆ ತಿಳಿಸಿರಿ."

ವಾಕ್ಯಕೋವಿದನಾದ ಶತಾನಂದನ ಮಾತುಗಳನ್ನು ಕೇಳಿ ವಾಕ್ಯಜ್ಞರಾದ ವಿಶ್ವಾಮಿತ್ರರು ಹೇಳಿದರು :

"ಮುನಿಶ್ರೇಷ್ಠನೇ! ಯಾವ ಸಮಯದಲ್ಲಿ ಏನು ನಡೆಯಬೇಕೋ ಅದೆಲ್ಲವೂ ಯಥಾಕ್ರಮವಾಗಿಯೇ ನಡೆಯಿತು. ನಾನು ಯಾವ ಕರ್ತವ್ಯವನ್ನು ಮಾಡಬೇಕಾಗಿದ್ದಿತೋ–ವಿಧಿಸಂಕಲ್ಪಿತವಾದ ಆ ಕರ್ತವ್ಯವನ್ನು ಸ್ವಲ್ಪವಾದರೂ ನ್ಯೂನತೆಯಿಲ್ಲದೆ ಪೂರ್ಣಗೊಳಿಸಿರುವೆನು. ಇದರ ಫಲವಾಗಿ–ಪರಶುರಾಮನ ತಾಯಿಯಾದ ರೇಣುಕಾದೇವಿಯು ಯಾವ ರೀತಿಯಲ್ಲಿ ಪುನಃ ಜಮದಗ್ನಿಯನ್ನು ಸೇರಿದಳೋ–ಅದೇ ರೀತಿಯಲ್ಲಿ ನಿನ್ನ ತಾಯಿಯಾದ ಅಹಲ್ಯಾದೇವಿಯೂ ಗೌತಮನನ್ನು ಸೇರಿದಳು."

ಪ್ರಾಜ್ಞರಾದ ವಿಶ್ವಾಮಿತ್ರರ ಕರ್ಣಾನಂದಕರವಾದ ಮಾತುಗಳನ್ನು ಕೇಳಿ ಮಹಾತೇಜಸ್ವಿಯಾದ ಶತಾನಂದನು ರಾಮನಿಗೆ ಹೇಳಿದನು :

"ನರಶ್ರೇಷ್ಠನೇ! ರಾಘವ! ಅಪರಾಜಿತರಾದ ವಿಶ್ವಾಮಿತ್ರರೊಡನೆ ನೀನಿಂದು ಇಲ್ಲಿಗೆ ಆಗಮಿಸಿರುವುದು ನಮ್ಮ ಭಾಗ್ಯವೇ ಸರಿ. ನಿನಗೆ ಸ್ವಾಗತವು. ಇವರು ಅಘಟಿತಘಟನಾಸಾಮರ್ಥ್ಯವುಳ್ಳವರು. ಇತರರಿಂದ ಯೋಚಿಸಲಾಗದ ಕಾರ್ಯವನ್ನೂ ಮಾಡಿತೋರಿಸುವ ಪೌರುಷವುಳ್ಳವರು. ತಪಸ್ಸಿನಿಂದಲೇ ಬ್ರಹ್ಮರ್ಷಿಗಳಾದವರು. ಇವರ ಪ್ರಭಾವವು ಅಪರಿಮಿತವಾದುದು. ಇವರ ಪ್ರಭಾವವೆಷ್ಟೆಂಬುದನ್ನು ಅಳೆಯಲು ಯಾರಿಂದಲೂ ಸಾಧ್ಯವಿಲ್ಲ. ಮಹಾತೇಜಸ್ವಿಗಳಾದ, ಮಹಾತಪಸ್ವಿಗಳಾದ ವಿಶ್ವಾಮಿತ್ರರು ನಿನಗೆ ಪರಮಹಿತಪ್ರದರೆಂದು ತಿಳಿ. ಇವರು ನಿನಗೆ ರಕ್ಷಕರಾಗಿರುವರು. ನಿಶ್ಚಯವಾಗಿಯೂ ನಿನಗಿಂತಲೂ ಅದೃಷ್ಟಶಾಲಿಗಳು ಈ ಪ್ರಪಂಚದಲ್ಲಿಯೇ ಯಾರೂ ಇರುವುದಿಲ್ಲ. ಮಹಾತ್ಮರಾದ ಇವರ ತಪೋಬಲವು ಎಂತಹುದು? ಭವ್ಯವಾದ ಚರಿತ್ರೆಯೇನು? ಇವೆಲ್ಲವನ್ನೂ ವಿಸ್ತಾರವಾಗಿ ಹೇಳುವೆನು, ಕೇಳು:

ಇವರು ಹಿಂದೆ ಧರ್ಮಾತ್ಮರಾಗಿ, ಸಕಲವಿದ್ಯಾಪಾರಂಗತರಾಗಿ, ಯಾವಾಗಲೂ ಪ್ರಜೆಗಳ ಹಿತಚಿಂತಕರಾಗಿ, ಶತ್ರುಧ್ವಂಸಕರಾಗಿ ಅನೇಕ ವರ್ಷಗಳ ಕಾಲ ಧರ್ಮದಿಂದ ರಾಜ್ಯಪಾಲನೆಮಾಡುತ್ತಿದ್ದರು. ಈ ಮಹಾನುಭಾವರ ವಂಶಾವಳಿಯನ್ನು ಹೇಳುವೆನು ಕೇಳು, ರಾಮ! ಪ್ರಜಾಪತಿಬ್ರಹ್ಮನಿಗೆ ಕುಶನೆಂಬ ಮಾನಸಪುತ್ರನಿದ್ದನು. ಅವನು ಭೂಪಾಲನೆಗಾಗಿಯೇ ಬ್ರಹ್ಮನಿಂದ

ನಿಯೋಜಿಸಲ್ಪಟ್ಟು ಭೂಪತಿಯಾದನು. ಧಾರ್ಮಿಕನಾದ ಬಲಶಾಲಿಯಾದ ಕುಶನಾಭನೆಂಬುವನು ಅವನ ಮಗ. ಕುಶನಾಭನಿಗೆ ಸುಪ್ರಸಿದ್ಧನಾದ ಗಾಧಿ ಎಂಬ ಮಗನು ಹುಟ್ಟಿದನು. ಮಹಾನುಭಾವನಾದ ಗಾಧಿಯ ಪುತ್ರರೇ ಮಹರ್ಷಿಗಳಾದ ಈ ವಿಶ್ವಾಮಿತ್ರರು. ನಾನು ಹಿಂದೆಯೇ ಹೇಳಿದಂತೆ ಮಹಾ ಬಲಶಾಲಿಗಳಾದ ಇವರು ಅನೇಕ ಸಾವಿರ ವರ್ಷಗಳವರೆಗೆ ಆನುವಂಶಿಕವಾಗಿ ಪ್ರಾಪ್ತವಾದ ಈ ಭೂಮಿಯನ್ನು ಧರ್ಮದಿಂದ ಪರಿಪಾಲನೆಮಾಡುತ್ತಿದ್ದರು. ಒಮ್ಮೆ ಇವರು ತಮ್ಮ ಅಕ್ಷೌಹಿಣೀಸೇನೆಯನ್ನು ಸಿದ್ಧಮಾಡಿಕೊಂಡು ವಿಜಯ ಯಾತ್ರೆಗಾಗಿ ಭೂಪ್ರದಕ್ಷಿಣೆಮಾಡಲು ಹೊರಟರು. ಅನೇಕಾನೇಕಪಟ್ಟಣ ಗಳನ್ನೂ, ದೇಶಗಳನ್ನೂ, ನದೀ-ನದಗಳನ್ನೂ, ಪರ್ವತ-ಗಿರಿ-ದುರ್ಗ ಗಳನ್ನೂ, ಮಹಾರಣ್ಯಗಳನ್ನೂ, ಮಹರ್ಷಿಗಳಿಂದ ಸಂಸೇವ್ಯವಾದ ಆಶ್ರಮ ಗಳನ್ನೂ ದಾಟಿಕೊಂಡು, ಕಡೆಗೆ ವಸಿಷ್ಠಾಶ್ರಮಕ್ಕೆ ಆಗಮಿಸಿದರು. ಆ ಆಶ್ರಮದ ಶೋಭೆಯು ಅವರ್ಣನೀಯವಾಗಿತ್ತು. ನಾನಾವಿಧವಾದ ಪುಷ್ಪಲತೆ ಗಳಿಂದಲೂ ವೃಕ್ಷಗಳಿಂದಲೂ ಸಮೃದ್ಧವಾಗಿದ್ದಿತು. ನಾನಾವಿಧವಾದ ಮೃಗ ಗಳಿಂದ ತುಂಬಿದ್ದಿತು. ಸಿದ್ಧ-ಚಾರಣ-ದೇವ-ದಾನವ-ಗಂಧರ್ವರು ಗಳಿಂದಲೂ, ಕಿನ್ನರರುಗಳಿಂದಲೂ ಆ ದಿವ್ಯಾಶ್ರಮವು ಪರಿಶೋಭಿಸು ತ್ತಿದ್ದಿತು. ಪ್ರಶಾಂತವಾದ ಜಿಂಕೆಗಳಿಂದ ಅದು ತುಂಬಿದ್ದಿತು. ಅನೇಕಾನೇಕ ಶ್ರೋತ್ರಿಯರಾದ ಬ್ರಾಹ್ಮಣರು ಅಲ್ಲಿದ್ದರು. ಆ ದಿವ್ಯಾಶ್ರಮದಲ್ಲಿ ಅನೇಕ ಬ್ರಹ್ಮರ್ಷಿಗಳೂ ದೇವರ್ಷಿಗಳೂ ತಪಸ್ಸನ್ನು ಮಾಡುತ್ತಿದ್ದರು. ಅಲ್ಲಿ ಅಗ್ನಿ ಸದೃಶರಾದ ತೇಜಸ್ವಿಗಳಾದ ವೇದಾಧ್ಯಯನಸಂಪನ್ನರಿದ್ದರು. ಚತುರ್ಮುಖ ನಿಗೆ ಸಮಾನರಾದ ಮಹಾಮಹಿಮರಿಂದ ಆ ಆಶ್ರಮವು ಪರಿಪೂರ್ಣವಾಗಿ ದ್ದಿತು. ಅವರಲ್ಲಿ ಕೆಲವರು ಕೇವಲ ನೀರನ್ನೇ ಆಹಾರವನ್ನಾಗಿ ತೆಗೆದುಕೊಳ್ಳು ತ್ತಿದ್ದರು. ಕೆಲವರು ಗಾಳಿಯನ್ನೇ ಆಹಾರರೂಪದಲ್ಲಿ ಸೇವಿಸುತ್ತಾ ತಪಶ್ಚರಣೆ ಯಲ್ಲಿ ನಿರತರಾಗಿದ್ದರು. ಕೆಲವರು ಕೆಳಗುದುರಿದ ಮರದ ತರಗೆಲೆಗಳನ್ನೇ ತಿಂದು ಜೀವಿಸುತ್ತಿದ್ದರು. ಕೆಲವರು ಕಂದ-ಮೂಲ-ಫಲಗಳನ್ನು ಭುಂಜಿಸು ತ್ತಿದ್ದರು. ಅವರೆಲ್ಲರೂ ಅಂತರಿಂದ್ರಿಯ-ಬಹಿರಿಂದ್ರಿಯನಿಗ್ರಹವುಳ್ಳವರೂ, ಜಿತಕ್ರೋಧರೂ ಆಗಿದ್ದರು. ಅಂತಹ ಋಷಿ-ಮಹರ್ಷಿಗಳಿಂದಲೂ ವಾಲ ಖಿಲ್ಯರಿಂದಲೂ,* ಜಪ-ಹೋಮಪರಾಯಣರಾದ ವೈಖಾನಸರಿಂದಲೂ ಆ

* ಬ್ರಹ್ಮನ ಬಾಲದಿಂದ ಹುಟ್ಟಿದವರಿಗೆ ವಾಲಖಿಲ್ಯರೆಂದೂ, ಬ್ರಹ್ಮನ ಉಗುರಿ

ವಸಿಷ್ಠಾಶ್ರಮವು ಶೋಭಾಯಮಾನವಾಗಿದ್ದಿತು. ಹೆಚ್ಚೇನು ಹೇಳಲಿ, ರಾಮ! ನಿಶ್ಚಯವಾಗಿಯೂ ವಸಿಷ್ಠಾಶ್ರಮವು ಮತ್ತೊಂದು ಬ್ರಹ್ಮಲೋಕದಂತೆಯೇ ವಿರಾಜಮಾನವಾಗಿದ್ದಿತು. ಅಂತಹ ಪರಮಾದ್ಭುತವಾದ ದಿವ್ಯಾಶ್ರಮವನ್ನು ವಿಜಯಿಗಳಲ್ಲಿ ಶ್ರೇಷ್ಠರಾದ, ಮಹಾಬಲಿಷ್ಠರಾದ ವಿಶ್ವಾಮಿತ್ರರು ಸಂದರ್ಶಿಸಿದರು.

೫೧ನೆಯ ಸರ್ಗವು ಮುಗಿಯಿತು.

ವಸಿಷ್ಠ-ವಿಶ್ವಾಮಿತ್ರರ ಕುಶಲಪ್ರಶ್ನೆಗಳು : ಸೈನ್ಯದೊಡನೆ ಬಂದಿರುವ ವಿಶ್ವಾಮಿತ್ರರ ಆತಿಥ್ಯಕ್ಕಾಗಿ ಸಕಲಸಂಭಾರಗಳನ್ನೂ ಸಿದ್ಧಪಡಿಸುವಂತೆ ಶಬಲಾಧೇನುವಿಗೆ ವಸಿಷ್ಠರ ಆದೇಶ

ಸ ದೃಷ್ಟ್ವಾ ಪರಮಪ್ರೀತೋ ವಿಶ್ವಾಮಿತ್ರೋ ಮಹಾಬಲಃ ।
ಪ್ರಣಮ್ಯ ವಿಧಿನಾ ವೀರೋ ವಸಿಷ್ಠಂ ಜಪತಾಂ ವರಮ್ ॥೧॥

ಮಹಾಬಲಶಾಲಿಗಳಾದ ವಿಶ್ವಾಮಿತ್ರರು ಜಪಮಾಡುವವರಲ್ಲಿ ಪರಮ ಶ್ರೇಷ್ಠರಾದ ವಸಿಷ್ಠರನ್ನು ಸಂದರ್ಶಿಸಿ ಪರಮಸಂತುಷ್ಟರಾಗಿ ವಿಧಿಪೂರ್ವಕ ವಾಗಿ ನಮಸ್ಕರಿಸಿದರು. ವಸಿಷ್ಠರು-ವಿನಯಪೂರ್ವಕವಾಗಿ ಪ್ರಣಾಮ ಮಾಡಿದ ವಿಶ್ವಾಮಿತ್ರರನ್ನು ಆದರಪೂರ್ವಕವಾಗಿ ಸ್ವಾಗತಿಸಿ, ಅವರಿಗೆ ಯಥೋಚಿತವಾದ ಆಸನವನ್ನಿತ್ತರು. ಸುಖಾಸನದಲ್ಲಿ ಉಪವಿಷ್ಟರಾದ, ಧೀಮಂತರಾದ ವಿಶ್ವಾಮಿತ್ರರಿಗೆ ವಸಿಷ್ಠರು ಯಥಾಯೋಗ್ಯವಾಗಿ ಕಂದ-ಮೂಲ-ಫಲಗಳನ್ನಿತ್ತು ಸತ್ಕರಿಸಿದರು. ವಿಶ್ವಾಮಿತ್ರರು ವಸಿಷ್ಠರ ಸತ್ಕಾರವನ್ನು ಸ್ವೀಕರಿಸಿ ಕುಶಲಪ್ರಶ್ನೆ ಮಾಡಿದರು :

"ಮಹರ್ಷಿಗಳೇ! ತಮ್ಮ ತಪಶ್ಚರಣೆಯೂ, ಅಗ್ನಿಹೋತ್ರಾದಿಗಳೂ ನಿರ್ವಿಘ್ನವಾಗಿ ನೆರವೇರುತ್ತಿವೆಯೇ? ತಮ್ಮ ಶಿಷ್ಯರು ಯಾವ ವಿಧವಾದ

ನಿಂದ ಹುಟ್ಟಿದವರಿಗೆ ವೈಖಾನಸರೆಂದೂ ಹೆಸರು. ಯೇ ನಖಾಃ । ತೇವೈಖಾನಸಾಃ । ಯೇ ವಾಲಾಃ। ತೇ ವಾಲಖಿಲ್ಯಾಃ [ತೈತ್ತರೀಯ ಆರಣ್ಯಕ]

ಉಪದ್ರವಗಳೂ ಇಲ್ಲದೇ ಅಧ್ಯಯನ-ಅಧ್ಯಾಪನಗಳಲ್ಲಿ ನಿರತರಾಗಿರುವರೇ? ಈ ಆಶ್ರಮದಲ್ಲಿ ದೇವತಾಪ್ರೀತ್ಯರ್ಥವಾಗಿ ಹೋಮಮಾಡಲು ಸಾಧನವಾದ ವನಸ್ಪತಿಗಳು ಸಮೃದ್ಧವಾಗಿವೆಯೇ?"

ಅದಕ್ಕುತ್ತರವಾಗಿ ವಸಿಷ್ಠರು ಹೇಳಿದರು :

"ಮಹಾರಾಜ! ಯಾವ ವಿಧವಾದ ಈತಿಬಾಧೆಗಳೂ ಇಲ್ಲದೇ ಜಪ, ತಪಸ್ಸು, ಅಗ್ನಿಹೋತ್ರಾದಿಗಳು ನಡೆಯುತ್ತಿವೆ. ಶಿಷ್ಯರು ಕೂಡ ಯಾವ ತೊಂದರೆಗಳೂ ಇಲ್ಲದೇ ಷಟ್ಕರ್ಮನಿರತರಾಗಿದ್ದಾರೆ. ಈ ಆಶ್ರಮದಲ್ಲಿ ಸಕಲವಿಧವಾದ ವನಸ್ಪತಿಗಳೂ ಸಮೃದ್ಧವಾಗಿವೆ. ಯಾವುದಕ್ಕೂ ಕೊರತೆಯಿಲ್ಲ."

ಬಳಿಕ ಮಹಾತಪಸ್ವಿಗಳಾದ, ಜಪಮಾಡುವವರಲ್ಲಿ ಶ್ರೇಷ್ಠರಾದ, ಬ್ರಹ್ಮಮಾನಸಪುತ್ರರಾದ ವಸಿಷ್ಠರು ಸುಖಾಸೀನರಾಗಿ ಕುಳಿತಿದ್ದ ವಿಶ್ವಾಮಿತ್ರರನ್ನು ಪ್ರಶ್ನಿಸಿದರು :

"ಧರ್ಮನಿಷ್ಠನಾದ ವಿಶ್ವಾಮಿತ್ರನೇ! ನೀನು ಕ್ಷೇಮವಷ್ಟೇ? ನಿನ್ನ ಭಾರ್ಯಾ-ಪುತ್ರ-ಬಂಧು-ಮಿತ್ರರು ಕುಶಲಿಗಳಾಗಿರುವರೇ? ನಾಲ್ಕು* ವಿಧವಾದ ರಾಜವೃತ್ತಗಳನ್ನು ಅನುಸರಿಸಿ ಪ್ರಜೆಗಳನ್ನು ಧರ್ಮದಿಂದ ಪರಿಪಾಲಿಸುತ್ತಿರುವೆಯಾ? ನಿನ್ನ ಭೃತ್ಯವರ್ಗದವರನ್ನು ಮಾಸಾಶನಾದಿಗಳಿಂದಲೂ, ಬಹುಮಾನಾದಿಗಳಿಂದಲೂ ಪರಿಪೋಷಿಸುತ್ತಿರುವೆಯಾ? ನಿನ್ನ ಪೋಷಣೆಯಿಂದಾಗಿ ಅವರು ನಿನಗೆ ವಿಧೇಯರಾಗಿಯೂ, ಆಜ್ಞಾನಿರ್ವಾಹಕರಾಗಿಯೂ ಇರುವರೇ? ರಾಜ್ಯಕ್ಕೆ ಉಪಟಳಕೊಡುವ ಶತ್ರುಗಳನ್ನು ಜಯಿಸಿರುವೆಯಾ? ಶತ್ರುಜಯಕ್ಕೆ ಸಾಧನಭೂತವಾದ ಚತುರಂಗಬಲವು ಸರ್ವತೋಮುಖವಾಗಿ ಅಭಿವೃದ್ಧಿ ಹೊಂದಿರುವುದೇ? ಸೈನಿಕರಿಗೆ ಕಾಲ-ಕಾಲಕ್ಕೆ ಮಾಸಾಶನಗಳನ್ನೂ ಬಹುಮಾನಗಳನ್ನೂ ಕೊಡುತ್ತಾ ವಿಧೇಯರಾಗಿರುವಂತೆ ಮಾಡಿರುವೆಯಾ? ಬೊಕ್ಕಸವು ಯಾವಾಗಲೂ ಐಶ್ವರ್ಯದಿಂದ

---

* ನಾಲ್ಕು ವಿಧ ರಾಜವೃತ್ತಗಳು : ನ್ಯಾಯೇನಾರ್ಜನಮರ್ಥಸ್ಯ ವರ್ಧನಂ ಪಾಲನಂ ತಥಾ । **ಸತ್ಪಾತ್ರೇ ಪ್ರತಿಪತ್ತಿಶ್ಚ ರಾಜವೃತ್ತಂ ಚತುರ್ವಿಧಮ್** ॥ ನ್ಯಾಯದಿಂದ ಹಣವನ್ನು ಸಂಪಾದಿಸುವುದು, ವೃದ್ಧಿಗೊಳಿಸುವುದು, ರಕ್ಷಿಸುವುದು ಮತ್ತು ಸತ್ಪಾತ್ರರಲ್ಲಿ ವಿತರಣೆಮಾಡುವುದು.

ಸಮೃದ್ಧವಾಗಿರುವುದೇ? ಪ್ರಜೆಗಳಿಗೆ ತೊಂದರೆಯಾಗದ ರೀತಿಯಲ್ಲಿ, ಅಸಮಾಧಾನವಾಗದ ರೀತಿಯಲ್ಲಿ ರಾಜಾದಾಯವನ್ನು ತೆಗೆದುಕೊಂಡು ಬೊಕ್ಕಸವನ್ನು ತುಂಬುತ್ತಿರುವೆಯಾ? ನಿನ್ನ ಮಿತ್ರರು ಕುಶಲಿಗಳಾಗಿರುವರೇ? ನಿನ್ನ ಮಕ್ಕಳು, ಮೊಮ್ಮಕ್ಕಳೆಲ್ಲರೂ ಕುಶಲಿಗಳಾಗಿರುವರೇ?"

ವಸಿಷ್ಠರು ಕೇಳಿದ ಕುಶಲಪ್ರಶ್ನೆಗಳಿಗೆ ಉತ್ತರವಾಗಿ ಮಹಾತೇಜಸ್ವಿಗಳಾದ ವಿಶ್ವಾಮಿತ್ರರು ವಿನಯಗುಣಕ್ಕೆ ಸಾಗರಪ್ರಾಯರಾದ, ವರಿಷ್ಠರಾದ ವಸಿಷ್ಠರಿಗೆ ಹೇಳಿದರು :

"ಮಹರ್ಷಿಗಳೇ! ತಮ್ಮ ದಿವ್ಯಾನುಗ್ರಹದಿಂದಾಗಿ ಸರ್ವವೂ ಕುಶಲದಿಂದಿರುತ್ತದೆ." ಹೀಗೆ ವಿಶ್ವಾಮಿತ್ರ-ವಸಿಷ್ಠರು ಪರಸ್ಪರವಾಗಿ ಕುಶಲಪ್ರಶ್ನೆಗಳನ್ನು ಮಾಡಿ, ರಾಜ್ಯ-ಕೋಶಗಳಿಗೆ ಸಂಬಂಧಿಸಿದ ಮತ್ತು ತಪೋನುಷ್ಠಾನಕ್ಕೆ ಸಂಬಂಧಿಸಿದ ಅನೇಕ ವಿಷಯಗಳನ್ನು ಪರಸ್ಪರವಾಗಿ ಮಾತನಾಡಿಕೊಳ್ಳುತ್ತಾ ಪರಸ್ಪರ ಸಮಾಗಮದಿಂದ ಸುಪ್ರೀತರಾಗಿ ಬಹಳ ಹೊತ್ತು ಕಳೆದರು. ಮಾತು-ಕತೆಗಳೆಲ್ಲವೂ ಮುಗಿದನಂತರ ಭಗವಾನ್ ವಸಿಷ್ಠರು ನಸುನಗುತ್ತಾ ವಿಶ್ವಾಮಿತ್ರರಿಗೆ ಹೇಳಿದರು :

"ಮಹಾಬಲನಾದ ವಿಶ್ವಾಮಿತ್ರನೇ! ಅಪ್ರಮೇಯನಾದ ನಿನಗೂ ಮತ್ತು ನಿನ್ನ ಅಪಾರಸೈನ್ಯಕ್ಕೂ ಯಥಾಯೋಗ್ಯವಾಗಿ ಆತಿಥ್ಯಮಾಡಲು ಬಯಸಿದ್ದೇನೆ. ನನ್ನ ಈ ಆತಿಥ್ಯವನ್ನು ಸ್ವೀಕರಿಸು. ನೀನು ರಾಜನೂ ಅತಿಥಿಶ್ರೇಷ್ಠನೂ ಆಗಿರುವೆ. ಅಯಾಚಿತವಾಗಿ ಬಂದಿರುವ ನಿನ್ನನ್ನು ಪ್ರಯತ್ನ ಪೂರ್ವಕವಾಗಿ ಪೂಜಿಸಿ ಸತ್ಕರಿಸುವುದು ನನ್ನ ಕರ್ತವ್ಯವೂ ಆಗಿದೆ."

ಅದನ್ನು ಕೇಳಿ ಬುದ್ಧಿಶಾಲಿಗಳಾದ ವಿಶ್ವಾಮಿತ್ರರು ಹೇಳಿದರು :

"ಮಹರ್ಷಿಗಳೇ! ನೀವು ಹೇಳುತ್ತಿರುವ ಈ ಪ್ರಿಯವಾಕ್ಯದಿಂದಲೇ ನಾನು ಸಂತುಷ್ಟನಾಗಿದ್ದೇನೆ. ಇದರಿಂದಲೇ ನನ್ನನ್ನು ನೀವು ಸತ್ಕರಿಸಿದಂತಾಗಿರುವುದು. ಮಹಾನುಭಾವರೇ! ನಿಮ್ಮ ಆಶ್ರಮದಲ್ಲಿರುವ ಕಂದ-ಮೂಲ-ಫಲಗಳಿಂದಲೂ, ಅತಿಥಿಗೆ ಯೋಗ್ಯವಾದ ಪಾದ್ಯಾಚಮನೀಯಗಳಿಂದಲೂ ನಾನು ಸುಸತ್ಕೃತನಾದೆನು. ಮೇಲಾಗಿ ತಪೋಧನರಾದ ತಮ್ಮ ದರ್ಶನ ಲಾಭವೇ ನನಗೆ ಪರಮಾನಂದವನ್ನುಂಟುಮಾಡಿದೆ. ಪೂಜಾರ್ಹರಾದ

ತಮ್ಮಿಂದ ನಾನು ಸರ್ವಥಾ ಸತ್ಕೃತನಾಗಿರುವೆನು. ತಪೋಧನರಾದ ತಮ್ಮ ಅನುಗ್ರಹದೃಷ್ಟಿಯು ನನ್ನ ಮೇಲೆ ಅಚಲವಾಗಿರಲಿ. ನಿಮಗೆ ನನ್ನ ಅನಂತಾ ನಂತ ನಮಸ್ಕಾರಗಳು. ನಾನಿನ್ನು ಹೋಗಿಬರುವೆನು."

ಆದಕ್ಕೆ ಪ್ರತಿಯಾಗಿ ಉದಾರಮನಸ್ಕರಾದ ವಸಿಷ್ಠರೂ ನಾಲ್ಕಾರು ಬಾರಿ ಒತ್ತಾಯಪೂರ್ವಕವಾಗಿ ಸತ್ಕಾರವನ್ನು ಪಡೆದುಕೊಂಡೇ ಹೋಗುವಂತೆ ವಿಶ್ವಾಮಿತ್ರರಿಗೆ ಹೇಳಿದರು.

ರಾಘವ! ಕಡೆಗೆ ವಿಶ್ವಾಮಿತ್ರರು ವಸಿಷ್ಠರ ಒತ್ತಾಯಕ್ಕೆ ಮಣಿಯಲೇ ಬೇಕಾಯಿತು.

"ಮುನಿಪುಂಗವರೇ! ತಮ್ಮ ಸಂತೋಷವಿದ್ದಂತಾಗಲಿ"–ಎಂದರು.

ರಾಘವ! ವಿಶ್ವಾಮಿತ್ರರು ವಸಿಷ್ಠರಿಂದ ಸತ್ಕಾರವನ್ನು ಸ್ವೀಕರಿಸಲು ಒಪ್ಪಿದನಂತರ, ಜಪಮಾಡುವವರಲ್ಲಿ ಸರ್ವಶ್ರೇಷ್ಠರಾದ ವಸಿಷ್ಠರು ಪಾಪ ರಹಿತಳಾಗಿದ್ದ, ವಿಚಿತ್ರವರ್ಣದಿಂದ ಕೂಡಿದ್ದ, ತಮ್ಮ ಹೋಮಧೇನುವಾದ ಶಬಲೆಯನ್ನು ಆದರದಿಂದ ಆಹ್ವಾನಿಸಿದರು.

"ಶಬಲೇ! ಮಗಳೇ! ಓಡೋಡಿ ಬಾ!"

ಹೀಗೆ ವಸಿಷ್ಠರು ಕರೆದೊಡನೆಯೇ ಶಬಲೆಯು ವಸಿಷ್ಠರ ಬಳಿಗೆ ಬಂದು ನಿಂತಿತು. ಅದರ ಮೈದಡವುತ್ತಾ ಹೇಳಿದರು :

"ನನ್ನ ಮಾತು ಕೇಳು, ಮಗಳೇ! ಸಾರ್ವಭೌಮನಾದ ವಿಶ್ವಾಮಿತ್ರನು ನಮ್ಮ ಆಶ್ರಮಕ್ಕೆ ಸೈನ್ಯಸಮೇತನಾಗಿ ಬಂದಿರುವನು. ಅವನಿಗೂ ಮತ್ತು ಅವನ ಸೈನ್ಯಕ್ಕೂ ಯಥಾಯೋಗ್ಯವಾದ ಔತಣವನ್ನಿತ್ತು ಸತ್ಕರಿಸಲು ನಾನು ನಿಶ್ಚಯಿಸಿದ್ದೇನೆ. ಅನುಪಮವಾದ ಈ ಔತಣಕ್ಕೆ ಬೇಕಾಗುವ ಸಂಭಾರಗಳೆಲ್ಲ ವನ್ನೂ ನೀನು ಒಡನೆಯೇ ಸಿದ್ಧಪಡಿಸು. ಕಾಮದುಹಳಾದ ದಿವ್ಯಧೇನುವೇ! ಷಡ್ರಸೋಪೇತವಾದ ಔತಣದಲ್ಲಿ ಯಾರು ಯಾರಿಗೆ ಯಾವ ಯಾವ ರಸ ದಲ್ಲಿ ಅಭಿರುಚಿಯಿರುವುದೋ ಅವುಗಳನ್ನು ಅವರವರ ಮುಂದೆ ನನ್ನ ಸಂತೋಷಾರ್ಥವಾಗಿ ಸುರಿಸುವವಳಾಗು. ರಸಯುಕ್ತವಾದ ಅನ್ನದಿಂದಲೂ,

ಭಕ್ಷ್ಯ-ಭೋಜ್ಯಾದಿಗಳಿಂದಲೂ, ಲೇಹ್ಯ-ಚೋಷ್ಯ-ಪಾನೀಯಾದಿಗಳಿಂದಲೂ ಕೂಡಿದ ಅನ್ನರಾಶಿಯನ್ನು ನೀನು ಈಗಲೇ ಇಲ್ಲಿಯೇ ಸೃಷ್ಟಿಸು."

ೞ೨ನೆಯ ಸರ್ಗವು ಮುಗಿಯಿತು.

ಬಾಲಕಾಂಡ ೫೩ನೆಯ ಸರ್ಗ

ಕಾಮಧೇನುವಿನ ಸಹಾಯದಿಂದ ವಸಿಷ್ಠರು ವಿಶ್ವಾಮಿತ್ರರನ್ನೂ ಅವರ ಪರಿವಾರದವರನ್ನೂ ಯಥೋಚಿತವಾಗಿ ಸತ್ಕರಿಸಿದುದು : ವಿಶ್ವಾಮಿತ್ರರು ಕಾಮಧೇನುವನ್ನು ಅಪೇಕ್ಷಿಸಿದುದು : ವಸಿಷ್ಠರ ಅಸಮ್ಮತಿ

ಏವಮುಕ್ತಾ ವಸಿಷ್ಠೇನ ಶಬಲಾ ಶತ್ರುಸೂದನ ।
ವಿದಧೇ ಕಾಮಧುಕ್ಕಾಮಾನ್ಯಸ್ಯ ಯಸ್ಯೇಪ್ಸಿತಂ ಯಥಾ ॥೧॥

ಶತ್ರುಸೂದನನೇ! ವಸಿಷ್ಠರಿಂದ ಹೀಗೆ ಹೇಳಲ್ಪಟ್ಟ, ಇಷ್ಟಾರ್ಥಗಳನ್ನು ಕರೆಯುವ ಸಾಮರ್ಥ್ಯವುಳ್ಳ ಶಬಲೆಯು ಯಾರು-ಯಾರಿಗೆ ಯಾವ ಯಾವ ವಿಧವಾದ ಮತ್ತು ಯಾವ ರುಚಿಯ ಊಟದಲ್ಲಿ ಅಪೇಕ್ಷೆಯಿದೆಯೋ–ಅಂತಹ ದಿವ್ಯವಾದ ಭೋಜನವನ್ನು ಕ್ಷಣಮಾತ್ರದಲ್ಲಿ ಸಿದ್ಧಪಡಿಸಿದಳು. ಕಬ್ಬಿನ ಹಾಲು, ಜೇನುತುಪ್ಪ, ಮೈರೇಯವೆಂಬ* ಸುರೆ, ಶ್ರೇಷ್ಠವಾದ ಆಸವಗಳು, ಬಹುಮೂಲ್ಯವಾದ ಪಾನಕಾದಿಪಾನೀಯಗಳು ಮತ್ತು ನಾನಾವಿಧವಾದ ಅಪೂಪ, ಲಡ್ಡು, ಫೇಣಿಕಾ ಮೊದಲಾದ ಭಕ್ಷ್ಯಗಳೆಲ್ಲವನ್ನೂ ಶಬಲೆಯು ಸಿದ್ಧಪಡಿಸಿದಳು. ಬಿಸಿ-ಬಿಸಿಯಾದ, ಪರ್ವತೋಪಮವಾದ ಅನ್ನರಾಶಿಗಳು ಸಿದ್ಧವಾದುವು. ನಾನಾವಿಧವಾದ ಪಾಯಸಗಳೂ, ತೊವ್ವೆಗಳೂ ಸಿದ್ಧವಾದುವು. ಹಾಲು, ಮೊಸರು ಮತ್ತು ತುಪ್ಪಗಳ ಕಾಲುವೆಗಳನ್ನೇ ಶಬಲೆಯು ಹರಿಸಿದಳು. ಅನೇಕವಿಧವಾದ, ರುಚಿಕರವಾದ ಮತ್ತು

---

* ಮೈರೇಯಂ = ಧಾತಕೀಪುಷ್ಪಗುಡಧಾನಾಮ್ಲುಸಂಹತಮ್ । ಸೀಧುರಿಕ್ಷುರಸೈಃ ಪಕ್ವೈರಪಕ್ವೈರಾಸವೋ ಭವೇತ್ ॥ ಧಾತಕೀಪುಷ್ಪ, ಬೆಲ್ಲ, ಹುರಿದ ಅಕ್ಕಿ–ಇವುಗಳನ್ನು ನೀರಿನಲ್ಲಿ ಹಾಕಿ ಕುದಿಸಿ ತಯಾರಿಸುವ ಸುರೆಗೆ ಮೈರವ ಅಥವಾ ಮೈರೇಯವೆಂದೂ, ಕಬ್ಬಿನ ಹಾಲಿನಿಂದ ಬಟ್ಟಿ ಇಳಿಸಿದ ಸುರೆಗೆ ಸೀಧುವೆಂದೂ, ಅಪಕ್ವವಾದ ಕಬ್ಬಿನ ಹಾಲಿಗೆ ಆಸವವೆಂದೂ ಹೆಸರು.

ಸಿಹಿಯಾದ ಭಕ್ಷ್ಯಗಳಿಂದ ಸಾವಿರಾರು ಬೆಳ್ಳಿಯ ತಟ್ಟೆಗಳು ಪೂರ್ಣವಾಗಿ ದ್ದುವು. ಯಥೇಚ್ಛವಾಗಿ ಬಡಿಸಿದ ರುಚಿಕರವಾದ ಮೃಷ್ಟಾನ್ನವನ್ನು ಊಟ ಮಾಡಿ ವಿಶ್ವಾಮಿತ್ರರ ಸೈನಿಕರು ಪುಷ್ಟರೂ ಮತ್ತು ತುಷ್ಟರೂ ಆದರು. ವಸಿಷ್ಠರು ವಿಶ್ವಾಮಿತ್ರರನ್ನೂ ಮತ್ತು ಅವರ ಪರಿವಾರವನ್ನೂ ಬಹಳ ಚೆನ್ನಾಗಿ ಸತ್ಕರಿಸಿದರು. ವಿಶ್ವಾಮಿತ್ರರೂ ವಸಿಷ್ಠರ ಸತ್ಕಾರದಿಂದ ಸಂತುಷ್ಟರಾದರು. ಅಂತಃಪುರಪರಿವಾರದೊಡನೆಯೂ, ಬ್ರಾಹ್ಮಣಪುರೋಹಿತರೊಡನೆಯೂ, ಅಮಾತ್ಯರೊಡನೆಯೂ, ಮಂತ್ರಿಗಳೊಡನೆಯೂ, ಸೇವಕರೊಡನೆಯೂ ಕುಳಿತು ವಸಿಷ್ಠರ ಆತಿಥ್ಯವನ್ನು ಸ್ವೀಕರಿಸಿದ ವಿಶ್ವಾಮಿತ್ರರು ಪರಮಸಂತುಷ್ಟ ರಾಗಿ, ವಸಿಷ್ಠರಿಗೆ ಹೇಳಿದರು :

"ಬ್ರಾಹ್ಮಣಶ್ರೇಷ್ಠರೇ! ಪೂಜ್ಯರಾದ ತಮ್ಮಿಂದ ನಾನಿಂದು ಸತ್ಕೃತ ನಾದೆನು. ಹೊರಡುವ ಮೊದಲು ಒಂದು ಮಾತನ್ನು ಹೇಳುವೆನು : ಕೇಳಿರಿ. ಒಂದು ಲಕ್ಷ ಗೋವುಗಳನ್ನು ತೆಗೆದುಕೊಂಡು ಈ ಶಬಲೆಯನ್ನು ನನಗೆ ಕೊಡಿರಿ. ಇದು ನಿಶ್ಚಯವಾಗಿಯೂ ಗೋಜಾತಿಗೇ ರತ್ನಪ್ರಾಯವಾಗಿದೆ. ಮೇಲಾಗಿ ರಾಜನು ಯಾವಾಗಲೂ ರತ್ನಗಳ* (ಉತ್ಕೃಷ್ಟವಸ್ತುಗಳ) ಸಂಗ್ರಹಣೆಯಲ್ಲಿ ಆಸಕ್ತನಾಗಿರುವನು. ಆದುದರಿಂದ ನಾನು ನಿಮ್ಮಲ್ಲಿರುವ ಶಬಲೆಯನ್ನು ಬೆಲೆಗೆ ಕೇಳುವುದೂ ಧರ್ಮವಾಗಿದೆ ; ನೀವು ಕೊಡುವುದೂ ಸಾಧುವಾಗಿದೆ."

ರಾಘವ! ಅದಕ್ಕೆ ಉತ್ತರವಾಗಿ ಮುನಿಪುಂಗವರಾದ, ಧರ್ಮಾತ್ಮರಾದ ವಸಿಷ್ಠರು ಮಹೀಪತಿಗೆ ಹೇಳಿದರು :

"ಮಹಾರಾಜ! ಲಕ್ಷ ಗೋವುಗಳ ಬೆಲೆಗೂ ನನ್ನ ಶಬಲೆಯನ್ನು ಕೊಡಲಾರೆ ; ಶತಕೋಟಿ ಗೋವುಗಳ ಬೆಲೆಗೂ ಕೊಡಲಾರೆನು ; ಬೆಳ್ಳಿಯ ರಾಶಿಗಳನ್ನೇ ನನ್ನ ಮುಂದೆ ಸುರಿದರೂ ನಾನು ನನ್ನ ಶಬಲೆಯನ್ನು ಕೊಡುವು ದಿಲ್ಲ. ಮೇಲಾಗಿ, ಕೌಶಿಕ! ಇವಳು ನನ್ನಿಂದ ಬೇರ್ಪಡಲು ಯೋಗ್ಯಳೂ ಅಲ್ಲ. ನಾನಿವಳನ್ನು ಪರಿತ್ಯಾಗಮಾಡುವ ಸಾಧ್ಯತೆಯೂ ಇಲ್ಲ. ಆತ್ಮಜ್ಞಾನಿ

* ರತ್ನ : ಪ್ರತಿಯೊಂದು ಜಾತಿಯಲ್ಲಿಯೂ ಶ್ರೇಷ್ಠವಾದುದು. ಜಾತೌ ಜಾತೌ ಯದುತ್ಕೃಷ್ಟಂ ತದ್ರತ್ನಮಭಿಧೀಯತೇ ।

ಗಳಿಗೆ ಸ್ವಾಭಾವಿಕವಾಗಿಯೇ ಪ್ರಾಪ್ತವಾಗುವ ಶಾಶ್ವತಕೀರ್ತಿಯನ್ನು ಬೇರ್ಪಡಿಸಲು ಹೇಗೆ ಸಾಧ್ಯವಿಲ್ಲವೋ–ಹಾಗೆ ಬ್ರಹ್ಮದತ್ತಳಾದ ಈ ಶಬಲೆಯನ್ನು ನಾನು ಪರಿತ್ಯಜಿಸಲು ಸಮರ್ಥನಲ್ಲ. ಇದೂ ಅಲ್ಲದೇ ಇವಳು ನನ್ನ ನಿತ್ಯ ಜೀವನದಲ್ಲಿ ಸೇರಿಹೋಗಿದ್ದಾಳೆ. ನಾನು ನಿತ್ಯ-ನೈಮಿತ್ತಿಕವಾಗಿ ಮಾಡುವ ಪ್ರತಿಯೊಂದು ಕರ್ಮಕ್ಕೂ ಇವಳೇ ಸಾಧನಭೂತಳಾಗಿದ್ದಾಳೆ. ಹವ್ಯ-ಕವ್ಯ ಗಳು, ನನ್ನ ಶರೀರಪೋಷಣೆ, ಅಗ್ನಿಹೋತ್ರ, ಭೂತಬಲಿ, ಹೋಮ–ಇವು ಗಳೆಲ್ಲವೂ ಶಬಲೆಯ ಅಧೀನವಾಗಿಯೇ ಇವೆ. ಈ ಹಸುವಿನ ಸಹಕಾರದಿಂದಲೇ ನಾನು ಇವುಗಳೆಲ್ಲವನ್ನೂ ಮಾಡುತ್ತಿರುವೆನು. ಇಂತಹವಳನ್ನು ಪರಿತ್ಯಾಗಮಾಡುವ ಸಾಧ್ಯತೆಯಿಲ್ಲ. ಖಂಡಿತವಾಗಿಯೂ ನಾನಿವಳನ್ನು ಕೊಡುವುದಿಲ್ಲ. ಸ್ವಾಹಾಕಾರ-ವಷಟ್ಕಾರಗಳನ್ನೊಳಗೊಂಡ ಯಜ್ಞಗಳಿಗೆ ಉಪಕರಣಗಳನ್ನು ಒದಗಿಸುವವಳೂ ಇವಳೇ. ಅನೇಕಾನೇಕವಿದ್ಯೆಗಳ ಪ್ರಾಪ್ತಿಗೂ ಇವಳೇ ಸಾಧನಭೂತಳಾಗಿದ್ದಾಳೆ. ಒಂದೇ ಮಾತಿನಲ್ಲಿ ಹೇಳುವುದಾದರೆ–ನನ್ನ ಸರ್ವಸ್ವವೂ ಈ ಶಬಲೆಯೇ ಆಗಿದ್ದಾಳೆ. ಇದರಲ್ಲಾವ ಸಂಶಯವೂ ಇಲ್ಲ. ಇದು ಸತ್ಯ. ಮೇಲಾಗಿ ಇವಳು ನನಗೆ ಸದಾ ಸಂತೋಷವನ್ನುಂಟುಮಾಡುತ್ತಿರುವಳು. ಇವೇ ಮೊದಲಾದ ಅನೇಕ ಕಾರಣ ಗಳಿಂದ ಶಬಲೆಯನ್ನು ನಾನು ನಿನಗೆ ಖಂಡಿತವಾಗಿಯೂ ಕೊಡುವುದಿಲ್ಲ."

ವಸಿಷ್ಠರು ಹೀಗೆ ಹೇಳಲಾಗಿ ವಾಕ್ಯವಿಶಾರದರಾದ ವಿಶ್ವಾಮಿತ್ರರು ಉದ್ವೇಗಪೂರ್ಣವಾದ ಮಾತನ್ನಾಡಿದರು :

"ಮಹರ್ಷಿಗಳೇ! ಸೊಂಟ ಮತ್ತು ಕುತ್ತಿಗೆಗಳಲ್ಲಿ ಚಿನ್ನದ ಸರಪಣಿ ಗಳಿಂದ ಅಲಂಕೃತವಾದ, ಸುವರ್ಣದಿಂದ ನಿರ್ಮಿತವಾದ ಅಂಕುಶಗಳನ್ನೊಳ ಗೊಂಡ ಹದಿನಾಲ್ಕು ಸಾವಿರ ಆನೆಗಳನ್ನು ಈ ಶಬಲೆಯ ಮೌಲ್ಯವಾಗಿ ಕೊಡುತ್ತೇನೆ. ನಾಲ್ಕು ಬಿಳಿಯ ಕುದುರೆಗಳನ್ನು ಕಟ್ಟಿರುವ, ಸಾವಿರಾರು ಘಂಟೆಗಳಿಂದ ಅಲಂಕರಿಸಲ್ಪಟ್ಟಿರುವ ಎಂಟುನೂರು ಚಿನ್ನದ ರಥಗಳನ್ನು ಕೊಡುತ್ತೇನೆ. ಕಾಂಭೋಜ-ಬಾಹ್ಲಿಕಾದಿ ದೇಶಗಳಲ್ಲಿ ಹುಟ್ಟಿರುವ, ಗಂಧರ್ವಜಾತಿಗೆ ಸೇರಿದ, ಮಹಾವೇಗವುಳ್ಳ, ಒಂದು ಸಾವಿರದ ಹತ್ತು ಕುದುರೆಗಳನ್ನು ಕೊಡುತ್ತೇನೆ. ನಾನಾವಿಧವಾದ ಬಣ್ಣಗಳುಳ್ಳ, ಯುವಾ ವಸ್ಥೆಯಲ್ಲಿರುವ, ಚೊಚ್ಚಲುಗಳಾಗಿರುವ ಒಂದು ಕೋಟಿ ಗೋವುಗಳನ್ನು

ಕೊಡುತ್ತೇನೆ. ಇವುಗಳೆಲ್ಲವನ್ನೂ ತೆಗೆದುಕೊಂಡು ನಿಮ್ಮ ಬಳಿಯಲ್ಲಿರುವ ಅಮೋಘವಾದ ಈ ಒಂದು ಹಸುವನ್ನು ಕೊಡಿರಿ. ಒಂದು ವೇಳೆ ಈ ಮೌಲ್ಯವೂ ಕಡಿಮೆ ಎಂದು ನೀವು ಭಾವಿಸುವುದಾದರೆ ಶಬಲೆಯ ಮೌಲ್ಯ ವಾಗಿ ನೀವು ಎಷ್ಟು ರತ್ನರಾಶಿಗಳನ್ನಪೇಕ್ಷಿಸುವಿರೋ–ಅಷ್ಟನ್ನೂ ನಿಮಗೆ ತಂದುಕೊಡುತ್ತೇನೆ. ನೀವಪೇಕ್ಷಿಸಿದಷ್ಟು ದ್ರವ್ಯವನ್ನು ತೆಗೆದುಕೊಂಡಾದರೂ ಈ ಶಬಲೆಯನ್ನು ನನಗೆ ಕೊಡಿರಿ."

ಬುದ್ಧಿವಂತರಾದ ವಿಶ್ವಾಮಿತ್ರರ ಉದ್ವೇಗಪೂರ್ಣವಾದ ಮಾತುಗಳನ್ನು ಕೇಳಿದನಂತರವೂ–ಬ್ರಹ್ಮರ್ಷಿಗಳಾದ ವಸಿಷ್ಠರು ಶಾಂತವಾಗಿಯೇ ಉತ್ತರಿಸಿದರು :

"ಮಹಾರಾಜ! ಏನೇ ಆದರೂ–ನೀನು ಎಷ್ಟೇ ಕೊಟ್ಟರೂ–ನನ್ನ ಶಬಲೆಯನ್ನು ಮಾತ್ರ ನಿನಗೆ ಖಂಡಿತವಾಗಿಯೂ ಕೊಡುವುದಿಲ್ಲ.

ಏತದೇವ ಹಿ ಮೇ ರತ್ನಮೇತದೇವ ಹಿ ಮೇ ಧನಮ್ ।
ಏತದೇವ ಹಿ ಸರ್ವಸ್ವಮೇತದೇವ ಹಿ ಜೀವಿತಮ್ ॥೨೩॥

ಈ ಶಬಲೆಯೇ ನನಗೆ ರತ್ನರಾಶಿ ; ಇವಳೇ ನನ್ನ ಸಕಲಸರ್ವಸ್ವ. ಇವಳೇ ನನ್ನ ಜೀವಸ್ವರೂಪಳು. ದರ್ಶ-ಪೂರ್ಣಮಾಸಗಳು, ಯಜ್ಞಗಳು, ಯಜ್ಞಸಂಬಂಧವಾದ ದಕ್ಷಿಣೆಗಳು, ಇವುಗಳಲ್ಲದೇ ಇನ್ನೂ ಅನೇಕವಿಧವಾದ ಕ್ರಿಯೆಗಳು–ಎಲ್ಲವೂ ಶಬಲೆಯೇ ಆಗಿದ್ದಾಳೆ. ಇವಳಿಂದಲೇ ನಾನು ಸಕಲವನ್ನೂ ಸಾಧಿಸಿಕೊಳ್ಳುತ್ತಿದ್ದೇನೆ. ಅನುದಿನವೂ ಮಾಡುತ್ತಿರುವ ಸಕಲ ವಿಧವಾದ ಕ್ರಿಯೆಗಳಿಗೂ ಇವಳೇ ಮೂಲಾಧಾರಳಾಗಿರುವಳು. ಈ ವಿಷಯ ದಲ್ಲಿ ಸಂಶಯಪಡುವ ಕಾರಣವಿಲ್ಲ. ನೀನೆಷ್ಟೇ ಉದ್ವೇಗಗೊಂಡರೂ ಪ್ರಲಾಪ ಮಾಡಿದರೂ ಇಷ್ಟಾರ್ಥಪ್ರದಳಾದ ಈ ಶಬಲೆಯನ್ನು ಖಂಡಿತವಾಗಿಯೂ ನಿನಗೆ ಕೊಡುವುದಿಲ್ಲ."

ಐ೩ನೆಯ ಸರ್ಗವು ಮುಗಿಯಿತು.

ಶಬಲೆಯನ್ನು ಬಲಾತ್ಕಾರಪೂರ್ವಕವಾಗಿ ಸೆಳೆದುಕೊಂಡು ಹೋಗಲು ವಿಶ್ವಾಮಿತ್ರರ ಪ್ರಯತ್ನ: ವಸಿಷ್ಠರಲ್ಲಿ ಶಬಲೆಯ ಪ್ರಲಾಪ: ಅವರ ಆಜ್ಞೆಯಂತೆ ಶಬಲೆಯಿಂದ ಶಕ-ಯವನಾದಿಗಳ ಸೃಷ್ಟಿ ಮತ್ತು ವಿಶ್ವಾಮಿತ್ರರ ಸೈನ್ಯದ ಸಂಹಾರ

ಕಾಮಧೇನುಂ ವಸಿಷ್ಠೋಽಪಿ ಯದಾ ನ ತ್ಯಜತೇ ಮುನಿಃ।
ತದಾಸ್ಯ ಶಬಲಾಂ ರಾಮ ವಿಶ್ವಾಮಿತ್ರೋಽನ್ವಕರ್ಷತ ॥೧॥

ರಾಮ! ಅಪಾರವಾದ ಮೌಲ್ಯವಿನಿಮಯದಿಂದಲೂ ವಸಿಷ್ಠರು ಶಬಲೆಯನ್ನು ಪರಿತ್ಯಜಿಸಲು ಒಪ್ಪದಿದ್ದಾಗ–ವಿಶ್ವಾಮಿತ್ರರು ವಸಿಷ್ಠರ ಕಾಮ ಧೇನುವನ್ನು ಬಲಾತ್ಕಾರಪೂರ್ವಕವಾಗಿ ಸೆಳೆದುಕೊಂಡು ಹೊರಟರು. ಅವ ರಿಂದ ಬಲಾತ್ಕಾರಪೂರ್ವಕವಾಗಿ ಸೆಳೆಯಲ್ಪಡುತ್ತಿದ್ದ ಶಬಲೆಯು ದುಃಖದಿಂದ ರೋದನಮಾಡುತ್ತಾ ಶೋಕಾಕ್ರಾಂತಳಾಗಿ ತನ್ನಲ್ಲಿಯೇ ಚಿಂತಿಸಿದಳು :

'ವಿಶ್ವಾಮಿತ್ರನಿಂದಲೂ ಮತ್ತು ಅವನ ಸೇವಕರಿಂದಲೂ ಸೆಳೆಯ ಲ್ಪಡುತ್ತಾ ಬಹಳ ದುಃಖಿತಳಾಗಿರುವ ನನ್ನನ್ನು ಮಹಾತ್ಮರಾದ ವಸಿಷ್ಠರು ಪರಿತ್ಯಜಿಸಿಬಿಟ್ಟರೇ? ಆತ್ಮದರ್ಶಿಗಳಾದ ಮಹರ್ಷಿಗಳಿಗೆ ನಾನು ಯಾವ ಅಪರಾಧವನ್ನು ಮಾಡಿದೆನು? ನಾನು ನಿಶ್ಚಯವಾಗಿಯೂ ಪಾಪರಹಿತಳು. ಮೇಲಾಗಿ ನಾನವರ ಪರಮಭಕ್ತಳೂ ಆಗಿದ್ದೇನೆ. ಅವರಿಗೂ ನಾನು ಇಷ್ಟ ಳಾಗಿಯೇ ಇದ್ದೇನೆ. ಹೀಗಿದ್ದೂ ಧಾರ್ಮಿಕರಾದ ವಸಿಷ್ಠರು ಇಂದು ನನ್ನನ್ನು ಪರಿತ್ಯಜಿಸುತ್ತಿದ್ದಾರೆ.' ಹೀಗೆ ಬಾರಿ-ಬಾರಿಗೂ ಚಿಂತಿಸುತ್ತಾ ನಿಟ್ಟುಸಿರುಬಿಡುತ್ತಾ ಶಬಲೆಯು ಶ್ರೇಷ್ಠವಾದ ಓಜಸ್ಸಿನಿಂದ ಕೂಡಿದ್ದ ವಸಿಷ್ಠರ ಸಮೀಪಕ್ಕೆ ಅತಿವೇಗದಿಂದ ಧಾವಿಸಿದಳು. ತನ್ನನ್ನು ಸುತ್ತ-ಮುತ್ತಲೂ ಹಿಡಿದುಕೊಂಡು ಸೆಳೆದಾಡುತ್ತಿದ್ದ ನೂರಾರು ರಾಜಸೇವಕರನ್ನು ಕ್ಷಣಮಾತ್ರದಲ್ಲಿ ಮೈಯೊದರಿ, ಕೆಳಕ್ಕೆ ಕೆಡವಿ, ವಾಯುವೇಗದಿಂದ ಓಡುತ್ತಾ ಮಹಾತ್ಮರಾದ ವಸಿಷ್ಠರ ಪಾದಕಮಲಗಳನ್ನು ಸೇರಿದಳು. ಹಾಗೆ ಬಂದ ಶಬಲೆಯು ಅಳುತ್ತಾ–"ಮಹರ್ಷಿಗಳೇ! ಮಹರ್ಷಿಗಳೇ!"–ಎಂದು

ಕಿರುಚುತ್ತಾ, ವಸಿಷ್ಠರ ಮುಂದೆ ನಿಂತು ಬಿಕ್ಕಿ-ಬಿಕ್ಕಿ ಅಳುತ್ತಲೇ ಮೇಘದಂತೆ ಗಂಭೀರವಾದ ಧ್ವನಿಯಲ್ಲಿ ಹೇಳಿದಳು :

"ಪೂಜ್ಯರೇ! ನೀವೇಕೆ ನನ್ನನ್ನು ಪರಿತ್ಯಜಿಸಿದಿರಿ? ನೀವು ಪರಿತ್ಯಜಿಸಿದ ಕಾರಣದಿಂದಾಗಿ ಈ ವಿಶ್ವಾಮಿತ್ರನ ರಾಜಭಟರು ನನ್ನನ್ನು ಸೆಳೆದೊಯ್ಯು ತ್ತಿರುವರು."

ಶಬಲೆಯು ಹೀಗೆ ಹೇಳಲು ಬ್ರಹ್ಮರ್ಷಿಗಳಾದ ವಸಿಷ್ಠರು ಶೋಕ ಸಂತಪ್ತಹೃದಯಳಾದ, ತಂಗಿಯಂತಿದ್ದ ಶಬಲೆಗೆ ಹೇಳಿದರು :

"ಶಬಲೇ! ನಾನು ನಿನ್ನನ್ನೆಂದಿಗೂ ಪರಿತ್ಯಜಿಸುವುದಿಲ್ಲ. ನೀನು ನನಗೆ ಯಾವ ವಿಧವಾದ ಅಪಕಾರವನ್ನೂ ಮಾಡಿಲ್ಲ. ಆದರೆ ಬಲದಿಂದ ಉನ್ಮತ್ತ ನಾಗಿರುವ, ಮಹಾಬಲಶಾಲಿಯಾದ ಈ ರಾಜನು ನನ್ನ ಅನುಮತಿಯಿಲ್ಲ ದೆಯೇ ಬಲಾತ್ಕಾರಪೂರ್ವಕವಾಗಿ ನಿನ್ನನ್ನು ಸೆಳೆದೊಯ್ಯುತ್ತಿದ್ದಾನೆ. ಈಗ ನಾನೇನು ಮಾಡಲಿ? ಅವನಷ್ಟು ಬಲವು ನನಗಿಲ್ಲ. ಪ್ರಕೃತದಲ್ಲಿ ಈ ರಾಜನು ನನ್ನ ಅತಿಥಿಯಾಗಿರುವನು. ಬಲಿಷ್ಠನಾದ ರಾಜ ; ಅದರಲ್ಲಿಯೂ ಕ್ಷತ್ರಿಯ ರಾಜ ; ಚಕ್ರವರ್ತಿ. ಇಂತಹವನ ವಿಷಯದಲ್ಲಿ ನಾನೇನು ಮಾಡಬಲ್ಲೆನು? ಇದೂ ಅಲ್ಲದೇ ಕುದುರೆಗಳಿಂದಲೂ, ರಥಗಳಿಂದಲೂ, ಆನೆಗಳಿಂದಲೂ, ಧ್ವಜ-ಪತಾಕೆಗಳಿಂದಲೂ, ಕಾಲಾಳುಗಳಿಂದಲೂ ಪರಿಪೂರ್ಣವಾಗಿರುವ ಒಂದು ಅಕ್ಷೌಹಿಣೀಸೈನ್ಯವು ಇವನಲ್ಲಿದೆ. ಅದರಿಂದಿವನು ಮಹಾಬಲಶಾಲಿ ಯಾಗಿದ್ದಾನೆ."

ವಸಿಷ್ಠರು ಹೀಗೆ ಹೇಳಲಾಗಿ, ವಚನಜ್ಞಳಾದ ಶಬಲೆಯು, ಅಸಮಾನ ವಾದ ಕಾಂತಿಯಿಂದ ಕೂಡಿರುವ, ಬ್ರಹ್ಮರ್ಷಿಗಳಾದ ವಸಿಷ್ಠರಿಗೆ ವಿನಯ ಯುಕ್ತವಾದ ಈ ಮಾತುಗಳನ್ನು ಹೇಳಿದಳು :

ನ ಬಲಂ ಕ್ಷತ್ರಿಯಸ್ಯಾಹುರ್ಬ್ರಾಹ್ಮಣೋ ಬಲವತ್ತರಃ ।
ಬ್ರಹ್ಮನ್ಬ್ರಹ್ಮಬಲಂ ದಿವ್ಯಂ ಕ್ಷತ್ರಾತ್ತು ಬಲವತ್ತರಮ್ ॥೧೪॥

"ಮಹರ್ಷಿಗಳೇ! ಬ್ರಾಹ್ಮಣನಿಗಿರುವ ಬಲದೊಡನೆ ಹೋಲಿಸಿದರೆ ಕ್ಷತ್ರಿಯನ ಬಲವು ಅಲ್ಪವೆಂದೇ ತತ್ತ್ವಜ್ಞರು ಹೇಳುತ್ತಾರೆ. ನನಗೆ ತಿಳಿದಿರು

ವಂತೆ ಬ್ರಹ್ಮಬಲವೆಂಬುದು ದಿವ್ಯವಾದುದು ಮತ್ತು ಕ್ಷತ್ರಿಯನಿಗಿರುವ ಬಲಕ್ಕಿಂತಲೂ ಹೆಚ್ಚಿನದು.

ನಿಮ್ಮ ಬಲವನ್ನು ಅಳೆಯುವ ಸಾಧ್ಯತೆಯೇ ಇಲ್ಲ. ಅಪ್ರಮೇಯವಾದ ಬಲವುಳ್ಳವರು ನೀವು. ನಿಮ್ಮ ತೇಜಸ್ಸು ಸಹಿಸಲು ಅಶಕ್ಯವಾದುದು. ದುರಾಸದವಾದ ಬ್ರಹ್ಮತೇಜಸ್ಸನ್ನು ನೀವು ಹೊಂದಿರುವಿರಿ. ಆದುದರಿಂದ ಮಹಾಪರಾಕ್ರಮವುಳ್ಳ ವಿಶ್ವಾಮಿತ್ರನು ನಿಮಗಿಂತಲೂ ಹೆಚ್ಚಿನ ಬಲಶಾಲಿಯಲ್ಲ. ನಿಮ್ಮಿಂದ ಪೋಷಿತಳಾಗಿ ಮತ್ತು ಅನುಗೃಹೀತಳಾಗಿ ಬ್ರಹ್ಮಬಲವನ್ನು ಪಡೆದಿರುವ ನನ್ನನ್ನು ವಿಶ್ವಾಮಿತ್ರನ ದರ್ಪವಿಧ್ವಂಸನ ಕಾರ್ಯಕ್ಕೆ ನಿಯೋಜಿಸಿರಿ. ಅನುಗ್ರಹಿಸಿ ಕಳುಹಿಸಿರಿ. ದುರಾತ್ಮನಾದ ಆ ವಿಶ್ವಾಮಿತ್ರನಿಗೆ ಯಾವ ದರ್ಪವಿದೆಯೋ–ಯಾವ ಬಲವಿದೆಯೋ–ಅವೆಲ್ಲವನ್ನೂ ಕ್ಷಣ ಮಾತ್ರದಲ್ಲಿ ನಾಶಪಡಿಸುವೆನು."

ರಾಮ! ಶಬಲೆಯು ಹೀಗೆ ಹೇಳಿದನಂತರ ಮಹಾಯಶೋವಂತ ರಾದ ವಸಿಷ್ಠರು–"ಶಬಲೇ! ನಿನ್ನ ಇಚ್ಛೆಯಂತೆ ಶತ್ರುಬಲವಿನಾಶಕವಾದ ಸೈನ್ಯವನ್ನು ಸೃಷ್ಟಿಸು"–ಎಂದರು.

ರಾಮ! ವಸಿಷ್ಠರಿಂದ ಅನುಗ್ರಹವಚನವನ್ನು ಪಡೆದು ಶಬಲೆಯು 'ಹುಂಭಾ' ಎಂದು ಧ್ವನಿಮಾಡಿತು. ಒಡನೆಯೇ ಪಹ್ಲವ, ಶಕ, ಯವನ, ಕಾಂಭೋಜ, ಬರ್ಬರರೇ ಮುಂತಾದ ಮ್ಲೇಚ್ಛಜಾತಿಯ ಸೈನಿಕರನ್ನು ನೂರಾರು ಸಂಖ್ಯೆಯಲ್ಲಿ ಸೃಷ್ಟಿಸಿದಳು. ವಿಶ್ವಾಮಿತ್ರರು ನೋಡುತ್ತಿದ್ದಂತೆಯೇ ಅವರ ಅಪಾರಸೈನ್ಯಗಳೆಲ್ಲವನ್ನೂ ಶಬಲೆಯಿಂದ ಉತ್ಪನ್ನರಾದ ಸೈನಿಕರು ಧ್ವಂಸಮಾಡುತ್ತಿದ್ದರು. ಶಬಲೆಯು ಸೈನ್ಯಗಳನ್ನು ಸೃಷ್ಟಿಸುವಳೆಂದಾಗಲೀ– ಆ ಸೈನ್ಯಗಳು ತಮ್ಮ ಸೈನಿಕರನ್ನು ವಿನಾಶಮಾಡುವುವೆಂದಾಗಲೀ– ವಿಶ್ವಾಮಿತ್ರರು ಯೋಚಿಸಿರಲಿಲ್ಲ. ತಮ್ಮ ಕಣ್ಣೆದುರಿನಲ್ಲಿಯೇ ಸೈನ್ಯಗಳು ಸಾವಿರಾರು ಸಂಖ್ಯೆಯಲ್ಲಿ ವಿನಾಶವಾದುದನ್ನು ಕಂಡು ವಿಶ್ವಾಮಿತ್ರರು ಅತಿಕ್ರುದ್ಧರಾದರು. ಕೋಪದಿಂದ ವಿಕಸಿತವಾದ ಕ್ರೂರದೃಷ್ಟಿಯುಳ್ಳ ವಿಶ್ವಾಮಿತ್ರರು ರಥದಲ್ಲಿ ಕುಳಿತು ಮ್ಲೇಚ್ಛಸೈನಿಕರನ್ನು ಎದುರಿಸಿ ಅನೇಕವಿಧವಾದ ಆಯುಧವಿಶೇಷಗಳಿಂದ ಪಹ್ಲವಾದಿಗಳನ್ನು ಕ್ಷಣಮಾತ್ರದಲ್ಲಿ ಧ್ವಂಸಮಾಡಿ

ದರು. ತಾನು ಸೃಷ್ಟಿಸಿದ ನೂರಾರು ಪಹ್ಲವರೂ ವಿಶ್ವಾಮಿತ್ರರ ನಿಶಿತಾಯುಧ ಗಳಿಂದ ಕ್ಷಣಮಾತ್ರದಲ್ಲಿ ಹಿಂಸಿತರಾದುದನ್ನು ಕಂಡು ಶಬಲೆಯು ಪುನಃ ಹೂಂಕಾರವನ್ನು ಮಾಡಿ ಯವನರಿಂದ ಕೂಡಿದ ಭಯಂಕರವಾದ ಸಾವಿ ರಾರು ಶಕರನ್ನು ಪುನಃ ಸೃಷ್ಟಿಸಿದಳು. ಯವನರಿಂದಲೂ ಮತ್ತು ಶಕರಿಂದಲೂ ಭೂಮಿಯು ತುಂಬಿಹೋಯಿತು. ಶಕರು ಪ್ರಭೆಯಿಂದ ಕೂಡಿದ್ದರು. ಮಹಾ ಪರಾಕ್ರಮಿಗಳಾಗಿದ್ದರು. ಅವರ ಮೈಬಣ್ಣವು ಹೊಂಬಣ್ಣದ ಸಂಪಿಗೆಹೂವಿನ ಕೇಸರದಂತಿದ್ದಿತು. ತೀಕ್ಷ್ಣವಾದ ಕತ್ತಿಗಳನ್ನು ಹಿಡಿದಿದ್ದರು. ಪೀತಾಂಬರಗಳನ್ನು ಧರಿಸಿದ್ದರು. ಅಗ್ನಿಗಳಂತೆ ಜಾಜ್ವಲ್ಯಮಾನವಾಗಿ ಪ್ರಕಾಶಿಸುತ್ತಿದ್ದ ಶಕ-ಯವನಸೈನಿಕರಿಂದ ವಿಶ್ವಾಮಿತ್ರರ ಸೈನ್ಯವು ಕ್ಷಣಮಾತ್ರದಲ್ಲಿ ಧ್ವಂಸ ವಾಯಿತು. ತಮ್ಮ ಸೈನ್ಯಗಳೆಲ್ಲವೂ ಪುನಃ ದಗ್ಧವಾದುದನ್ನು ಕಂಡು, ತೇಜಸ್ವಿ ಗಳಾದ ವಿಶ್ವಾಮಿತ್ರರು ಅನೇಕವಿಧವಾದ ಅಸ್ತ್ರಗಳನ್ನು ಶಬಲೆಯ ಸೈನ್ಯದ ಮೇಲೆ ಪ್ರಯೋಗಿಸಿದರು. ಅದರಿಂದಾಗಿ ಯವನ-ಕಾಂಭೋಜ-ಬರ್ಬರ ಸೈನ್ಯಗಳು ವ್ಯಾಕುಲಗೊಂಡುವು.

ಐವತ್ನಾಲ್ಕನೆಯ ಸರ್ಗವು ಮುಗಿಯಿತು.

ಬಾಲಕಾಂಡ ೫೫ನೆಯ ಸರ್ಗ

ತನ್ನ ನೂರು ಮಕ್ಕಳೂ ಮತ್ತು ಅಪಾರಸೈನ್ಯವೂ ವಿನಾಶವಾಗಲಾಗಿ ವಿಶ್ವಾಮಿತ್ರರು ತಪಸ್ಸುಮಾಡಿ ದಿವ್ಯಾಸ್ತ್ರಗಳನ್ನು ಪಡೆದು ಪುನಃ ವಸಿಷ್ಠರನ್ನು ಎದುರಿಸಿದುದು : ಆಶ್ರಮವಾಸಿಗಳಿಗೆ ಉಪದ್ರವ

ತತಸ್ತಾನಾಕುಲಾನ್ದೃಷ್ಟ್ವಾ ವಿಶ್ವಾಮಿತ್ರಾಸ್ತ್ರಮೋಹಿತಾನ್ ।
ವಸಿಷ್ಠಶ್ಚೋದಯಾಮಾಸ ಕಾಮಧುಕ್ಸೃಜ ಯೋಗತಃ ॥೧॥

ರಾಮ! ಮಹಾಪರಾಕ್ರಮಿಗಳಾದ ವಿಶ್ವಾಮಿತ್ರರ ನಿರಂತರವಾದ ಅಸ್ತ್ರ ಪ್ರಹಾರಗಳಿಂದ ಯವನರು ವ್ಯಾಕುಲಗೊಂಡಿದ್ದನ್ನು ಕಂಡು ವಸಿಷ್ಠರು ಯೋಗಮಾಯೆಯಿಂದ ಇನ್ನೂ ಅನೇಕಸೈನಿಕರನ್ನು ಸೃಷ್ಟಿಸುವಂತೆ ಶಬಲೆ ಯನ್ನು ಹುರಿದುಂಬಿಸಿದರು. ಶಬಲೆಯು ವಸಿಷ್ಠರ ಪ್ರೇರಣೆಯಂತೆ ಸೈನಿಕ

ರನ್ನು ಸೃಷ್ಟಿಸುವ ಸಲುವಾಗಿ 'ಹುಂಭಾ' ಎಂದು ಗರ್ಜನೆಮಾಡಿದೊಡನೆಯೇ ಸೂರ್ಯನಿಗೆ ಸಮಾನವಾದ ತೇಜಸ್ಸಿನಿಂದ ಕೂಡಿದ್ದ ಕಾಂಭೋಜರೆಂಬ ಸೈನಿಕರು ಹುಟ್ಟಿದರು. ಶಬಲೆಯ ಕೆಚ್ಚಲುಪ್ರದೇಶದಿಂದ ಶಸ್ತ್ರಪಾಣಿಗಳಾದ ಬರ್ಬರರು ಹುಟ್ಟಿದರು. ಯೋನಿಯಿಂದ ಯವನರೂ, ಪೃಷ್ಠದಿಂದ ಶಕರೆಂಬುವವರೂ, ರೋಮಕೂಪಗಳಿಂದ ಕಿರಾತಸಮೇತರಾದ ಮ್ಲೇಚ್ಛ-ಹಾರೀತಕರೂ ಹುಟ್ಟಿದರು. ಅವರೆಲ್ಲರೂ ವಿಶ್ವಾಮಿತ್ರರ ಕಾಲಾಳುಗಳ ಸಮೇತವಾದ ಅಶ್ವ-ರಥ-ಗಜಸೈನ್ಯಗಳನ್ನು ಕ್ಷಣಮಾತ್ರದಲ್ಲಿ ಧ್ವಂಸಮಾಡಿದರು. ತಮ್ಮ ಚತುರಂಗಸೈನ್ಯವೆಲ್ಲವೂ ಕ್ಷಣಮಾತ್ರದಲ್ಲಿ ಶಬಲೆಯಿಂದ ಉತ್ಪನ್ನರಾದ ಸೈನಿಕರಿಂದ ನಾಶವಾದೊಡನೆಯೇ ವಿಶ್ವಾಮಿತ್ರರ ನೂರು ಮಕ್ಕಳೂ ಕುಪಿತರಾಗಿ ನಾನಾವಿಧವಾದ ಆಯುಧಗಳನ್ನು ಹಿಡಿದುಕೊಂಡು ಜಪ-ತಪೋನುಷ್ಠಾನಗಳಲ್ಲಿ ಶ್ರೇಷ್ಠರಾಗಿದ್ದ ವಸಿಷ್ಠರ ಕಡೆಗೆ ಧಾವಿಸಿದರು. ಅವರು ತನ್ನೆದುರಿಗೆ ಬಂದೊಡನೆಯೇ ತೇಜೋವಿಶಿಷ್ಟರಾದ ವಸಿಷ್ಠರು ಕುಳಿತಲ್ಲಿಯೇ ಒಮ್ಮೆ ಹೂಂಕರಿಸಿ ಅವರೆಲ್ಲರನ್ನೂ ಸುಟ್ಟುಬಿಟ್ಟರು. ತಮ್ಮ ಅಪಾರವಾದ ಚತುರಂಗಬಲವೂ ಮತ್ತು ನೂರು ಮಕ್ಕಳೂ ಕ್ಷಣಮಾತ್ರದಲ್ಲಿ ವಿನಾಶಹೊಂದಿದುದನ್ನು ಕಂಡು ಮಹಾಯಶಸ್ವಿಗಳಾದ ವಿಶ್ವಾಮಿತ್ರರು ನಾಚಿಕೆಗೊಂಡು ಚಿಂತಿಸತೊಡಗಿದರು. ಆ ಸಮಯದಲ್ಲಿ ವಿಶ್ವಾಮಿತ್ರರು ಅಲೆಗಳಿಲ್ಲದೇ ಶಾಂತವಾಗಿರುವ ಸಮುದ್ರದಂತೆಯೂ, ಹಲ್ಲುಕಿತ್ತ ಹಾವಿನಂತೆಯೂ ಮತ್ತು ರಾಹುಗ್ರಸ್ತನಾದ ಸೂರ್ಯನಂತೆಯೂ ಕಾಂತಿಹೀನರಾದರು. ನೂರು ಮಕ್ಕಳೂ ಮತ್ತು ಅಕ್ಷೌಹಿಣೀಸೈನ್ಯವೂ ಬ್ರಹ್ಮರ್ಷಿಗಳಾದ ವಸಿಷ್ಠರೊಬ್ಬರಿಂದಲೇ ಹತವಾಗಲು–ವಿಶ್ವಾಮಿತ್ರರು ರೆಕ್ಕೆಗಳನ್ನು ಕತ್ತರಿಸಿದ ಪಕ್ಷಿಯಂತೆ ಬಹಳ ದೀನರಾದರು. ದರ್ಪ-ಬಲ-ಉತ್ಸಾಹಗಳೆಲ್ಲವೂ ಉಡುಗಿ ಅತ್ಯಂತ ದುಃಖಿತರಾದರು. ಮುಂದಿನ ಕರ್ತವ್ಯವೇನೆಂಬುದನ್ನು ಒಡನೆಯೇ ನಿಶ್ಚಯಿಸಿ ತಮ್ಮ ಮಗನೊಬ್ಬನನ್ನು ಕರೆದು ಕ್ಷತ್ರಧರ್ಮಾನುಸಾರವಾಗಿ ರಾಜ್ಯವನ್ನು ಪರಿಪಾಲಿಸುವಂತೆ ಆಜ್ಞೆಮಾಡಿ ರಾಜ್ಯಭಾರವನ್ನು ಅವನಿಗೆ ವಹಿಸಿಕೊಟ್ಟು ಅರಣ್ಯಕ್ಕೆ ಹೊರಟರು. ವನದಿಂದ ವನಕ್ಕೆ ನಡೆದು, ಕಡೆಗೆ ಕಿನ್ನರ-ಸರ್ಪಗಳಿಂದ ಸಂಸೇವ್ಯಮಾನವಾದ ಹಿಮವತ್ಪರ್ವತವನ್ನು ಸೇರಿ, ಅದರ ತಪ್ಪಲಿನಲ್ಲಿ ಮಹಾದೇವನ ವರಪ್ರಸಾದವನ್ನು ಪಡೆಯುವ ಸಲುವಾಗಿ

ಘೋರವಾದ ತಪಸ್ಸನ್ನಾಚರಿಸಿದರು. ಕೆಲವು ದಿನಗಳು ಕಳೆದನಂತರ ದೇವೇಶನಾದ, ವೃಷಭಧ್ವಜನಾದ, ವರದನಾದ ಮಹೇಶನು ಪ್ರತ್ಯಕ್ಷನಾಗಿ ವಿಶ್ವಾಮಿತ್ರರನ್ನು ಪ್ರಶ್ನಿಸಿದನು :

"ಮಹಾರಾಜ! ನೀನು ತಪಸ್ಸುಮಾಡುತ್ತಿರುವ ಕಾರಣವಾದರೂ ಏನು? ನಿನ್ನ ಅಭಿಲಾಷೆಯೇನು? ನಾನು ನಿನ್ನ ತಪಸ್ಸಿಗೆ ಮೆಚ್ಚಿ ನಿನಗೆ ವರವನ್ನು ಕೊಡುವ ಸಲುವಾಗಿಯೇ ಬಂದಿರುವೆನು. ಯಾವ ವರವನ್ನು ನನ್ನಿಂದ ಅಪೇಕ್ಷಿಸಿರುವೆಯೆಂಬುದನ್ನು ಹೇಳು."

ದಯಾಮಯನಾದ ಉಮಾಪತಿಯು ಹೀಗೆ ಹೇಳಲಾಗಿ, ವಿಶ್ವಾಮಿತ್ರರು ಸಾಷ್ಟಾಂಗನಮಸ್ಕಾರ ಮಾಡಿ ಕೈಮುಗಿದುಕೊಂಡು ಮಹಾದೇವನಿಗೆ ಹೇಳಿದರು :

"ಮಹಾದೇವ! ನೀನು ನಿಶ್ಚಯವಾಗಿಯೂ ನನ್ನ ತಪಸ್ಸಿಗೆ ಮೆಚ್ಚಿ ವರಕೊಡಲು ಬಂದಿರುವೆಯಾದರೆ–ಅಂಗೋಪಾಂಗಸಹಿತವಾದ, ಉಪನಿಷತ್ತುಗಳೊಡನೆ ಕೂಡಿರುವ ಧನುರ್ವೇದವನ್ನು ರಹಸ್ಯಸಹಿತವಾಗಿ ಅನುಗ್ರಹಿಸು. ದೇವ-ದಾನವ-ಗಂಧರ್ವ-ಯಕ್ಷ-ರಾಕ್ಷಸರಲ್ಲಿ ಮತ್ತು ಮಹರ್ಷಿಗಳಲ್ಲಿ ಯಾವ ಯಾವ ಅಸ್ತ್ರಗಳಿವೆಯೋ–ಅವುಗಳೆಲ್ಲವೂ ನಿನ್ನ ಅನುಗ್ರಹದಿಂದಾಗಿ ನನ್ನಲ್ಲಿ ಪ್ರಕಾಶಿಸಲಿ. (ನನಗೆ ಆ ಅಸ್ತ್ರಗಳೆಲ್ಲವೂ ಸಿದ್ಧಿಸಲಿ.) ನಿನ್ನ ಅನುಗ್ರಹದಿಂದ ನನ್ನ ಇಚ್ಛೆಯು ಪೂರ್ಣವಾಗಲಿ."

ದಯಾಮಯನಾದ ಉಮಾಪತಿಯು–"ಏವಮಸ್ತು" "ನಿನ್ನ ಅಭಿಲಾಷೆಯಂತೆಯೇ ಸಕಲವೂ ನಿನಗೆ ಸಿದ್ಧಿಸುವುದು"–ಎಂದು ವಿಶ್ವಾಮಿತ್ರರಿಗೆ ಹೇಳಿ ಅದೃಶ್ಯನಾದನು.

ದೇವೇಶನಾದ ಉಮಾಪತಿಯಿಂದ ಎಲ್ಲ ಅಸ್ತ್ರಗಳನ್ನೂ ಪಡೆದುಕೊಂಡು ಪುತ್ರರ ಮತ್ತು ಸೈನಿಕರ ವಿನಾಶದಿಂದ ದರ್ಪ-ಬಲ-ಉತ್ಸಾಹ ಗಳನ್ನು ಕಳೆದುಕೊಂಡಿದ್ದ ವಿಶ್ವಾಮಿತ್ರರು ಪುನಃ ದರ್ಪದಿಂದ ಪರಿಪೂರ್ಣ ರಾದರು. ಹುಣ್ಣಿಮೆಯ ದಿನ ಸಮುದ್ರವು ಉಕ್ಕಿಬರುವಂತೆ–ಅನೇಕವಿಧ ವಾದ ಅಸ್ತ್ರಗಳನ್ನು ಪಡೆದು ಪರಾಕ್ರಮದಿಂದ ವೃದ್ಧಿಹೊಂದಿದ ಅತುಲ ವೀರ್ಯಸಂಪನ್ನರಾದ ವಿಶ್ವಾಮಿತ್ರರು– ಎದುರಾಳಿಗಳಾದ ವಸಿಷ್ಠರು

ತಮ್ಮಿಂದ ಹತರಾದರೆಂದೇ ಭಾವಿಸಿದರು. ವಸಿಷ್ಠರ ಆಶ್ರಮಕ್ಕೆ ಹೋಗಿ ತಾವು ಸಂಪಾದಿಸಿದ ಅಸ್ತ್ರಗಳನ್ನು ಧನುಸ್ಸಿನಲ್ಲಿ ಆರೋಪಿಸಿ ಪ್ರಯೋಗಿಸಲು ತೊಡಗಿದರು. ಆ ಮಹಾಸ್ತ್ರಗಳ ತೇಜಸ್ಸಿನಿಂದ ಕ್ಷಣಮಾತ್ರದಲ್ಲಿ ವಸಿಷ್ಠರ ಆ ತಪೋವನವು ಭಸ್ಮವಾಗಿ ಹೋಯಿತು. ಧೀಮಂತರಾದ ವಿಶ್ವಾಮಿತ್ರರು ಪ್ರಯೋಗಿಸಿದ ಮಹಾಸ್ತ್ರಗಳನ್ನೂ ಮತ್ತು ಅದರ ಪರಿಣಾಮವನ್ನೂ ಕಂಡು ಭಯಗೊಂಡ ನೂರಾರು ಮಹರ್ಷಿಗಳು ನಾಲ್ಕು ದಿಕ್ಕುಗಳಿಗೂ ಪಲಾಯನಮಾಡಿದರು. ವಸಿಷ್ಠರ ಶಿಷ್ಯರೂ, ಆ ದಿವ್ಯಾಶ್ರಮದಲ್ಲಿದ್ದ ಮೃಗ-ಪಕ್ಷಿಗಳೂ ವಿಶ್ವಾಮಿತ್ರರು ಪ್ರಯೋಗಿಸಿದ ಅಸ್ತ್ರಗಳ ತಾಪವನ್ನು ತಡೆಯಲಾರದೇ ಭಯದಿಂದ ನಾನಾದಿಕ್ಕುಗಳಿಗೆ ಪಲಾಯನಮಾಡಿದರು. ಮಹಾತ್ಮರಾದ ವಸಿಷ್ಠರ ದಿವ್ಯಾಶ್ರಮವು ಒಂದು ಮುಹೂರ್ತಮಾತ್ರದಲ್ಲಿ ಶೂನ್ಯವಾಗಿ ಹೋಯಿತು. ನಿಶ್ಚಯವಾಗಿಯೂ ಆ ಸಮಯದಲ್ಲಿ ಆ ದಿವ್ಯಾಶ್ರಮವು ವೃಕ್ಷರಹಿತವಾಗಿ, ಮನುಷ್ಯರಹಿತವಾಗಿ ಬಂಜರುಬಿದ್ದಿರುವ ಭೂಮಿಯಂತೆ ಶಬ್ದಶೂನ್ಯವಾಗಿ ಕಾಣುತ್ತಿದ್ದಿತು. ಭಯವಿಹ್ವಲರಾಗಿ ನಾನಾದಿಕ್ಕುಗಳಿಗೆ ಪಲಾಯನಮಾಡುತ್ತಿದ್ದ ಋಷಿ-ಮಹರ್ಷಿಗಳನ್ನೂ, ಶಿಷ್ಯರನ್ನೂ ಕುರಿತು ವಸಿಷ್ಠರು ಹೇಳಿದರು :

"ಹೀಗೇಕೆ ಓಡುವಿರಿ? ಸೂರ್ಯನು ಹುಟ್ಟಿದೊಡನೆಯೇ ತನ್ನ ಕಿರಣಗಳಿಂದ ಕ್ಷಣಮಾತ್ರದಲ್ಲಿ ಮಂಜನ್ನು ವಿನಾಶಗೊಳಿಸುವಂತೆ–ಈ ಗಾಧೇಯನನ್ನು ನಿಮಿಷದಲ್ಲಿ ವಿನಾಶಮಾಡುವೆನು. ಭಯಪಟ್ಟು ಓಡಬೇಡಿರಿ."

ಹೀಗೆಂದು ಆಶ್ವಾಸನೆಯಿತ್ತು ಕೋಪಾವಿಷ್ಟರಾಗಿ ವಿಶ್ವಾಮಿತ್ರರಿಗೆ ಹೇಳಿದರು :

"ದುರುಳನೇ! ಬಹಳ ಕಾಲದಿಂದ ಮಹರ್ಷಿಗಳಿಂದಲೂ, ಮೃಗ-ಪಕ್ಷಿಗಳಿಂದಲೂ ಸಮೃದ್ಧವಾಗಿದ್ದ ಈ ದಿವ್ಯಾಶ್ರಮವನ್ನು ನೀನು ಕ್ಷಣಮಾತ್ರದಲ್ಲಿ ವಿನಾಶಮಾಡಿರುವೆ. ಮೇಲಾಗಿ ನೀನು ದುರಾಚಾರಿಯು. ಪರರ ವಸ್ತುವನ್ನು ಅಪಹರಣಮಾಡುವುದರಲ್ಲಿ ಆಸಕ್ತಿಯುಳ್ಳವನು. ಅದೂ ಅಲ್ಲದೇ ಎಲ್ಲಿ ಹೇಗೆ ವರ್ತಿಸಬೇಕೆಂಬ ವಿವೇಚನೆಯಿಲ್ಲದ ಮೂಢನು ನೀನು. ಹೆಚ್ಚುಕಾಲ ಉಳಿಯಲಾರೆ."

ಪರಮಕ್ರುದ್ಧರಾದ ವಸಿಷ್ಠರು ವಿಶ್ವಾಮಿತ್ರರಿಗೆ ಹೀಗೆ ಹೇಳಿ ಧೂಮ

ರಹಿತವಾದ ಕಾಲಾಗ್ನಿಯಂತೆ ಬ್ರಹ್ಮತೇಜಸ್ಸಿನಿಂದ ಪ್ರಜ್ವಲಿಸುತ್ತಾ ಮತ್ತೊಂದು ಯಮದಂಡದೋಪಾದಿಯಲ್ಲಿದ್ದ ತಮ್ಮ ಬ್ರಹ್ಮದಂಡವನ್ನು ಹಿಡಿದು ವಿಶ್ವಾಮಿತ್ರರಿಗೆ ಎದುರಾಗಿ ನಿಂತರು.

೫೫ನೆಯ ಸರ್ಗವು ಮುಗಿಯಿತು.

ಬಾಲಕಾಂಡ ೫೬ನೆಯ ಸರ್ಗ

ವಿಶ್ವಾಮಿತ್ರರಿಂದ ವಸಿಷ್ಠರ ಮೇಲೆ ನಾನಾವಿಧವಾದ ದಿವ್ಯಾಸ್ತ್ರಗಳ ಪ್ರಯೋಗ : ವಸಿಷ್ಠರ ಬ್ರಹ್ಮದಂಡದಿಂದ ಎಲ್ಲ ಮಹಾಸ್ತ್ರಗಳ ಉಪಶಮನ

ಏವಮುಕ್ತೋ ವಸಿಷ್ಠೇನ ವಿಶ್ವಾಮಿತ್ರೋ ಮಹಾಬಲಃ ।
ಆಗ್ನೇಯಮಸ್ತ್ರಮುತ್ಕ್ಷಿಪ್ಯ ತಿಷ್ಠ ತಿಷ್ಠೇತಿ ಚಾಬ್ರವೀತ್ ॥೧॥

'ಮೂಢ ತ್ವಂ ನ ಭವಿಷ್ಯಸಿ–ಮೂಢನೇ! ನೀನು ಹೆಚ್ಚು ಕಾಲ ಉಳಿಯಲಾರೆ'–ಎಂಬ ವಸಿಷ್ಠರ ಮಾತನ್ನು ಕೇಳಿ ಅಸ್ತ್ರಪ್ರಾಪ್ತಿಯಿಂದ ಮಹಾ ಬಲಿಷ್ಠರಾಗಿದ್ದ ವಿಶ್ವಾಮಿತ್ರರು ಆಗ್ನೇಯಾಸ್ತ್ರವನ್ನು ಧನುಸ್ಸಿನ ಹೆದೆಗೇರಿಸಿ ವಸಿಷ್ಠರಿಗೆ ಹೇಳಿದರು : "ನಿಲ್ಲಿರಿ! ನಿಲ್ಲಿರಿ! ನಿಮಗೆ ತಕ್ಕ ಶಾಸನವನ್ನು ಮಾಡುವೆನು."

ಮೊದಲೇ ಕುಪಿತರಾಗಿದ್ದ ವಸಿಷ್ಠರು ವಿಶ್ವಾಮಿತ್ರರ ಮಾತಿನಿಂದ ಮತ್ತಷ್ಟು ಕುಪಿತರಾಗಿ ಕಾಲದಂಡದ ಪ್ರತಿಕೃತಿಯಂತೆಯೇ ಇದ್ದ ಬ್ರಹ್ಮದಂಡ ವನ್ನು ಮೇಲೆತ್ತಿ ಹೇಳಿದರು : "ಕ್ಷತ್ರಿಯಾಧಮನೇ! ನಿನ್ನನ್ನು ಕಂಡು ನಾನು ಓಡಿಹೋಗುವೆನೆಂದು ಭ್ರಾಂತನಾಗಬೇಡ. ಇಲ್ಲಿಯೇ ನಿಂತಿರುವೆನು. ನಿನ್ನಲ್ಲೇನಾದರೂ ಬಲವಿರುವುದಾದರೆ ಅದನ್ನು ಪ್ರದರ್ಶಿಸು. ಶಸ್ತ್ರಗಳ ಪ್ರಾಪ್ತಿಯಿಂದ ಉಂಟಾಗಿರುವ ನಿನ್ನ ದರ್ಪವನ್ನು ಕ್ಷಣಮಾತ್ರದಲ್ಲಿ ವಿನಾಶ ಮಾಡುವೆನು. ಬ್ರಹ್ಮಬಲದ ಮುಂದೆ ನಿನ್ನ ಕ್ಷತ್ರಿಯಬಲವೆಷ್ಟರದು? ಬ್ರಹ್ಮ ಬಲಕ್ಕೂ-ಕ್ಷತ್ರಿಯಬಲಕ್ಕೂ ಹೋಲಿಕೆಯಾದರೂ ಇರುವುದೇ? ನನ್ನ ಬ್ರಹ್ಮ ತೇಜಸ್ಸಿನ ಬಲವೆಷ್ಟೆಂಬುದನ್ನಾದರೂ ನೋಡು."

ವಸಿಷ್ಠರು ಹೀಗೆ ಹೇಳಿ ವಿಶ್ವಾಮಿತ್ರರ ಆಗ್ನೇಯಾಸ್ತ್ರಕ್ಕೆ ಎದುರಾಗಿ

ಬ್ರಹ್ಮದಂಡವನ್ನು ಹಿಡಿದು ನಿಂತರು. ಮೇಲೇರಿ ಬರುತ್ತಿದ್ದ ಘೋರವಾದ ಆಗ್ನೇಯಾಸ್ತ್ರವು ನೀರಿನಿಂದ ಬೆಂಕಿಯು ಶಾಂತವಾಗುವಂತೆ ಬ್ರಹ್ಮದಂಡದಿಂದ ತನ್ನ ಶಕ್ತಿ-ಸಾಮರ್ಥ್ಯಗಳನ್ನು ಕಳೆದುಕೊಂಡು ಕೆಳಕ್ಕೆ ಬಿದ್ದಿತು. ಆಗ್ನೇಯಾಸ್ತ್ರದ ಪರಾಭವದಿಂದಾಗಿ ವಿಶ್ವಾಮಿತ್ರರು ಮತ್ತಷ್ಟು ಕುಪಿತರಾದರು. ವಾರುಣ, ರೌದ್ರ, ಐಂದ್ರ, ಪಾಶುಪತ, ಐಷೀಕ, ಮಾನವ, ಮೋಹನ, ಗಾಂಧರ್ವ, ಸ್ವಾಪನ, ಜೃಂಭಣ, ಮಾದನ, ಸಂತಾಪನ, ವಿಲಾಪನ, ಶೋಷಣ, ದಾರಣ, ವಜ್ರಾಸ್ತ್ರ, ಬ್ರಹ್ಮಪಾಶ, ಕಾಲಪಾಶ, ವರುಣಪಾಶ, ಪೈನಾಕಾಸ್ತ್ರ, ಶುಷ್ಕವಾದ ಮತ್ತು ಆರ್ದ್ರವಾದ ಎರಡು ಅಶನಿಗಳು, ದಂಡಾಸ್ತ್ರ, ಪೈಶಾಚ, ಕ್ರೌಂಚಾಸ್ತ್ರ, ಧರ್ಮಚಕ್ರ, ಕಾಲಚಕ್ರ, ವಿಷ್ಣುಚಕ್ರ, ವಾಯವ್ಯ, ಮಥನ, ಹಯಶಿರ, ಎರಡು ಶಕ್ತ್ಯಾಯುಧಗಳು, ಕಂಕಾಲ, ಮುಸಲ, ಮಹಾಸ್ತ್ರವೆಂದು ಪ್ರಸಿದ್ಧವಾದ ವೈದ್ಯಾಧರ, ದಾರುಣವಾದ ಕಾಲಾಸ್ತ್ರ, ಘೋರವಾದ ತ್ರಿಶೂಲಾಸ್ತ್ರ, ಕಾಪಾಲಾಸ್ತ್ರ, ಕಂಕಣಾಸ್ತ್ರ–ಈ ಮಹಾಸ್ತ್ರಗಳೆಲ್ಲವನ್ನೂ ಅನುಸ್ಯೂತವಾಗಿ ವಸಿಷ್ಠರ ಮೇಲೆ ವಿಶ್ವಾಮಿತ್ರರು ಪ್ರಯೋಗಿಸಿದರು. ಆದರೆ ಅವು ವಸಿಷ್ಠರ ಸಮೀಪಕ್ಕೆ ಹೋಗಲು ಕೂಡ ಅಸಮರ್ಥವಾಗಿ ಎಲ್ಲರಿಗೂ ಅತ್ಯಾಶ್ಚರ್ಯವನ್ನುಂಟುಮಾಡಿದುವು. ವಸಿಷ್ಠರು ತಮ್ಮೆದುರಾಗಿ ಬಂದ ಸರ್ವಾಸ್ತ್ರಗಳನ್ನೂ ಬ್ರಹ್ಮದಂಡದ ಮೂಲಕವಾಗಿ ನುಂಗಿಬಿಡುತ್ತಿದ್ದರು. ವಿಶ್ವಾಮಿತ್ರರು ಪ್ರಯೋಗಿಸಿದ ಆ ಮಹಾಸ್ತ್ರಗಳೆಲ್ಲವೂ ವಸಿಷ್ಠರ ಬ್ರಹ್ಮದಂಡದ ಮುಂದೆ ನಿರ್ವೀರ್ಯಗಳಾದುವು. ವಿಶ್ವಾಮಿತ್ರರು ಬ್ರಹ್ಮಾಸ್ತ್ರವನ್ನು ಧನುಸ್ಸಿನಲ್ಲಿ ಸಂಯೋಜಿಸಿ ಆಕರ್ಷಿಸಿದರು. ಅದನ್ನು ಕಂಡು ಅಗ್ನಿಪ್ರಮುಖರಾದ ದೇವತೆಗಳೂ, ಋಷಿಗಳೂ, ಗಂಧರ್ವರೂ, ಸರ್ಪಾಧಿ ದೇವತೆಗಳೂ ಭ್ರಾಂತರಾದರು. ಮೂರು ಲೋಕಗಳೂ ಭಯದಿಂದ ಕಳವಳಗೊಂಡುವು. ವಿಶ್ವಾಮಿತ್ರರ ಧನುಸ್ಸಿನಿಂದ ಪ್ರಯೋಗಿಸಲ್ಪಟ್ಟ ಬ್ರಹ್ಮಾಸ್ತ್ರವು ಘೋರಶಬ್ದದೊಡನೆ ವಸಿಷ್ಠರಿಗೆದುರಾಗಿ ಹೋಯಿತು. ಆದರೆ, ಮಹಾಘೋರವಾದ ಬ್ರಹ್ಮಾಸ್ತ್ರವನ್ನೂ ಬ್ರಹ್ಮತೇಜೋವಿಶಿಷ್ಟರಾದ ವಸಿಷ್ಠರು ತಾವು ಹಿಡಿದಿದ್ದ ಬ್ರಹ್ಮದಂಡದ ಮೂಲಕವಾಗಿ ನುಂಗಿಬಿಟ್ಟರು. ಬ್ರಹ್ಮಾಸ್ತ್ರವನ್ನು ತಮ್ಮ ಶರೀರದಲ್ಲಿ ಅಡಗಿಸಿಕೊಂಡೊಡನೆಯೇ ಅವರಿಗೆ ಮೂರು ಲೋಕಗಳಿಗೂ ಭ್ರಾಂತಿಯನ್ನುಂಟುಮಾಡುವ, ದಾರುಣವಾದ

ನೋಡಲಶಕ್ಯವಾದ ರೂಪವುಂಟಾಯಿತು. ಹೊಗೆಯಿಂದ ವ್ಯಾಪ್ತವಾದ, ತೇಜೋಮಯವಾದ ಅಗ್ನಿಯಿಂದ ಕಿಡಿಗಳು ಉದುರುವಂತೆ–ಮಹಾತ್ಮರಾದ ವಸಿಷ್ಠರ ನಖಶಿಖಾಂತವಾಗಿದ್ದ ರೋಮಕೂಪಗಳಿಂದ ಕಿಡಿಗಳು ಉದುರಿದುವು. ಮಹರ್ಷಿಗಳಾದ ವಸಿಷ್ಠರ ಕೈಯಲಿದ್ದ ಬ್ರಹ್ಮದಂಡವೂ ಧೂಮರಹಿತವಾದ ಕಾಲಾಗ್ನಿಯಂತೆಯೂ ಮತ್ತೊಂದು ಯಮದಂಡ ದಂತೆಯೂ ಪ್ರಜ್ವಲಿಸುತ್ತಿದ್ದಿತು. ಅಪ್ರತಿಮತೇಜೋವಿಶಿಷ್ಟರಾದ ತಪೋನಿಷ್ಠ ರಲ್ಲಿ ಅಗ್ರಗಣ್ಯರಾದ ವಸಿಷ್ಠ ಮಹರ್ಷಿಗಳನ್ನು ಆಶ್ರಮದಲ್ಲಿದ್ದ ಮಹರ್ಷಿ ಗಳೆಲ್ಲರೂ ಸ್ತೋತ್ರಮಾಡುತ್ತಾ ಹೇಳಿದರು :

"ಮಹಾನುಭಾವರೇ! ನಿಮ್ಮ ಬ್ರಹ್ಮತೇಜಸ್ಸಿನ ಬಲವು ಅಮೋಘ ವಾದುದು ಮತ್ತು ಅಪ್ರಮೇಯವಾದುದು. ಮಹಾತಪಸ್ವಿಗಳಾದ ವಿಶ್ವಾ ಮಿತ್ರರೂ ನಿಮ್ಮಿಂದ ಪರಾಜಿತರಾದರಲ್ಲವೇ? ನಿಮ್ಮ ಬಲವು ಅಮೋಘ ವಾದುದು. ಪ್ರಸನ್ನರಾಗಿರಿ. ಬ್ರಹ್ಮಾಸ್ತ್ರದ ತೇಜಸ್ಸನ್ನು ನಿಮ್ಮ ತೇಜಸ್ಸಿನಲ್ಲಿ ಅಡಗಿಸಿಕೊಳ್ಳಿರಿ. ಮೂರು ಲೋಕಗಳೂ ದುಃಖದಿಂದ ಬಿಡುಗಡೆ ಹೊಂದಲಿ."

ಈ ರೀತಿಯಾಗಿ ಋಷಿಗಳಿಂದ ಪ್ರಾರ್ಥಿತರಾದ ವಸಿಷ್ಠರು ತಮ್ಮ ಉಗ್ರರೂಪವನ್ನು ಶಾಂತಗೊಳಿಸಿದರು. ಪರಾಜಿತರಾದ ವಿಶ್ವಾಮಿತ್ರರೂ ದೀರ್ಘವಾದ ನಿಟ್ಟುಸಿರುಬಿಟ್ಟು ಹೀಗೆಂದರು :

ಧಿಗ್ಬಲಂ ಕ್ಷತ್ರಿಯಬಲಂ ಬ್ರಹ್ಮತೇಜೋಬಲಂ ಬಲಮ್ ।
ಏಕೇನ ಬ್ರಹ್ಮದಣ್ಡೇನ ಸರ್ವಾಸ್ತ್ರಾಣಿ ಹತಾನಿ ಮೇ ॥೨೩॥

"ಕ್ಷಾತ್ರಬಲಕ್ಕೆ ಧಿಕ್ಕಾರವಿರಲಿ! ಬ್ರಹ್ಮತೇಜಸ್ಸಿನ ಬಲವೇ ಬಲ. ನಾನು ತಪಸ್ಸಿನಿಂದ ಸಂಪಾದಿಸಿದ್ದ ಮಹಾಸ್ತ್ರಗಳೆಲ್ಲವೂ ಒಂದೇ ಒಂದು ಬ್ರಹ್ಮದಂಡದಿಂದ ವಿನಾಶಹೊಂದಿದುವಲ್ಲವೇ? ನಾನಿಂದು ಬ್ರಹ್ಮತೇಜಸ್ಸಿನ ಬಲವೆಷ್ಟೆಂಬುದನ್ನು ಪ್ರತ್ಯಕ್ಷವಾಗಿ ಕಂಡೆನು. ಮುಂದೆ ನಾನು ಜಿತೇಂದ್ರಿಯ ನಾಗಿ ಮತ್ತು ಶಾಂತಚಿತ್ತನಾಗಿ ಬ್ರಹ್ಮತ್ವಪ್ರಾಪ್ತಿಗೆ ಕಾರಣಭೂತವಾದ ಮಹಾತಪಸ್ಸನ್ನು ಅನುಷ್ಠಾನಮಾಡುವೆನು."

ಐ೬ನೆಯ ಸರ್ಗವು ಮುಗಿಯಿತು.

ವಿಶ್ವಾಮಿತ್ರರ ತಪಸ್ಸು : ತ್ರಿಶಂಕುವು ಯಜ್ಞಮಾಡಿಸಲು ವಸಿಷ್ಠರನ್ನು ಪ್ರಾರ್ಥಿಸಿದುದು : ಅವರ ಅಸಮ್ಮತಿ : ತ್ರಿಶಂಕುವು ವಸಿಷ್ಠರ ಪುತ್ರರನ್ನು ಶರಣುಹೊಂದಿದುದು

ತತಃ ಸಂತಪ್ತಹೃದಯಃ ಸ್ಮರನ್ನಿಗ್ರಹಮಾತ್ಮನಃ ।
ವಿನಿಃಶ್ವಸ್ಯ ವಿನಿಃಶ್ವಸ್ಯ ಕೃತವೈರೋ ಮಹಾತ್ಮನಾ ॥೧॥

ವಸಿಷ್ಠರಿಂದ ತಮಗುಂಟಾದ ಪರಾಜಯವನ್ನು ನೆನೆದು ವಿಶ್ವಾಮಿತ್ರರ ಹೃದಯವು ಶೋಕದಿಂದ ಸಂತಪ್ತವಾಯಿತು. ಕ್ಷಣ-ಕ್ಷಣಕ್ಕೂ ಸುದೀರ್ಘ ವಾಗಿ ನಿಟ್ಟುಸಿರುಬಿಡುತ್ತಿದ್ದರು. ತಮ್ಮನ್ನು ಪರಾಭವಗೊಳಿಸಿದುದಕ್ಕಾಗಿ ವಿಶ್ವಾಮಿತ್ರರು ವಸಿಷ್ಠರನ್ನು ಶತ್ರುವೆಂದೇ ಭಾವಿಸಿದರು. ತಪಸ್ಸನ್ನು ಮಾಡಲು ನಿಶ್ಚಯಿಸಿ ಮಹಾರಾಣಿಯೊಡನೆ ದಕ್ಷಿಣದಿಕ್ಕಿನ ಕಡೆಗೆ ಪ್ರಯಾಣಮಾಡಿ ದರು. ತಪೋವನವೊಂದರಲ್ಲಿ ಘೋರವಾದ ತಪಸ್ಸನ್ನು ಮಾಡಲು ಉಪ ಕ್ರಮಿಸಿದರು.* ಕಂದ-ಮೂಲ-ಫಲಗಳನ್ನೇ ಸೇವಿಸುತ್ತಾ ನಿಯತೇಂದ್ರಿಯ ರಾಗಿ ಘೋರವಾದ ತಪಸ್ಸನ್ನು ಮಾಡುತ್ತಿದ್ದರು. ಅದೇ ಕಾಲದಲ್ಲಿ ಅವರಿಗೆ ಸತ್ಯಧರ್ಮಪರಾಯಣರಾದ ಹವಿಷ್ಯಂದ, ಮಧುಷ್ಯಂದ, ದೃಢನೇತ್ರ, ಮಹಾ ರಥರೆಂಬ ನಾಲ್ವರು ಮಕ್ಕಳು ಜನಿಸಿದರು. ವಿಶ್ವಾಮಿತ್ರರು ಬ್ರಹ್ಮರ್ಷಿಯಾಗ ಬೇಕೆಂಬ ದೃಢನಿಶ್ಚಯದಿಂದ ಒಂದು ಸಾವಿರ ವರ್ಷಗಳು ಮಾಡಿದ ತಪಸ್ಸಿ ನಿಂದ ಲೋಕಪಿತಾಮಹನಾದ ಚತುರ್ಮುಖನು ಪ್ರಸನ್ನನಾಗಿ ದೇವತೆಗಳೊ ಡನೆ ಪ್ರತ್ಯಕ್ಷನಾಗಿ ಬಂದು, ತಪೋಧನರಾದ ವಿಶ್ವಾಮಿತ್ರರನ್ನು ಕುರಿತು ಸುಮಧುರವಾದ ಈ ಮಾತುಗಳನ್ನಾಡಿದನು :

* ವಿಶ್ವಾಮಿತ್ರರಿಗೆ ವಸಿಷ್ಠರ ಮೇಲೆ ದ್ವೇಷವುಂಟಾಯಿತೆಂಬುದನ್ನು ಈ ಶ್ಲೋಕ ದಲ್ಲಿ ಸೂಚಿಸಿದ್ದಾರೆ. ಆದರೆ ರಾಗ-ದ್ವೇಷಗಳಿರುವವರೆಗೂ ವಿಶ್ವಾಮಿತ್ರರು ಬ್ರಹ್ಮರ್ಷಿ ಯಾಗಲಾರರು. ತಪಶ್ಶಕ್ತಿಯನ್ನು ಎಷ್ಟು ಬೇಕಾದರೂ ಗಳಿಸಬಹುದು. ಆದರೆ ಬ್ರಹ್ಮರ್ಷಿಯಾಗಬೇಕಾದರೆ ಕಾಮ-ಕ್ರೋಧ-ಲೋಭ-ಮೋಹಾದಿಗಳು ವಿನಾಶವಾಗಲೇ ಬೇಕು. ಎರಡು ಸಂದರ್ಭಗಳಲ್ಲಿಯೂ ಇದು ಸತ್ಯ. ಇವರು ಬ್ರಹ್ಮರ್ಷಿಯಾದರೆ ಅವರ ಮೇಲಿನ ದ್ವೇಷವು ಉಳಿಯಲಾರದು. ಈ ರಹಸ್ಯವನ್ನು ವಿಶ್ವಾಮಿತ್ರರ ಮುಂದಿನ ಜೀವನದಲ್ಲಿ ನಾವು ಕಾಣಬಹುದಾಗಿದೆ.

"ವಿಶ್ವಾಮಿತ್ರ! ಘೋರವಾದ ನಿನ್ನ ತಪಸ್ಸಿಗೆ ಮೆಚ್ಚಿರುವೆನು. ರಾಜರ್ಷಿಯಾದವನು ಪಡೆಯಬಹುದಾದ ಲೋಕಗಳೆಲ್ಲವನ್ನೂ ಘೋರ ವಾದ ತಪಃಪ್ರಭಾವದಿಂದ ನೀನು ಪಡೆದಿರುವೆ. ಈ ಘೋರತಪಸ್ಸಿನಿಂದಾಗಿ ನೀನು ರಾಜರ್ಷಿಯಾದೆಯೆಂದು ನಾವು ಭಾವಿಸಿರುವೆವು."

ಲೋಕೇಶ್ವರನಾದ ಬ್ರಹ್ಮನು ಹೀಗೆ ಹೇಳಿ ದೇವತೆಗಳೊಡನೆ ವಿಶ್ವಾ ಮಿತ್ರರ ಆಶ್ರಮದಿಂದ ಹೊರಟನು. ದೇವತೆಗಳು ಸ್ವರ್ಗಲೋಕಕ್ಕೂ, ಬ್ರಹ್ಮನು ಬ್ರಹ್ಮಲೋಕಕ್ಕೂ ತೆರಳಿದರು.

ಬ್ರಹ್ಮನು ಹೇಳಿದ ಮಾತುಗಳನ್ನು ಕೇಳಿ, ವಿಶ್ವಾಮಿತ್ರರಿಗೆ ಬಹಳವಾದ ನಾಚಿಕೆಯುಂಟಾಯಿತು. ತಲೆಯನ್ನು ತಗ್ಗಿಸಿಕೊಂಡು ಕುಳಿತರು. ದೈನ್ಯದಿಂದ ಹೇಳಿಕೊಂಡರು : "ಬ್ರಹ್ಮರ್ಷಿಯಾಗಲೆಂದೇ ಒಂದು ಸಾವಿರ ವರ್ಷಗಳ ಕಾಲ ಅತ್ಯುತ್ಕೃಷ್ಟವಾದ ಅತ್ಯುಗ್ರವಾದ ತಪಸ್ಸನ್ನು ಮಾಡಿದೆನು. ಆದರೆ ಋಷಿ ಗಳೂ, ದೇವತೆಗಳೂ ನನ್ನನ್ನು 'ರಾಜರ್ಷಿ' ಎಂದು ಮಾತ್ರ ಪರಿಗಣಿಸಿರು ತ್ತಾರೆ. ಇದರಿಂದ ನಾನಿದುವರೆಗೂ ಮಾಡಿದ ತಪಸ್ಸು ವ್ಯರ್ಥವೆಂದೇ ಭಾವಿಸುತ್ತೇನೆ. ನಾನು ಬ್ರಹ್ಮರ್ಷಿಯಾಗುವವರೆಗೂ ತಪಶ್ಚರಣೆ ಮಾಡಿಯೇ ತೀರುವೆನು"–ಎಂಬುದಾಗಿ ಮನಸ್ಸಿನಲ್ಲಿ ನಿಶ್ಚಯಿಸಿ, ಪುನಃ ಘೋರವಾದ ತಪಸ್ಸಿನಲ್ಲಿ ನಿರತರಾದರು.

ಕಾಕುತ್ಸ್ಥ! ಅದೇ ಸಮಯದಲ್ಲಿ ಇಕ್ಷ್ವಾಕುವಂಶವನ್ನು ಬೆಳಗಿಸುತ್ತಿದ್ದ ತ್ರಿಶಂಕುವೆಂಬ ಪ್ರಸಿದ್ಧನಾದ ರಾಜನೊಬ್ಬನಿದ್ದನು. ಅವನು ಸತ್ಯವಾದಿಯು. ಜಿತೇಂದ್ರಿಯನು. ಅವನಿಗೆ ಯಾಗಮಾಡಿ, ಅದರ ಫಲದಿಂದ ದೇವತೆಗಳ ಸ್ಥಾನವಾಗಿರುವ ಸ್ವರ್ಗಕ್ಕೆ ಸಶರೀರನಾಗಿ ಹೋಗಬೇಕೆಂಬ ಅಭಿಲಾಷೆ ಯುಂಟಾಯಿತು. ತ್ರಿಶಂಕುವು ಕುಲಪುರೋಹಿತರಾದ ವಸಿಷ್ಠರನ್ನು ಸಂದ ರ್ಶಿಸಿ ತನ್ನ ಮನಸ್ಸಿನ ಅಭಿಲಾಷೆಯನ್ನು ತಿಳಿಸಿದನು. ವಸಿಷ್ಠರು ಕ್ಷಣಕಾಲ ಯೋಚಿಸಿ–"ಅದು ಶಕ್ಯವಿಲ್ಲ"–ಎಂದು ಉತ್ತರಿಸಿದರು. ಹೀಗೆ ವಸಿಷ್ಠರಿಂದ ತಿರಸ್ಕೃತನಾದ ತ್ರಿಶಂಕುವು ದಕ್ಷಿಣದಿಕ್ಕಿನೆಡೆಗೆ ಹೊರಟು, ಬಹಳ ದೂರ ನಡೆದು, ತಾನು ಸಂಕಲ್ಪಿಸಿದ್ದ ಕರ್ಮದ ಸಿದ್ಧಿಗಾಗಿ ವಸಿಷ್ಠರ ಮಕ್ಕಳಿದ್ದ ಆಶ್ರಮಕ್ಕೆ ತೆರಳಿದನು. ಅನವರತವಾದ ತಪಶ್ಚರಣೆಯಲ್ಲಿ ನಿರತರಾಗಿದ್ದ

ವಸಿಷ್ಠರ ನೂರು ಮಕ್ಕಳಿದ್ದ ದಿವ್ಯಾಶ್ರಮಕ್ಕೆ ರಾಜನು ಹೋಗಿ–ಯಶಸ್ವಿ ಗಳಾದ, ಪರಮಾದ್ಭುತವಾದ ತೇಜಸ್ಸಿನಿಂದ ಕೂಡಿದ್ದ, ನೂರು ಮಂದಿ ವಸಿಷ್ಠಪುತ್ರರನ್ನೂ ಸಂದರ್ಶಿಸಿದನು. ತ್ರಿಶಂಕುವು ಮಹಾತ್ಮರಾದ ನೂರು ಮಂದಿ ಗುರುಪುತ್ರರಿಗೂ ಜ್ಯೇಷ್ಠಾನುಕ್ರಮವಾಗಿ ಅಭಿವಾದನಪೂರ್ವಕವಾದ ನಮಸ್ಕಾರಮಾಡಿ, ನಾಚಿಕೆಯಿಂದ ತಲೆತಗ್ಗಿಸಿ, ಬದ್ಧಾಂಜಲಿಯಾಗಿ ಹೇಳಿದನು:

"ಗುರುಸುತರೇ! ನಾನು ಮಹಾಮಹಿಮರಾದ ವಸಿಷ್ಠರಿಂದ ತಿರಸ್ಕೃತ ನಾಗಿ ತಮ್ಮ ಆಶ್ರಮಕ್ಕೆ ಬಂದಿರುವೆನು. ಇಂದು ನೀವೇ ನನ್ನ ರಕ್ಷಕರು. ನಿಮಗೆ ಶರಣಾಗತನಾಗಿದ್ದೇನೆ. ನನ್ನನ್ನು ಉದ್ಧರಿಸಿರಿ. ನಿಮಗೆ ಮಂಗಳ ವಾಗಲಿ. ಸಶರೀರನಾಗಿಯೇ ಸ್ವರ್ಗಕ್ಕೆ ಹೋಗುವಂತಹ ಫಲಕೊಡುವ ಮಹಾಯಜ್ಞವನ್ನು ಮಾಡಲು ಇಚ್ಛಿಸಿರುತ್ತೇನೆ. ಅದಕ್ಕೆ ನೀವು ಅನುಜ್ಞೆ ಯನ್ನು ನೀಡಿರಿ. ಗುರುಪುತ್ರರಾದ ನಿಮ್ಮೆಲ್ಲರನ್ನೂ ಈ ಯಜ್ಞವನ್ನು ಮಾಡಿಸಬೇಕೆಂದು ನಮಸ್ಕರಿಸಿ ಕೇಳಿಕೊಳ್ಳುತ್ತೇನೆ. ತಪಸ್ಸಿನಲ್ಲಿ ಉಪಸ್ಥಿತ ರಾಗಿರುವ ಮಹಾನುಭಾವರಾದ, ಬ್ರಾಹ್ಮಣಸತ್ತಮರಾದ ತಮ್ಮ ಪಾದಗಳನ್ನು ಶಿರಸ್ಸಿನಲ್ಲಿ ಧಾರಣೆಮಾಡಿ ನಮಸ್ಕರಿಸಿ ಬೇಡಿಕೊಳ್ಳುತ್ತೇನೆ. ನೀವೆಲ್ಲರೂ ಒಟ್ಟಾಗಿ ಸೇರಿ ಸಶರೀರನಾಗಿಯೇ ದೇವಲೋಕಕ್ಕೆ ಹೋಗಬೇಕೆಂದಿರುವ ನನ್ನ ಸಂಕಲ್ಪದ ಸಿದ್ಧಿಯಾಗುವಂತೆ ಮಹಾಯಾಗವನ್ನು ನನ್ನಿಂದ ಮಾಡಿಸಿರಿ. ಇಕ್ಷ್ವಾಕುಕುಲಪುರೋಹಿತರಾದ ವಸಿಷ್ಠರೇ ನನಗೂ ಶರಣ್ಯರು. ವಿದ್ವಾಂಸ ರಾದ ಪುರೋಹಿತರು ರಾಜರನ್ನು ಯಾವಾಗಲೂ ಉದ್ಧಾರಮಾಡುತ್ತಾರೆ. ವಸಿಷ್ಠರು ನನ್ನ ಪ್ರಾರ್ಥನೆಯನ್ನು ಮನ್ನಿಸದಿರುವ ಕಾರಣ ಅವರ ಮಕ್ಕಳಾಗಿ ರುವ ನೀವೇ ನನ್ನ ಪುರೋಹಿತರು. ಇಂದು ನನ್ನ ಭಾಗಕ್ಕೆ ನೀವೇ ದೇವತಾ ಸ್ವರೂಪರಾಗಿರುವಿರಿ."

ಐ೭ನೆಯ ಸರ್ಗವು ಮುಗಿಯಿತು.

ಬಾಲಕಾಂಡ ೫೮ನೆಯ ಸರ್ಗ

ವಸಿಷ್ಠಪುತ್ರರ ಶಾಪದಿಂದ ತ್ರಿಶಂಕುವಿಗೆ ಚಂಡಾಲತ್ವಪ್ರಾಪ್ತಿ: ವಿಶ್ವಾಮಿತ್ರರನ್ನು ಶರಣುಹೊಂದಿ ಯಾಗವನ್ನು ಮಾಡಿಸುವಂತೆ ತ್ರಿಶಂಕುವಿನ ಪ್ರಾರ್ಥನೆ

ತತಸ್ತ್ರಿಶಙ್ಕೋರ್ವಚನಂ ಶ್ರುತ್ವಾ ಕ್ರೋಧಸಮನ್ವಿತಮ್ ।
ಋಷಿಪುತ್ರಶತಂ ರಾಮ ರಾಜಾನಮಿದಮಬ್ರವೀತ್ ॥೧॥

ತ್ರಿಶಂಕುವಿನ ಕ್ರೋಧಪೂರ್ಣವಾದ ಮಾತುಗಳನ್ನು ಕೇಳಿ ನೂರು ಮಂದಿ ವಸಿಷ್ಠಪುತ್ರರೂ ರಾಜನಿಗೆ ಹೇಳಿದರು :

"ದುಷ್ಟಬುದ್ಧಿಯುಳ್ಳವನೇ! ಸತ್ಯಸಂಕಲ್ಪನಾದ ಗುರುವಿನಿಂದ ನೀನು ತಿರಸ್ಕೃತನಾಗಿರುವೆ. ನಿನ್ನ ಪ್ರಾರ್ಥನೆಯನ್ನು ವಸಿಷ್ಠರು 'ಅಶಕ್ಯ'ವೆಂದು ಹೇಳಿ ನಿರಾಕರಿಸಿರುತ್ತಾರೆ. ಹೀಗಿರುವಾಗ ಅವರ ಮಾತನ್ನುಲ್ಲಂಘಿಸಿ, ಬೇರೆಯವರ ಆಶ್ರಯವನ್ನು ಹೇಗೆತಾನೇ ಪಡೆಯುವೆ? ನೀನೇ ಹೇಳಿದಂತೆ ಇಕ್ಷ್ವಾಕುವಂಶದವರೆಲ್ಲರಿಗೂ ಪುರೋಹಿತರಾದ ವಸಿಷ್ಠರೇ ಶರಣ್ಯರು ಮತ್ತು ಅವರೇ ಶ್ರೇಷ್ಠರಾದ ಆಚಾರ್ಯರು. ಸತ್ಯವಾದಿಗಳಾದ ಅವರ ಮಾತನ್ನುಲ್ಲಂಘಿಸಿ ನಡೆಯಲು ಖಂಡಿತವಾಗಿಯೂ ಶಕ್ಯವಿಲ್ಲ. ಸಕಲ ಸಾಮರ್ಥ್ಯವಿಶಿಷ್ಟರಾದ ಸರ್ವಜ್ಞರಾದ ವಸಿಷ್ಠಮಹರ್ಷಿಗಳೇ ಯಜ್ಞವನ್ನು 'ಅಶಕ್ಯ'ವೆಂದು ಹೇಳಿರುವಾಗ ಅಂತಹ ಮಹಾಯಜ್ಞವನ್ನು ಮಾಡಿಸಲು ನಾವಾದರೂ ಹೇಗೆ ಸಮರ್ಥರಾದೇವು? ನೀನಿನ್ನೂ ಏನು ತಿಳಿಯದ ಮೂರ್ಖನಾಗಿರುವೆ. ವಸಿಷ್ಠರು ಆಗುವುದಿಲ್ಲವೆಂದು ಹೇಳಿದ ಈ ಯಜ್ಞ ಮಾಡಲು ಪುನಃ ಪ್ರಯತ್ನಿಸದೇ ನಿನ್ನ ರಾಜಧಾನಿಗೆ ಹಿಂದಿರುಗು. ಮೂರು ಲೋಕಗಳಿಗೂ ಎಲ್ಲ ವಿಧವಾದ ಯಜ್ಞಗಳನ್ನೂ ಮಾಡಿಸಲು ಪೂಜ್ಯರಾದ ವಸಿಷ್ಠರು ಸಮರ್ಥರಾಗಿದ್ದಾರೆ. ಅಂತಹ ವಸಿಷ್ಠರೇ ಅಶಕ್ಯವೆಂದು ಹೇಳಿರುವ ಮಹಾಯಜ್ಞವನ್ನು ನಿನ್ನಿಂದ ಮಾಡಿಸಿ ಅವರನ್ನು ಅವಮಾನಗೊಳಿಸಲು ನಮಗೆ ಹೇಗೆತಾನೇ ಸಾಧ್ಯವಾದೀತು?"

ರಾಮ! ಕೋಪದಿಂದ ಯುಕ್ತವಾದ ಅವರ ಬಿರುನುಡಿಗಳನ್ನು ಕೇಳಿ ತ್ರಿಶಂಕುವು ಪುನಃ ಹೇಳಿದನು : "ತಪೋಧನರೇ! ನಮ್ಮ ಕುಲಪುರೋಹಿತ

ರಾದ ವಸಿಷ್ಠರೂ ನನ್ನ ಪ್ರಾರ್ಥನೆಯನ್ನು ನಿರಾಕರಿಸಿದರು. ಅಂತೆಯೇ ಅವರ ಮಕ್ಕಳಾದ ನೀವೂ ನನ್ನ ಪ್ರಾರ್ಥನೆಯನ್ನು ನಿರಾಕರಿಸಿರುವಿರಿ. ನನ್ನ ಸಂಕಲ್ಪಸಿದ್ಧಿಗಾಗಿ ಬೇರೆಯ ಗುರುವಿನ ಆಶ್ರಯವನ್ನು ಪಡೆಯಲು ಹೋಗುವೆನು. ನಿಮ್ಮೆಲ್ಲರಿಗೂ ಮಂಗಳವಾಗಲಿ."

ವಸಿಷ್ಠರನ್ನು ಬಿಟ್ಟು ಅನ್ಯಗುರುವಿನ ಆಶ್ರಯಪಡೆಯಲು ಹೋಗುವುದಾಗಿ ಹೇಳಿದ ಮಹಾಘೋರವಾದ, ಅತ್ಯಂತಕಟುವಾದ ರಾಜನ ಮಾತುಗಳನ್ನು ಕೇಳಿ ವಸಿಷ್ಠಪುತ್ರರು ಪರಮಕ್ರುದ್ಧರಾಗಿ–'ನಿನಗೆ ಚಂಡಾಲತ್ವವು ಬರಲಿ'–ಎಂದು ರಾಜನನ್ನು ಶಪಿಸಿ ತಮ್ಮ ಆಶ್ರಮಗಳಿಗೆ ತೆರಳಿದರು. ರಾತ್ರಿಯು ಕಳೆಯುತ್ತಿದ್ದಂತೆಯೇ ವಸಿಷ್ಠಪುತ್ರರ ಶಾಪದ ಪ್ರಭಾವದಿಂದಾಗಿ ರಾಜನಿಗೆ ಚಂಡಾಲತ್ವವು ಉಂಟಾಯಿತು. ಅವನುಟ್ಟಿದ್ದ ಪೀತಾಂಬರವು ನೀಲಾಂಬರವಾಯಿತು. ಚಂದ್ರನಂತೆ ಪರಿಶೋಭಿಸುತ್ತಿದ್ದ ತ್ರಿಶಂಕುವು ನೀಲಪುರುಷನಾದನು. (ಬೆಳ್ಳಗಿದ್ದವನು ಕಪ್ಪಾದನು.) ಸುಂದರಮುಖಾರವಿಂದವಿದ್ದವನು ಕ್ರೂರವಾದ ಮುಖಭಾವವುಳ್ಳವನಾದನು. ಅವನಿಗಿದ್ದ ದೀರ್ಘವಾದ ಕೇಶರಾಶಿಯು ಮೊಟಕಾಯಿತು. ಸುಗಂಧದ್ರವ್ಯಗಳಿಂದ ಲೇಪಿತವಾಗಿದ್ದ ಶರೀರವು ಚಿತಾಭಸ್ಮದಿಂದ ಅನುಲೇಪಿತವಾಯಿತು. ಜಾಜೀ, ಕುಂದ, ಮಂದಾರಾದಿ ಕುಸುಮಮಾಲೆಗಳಿಂದ ಅಲಂಕೃತವಾಗಿದ್ದ ತ್ರಿಶಂಕುವಿನ ಶರೀರವು ಚಿತೆಯ ಮೇಲೆ ಹಾಕುವ ರಕ್ತಪುಷ್ಪದ ಮಾಲೆಯಿಂದ ಭೀಕರವಾಯಿತು. ಸ್ವರ್ಣಮಯವಾದ ಅಂಗದ-ಕೇಯೂರಾದಿಗಳೆಲ್ಲವೂ ಕಬ್ಬಿಣದ ಆಭರಣಗಳಾದುವು.

ಚಂಡಾಲರೂಪಿಯಾದ ತಮ್ಮ ರಾಜನನ್ನು ಕಂಡು ಅವನನ್ನು ಅನುಸರಿಸಿ ಹೋಗಿದ್ದ ಮಂತ್ರಿಗಳೂ ಮತ್ತು ಪಟ್ಟಣಿಗರೂ ಭೀತರಾಗಿ ಅವನನ್ನು ಬಿಟ್ಟು ಓಡಿಹೋದರು. ಅನಂತರ ಮಹಾಧೈರ್ಯಶಾಲಿಯಾದ ತ್ರಿಶಂಕುವೊಬ್ಬನೇ ಕಾರ್ಯಸಿದ್ಧಿಗಾಗಿ ಹಗಲಿರುಳೂ ದುಃಖದಿಂದ ಪರಿತಪಿಸುತ್ತಾ, ಬಹಳ ದೂರ ನಡೆದು ಕಡೆಗೆ ವಿಶ್ವಾಮಿತ್ರರು ತಪಶ್ಚರಣೆಮಾಡುತ್ತಿದ್ದ ಆಶ್ರಮಕ್ಕೆ ಹೋದನು. ಉದ್ದಿಷ್ಟವಾದ ಯಾಗವನ್ನು ಮಾಡಿಸಲು ಗುರುವಿನ ಮತ್ತು ಗುರುಪುತ್ರರ ನಿರಾಕರಣೆ ಹಾಗೂ ಗುರುಪುತ್ರರ ಶಾಪ–ಈ ಎರಡ

ರಿಂದ ರಾಜನು ಐಹಿಕಾಮುಷ್ಮಿಕಫಲಗಳೆರಡನ್ನೂ ಕಳೆದುಕೊಂಡಿದ್ದನು. ಈ ರೀತಿಯಲ್ಲಿ ಫಲಹೀನನಾಗಿದ್ದ, ಚಂಡಾಲರೂಪಿಯಾಗಿದ್ದ ತ್ರಿಶಂಕುರಾಜನನ್ನು ಕಂಡು ವಿಶ್ವಾಮಿತ್ರರು ಅವನ ವಿಷಯದಲ್ಲಿ ಕಾರುಣ್ಯವನ್ನು ಹೊಂದಿದರು. ಮಹಾತೇಜಸ್ವಿಗಳಾದ, ಪರಮಧಾರ್ಮಿಕರಾದ ವಿಶ್ವಾಮಿತ್ರರು 'ನಿನಗೆ ಮಂಗಳವಾಗಲಿ'–ಎಂದು ಘೋರರೂಪಿಯಾಗಿದ್ದ ತ್ರಿಶಂಕುವಿಗೆ ಕರುಣೆ ಯಿಂದ ಹೇಳಿದರು :

"ರಾಜಪುತ್ರ! ಮಹಾಬಲ! ಅಯೋಧ್ಯಾಧಿಪತಿಯೇ! ವೀರ! ನೀನಿ ಲ್ಲಿಗೆ ಆಗಮಿಸಿರುವ ಕಾರಣವಾದರೂ ಏನು? ಯಾರ ಶಾಪದಿಂದಾಗಿ ನಿನಗೆ ಚಂಡಾಲತ್ವದ ಪ್ರಾಪ್ತಿಯಾಗಿರುವುದು? ಎಲ್ಲವನ್ನೂ ವಿವರಿಸಿ ಹೇಳು."

ವಿಶ್ವಾಮಿತ್ರರ ಕರುಣಾರಸಪೂರಿತವಾದ ಮಾತುಗಳನ್ನು ಕೇಳಿ, ಚಂಡಾಲತ್ವವನ್ನು ಹೊಂದಿದ್ದ, ವಾಕ್ಯಜ್ಞನಾದ ತ್ರಿಶಂಕುವು ಕೈಮುಗಿದು ವಾಕ್ಯಕೋವಿದರಾದ ವಿಶ್ವಾಮಿತ್ರರಿಗೆ ಹೇಳಿದನು :

"ಮಹಾನುಭಾವರೇ! ನನ್ನ ಪುರೋಹಿತರಾದ ವಸಿಷ್ಠರಿಂದಲೂ ಮತ್ತು ಅವರ ಪುತ್ರರಿಂದಲೂ ನಾನು ತಿರಸ್ಕೃತನಾದೆನು. ನನ್ನ ಇಚ್ಛೆಯನ್ನು ಪೂರ್ಣಮಾಡಲು ಶಕ್ಯವಿಲ್ಲವೆಂದು ಹೇಳಿ, ನನ್ನನ್ನು ತಿರಸ್ಕರಿಸಿದರು. ಅದ ರಿಂದ ನಾನು ವಿಫಲನಾದುದು ಮಾತ್ರವಲ್ಲ ; ಭ್ರಷ್ಟನೂ ಆದೆನು. ಫಲವನ್ನು ಉದ್ದೇಶಿಸಿ ಸಾಧನೆಗೆಂದು ಹೋದ ನಾನು ಅದಕ್ಕೆ ವಿರುದ್ಧವಾದ ಫಲವನ್ನು ಪಡೆಯಬೇಕಾಯಿತು. ಸಶರೀರನಾಗಿಯೇ ಸ್ವರ್ಗಕ್ಕೆ ಹೋಗಬೇಕೆಂಬ ಅಭಿ ಲಾಷೆಯುಂಟಾಯಿತು. ಅದಕ್ಕಾಗಿ ನೂರು ಯಜ್ಞಗಳನ್ನು ಮಾಡಿದೆನು. ಆದರೆ ನೂರು ಯಾಗಗಳನ್ನು ಮಾಡಿಯೂ ಫಲವನ್ನು ಪಡೆಯಲು ನನಗೆ ಸಾಧ್ಯವಾಗಲಿಲ್ಲ. ನಾನು ಹಿಂದೆಂದೂ ಸುಳ್ಳಾಡಿದವನಲ್ಲ ; ಮುಂದೆಯೂ ಆಡತಕ್ಕವನಲ್ಲ. ಎಂತಹ ಕಷ್ಟಪರಿಸ್ಥಿತಿಯಲ್ಲಿಯೂ ಸ್ವಧರ್ಮವಾದ ಕ್ಷತ್ರ ಧರ್ಮವನ್ನು ಪರಿಪಾಲಿಸುತ್ತಿರುವೆನು. ಈ ವಿಷಯವನ್ನು ಕ್ಷತ್ರಧರ್ಮದ ಮೇಲೆ ಆಣೆಯಿಟ್ಟು ಹೇಳುತ್ತೇನೆ. ಅನೇಕಾನೇಕಯಜ್ಞಗಳನ್ನು ನಾನು ಮಾಡಿ ದ್ದೇನೆ. ಪ್ರಜೆಗಳನ್ನು ಧರ್ಮದಿಂದ ಪರಿಪಾಲಿಸಿದ್ದೇನೆ. ಮಹಾತ್ಮರಾದ ಗುರು ಜನರನ್ನು ಸದ್ಗುಣಸದಾಚಾರಯುಕ್ತವಾದ ಸತ್ಕಾರದಿಂದ ಸಂತೋಷಗೊಳಿಸಿ ದ್ದೇನೆ. ಸದ್ಧರ್ಮಾಚರಣೆಯಲ್ಲಿ ನಿರತನಾಗಿ, ಸಶರೀರನಾಗಿ ಸ್ವರ್ಗಕ್ಕೆ

ಹೋಗಲು ಕಾರಣಭೂತವಾದ ಯಜ್ಞವನ್ನು ಮಾಡಲು ಬಯಸಿದ ನನ್ನ ವಿಷಯದಲ್ಲಿ ಮಹಾತ್ಮರಾದ ಗುರುಜನರು ಸಂತೋಷವನ್ನು ಹೊಂದಲಿಲ್ಲ. ನನ್ನೀ ಅನುಭವದಿಂದ ಮನುಷ್ಯಪ್ರಯತ್ನಕ್ಕಿಂತಲೂ ದೈವಬಲವೇ ಹೆಚ್ಚಿನ ದೆಂಬ ನಿರ್ಧಾರಕ್ಕೆ ಬಂದಿದ್ದೇನೆ. ಪುರುಷಪ್ರಯತ್ನವು ನಿರರ್ಥಕವಾದುದು. ದೈವದಿಂದಲೇ ಸಕಲಜಗತ್ತೂ ವ್ಯಾಪ್ತವಾಗಿರುವುದು. ಆದುದರಿಂದ ಇಂದು ದೈವವೇ ನನಗೆ ದಿಕ್ಕಾಗಬೇಕು. ಅತಿದುಃಖಿತನಾಗಿರುವ, ದಯಾಮಯರಾದ ನಿಮ್ಮ ಅನುಗ್ರಹವನ್ನು ಅಭಿಲಾಷಿಸಿ ಬಂದಿರುವ, ಕಾರ್ಯಸಿದ್ಧಿಗೆ ದೈವಾನು ಕೂಲದಿಂದಲೂ ವಂಚಿತನಾಗಿರುವ ನಿರ್ಭಾಗ್ಯನಾದ ನನಗೆ ನೀವು ಅನುಗ್ರಹ ಮಾಡಲು ಸಮರ್ಥರಾಗಿರುವಿರಿ. ನಿಮ್ಮನ್ನು ಬಿಟ್ಟರೆ ನನಗೆ ಬೇರಾರೂ ರಕ್ಷಕ ರಿಲ್ಲ. ಆದುದರಿಂದ ನಿಮ್ಮನ್ನು ಬಿಟ್ಟು ನಾನು ಬೇರೆಯವರ ಆಶ್ರಯವನ್ನು ಪಡೆಯಲೂ ಹೋಗುವುದಿಲ್ಲ. ನಿಮ್ಮ ಪುರುಷಪ್ರಯತ್ನದಿಂದ ದೈವೋಪ ಹತವಾಗಿರುವ ನನ್ನ ದೌರ್ಭಾಗ್ಯವನ್ನು ಹೋಗಲಾಡಿಸಿ ಸೌಭಾಗ್ಯವನ್ನುಂಟು ಮಾಡಲು ನೀವು ಸರ್ವಥಾ ಶಕ್ತರಾಗಿರುವಿರಿ."

೫೮ನೆಯ ಸರ್ಗವು ಮುಗಿಯಿತು.

ಬಾಲಕಾಂಡ ೫೯ನೆಯ ಸರ್ಗ

ತ್ರಿಶಂಕುವಿಗೆ ಯಜ್ಞಮಾಡಿಸಲು ವಿಶ್ವಾಮಿತ್ರರ ಅಂಗೀಕಾರ: ಋಷಿ-ಮುನಿಗಳಿಗೆ ಆರ್ತ್ವಿಜ್ಯಕ್ಕಾಗಿ ಆಹ್ವಾನ: ಆಹ್ವಾನವನ್ನು ತಿರಸ್ಕರಿಸಿದ ಮಹೋದಯನಿಗೂ-ವಸಿಷ್ಠರ ಮಕ್ಕಳಿಗೂ ವಿಶ್ವಾಮಿತ್ರರಿಂದ ಶಾಪಪ್ರದಾನ

ಉಕ್ತವಾಕ್ಯಂ ತು ರಾಜಾನಂ ಕೃಪಯಾ ಕುಶಿಕಾತ್ಮಜಃ ।
ಅಬ್ರವೀನ್ಮಧುರಂ ವಾಕ್ಯಂ ಸಾಕ್ಷಾಚ್ಚಣ್ಡಾಲರೂಪಿಣಮ್ ॥೧॥

ಹೀಗೆ ಹೇಳಿದ ತ್ರಿಶಂಕುವಿನ ಮಾತನ್ನು ಕೇಳಿ ಕುಶಿಕಸುತರಾದ ವಿಶ್ವಾಮಿತ್ರರು ದಯಾಪೂರ್ಣರಾಗಿ ಚಂಡಾಲರೂಪಿಯಾದ ರಾಜನೊಡನೆ ನೇರವಾಗಿ ಈ ಮಾತುಗಳನ್ನಾಡಿದರು :

"ಇಕ್ಷ್ವಾಕುಕುಲಾವತಂಸನೇ! ಮಗು! ನಿನಗೆ ಸ್ವಾಗತವನ್ನು ಬಯಸುತ್ತೇನೆ. ನೀನು ಧಾರ್ಮಿಕನಾದ ರಾಜನೆಂಬುದನ್ನು ನಾನು ತಿಳಿದಿದ್ದೇನೆ. ಆದುದರಿಂದಲೇ ನಿನಗೆ ಆಶ್ರಯವನ್ನು ಕೊಡುತ್ತೇನೆ. ನೀನಿನ್ನು ಭಯಪಡ ಬೇಡ. ಪುಣ್ಯಕರ್ಮಿಗಳಾದ, ಯಜ್ಞಕ್ಕೆ ಸಹಾಯಮಾಡುವ ಋಷಿ-ಮಹರ್ಷಿ ಗಳನ್ನು ಆರ್ತ್ವಿಜ್ಯಕ್ಕೆ ನಾನೇ ಆಹ್ವಾನಿಸುತ್ತೇನೆ. ಅನಂತರ ಯಾವ ವಿಧವಾದ ಕ್ಲೇಶಗಳೂ ಇಲ್ಲದೇ ಆನಂದದಿಂದ ನೀನು ಯಜ್ಞವನ್ನು ಮಾಡಬಹುದು. ಗುರುವಿನ ಶಾಪದಿಂದ ಉಂಟಾಗಿರುವ ಈ ಚಂಡಾಲರೂಪವು ನಿನ್ನಲ್ಲಿ ಹೀಗೆಯೇ ಉಳಿಯುವುದಾದರೆ ಈ ರೂಪದಲ್ಲಿಯೇ ನೀನು ಸ್ವರ್ಗಕ್ಕೆ ಹೋಗುವೆ.

ಹಸ್ತಪ್ರಾಪ್ತಮಹಂ ಮನ್ಯೇ ಸ್ವರ್ಗಂ ತವ ನರಾಧಿಪ ।
ಯಸ್ತ್ವಂ ಕೌಶಿಕಮಾಗಮ್ಯ ಶರಣ್ಯಂ ಶರಣಾಗತಃ ॥೫॥

"ನೀನು ಯಾವಾಗ ಶರಣಾಗತರಕ್ಷಕನಾದ ಕೌಶಿಕನ ಮರೆ ಹೊಕ್ಕೆಯೋ–ಆಗಲೇ ಸಶರೀರಸ್ವರ್ಗವೆಂಬುದು ನಿನ್ನ ಅಂಗೈಯಲ್ಲಿದೆ ಯೆಂದು ನಾನು ಭಾವಿಸಿದ್ದೇನೆ."

ಹೀಗೆ ವಿಶ್ವಾಮಿತ್ರರು ತ್ರಿಶಂಕುವಿಗೆ ಹೇಳಿ ಅವನನ್ನು ಸಂತೈಸಿ, ಪರಮ ಧಾರ್ಮಿಕರಾದ, ಮಹಾಪ್ರಾಜ್ಞರಾದ ತಮ್ಮ ನಾಲ್ವರು ಪುತ್ರರನ್ನು ಯಜ್ಞಕ್ಕೆ ಬೇಕಾದ ಸಂಭಾರಗಳನ್ನು ತರುವ ಕಾರ್ಯಗಳಲ್ಲಿ ನಿಯೋಜಿಸಿದರು. ಹಾಗೂ ಶಿಷ್ಯರೆಲ್ಲರನ್ನೂ ಕರೆದು ಹೇಳಿದರು :

"ನೀವೀಗಲೇ ನನ್ನ ಆಜ್ಞೆಯಂತೆ ಮಹರ್ಷಿಗಳನ್ನೂ, ಅವರ ಶಿಷ್ಯ ರನ್ನೂ, ವಸಿಷ್ಠರ ಮಕ್ಕಳನ್ನೂ, ನಮ್ಮ ಸ್ನೇಹಿತರನ್ನೂ, ವೇದ-ವೇದಾಂಗ ಪಾರಂಗತರಾದ ಋತ್ವಿಜರನ್ನೂ ಕರೆತನ್ನಿರಿ. ನನ್ನ ಕಟ್ಟುನಿಟ್ಟಿನ ಆಹ್ವಾನಕ್ಕೆ ಯಾರಾದರೂ ನನ್ನ ವಿಷಯದಲ್ಲಿ ಏನಾದರೂ ಮಾತನಾಡಿದರೆ ಅವೆಲ್ಲವನ್ನೂ ಸ್ವಲ್ಪವೂ ಮರೆಮಾಚದೇ ಮತ್ತು ಉದಾಸೀನಮಾಡದೇ ಯಥೋಕ್ತ ರೀತಿಯಲ್ಲಿ ನನಗೆ ವಿವರಿಸಿ ಹೇಳಬೇಕು."

ವಿಶ್ವಾಮಿತ್ರರ ಆ ಮಾತುಗಳನ್ನು ಕೇಳಿ ಶಿಷ್ಯರೆಲ್ಲರೂ ನಾನಾದಿಕ್ಕು ಗಳಿಗೆ ಹೊರಟರು. ವಿಶ್ವಾಮಿತ್ರರ ಆಹ್ವಾನವನ್ನು ಅಂಗೀಕರಿಸಿ ಎಲ್ಲ ದೇಶ

ಗಳಿಂದಲೂ ಬ್ರಹ್ಮವಾದಿಗಳಾದ ಋತ್ವಿಜರು ಆಗಮಿಸಿದರು. ಮಹರ್ಷಿಗಳನ್ನು ಆಹ್ವಾನಿಸಲು ಹೋಗಿದ್ದ ವಿಶ್ವಾಮಿತ್ರರ ಶಿಷ್ಯರೂ ಕಾರ್ಯಾನಂತರದಲ್ಲಿ ಅವರ ಆಶ್ರಮಕ್ಕೆ ಆಗಮಿಸಿ ಜಾಜ್ವಲ್ಯಮಾನವಾದ ತೇಜಸ್ಸುಳ್ಳ ಮುನಿಗಳನ್ನು ಕುರಿತು ಯಾವ-ಯಾವ ಬ್ರಹ್ಮವಾದಿಗಳು ಏನೇನು ಹೇಳಿದರೆಂಬುದನ್ನು ತಿಳಿಸಿದರು:

"ಮಹಾಮುನಿಗಳೇ! ನಿಮ್ಮ ಮಾತನ್ನು ಕೇಳಿದೊಡನೆಯೇ ಬ್ರಾಹ್ಮಣರು ಯಜ್ಞದಲ್ಲಿ ಋತ್ವಿಜರಾಗಲೊಪ್ಪಿ ನಮ್ಮ ಆಶ್ರಮಕ್ಕೆ ಈಗಾಗಲೇ ಬರುತ್ತಲಿರುವರು. ಮಹೋದಯನೆಂಬ ಮಹರ್ಷಿಯನ್ನೂ, ನೂರು ಮಂದಿ ವಸಿಷ್ಠಪುತ್ರರನ್ನೂ ಬಿಟ್ಟು ಎಲ್ಲ ದೇಶಗಳ ಋಷಿಗಳೂ ಬರುತ್ತಿದ್ದಾರೆ. ಆದರೆ ನೂರು ಮಂದಿ ವಸಿಷ್ಠಪುತ್ರರು ಯಜ್ಞಕ್ಕೆ ಬರಲು ನಿರಾಕರಿಸಿದ್ದೂ ಅಲ್ಲದೇ ಕೋಪದಿಂದ ಹಿಗ್ಗಿದ ಕಣ್ಣುಗಳಿಂದ ಕೂಡಿ ಏನು ಹೇಳಿದರೆಂಬುದನ್ನು ಕೇಳಿರಿ:

ಕ್ಷತ್ರಿಯೋ ಯಾಜಕೋ ಯಸ್ಯ ಚಣ್ಡಾಲಸ್ಯ ವಿಶೇಷತಃ ।
ಕಥಂ ಸದಸಿ ಭೋಕ್ತಾರೋ ಹವಿಸ್ತಸ್ಯ ಸುರರ್ಷಯಃ ॥೧೩॥

ಬ್ರಾಹ್ಮಣಾ ವಾ ಮಹಾತ್ಮಾನೋ ಭುಕ್ತ್ವಾ ಚಣ್ಡಾಲಭೋಜನಮ್ ।
ಕಥಂ ಸ್ವರ್ಗಂ ಗಮಿಷ್ಯನ್ತಿ ವಿಶ್ವಾಮಿತ್ರೇಣ ಪಾಲಿತಾಃ ॥೧೪॥

'ಚಂಡಾಲನು ಯಜ್ಞಮಾಡುವವನು. ಅವನಿಗೆ ಯಜ್ಞಮಾಡಿಸುವವನು ಕ್ಷತ್ರಿಯನು. ಇಂತಹ ವಿಲಕ್ಷಣವಾದ ಯಜ್ಞದ ಹವಿಸ್ಸನ್ನು ದೇವತೆಗಳೂ–ಯಜ್ಞಶೇಷವನ್ನು ಋಷಿಗಳೂ ಹೇಗೆತಾನೇ ಉಪಭುಂಜಿಸುವರು? ಮಹಾತ್ಮರಾದ ಬ್ರಾಹ್ಮಣರು ಇಹದಲ್ಲಿ ವಿಶ್ವಾಮಿತ್ರರಿಂದ ಪಾಲಿತರಾಗಿ ಯಥೇಚ್ಛವಾಗಿ ಭೂರಿದಕ್ಷಿಣೆಗಳನ್ನು ಪಡೆದು ಸುಖವಾಗಿರಬಹುದಾದರೂ ಪರದಲ್ಲಿ ಅವರುಗಳ ಗತಿಯೇನು? ಚಂಡಾಲನ ಅನ್ನವನ್ನು ತಿಂದು ಪಾಪಭೂಯಿಷ್ಠರಾಗುವ ಇವರು ಸ್ವರ್ಗವನ್ನು ಹೇಗೆತಾನೇ ಪಡೆಯುವರು?'

ಮುನಿಪುಂಗವರೇ! ಮಹೋದಯಮುನಿಯೂ ಮತ್ತು ಕೋಪದಿಂದ ಕೆಂಗಣ್ಣರಾಗಿದ್ದ ವಸಿಷ್ಠಪುತ್ರರೂ ನಾವು ನಿಮಗೆ ವಿಜ್ಞಾಪನೆಮಾಡಿದಂತೆಯೇ ಅತಿನಿಷ್ಠುರವಾದ ಮಾತುಗಳನ್ನಾಡಿದರು."

ಶಿಷ್ಯರು ಹೇಳಿದ ಮಾತುಗಳನ್ನು ಕೇಳಿದೊಡನೆಯೇ ವಿಶ್ವಾಮಿತ್ರರಿಗೆ ಮಹಾಕೋಪವುಂಟಾಯಿತು. ಕಣ್ಣುಗಳು ಕೆಂಪಾದುವು. ತುಟಿಗಳು ಅದುರ ತೊಡಗಿದುವು. ಕಟ-ಕಟನೆ ಹಲ್ಲುಗಳನ್ನು ಕಡಿಯುತ್ತಾ ಹೀಗೆಂದರು :

"ನಾನು ಅತ್ಯುಗ್ರವಾದ ತಪಸ್ಸನ್ನು ಮಾಡುತ್ತಿರುವೆನು. ಇದರಿಂದಾಗಿ ಯಾವ ದೋಷವೂ ನನ್ನನ್ನು ಸ್ಪರ್ಶಮಾಡಲಾರದು.* ಇಂತಹ ನನ್ನನ್ನು ಆ ದುರಾತ್ಮರು ದೂಷಿಸಿದರಲ್ಲವೇ? ಅವರು ಇದಕ್ಕೆ ತಕ್ಕ ಶಿಕ್ಷೆಯನ್ನು ಅನುಭವಿ ಸಲೇಬೇಕು. ಅವರೆಲ್ಲರೂ ನನ್ನ ಶಾಪದಿಂದಾಗಿ ಈ ಕ್ಷಣದಲ್ಲಿಯೇ ಭಸ್ಮೀ ಭೂತರಾಗುತ್ತಾರೆ. ಇದರಲ್ಲಾವ ಸಂಶಯವೂ ಇಲ್ಲ. ಈ ಕ್ಷಣದಲ್ಲಿಯೇ ಅವರು ಕಾಲಪಾಶದಿಂದ ಕಟ್ಟಲ್ಪಟ್ಟು ಯಮಲೋಕಕ್ಕೆ ಒಯ್ಯಲ್ಪಡುತ್ತಾರೆ. ಇಷ್ಟು ಮಾತ್ರವಲ್ಲ ; ಸತ್ತಪ್ರಾಣಿಗಳ ಮಾಂಸವನ್ನು ಕಿತ್ತು ತಿನ್ನುವ ಜಾತಿಯಲ್ಲಿ ಅವರು ಏಳು ನೂರು ಬಾರಿ ಜನ್ಮ ತಳೆಯಲಿ. ಅವರಿಗೆ ಆ ಜನ್ಮಗಳಲ್ಲಿ ಸತ್ತ ನಾಯಿಯ ಮಾಂಸವೇ ಆಹಾರವಾಗಿರುವುದು. ಮುಷ್ಟಿಕರೆಂಬ ಹೆಸರಿನಿಂದ ಅವರು ಲೋಕದಲ್ಲಿ ಪ್ರಸಿದ್ಧರಾಗುವರು. ಯಾವಾಗಲೂ ನಿರ್ದಯ ರಾಗಿಯೂ, ವಿಕಾರರೂಪವುಳ್ಳವರಾಗಿಯೂ ಇದ್ದು ಇದೇ ವಿಧವಾದ ದುರಾಚಾರಪ್ರವರ್ತನೆಯುಳ್ಳ ಜನರನ್ನೇ ಅನುಸರಿಸಿಕೊಂಡಿರುವರು.[1] ದುರ್ಬುದ್ಧಿಯಾದ ಆ ಮಹೋದಯನೂ ವಸಿಷ್ಠರ ಮಕ್ಕಳೊಡನೆ ಸೇರಿ ನಿಂದೆಗೆ ಪಾತ್ರನಲ್ಲದ, ನಿಷ್ಕಳಂಕನಾದ ನನ್ನನ್ನು ದೂಷಿಸಿದನಲ್ಲವೇ? ಅದಕ್ಕಾಗಿ ಅವನು ಸರ್ವಲೋಕಗಳಲ್ಲಿಯೂ ದೂಷಿತನಾಗುವನು. ಇಷ್ಟು ಮಾತ್ರವಲ್ಲ ; ಅವನಿಗೆ ನಿಷಾದತ್ವವೂ ಪ್ರಾಪ್ತವಾಗುವುದು. ದಯಾ ರಹಿತನಾಗಿ, ಅನವರತವೂ ಪ್ರಾಣಿಗಳ ಹಿಂಸೆಯಲ್ಲಿಯೇ ನಿರತನಾಗಿರುತ್ತಾ,

---

* ದೃಷ್ಟೋ ಧರ್ಮವ್ಯತಿಕ್ರಮಸ್ಸಾಹಸಂ ಚ ಪೂರ್ವೇಷಾಮ್ । ತೇಷಾಂ ತೇಜೋ ವಿಶೇಷೇಣ ಪ್ರತ್ಯವಾಯೋ ನ ವಿದ್ಯತೇ ॥ ಧರ್ಮಮಾರ್ಗವನ್ನು ಅತಿಕ್ರಮಿಸಿ ನಡೆಯುವುದು ಮತ್ತು ಸಾಹಸಕಾರ್ಯಗಳನ್ನು ಮಾಡುವುದು–ಹಿಂದೆ ಅನೇಕ ಸಂದರ್ಭಗಳಲ್ಲಿ ಕಂಡುಬಂದಿದೆ. ಆದರೆ ತಪೋಬಲಶಾಲಿಗಳಿಗೆ ಅವರ ತಪಸ್ಸಿನ ತೇಜಸ್ಸಿನ ಪ್ರಭಾವದಿಂದ ಯಾವ ವಿಧವಾದ ದೋಷಗಳೂ ಉಂಟಾಗುವುದಿಲ್ಲ.

[1] ಮುಷ್ಟಿಕಾಃ ಎಂದರೆ ಚಂಡಾಲಜಾತಿವಿಶೇಷವೆಂದೂ ಅವರನ್ನು ಈಗ ಡೊಂಬರೆಂದು ಕರೆಯಲಾಗುತ್ತಿದೆಯೆಂದೂ ಒಬ್ಬ ವ್ಯಾಖ್ಯಾನಕಾರರು ಹೇಳಿರುತ್ತಾರೆ.

ಅದರಿಂದ ಪ್ರಾಪ್ತವಾಗುವ ಮಹಾಪಾಪದಿಂದ ಬಹಳ ಕಾಲದವರೆಗೂ ದುರ್ಗತಿಯನ್ನು ಅವನು ಹೊಂದುವನು.”

ಮಹಾತಪಸ್ವಿಗಳಾದ ಮತ್ತು ಮಹಾತೇಜಸ್ವಿಗಳಾದ ವಿಶ್ವಾಮಿತ್ರರು ಋಷಿಗಳ ಮಧ್ಯದಲ್ಲಿ ವಸಿಷ್ಠರ ಮಕ್ಕಳಿಗೂ ಮತ್ತು ಮಹೋದಯನಿಗೂ ಹೀಗೆ ಶಾಪವಿತ್ತು ವಿರಮಿಸಿದರು.

೫೯ನೆಯ ಸರ್ಗವು ಮುಗಿಯಿತು.

ಹವಿರ್ಭಾಗಗಳನ್ನು ಸ್ವೀಕರಿಸಲು ದೇವತೆಗಳು ಬರದಿರಲು ವಿಶ್ವಾಮಿತ್ರರು ತಪೋಬಲದಿಂದಲೇ ತ್ರಿಶಂಕುವನ್ನು ಸ್ವರ್ಗಕ್ಕೆ ಕಳುಹಿಸಿದುದು : ಇಂದ್ರನು ತ್ರಿಶಂಕುವನ್ನು ಸ್ವರ್ಗದಿಂದ ನೂಕಿದುದು : ಕ್ರುದ್ಧರಾದ ವಿಶ್ವಾಮಿತ್ರರು ನೂತನಸ್ವರ್ಗವನ್ನೇ ನಿರ್ಮಿಸಲು ಪ್ರಯತ್ನಿಸಿದುದು : ದೇವತೆಗಳ ಪ್ರಾರ್ಥನೆಯಂತೆ ನಿಲ್ಲಿಸಿದುದು

ತಪೋಬಲಹತಾನ್ಕೃತ್ವಾ ವಾಸಿಷ್ಠಾನ್ಸಮಹೋದಯಾನ್ ।
ಋಷಿಮಧ್ಯೇ ಮಹಾತೇಜಾ ವಿಶ್ವಾಮಿತ್ರೋಽಭ್ಯಭಾಷತ ॥೧॥

ಋಷಿಗಳ ಮಧ್ಯದಲ್ಲಿ ಕುಳಿತಿದ್ದ ವಿಶ್ವಾಮಿತ್ರರು ಮಹೋದಯ ಸಮೇತರಾದ ವಸಿಷ್ಠರ ಮಕ್ಕಳೆಲ್ಲರನ್ನೂ ತಮ್ಮ ತಪೋಬಲದಿಂದ ಹತರಾಗುವಂತೆ ಮಾಡಿ ಸುತ್ತಲೂ ಕುಳಿತಿದ್ದ ಋಷಿಗಳಿಗೆ ಹೇಳಿದರು :

“ಋಷಿಸತ್ತಮರೇ! ಈ ರಾಜನು ಇಕ್ಷ್ವಾಕುಕುಲಸಂಭೂತನು. ‘ತ್ರಿಶಂಕು’ ಎಂಬ ಹೆಸರಿನಿಂದ ವಿಖ್ಯಾತನಾಗಿರುತ್ತಾನೆ. ಮಹಾಧರ್ಮಿಷ್ಠನು ಮತ್ತು ಉದಾರಿಯು. ಈಗಿವನು ಸಶರೀರನಾಗಿಯೇ ದೇವಲೋಕಕ್ಕೆ ಹೋಗಬೇಕೆನ್ನುವ ಇಚ್ಛೆಯ ಪೂರ್ತಿಗಾಗಿ ನನ್ನನ್ನು ಮೊರೆಹೊಕ್ಕಿದ್ದಾನೆ. ಇವನು ಯಾವ ಯಜ್ಞವನ್ನು ಮಾಡಿದರೆ ಸಶರೀರನಾಗಿ ಸ್ವರ್ಗಲೋಕಕ್ಕೆ ಹೋಗಲು ಸಮರ್ಥನಾಗುವನೋ–ಅಂತಹ ಮಹಾಯಜ್ಞವನ್ನು ನಾವೆಲ್ಲರೂ ಸೇರಿ ಪ್ರಾರಂಭಿಸೋಣ.”

ವಿಶ್ವಾಮಿತ್ರರ ಮಾತುಗಳನ್ನು ಕೇಳಿ, ಅವರ ಕೋಪವೆಂತಹುದೆಂಬು ದನ್ನು ಆ ಮೊದಲೇ ಕಂಡಿದ್ದ, ಧರ್ಮಜ್ಞರಾದ ಮಹರ್ಷಿಗಳು ತಮ್ಮ ತಮ್ಮಲ್ಲಿಯೇ ಧರ್ಮಸಮ್ಮತವಾದ ಈ ಮಾತುಗಳನ್ನಾಡಿದರು :

"ಕುಶಿಕವಂಶಜರಾದ ಈ ವಿಶ್ವಾಮಿತ್ರರು ಮಹಾಕೋಪಿಷ್ಠರು. ಇವರು ಹೇಳಿದಂತೆಯೇ ಮಾಡಿಬಿಡುವುದು ಸೂಕ್ತವಾಗಿ ಕಾಣುತ್ತದೆ. ಇವರು ಹೇಳಿದ್ದರಲ್ಲಿ ಸಂಶಯಪಡಬೇಕಾಗಿಲ್ಲ. ಅಗ್ನಿಸದೃಶರಾಗಿರುವ ಪೂಜ್ಯ ರಾದ ವಿಶ್ವಾಮಿತ್ರರು ಕೋಪಗೊಂಡರೆ ಶಾಪವನ್ನೇ ಕೊಟ್ಟುಬಿಡುತ್ತಾರೆ. ಆದುದರಿಂದ ಸಶರೀರಸ್ವರ್ಗಗಮನಕ್ಕೆ ಯಾವ ಯಜ್ಞವು ಉಕ್ತವಾಗಿ ದೆಯೋ–ಅಂತಹ ಯಜ್ಞವು ಪ್ರಾರಂಭವಾಗಲಿ. ಇಕ್ಷ್ವಾಕುವಂಶಪ್ರದೀಪನಾದ ತ್ರಿಶಂಕುವಿನ ಸಶರೀರಸ್ವರ್ಗಗಮನದಲ್ಲಿ ನಾವು ಸ್ವಲ್ಪವೂ ಸಂಶಯಪಡ ಬೇಕಾಗಿಲ್ಲ. ವಿಶ್ವಾಮಿತ್ರರು ಹೇಳಿದ ರೀತಿಯಲ್ಲಿಯೇ ಯಜ್ಞವನ್ನು ಆರಂಭಿಸೋಣ. ಎಲ್ಲರೂ ನಿಮ್ಮ ನಿಮ್ಮ ಆರ್ತ್ವಿಜ್ಯಕ್ಕೆ ಅನುಸಾರವಾದ ಕರ್ಮಗಳನ್ನು ಮಾಡಿರಿ."

ಮಹರ್ಷಿಗಳು ತಮ್ಮ-ತಮ್ಮಲ್ಲಿಯೇ ಹೀಗೆ ಮಾತನಾಡಿಕೊಂಡು, ವಿಶ್ವಾಮಿತ್ರರಿಗೂ ತಮ್ಮ ಅಭಿಪ್ರಾಯವನ್ನು ತಿಳಿಸಿ, ಯಜ್ಞಸಂಬಂಧವಾದ ಕಾರ್ಯಗಳನ್ನು ಮಾಡಲು ಉಪಕ್ರಮಿಸಿದರು. ತ್ರಿಶಂಕುವಿನ ಯಾಜಮಾನ್ಯ ದಲ್ಲಿ ನಡೆದ ಆ ಯಾಗಕ್ಕೆ ಮಹಾತೇಜಸ್ವಿಗಳಾದ ವಿಶ್ವಾಮಿತ್ರರೇ ಅಧ್ವರ್ಯು ಗಳು. ಮಂತ್ರಜ್ಞರಾದ ಮತ್ತು ಯಾವ-ಯಾವ ಸಂದರ್ಭದಲ್ಲಿ ಯಾವ ಯಾವ ಮಂತ್ರಗಳನ್ನು ಪುನಶ್ಚರಣೆಮಾಡಬೇಕೆಂಬುದನ್ನು ಚೆನ್ನಾಗಿ ತಿಳಿದಿದ್ದ ಋತ್ವಿಜರು ಯಜ್ಞದಲ್ಲಿ ಮಾಡಬೇಕಾಗಿದ್ದ ಸಕಲಕರ್ಮಗಳನ್ನೂ ಕಲ್ಪೋಕ್ತ ಪ್ರಕಾರವಾಗಿಯೂ, ವಿಧ್ಯುಕ್ತವಾಗಿಯೂ ಮಾಡಿದರು. ಯಜ್ಞವೇನೋ ಯಥಾವಿಧಿಯಾಗಿ ನಡೆಯಿತು. ಮಹಾತಪಸ್ವಿಗಳಾದ ವಿಶ್ವಾಮಿತ್ರರು ಯಜ್ಞದ ಹವಿರ್ಭಾಗಗಳನ್ನು ಸ್ವೀಕರಿಸಲು ಸಕಲದೇವತೆಗಳನ್ನೂ ಮಂತ್ರ ಪೂರ್ವಕವಾಗಿ ಅನೇಕದಿನಗಳ ಪರ್ಯಂತ ಆಮಂತ್ರಿಸಿದರು. ಪುನಃ ಪುನಃ ಆಹ್ವಾನಿಸಿದರೂ ಅವರು ಬಾರದಿದ್ದುದನ್ನು ಕಂಡು ವಿಶ್ವಾಮಿತ್ರರಿಗೆ ಮಹಾ ಕೋಪವುಂಟಾಯಿತು. ಕೈಯಲ್ಲಿದ್ದ ಸ್ರುವವನ್ನು ಮೇಲಕ್ಕೆತ್ತಿ ಕ್ರೋಧಾವಿಷ್ಟ ರಾಗಿಯೇ ತ್ರಿಶಂಕುವಿಗೆ ಹೇಳಿದರು :

"ತ್ರಿಶಂಕುವೇ! ನನ್ನ ಮಾತಿನಂತೆ ನಿನ್ನನ್ನು ಸ್ವರ್ಗಕ್ಕೆ ಕಳುಹಿಸಿಯೇ ತೀರುವೆನು. ಈಗ ನಾನು ಇದುವರೆವಿಗೂ ಸಂಪಾದಿಸಿರುವ ತಪಸ್ಸಿನ ವೀರ್ಯವನ್ನಾದರೂ ನೋಡು! ಈ ನನ್ನ ತಪಃಪ್ರಭಾವದಿಂದಲೇ ನಿನ್ನನ್ನು ಈ ಚಂಡಾಲರೂಪದ ಶರೀರದಿಂದಲೇ ಸ್ವರ್ಗಕ್ಕೆ ಕಳುಹಿಸುತ್ತೇನೆ.

ನರಾಧಿಪನೇ! ನೀನು ನಿನ್ನೀ ಶರೀರದಿಂದಲೇ ಬೇರೆಯವರಿಂದ ಪಡೆಯಲು ದುಸ್ಸಾಧ್ಯವಾದ ಸ್ವರ್ಗಕ್ಕೆ ಹೋಗು. ನಾನಿದುವರೆಗೆ ಅನೇಕವರ್ಷಗಳವರೆಗೆ ಘೋರವಾದ ತಪಸ್ಸುಮಾಡಿ ಆರ್ಜಿಸಿರುವ ತಪಃಫಲವು ಸ್ವಲ್ಪವಾದರೂ ಇದ್ದೇ ಇದೆ. ಆ ತಪಃಫಲದಿಂದ ನೀನು ಸಶರೀರನಾಗಿ ಸ್ವರ್ಗಾರೋಹಣಮಾಡು."

ರಾಘವ! ಅಂದು ನಡೆದ ಆಶ್ಚರ್ಯವನ್ನು ಹೇಗೆ ತಾನೇ ವರ್ಣಿಸಲಿ! ವಿಶ್ವಾಮಿತ್ರರು–'ರಾಜನ್! ಸಶರೀರೋ ದಿವಂ ವ್ರಜ'–ಎಂದು ಹೇಳಿ ತಮ್ಮ ತಪಃಫಲವನ್ನು ರಾಜನಿಗೆ ಧಾರೆಯೆರೆದು ಕೊಟ್ಟೊಡನೆಯೇ, ಸಕಲ ಮುನಿಗಳ ಕಣ್ಣೆದುರಿನಲ್ಲಿಯೇ ಚಂಡಾಲರೂಪಿಯಾದ ತ್ರಿಶಂಕುವು ವಿಶ್ವಾ ಮಿತ್ರರ ತಪಃಪ್ರಭಾವದಿಂದ ಸ್ವರ್ಗಾರೋಹಣಮಾಡಿದನು. ದೇವಾಧಿಪತಿ ಯಾದ ಇಂದ್ರನು ದೇವಲೋಕಕ್ಕೆ ಆಗಮಿಸಿದ ತ್ರಿಶಂಕುವನ್ನು ಕಂಡು ಸಕಲ ದೇವತೆಗಳಿಂದೊಡಗೂಡಿ ಹೇಳಿದನು :

"ತ್ರಿಶಂಕು! ಎಲ್ಲಿಂದ ಬಂದೆಯೋ ಅಲ್ಲಿಗೇ ನೀನು ಪುನಃ ಹೊರಟು ಹೋಗು. ಮೂಢನೇ! ಗುರುವಿನ ಶಾಪಕ್ಕೊಳಗಾಗಿರುವ ನಿನಗೆ ಸ್ವರ್ಗದಲ್ಲಿ ಸ್ಥಳವು ಹೇಗೆ ತಾನೇ ಸಿಕ್ಕಿತು? ನಿನಗಿಲ್ಲಿ ಸ್ಥಳವಿಲ್ಲ. ತಲೆಕೆಳಗಾಗಿ ಪುನಃ ನೀನು ಭೂಮಿಯ ಮೇಲೆಯೇ ಬೀಳು."

ಮಹೇಂದ್ರನು ಹೀಗೆ ಹೇಳಿದೊಡನೆಯೇ ತ್ರಿಶಂಕುವು ವಿಶ್ವಾಮಿತ್ರ ರನ್ನು ಕುರಿತು–'ತ್ರಾಹಿ' 'ತ್ರಾಹಿ' 'ಕಾಪಾಡು' 'ಕಾಪಾಡು'–ಎಂದು ಕೂಗಿಕೊಳ್ಳುತ್ತಾ–ತಲೆಕೆಳಗಾಗಿ ಭೂಮಿಯ ಕಡೆಗೆ ರಭಸದಿಂದ ಬಿದ್ದನು. ಅಳುತ್ತಳುತ್ತಾ–'ತ್ರಾಹಿ' 'ತ್ರಾಹಿ'–ಎಂದು ಕೂಗಿಕೊಳುತ್ತಾ ಭೂಮಿಯ ಕಡೆಗೆ ತಲೆಮಾಡಿ ಬೀಳುತ್ತಿರುವ ತ್ರಿಶಂಕುವಿನ ಆರ್ತನಾದವನ್ನು ಕೇಳಿದ ವಿಶ್ವಾಮಿತ್ರರು ತ್ರಿಶಂಕುವನ್ನು ದೇವಲೋಕದಿಂದ ಕೆಳಕ್ಕೆ ತಳ್ಳಿದ ಇಂದ್ರನ

ಮೇಲೆ ಬಹಳ ಕೋಪಗೊಂಡವರಾಗಿ ಬೀಳುತ್ತಿರುವ ತ್ರಿಶಂಕುವಿಗೆ–'ತಿಷ್ಠ' 'ತಿಷ್ಠ' 'ನಿಲ್ಲು' 'ನಿಲ್ಲು'–ಎಂದು ಕೂಗಿ ಹೇಳಿದರು. ವಿಶ್ವಾಮಿತ್ರರ ತಪಃಪ್ರಭಾವದಿಂದಾಗಿ ತ್ರಿಶಂಕುವು ಭೂಮಿಯ ಮೇಲೆ ಬೀಳದೇ ಆಕಾಶ ದಲ್ಲಿಯೇ ನಿಂತುಬಿಟ್ಟನು. ಅನಂತರ ಮಹಾತೇಜಸ್ವಿಗಳಾದ ಕ್ರೋಧಾವಿಷ್ಟ ರಾದ ವಿಶ್ವಾಮಿತ್ರರು ಅಭಿನವಬ್ರಹ್ಮನೋಪಾದಿಯಲ್ಲಿ ಋಷಿಗಳ ಮಧ್ಯದಲ್ಲಿ

ಅಚಲರಾಗಿ ನಿಂತು ದಕ್ಷಿಣಮಾರ್ಗಾನುವರ್ತಿಗಳಾದ ಅಭಿನವಸಪ್ತರ್ಷಿ ಗಳನ್ನೂ ಸಪ್ತರ್ಷಿಗಳ ಸುತ್ತಲೂ ಇಪ್ಪತ್ತೇಳು ನಕ್ಷತ್ರಗಳ ಸಾಲನ್ನೂ ಸೃಷ್ಟಿಸಿ ದರು. ಉತ್ತರದಿಕ್ಕಿನಲ್ಲಿ ಧ್ರುವನಕ್ಷತ್ರವಿರುವಂತೆ ದಕ್ಷಿಣದಿಕ್ಕಿನಲ್ಲಿ ತ್ರಿಶಂಕು ವನ್ನು ಶಾಶ್ವತವಾಗಿ ಪ್ರತಿಷ್ಠಾಪನೆಮಾಡಿ, ಅವನ ಸುತ್ತಲೂ ಸಪ್ತರ್ಷಿ ಗಳನ್ನೂ, ನಕ್ಷತ್ರಗಳನ್ನೂ ವಿಶ್ವಾಮಿತ್ರರು ಸೃಷ್ಟಿಸಿದರು. ಕ್ರೋಧದಿಂದ ಕಲು

ಷಿತವಾದ ಚಿತ್ತವೃತ್ತಿಯುಳ್ಳ, ಮಹಾತಪಸ್ವಿಗಳಾದ ವಿಶ್ವಾಮಿತ್ರರು– 'ಬೇರೊಬ್ಬ ಇಂದ್ರನನ್ನೇ ಸೃಷ್ಟಿಸಿಬಿಡುವೆನು ಅಥವಾ ಲೋಕದಲ್ಲಿ ಇಂದ್ರನಿರುವುದೇ ಬೇಡ'–ಎಂದು ಹೇಳುತ್ತಾ ದೇವತೆಗಳೆಲ್ಲರನ್ನೂ ಯಥಾಕ್ರಮವಾಗಿ ಸೃಷ್ಟಿಸತೊಡಗಿದರು. ವಿಶ್ವಾಮಿತ್ರರ ವಿಚಿತ್ರವಾದ ಆ ಸೃಷ್ಟಿಕ್ರಮವನ್ನು ಕಂಡು ಋಷಿಗಳೂ, ಸುರಾಸುರರೂ, ಕಿನ್ನರರೂ, ಯಕ್ಷರೂ, ಸಿದ್ಧ-ಚಾರಣರೂ ಭ್ರಾಂತರಾದರು. ಅವರು ವಿಶ್ವಾಮಿತ್ರರ ಬಳಿಗೆ ಬಂದು ನಯ-ವಿನಯಯುಕ್ತವಾದ ಪ್ರಿಯೋಕ್ತಿಗಳಿಂದ ಅವರನ್ನು ಸಂತೈಸುತ್ತಾ ಹೇಳಿದರು :

"ತಪೋಧನರೇ! ಮಹಾಭಾಗರೇ! ಈ ರಾಜನು ಗುರುಶಾಪದಿಂದ ಚಂಡಾಲತ್ವವನ್ನು ಪಡೆದಿರುತ್ತಾನೆ. ಆದುದರಿಂದ ಇವನು ಸಶರೀರನಾಗಿ ದೇವಲೋಕಕ್ಕೆ ಬರಲು ಅರ್ಹನಾಗುವುದಿಲ್ಲ."

ದೇವತೆಗಳ ಆ ಮಾತುಗಳನ್ನು ಕೇಳಿ ವಿಶ್ವಾಮಿತ್ರರು ಋಷಿ-ಮಹರ್ಷಿಗಳನ್ನೂ, ದೇವತೆಗಳನ್ನೂ ಕುರಿತು ಈ ಮಾತುಗಳನ್ನಾಡಿದರು :

"ದೇವತೆಗಳೇ! ಋಷಿಸತ್ತಮರೇ! ನಿಮ್ಮೆಲ್ಲರಿಗೂ ಮಂಗಳವಾಗಲಿ. ನನ್ನನ್ನಾಶ್ರಯಿಸಿ ಬಂದ ಇವನನ್ನು ನಾನು ಶರೀರದೊಡನೆಯೇ ಸ್ವರ್ಗಕ್ಕೆ ಕಳುಹಿಸಿಕೊಡುವೆನೆಂದು ಪ್ರತಿಜ್ಞೆ ಮಾಡಿರುತ್ತೇನೆ. ಈ ನನ್ನ ಸತ್ಯವಚನವು ಸುಳ್ಳಾಗಬಾರದು. ನಾನು ಕೊಟ್ಟ ಭಾಷೆಯಂತೆ ಇವನಿಗೆ ಸ್ವರ್ಗಪ್ರಾಪ್ತಿಯಾಗಲೇಬೇಕು. ಆದುದರಿಂದ ತ್ರಿಶಂಕುವು ಈಗ ಇರುವ ಸ್ಥಳವೇ ಸ್ವರ್ಗವೆಂದು ನಿಮ್ಮೆಲ್ಲರಿಂದಲೂ ಅಂಗೀಕರಿಸಲ್ಪಡಲಿ. ಸ್ವರ್ಗಸುಖವು ತ್ರಿಶಂಕುವಿಗೆ ಅಲ್ಲಿಯೇ ಸಿಕ್ಕಲಿ. ಇದರಿಂದ ನಾನೂ ಸತ್ಯಪ್ರತಿಜ್ಞನಾಗುತ್ತೇನೆ. ನಾನು ಸೃಷ್ಟಿಸಿರುವ ಸಪ್ತರ್ಷಿಗಳೂ, ನಕ್ಷತ್ರಗಳೂ ಶಾಶ್ವತವಾಗಿ ಉಳಿಯಲಿ. ಎಂದಿನವರೆಗೆ ಬ್ರಹ್ಮನು ಸೃಷ್ಟಿಸಿರುವ ಈ ಲೋಕಗಳು ಇರುವುವೋ–ಅಂದಿನವರೆಗೂ ನನ್ನಿಂದ ಕಲ್ಪಿತವಾದ ಈ ಸ್ವರ್ಗವು ತ್ರಿಶಂಕುವನ್ನೂ, ಸಪ್ತರ್ಷಿಗಳನ್ನೂ, ನಕ್ಷತ್ರಪಂಕ್ತಿಗಳನ್ನೂ ಧಾರಣೆಮಾಡಿಕೊಂಡಿರಲಿ. ನನ್ನೀ ಪ್ರಾರ್ಥನೆಯನ್ನು ನಡೆಸಿಕೊಡಲು ನೀವು ಅರ್ಹರಾಗಿರುವಿರಿ."

"ವಿಶ್ವಾಮಿತ್ರ! ನಿನಗೆ ಮಂಗಳವಾಗಲಿ. ನಿನ್ನ ಸೃಷ್ಟಿಯು ಯಥಾವತ್ತಾಗಿಯೇ ಇರುತ್ತದೆ. ನೀನು ಸೃಷ್ಟಿಸಿರುವ ಈ ನಕ್ಷತ್ರಸಮೂಹಗಳೆಲ್ಲವೂ

ಅಂತರಿಕ್ಷದಲ್ಲಿ ವೈಶ್ವಾನರಪಥವೆಂಬ ಜ್ಯೋತಿಶ್ಚಕ್ರದ ಹೊರಗಿರುತ್ತವೆ. ಈ ನಕ್ಷತ್ರಗಳ ಮಧ್ಯದಲ್ಲಿ ಜಾಜ್ವಲ್ಯಮಾನವಾದ ಪ್ರಭಾವಿಶೇಷದಿಂದ ಪ್ರಕಾಶಿಸುತ್ತಾ, ದೇವತೆಗಳಿಗೆ ಸಮಾನನಾದ ತ್ರಿಶಂಕುವು ತಲೆಕೆಳಗಾಗಿರುವ ಈ ಪರಿಸ್ಥಿತಿಯಲ್ಲಿಯೇ ಶಾಶ್ವತವಾಗಿರುತ್ತಾನೆ. ಬ್ರಹ್ಮಕಲ್ಪಿತವಾದ ಸ್ವರ್ಗ ಲೋಕವನ್ನು ಸಶರೀರವಾಗಿ ಪ್ರವೇಶಮಾಡಿರುವವನಂತೆಯೇ ಸ್ವರ್ಗದ ಉಪಭೋಗಗಳನ್ನು ಅನುಭವಿಸುವ, ಕೃತಾರ್ಥನಾದ, ಸತ್ಯಸಂಕಲ್ಪನಾದ, ಕೀರ್ತಿಮಂತನಾದ ಈ ರಾಜಶ್ರೇಷ್ಠನನ್ನು ಅನುಸರಿಸಿ ನಿನ್ನಿಂದ ಸೃಷ್ಟಿಸಲ್ಪಟ್ಟ ನಕ್ಷತ್ರಗಳು ಸಂಚರಿಸುವುವು. ಇದರಿಂದ ನೀನೂ ಸತ್ಯಸಂಕಲ್ಪನೇ ಆದಂತಾಯಿತು."

ಸಕಲದೇವತೆಗಳಿಂದಲೂ ಋಷಿಗಳಿಂದಲೂ ಸಂಪ್ರಾರ್ಥಿತರಾದ, ಮಹಾತ್ಮರಾದ ವಿಶ್ವಾಮಿತ್ರರು–'ಬಾಢಂ' 'ಹಾಗೆಯೇ ಆಗಲಿ'–ಎಂದು ಹೇಳಿ ಅವರ ಸಲಹೆಗೆ ಸಮ್ಮತಿಯನ್ನು ಸೂಚಿಸಿದರು. ಅನಂತರ ದೇವತೆಗಳ ಮತ್ತು ಋತ್ವಿಜರ ಅನುಮತಿಯನ್ನು ಪಡೆದು ವಿಶ್ವಾಮಿತ್ರರು ತಾವು ಆರಂಭಿಸಿದ್ದ ಯಜ್ಞದ ಅವಭೃಥವನ್ನು ಮುಗಿಸಿದರು. ಯಜ್ಞವು ಮುಗಿದನಂತರ ದೇವತೆಗಳೂ ತಪೋಧನರಾದ ಮುನಿಗಳೂ ವಿಶ್ವಾಮಿತ್ರರ ಅನುಮತಿಯನ್ನು ಪಡೆದು ತಮ್ಮ-ತಮ್ಮ ಸ್ಥಾನಗಳಿಗೆ ತೆರಳಿದರು.

ಲಂನೆಯ ಸರ್ಗವು ಮುಗಿಯಿತು.

ಬಾಲಕಾಂಡ ೬೧ನೆಯ ಸರ್ಗ

ಪುಷ್ಕರತೀರ್ಥದ ಸಮೀಪದಲ್ಲಿ ವಿಶ್ವಾಮಿತ್ರರ ತಪಸ್ಸು : ಋಚೀಕನ ನಡುಮಗನಾದ ಶುನಃಶೇಪನನ್ನು ಅಂಬರೀಷನು ಯಜ್ಞಪಶುವಾಗಿ ಕ್ರಯಕ್ಕೆ ಪಡೆದುದು

ವಿಶ್ವಾಮಿತ್ರೋ ಮಹಾತ್ಮಾಥ ಪ್ರಸ್ಥಿತಾನ್ವೀಕ್ಷ್ಯ ತಾನೃಷೀನ್ ।
ಅಬ್ರವೀನ್ನರಶಾರ್ದೂಲ ಸರ್ವಾಂಸ್ತಾನ್ವನವಾಸಿನಃ ॥೧॥

ರಾಮ! ಯಜ್ಞಕ್ಕೆ ಆಹ್ವಾನಿತರಾಗಿದ್ದ ಋಷಿಗಳೆಲ್ಲರೂ ಹೊರಟು ಹೋದನಂತರ ಮಹಾತ್ಮರಾದ ವಿಶ್ವಾಮಿತ್ರರು ತಪೋವನದಲ್ಲಿದ್ದ ಋಷಿ ಗಳಿಗೆ ಹೇಳಿದರು :

"ಋಷಿಸತ್ತಮರೇ! ಬ್ರಹ್ಮರ್ಷಿಯಾಗಬೇಕೆಂಬ ಅಭಿಲಾಷೆಯಿಂದ ದಕ್ಷಿಣದಿಕ್ಕಿನಲ್ಲಿದ್ದ ಈ ತಪೋವನಕ್ಕೆ ತಪಶ್ಚರಣೆಗಾಗಿ ಬಂದೆನು. ಆದರೆ ಈ ದಿಕ್ಕಿನಲ್ಲಿ ನನ್ನ ತಪಸ್ಸಿಗೆ ಮಹಾವಿಘ್ನವುಂಟಾದುದು ಮಾತ್ರವಲ್ಲದೇ ನಾನಿದುವರೆಗೂ ಮಾಡಿದ ತಪಸ್ಸಿನ ವ್ಯಯವೂ ಆಗಿಹೋಯಿತು. ಬೇರಾವುದಾದರೂ ಕಡೆಗೆ ಹೋಗಿ ಅಲ್ಲಿ ತಪಸ್ಸುಮಾಡೋಣ. ವಿಶಾಲವಾದ ತಪೋಭೂಮಿಯುಳ್ಳ ಪಶ್ಚಿಮದಿಕ್ಕಿನಲ್ಲಿ, ನಯನಾನಂದಕರವಾದ ಪುಷ್ಕರಣಿಗಳ ತೀರದಲ್ಲಿರುವ ಶ್ರೇಷ್ಠವಾದ ತಪೋವನಕ್ಕೆ ಹೋಗಿ ಸುಖವಾಗಿ ತಪಸ್ಸನ್ನು ಮಾಡೋಣ."

ವಿಶ್ವಾಮಿತ್ರರ ಮಾತಿಗೆ ಋಷಿಗಳೆಲ್ಲರೂ ಒಪ್ಪಿದರು. ಪಶ್ಚಿಮದಿಕ್ಕಿನಲ್ಲಿ ಪುಷ್ಕರತೀರ್ಥದ ಸಮೀಪದಲ್ಲಿದ್ದ ವಿಶಾಲವಾದ ತಪೋವನಕ್ಕೆ ಮಹಾಮುನಿಗಳಾದ ವಿಶ್ವಾಮಿತ್ರರು ಋಷಿಗಳ ಸಮೇತರಾಗಿ ಪ್ರಯಾಣಮಾಡಿ ಕಂದ-ಮೂಲ-ಫಲಗಳನ್ನು ಸೇವಿಸುತ್ತಾ ಇತರರಿಂದ ದುಸ್ಸಾಧ್ಯವಾದ, ಅತ್ಯುಗ್ರ ವಾದ ತಪಸ್ಸನ್ನು ಮಾಡಲು ಉಪಕ್ರಮಿಸಿದರು.

ರಾಘವ! ಅದೇ ಸಮಯದಲ್ಲಿ ಅಯೋಧ್ಯಾಪಟ್ಟಣದ ಅಧಿಪತಿ ಯಾದ ಅಂಬರೀಷನು ಒಂದು ಯಾಗವನ್ನು ಮಾಡಲು ಪ್ರಾರಂಭಿಸಿದನು. ಅವನ ಯಜ್ಞಪಶುವನ್ನು ಇಂದ್ರನು ಅಪಹರಿಸಿಕೊಂಡು ಹೋದನು. ಯಜ್ಞಪಶುವು ನಷ್ಟವಾಗಲು ಪುರೋಹಿತನು ರಾಜನಿಗೆ ಹೇಳಿದನು :

"ಮಹಾರಾಜ! ನಿನ್ನ ಅಜಾಗರೂಕತೆಯಿಂದ ಯಜ್ಞಪಶುವು ಅಪಹೃತವಾಗಿದೆ. ಯಜ್ಞಪಶುವನ್ನು ಸರಿಯಾಗಿ ನೋಡಿಕೊಳ್ಳದೇ ಅದು ನಷ್ಟವಾದರೆ ಅದರಿಂದ ಯಜ್ಞವಿಘ್ನದೋಷವುಂಟಾಗಿ ಯಜಮಾನನನ್ನು ವಿನಾಶಗೊಳಿಸುತ್ತದೆ. ಪಶುವು ನಷ್ಟವಾದುದಕ್ಕೆ ಪ್ರಾಯಶ್ಚಿತ್ತವಿಲ್ಲವೆಂದಿಲ್ಲ. ಪಶುನಷ್ಟದೋಷಕ್ಕೂ ಪ್ರಾಯಶ್ಚಿತ್ತವಿದೆ. ನೀನೀಗಲೇ ಹೋಗಿ ಈ ಯಾಗವು ಪ್ರಾರಂಭವಾಗುವುದರೊಳಗಾಗಿ ನರಪಶುವನ್ನು ಕರೆದುಕೊಂಡು ಬಾ. ಯಜ್ಞಪಶುವು ನಷ್ಟವಾದುದಕ್ಕೆ ನರನೊಬ್ಬನನ್ನು ಯಜ್ಞಪಶುವನ್ನಾಗಿ

ಮಾಡಿಕೊಳ್ಳುವುದೇ ಪ್ರಾಯಶ್ಚಿತ್ತ.* ಅಥವಾ ಕಳೆದುಹೋಗಿರುವ ಪಶುವನ್ನಾದರೂ ಹುಡುಕಿ ಕರೆದುಕೊಂಡು ಬಾ."

ರಾಮ! ಪುರೋಹಿತನ ಮಾತುಗಳನ್ನು ಕೇಳಿ ಮಹಾಬುದ್ಧಿವಂತ ನಾದ ಅಂಬರೀಷನು ಸಾವಿರಾರು ಗೋವುಗಳನ್ನು ತೆಗೆದುಕೊಂಡು ನರ ನೊಬ್ಬನನ್ನು ಯಜ್ಞಪಶುವಿನ ಸ್ಥಾನಕ್ಕೆ ಕ್ರಯಕ್ಕೆ ತರುವ ಸಲುವಾಗಿ ಹೊರ ಟನು. ಅನೇಕ ದೇಶಗಳಲ್ಲಿ ಸುತ್ತಾಡಿದನು. ಅನೇಕ ಜನರನ್ನು ಸಂಧಿಸಿ ಮಾತ ನಾಡಿದನು. ಅನೇಕ ಪಟ್ಟಣಗಳಲ್ಲಿಯೂ, ಊರುಗಳಲ್ಲಿಯೂ, ಹಳ್ಳಿಗಳ ಲ್ಲಿಯೂ ಸಂಚರಿಸಿದನು. ಕಾಡುಮೇಡುಗಳಲ್ಲಿ ಅಲೆದನು. ಪುಣ್ಯತಮವಾದ ನೂರಾರು ಆಶ್ರಮಗಳನ್ನು ಸಂದರ್ಶಿಸಿದನು. ಕಡೆಗೆ ಭೃಗುತುಂಗವೆಂಬ ಪುಣ್ಯಕ್ಷೇತ್ರದಲ್ಲಿ ಭಾರ್ಯಾಪುತ್ರರೊಡನಿದ್ದ ಋಚೀಕಮಹರ್ಷಿಯನ್ನು ಸಂದರ್ಶಿಸಿದನು. ಮಹಾತೇಜಸ್ವಿಯಾದ, ರಾಜರ್ಷಿಯಾದ, ಅಪರಿಮಿತ ವಾದ ಪ್ರಭೆಯಿಂದ ಕೂಡಿದ್ದ ಅಂಬರೀಷ ಮಹಾರಾಜನು–ಸತತವಾಗಿ ಮಾಡುತ್ತಿದ್ದ ತಪಸ್ಸಿನಿಂದ ಪ್ರಾಪ್ತವಾದ ಮಹಾತೇಜಸ್ಸಿನಿಂದ ಕಂಗೊಳಿಸು ತ್ತಿದ್ದ ಬ್ರಹ್ಮರ್ಷಿಯಾದ ಋಚೀಕನಿಗೆ ಸಾಷ್ಟಾಂಗನಮಸ್ಕಾರಮಾಡಿ ಹೇಳಿ ದನು :

"ಮಹರ್ಷೇ! ನಿನ್ನ ತಪಸ್ಸು ನಿರ್ವಿಘ್ನವಾಗಿ ನಡೆಯುತ್ತಿದೆಯೇ? ನಿನ್ನ ಪರಿವಾರದವರೆಲ್ಲರೂ ಕುಶಲಿಗಳಾಗಿರುವರೇ?"

ಹೀಗೆ ಕುಶಲಪ್ರಶ್ನೆಮಾಡಿದನಂತರ ತನ್ನ ಆಗಮನದ ವಿಷಯವನ್ನೂ ವಿವರಿಸಿ ಹೇಳಿದನು :

"ಮಹಾಭಾಗನೇ! ಯಜ್ಞಪಶುವಾಗಿ ನಿಯೋಜಿಸಲು ಒಂದು ಲಕ್ಷ ಹಸುಗಳ ಮೌಲ್ಯವನ್ನು ನನ್ನಿಂದ ಪಡೆದು ನಿನ್ನೊಬ್ಬ ಮಗನನ್ನು ಕ್ರಯಕ್ಕೆ ಕೊಡುವೆಯಾದರೆ ನಾನು ಕೃತಾರ್ಥನಾಗುವೆನು. ಕಳೆದುಹೋಗಿರುವ ಯಜ್ಞ ಪಶುವನ್ನು ಹುಡುಕಲು ನಾನು ಎಲ್ಲ ದೇಶಗಳಲ್ಲಿಯೂ, ಪಟ್ಟಣಗಳ ಲ್ಲಿಯೂ, ಗಿರಿ-ದುರ್ಗ-ಪರ್ವತಗಳಲ್ಲಿಯೂ, ಕಾಡುಗಳಲ್ಲಿಯೂ ಸಂಚರಿ

---

* ಪ್ರಾಯಃ ಪಾಪಮಿತಿ ಪ್ರೋಕ್ತಂ ಚಿತ್ತಂ ತಚ್ಛೋಧನಂ ಸ್ಮೃತಮ್ = ಪ್ರಾಯವೆಂದರೆ ಪಾಪ ; ಚಿತ್ತವೆಂದರೆ ಅದರಿಂದ ಶುದ್ಧಿಯಾಗುವುದು. ಅರ್ಥಾತ್ ಪಾಪದಿಂದ ವಿಮುಕ್ತಿ ಹೊಂದುವುದು–ಪ್ರಾಯಶ್ಚಿತ್ತ.

ಸಿದೆನು. ಆದರೆ ನನಗೆ ಆ ಪಶುವು ಸಿಕ್ಕಲಿಲ್ಲ. ಆದುದರಿಂದ ಯಥೇಚ್ಛವಾದ ಮೌಲ್ಯಪಡೆದು, ನಿನ್ನ ಮಕ್ಕಳಲ್ಲಿ ಒಬ್ಬ ಮಗನನ್ನು ನನಗೆ ಕೊಡು."

ಅಂಬರೀಷನಿಂದ ಹೀಗೆ ಪ್ರಾರ್ಥಿತನಾದ ಋಚೀಕಮಹರ್ಷಿಯು ರಾಜನಿಗೆ ಹೇಳಿದನು :

"ನರಶ್ರೇಷ್ಠನೇ! ನಾನು ನನ್ನ ಹಿರಿಯ ಮಗನನ್ನು ಮಾತ್ರ ನೀನು ಎಷ್ಟೇ ಮೌಲ್ಯಕೊಟ್ಟರೂ ಕ್ರಯಕ್ಕೆ ಕೊಡಲಾರೆನು."*

ಋಚೀಕಮಹರ್ಷಿಯ ಆ ಮಾತನ್ನು ಕೇಳಿ ಮಹಾತ್ಮರಾದ ಆ ಮಕ್ಕಳ ತಾಯಿಯು ನರವ್ಯಾಘ್ರನಾದ ಅಂಬರೀಷನಿಗೆ ಹೇಳಿದಳು :

"ಪೂಜ್ಯನಾದ, ಭೃಗುವಂಶ್ಯನಾದ ನನ್ನ ಪತಿಯು ಹಿರಿಯ ಮಗನನ್ನು ಮಾರುವುದಿಲ್ಲವೆಂದು ಹೇಳಿದನಲ್ಲವೇ? ಕನಿಷ್ಠನಾದ ಶುನಕನು ನನಗೂ ಪ್ರಿಯತಮನಾಗಿದ್ದಾನೆ. ಈ ಕಾರಣಗಳಿಂದ ನನ್ನ ಕಿರಿಯ ಮಗನನ್ನು ನೀನೆಷ್ಟೇ ಮೌಲ್ಯ ಕೊಟ್ಟರೂ ಕೊಡಲಾರೆನು.

ಪ್ರಾಯೇಣ ಹಿ ನರಶ್ರೇಷ್ಠ ಜ್ಯೇಷ್ಠಾಃ ಪಿತೃಷು ವಲ್ಲಭಾಃ ।
ಮಾತೄಣಾಂ ಚ ಕನೀಯಾಂಸಸ್ತಸ್ಮಾದ್ರಕ್ಷೇ ಕನೀಯಸಮ್ ॥೧೮॥

ಮಹಾರಾಜ! ಲೋಕದಲ್ಲಿ ಸಾಮಾನ್ಯವಾಗಿ ಹಿರಿಯಮಕ್ಕಳು ತಂದೆಗೆ ಪ್ರಿಯರಾಗುತ್ತಾರೆ. ತಾಯಿಯರಿಗೆ ಕಿರಿಯಮಕ್ಕಳು ಪ್ರಿಯರಾಗುತ್ತಾರೆ. ಆದುದರಿಂದ ಕನಿಷ್ಠನಾದ ಶುನಕನನ್ನು ನಾನು ರಕ್ಷಿಸಿಕೊಳ್ಳಲು ನಿಶ್ಚಯಿಸಿದ್ದೇನೆ."

ರಾಮ! ಋಚೀಕನೂ ಮತ್ತು ಅವನ ಪತ್ನಿಯೂ ಜ್ಯೇಷ್ಠ-ಕನಿಷ್ಠರ ವಿಷಯದಲ್ಲಿ ತಮ್ಮ ಅಭಿಪ್ರಾಯಗಳನ್ನು ಸ್ಪಷ್ಟಪಡಿಸಿದನಂತರ ಮಧ್ಯಮನಾದ ಶುನಃಶೇಪನು ತಾನೇ ಅಂಬರೀಷನ ಬಳಿಗೆ ಬಂದು ಹೇಳಿದನು :

ಪಿತಾ ಜ್ಯೇಷ್ಠಮವಿಕ್ರೇಯಂ ಮಾತಾ ಚಾಹ ಕನೀಯಸಮ್ ।
ವಿಕ್ರೀತಂ ಮಧ್ಯಮಂ ಮನ್ಯೇ ರಾಜನ್ಪುತ್ರಂ ನಯಸ್ವ ಮಾಮ್ ॥

---

* ಅಪ್ರತಿಷಿದ್ಧಮನುಮತಂ ಭವತಿ ಎಂಬ ನ್ಯಾಯದಂತೆ ಉಳಿದ ಮಕ್ಕಳ ವಿಷಯವಾಗಿ ಋಚೀಕನು ಪ್ರತಿಷೇಧಮಾಡದ ಪ್ರಯುಕ್ತ ಉಳಿದಿಬ್ಬರಲ್ಲಿ ಒಬ್ಬರನ್ನು ವಿಕ್ರಯಿಸುವ ಆಶಯವನ್ನು ತೋರಿದಂತಾಯಿತು.

"ಮಹಾರಾಜ! ನಮ್ಮ ತಂದೆಯು ದೊಡ್ಡ ಮಗನನ್ನು ಮಾರುವುದಿಲ್ಲವೆಂದು ಹೇಳಿದನು. ನಮ್ಮ ತಾಯಿಯು ಕೊನೆಯವನನ್ನು ಮಾರುವುದಿಲ್ಲವೆಂದು ಹೇಳಿದಳು. ಇದರಿಂದಾಗಿ ಮಧ್ಯಮನಾದ ನನ್ನ ವಿಕ್ರಯಕ್ಕೆ ಇಬ್ಬರ ಸಮ್ಮತಿಯೂ ಸಿಕ್ಕಿದಂತೆಯೇ ಆಗಿರುವುದು. ಯಥೋಚಿತವಾದ ಮೌಲ್ಯವನ್ನು ನನ್ನ ತಂದೆಯವರಿಗೆ ಕೊಟ್ಟು ನೀನು ನನ್ನನ್ನು ಕರೆದುಕೊಂಡು ಹೋಗಬಹುದು."

ಶುನಃಶೇಪನ ಆ ಮಾತಿಗೆ ಋಚೀಕನಾಗಲೀ ಅವನ ಪತ್ನಿಯಾಗಲೀ ಯಾವ ಮಾತನ್ನೂ ಆಡಲಿಲ್ಲ. ಒಡನೆಯೇ ಅಂಬರೀಷನು ಒಂದುಲಕ್ಷ ಗೋವುಗಳನ್ನು ಋಚೀಕನಿಗೆ ಕೊಟ್ಟು ಶುನಃಶೇಪನನ್ನು ಕೊಂಡುಕೊಂಡು ಪರಮಪ್ರೀತನಾಗಿ ಋಷಿಕುಮಾರನೊಡನೆ ಆಶ್ರಮದಿಂದ ಹೊರಹೊರಟನು. ಮಹಾತೇಜಸ್ವಿಯಾದ, ಯಶಸ್ವಿಯಾದ ಅಂಬರೀಷನು ಶುನಃಶೇಪನನ್ನು ರಥದಲ್ಲಿ ಕುಳ್ಳಿರಿಸಿಕೊಂಡು ಬಹಳ ವೇಗವಾಗಿ ತನ್ನ ಪಟ್ಟಣದ ಕಡೆಗೆ ಪ್ರಯಾಣಮಾಡಿದನು.

೬೧ನೆಯ ಸರ್ಗವು ಮುಗಿಯಿತು.

ಬಾಲಕಾಡ ೬೨ನೆಯ ಸರ್ಗ

ವಿಶ್ವಾಮಿತ್ರರಲ್ಲಿ ಶುನಃಶೇಪನ* ಶರಣಾಗತಿ : ಮಧುಷ್ಯಂದಾದಿ ಮಕ್ಕಳಿಗೆ ವಿಶ್ವಾಮಿತ್ರರಿಂದ ಶಾಪಪ್ರದಾನ : ಅಂಬರೀಷನ ಯಜ್ಞಸಮಾಪ್ತಿ: ಶುನಃಶೇಪನಿಗೆ ಇಂದ್ರನಿಂದ ದೀರ್ಘಾಯುಷ್ಯಪ್ರದಾನ

ಶುನಃಶೇಪಂ ನರಶ್ರೇಷ್ಠ ಗೃಹೀತ್ವಾ ತು ಮಹಾಯಶಾಃ ।
ವ್ಯಶ್ರಾಮ್ಯತ್ಪುಷ್ಕರೇ ರಾಜಾ ಮಧ್ಯಾಹ್ನೇ ರಘುನನ್ದನ ॥೧॥

ರಘುನಂದನನೇ! ಅಂಬರೀಷನು ಶುನಃಶೇಪನನ್ನು ರಥದಲ್ಲಿ ಕುಳ್ಳಿರಿಸಿಕೊಂಡು ಪಟ್ಟಣದ ಕಡೆಗೆ ಬರುತ್ತಿರುವಾಗ ಮಧ್ಯಾಹ್ನದ ವೇಳೆಯಾಯಿತು. ರಾಜನು ಶ್ರೇಷ್ಠವಾದ ಪುಷ್ಕರದ ಸಮೀಪದಲ್ಲಿ ರಥವನ್ನು ನಿಲ್ಲಿಸಿ ವಿಶ್ರಮಿಸಿಕೊಳ್ಳುತ್ತಿದ್ದನು. ಶುನಃಶೇಪನೂ ರಥದಿಂದಿಳಿದು ಕಳವಳ

---

* ಶುನಃ ಶೇಪ ಮತ್ತು ಶುನಃ ಶೇಫ–ಎಂಬ ಎರಡೂ ಪಾಠಗಳಿವೆ.

ಗೊಂಡವನಾಗಿ ಪುಷ್ಕರದ ಸಮೀಪದಲ್ಲಿ ಮುನಿಗಳೊಡನೆ ತಪಶ್ಚರಣೆಮಾಡು ತ್ತಿದ್ದ ತನ್ನ ಸೋದರಮಾವನಾದ ವಿಶ್ವಾಮಿತ್ರರನ್ನು ಕಂಡನು. ಜೀವವನ್ನುಳಿಸಿ ಕೊಳ್ಳಲು ಕಾತರನಾಗಿದ್ದ, ದೀನನಾದ, ಬಾಯಾರಿಕೆ ಮತ್ತು ಪ್ರಯಾಣ ಶ್ರಮಗಳಿಂದ ಕುಂದಿದ ಮುಖದಿಂದ ಕೂಡಿದ್ದ ಶುನಃಶೇಪನು ಋಷಿಗಳ ಮಧ್ಯದಲ್ಲಿ ತಪಸ್ಸುಮಾಡುತ್ತಿದ್ದ ವಿಶ್ವಾಮಿತ್ರರ ಸಮೀಪಕ್ಕೆ ಹೋಗಿ ಮಹರ್ಷಿಯ ತೊಡೆಯ ಮೇಲೆ ಬಿದ್ದು ಹೇಳಿದನು :

"ಮಾವ! ನನಗೆ ತಾಯಿಯೂ ಇಲ್ಲ ; ತಂದೆಯೂ ಇಲ್ಲ. (ಇದ್ದರೂ ಇಲ್ಲದಂತೆಯೇ ಆಗಿರುವುದು.) ಜ್ಞಾತಿಗಳೂ ಇಲ್ಲ ; ಬಂಧುಗಳೂ ಇಲ್ಲ. ಈ ಸಮಯದಲ್ಲಿ ನೀನೇ ನನಗೆ ತಾಯಿಯೂ–ತಂದೆಯೂ ಆಗಿರುವೆ. ಆದುದರಿಂದ ನೀನು ಈ ಸಮಯದಲ್ಲಿ ನನ್ನನ್ನು ರಕ್ಷಿಸುವುದು ಯೋಗ್ಯವಾಗಿದೆ ಮತ್ತು ಸೋದರಳಿಯನಾದ ನನ್ನನ್ನು ಈ ಆಪತ್ಕಾಲದಲ್ಲಿ ರಕ್ಷಿಸುವುದು ನಿನ್ನ ಧರ್ಮವೂ ಆಗಿದೆ. ನೀನು ಶರಣಾಗತರಕ್ಷಕನಾಗಿರುವೆ. ವಿನಾಶದ ಅಂಚಿನಲ್ಲಿರುವವರನ್ನು ನೀನು ಉದ್ಧರಿಸುವೆ.* ಆದರೆ ನನ್ನನ್ನು ಮಾತ್ರವೇ ಉಳಿಸೆಂದು ನಾನು ಹೇಳಲಾರೆನು. ಒಂದು ಲಕ್ಷ ಗೋವುಗಳ ಬೆಲೆಕೊಟ್ಟು ನನ್ನನ್ನು ಕರೆತಂದಿರುವ ರಾಜನೂ ಕೃತಾರ್ಥನಾಗಬೇಕು. ನಾನೂ ನಿನ್ನ ಅನುಗ್ರಹದಿಂದ ದೀರ್ಘಾಯುವೂ, ವಿಕಾರರಹಿತನೂ ಆಗಿ ಉತ್ತಮೋತ್ತಮವಾದ ತಪಸ್ಸುಗಳನ್ನು ಮಾಡಿ ಸ್ವರ್ಗಸುಖವನ್ನು ಅನು ಭವಿಸುವಂತಾಗಬೇಕು. ಭವ್ಯವಾದ ತೇಜಸ್ಸಿನಿಂದ ಕೂಡಿರುವ ನೀನು ಅನಾಥನಾಗಿರುವ ನನಗೆ ನಾಥನಾಗು. ಧರ್ಮಾತ್ಮನೇ! ನಾನು ಹಿಂದೆ ಮಾಡಿದ ಪಾಪದಿಂದ ಒದಗಿರುವ ಈ ಮಹಾವಿಪತ್ತಿನಿಂದ ತಂದೆಯು ಮಗ ನನ್ನು ರಕ್ಷಿಸುವಂತೆ ನನ್ನನ್ನು ರಕ್ಷಿಸು."

ಸೋದರಳಿಯನ ಆ ಮಾತುಗಳನ್ನು ಕೇಳಿದ ವಿಶ್ವಾಮಿತ್ರರು ಋಷಿಕುಮಾರನ ಮೈದಡವಿ, ಅನೇಕ ವಿಧವಾಗಿ ಸಂತೈಸಿ ಸಮೀಪದಲ್ಲಿದ್ದ ತನ್ನ ಮಕ್ಕಳಿಗೆ ಹೇಳಿದರು :

---

* ಇಲ್ಲಿ–ಸರ್ವೇಷಾಂ ತ್ವಂ ಹಿ ಭಾವನಃ –ಎಂಬ ವಾಕ್ಯವಿದೆ. ಭಾವನಶಬ್ದಕ್ಕೆ ಆಪದುದ್ಧಾರಕ–ಎಂದು ಅರ್ಥವಾಗುತ್ತದೆ. ಜನಿತ್ವೋಜ್ಜೀವಯತಿ ಯೋ ಜನಾನ್ ಸ್ಯಾದ್ಭಾವನಸ್ತು ಸಃ [ನಿರುಕ್ತಿ]

“ಮಕ್ಕಳೇ! ಯಾವ ಪ್ರಯೋಜನಕ್ಕಾಗಿ ಶುಭಾಕಾಂಕ್ಷಿಗಳಾದ ಪಿತೃಗಳು ಮಕ್ಕಳನ್ನು ಪಡೆಯುವರೋ–ಅಂತಹ ಪರಲೋಕಸಾಧನಭೂತವಾದ ಪರೋಪಕಾರಕಾರ್ಯವು ನಿಮ್ಮಿಂದ ಸಾಧನೆಯಾಗಬೇಕಾದ ಕಾಲವು ಈಗ ಒದಗಿದೆ. ಇವನು ಮಹಾಮುನಿಯೊಬ್ಬನ ಮಗನು ; ಸಣ್ಣ ವಯಸ್ಸಿನವನು ; ಮೇಲಾಗಿ ನನ್ನಿಂದ ರಕ್ಷಣೆಯನ್ನು ಕೇಳಿರುತ್ತಾನೆ. ಆದುದರಿಂದ ಇವನಿಗೆ ನೀವು ಜೀವಪ್ರದಾನಮಾಡಿ ನನಗೆ ಸಂತೋಷವನ್ನು ಉಂಟುಮಾಡಿರಿ. ನೀವೆಲ್ಲರೂ ಸತ್ಕರ್ಮಿಗಳಾಗಿರುವಿರಿ ಮತ್ತು ಧರ್ಮಪರಾಯಣರಾಗಿರುವಿರಿ. ನನ್ನನ್ನು ಶರಣುಹೊಂದಿರುವ ಈ ಶುನಃಶೇಪನನ್ನು ನೀವು ಪ್ರತಿನಿಧಿಸಿ ರಾಜನೊಡನೆ ಪಟ್ಟಣಕ್ಕೆ ಹೋಗಿ ಅವನ ಯಜ್ಞಪಶುಗಳಾಗಿ ಯಜ್ಞೇಶ್ವರನಿಗೆ ತೃಪ್ತಿಯನ್ನುಂಟುಮಾಡಿರಿ. ನೀವು ಹೀಗೆ ಮಾಡುವುದರಿಂದ ನಾನಾಕಾರ್ಯಸಾಧನೆಯಾದಂತಾಗುತ್ತದೆ. ನಿಮ್ಮೀ ಕಾರ್ಯದಿಂದಾಗಿ ಅನಾಥನಾದ ಇವನು ಸನಾಥನಾಗುತ್ತಾನೆ. ರಾಜನು ಆರಂಭಿಸಿರುವ ಯಜ್ಞವೂ ನಿರ್ವಿಘ್ನವಾಗಿ ಪರಿಪೂರ್ಣವಾದಂತಾಗುತ್ತದೆ. ದೇವತೆಗಳೂ ತೃಪ್ತಿಹೊಂದುತ್ತಾರೆ. ತಂದೆಯಾದ ನನ್ನ ಮಾತನ್ನೂ ನೀವು ನಡೆಸಿದಂತಾಗುತ್ತದೆ.”

ರಾಮ! ವಿಶ್ವಾಮಿತ್ರಮುನಿಗಳ ಮಾತುಗಳನ್ನು ಕೇಳಿ ಮಧುಷ್ಯಂದಾದಿಗಳು ಪರಿಹಾಸಮಾಡುತ್ತಾ ದುರಭಿಮಾನದಿಂದ ಉತ್ತರಿಸಿದರು :

ಕಥಮಾತ್ಮಸುತಾನ್ಹಿತ್ವಾ ತ್ರಾಯಸೇಽನ್ಯಸುತಂ ವಿಭೋ ।
ಅಕಾರ್ಯಮಿವ ಪಶ್ಯಾಮಃ ಶ್ವಮಾಂಸಮಿವ ಭೋಜನೇ ॥೧೩॥

“ಸಕಲಸಾಮರ್ಥ್ಯವಿಶಿಷ್ಟನಾದ ತಂದೆಯೇ! ಸ್ವಂತ ಮಕ್ಕಳನ್ನು ಪರಿತ್ಯಾಗಮಾಡಿ ಬೇರೆಯವರ ಮಕ್ಕಳನ್ನು ನೀನು ಹೇಗೆತಾನೇ ರಕ್ಷಿಸಲು ಹೋಗುವೆ? ಈ ನಿನ್ನ ಕಾರ್ಯವು ನಿಶ್ಚಯವಾಗಿಯೂ ಅಕಾರ್ಯವೆಂದೇ ನಾವು ನಿಶ್ಚಯಿಸಿದ್ದೇವೆ. ಭಕ್ಷ್ಯ-ಭೋಜ್ಯಾದಿಗಳಿಂದ ಕೂಡಿರುವ ಭೋಜನವು ಸಿದ್ಧವಾಗಿರುವಾಗ ಅದನ್ನು ಪರಿತ್ಯಾಗಮಾಡಿ ನಾಯಿಯ ಮಾಂಸವನ್ನು ಭಕ್ಷಿಸಲು ಹೋಗುವುದು (ಭೋಜನ ಪದಾರ್ಥಗಳಲ್ಲಿ ಶ್ವಮಾಂಸವಿದ್ದರೆ)

ಎಷ್ಟು ಹೇಯವೋ, ಎಷ್ಟು ನಿಂದ್ಯವೋ–ಹಾಗೆಯೇ ನೀನು ಸಂಕಲ್ಪಿಸಿರುವ ಕಾರ್ಯವೂ ಅಷ್ಟೇ ಹೇಯವೂ ಮತ್ತು ಅಷ್ಟೇ ನಿಂದ್ಯವೂ ಆಗಿರುವುದು.''

ರಾಮ! ನಿಶ್ಚಯವಾಗಿಯೂ ಮಧುಷ್ಯಂದಾದಿಗಳ ಆ ಮಾತುಗಳು ವಿಶ್ವಾಮಿತ್ರರಿಗೆ ಶಲ್ಯದಿಂದ ಇರಿದಷ್ಟು ಯಾತನೆಯನ್ನುಂಟುಮಾಡಿದುವು. ಕೋಪದಿಂದ ಕಿಡಿಕಿಡಿಯಾದರು. ಕಣ್ಣುಗಳು ಕೆಂಪಾದವು. ಕಟ-ಕಟನೆ ಹಲ್ಲುಗಳನ್ನು ಕಡಿಯುತ್ತಾ ಮಕ್ಕಳಿಗೆ ಹೇಳತೊಡಗಿದರು :

``ಪುತ್ರರೇ! ನೀವು ಯಾರೊಡನೆ ಮಾತನಾಡುತ್ತಿರುವಿರೆಂಬ ಪರಿವೆಯೇ ಇಲ್ಲದೇ ನಿರ್ಭಯವಾಗಿ ಮಾತನಾಡುತ್ತಿರುವಿರಿ. ನಿಮ್ಮ ಈ ಮಾತು ಧರ್ಮಬಾಹಿರವೂ ನಿಂದ್ಯವೂ ಆಗಿದೆ. ನನ್ನ ಮಾತನ್ನು ನಿರ್ಲಕ್ಷಿಸಿ, ನಿಮಗೆ ತೋಚಿದಂತೆ ಹೇಳುತ್ತಿರುವಿರಿ. ದುರಭಿಮಾನದಿಂದಲೂ ಮತ್ತು ಲಾಘವದಿಂದಲೂ ಆಡುತ್ತಿರುವ ನಿಮ್ಮ ಅತಿಕಠೋರವಾದ ಮಾತುಗಳನ್ನು ಕೇಳಿದೊಡನೆಯೇ ನನ್ನ ಶರೀರಾದ್ಯಂತವಾಗಿ ರೋಮಾಂಚನವುಂಟಾಗಿರುವುದು. ತಂದೆಯ ಮಾತನ್ನು ಈ ರೀತಿಯಲ್ಲಿ ತಿರಸ್ಕರಿಸುವ ನಿಮಗೆ ತಕ್ಕ ಶಿಕ್ಷೆಯಾಗಲೇಬೇಕು. ಇನ್ನು ಮುಂದೆ ನಾಯಿಯ ಮಾಂಸವೇ ನಿಮಗೆ ಭೋಜನವಾಗಿ ಪರಿಣಮಿಸಲಿ. ನನ್ನ ಶಾಪವನ್ನು ಅನುಭವಿಸುತ್ತಿರುವ ವಸಿಷ್ಠರ ಮಕ್ಕಳ ಮುಷ್ಟಿಕಜಾತಿಯೇ ನಿಮಗೂ ಪ್ರಾಪ್ತವಾಗಲಿ. ಒಂದು ಸಾವಿರ ವರ್ಷಗಳವರೆಗೆ ನೀವು ಈ ದುಃಸ್ಥಿತಿಯಿಂದಿರುತ್ತಾ ಭೂಮಿಯಲ್ಲಿ ಅಲೆದಾಡಿರಿ.''

ಮಕ್ಕಳೆಲ್ಲರನ್ನೂ ಹೀಗೆ ಶಪಿಸಿದನಂತರ ವಿಶ್ವಾಮಿತ್ರಮಹರ್ಷಿಗಳು ಶುನಃಶೇಪನಿಗೆ ಮೊದಲು ಮಂತ್ರಪೂರ್ವಕವಾಗಿ ಭಯವಿನಾಶಕವಾದ ರಕ್ಷಾಬಂಧನವನ್ನು ಮಾಡಿ ಹೇಳಿದರು : ``ಮುನಿಪುತ್ರನೇ! ಪವಿತ್ರವಾದ ರಜ್ಜುವಿನಿಂದ ಕಟ್ಟಲ್ಪಟ್ಟ ಕೆಂಪುಮಾಲೆ ಮತ್ತು ಚಂದನಗಳಿಂದ ಅಲಂಕೃತನಾಗಿ ನೀನು ಯಜ್ಞಯೂಪದ ಸಮೀಪಕ್ಕೆ ಹೋದಾಗ ಯೂಪದ ಸಮೀಪದಲ್ಲಿ ನಿಂತು, ನಿನ್ನ ಸುಮಧುರಕಂಠದಿಂದ ಅಗ್ನಿದೇವನನ್ನು ಸ್ತೋತ್ರಮಾಡು. ಬಳಿಕ ನಾನೀಗ ನಿನಗೆ ಉಪದೇಶಿಸಲಿರುವ ಎರಡು ಮಹಾಮಂತ್ರಗಳಿಂದ ಇಂದ್ರ-ವಿಷ್ಣುದೇವತೆಗಳನ್ನೂ ಅನನ್ಯಭಕ್ತಿಯಿಂದ ಸ್ತೋತ್ರಮಾಡು.

ಅಂಬರೀಷನು ಮಾಡಲಿರುವ ಯಜ್ಞದ ಯೂಪಸ್ತಂಭದ ಸಮೀಪದಲ್ಲಿ ನಿಂತು ನೀನು ಈ ಮಹಾಮಂತ್ರಗಳನ್ನು ಪುನಶ್ಚರಣೆಮಾಡಿದೆಯಾದರೆ ಚಿರಂಜೀವಿತ್ವವನ್ನು ಪಡೆಯುವೆ."

ಸೋದರಮಾವನ ಮಾತಿನಂತೆ ಶುನಃಶೇಪನು ಏಕಾಗ್ರಚಿತ್ತನಾಗಿ, ವಿಶ್ವಾಮಿತ್ರರಿಂದ ಎರಡು ಮಹಾಮಂತ್ರಗಳ ಉಪದೇಶಪಡೆದು ಆಶ್ರಮ ದಿಂದ ಹೊರಟು ಅಂಬರೀಷನಿದ್ದಲ್ಲಿಗೆ ಬಂದು ಹೇಳಿದನು :

"ರಾಜಸಿಂಹ! ನಾವು ಈ ಕೂಡಲೇ ಯಜ್ಞಶಾಲೆಗೆ ಹೋಗೋಣ. ನನ್ನನ್ನು ಪಶುವನ್ನಾಗಿ ಮಾಡಿಕೊಂಡು ನೀನು ಆರಂಭಿಸಿರುವ ಯಜ್ಞವನ್ನು ಪೂರ್ಣಗೊಳಿಸು."

ಅಂಬರೀಷರಾಜನಿಗೆ ಶುನಃಶೇಪನು ಹೇಳಿದ ಮಾತುಗಳನ್ನು ಕೇಳಿ ಅಮಿತಾನಂದವಾಯಿತು. ಆಲಸ್ಯವನ್ನು ದೂರೀಕರಿಸಿ ರಾಜನು ಶುನಃಶೇಪ ನೊಡನೆ ಒಡನೆಯೇ ಯಜ್ಞಶಾಲೆಗೆ ತೆರಳಿದನು. ಸದಸ್ಯರ ಅನುಮತಿಯನ್ನು ಪಡೆದು ಶುನಃಶೇಪನನ್ನು ದರ್ಭೆಗಳಿಂದ ಮಂತ್ರಪೂರ್ವಕವಾಗಿ ಬಿಗಿದು ಯಾಗಪಶುವಿಗೆ ಇಡಬೇಕಾದ ಲಾಂಛನಗಳನ್ನಿಟ್ಟು, ಕೆಂಪುವಸ್ತ್ರದಿಂದ ಅಲಂಕರಿಸಿ, ವಿಷ್ಣುದೇವತಾಕವಾದ ಯೂಪದಲ್ಲಿ ಅವನನ್ನು ಬಂಧಿಸಿದನು. ಈ ರೀತಿಯಾಗಿ ಕಟ್ಟಿಹಾಕಲ್ಪಟ್ಟ ಶುನಃಶೇಪನು ವಿಶ್ವಾಮಿತ್ರರ ಆದೇಶದಂತೆ ಮೊದಲು ಅಗ್ನಿದೇವನನ್ನು ಸ್ತೋತ್ರಮಾಡಿ, ಅನಂತರ ವಿಶ್ವಾಮಿತ್ರರಿಂದ ಉಪದೇಶಿಸಲ್ಪಟ್ಟ, ಇಂದ್ರ-ವಿಷ್ಣುದೇವತಾಮಂತ್ರಗಳನ್ನು ಯಥೋಪದಿಷ್ಟ ವಾಗಿ ಪುನಶ್ಚರಣೆಮಾಡಿ ಪಶುಭೋಕ್ತೃವಾದ ಇಂದ್ರನನ್ನೂ ಯೂಪಾಧಿ ದೇವತೆಯಾದ ವಿಷ್ಣುವನ್ನೂ ತೃಪ್ತಿಗೊಳಿಸಿದನು.

ರಾಘವ! ರಹಸ್ಯದಲ್ಲಿ ಮಾಡಿದ ಋಷಿಪುತ್ರನ ಸ್ತೋತ್ರದಿಂದ ತೃಪ್ತಿ ಗೊಂಡು ಪ್ರೀತನಾದ ಇಂದ್ರನು ಶುನಃಶೇಪನಿಗೆ ದೀರ್ಘಾಯುಷ್ಯವನ್ನು ದಯಪಾಲಿಸಿದನು. ಅಂಬರೀಷನನ್ನೂ ಅನುಗ್ರಹಿಸಿದನು. ಇಂದ್ರನ ದಿವ್ಯಾನು ಗ್ರಹದಿಂದಾಗಿ ಅಂಬರೀಷನು ಪಶುವಿನ ವಧೆಯೇ ಇಲ್ಲದೇ ಯಜ್ಞವನ್ನು ಪೂರ್ಣಮಾಡಿ ಅನೇಕಪಟ್ಟು ಹೆಚ್ಚಿನ ಫಲವನ್ನು ಆ ಒಂದು ಯಾಗದಿಂದಲೇ

ಪಡೆದನು.* ರಾಮ! ಧರ್ಮಾತ್ಮರಾದ ವಿಶ್ವಾಮಿತ್ರರು ಪುನಃ ಅದೇ ಪುಷ್ಕರದ ಸಮೀಪದಲ್ಲಿಯೇ ಸಾವಿರಾರು ವರ್ಷಗಳವರೆಗೆ ಘೋರವಾದ ತಪಸ್ಸನ್ನು ಮಾಡಿದರು."

೬೨ನೆಯ ಸರ್ಗವು ಮುಗಿಯಿತು.

ತಪಸ್ಸಿನ ಫಲವಾಗಿ ವಿಶ್ವಾಮಿತ್ರರಿಗೆ ಋಷಿತ್ವ-ಮಹರ್ಷಿತ್ವ ಪ್ರಾಪ್ತಿ: ಮೇನಕೆಯ ಮೂಲಕ ವಿಶ್ವಾಮಿತ್ರರ ತಪೋಭಂಗ : ಬ್ರಹ್ಮರ್ಷಿಗಳಾಗಲು ಘೋರವಾದ ತಪಶ್ಚರಣೆ

ಪೂರ್ಣೇ ವರ್ಷಸಹಸ್ರೇ ತು ವ್ರತಸ್ನಾತಂ ಮಹಾಮುನಿಮ್ ।
ಅಭ್ಯಗಚ್ಛನ್ಸುರಾಃ ಸರ್ವೇ ತಪಃಫಲಚಿಕೀರ್ಷವಃ ॥೧॥

"ರಾಘವ! ವಿಶ್ವಾಮಿತ್ರರು ಪುನಃ ತಪಸ್ಸನ್ನು ಆರಂಭಿಸಿ ಒಂದು ಸಾವಿರ ವರ್ಷಗಳು ಪೂರ್ಣವಾದುವು. ತಪಸ್ಸಿನ ಫಲವನ್ನು ದಯಪಾಲಿಸುವ ಇಚ್ಛೆಯಿಂದ ಬ್ರಹ್ಮಪುರಸ್ಸರರಾದ ಸಮಸ್ತದೇವತೆಗಳೂ ವ್ರತಸ್ನಾತರಾದ ವಿಶ್ವಾಮಿತ್ರರ ಬಳಿಗೆ ಆಗಮಿಸಿದರು.

ಮಹಾತೇಜಸ್ವಿಯಾದ ದೇವಪ್ರಮುಖನಾದ ಬ್ರಹ್ಮನು ವಿಶ್ವಾಮಿತ್ರರಿಗೆ ಸುಮಧುರವಾದ ಈ ಮಾತನ್ನು ಹೇಳಿದನು :

"ವಿಶ್ವಾಮಿತ್ರ! ನೀನು ಒಂದು ಸಾವಿರ ವರ್ಷಗಳು ತಪಶ್ಚರಣೆಮಾಡಿ ಆರ್ಜನೆಮಾಡಿರುವ ಪುಣ್ಯದ ಫಲವಾಗಿ ಋಷಿಯಾಗಿರುವೆ. ನಿನಗೆ ಮಂಗಳ ವಾಗಲಿ. ನಾವಿನ್ನು ಹೋಗಿಬರುತ್ತೇವೆ."

---

* 'ಹರಿಶ್ಚನ್ದ್ರೋ ಹ ವೈಧಸ ಐಕ್ಷ್ವಾಕೋ ರಾಜಪುತ್ರ ಆಸ'–ಎಂದು ಆರಂಭವಾಗಿ ಹರಿಶ್ಚಂದ್ರನು ಯಾಗ ಮಾಡುತ್ತಿದ್ದಾಗ ಪಶುವು ಅಪಹರಿಸಲ್ಪಟ್ಟಿತೆಂದೂ, ಅಜೀತ ಎಂಬುವನ ಮಗನಾದ ಶುನಃಶೇಪನನ್ನು ಹರಿಶ್ಚಂದ್ರನು ಕ್ರಯಕೊಟ್ಟು ತಂದನೆಂತಲೂ ಬಹ್ವೃಚಬ್ರಾಹ್ಮಣದಲ್ಲಿ ಹೇಳಿದೆ. ಇಲ್ಲಿ ಹೇಳಿರುವ ಹರಿಶ್ಚಂದ್ರನನ್ನೇ ಪುರಾಣಾಂತರ ಗಳಲ್ಲಿಯೂ ರಾಮಾಯಣದಲ್ಲಿಯೂ ಅಂಬರೀಷನೆಂದು ಕರೆಯಲಾಗಿದೆಯೆಂದೂ, ಶುನಃಶೇಪನ ತಂದೆಯಾದ ಅಜೀತನನ್ನು ಋಚೀಕನೆಂದು ಕರೆಯಲಾಗಿದೆಯೆಂದೂ ಕೆಲವು ವಿದ್ವಾಂಸರ ಅಭಿಪ್ರಾಯವಾಗಿದೆ. ಉಳಿದ ಕಥಾವಿವರಣೆಯು ಎರಡು ಕಡೆಗಳಲ್ಲಿಯೂ ಒಂದೇ ಆಗಿರುವುದು.

(ಹಿಂದೆ ರಾಜರ್ಷಿಗಳಾಗಿದ್ದವರು ಇಂದು ಋಷಿಗಳಾದರು. 'ರಾಜ' ಶಬ್ದದಿಂದ ವಿಮುಕ್ತರಾದುದರಿಂದ ಕ್ಷಾತ್ರಧರ್ಮವು ವಿಶ್ವಾಮಿತ್ರರಿಂದ ಆ ವೇಳೆಗೆ ಪೂರ್ಣವಾಗಿ ಪರಿತ್ಯಕ್ತವಾಗಿತ್ತೆಂದು ಹೇಳಬಹುದಾಗಿದೆ. ಆದರೂ ವಿಶ್ವಾಮಿತ್ರರ ಅಭಿಲಾಷೆಯು ಕೇವಲ ಋಷಿಗಳಾಗುವುದು ಮಾತ್ರವಲ್ಲ. ಬ್ರಹ್ಮರ್ಷಿಗಳೇ ಆಗಬೇಕೆನ್ನುವುದು ಅವರ ಸಂಕಲ್ಪವಾಗಿದ್ದಿತು.)

ಬ್ರಹ್ಮಪುರಸ್ಸರರಾದ ದೇವತೆಗಳು ವಿಶ್ವಾಮಿತ್ರರಿಗೆ ಹೀಗೆ ಹೇಳಿ ದೇವ ಲೋಕಕ್ಕೆ ತೆರಳಿದರು. ಮಹಾತೇಜಸ್ವಿಗಳಾದ ವಿಶ್ವಾಮಿತ್ರರು ಬ್ರಹ್ಮರ್ಷಿ ಗಳಾಗುವ ಸಲುವಾಗಿ ಪುನಃ ತಪಸ್ಸನ್ನು ಮಾಡಲು ಉಪಕ್ರಮಿಸಿದರು.

ಬಳಿಕ ಬಹಳ ಕಾಲ ಕಳೆದನಂತರ ಒಂದು ದಿನ ಮೇನಕೆಯೆಂಬ ಪರಮಶ್ರೇಷ್ಠಳಾದ ಅಪ್ಸರೆಯು ವಿಶ್ವಾಮಿತ್ರರ ಆಶ್ರಮಸಮೀಪದಲ್ಲಿದ್ದ ಪುಷ್ಕರದಲ್ಲಿ ಸ್ನಾನಮಾಡುತ್ತಿದ್ದಳು. ಕುಶಿಕವಂಶಜರಾದ ಮಹಾತೇಜಸ್ವಿ ಗಳಾದ ವಿಶ್ವಾಮಿತ್ರರು–ಮೋಡದಲ್ಲಿ ಕಾಣುವ ಮಿಂಚಿನಂತೆ–ಸರೋವರ ದಲ್ಲಿ ಸ್ನಾನಮಾಡುತ್ತಿದ್ದ, ಅಪ್ರತಿಮರೂಪಸಂಪನ್ನೆಯಾದ ಮೇನಕೆಯನ್ನು ಕಂಡರು. ನೋಡಿದೊಡನೆಯೇ ವಿಶ್ವಾಮಿತ್ರರು ಮನ್ಮಥನ ವಶರಾಗಿ ಮೇನಕೆಗೆ ಹೇಳಿದರು :

"ಸುಂದರಿ! ನಿನಗೆ ಸ್ವಾಗತವನ್ನು ಬಯಸುತ್ತೇನೆ. ನನ್ನ ಈ ಆಶ್ರಮ ದಲ್ಲಿಯೇ ನೀನು ವಾಸವಾಗಿರು. ಮನ್ಮಥನ ಬಾಣಗಳ ಆಘಾತದಿಂದಾಗಿ ಮೋಹಗೊಂಡಿರುವ ನನ್ನನ್ನು ಅನುಗ್ರಹಿಸು. ನನ್ನ ಆಶಯವನ್ನು ಪೂರ್ಣ ಗೊಳಿಸು. ನಿನಗೆ ಮಂಗಳವಾಗಲಿ." ವಿಶ್ವಾಮಿತ್ರರು ಹೀಗೆ ಹೇಳಲಾಗಿ ಶ್ರೇಷ್ಠವಾದ ಜಘನದಿಂದ ಕೂಡಿದ್ದ ಮೇನಕೆಯು ವಿಶ್ವಾಮಿತ್ರರು ಬಯಸಿ ದಂತೆ ಅವರ ಆಶ್ರಮದಲ್ಲಿಯೇ ಇದ್ದುಬಿಟ್ಟಳು. ರಾಮ! ಮೇನಕೆಯು ಬಂದ ಕಾರಣದಿಂದಾಗಿ ವಿಶ್ವಾಮಿತ್ರರ ತಪಸ್ಸಿಗೆ ಮಹಾವಿಘ್ನವುಂಟಾಯಿತು. ಮೇನಕೆಯು ವಿಶ್ವಾಮಿತ್ರರ ಆಶ್ರಮದಲ್ಲಿ ವಾಸಮಾಡುತ್ತಿದ್ದಾಗ ಹತ್ತು ವರ್ಷಗಳು ಹತ್ತು ಕ್ಷಣಗಳಂತೆ ವಿಶ್ವಾಮಿತ್ರರಿಗೆ ಸುಖದಿಂದ ಕಳೆದು ಹೋದುವು. ಮೇನಕೆಯ ಸಂಗಮಾಡಿದುದಕ್ಕಾಗಿ ನಾಚಿಕೆಗೊಂಡರೋ

ಎಂಬಂತೆ ತಲೆಬಗ್ಗಿಸಿ ಕುಳಿತು, ಅಮೋಘವಾದ ತಮ್ಮ ಹತ್ತು ವರ್ಷಗಳು ವ್ಯರ್ಥವಾಗಿ ಕಳೆದುಹೋದುದನ್ನು ಚಿಂತಿಸಿ ಶೋಕಿಸಿದರು. ಶೋಕಮಗ್ನ ರಾಗಿ ಕುಳಿತು, ಇವೆಲ್ಲಕ್ಕೂ ಕಾರಣವೇನೆಂಬುದನ್ನು ಕುರಿತು ಆಲೋಚಿಸಿದ ನಂತರ ವಿಶ್ವಾಮಿತ್ರರು–'ಇವೆಲ್ಲವೂ ದೇವತೆಗಳ ಕೃತ್ರಿಮಕಾರ್ಯ. ನಾನು ಸಂಪಾದಿಸಿದ ತಪಃಫಲದ ಅಪಹರಣಕ್ಕಾಗಿ ಹೀಗೆ ಮಾಡಿರುವರು'–ಎಂದು ನಿರ್ಧರಿಸಿದರು. ಅವರ ಬುದ್ಧಿಯು ಕೋಪದಿಂದ ಕ್ಷುಭಿತವಾಯಿತು. "ಕೇವಲ ಒಂದು ಹಗಲು ಒಂದು ರಾತ್ರಿ ಕಳೆದಂತೆ ಈ ಹತ್ತು ವರ್ಷಗಳು ಕಳೆದುಹೋದುವು. ಕಾಮಮೋಹದಿಂದ ಪರೀಭೂತನಾದ ನನಗೆ ಈ ವಿಘ್ನ ವುಂಟಾಯಿತು." ಹೀಗೆ ತಾವು ಕಾಮಾಭಿಭೂತರಾಗಿ ಮಾಡಿದ ಅಕಾರ್ಯಕ್ಕೆ ಪಶ್ಚಾತ್ತಾಪಪಟ್ಟು, ತಪಸ್ಸಿಗೆ ವಿಘ್ನವುಂಟಾದುದಕ್ಕೂ ಮತ್ತು ಸ್ತ್ರೀಸಂಗದಿಂದ ತಪಃಫಲವು ವ್ಯಯವಾದುದಕ್ಕೂ ಅತಿದುಃಖಿತರಾಗಿ, ದೀರ್ಘವಾದ ನಿಟ್ಟುಸಿರುಬಿಟ್ಟರು. ವಿಶ್ವಾಮಿತ್ರರು ತನ್ನಿಂದ ವಿಮುಖರಾದುದನ್ನು ಕಂಡು ಮೇನಕೆಗೆ ಅವರು ತನಗೆಲ್ಲಿ ಶಾಪಕೊಟ್ಟುಬಿಡುವರೋ–ಎಂದು ಬಹಳ ಭಯವಾಯಿತು. ಮೇನಕೆಯು ಭಯವಿಹ್ವಲಳಾಗಿ ತರತರನೆ ನಡುಗುತ್ತಾ ಕೈಮುಗಿದುಕೊಂಡು ನಿಂತು ಋಷಿಗಳ ಮುಖಾರವಿಂದವನ್ನೇ ಕಾತರತೆ ಯಿಂದ ವೀಕ್ಷಿಸುತ್ತಿದ್ದಳು. ವಿಶ್ವಾಮಿತ್ರರು ಮೇನಕೆಗೆ ಶಾಪಕೊಡಲಿಲ್ಲ. ಭೀತ ಳಾಗಿದ್ದ ಮೇನಕೆಯನ್ನು ಸುಮಧುರವಾಕ್ಯಗಳಿಂದಲೇ ಸಂತೈಸಿ ಕಳುಹಿಸಿ ಕೊಟ್ಟು, ಉತ್ತರದಿಕ್ಕಿನಲ್ಲಿರುವ ಸುಪ್ರಸಿದ್ಧವಾದ ಹಿಮವತ್ಪರ್ವತದ ಕಡೆಗೆ ತೆರಳಿದರು. ಕಾಮ-ಕ್ರೋಧಗಳನ್ನು ಪೂರ್ಣವಾಗಿ ತ್ಯಜಿಸಿಯೇ ತೀರಬೇಕೆಂಬ ಇಚ್ಛೆಯಿಂದ ಮಹಾಯಶಸ್ವಿಗಳಾದ ವಿಶ್ವಾಮಿತ್ರರು ದೃಢವಾದ ಸಂಕಲ್ಪ ಮಾಡಿ, ಹಿಮವತ್ಪರ್ವತದ ಸಮೀಪದಲ್ಲಿರುವ ಕೌಶಿಕೀನದಿಯ ತೀರದಲ್ಲಿದ್ದ ಆಶ್ರಮದಲ್ಲಿ ಮಹಾಘೋರವಾದ ತಪಸ್ಸನ್ನು ಮಾಡಲು ಪ್ರಾರಂಭಿಸಿದರು. ಅಲ್ಲಿ ಒಂದು ಸಾವಿರ ವರ್ಷಗಳು ಅತಿಘೋರವಾದ ತಪಸ್ಸನ್ನು ಮಾಡಿದರು. ಅದರಿಂದ ದೇವತೆಗಳಿಗೆ ಮಹಾಭಯವುಂಟಾಯಿತು. ರಾಘವ! ಋಷಿ-ಮಹರ್ಷಿಗಳ ಸಮೇತರಾಗಿ ದೇವತೆಗಳೆಲ್ಲರೂ ಒಟ್ಟುಗೂಡಿ ಸಮಾ ಲೋಚನೆ ಮಾಡಿದರು. 'ಈ ವಿಶ್ವಾಮಿತ್ರನು ಮಹರ್ಷಿಯ ಸ್ಥಾನವನ್ನು ಪಡೆ ಯಲಿ'–ಎಂದು ನಿಶ್ಚಯಿಸಿ ಆ ವಿಷಯವನ್ನು ಬ್ರಹ್ಮನಿಗೆ ತಿಳಿಸಿದರು. ದೇವತೆ

ಗಳ ಮಾತನ್ನು ಕೇಳಿ, ಸರ್ವಲೋಕಪಿತಾಮಹನಾದ ಬ್ರಹ್ಮನು ತಪೋಧನರಾದ ವಿಶ್ವಾಮಿತ್ರರಿಗೆ ಸುಮಧುರವಾದ ಈ ಮಾತುಗಳನ್ನು ಹೇಳಿದನು : "ಮಹರ್ಷೇ! ವತ್ಸ! ನಿನಗೆ ಸ್ವಾಗತವು. ನೀನು ಒಂದು ಸಾವಿರ ವರ್ಷ ಕಾಲ ಮಾಡಿರುವ ಈ ಉಗ್ರತಪಸ್ಸಿನಿಂದ ನಾನು ಸುಪ್ರೀತನಾಗಿದ್ದೇನೆ. ಋಷಿಮುಖ್ಯತ್ವಸೂಚಕವಾದ ಮಹರ್ಷಿತ್ವವನ್ನು ನಿನಗೆ ಅನುಗ್ರಹಿಸಿದ್ದೇನೆ. ಇದರಿಂದಾಗಿ ಇನ್ನು ಮುಂದೆ ನೀನು ಮಹರ್ಷಿಯೆಂದು ಪ್ರಸಿದ್ಧನಾಗುವೆ."

ಬ್ರಹ್ಮನ ಮಾತನ್ನು ಕೇಳಿ ತಪೋಧನರಾದ ವಿಶ್ವಾಮಿತ್ರರು ಸಾಷ್ಟಾಂಗನಮಸ್ಕಾರಮಾಡಿ, ಬದ್ಧಾಂಜಲಿಯಾಗಿ ಬ್ರಹ್ಮನಿಗೆ ಹೇಳಿದರು : "ಒಂದು ಸಾವಿರ ವರ್ಷ ನಾನು ದೃಢಸಂಕಲ್ಪದಿಂದ ಮಾಡಿದ ಶುಭಕರ್ಮಗಳ ಫಲವಾಗಿ, ತುಲನೆ ಮಾಡಲು ಅಸಾಧ್ಯವಾದ ಮಹರ್ಷಿಯ ಸ್ಥಾನವನ್ನು ದಯಪಾಲಿಸಿರುವೆನೆಂದು ಹೇಳಿದೆಯಲ್ಲವೇ? ಇದರಿಂದ ನಾನು ನನ್ನ ಅಂತರಿಂದ್ರಿಯ-ಬಹಿರಿಂದ್ರಿಯಗಳನ್ನು ಪೂರ್ಣವಾಗಿ ಜಯಿಸಿದ್ದೇನೆಂದು ಭಾವಿಸಬಹುದೇ?"

"ವಿಶ್ವಾಮಿತ್ರ! ನೀನು ಮಹರ್ಷಿಯಾದ ಮಾತ್ರದಿಂದ ಸಂಪೂರ್ಣವಾಗಿ ಜಿತೇಂದ್ರಿಯನಾದಂತಾಗಲಿಲ್ಲ. ನೀನು ತಪಶ್ಚರಣೆಗಳಿಂದಲೂ, ವ್ರತಾನುಷ್ಠಾನದಿಂದಲೂ ಬ್ರಹ್ಮರ್ಷಿಯಾಗಲು ಪುನಃ ಪ್ರಯತ್ನಿಸು." ಬ್ರಹ್ಮನು ಹೀಗೆ ಹೇಳಿ ದೇವತೆಗಳೊಡನೆ ಸ್ವರ್ಗಕ್ಕೆ ತೆರಳಿದನು. ಬ್ರಹ್ಮ ಪ್ರಮುಖರಾದ ದೇವತೆಗಳೆಲ್ಲರೂ ಸ್ವರ್ಗಕ್ಕೆ ಪ್ರಯಾಣಮಾಡಲಾಗಿ, ವಿಶ್ವಾಮಿತ್ರರು ಕೌಶಿಕೀ ನದಿಯ ತೀರದಲ್ಲಿಯೇ ಮತ್ತೂ ಘೋರವಾದ ತಪಶ್ಚರಣೆಯಲ್ಲಿ ನಿರತರಾದರು. ಕೈಗಳನ್ನು ಮೇಲೆತ್ತಿ, ನಿರಾಲಂಬರಾಗಿ,* ವಾಯುವನ್ನೇ ಆಹಾರವನ್ನಾಗಿ ಮಾಡಿಕೊಂಡು, ತಪಸ್ಸನ್ನು ಮಾಡಲು ಉಪಕ್ರಮಿಸಿದರು. ಬೇಸಿಗೆಯ ಕಾಲದಲ್ಲಿ ಪಂಚಾಗ್ನಿಗಳ ಮಧ್ಯದಲ್ಲಿ ತಪಸ್ಸನ್ನು ಮಾಡುತ್ತಿದ್ದರು. ಮಳೆಗಾಲದಲ್ಲಿ ಆಕಾಶವನ್ನೇ ಆಶ್ರಯಿಸಿ ತಪಸ್ಸನ್ನು ಮಾಡುತ್ತಿದ್ದರು. ಚಳಿಗಾಲ ಬಂತೆಂದರೆ ಹಗಲಿನಲ್ಲಿಯೂ ಮತ್ತು ರಾತ್ರಿಯಲ್ಲಿಯೂ ನೀರಿನಲ್ಲಿ ನಿಂತು ತಪಸ್ಸುಮಾಡುತ್ತಿದ್ದರು. ಈ ರೀತಿಯಾಗಿ ಒಂದು ಸಾವಿರ

---

* ನಿರಾಲಮ್ಬಃ = ಗೃಹಾದ್ಯಾಲಮ್ಬರಹಿತಃ = ಆಶ್ರಮದ ಹೊರಗಿನ ಬಯಲಿನಲ್ಲಿ.

ವರ್ಷಗಳವರೆಗೂ ವಿಶ್ವಾಮಿತ್ರರು ಅತಿಘೋರವಾದ ತಪಸ್ಸನ್ನು ಮಾಡಿದರು. ಅವರು ಹೀಗೆ ತಪಸ್ಸನ್ನು ಮಾಡುತ್ತಿರಲಾಗಿ ದೇವತೆಗಳಿಗೂ ಮತ್ತು ದೇವತೆಗಳ ಅಧಿಪತಿಯಾದ ಇಂದ್ರನಿಗೂ ವಿಶೇಷವಾದ ತಾಪವುಂಟಾಯಿತು. ಸಕಲಮರುದ್ಗಣಗಳಿಂದ ಕೂಡಿದ ಇಂದ್ರನು ಅಪ್ಸರೆಯರಲ್ಲಿ ಶ್ರೇಷ್ಠಳಾದ ರಂಭೆಯೊಡನೆ ತನಗೆ ಹಿತವಾಗುವ ಮತ್ತು ವಿಶ್ವಾಮಿತ್ರರಿಗೆ ಅಹಿತವಾಗುವ ಈ ಮಾತನ್ನಾಡಿದನು.

೬೩ನೆಯ ಸರ್ಗವು ಮುಗಿಯಿತು.

ವಿಶ್ವಾಮಿತ್ರರು ರಂಭೆಗೆ ಶಾಪಕೊಟ್ಟು ಪುನಃ ತಪಸ್ಸಿನಲ್ಲಿ ತೊಡಗಿದುದು

ಸುರಕಾರ್ಯಮಿದಂ ರಮ್ಭೇ ಕರ್ತವ್ಯಂ ಸುಮಹತ್ತ್ವಯಾ ।
ಲೋಭನಂ ಕೌಶಿಕಸ್ಯೇಹ ಕಾಮಮೋಹಸಮನ್ವಿತಮ್ ॥೧॥

“ರಂಭೇ! ಉಗ್ರವಾದ ತಪಸ್ಸಿನಲ್ಲಿ ನಿರತನಾಗಿರುವ ವಿಶ್ವಾಮಿತ್ರನ ಬಳಿಗೆ ನೀನೀಗಲೇ ಹೋಗಿ ಅವನು ನಿನ್ನನ್ನು ಕಾಮಿಸುವಂತೆ ಮಾಡಬೇಕು. ನಿನ್ನ ಕಾಮನೆಯಿಂದ ಅವನು ವಿಮೋಹಿತನಾಗಬೇಕು. ಇದು ಮಹತ್ತರವಾದ ದೇವಕಾರ್ಯವಾಗಿರುತ್ತದೆ. ಆದುದರಿಂದ ದೇವತೆಗಳಿಗೆ ಅನುಕೂಲವಾಗುವ ಈ ಕಾರ್ಯಮಾಡುವುದು ನಿನ್ನ ಕರ್ತವ್ಯವೂ ಆಗಿರುವುದು.” ಧೀಮಂತನಾದ ಸಹಸ್ರಾಕ್ಷನಿಂದ ಹೀಗೆ ನಿರ್ದಿಷ್ಟಳಾದ ಅಪ್ಸರೆಯು ಲಜ್ಜಿತಳಾಗಿ, ಕೈಮುಗಿದು ಸುರೇಶ್ವರನಿಗೆ ಪ್ರತ್ಯುತ್ತರಿಸಿದಳು :

“ಸುರೇಶ್ವರ! ನಿನಗೆ ತಿಳಿದಿರುವಂತೆಯೇ ವಿಶ್ವಾಮಿತ್ರನು ಅತಿತೀಕ್ಷ್ಣಸ್ವಭಾವದವನು. ವಿಘ್ನಮಾಡಲು ಹೋದ ನನ್ನ ಮೇಲೆ ಅವನು ಖಂಡಿತವಾಗಿಯೂ ಕೋಪಗೊಂಡು ಆ ಕೋಪಾಗ್ನಿಯಿಂದ ನನ್ನನ್ನು ಸುಟ್ಟುಬಿಡುವನು. ಇದರಲ್ಲಾವ ಸಂಶಯವೂ ಇಲ್ಲ. ಆದುದರಿಂದ ನನಗೆ ನಿನ್ನ ನಿರ್ದೇಶದಂತೆ ನಡೆಯಲು ಭಯವಾಗಿದೆ. ಈ ಕಾರ್ಯಕ್ಕೆ ನನ್ನನ್ನು ನಿಯೋಜಿಸದೇ ನನ್ನನ್ನನುಗ್ರಹಿಸು ದೇವ!”

ರಾಮ! ಭೀತಳಾಗಿ ಭಯವಿಹ್ವಲಳಾಗಿ ಗಡಗಡನೆ ನಡುಗುತ್ತಾ ಬದ್ಧಾಂಜಲಿಯಾಗಿ ನಿಂತಿದ್ದ ಅಪ್ಸರೆಗೆ ಇಂದ್ರನು ಪುನಃ ಹೇಳಿದನು : "ಭಯಪಡಬೇಡ ರಂಭೇ! ನನ್ನ ಶಾಸನದಂತೆ ನಡೆಯಲು ನಿಶ್ಚಯಮಾಡು. ಮೇಲಾಗಿ ನಾನು ನಿನ್ನೊಬ್ಬಳನ್ನೇ ವಿಶ್ವಾಮಿತ್ರನ ಬಳಿಗೆ ಕಳುಹಿಸುವುದಿಲ್ಲ. ನಿನ್ನ ಸಹಾಯಕ್ಕೆ ಮಧುಮಾಸವಿರುತ್ತದೆ. ಚಿಗುರುಗಳಿಂದ ವಿಕಸಿತವಾದ ವೃಕ್ಷಗಳಲ್ಲಿ ಕೋಗಿಲೆಗಳು ಸುಮಧುರವಾಗಿ ನಿನಾದಮಾಡುತ್ತಿರುತ್ತವೆ. ಮನ್ಮಥಸಮೇತನಾಗಿ ನಾನೂ ನಿನ್ನ ಜೊತೆಯಲ್ಲಿಯೇ ಇರುತ್ತೇನೆ. ನಿನ್ನ ರೂಪವನ್ನು ಮತ್ತೂ ಹೆಚ್ಚಿನ ಸೌಂದರ್ಯವುಳ್ಳದ್ದನ್ನಾಗಿ ಮಾಡಿಕೊ. ಅಪ್ರತಿಮವಾದ ಅಂತಹ ರೂಪರಾಶಿಯಿಂದ ಕೂಡಿ ಹಾವ-ಭಾವಾದಿಗಳಿಂದ ತಪಸ್ವಿಯಾದ ಕೌಶಿಕಮಹರ್ಷಿಯ ಮನಸ್ಸನ್ನು ಭೇದಿಸು."

ರಂಭೆಯು ದೇವೇಂದ್ರನ ಮಾತುಗಳನ್ನು ಕೇಳಿ ಮಹರ್ಷಿಯ ತಪೋ ವಿಘ್ನಕಾರ್ಯಕ್ಕೆ ಒಪ್ಪಿಗೆಯಿತ್ತು ಚೆಲುವಾಗಿದ್ದ ತನ್ನ ಶರೀರವನ್ನು ದಿವ್ಯಾ ಭರಣಗಳಿಂದಲೂ, ದಿವ್ಯಾಂಬರಗಳಿಂದಲೂ ಮತ್ತೂ ಚೆಲುವಾಗಿ ಅಲಂ ಕರಿಸಿಕೊಂಡು ಮಂದಹಾಸದಿಂದ ಕೂಡಿದ ಲಲಿತೆಯಾಗಿ (ಅತಿಶಯ ಸೌಂದರ್ಯವಿಶಿಷ್ಟಳಾಗಿ) ವಿಶ್ವಾಮಿತ್ರರು ತಪಸ್ಸುಮಾಡುತ್ತಿದ್ದ ಆಶ್ರಮಕ್ಕೆ ಹೋಗಿ ತನ್ನ ಹಾವ-ಭಾವಗಳಿಂದ ಅವರನ್ನು ಕಾಮಕೇಳಿಗಾಗಿ ಪ್ರಚೋದಿ ಸಿದಳು. ಇಂದ್ರನು ಮೊದಲೇ ಸಿದ್ಧಪಡಿಸಿದ್ದ ಯೋಜನೆಗೆ ಅನುಸಾರವಾಗಿ ಚಿಗುರೆಲೆಗಳಿಂದ ಕೂಡಿದ ವೃಕ್ಷಗಳ ಮೇಲೆ ಕೋಗಿಲೆಗಳು ನಿನಾದಮಾಡು ತ್ತಿದ್ದುವು. ಕೋಗಿಲೆಯ ಸುಮಧುರವಾದ ಕೂಜಿತವನ್ನು ವಿಶ್ವಾಮಿತ್ರರು ಕೇಳಿದರು. ವಿಶ್ವಾಮಿತ್ರರ ಮನಸ್ಸು ಸಂತೋಷದಿಂದ ಪ್ರಸನ್ನವಾಯಿತು. ಬಹಿರ್ಮುಖರಾಗಿ ಕಣ್ತೆರೆದರು. ಒಡನೆಯೇ ಒಯ್ಯಾರದಿಂದ ತನ್ನ ಮುಂದೆ ನಿಂತಿದ್ದ ಅಪ್ಸರೆಯನ್ನೂ ಕಂಡರು. ಕಣ್ತೆರೆದ ವಿಶ್ವಾಮಿತ್ರರು ಏಕಕಾಲದಲ್ಲಿ ಸುಮಧುರವಾದ ಕೋಕಿಲನಿನಾದವನ್ನೂ, ಅಪ್ರತಿಮವಾದ ಕರ್ಣಾನಂದಕರ ವಾದ ಗಾನವನ್ನೂ ಕೇಳಿದರು. ಅನುಪಮರೂಪಲಾವಣ್ಯದಿಂದ ಕೂಡಿದ್ದ ರಂಭೆಯೂ ಗೋಚರಳಾದಳು. ವಿಶ್ವಾಮಿತ್ರರಿಗೆ ಸಂದೇಹವುಂಟಾಯಿತು. ಧ್ಯಾನಾಸಕ್ತರಾಗಿ ಒಳಗಣ್ಣಿನಿಂದ ಇವೆಲ್ಲವೂ ಇಂದ್ರನ ಕಾರ್ಯವೇ ಆಗಿರುವು ದೆಂದು ತಿಳಿದರು. ಅತ್ಯಂತಕುಪಿತರಾಗಿ ರಂಭೆಯನ್ನು ಶಪಿಸಿದರು :

ಯಸ್ಮಾಂ ಲೋಭಯಸೇ ರಮ್ಭೇ ಕಾಮಕ್ರೋಧಜಯೈಷಿಣಮ್ ।
ದಶ ವರ್ಷಸಹಸ್ರಾಣಿ ಶೈಲೀ ಸ್ಥಾಸ್ಯಸಿ ದುರ್ಭಗೇ ॥೧೧॥

ಬ್ರಾಹ್ಮಣಃ ಸುಮಹಾತೇಜಾಸ್ತಪೋಬಲಸಮನ್ವಿತಃ ।
ಉದ್ಧರಿಷ್ಯತಿ ರಮ್ಭೇ ತ್ವಾಂ ಮತ್ಕ್ರೋಧಕಲುಷೀಕೃತಾಮ್ ॥೧೨॥

"ರಂಭೇ! ಕಾಮ-ಕ್ರೋಧಾದಿ ಆರು ಶತ್ರುಗಳನ್ನೂ ನಿಗ್ರಹಿಸ ಬೇಕೆಂಬ ಇಚ್ಛೆಯಿಂದ ತಪಸ್ಸುಮಾಡುತ್ತಿರುವ ನನ್ನನ್ನು ನಿನ್ನ ಹಾವ- ಭಾವಾದಿಗಳಿಂದ ವ್ಯಾಮೋಹಿತನನ್ನಾಗಿ ಮಾಡಲು ಮತ್ತು ತಪಸ್ಸಿನಿಂದ ಪರಾಙ್ಮುಖನನ್ನಾಗಿ ಮಾಡಲು ಯತ್ನಿಸಿದೆಯಲ್ಲವೇ? ದುಷ್ಟಕಾಮವುಳ್ಳವಳೇ! ದುಷ್ಟಕಾರ್ಯಪ್ರಯತ್ನಶೀಲಳೇ! ಈ ನಿನ್ನ ದುಷ್ಟಕಾಮ ಮತ್ತು ಪ್ರಯತ್ನಗಳಿಗಾಗಿ ನೀನು ಹತ್ತು ಸಾವಿರ ವರ್ಷಗಳ ಕಾಲ ಶಿಲಾಮೂರ್ತಿ ಯಾಗಿರುವೆ.* ನನ್ನ ಕ್ರೋಧದಿಂದ ಕಲುಷಿತಳಾದ ನಿನ್ನನ್ನು ಮಹಾತೇಜಸ್ವಿ ಯಾದ, ತಪೋಬಲಯುಕ್ತನಾದ ಬ್ರಾಹ್ಮಣನೊಬ್ಬನು ಉದ್ಧರಿಸುತ್ತಾನೆ. ಅವನ ಅನುಗ್ರಹದಿಂದಾಗಿ ನೀನು ಶಿಲಾರೂಪವನ್ನು ಬಿಟ್ಟು ಪುನಃ ನಿನ್ನ ಸುಂದರರೂಪವನ್ನು ಪಡೆಯುವೆ."

ಈ ರೀತಿಯಾಗಿ ರಂಭೆಗೆ ಪ್ರತಿಶಾಪವನ್ನೂ ಕೊಟ್ಟು ವಿಶ್ವಾಮಿತ್ರರು ಕಾಮದಮನ ಮಾಡಿದರೂ ಕೋಪವನ್ನು ದಮನಮಾಡಿಕೊಳ್ಳಲು ಸಮರ್ಥ ರಾಗಲಿಲ್ಲ. ಅದರಿಂದಾಗಿ ರಂಭೆಗೆ ಶಾಪವಿತ್ತು, ತಪಸ್ಸಿನ ವ್ಯಯಮಾಡಿ

---

* 'ಇಂದ್ರನೇ ಈ ಎಲ್ಲಕ್ಕೂ ಕಾರಣನೆಂದೂ ತಿಳಿದರೂ ವಿಶ್ವಾಮಿತ್ರರು ರಂಭೆಗೆ ಶಾಪ ಕೊಟ್ಟುದೇಕೆ?'–ಎಂಬುದಕ್ಕೆ 'ಅಕಾರ್ಯಕ್ಕೆ ಪ್ರಚೋದಿಸಿದ ಇಂದ್ರನು ರಂಭೆಯಿಂದ ಪ್ರತ್ಯೇಕಿಸಲ್ಪಟ್ಟವನಾಗಿ ಬಹಳ ದಿನಗಳವರೆಗೂ ವಿರಹವೇದನೆಯನ್ನು ಅನುಭವಿಸಲಿ" ಎಂಬ ಆಶಯದಿಂದ ವಿಶ್ವಾಮಿತ್ರರು ರಂಭೆಗೆ ಹತ್ತು ಸಾವಿರ ವರ್ಷಗಳ ಕಾಲ ಶಿಲಾರೂಪಳಾಗಿರುವಂತೆ ಶಾಪವಿತ್ತರೆಂದು ಒಬ್ಬ ವ್ಯಾಖ್ಯಾನಕಾರರು ಹೇಳಿರುತ್ತಾರೆ. ಮತ್ತೊಬ್ಬರು : 'ರಂಭೆಗೆ ಶಾಪವಿತ್ತುದಕ್ಕಾಗಿ ವಿಶ್ವಾಮಿತ್ರರಿಗೆ ಪಶ್ಚಾತ್ತಾಪವಾಯಿತು. ಏಕೆಂದರೆ : ಈ ಪ್ರಕರಣದಲ್ಲಿ ರಂಭೆಯು ದೋಷಿಯಲ್ಲ. ತನ್ನ ಸ್ವಾಮಿಯಾದ ಇಂದ್ರನ ಆಜ್ಞೆಯಂತೆ ಬಂದಿರುವಳು. ಆದುದರಿಂದ ನಾನವಳಿಗೆ ಶಾಪಕೊಡಬಾರದಾಗಿತ್ತು.' ಹೀಗೆಂದು ಯೋಚಿಸಿ ಅಪ್ಸರೆಗೆ ಪ್ರತಿಶಾಪ ಅಥವಾ ನಿವಾರಣೆಯು ಹೇಗಾಗುವುದೆಂಬುದನ್ನು ತಿಳಿಸುತ್ತಾರೆ'–ಎಂದು ಅಭಿಪ್ರಾಯಪಟ್ಟಿದ್ದಾರೆ.

ಕೊಂಡು ತಮ್ಮ ಆತ್ಮಕ್ಕೂ ಸಂತಾಪವನ್ನು ತಂದುಕೊಂಡರು. ವಿಶ್ವಾಮಿತ್ರರ ಮಹತ್ತರವಾದ ಶಾಪದ ಕಾರಣದಿಂದಾಗಿ ರಂಭೆಯೂ ಒಡನೆಯೇ ಶಿಲಾ ಪ್ರತಿಮೆಯಾದಳು. ವಿಶ್ವಾಮಿತ್ರರ ಉಗ್ರವಾದ ಶಾಪದ ವಾಕ್ಯವನ್ನು ಕೇಳಿ ಕಂದರ್ಪ-ಇಂದ್ರರಿಬ್ಬರೂ ತಮ್ಮ-ತಮ್ಮ ಲೋಕಗಳಿಗೆ ತೆರಳಿದರು. ಕೋಪ ಗೊಂಡು ಶಾಪವಿತ್ತ ಕಾರಣದಿಂದಾಗಿ ತಪಸ್ಸಿನ ವ್ಯಯವಾಯಿತು. ಇಂದ್ರಿಯಗಳೂ ಹತೋಟಿಗೆ ಬರಲಿಲ್ಲ. ಹೀಗೆ ಮನೋವಾಗಿಂದ್ರಿಯಗಳು ಉದ್ವಿಗ್ನವಾದುದರಿಂದ ವಿಶ್ವಾಮಿತ್ರರ ಆತ್ಮಕ್ಕೆ ಶಾಂತಿಯೆಂಬುದೇ ಸಿಕ್ಕಲಿಲ್ಲ. ಕೋಪದಿಂದ ತಪಸ್ಸಿನ ಅಪಹರಣವಾಗಲಾಗಿ ಕೋಪದ ನಿವಾರಣೆಯನ್ನು ಹೇಗೆ ಮಾಡಬೇಕೆಂಬ ಚಿಂತೆಯು ವಿಶ್ವಾಮಿತ್ರರಿಗುಂಟಾಯಿತು. ವಿಶ್ವಾ ಮಿತ್ರರು ಪ್ರತಿಜ್ಞೆಮಾಡಿದರು. "**ನೈವ ಕ್ರೋಧಂ ಗಮಿಷ್ಯಾಮಿ**–ನಾನು ಇನ್ನು ಮುಂದೆ ಕೋಪಗೊಳ್ಳುವುದೇ ಇಲ್ಲ. **ನ ಚ ವಕ್ಷ್ಯಾಮಿ ಕಿಂಚನ**– ಏನೇ ಆದರೂ ದುಷ್ಟವಾದ ಮಾತನ್ನಾಡುವುದಿಲ್ಲ. ಅನೇಕಶತವರ್ಷಗಳ ವರೆಗೆ ಉಚ್ಛ್ವಾಸ-ನಿಃಶ್ವಾಸಗಳನ್ನು ತಡೆದು ಪ್ರಾಣಾಯಾಮವನ್ನು ಮಾಡುತ್ತೇನೆ. ಜಿತೇಂದ್ರಿಯನಾಗಿದ್ದುಕೊಂಡು ಕಾಮ-ಕ್ರೋಧಾದಿಗಳಿಗೆ ಆಲಯವಾದ ಈ ಶರೀರವನ್ನು ಶೋಷಿಸಿಬಿಡುತ್ತೇನೆ. ಒಂದು ವೇಳೆ ಅನೇಕ ಶತವರ್ಷಗಳು ಕಳೆದನಂತರವೂ ನನಗೆ ಬ್ರಾಹ್ಮಣ್ಯವು ಪ್ರಾಪ್ತವಾಗದಿದ್ದ– ಬ್ರಹ್ಮತ್ವಪ್ರಾಪ್ತಿಯಾಗುವವರೆಗೂ ನಾನು ಉಚ್ಛ್ವಾಸ-ನಿಃಶ್ವಾಸಗಳನ್ನು ನಿರೋಧಿಸಿ, ನಿರಾಹಾರನಾಗಿ, ನಿಂತಲ್ಲಿಯೇ ನಿಂತು ತಪಶ್ಚರಣೆಮಾಡುತ್ತಲೇ ಇರುತ್ತೇನೆ. ನಾನು ತಪಸ್ಸಿನಲ್ಲಿ ನಿರತನಾಗಿರುವಾಗ ನನ್ನ ಅವಯವಗಳು ಖಂಡಿತವಾಗಿಯೂ ಕ್ಷಯಿಸುವುದಿಲ್ಲ."

ರಾಮ! ಈ ರೀತಿಯಾಗಿ ವಿಶ್ವಾಮಿತ್ರರು ಲೋಕದಲ್ಲಿ ಒಂದು ಸಾವಿರ ವರ್ಷಪರ್ಯಂತವಾದ ಅಪ್ರತಿಮವಾದ ಉಗ್ರದೀಕ್ಷಾವಿಧಿಯನ್ನು ಸಂಕಲ್ಪಿಸಿ ದರು."

೬೪ನೆಯ ಸರ್ಗವು ಮುಗಿಯಿತು.

ವಿಶ್ವಾಮಿತ್ರರ ಘೋರತಪಸ್ಸು: ಬ್ರಹ್ಮರ್ಷಿತ್ವಪ್ರಾಪ್ತಿ: ಜನಕನಿಂದ ವಿಶ್ವಾಮಿತ್ರರ ಪ್ರಶಂಸೆ

ಅಥ ಹೈಮವತೀಂ ರಾಮ ದಿಶಂ ತ್ಯಕ್ತ್ವಾ ಮಹಾಮುನಿಃ ।
ಪೂರ್ವಾಂ ದಿಶಮನುಪ್ರಾಪ್ಯ ತಪಸ್ತೇಪೇ ಸುದಾರುಣಮ್ ॥೧॥

"ರಾಘವ! ವಿಶ್ವಾಮಿತ್ರರು ಹಿಮವಂತನ ಉತ್ತರದಿಕ್ಕನ್ನು ಪರಿತ್ಯಜಿಸಿ, ಪೂರ್ವದಿಕ್ಕಿಗೆ ಬಂದು ಅಲ್ಲಿದ್ದ ತಪೋವನವೊಂದರಲ್ಲಿ ತಮ್ಮ ಪ್ರತಿಜ್ಞೆಗೆ ಅನುಸಾರವಾಗಿ ದಾರುಣವಾದ ತಪಸ್ಸನ್ನು ಮಾಡಲು ಉಪಕ್ರಮಿಸಿದರು. ಒಂದು ಸಾವಿರ ವರ್ಷಪರ್ಯಂತವಾದ ಉಗ್ರವಾದ ಮೌನವ್ರತವನ್ನು ಸಂಕಲ್ಪಿಸಿ ಅಪ್ರತಿಮವಾದ, ದುಸ್ಸಾಧ್ಯವಾದ ತಪಸ್ಸನ್ನು ಮಾಡಿ ಮುಗಿಸಿದರು. ಒಂದು ಸಾವಿರ ವರ್ಷಕಾಲವೂ ಕೇವಲ ಕಟ್ಟಿಗೆಯೋಪಾದಿ ಯಲ್ಲಿದ್ದು* ಮೌನವ್ರತವನ್ನು ಸಾಧನೆಮಾಡಿದರು. ಅನೇಕ ವಿಘ್ನಗಳು ಒದಗಿ ಬಂದರೂ ಕ್ರೋಧವು ಅವರ ಮನಸ್ಸನ್ನು ಪ್ರವೇಶಿಸಲು ಸಮರ್ಥವಾಗಲಿಲ್ಲ. 'ಕೋಪಮಾಡಿಕೊಳ್ಳುವುದಿಲ್ಲ; ಮೌನಿಯಾಗಿರುತ್ತೇನೆ'–ಎಂಬ ಎರಡು ಘೋರಪ್ರತಿಜ್ಞೆಗಳನ್ನು ಮಾಡಿ ಒಂದು ಸಾವಿರ ವರ್ಷಗಳ ಅವ್ಯಯವಾದ ಮೌನವ್ರತವನ್ನು ಮಾಡಿದರು. ತಮ್ಮ ಮಹಾವ್ರತವು ಪೂರ್ಣವಾದನಂತರ,

---

* ಇಲ್ಲಿ ಕಾಷ್ಠಭೂತಂ ಎಂಬ ಉಪಮಾನವು ವಿಶ್ವಾಮಿತ್ರರು ಕೋಪವನ್ನು ಜಯಿಸಿದುದನ್ನು ನಿರೂಪಿಸುವುದಾಗಿದೆ. ಅವರು ಕಾಷ್ಠದಂತೆ ನಿಶ್ಚಲರಾಗಿದ್ದರು. ಕಟ್ಟಿಗೆಯನ್ನು ಒಡೆದರೂ, ಚೂರುಮಾಡಿದರೂ, ಸುಟ್ಟರೂ ಅದು ಪ್ರತಿಭಟಿಸುವುದಿಲ್ಲ. ಅದೇ ರೀತಿಯಲ್ಲಿ ವಿಶ್ವಾಮಿತ್ರರೂ ಮೌನವ್ರತಾನುಷ್ಠಾನಮಾಡುತ್ತಿದ್ದ ಕಾಲದಲ್ಲಿ ಅನೇಕ ವಿಧವಾದ ವಿಘ್ನಗಳು ಒದಗಿದುವು. ಅನೇಕ ವಿಧವಾದ ಉಪದ್ರವಗಳನ್ನೂ ಅನುಭವಿಸಬೇಕಾಯಿತು. ಆದರೂ ವಿಶ್ವಾಮಿತ್ರರು ಕಟ್ಟಿಗೆಯಂತೆಯೇ ಶಾಂತರಾ ಗಿದ್ದರು. ಶ್ರೀರಂಗಮಹಾಗುರುಗಳು ಯೋಗಸಮಾಧಿಯನ್ನು ವರ್ಣಿಸುವಾಗ 'ಕಾಷ್ಠವಜ್ಜಾಯತೇ ವಪುಃ' ಶರೀರವು ಕಟ್ಟಿಗೆಯಂತೆ ನಿಶ್ಚಲವಾಗಿರುತ್ತದೆ. ಅದರ ವ್ಯಾಪಾರಗಳೆಲ್ಲವೂ ನಿಂತುಹೋಗುತ್ತವೆ. ಇಂದ್ರಿಯವ್ಯಾಪಾರ, ಶ್ವಾಸಕ್ರಿಯೆ, ರಕ್ತಚಲನೆ–ಮುಂತಾದುವುಗಳೂ ನಿಂತಿರುತ್ತವೆ–ಎಂಬುದನ್ನು ಪ್ರಾಯೋಗಿಕವಾಗಿ ತೋರಿಸುತ್ತಿದ್ದರು.

ವಿಶ್ವಾಮಿತ್ರರು ಪಾರಣೆಯನ್ನು ಮಾಡಲು ಆರಂಭಿಸಿದರು. ಇಂದ್ರನು ಬ್ರಾಹ್ಮಣವೇಷವನ್ನು ಧರಿಸಿ ಬಂದು ವಿಶ್ವಾಮಿತ್ರರು ಊಟಮಾಡುವುದಕ್ಕೆಂದು ಸಿದ್ಧಪಡಿಸಿದ್ದ ಅನ್ನವನ್ನು ಯಾಚಿಸಿದನು. ತಮ್ಮ ಭೋಜನಕ್ಕೆ ಸಿದ್ಧಪಡಿಸಿದ್ದ ಅನ್ನವನ್ನು ಸ್ವಲ್ಪವಾದರೂ ಶಂಕಿಸದೇ ನಿಶ್ಶೇಷವಾಗಿ ಬ್ರಾಹ್ಮಣ ರೂಪಿಯಾದ ಇಂದ್ರನಿಗೆ ಅರ್ಪಿಸಿ, ಮಹಾತಪಸ್ವಿಗಳಾದ ಪೂಜ್ಯರಾದ ವಿಶ್ವಾಮಿತ್ರರು ಊಟಮಾಡದೆಯೇ ಇದ್ದುಬಿಟ್ಟರು. ಯಾವ ನಿಷ್ಠುರವಾದ ಮಾತನ್ನೂ ಆಡದೇ ಆ ಬ್ರಾಹ್ಮಣನನ್ನು ಕಳುಹಿಸಿಕೊಟ್ಟು ಪುನಃ ಮೌನವ್ರತಾನುಷ್ಠಾನವನ್ನು ಮಾಡುತ್ತಾ ಕುಳಿತರು. ಹಿಂದಿನಂತೆಯೇ ಉಚ್ಛ್ವಾಸ-ನಿಃಶ್ವಾಸಗಳನ್ನು ನಿರೋಧಿಸಿದರು. ಉಚ್ಛ್ವಾಸ-ನಿಃಶ್ವಾಸಗಳ ನಿರೋಧಮಾಡಿ ಮೌನವ್ರತದಿಂದ ಪುನಃ ಒಂದು ಸಾವಿರ ವರ್ಷಗಳನ್ನು ಕಳೆ ದರು. ಉಸಿರಾಡದೇ ಪ್ರಾಣಾಯಾಮಮಾಡಿದ್ದ ಅವರ ತಲೆಯಲ್ಲಿ ಹೊಗೆ ಯಿಂದ ಕೂಡಿದ ಅಗ್ನಿಯು ಹುಟ್ಟಿತು. ಜನರಿಗೆ ಆ ಅಗ್ನಿಯಿಂದ ಮೂರು ಲೋಕಗಳೂ ಸುಟ್ಟುಹೋಗುವುವೆಂಬ ಭ್ರಾಂತಿಯುಂಟಾಯಿತು. ಅದನ್ನು ಕಂಡು ದೇವರ್ಷಿ-ಗಂಧರ್ವರೂ, ಪನ್ನಗೋರಗ-ರಾಕ್ಷಸರೂ ಭೀತಿಯಿಂದ ದುಃಖಗೊಂಡು, ಕುಂದಿದ ಮುಖದಿಂದ ಕೂಡಿ ಬ್ರಹ್ಮನ ಬಳಿಗೆ ಹೋಗಿ ಹೇಳಿದರು : "ದೇವದೇವ! ಅತಿಸುಂದರಿಯರಾದ ಅಪ್ಸರೆಯರನ್ನು ಕಳುಹಿಸಿ ವಿಶ್ವಾಮಿತ್ರನ ಮನಸ್ಸನ್ನು ಕಾಮಾಭಿಭೂತವನ್ನಾಗಿ ಮಾಡಿದ್ದಾಯಿತು. ಹಲವಾರು ಕ್ರಿಯೆಗಳಿಂದ ಅವನನ್ನು ಕೋಪಗೊಳಿಸಿ ಅವನು ಗಳಿಸಿದ್ದ ತಪಃ ಫಲವು ವ್ಯಯವಾಗುವಂತೆಯೂ ಮಾಡಿದ್ದಾಯಿತು. ಏನೇ ಮಾಡಿದರೂ ಅವನ ತಪಸ್ಸು ದಿನ-ದಿನಕ್ಕೂ ಅಭಿವೃದ್ಧಿಹೊಂದುತ್ತಲೇ ಇದೆ. ಈಗವನಲ್ಲಿ ಅತ್ಯಲ್ಪವಾದ ದೋಷವೂ ಕಾಣುವುದಿಲ್ಲ. ಈಗಲಾದರೂ ನೀನು ಅವನ ಮನಸ್ಸಂಕಲ್ಪಿತವಾದ ಬ್ರಹ್ಮರ್ಷಿತ್ವವನ್ನು ದಯಪಾಲಿಸದಿದ್ದರೆ ನಿಶ್ಚಯ ವಾಗಿಯೂ ಅವನು ತನ್ನ ತಪಃಪ್ರಭಾವದಿಂದ ಚರಾಚರಯುಕ್ತವಾದ ಈ ಮೂರು ಲೋಕಗಳನ್ನೂ ಸುಟ್ಟುಬಿಡುತ್ತಾನೆ. ಅವನ ತಪಃಪ್ರಭಾವದಿಂದಾಗಿ ನಾಲ್ಕು ದಿಕ್ಕುಗಳೂ ವ್ಯಾಕುಲಗೊಂಡಿವೆ. ಎಲ್ಲವೂ ತೇಜೋಹೀನವಾಗಿವೆ. ಸಮುದ್ರಗಳು ಶೋಷಿಸಿಹೋಗುತ್ತಿವೆ. ಪರ್ವತಗಳು ಸೀಳಿಹೋಗುತ್ತಿವೆ. ಭೂಮಿಯು ನಡುಗುತ್ತಿದೆ. ವಾಯುವು ಅತ್ಯಂತವ್ಯಾಕುಲಗೊಂಡು ಮಂದ

ವಾಗಿ ಬೀಸುತ್ತಿದೆ. ವಿಶ್ವಾಮಿತ್ರನ ಅಪರಿಮಿತವಾದ ತೇಜಸ್ಸಿನಿಂದಾಗಿ ಸೂರ್ಯನೂ ನಿಸ್ತೇಜನಾಗಿದ್ದಾನೆ. ಅತ್ಯಂತಪ್ರಕ್ಷುಬ್ಧವಾದ ಮನಸ್ಸಿನಿಂದ ಕೂಡಿರುವ ಸ್ವರ್ಗ, ಮರ್ತ್ಯ, ಪಾತಾಳಲೋಕವಾಸಿಗಳಾದ ಜನರು ಕರ್ತವ್ಯಾ ಕರ್ತವ್ಯವಿವೇಕಶೂನ್ಯರಾಗಿದ್ದಾರೆ. ಜಗತ್ತಿನಲ್ಲಾಗುವ ಈ ಕ್ಷೋಭೆಯಿಂದಾಗಿ ಕರ್ಮಾನುಷ್ಠಾನಶೂನ್ಯರಾದ ನಾಸ್ತಿಕರಾದ ಜನರು ಹುಟ್ಟುತ್ತಾರೆ. ಇದರ ಪ್ರತಿಕ್ರಿಯೆಯು ಇನ್ನೂ ಏನಾಗಬಹುದೆಂಬುದನ್ನು ತಿಳಿಯದವರಾಗಿದ್ದೇವೆ. ಪಿತಾಮಹ! ಮಹಾಮುನಿಯಾದ, ಮಹಾದ್ಯುತಿಯಾದ ವಿಶ್ವಾಮಿತ್ರನು ಸಂಕಲ್ಪಿಸಿದ ಫಲವನ್ನು ಪಡೆಯದೇ ನಿರಾಶೆಯಿಂದ ಉದ್ವಿಗ್ನನಾಗಿ ಬ್ರಹ್ಮಾಂಡ ವನ್ನೇ ವಿನಾಶಮಾಡುವ ಮೊದಲೇ ಅವನನ್ನು ಸಂತೈಸಿ ಪ್ರಸನ್ನನಾಗುವಂತೆ ಮಾಡುವುದು ಯುಕ್ತವಾಗಿದೆ. ಹಿಂದೆ ಪ್ರಳಯಕಾಲದಲ್ಲಿ ಕಾಲಾಗ್ನಿಯಿಂದ ಹೇಗೆ ಮೂರು ಲೋಕಗಳೂ ಸುಟ್ಟುಹೋದುವೋ–ಅದೇ ರೀತಿಯಲ್ಲಿ ಇಂದು ವಿಶ್ವಾಮಿತ್ರನೂ ತನ್ನ ತಪಃಪ್ರಭಾವದಿಂದ ಈ ಮೂರು ಲೋಕ ಗಳನ್ನೂ ಭಸ್ಮಮಾಡಿಬಿಡಬಹುದು. ಅಥವಾ ಕುಪಿತನಾದನೆಂದರೆ ದೇವರಾಜ್ಯವನ್ನಾದರೂ ಆಶಿಸಬಹುದು. ಆದುದರಿಂದ ಮಹಾತೇಜಸ್ವಿಯಾದ ವಿಶ್ವಾಮಿತ್ರನ ಮನಸ್ಸಂಕಲ್ಪಿತವಾದ ಬ್ರಹ್ಮರ್ಷಿತ್ವವನ್ನು ಅವನಿಗೆ ಈ ಕೂಡಲೇ ಅನುಗ್ರಹಿಸುವುದು ಸೂಕ್ತವಾಗಿದೆ." ದೇವರ್ಷಿಗಳು ಹೇಳಿದ ಮಾತಿಗೆ ಬ್ರಹ್ಮನು ಒಪ್ಪಿದನು. ದೇವತೆಗಳನ್ನು ಕರೆದುಕೊಂಡು ವಿಶ್ವಾಮಿತ್ರನು ತಪಸ್ಸು ಮಾಡುತ್ತಿದ್ದ ಆಶ್ರಮಭೂಮಿಗೆ ಬಂದು ಸುಮಧುರವಾದ ಈ ಮಾತು ಗಳನ್ನಾಡಿದನು :

"ಬ್ರಹ್ಮರ್ಷೇ! ನಿನಗೆ ಸ್ವಾಗತವು. ನೀನು ಮಾಡಿರುವ ತಪಸ್ಸಿನಿಂದ ಸಂತುಷ್ಟರಾಗಿದ್ದೇವೆ. ಉಗ್ರವಾದ ತಪಸ್ಸಿನಿಂದ ನೀನು ಬ್ರಾಹ್ಮಣ್ಯವನ್ನು ಪಡೆದಿರುವೆ. ದೇವತೆಗಳೊಡನೆ ಆಗಮಿಸಿರುವ ನಾನು ನಿನಗೆ ದೀರ್ಘಾ ಯುಷ್ಯವನ್ನೂ ಕೊಡುತ್ತೇನೆ. ನಿನ್ನ ಮನಸ್ಸಂಕಲ್ಪಿತವಾದ ಫಲವನ್ನು ಪಡೆ ಯುವೆ. ಸೌಮ್ಯನೇ! ನಿನಗೆ ಮಂಗಳವಾಗಲಿ. ನೀನಿನ್ನು ಸುಖವಾಗಿ ಸ್ವಸ್ಥಾನಕ್ಕೆ ಹೋಗು."

ರಾಮ! ಬ್ರಹ್ಮನ ಮಾತುಗಳನ್ನು ಕೇಳಿ ಮಹಾಮುನಿಗಳಾದ

ವಿಶ್ವಾಮಿತ್ರರು ಬ್ರಹ್ಮಪುರಸ್ಸರರಾದ ಸರ್ವದೇವತೆಗಳಿಗೂ ಸಾಷ್ಟಾಂಗ ನಮಸ್ಕಾರಮಾಡಿ ಸಂತೋಷದಿಂದ ಹೇಳಿದರು :

"ಬ್ರಹ್ಮದೇವ! ನಿಶ್ಚಯವಾಗಿಯೂ ಬ್ರಾಹ್ಮಣ್ಯವು ನನಗೆ ಲಭಿಸಿರುವುದೇ ಆದರೆ–ದೀರ್ಘಾಯುಷ್ಯವು ನನಗೆ ಪ್ರಾಪ್ತವಾಗಿರುವುದೇ ಆದರೆ–ಬ್ರಹ್ಮಜ್ಞಾನಸಾಧನಭೂತವಾದ 'ಓಂ' ಕಾರವೂ, ಯಜ್ಞಸಾಧನಭೂತವಾದ 'ವಷಟ್ ' ಕಾರವೂ ಮತ್ತು ಅಂಗೋಪಾಂಗಸಮೇತವಾದ ವೇದಗಳೂ ನನ್ನಲ್ಲಿ ಮೂರ್ತಿಮತ್ತಾಗಿ ನೆಲೆಸಲಿ. ದೇವತೆಗಳೇ! ಧನುರ್ವೇದವನ್ನು ತಿಳಿದವರಲ್ಲಿಯೂ, ಬ್ರಹ್ಮಜ್ಞಾನಿಗಳಲ್ಲಿಯೂ, ವೇದ-ವೇದಾಂಗಪಾರಂಗತ ರಲ್ಲಿಯೂ ಪರಮಶ್ರೇಷ್ಠರಾದ ಬ್ರಹ್ಮಪುತ್ರರಾದ ವಸಿಷ್ಠರೂ ನೀವು ಹೇಳಿ ದಂತೆಯೇ ಹೇಳಲಿ. ನಾನು ಬ್ರಹ್ಮರ್ಷಿಯೆಂಬುದನ್ನು ವಸಿಷ್ಠರೂ ಒಪ್ಪಿ ಕೊಳ್ಳಲಿ. ಈ ನನ್ನ ಉತ್ಕೃಷ್ಟವಾದ ಮನಃಕಾಮನೆಯು ನಿಮ್ಮಿಂದ ಪೂರೈಸಲ್ಪಟ್ಟಿದ್ದೇ ಆದರೆ ನಾನು ನಿಶ್ಚಯವಾಗಿಯೂ ಕೃತಾರ್ಥನಾಗುವೆನು. ನೀವು ಈ ಕಾರ್ಯಮಾಡಿದನಂತರ ನಿಮ್ಮ ಲೋಕಗಳಿಗೆ ತೆರಳಬಹುದು."

ವಿಶ್ವಾಮಿತ್ರರ ಪ್ರಾರ್ಥನೆಯನ್ನು ನಡೆಸಿಕೊಡುವ ಸಲುವಾಗಿ ದೇವತೆ ಗಳು ವಸಿಷ್ಠರ ಬಳಿಗೆ ಹೋಗಿ ಪ್ರಾರ್ಥಿಸಿದರು. ದೇವತೆಗಳ ಪ್ರಾರ್ಥನೆ ಯಿಂದ ಪ್ರಸನ್ನರಾದ, ಜಪಮಾಡುವವರಲ್ಲಿ ಶ್ರೇಷ್ಠರಾದ ವಸಿಷ್ಠರು ವಿಶ್ವಾ ಮಿತ್ರರ ಬಳಿಗೆ ಬಂದು ಅವರೊಡನೆ ಸಖ್ಯಮಾಡಿಕೊಂಡು ದೇವತೆಗಳು ಹೇಳಿದಂತೆ ವಿಶ್ವಾಮಿತ್ರರನ್ನು 'ಬ್ರಹ್ಮರ್ಷಿ'ಯೆಂದು ತಾವೂ ಹೇಳಿದರು.

ಬ್ರಹ್ಮರ್ಷಿಸ್ತ್ವಂ ನ ಸಂದೇಹಃ ಸರ್ವಃ ಸಂಪತ್ಸ್ಯತೇ ತವ ।
ಇತ್ಯುಕ್ತ್ವಾ ದೇವತಾಶ್ಚಾಪಿ ಸರ್ವಾ ಜಗ್ಮುರ್ಯಥಾಗತಮ್ ॥೨೪॥

"ವಿಶ್ವಾಮಿತ್ರ! ನೀನು ಬ್ರಹ್ಮರ್ಷಿಯಾಗಿರುವೆ. ಇದರಲ್ಲಿ ಸಂಶಯ ಲೇಶವೂ ಇಲ್ಲ. ಬ್ರಹ್ಮರ್ಷಿಗಳಲ್ಲಿ ಇರುವ ಓಂಕಾರ-ವಷಟ್ಕಾರಗಳೂ, ವೇದ-ವೇದಾಂಗಗಳೂ ನಿನ್ನಲ್ಲಿ ಮೂರ್ತಿಮತ್ತಾಗಿ ನಿಲ್ಲುತ್ತವೆ." ಹೀಗೆ ಹೇಳಿದ ವಸಿಷ್ಠರ ಮಾತುಗಳನ್ನೇ ದೇವತೆಗಳೂ ಅನುಮೋದಿಸಿ, ವಿಶ್ವಾಮಿತ್ರರ ಅನುಮತಿಯನ್ನು ಪಡೆದು ತಮ್ಮ-ತಮ್ಮ ಸ್ಥಾನಗಳಿಗೆ ತೆರಳಿದರು.

ರಾಘವ! ಈ ರೀತಿಯಾಗಿ ಧರ್ಮಾತ್ಮರಾದ ವಿಶ್ವಾಮಿತ್ರರು ಅತಿ

ಪ್ರಯಾಸದಿಂದ ಉತ್ತಮೋತ್ತಮವಾದ ಬ್ರಾಹ್ಮಣ್ಯವನ್ನು ಪಡೆದು ಜಪ ಮಾಡುವವರಲ್ಲಿ ಶ್ರೇಷ್ಠರಾದ, ಬ್ರಹ್ಮರ್ಷಿಗಳಾದ ವಸಿಷ್ಠರನ್ನು ಯಥಾ ಯೋಗ್ಯವಾಗಿ ಸತ್ಕರಿಸಿದರು.

ಬಳಿಕ ಕೃತಕೃತ್ಯರಾದ ವಿಶ್ವಾಮಿತ್ರರು ತಪಶ್ಚರಣೆಮಾಡುತ್ತಾ ಭೂಮಿಯ ಎಲ್ಲ ಕಡೆಗಳಲ್ಲಿಯೂ ಸಂಚರಿಸಿದರು. ಮಹಾತ್ಮರಾದ ವಿಶ್ವಾಮಿತ್ರರು ಹೀಗೆ ಬ್ರಾಹ್ಮಣ್ಯವನ್ನು ಪಡೆದರು. ಮುನಿಶ್ರೇಷ್ಠರಾದ ಇವರು ತಪೋಮೂರ್ತಿಯಾಗಿದ್ದಾರೆ. ಯಾವಾಗಲೂ ಧರ್ಮಪರರೂ ಪರಾಕ್ರಮಕ್ಕೆ ಆಶ್ರಯಭೂತರೂ ಆಗಿದ್ದಾರೆ.”

ಹೀಗೆ ವಿಶ್ವಾಮಿತ್ರರ ಕಥಾಪ್ರವಚನವನ್ನು ಮಾಡಿದನಂತರ, ಮಹಾ ತೇಜಸ್ವಿಗಳಾದ, ವಿಪ್ರೋತ್ತಮರಾದ ಶತಾನಂದರು ವಿರಮಿಸಿದರು. ಶತಾ ನಂದರು ರಾಮ-ಲಕ್ಷ್ಮಣರಿಗೆ ಹೇಳಿದ ವಿಶ್ವಾಮಿತ್ರಕಥಾಪ್ರವಚನವನ್ನು ಕೇಳಿ ಜನಕಮಹಾರಾಜನು ಬದ್ಧಾಂಜಲಿಯಾಗಿ ಕುಶಿಕಸುತರಾದ ವಿಶ್ವಾಮಿತ್ರರಿಗೆ ಹೇಳಿದನು :

“ಮುನಿಪುಂಗವರೇ! ಕಕುತ್ಸ್ಥಕುಲಾವತಂಸರಾದ ರಾಮ-ಲಕ್ಷ್ಮಣ ರೊಡನೆ, ನೀವು ನನ್ನ ಯಾಗಕ್ಕೆ ದಯಮಾಡಿಸಿರುವಿರಿ. ನಾನು ನಿಶ್ಚಯ ವಾಗಿಯೂ ಧನ್ಯನೂ ಮತ್ತು ನಿಮ್ಮಿಂದ ಅನುಗೃಹೀತನೂ ಆಗಿರುವೆನು. ನಿಮ್ಮ ದಿವ್ಯದರ್ಶನದಿಂದಾಗಿ ನಾನು ಪವಿತ್ರನಾದೆನು. ಮಹರ್ಷಿಗಳೇ! ನಿಮ್ಮ ದರ್ಶನಮಾತ್ರದಿಂದಲೇ ಅನೇಕವಿಧವಾದ ಗುಣಗಳನ್ನು ಪಡೆದುಕೊಂಡೆನು. ಸದಸ್ಯರಿಂದಲೂ ಮತ್ತು ಮಹಾತ್ಮನಾದ ರಾಮನಿಂದಲೂ ಕೂಡಿರುವ ಈ ಸಭೆಯಲ್ಲಿ ಶತಾನಂದರು ಹೇಳಿದ ನಿಮ್ಮ ಅಗಣಿತಗುಣಕೀರ್ತನವನ್ನು ಕೇಳಿದೆನು. ನಿಮ್ಮ ತಪಸ್ಸು, ಬಲ, ಗುಣಗಳು–ಇವುಗಳೆಲ್ಲವೂ ಅಪ್ರಮೇಯ ವಾದುವು. ಇವುಗಳ ಪರಿಮಿತಿ ಎಷ್ಟೆಂಬುದನ್ನು ಅಳೆಯುವ ಸಾಧ್ಯತೆಯೇ ಇಲ್ಲ. ತಪಸ್ಸು, ಬಲ ಮತ್ತು ಗುಣಗಳು ನಿಮ್ಮಲ್ಲಿ ನಿತ್ಯವಾಗಿವೆ. ಅತ್ಯಾಶ್ಚರ್ಯಕರವಾದ ನಿಮ್ಮ ಅದ್ಭುತಚರಿತ್ರೆಗಳನ್ನು ಎಷ್ಟು ಬಾರಿ ಕೇಳಿದರೂ ತೃಪ್ತಿಯೇ ಆಗುವುದಿಲ್ಲ. ಇನ್ನೂ ಕೇಳಬೇಕೆನಿಸುತ್ತದೆ. ಸೂರ್ಯ ಮಂಡಲವೂ ಅಸ್ತವಾಗುತ್ತಲಿದೆ. ಸಂಧ್ಯಾಕರ್ಮಕಾಲವು ಪ್ರಾಪ್ತವಾಗಿದೆ. ನಾಳೆ

ಬೆಳಿಗ್ಗೆ ಪುನಃ ನೀವು ನನ್ನನ್ನು ಕಾಣಬಹುದಾಗಿದೆ. ನಿಮ್ಮ ಆಗಮನವು ನಿಶ್ಚಯವಾಗಿಯೂ ಅತಿಮಂಗಳದಾಯಕವಾಗಿದೆ. ಜಪ-ತಪೋನುಷ್ಠಾತೃಗಳಲ್ಲಿ ಶ್ರೇಷ್ಠರಾದ ವಿಶ್ವಾಮಿತ್ರರೇ! ಹೋಗಿಬರಲು ಅನುಮತಿಸಿರಿ."

ಬಳಿಕ ವಿಶ್ವಾಮಿತ್ರರು ಪ್ರೀತನಾದ ಜನಕನನ್ನು ಯಥೋಚಿತವಾಗಿ ಪ್ರಶಂಸೆಮಾಡಿ ಪ್ರಸನ್ನಾತ್ಮರಾಗಿ ಜನಕನಿಗೆ ಹೋಗಿಬರಲು ಅನುಜ್ಞೆಯಿತ್ತರು. ಮಿಥಿಲಾಧಿಪತಿಯಾದ ಜನಕನೂ ಮನೆಗೆ ಹೋಗುವ ಮೊದಲು ಉಪಾಧ್ಯಾಯರ ಮತ್ತು ಬಂಧುಗಳ ಸಮೇತನಾಗಿ ವಿಶ್ವಾಮಿತ್ರರಿಗೆ ಪ್ರದಕ್ಷಿಣೆ-ನಮಸ್ಕಾರ ಮಾಡಿದನು. ಧರ್ಮಾತ್ಮರಾದ ವಿಶ್ವಾಮಿತ್ರರೂ ಮಹರ್ಷಿಗಳಿಂದ ಪ್ರಶಂಸಿಸಲ್ಪಟ್ಟವರಾಗಿ ರಾಮ-ಲಕ್ಷ್ಮಣರೊಡನೆ ತಮ್ಮ ಬಿಡಾರಕ್ಕೆ ಹೊರಟರು.

ಅರುವತ್ತಾರನೆಯ ಸರ್ಗವು ಮುಗಿಯಿತು.

ಬಾಲಕಾಂಡ ೬೬ನೆಯ ಸರ್ಗ

ಜನಕರಾಜನು ವಿಶ್ವಾಮಿತ್ರರನ್ನೂ ರಾಮ-ಲಕ್ಷ್ಮಣರನ್ನೂ ಸತ್ಕರಿಸಿ, ಅವರಿಗೆ ತನ್ನ ಅರಮನೆಯಲ್ಲಿದ್ದ ಧನುಸ್ಸಿನ ಇತಿಹಾಸವನ್ನೂ ಸೀತಾಪ್ರಾಪ್ತಿಯ ವಿಷಯವನ್ನೂ ತಿಳಿಸಿ, ರಾಮನು ಧನುಸ್ಸಿನ ಶಿಂಜಿನಿಯನ್ನು ಸೆಳೆದುಕಟ್ಟಿದರೆ ಸೀತೆಯನ್ನು ಕೊಟ್ಟು ವಿವಾಹಮಾಡುವುದಾಗಿ ಹೇಳಿದುದು

ತತಃ ಪ್ರಭಾತೇ ವಿಮಲೇ ಕೃತಕರ್ಮಾ ನರಾಧಿಪಃ ।
ವಿಶ್ವಾಮಿತ್ರಂ ಮಹಾತ್ಮಾನಮಾಜುಹಾವ ಸರಾಘವಮ್ ॥೧॥

ರಾತ್ರಿಯು ಕಳೆದು ನಿರ್ಮಲವಾದ ಸುಪ್ರಭಾತವಾಗಲು ಜನಕರಾಜನು ಪ್ರಾತಃಸಂಧ್ಯಾವಂದನಾದಿಗಳನ್ನು ಮುಗಿಸಿ, ಮಹಾತ್ಮರಾದ ವಿಶ್ವಾಮಿತ್ರರಿಗೆ ರಾಮ-ಲಕ್ಷ್ಮಣರ ಸಮೇತರಾಗಿ ಅರಮನೆಗೆ ಆಗಮಿಸುವಂತೆ ಆಹ್ವಾನವನ್ನು ಕಳುಹಿಸಿಕೊಟ್ಟನು. ಜನಕರಾಜನ ಆಹ್ವಾನವನ್ನು ಸ್ವೀಕರಿಸಿ ರಾಮ-ಲಕ್ಷ್ಮಣರೊಡಗೂಡಿ ಅರಮನೆಗೆ ಬಂದ ವಿಶ್ವಾಮಿತ್ರರನ್ನು ಮಹಾರಾಜನಾದ ಜನಕನು ಪರಿವಾರದೊಡನೆ ಆದರದಿಂದ ಸ್ವಾಗತಿಸಿ, ವಿಧ್ಯುಕ್ತವಾದ ರೀತಿ

ಯಲ್ಲಿ ಮೊದಲು ವಿಶ್ವಾಮಿತ್ರರನ್ನೂ ಅನಂತರ ರಾಮ-ಲಕ್ಷ್ಮಣರನ್ನೂ ಸತ್ಕರಿಸಿ ಹೇಳಿದನು :

"ಪೂಜ್ಯರೇ! ನಿಮಗೆ ಸ್ವಾಗತವನ್ನು ಬಯಸುತ್ತೇನೆ. ನಾನು ನಿಮಗಾಗಿ ಯಾವ ಕಾರ್ಯಮಾಡಬೇಕೆಂಬುದನ್ನು ದಯೆಯಿಟ್ಟು ಆಜ್ಞಾಪಿಸಿರಿ. ನಾನು ತಮ್ಮ ಆಜ್ಞಾನಿರ್ವಹಣೆಗೆ ಸಿದ್ಧನಾಗಿದ್ದೇನೆ." ಮಹಾತ್ಮನಾದ ಜನಕನ ಕೋರಿಕೆಗೆ ವಾಕ್ಯವಿಶಾರದರಾದ, ಮುನಿಶ್ರೇಷ್ಠರಾದ ವಿಶ್ವಾಮಿತ್ರರು ಹೇಳಿದರು :

"ಜನಕರಾಜ! ಈ ಇಬ್ಬರು ಕುಮಾರರೂ ಕ್ಷತ್ರಿಯರು. ದಶರಥನ ಮಕ್ಕಳು. ತಮ್ಮ ಭುಜಬಲ-ಪರಾಕ್ರಮಗಳಿಂದ ಲೋಕಪ್ರಸಿದ್ಧರಾಗಿದ್ದಾರೆ. ನಿನ್ನಲ್ಲಿರುವ ಶ್ರೇಷ್ಠವಾದ ಧನುಸ್ಸನ್ನು ಇವರಿಗೆ ತೋರಿಸು. ಅದರ ದರ್ಶನದಿಂದ ಈ ರಾಜಕುಮಾರರ ಇಚ್ಛೆಯು ಪೂರ್ಣವಾದಂತಾಗುತ್ತದೆ. ಅನಂತರ ಇವರು ತಮ್ಮ ಇಚ್ಛೆಯಿದ್ದೆಡೆಗೆ ಪ್ರಯಾಣಮಾಡುತ್ತಾರೆ."

ವಿಶ್ವಾಮಿತ್ರರ ಈ ಮಾತನ್ನು ಕೇಳಿ ಜನಕನು ಹೇಳಿದನು :

"ಮಹರ್ಷಿಗಳೇ! ಈ ಧನುಸ್ಸಿನ ಇತಿಹಾಸವನ್ನೂ ಮತ್ತು ಈ ಧನುಸ್ಸು ಇಲ್ಲಿರುವ ಕಾರಣವನ್ನೂ ವಿವರಿಸಿ ಹೇಳುವೆನು, ಕೇಳಿರಿ.

ನಿಮಿಚಕ್ರವರ್ತಿಯಿಂದ ಆರನೆಯವನಾದ ದೇವರಾತನೆಂದು ಪ್ರಸಿದ್ಧನಾದ ರಾಜನಿದ್ದನು. ಮಹಾತ್ಮನಾದ ದೇವರಾತನ ಕೈಯಲ್ಲಿ ದೇವತೆಗಳಿಂದ ನಿಕ್ಷೇಪರೂಪವಾಗಿ ಈ ಧನುಸ್ಸು ಇಡಲ್ಪಟ್ಟಿತು.

ಹಿಂದೆ ದಕ್ಷಯಾಗದ ಧ್ವಂಸಕಾಲದಲ್ಲಿ ಮಹಾಪರಾಕ್ರಮಿಯಾದ ರುದ್ರನು ಈ ಧನುಸ್ಸನ್ನು ಲೀಲೆಯಿಂದ (ಸ್ವಲ್ಪವೂ ಶ್ರಮವಿಲ್ಲದೇ) ಬಗ್ಗಿಸಿ ಹಿಡಿದು, ರೋಷಾವಿಷ್ಟನಾಗಿ ದೇವತೆಗಳಿಗೆ ಹೇಳಿದನು : "ಯಾವ ಕಾರಣದಿಂದ ನೀವು ಯಜ್ಞದಲ್ಲಿ ನನ್ನ ಹವಿರ್ಭಾಗವನ್ನು ನನಗೆ ಸಿದ್ಧಮಾಡಿಕೊಡಲಿಲ್ಲವೋ–ಅದೇ ಕಾರಣದಿಂದಾಗಿ ಪೂಜನೀಯವಾದ ನಿಮ್ಮ ಶಿರಸ್ಸುಗಳನ್ನು ಈ ಧನುಸ್ಸಿನಿಂದ ಭೇದಿಸಿಬಿಡುತ್ತೇನೆ." ಹೀಗೆ ಹೇಳುತ್ತಾ ರುದ್ರನು ರೌದ್ರಾವೇಶದಿಂದ ನಿಂತೊಡನೆಯೇ ದೇವತೆಗಳು ಭೀತರಾದರು. ದೀನರಾದ

ದೇವತೆಗಳು ಶಿವನನ್ನು ನಾನಾವಿಧವಾದ ಸ್ತೋತ್ರಗಳಿಂದ ಪ್ರಸನ್ನನನ್ನಾಗಿ ಮಾಡಿದರು. ಅದರಿಂದ ರುದ್ರನು ಪ್ರಸನ್ನನಾಗಿ ದೇವತೆಗಳ ವಿಷಯದಲ್ಲಿ ಪರಮಪ್ರೀತನಾಗಿ, ಈ ಮಹಾಧನುಸ್ಸನ್ನು ಮಹಾತ್ಮರಾದ ಅವರಿಗೇ ಕೊಟ್ಟು ಬಿಟ್ಟನು. ಧನುಸ್ಸುಗಳಲ್ಲಿಯೇ ರತ್ನಪ್ರಾಯವಾದ ಈ ಧನುಸ್ಸನ್ನು ದೇವತೆಗಳು ನಮ್ಮ ಪೂರ್ವಜನಾದ ದೇವರಾತನಲ್ಲಿ ನಿಕ್ಷೇಪರೂಪವಾಗಿ ಇಟ್ಟರು.

ಪೂಜ್ಯರೇ! ಒಮ್ಮೆ ನಾನು ಚಯನಾರ್ಥನಾಗಿ ಭೂಮಿಯನ್ನು ಶೋಧಿಸುವ ಸಲುವಾಗಿ ನೇಗಿಲಿನಿಂದ ಭೂಮಿಯನ್ನು ಉಳುತ್ತಿದ್ದಾಗ–ನೇಗಿಲಿನ ಗುಳಕ್ಕೆ ಸಿಕ್ಕಿ ಒಂದು ಹೆಣ್ಣುಮಗುವು ಹೊರಬಂದಿತು.* ಅವಳಿಗೆ ಸೀತೆಯೆಂದು ನಾಮಕರಣಮಾಡಿ ನನ್ನ ಮಗಳೆಂದೇ ಭಾವಿಸಿ ಸಾಕಿದೆನು. ಅಯೋನಿಜೆಯಾದ ಇವಳಿಗೆ ವೀರ್ಯಶುಲ್ಕದ ಮೂಲಕವಾಗಿ ವಿವಾಹಮಾಡಬೇಕೆಂದಿರುವೆನು. (ಶಿವಧನುಸ್ಸನ್ನು ಮೇಲೆತ್ತಿ ಹೆದೆಯೇರಿಸಿ ಯಾರು ಅತುಲವಾದ ಪರಾಕ್ರಮತೋರುವರೋ ಅವರಿಗೆ ಮಾತ್ರವೇ ಇವಳನ್ನು ಕೊಟ್ಟು ಮದುವೆಮಾಡಬೇಕೆಂದಿರುವೆನು.)[1] ಮುನಿಪುಂಗವರೇ! ಭೂಮಿಯಲ್ಲಿ ಉತ್ಪನ್ನಳಾಗಿ, ಪ್ರವರ್ಧಮಾನಳಾಗುತ್ತಿರುವ, ನನ್ನ ಮಗಳಾದ ಸೀತೆಯನ್ನು ಮದುವೆಮಾಡಿಕೊಳ್ಳುವ ಸಲುವಾಗಿ ಅನೇಕ ರಾಜರು ನನ್ನ ಬಳಿಗೆ ಬಂದು ಪ್ರಸ್ತಾಪಿಸಿದರು. ಅವರೆಲ್ಲರಿಗೂ ನಾನು–ಈ ಸೀತೆಯು ವೀರ್ಯಶುಲ್ಕಳೆಂದೂ, ಅತುಲಪರಾಕ್ರಮವಿರುವವನಿಗೆ ಮಾತ್ರವೇ ನಾನಿವಳನ್ನು ಮದುವೆ

---

* 'ಷಡ್ಗವೇನ ಕೃಷತಿ' 'ಲಾಙ್ಗಲಂ ಪವೀರವಮ್' 'ಇತಿ ದ್ವಾಭ್ಯಾಮೃಷಭೇಣ ಕೃಷತಿ' 'ದ್ವಾಭ್ಯಾಂ ಕೃಷತಿ' ಇತ್ಯಾದಿ ಶ್ರುತ್ಯುಕ್ತಿಗಳು ಚಯನಮಾಡುವ ಮೊದಲು ಕ್ಷೇತ್ರವನ್ನು ಶೋಧಿಸುವ ಸಲುವಾಗಿ ಹೇಳಲ್ಪಟ್ಟಿವೆ. ನೇಗಿಲಿನಲ್ಲಿರುವ ಗುಳದಿಂದ ಆಗುವ ಸಾಲಿಗೆ (ದಾರಿಗೆ) ಸಂಸ್ಕೃತದಲ್ಲಿ ಸೀತಾ ಎಂಬ ಹೆಸರಿದೆ. ಸೀತಾ ಲಾಙ್ಗಲಪದ್ಧತಿಃ [ಅಮರಃ] ಸೀತಾಯಾಂ ಜಾತತ್ವಾತ್ ಸೀತಾ–ಸೀತೆಯಲ್ಲಿ ಹುಟ್ಟಿದವಳು ಸೀತೆ.

[1] ಸೀತೆಯು ಹೇಗೆ ಹುಟ್ಟಿದಳು ಮತ್ತು ಹೇಗೆ ವೃದ್ಧಿಹೊಂದಿದಳೆಂಬ ವಿಷಯವಾಗಿ ಪದ್ಮಪುರಾಣದಲ್ಲಿ ಹೀಗೆ ಹೇಳಿದೆ : ಅಥ ಲೋಕೇಶ್ವರೀ ಲಕ್ಷ್ಮೀರ್ಜನಕಸ್ಯ ಪುರೇ ಸ್ವತಃ। ಶುಭಕ್ಷೇತ್ರೇ ಹಲೋತ್ಖಾತೇ ತಾರೇ ಚೋತ್ತರಫಾಲ್ಗುನೇ ॥ ಅಯೋನಿಜಾ ಪದ್ಮಕರಾ ಬಾಲಾರ್ಕಶತಸನ್ನಿಭಾ। ಸೀತಾಮುಖೇ ಸಮುತ್ಪನ್ನಾ ಬಾಲಭಾವೇನ

ಮಾಡಿಕೊಡುವೆನೆಂದೂ ಸ್ಪಷ್ಟವಾಗಿ ಹೇಳಿದೆನು. ಅನಂತರ ಎಲ್ಲ ರಾಜರುಗಳೂ ಒಟ್ಟಾಗಿ ಮಿಥಿಲಾಪಟ್ಟಣಕ್ಕೆ ಬಂದು, ವೀರ್ಯಶುಲ್ಕದ ವಿಷಯವಾಗಿ ಜಿಜ್ಞಾಸೆಮಾಡತೊಡಗಿದರು. ಹಾಗೆ ಜಿಜ್ಞಾಸೆ ನಡೆಸುತ್ತಿರುವಾಗ–ನಾನು ಶೈವಧನುಸ್ಸನ್ನು ತರಿಸಿಟ್ಟೆನು. ಅದನ್ನೆತ್ತಿ, ಶಿಂಜಿನಿಯನ್ನು ಸೆಳೆದು ಹೆದೆಯೇರಿಸಿ, ಬಾಣವನ್ನು ಧನುಸ್ಸಿಗೆ ಸಂಯೋಜಿಸುವುದೇ ಶುಲ್ಕವೆಂದು ನಿಶ್ಚಯಿಸಲಾಯಿತು. ವೀರ್ಯಶುಲ್ಕವನ್ನು ಕೊಡಲು ಯತ್ನಿಸಿದ ರಾಜಕುಮಾರರು ಈ ಶೈವಧನುಸ್ಸನ್ನು ಹಿಡಿದುಕೊಳ್ಳುವುದಕ್ಕಾಗಲೀ, ಮೇಲೆತ್ತುವುದಕ್ಕಾಗಲೀ, ಅಲುಗಾಡಿಸುವುದಕ್ಕಾಗಲೀ ಸಮರ್ಥರಾಗಲಿಲ್ಲ. ಆಗ ನಾನು ಆ ಪರಾಕ್ರಮಿಗಳನ್ನು ಅಲ್ಪಪರಾಕ್ರಮಿಗಳೆಂದು ನಿಶ್ಚಯಿಸಿ, ಸೀತೆಯನ್ನು ಕೊಟ್ಟು ಮದುವೆ ಮಾಡುವ ಸಾಧ್ಯತೆಯಿಲ್ಲವೆಂದು ಅವರಿಗೆ ಹೇಳಿ ಕಳುಹಿಸಿದೆನು. ಆದರೆ ವಿಷಯವು ಅಲ್ಲಿಗೇ ಮುಗಿಯಲಿಲ್ಲ. ಮುಂದಾದುದನ್ನೂ ಹೇಳುವೆನು, ಕೇಳಿರಿ. ಆ ಅಲ್ಪಬಲದವರಿಗೆ ನಾನು ಸೀತೆಯನ್ನು ಕೊಟ್ಟು ಮದುವೆ ಮಾಡುವ ಸಾಧ್ಯತೆಯಿಲ್ಲವೆಂದು ಹೇಳಿಕಳುಹಿಸಿದ್ದಕ್ಕಾಗಿ, ಅವರಿಗೆ ಅತ್ಯುಗ್ರವಾದ ಕೋಪವೇ ಬಂದಿತು. "ನಮಗಿಂತಲೂ ಪರಾಕ್ರಮಿಗಳಾರಿದ್ದಾರೆ? ಜನಕನು ವೀರ್ಯಶುಲ್ಕದಿಂದಲೇ ಸೀತೆಯನ್ನು ಮದುವೆಮಾಡಲು ಸಾಧ್ಯವೇ? ನಮ್ಮಲ್ಲಿ ಪರಾಕ್ರಮವೇ ಇಲ್ಲವೇ? ನಮ್ಮ ಪರಾಕ್ರಮವನ್ನು ಜನಕನಿಗೆ ತೋರಿಸಲೇಬೇಕು." ಹೀಗೆ ನಿಶ್ಚಯಿಸಿದವರಾಗಿ ತಿರಸ್ಕೃತರಾದ ರಾಜರೆಲ್ಲರೂ ಮಿಥಿಲಾಪಟ್ಟಣವನ್ನು ಮುತ್ತಿದರು. ಮುನಿಪುಂಗವರೇ! ತಮ್ಮನ್ನು ಅವಮಾನಗೊಳಿಸುವ ಸಲುವಾಗಿಯೇ ನಾನು ಕನ್ಯಾಶುಲ್ಕರೂಪ ವಾದ ಈ ಧನುಸ್ಸನ್ನು ಸಿದ್ಧಪಡಿಸಿರುವೆನೆಂದೂ, ಇದರಿಂದ ತಮಗೆ ಅವಮಾನವಾಯಿತೆಂದೂ ಭಾವಿಸಿ, ರೋಷಾವೇಶದಿಂದ ಮಿಥಿಲಾಪಟ್ಟಣವನ್ನು

ಸುನ್ದರೀ । ಸೀತಾಮುಖೋದ್ಭವಾತ್ಸೀತಾ ಇತ್ಯಸ್ಯೈ ನಾಮ ಚಾಕರೋತ್ ॥ ಸರ್ವಲೋಕೇಶ್ವರಿಯಾದ ಮಹಾಲಕ್ಷ್ಮಿಯು ತಾನಾಗಿಯೇ ಜನಕರಾಜನ ಪಟ್ಟಣದಲ್ಲಿ ನೇಗಿಲಿನಿಂದ ಉತ್ತಿರುವ ಶುಭಕ್ಷೇತ್ರದಲ್ಲಿ, ಉತ್ತರಫಲ್ಗುನೀನಕ್ಷತ್ರದಲ್ಲಿ, ನೂರಾರು ಬಾಲಸೂರ್ಯಪ್ರಕಾಶವುಳ್ಳವಳಾಗಿ, ತಾವರೆಯನ್ನು ಕೈಯಲ್ಲಿ ಹಿಡಿದವಳಾಗಿ, ಅಯೋನಿಜೆಯಾಗಿ, ನೇಗಿಲಿನಿಂದಾದ ಸಾಲಿನಲ್ಲಿ ಸುಂದರಿಯಾದ ಬಾಲಿಕೆಯಾಗಿ ಅವತರಿಸಿದಳು. ಸೀತಾಮುಖದಲ್ಲಿ ಹುಟ್ಟಿದುದರಿಂದ ಈಕೆಗೆ ಜನಕರಾಜನು ಸೀತೆಯೆಂದೇ ಹೆಸರಿಟ್ಟನು.

ಮುತ್ತಿ ನಮ್ಮನ್ನು ಪೀಡಿಸತೊಡಗಿದರು. ಒಂದು ವರ್ಷದ ಯುದ್ಧದಲ್ಲಿ ದುರ್ಗರಕ್ಷಣೆಗೆ ಸಂಗ್ರಹಿಸಲ್ಪಟ್ಟಿದ್ದ ಸಾಧನಗಳೆಲ್ಲವೂ ನಾಶವಾದುವು. ಅದರಿಂದ ನನಗೆ ಬಹಳ ದುಃಖವಾಯಿತು. ಆಗ ನನಗಿದ್ದುದು ಒಂದೇ ಮಾರ್ಗ ; ದೇವತೆಗಳನ್ನು ಕುರಿತು ತಪಸ್ಸು ಮಾಡುವುದು. ಸರ್ವದೇವತೆಗಳನ್ನೂ ತಪಸ್ಸಿನಿಂದ ಪ್ರಸನ್ನರಾಗುವಂತೆ ಮಾಡಿಕೊಂಡೆನು. ನನ್ನ ತಪಸ್ಸಿನಿಂದ ಸುಪ್ರೀತರಾದ ದೇವತೆಗಳು ನನಗೆ ಚತುರಂಗಬಲವನ್ನು ದಯಪಾಲಿಸಿದರು. ದೇವತೆಗಳು ಪ್ರಸನ್ನರಾಗಿ ಕೊಟ್ಟ ಆ ಚತುರಂಗಬಲದಿಂದ ರಾಜರೆಲ್ಲರೂ ಪೆಟ್ಟುತಿಂದು ಸೋತುಹೋದರು. ಅವರಲ್ಲಿ ಕೆಲವರು ಅಬಲರು ; ಕೆಲವರು ಸಂದಿಗ್ಧವಾದ ಬಲವುಳ್ಳವರು. ಆ ಪಾಪಿಷ್ಠರಾಜರು ತಮ್ಮ-ತಮ್ಮ ಮಂತ್ರಿಗಳ ಸಮೇತರಾಗಿ ಪ್ರಾಣವುಳಿಸಿಕೊಳ್ಳಲು ನಾಲ್ಕು ದಿಕ್ಕುಗಳಿಗೂ ಪಲಾಯನಮಾಡಿದರು. ಸುವ್ರತರೇ! ಹೀಗೆ ನೂರಾರು ರಾಜರಿಂದಲೂ ಎತ್ತಲಾಗದ, ತೇಜೋವಿಶಿಷ್ಟವಾದ ಈ ಮಹಾಧನುಸ್ಸನ್ನು ರಾಮ-ಲಕ್ಷ್ಮಣರಿಗೂ ತೋರಿಸುತ್ತೇನೆ. ಒಂದು ವೇಳೆ ರಾಮನು ಈ ಮಹಾಧನುಸ್ಸಿನ ಗ್ರಹಣ-ಧಾರಣ-ತೋಲನ-ಆರೋಪಣಾದಿಗಳನ್ನು ಮಾಡಿದ್ದೇ ಆದರೆ ನನ್ನ ಮಗಳಾದ, ಅಯೋನಿಜೆಯಾದ ಸೀತೆಯನ್ನು ದಶರಥಸುತನಾದ ಈ ರಾಮನಿಗೆ ಮದುವೆಮಾಡಿಕೊಡುತ್ತೇನೆ."

ಅರವತ್ತಾರನೆಯ ಸರ್ಗವು ಮುಗಿಯಿತು.

ಬಾಲಕಾಂಡ ೬೭ನೆಯ ಸರ್ಗ

ಶ್ರೀರಾಮನು ಶಿವಧನುಸ್ಸನ್ನು ಮುರಿದುದು : ಜನಕನು ವಿಶ್ವಾಮಿತ್ರರ ಆಜ್ಞೆಯಂತೆ ದಶರಥನನ್ನು ಕರೆತರಲು ಅಮಾತ್ಯರನ್ನು ಅಯೋಧ್ಯೆಗೆ ಕಳುಹಿಸಿದುದು

ಜನಕಸ್ಯ ವಚಃ ಶ್ರುತ್ವಾ ವಿಶ್ವಾಮಿತ್ರೋ ಮಹಾದ್ಯುತಿಃ ।
ಧನುರ್ದರ್ಶಯ ರಾಮಾಯ ಇತಿ ಹೋವಾಚ ಪಾರ್ಥಿವಮ್ ॥೧॥

ಜನಕರಾಜನ ಮಾತುಗಳನ್ನು ಕೇಳಿ ವಿಶ್ವಾಮಿತ್ರರು–"ಮಹಾರಾಜ! ಶ್ರೀರಾಮನಿಗೆ ಧನುಸ್ಸನ್ನು ತೋರಿಸು"–ಎಂದು ಹೇಳಿದರು. ವಿಶ್ವಾಮಿತ್ರರ ಆದೇಶದಂತೆ ಜನಕರಾಜನು–"ಸಚಿವೋತ್ತಮರೇ! ಗಂಧ-ಮಾಲ್ಯಾದಿ

ಗಳಿಂದ ಅಲಂಕೃತವಾಗಿರುವ ದಿವ್ಯವಾದ ಶಿವಧನುಸ್ಸನ್ನು ತೆಗೆದುಕೊಂಡು ಬನ್ನಿರಿ"–ಎಂದು ಸಚಿವರಿಗೆ ಆಜ್ಞಾಪಿಸಿದನು. ಹೀಗೆ ಆಜ್ಞಪ್ತರಾದ ಸಚಿವರು ಧನುಸ್ಸನ್ನು ತರಲು ಪಟ್ಟಣಕ್ಕೆ ಹೋದರು. ಸಚಿವರು ದೃಢಕಾಯರಾದ ರಾಜಭಟರಿಂದ ಆ ಮಹಾಧನುಸ್ಸನ್ನು ತೆಗೆಸಿಕೊಂಡು ಜನಕನ ಆಸ್ಥಾನಕ್ಕೆ ಬಂದರು. ದೀರ್ಘಾಕಾರವುಳ್ಳ, ದೃಢಕಾಯರಾದ, ಮಹಾತ್ಮರಾದ ಐವರು ರಾಜಭಟರು ಎಂಟು ಚಕ್ರಗಳಿಂದ ಕೂಡಿದ್ದ ಆ ಧನುಸ್ಸಿನ ಪೆಟ್ಟಿಗೆಯನ್ನು ಬಹಳ ಕಷ್ಟಪಟ್ಟು ಎಳೆದು ತಂದರು. ಶೈವಧನುಸ್ಸಿನ ಲೋಹದ ಪೆಟ್ಟಿಗೆ ಯನ್ನು ಸಭಾಮಂಟಪಕ್ಕೆ ತಂದನಂತರ, ಸಚಿವರು ದೇವಸದೃಶನಾದ ಜನಕ ರಾಜನಿಗೆ ಹೇಳಿದರು :

"ಮಹಾರಾಜ! ಇದು ಅನೇಕ ರಾಜರುಗಳಿಂದ ಪೂಜಿಸಲ್ಪಟ್ಟ ದರ್ಶನ ಯೋಗ್ಯವಾದ ಮಹಾಧನುಸ್ಸಾಗಿದೆ. ಇದನ್ನು ನೀನು ರಾಮ-ಲಕ್ಷ್ಮಣರಿಗೆ ತೋರಿಸಲು ಇಚ್ಛಿಸುವೆಯಾದರೆ ತೋರಿಸಬಹುದು."

ಜನಕರಾಜನು ಸಚಿವರ ಮಾತನ್ನು ಕೇಳಿ, ಬದ್ಧಾಂಜಲಿಯಾಗಿ ಮಹಾತ್ಮರಾದ ವಿಶ್ವಾಮಿತ್ರರಿಗೆ ಹೇಳಿದನು :

"ಬ್ರಾಹ್ಮಣಶ್ರೇಷ್ಠರೇ! ಈ ಶೈವಮಹಾಧನುಸ್ಸನ್ನು ಜನಕವಂಶೀಯರು ಅನುದಿನವೂ ಪೂಜಿಸುತ್ತಾರೆ. ಅಂತೆಯೇ ಈ ಧನುಸ್ಸಿಗೆ ಹೆದೆಯೇರಿಸಲು ಅಸಮರ್ಥರಾದ, ಮಹಾವೀರ್ಯಶಾಲಿಗಳಾದ ರಾಜರೂ ಈ ಶೈವಧನುಸ್ಸನ್ನು ಸಮ್ಮಾನಿಸಿದ್ದಾರೆ. ಈ ಮಹಾಧನುಸ್ಸಿನ ತೋಲನ, ಶಿಂಜಿನೀಬಂಧನ, ಶರಸಂಯೋಜನ ಮತ್ತು ಆರೋಪಣಗಳಲ್ಲಿ ದೇವತೆಗಳೂ, ಅಸುರ-ರಾಕ್ಷಸರೂ, ಗಂಧರ್ವ-ಯಕ್ಷಪ್ರಮುಖರೂ, ಕಿನ್ನರ-ಮಹೋರಗರೂ ಸಮರ್ಥರಲ್ಲದಿರುವಾಗ–ಮಾನವರಿಗೆ ಈ ಧನುಸ್ಸನ್ನು ಎತ್ತುವ ಸಾಮರ್ಥ್ಯವು ಹೇಗೆತಾನೇ ಇದ್ದೀತು? ಇಂತಹ ಅಜೇಯವಾದ, ಶ್ರೇಷ್ಠವಾದ ಮಹಾಧನುಸ್ಸನ್ನು ಇಲ್ಲಿಗೆ ತರಿಸಿದ್ದೇನೆ. ನೋಡಲು ಬಯಸಿಬಂದಿರುವ ಈ ರಾಜಪುತ್ರರಿಗೆ ಈ ಮಹಾಧನುಸ್ಸನ್ನು ತೋರಿಸಿರಿ."

ಧರ್ಮಾತ್ಮರಾದ ವಿಶ್ವಾಮಿತ್ರರು ಜನಕನ ಮಾತುಗಳನ್ನು ಕೇಳಿ ರಾಮನ ಕಡೆಗೆ ತಿರುಗಿ–"ವತ್ಸ! ರಾಮ! ಧನುಸ್ಸನ್ನು ನೋಡು"–ಎಂದು ಹೇಳಿದರು.

ಮಹರ್ಷಿಗಳಾದ ವಿಶ್ವಾಮಿತ್ರರ ಮಾತುಗಳನ್ನು ಕೇಳಿ ಶ್ರೀರಾಮನು ಒಡನೆಯೇ ಮೇಲೆದ್ದು ಧನುಸ್ಸಿನ ಪೆಟ್ಟಿಗೆಯಿದ್ದಲ್ಲಿಗೆ ಹೋಗಿ, ಮುಚ್ಚಳವನ್ನು ತೆಗೆದು ಧನುಸ್ಸನ್ನು ನೋಡಿ ಹೇಳಿದನು :

"ಪೂಜ್ಯರೇ! ಈ ದಿವ್ಯವಾದ ಧನೂರತ್ನವನ್ನು ಮುಟ್ಟಬೇಕೆಂಬ ಅಪೇಕ್ಷೆಯಾಗಿದೆ. ಸ್ಪರ್ಶಮಾಡಿದನಂತರ ಇದರ ತೋಲನ, ಪೂರಣ, ಶರಸಂಧಾನ ಮುಂತಾದುವನ್ನು ಮಾಡಲೂ ಯತ್ನಿಸುತ್ತೇನೆ." "ಬಾಢಂ ಹಾಗೆಯೇ ಆಗಲಿ"–ಎಂಬ ಅನುಜ್ಞಾವಚನವು ಜನಕನ ಮತ್ತು ವಿಶ್ವಾಮಿತ್ರರ ಮುಖಾರವಿಂದಗಳಿಂದ ಒಂದೇ ಕಾಲದಲ್ಲಿ ಹೊರಹೊರಟಿತು. ಆಚಾರ್ಯರಾದ ವಿಶ್ವಾಮಿತ್ರರ ಅನುಜ್ಞೆಯನ್ನು ಪಡೆದು ಶ್ರೀರಾಮನು ಪೆಟ್ಟಿಗೆಯಲ್ಲಿದ್ದ ಧನುಸ್ಸಿನ ಮಧ್ಯಭಾಗವನ್ನು ಹಿಡಿದು ನಗುನಗುತ್ತಲೇ ಮೇಲೆತ್ತಿದನು. ಸಾವಿರಾರು ಜನರು ನೋಡುತ್ತಿದ್ದಂತೆಯೇ ಧರ್ಮಾತ್ಮನಾದ ರಘುನಂದನನು ಮಹಾಧನುಸ್ಸಿನ ಒಂದು ತುದಿಯಲ್ಲಿದ್ದ ಶಿಂಜಿನಿಯನ್ನು ಮತ್ತೊಂದು

ತುದಿಗೆ ಕಟ್ಟಲು ಮೌರ್ವಿಯನ್ನು ಲೀಲೆಯಿಂದ ಸೆಳೆದನು. ನರಶ್ರೇಷ್ಠನಾದ, ಮಹಾಯಶೋವಂತನಾದ, ವೀರ್ಯವಂತನಾದ ಶ್ರೀರಾಮನು ಮೌರ್ವಿಯನ್ನು ಸೆಳೆದು ಕಟ್ಟಿ ಎಳೆದಾಗ ಆ ಧನುಸ್ಸು ಮಧ್ಯಭಾಗಕ್ಕೆ ಸರಿಯಾಗಿ ಮುರಿದು ಕೆಳಗೆ ಬಿದ್ದಿತು* ಧನುರ್ಭಂಜನದಿಂದ ಸಿಡಿಲಿಗೆ ಸಮಾನವಾದ



ಘೋರನಿನಾದವಾಯಿತು. ಪರ್ವತವು ಸೀಳಿಹೋಗುತ್ತಿರುವಾಗ ಭೂಕಂಪವು ಸಂಭವಿಸುವಂತೆ ಈ ಮಹಾಧನುಸ್ಸಿನ ಭಂಜನವಾದಾಗಲೂ ಭೂಕಂಪವಾಯಿತು. ಜನಕ-ವಿಶ್ವಾಮಿತ್ರರ ಮತ್ತು ರಾಮ-ಲಕ್ಷ್ಮಣರ ಹೊರತಾಗಿ ಜನಕನ ಸಭಾಮಂದಿರದಲ್ಲಿದ್ದ ಉಳಿದವರೆಲ್ಲರೂ ಧನುರ್ಭಂಜನದ ಘೋರಶಬ್ದವನ್ನು ಕೇಳಿದೊಡನೆಯೇ ಭಯಭ್ರಾಂತರಾಗಿ ಕೆಳಗೆ ಬಿದ್ದರು.

* ಕಾಲಿನ ಬೆರಳಿನಿಂದ ಬಿಲ್ಲನ್ನು ಮೇಲಕ್ಕೆ (ಕೈಗೆ ಎಟುಕುವವರೆಗೆ) ಎತ್ತಿ ತನಗಿಂತಲೂ ಉದ್ದವಾಗಿದ್ದ ಧನುಸ್ಸಿನ ತುದಿಯಲ್ಲಿದ್ದ ಮೌರ್ವಿಯನ್ನು ಸೆಳೆದುಕೊಂಡನೆಂದು ಪದ್ಮ ಪುರಾಣದಲ್ಲಿ ಹೇಳಿದೆ. **ರಾಮೋಽಪಿ ತದ್ಧನುಷ್ಕೋಟಿಂ ಸ್ಪೃಷ್ಟ್ವಾ ಪಾದಾಙ್ಗುಲಾತ್ತತಃ।**

ಕೆಲವು ಕ್ಷಣಗಳಾದನಂತರ ಮೇಲೆದ್ದು ಕುಳಿತ ಪ್ರಜೆಗಳಿಗೆ ನಿಜಸಂಗತಿಯನ್ನು ಹೇಳಿ ಸಂತೈಸಲಾಯಿತು. "ಧನುಸ್ಸಿನ ತೋಲನ-ಪೂರಣಗಳಲ್ಲಿ ಸಮರ್ಥ ರಾದವರು ಸಿಕ್ಕಿಯಾರೇ? ಸೀತೆಗೆ ಸ್ವಯಂವರವಾದೀತೇ?"–ಎಂಬ ಜನಕ ರಾಜನ ಶಂಕೆಯು ಧನುರ್ಭಂಜನದಿಂದ ದೂರವಾಗಲು ಭಯದಿಂದ ವಿಮುಕ್ತನಾದ, ವಾಕ್ಯಜ್ಞನಾದ ಜನಕನು ಬದ್ಧಾಂಜಲಿಯಾಗಿ ಮುನಿಪುಂಗವ ರಾದ ವಿಶ್ವಾಮಿತ್ರರಿಗೆ ಹೇಳಿದನು.

"ಮಹರ್ಷಿಗಳೇ! ದಾಶರಥಿಯ ಪರಾಕ್ರಮವೆಷ್ಟೆಂಬುದನ್ನು ನಾನು ಕಂಡೆನು. ನಿಶ್ಚಯವಾಗಿಯೂ ಇವನ ಪರಾಕ್ರಮವು ಅದ್ಭುತವಾದುದು, ಅಚಿಂತ್ಯವಾದುದು. ಇವನು ಇಷ್ಟು ಪರಾಕ್ರಮೀ ಎಂಬುದನ್ನು ನಾನು ನಿಶ್ಚಯವಾಗಿಯೂ ಯೋಚಿಸಿರಲಿಲ್ಲ. ನನ್ನ ಪ್ರಿಯಸುತೆಯಾದ ಸೀತೆಯು ಮಹಾಪರಾಕ್ರಮಿಯಾದ, ದಶರಥನ ಮಗನಾದ ಈ ರಾಮನನ್ನು ಪತಿಯ ನ್ನಾಗಿ ವರಿಸಿ ಜನಕವಂಶಕ್ಕೇ ಕೀರ್ತಿಯನ್ನು ತರುತ್ತಾಳೆ. ಕೌಶಿಕರೇ! ಸೀತೆಯು ನನ್ನ ಪ್ರಾಣಗಳಿಗಿಂತಲೂ ಹೆಚ್ಚಿನವಳು. ವೀರ್ಯಶುಲ್ಕಕ್ಕೆ ವಿನಿಮಯರೂಪ ವಾಗಿ ಇವಳನ್ನು ಮದುವೆಮಾಡಿಕೊಡಬೇಕೆಂದಿದ್ದ ನನ್ನ ಪ್ರತಿಜ್ಞೆಯು ಸತ್ಯ ವಾಯಿತು. ಈ ನನ್ನ ಮಗಳನ್ನು ಈ ಕೂಡಲೇ ರಾಮನಿಗೆ ಕೊಟ್ಟು ಮದುವೆ ಮಾಡಬೇಕಾಗಿದೆ. ಆದುದರಿಂದ ನಿಮ್ಮ ಅನುಮತಿಯನ್ನು ಪಡೆದ ನನ್ನ ಸಚಿವರುಗಳು ಈ ಕೂಡಲೇ ರಥದಲ್ಲಿ ಕುಳಿತು ಅಯೋಧ್ಯೆಗೆ ಪ್ರಯಾಣ ಮಾಡಲಿ. ವಿಪ್ರಶ್ರೇಷ್ಠರೇ! ನಿಮಗೆ ಮಂಗಳವಾಗಲಿ. ಒಡನೆಯೇ ಅನುಮತಿ ಸಿರಿ. ನನ್ನ ಸಚಿವರು ಅಯೋಧ್ಯೆಗೆ ಹೋಗಿ ಅಲ್ಲಿ ದಶರಥರಾಜನನ್ನು ಸಂಧಿಸಿ, ವೀರ್ಯಶುಲ್ಕಳಾದ ಸೀತೆಯನ್ನು ರಾಮನಿಗೆ ಕೊಟ್ಟು ವಿವಾಹ ಮಾಡುವ ವಿಷಯವನ್ನೂ ಮತ್ತು ರಾಮನು ತನ್ನ ಪರಾಕ್ರಮಾಧಿಕ್ಯವನ್ನು ಧನುರ್ಭಂಜನದಿಂದ ಪ್ರದರ್ಶಿಸಿದ ವಿಷಯವನ್ನೂ ಅವನಿಗೆ ತಿಳಿಸಿ, ನಯ-ವಿನಯಯುತವಾದ ಮಾತುಗಳಿಂದ ಸಂತೋಷಪಡಿಸಿ, ನನ್ನ ಪಟ್ಟಣಕ್ಕೆ ಕರೆ

ಉನ್ನತಂ ಚಾಪಮಾರೋಪ್ಯ ಬಭಞ್ಜೇ ಮೋಹಿತಾ ಜನಾಃ ॥ ರಾಮನು ಆ ಮಹಾಧನುಸ್ಸಿನ ಕರ್ಣವನ್ನು ಅಂಗುಷ್ಠದಿಂದ ಮುಟ್ಟಿ ಅದರಿಂದಲೇ ಮೇಲಕ್ಕೆ ಎತ್ತಿ ಬಿಲ್ಲನ್ನು ಮಧ್ಯದಲ್ಲಿ ಹಿಡಿದು ನಿಲ್ಲಿಸಿ ಮೌರ್ವಿಯನ್ನು ಕಟ್ಟಿ ಎಳೆದು ಮುರಿದನು.

ತರಲಿ. ರಾಮ-ಲಕ್ಷ್ಮಣರೂ ಮಹರ್ಷಿಗಳಾದ ವಿಶ್ವಾಮಿತ್ರರಿಂದ ಸುರಕ್ಷಿತ ವಾಗಿ ರಕ್ಷಿಸಲ್ಪಡುತ್ತಿರುವರೆಂಬ ವಾರ್ತೆಯನ್ನೂ ದಶರಥನಿಗೆ ಹೇಳಲಿ. ಈ ಶುಭವಾರ್ತೆಯನ್ನು ಕೇಳಿ ಪರಮಪ್ರೀತನಾಗುವ ದಶರಥನನ್ನು ಶೀಘ್ರಗಾಮಿ ಗಳಾದ ಈ ಸಚಿವರುಗಳು ಕರೆತರಲಿ."

ವಿಶ್ವಾಮಿತ್ರರು ಮಂದಸ್ಮಿತರಾಗಿ–'ತಥಾಸ್ತು' 'ಹಾಗೆಯೇ ಆಗಲಿ' ಎಂದು ರಾಜನ ಪ್ರಾರ್ಥನೆಗೆ ಅನುಮತಿಯನ್ನಿತ್ತರು. ಒಡನೆಯೇ ಧರ್ಮಾತ್ಮ ನಾದ ಜನಕನು ಅಮಾತ್ಯರನ್ನು ಕರೆಯಿಸಿ, ಸಭಾಭವನದಲ್ಲಿ ನಡೆದ ಸಮಾಚಾರವನ್ನು ತಿಳಿಸಲು ಮತ್ತು ಪರಿವಾರದೊಡನೆ ದಶರಥನನ್ನು ಮಿಥಿಲೆಗೆ ಕರೆತರಲು ನಿರೂಪವಿತ್ತು ಅಯೋಧ್ಯೆಗೆ ಕಳುಹಿಸಿಕೊಟ್ಟನು.

೬೭ನೆಯ ಸರ್ಗವು ಮುಗಿಯಿತು.

ಬಾಲಕಾಂಡ ೬೮ನೆಯ ಸರ್ಗ

ಮಂತ್ರಿಗಳು ದಶರಥನಿಗೆ ಜನಕನ ಸಂದೇಶವನ್ನು ತಿಳಿಸಿದುದು : ವಸಿಷ್ಠ-ವಾಮದೇವರ ಸಲಹೆಯಂತೆ ದಶರಥನ ಪ್ರಯಾಣಸನ್ನಾಹ

ಜನಕೇನ ಸಮಾದಿಷ್ಟಾ ದೂತಾಸ್ತೇ ಕ್ಲಾನ್ತವಾಹನಾಃ ।
ತ್ರಿರಾತ್ರಮುಷಿತಾ ಮಾರ್ಗೇ ತೇಽಯೋಧ್ಯಾಂ ಪ್ರಾವಿಶನ್ಪುರೀಮ್ ॥

ಜನಕನಿಂದ ಕಳುಹಿಸಲ್ಪಟ್ಟ ಸಚಿವರು ಮತ್ತು ರಾಜಭಟರು–ಬಹು ದೂರದ ಪ್ರಯಾಣದಿಂದಾಗಿ ಕುದುರೆಗಳು ಬಹಳ ಬಳಲಿದ್ದ ಕಾರಣ– ಮಾರ್ಗದಲ್ಲಿ ಮೂರು ರಾತ್ರಿಗಳು ತಂಗಿದ್ದು ನಾಲ್ಕನೆಯ ದಿನ ಅಯೋಧ್ಯೆ ಯನ್ನು ಸೇರಿದರು. ದಶರಥರಾಜನ ಅರಮನೆಯ ಬಾಗಿಲಿಗೆ ಹೋಗಿ, ತಾವು ಜನಕರಾಜನಿಂದ ಕಳುಹಿಸಲ್ಪಟ್ಟಿರುವುದಾಗಿಯೂ ದಶರಥರಾಜನನ್ನು ಒಡ ನೆಯೇ ಕಾಣಬೇಕಾಗಿದೆಯೆಂದೂ ದ್ವಾರಪಾಲಕರಿಗೆ ಹೇಳಲು, ದ್ವಾರಪಾಲ ಕರು ಹೋಗಿ ದಶರಥರಾಜನಿಗೆ ಆ ಸಮಾಚಾರವನ್ನು ನಿವೇದಿಸಿದರು. ದಶ ರಥರಾಜನು ಜನಕನ ಸಚಿವರುಗಳನ್ನೂ, ರಾಜಭಟರುಗಳನ್ನೂ ಮರ್ಯಾದೆ ಯಿಂದ ಅರಮನೆಯೊಳಗೆ ಕರೆತರುವಂತೆ ದ್ವಾರಪಾಲಕರಿಗೆ ಆಜ್ಞಾಪಿಸಿದನು. ದ್ವಾರಪಾಲಕರ ಜೊತೆಯಲ್ಲಿ ಅವರೆಲ್ಲರೂ ಸಭಾಮಂಟಪವನ್ನು ಪ್ರವೇಶಿಸಿ ಅಲ್ಲಿ ಸಿಂಹಾಸನಾರೂಢನಾಗಿದ್ದ, ದೇವಸದೃಶನಾಗಿದ್ದ ದಶರಥರಾಜನನ್ನು

ಸಂದರ್ಶಿಸಿದರು. ಶುಭಸಂದೇಶವನ್ನು ತಂದಿದ್ದರಿಂದಲೂ ದಶರಥರಾಜನ ಸೌಜನ್ಯದಿಂದಲೂ ನಿರ್ಭಯರಾಗಿ, ವಿನಮ್ರರಾಗಿ ದಶರಥನಿಗೆ ಮನೋಹ ರಾಕ್ಷರಗಳಿಂದ ಕೂಡಿರುವ ಈ ಮಾತನ್ನು ಹೇಳಿದರು :

"ಮಹಾರಾಜ! ಮಿಥಿಲಾಧಿಪತಿಯಾದ, ಸಕಲಪ್ರಜೆಗಳಿಗೂ ಸುಖ ವನ್ನುಂಟುಮಾಡುತ್ತಿರುವ ಜನಕರಾಜನು–ಅಗ್ನಿಹೋತ್ರಸಹಿತನಾದ, ಉಪಾ ಧ್ಯಾಯ-ಪುರೋಹಿತಯುಕ್ತನಾದ ಮತ್ತು ಭೃತ್ಯಸಮೇತನಾಗಿರುವ ನಿನ್ನ ಕ್ಷಯರಹಿತವಾದ ಕುಶಲ (ಕ್ಷೇಮ)ವನ್ನೂ, ಅವ್ಯಯ (ಯೋಗ)ವನ್ನೂ ಅತಿಸ್ನೇಹಯುಕ್ತವಾದ, ಅತಿಮಧುರವಾದ ಮಾತಿನಿಂದ ಬಾರಿ-ಬಾರಿಗೂ ಕೇಳಿರುವನು. ಮಿಥಿಲಾಧಿಪತಿಯಾದ, ಶಾಂತನಾದ ವಿದೇಹರಾಜನು ನಿಮ್ಮ ಕುಶಲವನ್ನು ಕೇಳಿದನಂತರ ವಿಶ್ವಾಮಿತ್ರರ ಅನುಮತಿಯೊಡನೆ ನಿಮಗೆ ಈ ಮಾತುಗಳನ್ನು ಹೇಳುವಂತೆ ಹೇಳಿರುವನು. "ದಶರಥಮಹಾರಾಜ! ನನ್ನ ಮಗಳು ವೀರ್ಯಶುಲ್ಕಳೆಂದು ನಾನು ಮಾಡಿದ್ದ ಪ್ರತಿಜ್ಞೆಯು ಸರ್ವತ್ರ ವಿದಿತವಾಗಿದೆ. ಆ ವಾರ್ತೆಯನ್ನು ಕೇಳಿ ಕೋಪಗೊಂಡು ನಿರ್ವೀರ್ಯರಾದ ಅನೇಕರಾಜರು ತಮ್ಮ ಪರಾಕ್ರಮವನ್ನು ತೋರುವ ಸಲುವಾಗಿ ವಿದೇಹಕ್ಕೆ ಬಂದು, ವೀರ್ಯದ ಪರಿಮಿತಿಯನ್ನಳೆಯಲು ಸಿದ್ಧಪಡಿಸಿದ್ದ ಧನುಸ್ಸನ್ನು ಮೇಲಕ್ಕೆತ್ತಲೂ ಸಮರ್ಥರಾಗದೇ ಪರಾಙ್ಮುಖರಾಗಿ ಹೊರಟುಹೋದರು. ಈ ವಿಷಯವೂ ನಿನಗೆ ತಿಳಿದಿದೆ. ವೀರ್ಯಶುಲ್ಕಳಾದ ನನ್ನ ಮಗಳು ನನ್ನ ಅದೃಷ್ಟವಿಶೇಷದಿಂದ ವಿಶ್ವಾಮಿತ್ರರೊಡನೆ ನನ್ನ ಅರಮನೆಗೆ ಆಗಮಿಸಿರುವ ನಿನ್ನ ಮಕ್ಕಳಿಂದ ಜಯಿಸಲ್ಪಟ್ಟಳು.* ಮಹಾರಾಜ! ಇ ತರರಿಂದ ಎತ್ತಿಹಿಡಿ

---

* ರಾಮನೊಬ್ಬನು ಧನುರ್ಭಂಜನಮಾಡಿದನೇ ಹೊರತು ರಾಮ-ಲಕ್ಷ್ಮಣರಿಬ್ಬರೂ ಧನುರ್ಭಂಜನಮಾಡಲಿಲ್ಲ. ಆದರೆ ಈ ಶ್ಲೋಕದಲ್ಲಿ ಪುತ್ರಕೈಃ ಎಂದು ಬಹುವಚನವು ಹೇಳಲ್ಪಟ್ಟಿದೆ. ಇದಕ್ಕೆ ಒಬ್ಬೊಬ್ಬ ವ್ಯಾಖ್ಯಾನಕಾರರು ಒಂದೊಂದು ವಿಧವಾಗಿ ವಿವರಣೆ ಕೊಟ್ಟಿರುತ್ತಾರೆ ೧) ಅಳಿಯನನ್ನು ಸಾಮಾನ್ಯವಾಗಿ ಏಕವಚನದಿಂದ ಕರೆಯುವುದಿಲ್ಲ. ೨) ಮಹಾಬಲಶಾಲಿಯಾದ್ದರಿಂದಲೂ ಶ್ರೀರಾಮನಲ್ಲಿ ದೇವತ್ವವಿರು ವುದೆಂಬ ಪೂಜ್ಯಬುದ್ಧಿಯಿಂದಲೂ ಜನಕನು ಬಹುವಚನವನ್ನು ಪ್ರಯೋಗಿಸಿದ ನೆಂಬುದು ಒಬ್ಬರ ಅಭಿಪ್ರಾಯವಾಗಿದೆ. ೩) ಪೂಜಾಯಾಂ ಬಹುವಚನಂ ಎಂಬ ನಿಯಮಾನುಸಾರವಾಗಿ–"ಗೌರವಿಸಿ ಹೇಳಲು ಬಹುವಚನಪ್ರಯೋಗಮಾಡಲಾಗಿದೆ"– ಎಂಬುದು ಮತ್ತೊಬ್ಬ ವ್ಯಾಖ್ಯಾನಕಾರರ ಅಭಿಪ್ರಾಯವಾಗಿದೆ. ಆದರೆ ಸರ್ವತ್ರ

ಯಲೂ ಸಾಧ್ಯವಾಗದಿದ್ದ ದಿವ್ಯವಾದ ಶೈವಧನುಸ್ಸನ್ನು ತುಂಬಿದ ಸಭೆಯಲ್ಲಿ ಮಹಾತ್ಮನಾದ, ನಿನ್ನ ಜ್ಯೇಷ್ಠಪುತ್ರನಾದ ರಾಮನು ಭಗ್ನಗೊಳಿಸಿದನು. ಧನುರ್ಭಂಜನಮಾಡಿ ಅತಿಶಯವೀರ್ಯವನ್ನು ತೋರಿಸಿರುವ ಮಹಾತ್ಮ ನಾದ ಶ್ರೀರಾಮನಿಗೆ ವೀರ್ಯಶುಲ್ಕಳಾದ ಸೀತೆಯನ್ನು ಕೊಟ್ಟು ಮದುವೆಮಾಡಬೇಕಾಗಿದೆ. ಹಿಂದೆ ನಾನು ಮಾಡಿದ್ದ ಪ್ರತಿಜ್ಞೆಯನ್ನು ಪೂರ್ಣಗೊಳಿಸಲು ಬಯಸಿದ್ದೇನೆ. ಈ ವಿವಾಹಸಂಬಂಧಕ್ಕೆ ನೀನೂ ಸಮ್ಮತಿಸುವುದು ಯೋಗ್ಯವಾಗಿದೆ. ಉಪಾ ಧ್ಯಾಯಸಮೇತನಾಗಿ ಪುರೋಹಿತನನ್ನು ಮುಂದೆಮಾಡಿಕೊಂಡು ಒಡನೆಯೇ ಆಗಮಿಸುವವ ನಾಗು. ವಿಜಯಿಗಳಾದ ರಾಮ-ಲಕ್ಷ್ಮಣರನ್ನೂ ನೀನಿಲ್ಲಿ ನೋಡಬಹುದು. ನಿನಗೆ ಮಂಗಳವಾಗಲಿ. ಇಲ್ಲಿಗೆ ಆಗಮಿಸಿ ನನ್ನ ಪ್ರತಿಜ್ಞೆಯನ್ನು ಪೂರ್ಣಗೊಳಿಸುವ ಕೃಪೆಮಾಡು. ನಿನ್ನ ಮಕ್ಕಳಿಬ್ಬರ ಕಲ್ಯಾಣದಿಂದ ಉಂಟಾಗುವ ಆನಂದವನ್ನು ನೀನು ಪಡೆಯುವೆ." ಮಹಾರಾಜ! ವಿದೇಹಾಧಿಪತಿಯಾದ ಜನಕನು ವಿಶ್ವಾಮಿತ್ರರ ಅನುಮತಿಯನ್ನು ಪಡೆದು, ಶತಾನಂದರ ಅಭಿಪ್ರಾಯವನ್ನೂ ತಿಳಿದು, ನಾವು ಹೇಳಿರುವ ಸುಮಧುರ ವಾದ ಮಾತುಗಳನ್ನು ನಮ್ಮೊಡನೆ ಹೇಳಿಕಳುಹಿಸಿರುವನು." ಜನಕರಾಜನ ದೂತರು ಹೇಳಿದ ಮಾತುಗಳನ್ನು ಕೇಳಿ ದಶರಥನು ಪರಮಸಂತುಷ್ಟನಾಗಿ ವಸಿಷ್ಠ-ವಾಮದೇವರನ್ನೂ, ಮಂತ್ರಿ-ಅಮಾತ್ಯರುಗಳನ್ನೂ ಮತ್ತು ಸಭಾ ಮಂದಿರದಲ್ಲಿದ್ದ ಇತರರನ್ನೂ ಉದ್ದೇಶಿಸಿ ಹೇಳಿದನು :

ಬಹುವಚನವನ್ನೇ ಜನಕನು ಉಪಯೋಗಿಸಿರುವುದಿಲ್ಲ. ಮುಂದಿನ ಶ್ಲೋಕದಲ್ಲಿಯೇ–'ರಾಮೇಣ = ರಾಮನಿಂದ'–ಎಂದು ಹೇಳಿರುತ್ತಾನೆ. ಆದ್ದರಿಂದ ಇಲ್ಲಿ ಉಪಯೋಗಿ ಸಿರುವ ಬಹುವಚನಕ್ಕೆ ಹೀಗೂ ಸಮಾಧಾನ ಹೇಳಬಹುದಾಗಿದೆ. 'ಯದೃಚ್ಛಯಾ ಆಗತೈಃ' 'ವಿಶ್ವಾಮಿತ್ರಪುರಃಸರೈಃ' ಈ ಎರಡು ಕಡೆಗಳಲ್ಲಿಯೂ ಬಹುವಚನವನ್ನು ಪ್ರಯೋಗಮಾಡಲಾಗಿದೆ. ವಿಶ್ರಾಮಿತ್ರಪುರಃಸರರಾದವರು ಇಬ್ಬರಾದ್ದರಿಂದ ಇಲ್ಲಿ ದ್ವಿವಚನವೇ ಇರಬೇಕಾಗಿದ್ದಿತು. ಧನುರ್ಭಂಜನಮಾಡಿದ ರಾಮನೊಬ್ಬನನ್ನೇ ಹೇಳಬೇಕಾದರೆ 'ವಿಶ್ವಾಮಿತ್ರಪುರಃಸರೇಣ' ಎಂದು ಹೇಳಬೇಕಾಗಿದ್ದಿತು. ಏಕ ವಚನ-ದ್ವಿವಚನಗಳೆರಡನ್ನೂ ಪ್ರಯೋಗಿಸದೇ ಇರುವುದರಲ್ಲಿ ಔಚಿತ್ಯವಿದೆ. ಏಕ ವಚನಪ್ರಯೋಗದಲ್ಲಿ ರಾಮನೊಬ್ಬನನ್ನೇ ಉದ್ದೇಶಿಸಿ ಹೇಳಿದಲ್ಲಿ ಮತ್ತೊಬ್ಬನೇನಾದ ನೆಂದು ದಶರಥನು ಗಾಬರಿಯಾಗಲು ಅವಕಾಶವಾಗುವುದು. ದ್ವಿವಚನವನ್ನೇ ಹೇಳಿದ್ದಿದ್ದರೆ ಇಬ್ಬರೂ ಸೀತೆಯನ್ನು ಪಡೆದರೆಂಬ ಭಾವವಾಗುತ್ತದೆ. ಈ ಎರಡು

"ಪೂಜ್ಯರೇ! ಜನಕರಾಜನ ದೂತರು ವಿಜ್ಞಾಪಿಸಿಕೊಂಡಂತೆ ವಿಶ್ವಾಮಿತ್ರರಿಂದ ಸುರಕ್ಷಿತನಾದ, ಕೌಸಲ್ಯೆಯ ಆನಂದವನ್ನು ಹೆಚ್ಚಿಸುವ ರಾಮನು ತನ್ನ ಅನುಜನಾದ ಲಕ್ಷ್ಮಣನೊಡನೆ, ಮಿಥಿಲಾಪಟ್ಟಣದಲ್ಲಿ ವಾಸ ಮಾಡುತ್ತಿದ್ದಾನೆ. ಮಹಾತ್ಮನಾದ, ಶಿವಧನುರ್ಭಂಗಮಾಡಿದ ರಾಮನ ಮಹಾಪರಾಕ್ರಮವನ್ನು ಕಂಡು ಜನಕರಾಜನು ತನ್ನ ಮಗಳಾದ ಸೀತಾದೇವಿ ಯನ್ನು ರಾಮನಿಗೆ ಪ್ರದಾನಮಾಡಲು ಆಶಿಸಿದ್ದಾನೆ. ಜನಕರಾಜನೊಡನೆ ನಾವು ಮಾಡಲಿರುವ ಈ ವಿವಾಹಸಂಬಂಧವು ನಿಮ್ಮೆಲ್ಲರಿಗೂ ಯುಕ್ತವೆನಿಸಿ ದರೆ–ನಾವೆಲ್ಲರೂ ವಿಳಂಬಮಾಡದೇ ಮಿಥಿಲಾಪಟ್ಟಣಕ್ಕೆ ಪ್ರಯಾಣ ಮಾಡೋಣ."

ದಶರಥನ ಮಾತುಗಳನ್ನು ಕೇಳಿ ಸಭಾಮಂದಿರದಲ್ಲಿದ್ದ ಮಂತ್ರಿಗಳೂ, ಋಷಿ-ಪುರೋಹಿತರೂ ಏಕಕಾಲದಲ್ಲಿ–'ಬಾಢಂ' 'ಹಾಗೆಯೇ ಆಗಲಿ– ಒಡನೆಯೇ ಪ್ರಯಾಣಮಾಡೋಣ. ಜನಕರಾಜನೊಡನೆ ಸಂಬಂಧಮಾಡು ವುದು ಸೂಕ್ತವಾಗಿದೆ'–ಎಂದು ಹೇಳಿದರು. ಅವರ ಉತ್ತರವನ್ನು ಕೇಳಿ ದಶರಥನು ಹಿರಿಹಿಗ್ಗಿದನು. ಮರುದಿನವೇ ಪ್ರಯಾಣವೆಂದು ಮಂತ್ರಿಗಳಿಗೆ ಪ್ರಯಾಣದ ದಿನವನ್ನೂ ಗೊತ್ತುಮಾಡಿ ಹೇಳಿದನು. ಜನಕರಾಜನಿಂದ ಕಳುಹಿಸಲ್ಪಟ್ಟಿದ್ದ, ಸಕಲಸದ್ಗುಣಪರಿಪೂರ್ಣರಾದ ಮಂತ್ರಿಗಳೂ ಮತ್ತು ದೂತರೂ ರಾಜಸಭೆಯಲ್ಲಾದ ನಿರ್ಣಯವನ್ನು ಕೇಳಿ ಪರಮಸಂತುಷ್ಟ ರಾದರು ಮತ್ತು ದಶರಥರಾಜನಿಂದ ಸತ್ಕೃತರಾಗಿ ಆ ರಾತ್ರಿಯನ್ನು ಕಳೆದರು.

ಅರವತ್ತೆಂಟನೆಯ ಸರ್ಗವು ಮುಗಿಯಿತು.

ಸಂದೇಹಗಳಿಗೂ ಅವಕಾಶವಾಗದ ರೀತಿಯಲ್ಲಿ ಲೌಕಿಕವಾದ ಮಾತನ್ನು ಇಲ್ಲಿ ಬಳಸಲಾಗಿದೆ. 'ನಿಮ್ಮ ಮಕ್ಕಳು ಜಯಿಸಿಬಿಟ್ಟರು ' ಎಂದು ಹೇಳಿ ಒಡನೆಯೇ ಜನಕನು ಮುಂದಿನ ಶ್ಲೋಕದಲ್ಲಿ ಮಕ್ಕಳಲ್ಲಿ ಯಾರು ಜಯಿಸಿದರೆಂಬ ವಿವರಣೆಯನ್ನೂ ಕೊಡುತ್ತಾನೆ. ಆದುದರಿಂದ ಈ ವಾಕ್ಯವು ಸಮಯಾನುಸಾರವಾಗಿ ಹೇಳಬೇಕಾದ ಲೌಕಿಕೋಕ್ತಿಯಾಗಿದೆ. ಅಥವಾ ಇಲ್ಲಿ ಬಹುವಚನಪ್ರಯೋಗವು ಆರ್ಷವೆಂದೂ ಸಮಾಧಾನ ಹೇಳಬಹುದು.

ಚತುರಂಗಬಲದೊಡನೆ ಮಿಥಿಲೆಗೆ ದಶರಥನ ಪ್ರಯಾಣ: ಜನಕನಿಂದ ಆದರದ ಸ್ವಾಗತ

ತತೋ ರಾತ್ರ್ಯಾಂ ವ್ಯತೀತಾಯಾಂ ಸೋಪಾಧ್ಯಾಯಃ ಸಬಾನ್ಧವಃ ।
ರಾಜಾ ದಶರಥೋ ಹೃಷ್ಟಃ ಸುಮನ್ತ್ರಮಿದಮಬ್ರವೀತ್ ॥೧॥

ರಾತ್ರಿಯು ಕಳೆಯಲಾಗಿ, (ಪ್ರಾತಃಕಾಲದಲ್ಲಿ ಮಾಡಬೇಕಾದ ಸಂಧ್ಯಾ ಕಾರ್ಯಗಳೆಲ್ಲವನ್ನೂ ಮುಗಿಸಿದನಂತರ) ಬಂಧು-ಅಮಾತ್ಯರುಗಳೊಡನೆ ಪರಮಸಂತುಷ್ಟನಾಗಿ ಕುಳಿತಿದ್ದ ದಶರಥನು ಸಾರಥಿಯಾದ ಸುಮಂತ್ರನಿಗೆ ಹೇಳಿದನು :

"ಸುಮಂತ್ರ! ನಮ್ಮ ಕೋಶಾಧ್ಯಕ್ಷರು ನಾನಾವಿಧವಾದ ಅಮೋಘ ರತ್ನಗಳನ್ನೂ, ಬೊಕ್ಕಸದಿಂದ ಯಥೇಚ್ಛವಾಗಿ ಹಣವನ್ನೂ ತೆಗೆದುಕೊಂಡು ತಕ್ಕ ರಕ್ಷಣೆಯನ್ನೂ ಮಾಡಿಕೊಂಡು ಮೊದಲು ಪ್ರಯಾಣಮಾಡಲಿ. ರಥ-ತುರಗ-ಹಸ್ತಿ-ಪದಾತಿಗಳಿಂದ ಕೂಡಿದ ಚತುರಂಗಬಲವೂ, ಶ್ರೇಷ್ಠವಾದ ಮೇನೆಗಳೂ, ರಥಾದಿವಾಹನಗಳೂ ನನ್ನ ಆಜ್ಞೆಯಂತೆ ಹೊರಡಲು ಸಿದ್ಧವಾಗಲಿ. ವಸಿಷ್ಠ, ವಾಮದೇವ, ಜಾಬಾಲಿ, ಕಾಶ್ಯಪ, ದೀರ್ಘಾಯುವಾದ ಮಾರ್ಕಂಡೇಯ, ಕಾತ್ಯಾಯನ–ಇವರುಗಳೇ ಮೊದಲಾದ ಬ್ರಾಹ್ಮಣರು ಮುಂದೆ ಪ್ರಯಾಣಮಾಡಲಿ. ಜನಕನಿಂದ ಕಳುಹಿಸಲ್ಪಟ್ಟಿರುವ ಮಂತ್ರಿಗಳೂ ಮತ್ತು ದೂತರೂ ನನ್ನನ್ನು ಅವಸರಪಡಿಸುತ್ತಿದ್ದಾರೆ. ಆದುದರಿಂದ ಕಾಲವು ಮೀರಿಹೋಗುವುದರೊಳಗಾಗಿ, ಮಿಥಿಲಾಪಟ್ಟಣವನ್ನು ತಲುಪಲು ಶಕ್ಯವಾಗುವಂತೆ ಉತ್ತಮವಾದ ರಥವನ್ನು ನನಗಾಗಿ ಸಿದ್ಧಪಡಿಸು."

ರಾಜಾಜ್ಞೆಯಂತೆ ಋಷಿ-ಪುರೋಹಿತರ ಸಮೇತವಾಗಿ ಮಿಥಿಲಾ ಪಟ್ಟಣಕ್ಕೆ ಪ್ರಯಾಣಹೊರಟಿದ್ದ ಚತುರಂಗಬಲವು ದಶರಥರಾಜನ ಹಿಂದೆ ಹೊರಟಿತು. ನಾಲ್ಕು ದಿನಗಳು ಪ್ರಯಾಣಮಾಡಿದನಂತರ ದಶರಥರಾಜನು ಪರಿವಾರಸಮೇತನಾಗಿ ಮಿಥಿಲಾಪಟ್ಟಣವನ್ನು ಸೇರಿದನು. ದಶರಥರಾಜನು ಬರುತ್ತಿರುವನೆಂಬ ವಾರ್ತೆಯನ್ನು ದೂತರಿಂದ ತಿಳಿದ, ಶ್ರೀಮಂತನಾದ

ಜನಕರಾಜನು ಅವರಿಗೆ ಅದ್ಭುತವಾದ ಸ್ವಾಗತವನ್ನು ನೀಡಲು ಮತ್ತು ಅವನನ್ನೂ, ಅವನ ಪರಿವಾರದವರನ್ನೂ ಯಥೋಚಿತವಾಗಿ ಸತ್ಕರಿಸಲು– ಪೂಜಾಸಂಭಾರಗಳನ್ನು ಸಿದ್ಧಪಡಿಸಿದನು. ಅರಮನೆಯನ್ನು ಪ್ರವೇಶಿಸಿದ ವೃದ್ಧನಾದ* ದಶರಥರಾಜನನ್ನು ಕಂಡು ಜನಕನು ಪರಮಾನಂದಭರಿತ ನಾದನು. ತನ್ನ ಆದರದ ಸ್ವಾಗತದಿಂದ ಹರ್ಷಿತನಾಗಿದ್ದ ದಶರಥನಿಗೆ ಜನಕರಾಜನು ಹೇಳಿದನು :

"ರಘುಕುಲಾವತಂಸ! ನಿನಗೆ ಆದರದ ಸ್ವಾಗತವು. ನಮ್ಮ ಭಾಗ್ಯ ವಿಶೇಷದಿಂದಾಗಿ ನೀನಿಂದು ನಮಗೆ ಪ್ರಾಪ್ತನಾಗಿರುವೆ. ನಿನ್ನ ಮಕ್ಕಳ ಶೌರ್ಯದಿಂದ ಜಯಿಸಿದ ತೃಪ್ತಿಯನ್ನು ನೀನು ಪಡೆಯಲಿರುವೆ. ಮಹಾ ತೇಜಸ್ವಿಗಳಾದ ಈ ವಸಿಷ್ಠರೂ–ದೇವತೆಗಳಿಂದ ಕೂಡಿದ ಇಂದ್ರನೋಪಾದಿ ಯಲ್ಲಿ ಋಷಿಶ್ರೇಷ್ಠರುರಿಂದಲೂ, ಬ್ರಾಹ್ಮಣಶ್ರೇಷ್ಠರಿಂದಲೂ ಪರಿವೃತರಾಗಿ ನನ್ನ ಭಾಗ್ಯವಿಶೇಷದಿಂದಲೇ ಇಲ್ಲಿಗೆ ಆಗಮಿಸಿರುತ್ತಾರೆ. ನಿಶ್ಚಯವಾಗಿಯೂ ಇಂದು ನಿಮ್ಮ ದರ್ಶನದ ಫಲವಾಗಿ ವಿಘ್ನಗಳೆಲ್ಲವೂ ದೂರವಾದುವು. ಮಹಾತ್ಮರಾದ, ಮಹಾಪರಾಕ್ರಮಿಗಳಾದ ರಘುವಂಶಪ್ರದೀಪರುಗಳೊಡನೆ ನಾನು ಮಾಡಲಿರುವ ವಿವಾಹಸಂಬಂಧದಿಂದಾಗಿ ನಮ್ಮ ವಂಶವು ಪುರಸ್ಕೃತ ವಾಯಿತು. ಮಹಾರಾಜ! ನಾಳೆಯ ದಿನ ಪ್ರಾತಃಕಾಲ ಈ ವಿವಾಹವನ್ನು ನೀನು ನಡೆಸಿಕೊಡುವುದು ಸಾಧುವಾಗಿದೆ. ಯಜ್ಞವು ಮುಗಿದನಂತರ ವಿವಾಹಮಾಡುವುದು ಋಷಿಸಮ್ಮತವೂ ಆಗಿರುವುದು."

ಜನಕರಾಜನ ಆ ಮಾತುಗಳನ್ನು ಕೇಳಿ ಋಷಿಗಳ ಮಧ್ಯದಲ್ಲಿ ಕುಳಿತಿದ್ದ ವಾಕ್ಯವಿಶಾರದನಾದ ದಶರಥನು ಮಹೀಪತಿಯಾದ ಜನಕನಿಗೆ ಹೇಳಿದನು :

"ಜನಕರಾಜ! ಕನ್ಯಾ-ಗೋವು ಮುಂತಾದುವುಗಳ ಪ್ರತಿಗ್ರಹವು ದಾನಕೊಡುವವನ ಅಧೀನದಲ್ಲಿರತಕ್ಕುವುಗಳೆಂಬ ಆರ್ಯೋಕ್ತಿಯನ್ನು ನಾನು ಈ ಹಿಂದೆ ಕೇಳಿದ್ದೇನೆ. ಆದುದರಿಂದ ಕನ್ಯಾದಾತೃವಾದ ಧರ್ಮಜ್ಞ ನಾದ ನೀನು ಹೇಗೆ ಹೇಳುವೆಯೋ ಅದರಂತೆ ನಡೆಯಲು ನಾವು ಸಿದ್ಧರಿ

---

* ವೃದ್ಧಂ–ಎಂಬುದಕ್ಕೆ ಒಬ್ಬ ವ್ಯಾಖ್ಯಾನಕಾರರು– 'ವಿಲಕ್ಷಣೈಶ್ವರ್ಯವತ್ತ್ವಾದಿನಾ ವೃದ್ಧಿಂ ಪ್ರಾಪ್ತಂ'–ವಿಲಕ್ಷಣವಾದ ಐಶ್ವರ್ಯಪ್ರಾಪ್ತಿಯಿಂದ ಅಭಿವೃದ್ಧಿಯನ್ನು ಹೊಂದಿದವನು–ಎಂದು ಅರ್ಥಮಾಡಿದ್ದಾರೆ.

ದ್ದೇವೆ.” ಸತ್ಯವಾದಿಯಾದ ದಶರಥನ ಧರ್ಮಮೂಲವಾದ ಮತ್ತು ಯಶೋದಾಯಕವಾದ ಮಾತುಗಳನ್ನು ಕೇಳಿ, ವಿದೇಹಾಧಿಪತಿಯಾದ ಜನಕನು ವಿಸ್ಮಯಗೊಂಡನು. (ಶ್ರೀರಾಮನು ಸ್ವಪರಾಕ್ರಮದಿಂದ ವೀರ್ಯ ಶುಲ್ಕಳಾದ ಸೀತೆಯನ್ನು ಪಡೆದಿದ್ದರೂ–'ಪ್ರತಿಗ್ರಹವು ದಾತೃವಶ'–ಎಂಬ ವಿನಯಪೂರ್ಣವಾದ ಮಾತನ್ನು ದಶರಥನು ಹೇಳಿದುದಕ್ಕಾಗಿ ಜನಕನಿಗೆ ಬಹಳ ಆಶ್ಚರ್ಯವಾಯಿತು.) ಪರಸ್ಪರಸಮಾಗಮದಿಂದ ಪರಮಹರ್ಷಿತ ರಾದ ಋಷಿಗಳು ಆ ರಾತ್ರಿಯನ್ನು ಸುಖವಾಗಿ ಕಳೆದರು. ಬಳಿಕ ರಾಮನು ಲಕ್ಷ್ಮಣನೊಡನೆ ವಿಶ್ವಾಮಿತ್ರರನ್ನು ಮುಂದುಮಾಡಿಕೊಂಡು ದಶರಥನಿದ್ದೆಡೆಗೆ ಬಂದು, ಅವನ ಎರಡು ಕಾಲುಗಳನ್ನೂ ಮುಟ್ಟಿ ನಮಸ್ಕರಿಸಿದನು. ದಶರಥನೂ ಕಾಂತಿಮಂತರಾದ ತನ್ನ ಇಬ್ಬರು ಮಕ್ಕಳನ್ನೂ ಕಂಡು ಪರಮ ಸಂತುಷ್ಟನಾದನು. ಜನಕನಿಂದ ಸತ್ಕೃತನಾದ ದಶರಥನು ಪರಮಪ್ರೀತನಾಗಿ ಆ ರಾತ್ರಿಯನ್ನು ಸುಖದಿಂದ ಕಳೆದನು. ಮಹಾತೇಜಸ್ವಿಯಾದ, ತತ್ತ್ವವಿದ ನಾದ ಜನಕನು ಅಂದಿನ ಯಜ್ಞಕ್ರಿಯೆಯನ್ನು ಯಥಾವಿಧಿಯಾಗಿ ಮುಗಿಸಿ ಹೆಣ್ಣುಮಕ್ಕಳ ಮದುವೆಯ ಪೂರ್ವಾಂಗವಾಗಿ ಮಾಡಬೇಕಾಗಿದ್ದ ಅಂಕು ರಾರ್ಪಣ-ರಕ್ಷಾಬಂಧನಾದಿಗಳನ್ನು ಧರ್ಮವಿಹಿತವಾದ, ಶಾಸ್ತ್ರವಿಹಿತವಾದ ಮತ್ತು ಆಚಾರವಿಹಿತವಾದ ರೀತಿಯಲ್ಲಿ ಮಾಡಿ ಆ ರಾತ್ರಿಯನ್ನು ಸುಖದಿಂದ ಕಳೆದನು.

೬೯ನೆಯ ಸರ್ಗವು ಮುಗಿಯಿತು.

ಬಾಲಕಾಂಡ ೭೦ನೆಯ ಸರ್ಗ

ಜನಕರಾಜನು ಸಾಂಕಾಶ್ಯಾನಗರಿಯಿಂದ ತನ್ನ ತಮ್ಮನನ್ನು ಕರೆಸಿದುದು : ವಸಿಷ್ಠರು ಸೂರ್ಯವಂಶದವರ ಪರಿಚಯವನ್ನು ಮಾಡಿಕೊಟ್ಟುದು : ಸೀತೆಯನ್ನು ರಾಮನಿಗೂ ಊರ್ಮಿಳೆಯನ್ನು ಲಕ್ಷ್ಮಣನಿಗೂ ವಸಿಷ್ಠರು ವರಣಮಾಡಿದುದು

ತತಃ ಪ್ರಭಾತೇ ಜನಕಃ ಕೃತಕರ್ಮಾ ಮಹರ್ಷಿಭಿಃ ।
ಉವಾಚ ವಾಕ್ಯಂ ವಾಕ್ಯಜ್ಞಃ ಶತಾನನ್ದಂ ಪುರೋಹಿತಮ್ ॥೧॥

ಸುಪ್ರಭಾತವಾಯಿತು. ಮಹರ್ಷಿಗಳಿಂದ ನಿರ್ದೇಶಿತವಾದ ರೀತಿ

ಯಲ್ಲಿ ವಾಕ್ಯಜ್ಞನಾದ ಜನಕರಾಜನು ಯಜ್ಞದ ಪ್ರಾತಃಕ್ರಿಯೆಗಳನ್ನು ಮುಗಿಸಿ ಪುರೋಹಿತರಾದ ಶತಾನಂದರಿಗೆ ಹೇಳಿದನು :

"ಶತಾನಂದರೇ! ಕುಶಧ್ವಜನೆಂಬ ಹೆಸರಿನಿಂದ ವಿಖ್ಯಾತನಾಗಿರುವ ನನ್ನ ತಮ್ಮನು ಮಹಾಪರಾಕ್ರಮಿಯೂ, ಪರಮಧಾರ್ಮಿಕನೂ ಆಗಿರುವನು. ಪುಷ್ಪಕವಿಮಾನದಂತೆ ಅತಿಸುಂದರವಾಗಿರುವ, ಪುಣ್ಯಸದೃಶವಾಗಿರುವ ಸಾಂಕಾಶ್ಯವೆಂಬ ಪಟ್ಟಣದಲ್ಲಿ ಕೋಟೆಯ ಗೋಡೆಯವರೆಗಿರುವ ಇಕ್ಷುಮತೀ ನದಿಯ ಶುಭಜಲವನ್ನು ಪಾನಮಾಡುತ್ತಾ ವಾಸಮಾಡುತ್ತಿರುವನು. ಪೂಜ್ಯರೇ! ಅವನು ಸಾಂಕಾಶ್ಯಾನಗರಿಯಲ್ಲಿಯೇ ಇದ್ದು ನಾನು ಮಾಡುವ ಯಜ್ಞಕ್ಕೆ ಬೇಕಾದ ಸಾಮಗ್ರಿಗಳೆಲ್ಲವನ್ನೂ ಕಳುಹಿಸುತ್ತಾ, ಯಜ್ಞದ ರಕ್ಷಕನೂ ಆಗಿರುತ್ತಾನೆ. ಅವನೂ ಸೀತಾ-ರಾಮರ ವಿವಾಹದರ್ಶನದ ಆನಂದವನ್ನು ಅನುಭವಿಸಬೇಕೆಂಬುದು ನನ್ನ ಇಚ್ಛೆಯಾಗಿದೆ. ಆದುದರಿಂದ ಅವನನ್ನು ಈ ಕೂಡಲೇ ನೋಡುವ ಅಭಿಲಾಷೆಯುಳ್ಳವನಾಗಿದ್ದೇನೆ."

ಜನಕನು ಶತಾನಂದರೊಡನೆ ಹೀಗೆ ಹೇಳುತ್ತಿರುವ ವೇಳೆಗೆ ಸರಿಯಾಗಿ ಸಮರ್ಥರಾದ, ಕಾರ್ಯತತ್ಪರರಾದ ರಾಜಭಟರು ಜನಕರಾಜನ ಸಮೀಪಕ್ಕೆ ಬಂದರು. ಜನಕನು ತನ್ನ ತಮ್ಮನಾದ ಕುಶಧ್ವಜನನ್ನು ಕರೆತರುವಂತೆ ಅವರಿಗೆ ಆಜ್ಞಾಪಿಸಿದನು. ಇಂದ್ರನ ಆಜ್ಞಾನುಸಾರವಾಗಿ ಅವನ ಅನುಜನಾದ ವಿಷ್ಣು ವನ್ನು ಕರೆತರಲು ದೇವದೂತರು ತೆರಳುವಂತೆ–ಜನಕರಾಜನ ಆಜ್ಞಾನು ಸಾರವಾಗಿ ರಾಜಭಟರು ಕುಶಧ್ವಜನನ್ನು ಕರೆತರುವ ಸಲುವಾಗಿ ಶೀಘ್ರಗತಿ ಯುಳ್ಳ ಕುದುರೆಗಳನ್ನೇರಿ ಸಾಂಕಾಶ್ಯಾನಗರಿಗೆ ಪ್ರಯಾಣಮಾಡಿದರು. ಅವರು ಬಹುಶೀಘ್ರವಾಗಿ ನಗರಿಗೆ ಹೋಗಿ, ಕುಶಧ್ವಜನನ್ನು ಸಂದರ್ಶಿಸಿ, ಜನಕನು ಹೇಳಿದ ಮಾತುಗಳನ್ನೂ ಮತ್ತು ಜನಕನ ಮನೋಭಿಪ್ರಾಯವನ್ನೂ ಅವನಿಗೆ ನಿವೇದಿಸಿದರು. ಮಹಾಬಲರಾದ ದೂತಶ್ರೇಷ್ಠರಿಂದ ಸೀತಾ-ರಾಮರ ವಿವಾಹವಿಷಯವನ್ನು ಕೇಳಿ, ಅಣ್ಣನಾದ ಜನಕನ ಆಜ್ಞಾನುಸಾರವಾಗಿ ಕುಶ ಧ್ವಜನು ಒಡನೆಯೇ ಮಿಥಿಲಾಪಟ್ಟಣಕ್ಕೆ ಆಗಮಿಸಿದನು. ಜನಕರಾಜನ ಅರಮನೆಯನ್ನು ಪ್ರವೇಶಿಸಿದ ಕುಶಧ್ವಜನು ಸಿಂಹಾಸನಾರೂಢನಾಗಿದ್ದ, ಮಹಾತ್ಮನಾದ, ಭಕ್ತವತ್ಸಲನಾದ ಜನಕನನ್ನೂ ಮತ್ತು ಸಮೀಪದಲ್ಲಿಯೇ

ಕುಳಿತಿದ್ದ ಪುರೋಹಿತರಾದ ಶತಾನಂದರನ್ನೂ ಕಂಡು ಮೊದಲು ಶತಾನಂದರಿಗೂ–ಅನಂತರ ಪೂಜ್ಯನಾದ ಜನಕನಿಗೂ ಅಭಿವಾದನಪೂರ್ವಕವಾಗಿ ನಮಸ್ಕರಿಸಿ, ಜನಕರಾಜನ ಸಿಂಹಾಸನದ ಸಮೀಪದಲ್ಲಿದ್ದ, ರಾಜಯೋಗ್ಯವಾದ ದಿವ್ಯಸಿಂಹಾಸನದಲ್ಲಿ ಕುಳಿತನು. ಮಹಾತೇಜಸ್ವಿಗಳಾದ ಆ ಇಬ್ಬರು ಸಹೋದರರೂ ಸಿಂಹಾಸನಾಧಿರೂಢರಾಗಿ ಮಂತ್ರಿಶ್ರೇಷ್ಠನಾದ ಸುದಾಮನಿಗೆ ಹೇಳಿದರು :

"ಮಹಾಮಾತ್ಯ! ನೀನೀಗಲೇ ಇಕ್ಷ್ವಾಕುಕುಲಾವತಂಸನಾದ, ಅಮಿತ ತೇಜೋವಿಶಿಷ್ಟನಾದ ದಶರಥರಾಜನ ಬಳಿಗೆ ಹೋಗಿ, ಅಮಾತ್ಯ-ಪುತ್ರ ಸಮೇತನಾದ ರಾಜನನ್ನು ಕರೆದುಕೊಂಡು ಬಾ."

ರಾಜನ ಆಜ್ಞಾನುಸಾರವಾಗಿ ಸುದಾಮನು ಒಡನೆಯೇ ದಶರಥನ ಬಿಡಾರಕ್ಕೆ ಹೋಗಿ, ಅಲ್ಲಿ ರಘುಕುಲವರ್ಧನನಾದ ದಶರಥರಾಜನನ್ನು ಸಂದರ್ಶಿಸಿ, ತಲೆಬಾಗಿ ನಮಸ್ಕರಿಸಿ ಹೇಳಿದನು :

"ಅಯೋಧ್ಯಾಧಿಪತಿಯೇ! ವೀರಶ್ರೇಷ್ಠನೇ! ಮಿಥಿಲಾಧಿಪತಿಯಾದ ಜನಕನು ಉಪಾಧ್ಯಾಯ-ಪುರೋಹಿತ-ಪುತ್ರಸಮೇತನಾದ ನಿನ್ನನ್ನು ಈಗಲೇ ನೋಡಲು ಬಯಸಿರುತ್ತಾನೆ."

ಮಹಾಮಾತ್ಯನ ಆ ಮಾತುಗಳನ್ನು ಕೇಳಿ ದಶರಥರಾಜನು ಬಂಧುಗಳಿಂದಲೂ, ಋಷಿ-ಪುರೋಹಿತರುಗಳಿಂದಲೂ ಕೂಡಿ ಜನಕನಿದ್ದಲ್ಲಿಗೆ ಆಗಮಿಸಿದನು. ಉಪಾಧ್ಯಾಯ-ಬಂಧು-ಪುರೋಹಿತ-ಮಂತ್ರಿಸಹಿತನಾದ, ವಾಕ್ಯವಿಶಾರದನಾದ ದಶರಥನು ಜನಕರಾಜನಿಂದ ಆದರದ ಸ್ವಾಗತವನ್ನು ಪಡೆದು ಉಚಿತಾಸನದಲ್ಲಿ ಕುಳಿತು, ವಿದೇಹಾಧಿಪತಿಯಾದ ಜನಕನಿಗೆ ಹೇಳಿದನು :

"ಮಹಾರಾಜ! ಇಕ್ಷ್ವಾಕುವಂಶಕ್ಕೆ ದೇವತಾಸ್ವರೂಪರೂ, ಸರ್ವಕಾರ್ಯಗಳ ವಕ್ತಾರರೂ ಮತ್ತು ನಿರ್ಧಾರಕರೂ–ಪೂಜ್ಯರಾದ ಬ್ರಹ್ಮರ್ಷಿಗಳಾದ ವಸಿಷ್ಠರೆಂಬುದು ನಿನಗೆ ತಿಳಿದ ವಿಷಯವೇ ಆಗಿರುವುದು. ವಿಶ್ವಾಮಿತ್ರರ ಅನುಜ್ಞೆಯನ್ನೂ ಪಡೆದು ಇಲ್ಲಿ ನೆರೆದಿರುವ ಮಹರ್ಷಿಗಳೊಡ

ಗೂಡಿ ಧರ್ಮಾತ್ಮರಾದ ವಸಿಷ್ಠರು ನನ್ನ ವಂಶಾವಳಿಯನ್ನು ಯಥಾಕ್ರಮವಾಗಿ ಹೇಳುತ್ತಾರೆ."

ದಶರಥನು ಹೀಗೆ ಹೇಳಿ ಮೌನವನ್ನು ಧರಿಸಿ ಕುಳಿತುಕೊಳ್ಳಲು, ವಾಕ್ಯಜ್ಞರಾದ ವಸಿಷ್ಠಮಹರ್ಷಿಗಳು ಶತಾನಂದರೊಡನೆ ಕುಳಿತಿದ್ದ ಜನಕ ರಾಜನಿಗೆ ಹೇಳಿದರು :

"ಜನಕರಾಜ! ಬ್ರಹ್ಮನು ಜನ್ಮ-ಮೃತ್ಯು-ಜರಾರಹಿತನು. ಅವನು ಯಾವಾಗ-ಎಲ್ಲಿ-ಹೇಗೆ ಹುಟ್ಟಿದನೆಂಬುದು ಯಾರಿಗೂ ತಿಳಿಯದು. ಅವನ ಅವಸಾನವನ್ನೂ ಯಾರೂ ಕಂಡಿರುವುದಿಲ್ಲ. ಆದುದರಿಂದ ಅವನು ಶಾಶ್ವ ತನೂ, ನಿತ್ಯನೂ, ಕ್ಷಯರಹಿತನೂ ಆಗಿದ್ದಾನೆ. ಅಂತಹ ತತ್ತ್ವಮಯನಾದ ಬ್ರಹ್ಮನಿಂದ ಮರೀಚಿಯು ಹುಟ್ಟಿದನು. ಕಶ್ಯಪನು ಮರೀಚಿಯ ಮಗ. ಕಶ್ಯಪನಿಂದ ವಿವಸ್ವಂತನು ಹುಟ್ಟಿದನು. ಸುಪ್ರಸಿದ್ಧನಾದ ಮನುವು ವಿವ ಸ್ವಂತನ ಮಗ. ಮನುವು ಪ್ರಜಾಪತಿಯೂ ಆಗಿದ್ದನು. ಮನುಪ್ರಜಾಪತಿಗೆ ಇಕ್ಷ್ವಾಕುವೆಂಬ ಮಗನು ಹುಟ್ಟಿದನು. ಆ ಇಕ್ಷ್ವಾಕುವೇ ಅಯೋಧ್ಯೆಗೆ ಮೊದಲನೆಯ ರಾಜನಾಗಿದ್ದನು. ಕುಕ್ಷಿಯೆಂಬ ಸುಪ್ರಸಿದ್ಧನಾದ ಮಗನು ಇಕ್ಷ್ವಾಕುವಿಗೆ ಹುಟ್ಟಿದನು. ಶ್ರೀಮಂತನಾದ ವಿಕುಕ್ಷಿಯು ಕುಕ್ಷಿಯ ಮಗ. ವಿಕುಕ್ಷಿಗೆ ಮಹಾಪ್ರತಾಪಶಾಲಿಯಾದ ಬಾಣನೆಂಬ ಮಗನು ಹುಟ್ಟಿದನು. ಮಹಾಪರಾಕ್ರಮಿಯಾದ ಮತ್ತು ಮಹಾತೇಜಸ್ವಿಯಾದ ಅನರಣ್ಯನು ಬಾಣ ರಾಜನ ಮಗನು. ಅನರಣ್ಯರಾಜನಿಗೆ ಪೃಥುವೆಂಬ ಮಗನು ಹುಟ್ಟಿದನು. ಸುಪ್ರಸಿದ್ಧನಾದ ತ್ರಿಶಂಕುವು ಪೃಥುಚಕ್ರವರ್ತಿಯ ಮಗ. ತ್ರಿಶಂಕುವಿಗೆ ಯಶೋವಂತನಾದ ದುಂಧುಮಾರನೆಂಬ ಮಗನು ಹುಟ್ಟಿದನು. ಮಹಾರಥ ನಾದ ಯುವನಾಶ್ವನು ಮಹಾತೇಜಸ್ವಿಯಾದ ದುಂಧುಮಾರನ ಮಗ. ಪೃಥಿವೀವಲ್ಲಭನಾದ ಶ್ರೀಮಂತನಾದ ಮಾಂಧಾತನು ಯುವನಾಶ್ವನ ಮಗ. ಶ್ರೀಮಂತನಾದ ಮಾಂಧಾತನಿಗೆ ಸುಸಂಧಿ ಎಂಬ ಮಗನು ಹುಟ್ಟಿದನು. ಸುಸಂಧಿಗೆ ಧ್ರುವಸಂಧಿ, ಪ್ರಸೇನಜಿತ್ ಎಂಬ ಇಬ್ಬರು ಮಕ್ಕಳು ಹುಟ್ಟಿದರು. ಧ್ರುವಸಂಧಿಗೆ ಭರತನೆಂಬ ಯಶೋವಂತನಾದ ಮಗನು ಹುಟ್ಟಿದನು. ಭರತನಿಗೆ ಅಸಿತನೆಂಬ ಮಹಾತೇಜಸ್ವಿಯಾದ ಮಗನು ಹುಟ್ಟಿದನು.

ಅಸಿತರಾಜನಿಗೆ ಹೈಹಯರು, ತಾಲಜಂಘರು, ಶೂರರಾದ ಶಶಿಬಿಂದುಗಳು ಇವರೆಲ್ಲರೂ ಶತ್ರುಗಳಾದರು. ಅಸಿತನು ಅವರೊಡನೆ ಯುದ್ಧದಲ್ಲಿ ಸೋತು ದೇಶಭ್ರಷ್ಟನಾದನು. ಅಳಿದುಳಿದಿದ್ದ ಅಲ್ಪಬಲದೊಡನೆ ಮತ್ತು ತನ್ನ ಇಬ್ಬರು ಭಾರ್ಯೆಯರೊಡನೆ ಅಸಿತನು ಹಿಮವತ್ಪರ್ವತಕ್ಕೆ ಹೋಗಿ ಸ್ವಲ್ಪಕಾಲ ದಲ್ಲಿಯೇ ಅವಸಾನಹೊಂದಿದನು. ಅವನು ಮರಣಹೊಂದುವ ವೇಳೆಗೆ ಅವನ ಇಬ್ಬರು ಭಾರ್ಯೆಯರೂ ಗರ್ಭವತಿಯರಾಗಿದ್ದರೆಂಬ ವಿಷಯವನ್ನು ಕೇಳಿದ್ದೇವೆ. ಅವರಲ್ಲೊಬ್ಬಳು ತನ್ನ ಸವತಿಯ ಗರ್ಭವನ್ನು ನಾಶಮಾಡ ಬೇಕೆಂಬ ದುರಾಶಯದಿಂದ ಸವತಿಗೆ ವಿಷಪೂರಿತವಾದ ಆಹಾರವನ್ನಿತ್ತಳು. ಅದೇ ಸಮಯದಲ್ಲಿ ನಿತ್ಯತುಷ್ಟನಾದ, ಭೃಗುವಂಶಸಂಭೂತನಾದ ಚ್ಯವನ ನೆಂಬ ಮಹರ್ಷಿಯು ಆ ರಮ್ಯವಾದ ಹಿಮವತ್ಪರ್ವತದ ಶಿಖರದಲ್ಲಿ ತಪಸ್ಸನ್ನು ಮಾಡುತ್ತಿದ್ದನು. ವಿಷಾಹಾರವನ್ನು ಭಕ್ಷಿಸಿದ ಪರಮಭಾಗ್ಯವತಿಯಾದ, ಪದ್ಮದಳಲೋಚನೆಯಾದ ಅಸಿತರಾಜನ ಪತ್ನಿಯು ಉತ್ತಮಪುತ್ರನನ್ನು ಪಡೆಯುವ ಸಲುವಾಗಿ, ದೇವತೆಗಳ ತೇಜಸ್ಸಿನಂತೆ ಪರಮಾದ್ಭುತವಾದ ತೇಜಸ್ಸಿನಿಂದ ಕಂಗೊಳಿಸುತ್ತಿದ್ದ, ಭೃಗುವಂಶಜನಾದ ಚ್ಯವನ ಮಹರ್ಷಿಗೆ ವಿನಯಪೂರ್ವಕವಾಗಿ ನಮಸ್ಕರಿಸಿದಳು. ಕಾಲಿಂದಿಯೆಂಬ ಆ ರಾಜಕುಮಾರಿಯು ಮಹರ್ಷಿಯನ್ನು ಕೆಲವು ದಿನಗಳವರೆಗೆ ಶುಶ್ರೂಷಿ ಸುತ್ತಲೂ ಇದ್ದಳು. ಭಕ್ತಿಪೂರ್ವಕವಾಗಿ ಶುಶ್ರೂಷೆಮಾಡುತ್ತಲಿದ್ದ ಕಾಲಿಂದಿಗೆ ಚ್ಯವನಮಹರ್ಷಿಯು ಮಗನ ಉತ್ಪತ್ತಿಯ ರಹಸ್ಯವನ್ನು ಹೇಳಿದನು :

"ಕಮಲನೇತ್ರಳೇ! ನಿನ್ನ ಹೊಟ್ಟೆಯಲ್ಲಿ ಮಹಾವೀರ್ಯದಿಂದಲೂ, ಮಹಾಯಶಸ್ಸಿನಿಂದಲೂ, ಮಹಾತೇಜಸ್ಸಿನಿಂದಲೂ, ಕಾಂತಿಯಿಂದಲೂ ಕೂಡಿರುವ ಗಂಡುಮಗುವು ಗರ (ವಿಷ) ಸಹಿತವಾಗಿ ಅತ್ಯಲ್ಪಕಾಲದಲ್ಲಿಯೇ ಜನಿಸುವುದು. ನೀನಿನ್ನು ದುಃಖಿಸಬೇಡ."

ಬಳಿಕ ಕಾಲಿಂದಿಯು ಚ್ಯವನ ಮಹರ್ಷಿಗೆ ನಮಸ್ಕರಿಸಿ ತಾನಿದ್ದ ಆಶ್ರ ಮಕ್ಕೆ ಹೊರಟುಹೋದಳು. ಪತಿಯ ಅಗಲುವಿಕೆಯಿಂದ ಪರಮದುಃಖಿತೆ ಯಾಗಿದ್ದ ಅವಳು ಚ್ಯವನರ ಅನುಗ್ರಹದಿಂದಾಗಿ ಅತ್ಯಲ್ಪಕಾಲದಲ್ಲಿಯೇ ಗಂಡುಮಗುವನ್ನು ಪ್ರಸವಿಸಿದಳು. ಹಿಂದೆ ಹೇಳಿದಂತೆ ಕಾಲಿಂದಿಯ

ಸವತಿಯು ಗರ್ಭವಿನಾಶಕ್ಕಾಗಿ ಆಹಾರದಲ್ಲಿ ವಿಷವಿಟ್ಟು ಕಾಲಿಂದಿಗೆ ಕೊಟ್ಟಿದ್ದಳು. ಆದರೆ ಚ್ಯವನರ ಅನುಗ್ರಹದಿಂದಾಗಿ ಕಾಲಿಂದಿಯ ಹೊಟ್ಟೆಯೊಳಗಿದ್ದ ಶಿಶುವು ಆ ವಿಷದಿಂದ ಸತ್ತುಹೋಗದೇ ಗರದ (ವಿಷದ) ಜೊತೆಯಲ್ಲಿಯೇ ಹುಟ್ಟಿದುದರಿಂದ ಶಿಶುವಿಗೆ ಸಗರನೆಂದೇ ನಾಮಕರಣಮಾಡಿದರು. ಮಹಾನುಭಾವನಾದ ಸಗರನಿಗೆ ಅಸಮಂಜನೆಂಬ ಮಗನು ಹುಟ್ಟಿದನು. ಅಸಮಂಜನ ಮಗನ ಹೆಸರು ಅಂಶುಮಂತ. ಅಂಶುಮಂತನ ಮಗ ದಿಲೀಪ. ದಿಲೀಪನ ಮಗ ಸುಪ್ರಸಿದ್ಧನಾದ ಭಗೀರಥ. ಭಗೀರಥನಿಗೆ ಕಕುತ್ಸ್ಥನೆಂಬ ಮಗನು ಹುಟ್ಟಿದನು. ಕಕುತ್ಸ್ಥನ ಮಗ ರಘು ಎಂಬುವನು. ರಘುವಿಗೆ ಮಹಾತೇಜಸ್ವಿಯಾದ ಪ್ರವೃದ್ಧನೆಂಬ ಮಗನು ಹುಟ್ಟಿದನು. ಆದರೆ ಮುಂದೆ ಅವನು ವಸಿಷ್ಠರ ಶಾಪದಿಂದ ಕಲ್ಮಾಷಪಾದನೆಂದು ಹೆಸರುಹೊಂದಿ ನರಮಾಂಸ ಭಕ್ಷಕನಾದನು.* ಪ್ರವೃದ್ಧನಿಗೆ ಶಂಖಣನೆಂಬ ಮಗನು ಹುಟ್ಟಿದನು. ಸುದರ್ಶನನು ಶಂಖಣನ ಮಗ. ಸುದರ್ಶನನ ಮಗ ಅಗ್ನಿವರ್ಣನೆಂಬುವನು. ಅಗ್ನಿವರ್ಣನ ಮಗ ಶೀಘ್ರಗ. ಶೀಘ್ರಗನ ಮಗ ಮರು ಎಂಬುವನು. ಪ್ರಶುಶ್ರುಕನೆಂಬುವನು ಮರುವಿನ ಮಗ. ಪ್ರಶುಶ್ರುಕನ ಮಗನೇ ಸುಪ್ರಸಿದ್ಧನಾದ ಅಂಬರೀಷನು. ನಹುಷನು ಅಂಬರೀಷನ ಮಗ. ಮಹೀಪತಿಯಾದ ನಹುಷನಿಗೆ ಯಯಾತಿ ಎಂಬ ಮಗನು ಹುಟ್ಟಿದನು. ನಾಭಾಗನು ಯಯಾತಿಯ ಮಗ. ನಾಭಾಗನಿಗೆ ಅಜನೆಂಬ ಮಗನು ಹುಟ್ಟಿದನು. ಮಹಾನುಭಾವನಾದ ಅಜನೇ ಈ ದಶರಥರಾಜನ ತಂದೆ. ಈ ರಾಮ- ಲಕ್ಷ್ಮಣರು ದಶರಥನ

ಇದರ ಸಂಬಂಧವಾದ ಕಥೆಯು ಈ ರೀತಿಯಾಗಿರುವುದು. ವಸಿಷ್ಠರು ಪ್ರವೃದ್ಧನಿಗೆ ಅವನು ಮಾಡಿದ ಅಪರಾಧಕ್ಕಾಗಿ ಪುರುಷಾದ (ರಾಕ್ಷಸ) ನಾಗೆಂದು ಶಾಪವಿತ್ತರು. ಕುಪಿತನಾದ ಪ್ರವೃದ್ಧನು ತನ್ನ ಸಮೀಪದಲ್ಲಿದ್ದ ಕಮಂಡಲುವಿನಲ್ಲಿದ್ದ ನೀರನ್ನು ಕೈಗೆ ಸುರಿದುಕೊಂಡು ಬ್ರಹ್ಮರ್ಷಿಗಳಿಗೆ ಪ್ರತಿಶಾಪಕೊಡಲು ಹೊರಟನು. ಪಕ್ಕದಲ್ಲಿದ್ದ ಅವನ ಪತ್ನಿಯು ಬ್ರಾಹ್ಮಣನಿಗೆ ಶಾಪಕೊಡಬಾರದೆಂದು ಅಂಗಲಾಚಿ ಬೇಡಿದಳು. ಅವಳ ಪ್ರಾರ್ಥನಗೆ ಮನ್ನಣೆಯಿತ್ತು ಪ್ರವೃದ್ಧನು ಕೈಯಲ್ಲಿದ್ದ ನೀರನ್ನು ತನ್ನ ಕಾಲಿನ ಮೇಲೆಯೇ ಬಿಟ್ಟುಕೊಂಡನು. ಅದರಿಂದಾಗಿ ಅವನ ಪಾದಗಳು ಕಲ್ಮಾಷವಾದುವು. (ನೀರು ಬಿದ್ದ ಸ್ಥಳವು ಕಪ್ಪಾಗಿ, ಅವನ ಕಾಲು ಕಪ್ಪು ಮತ್ತು ಬಿಳುಪಾಗಿ ಕಾಣುತ್ತಿದ್ದಿತು.) ಅಂದಿನಿಂದ ಅವನಿಗೆ ಕಲ್ಮಾಷಪಾದನೆಂದೇ ಹೆಸರಾಯಿತು.

ಮಕ್ಕಳು. ಬ್ರಹ್ಮನ ಮೊದಲ್ಗೊಂಡು ಈ ವಂಶದವರು ಪರಿಶುದ್ಧರೂ : ಪವಿತ್ರಾತ್ಮರೂ ; ಸತ್ಯವಾದಿಗಳೂ. ರಾಮ-ಲಕ್ಷ್ಮಣರು ಇಂತಹ ಪರಮಪಾವನವಾದ ಇಕ್ಷ್ವಾಕುವಂಶದಲ್ಲಿ ಹುಟ್ಟಿರುವರು. ಸದೃಶರೂಪರಾದ, ಸದೃಶ ಪರಾಕ್ರಮವುಳ್ಳ ರಾಮ-ಲಕ್ಷ್ಮಣರ ಸಲುವಾಗಿ ಅವರಿಗೆ ಅನುರೂಪರಾದ ನಿನ್ನ ಹೆಣ್ಣುಮಕ್ಕಳನ್ನು ಕೇಳುತ್ತೇನೆ. ನೀನೂ ನಿನ್ನ ಹೆಣ್ಣುಮಕ್ಕಳನ್ನು ಇವರಿಗೆ ಕೊಟ್ಟು ಮದುವೆಮಾಡುವುದು ಯೋಗ್ಯವಾಗಿದೆ.”

೭೦ನೆಯ ಸರ್ಗವು ಮುಗಿಯಿತು.

ಬಾಲಕಾಂಡ ೭೧ನೆಯ ಸರ್ಗ

ಜನಕನು ತನ್ನ ವಂಶವನ್ನು ಪರಿಚಯಮಾಡಿಕೊಟ್ಟುದು: ಶ್ರೀರಾಮನಿಗೆ ಸೀತೆಯನ್ನೂ ಲಕ್ಷ್ಮಣನಿಗೆ ಊರ್ಮಿಳೆಯನ್ನೂ ಮದುವೆಮಾಡಿಕೊಡುವುದಾಗಿ ಮಾತುಕೊಟ್ಟುದು

ಏವಂ ಬ್ರುವಾಣಂ ಜನಕಃ ಪ್ರತ್ಯುವಾಚ ಕೃತಾಞ್ಜಲಿಃ ।
ಶ್ರೋತುಮರ್ಹಸಿ ಭದ್ರಂ ತೇ ಕುಲಂ ನಃ ಪರಿಕೀರ್ತಿತಮ್ ॥೧॥

ವಸಿಷ್ಠರು ಇಕ್ಷ್ವಾಕುವಂಶಾವಳಿಯನ್ನು ಹೃದಯಂಗಮವಾಗಿ ಹೇಳಿದ ನಂತರ ಜನಕರಾಜನು ಕೈಮುಗಿದುಕೊಂಡು ಮಹರ್ಷಿಗಳಿಗೆ ಹೇಳಿದನು :

“ಮಹರ್ಷಿಗಳೇ! ನಿಮಗೆ ಮಂಗಳವಾಗಲಿ. ನಾನು ಹೇಳಲಿರುವ ನಮ್ಮ ವಂಶಾವಳಿಯನ್ನೂ ಕೇಳಿರಿ. ಮುನಿಶ್ರೇಷ್ಠರೇ! ಕನ್ಯಾಪ್ರದಾನ ಸಮಯದಲ್ಲಿ ಸತ್ಕುಲಪ್ರಸೂತನಾದವನು ವಂಶಾವಳಿಯನ್ನು ಹೇಳುವುದು ಸಂಪ್ರದಾಯವಾಗಿದೆ. ಅದರಂತೆ ನಾನು ಹೇಳಲಿರುವ ನಮ್ಮ ವಂಶಾವಳಿಯನ್ನು ಸಾವಧಾನದಿಂದ ಕೇಳಿರಿ.* ತನ್ನ ಧಾರ್ಮಿಕಕ್ರಿಯೆಗಳಿಂದಲೂ, ಪ್ರಜಾಪರಿಪಾಲನೆಯಿಂದಲೂ ಮೂರು ಲೋಕಗಳಲ್ಲಿಯೂ ಪ್ರಸಿದ್ಧಿಯನ್ನು ಪಡೆದ ಪರಮಧಾರ್ಮಿಕನಾದ, ಪರಾಕ್ರಮಿಗಳಲ್ಲಿ ಶ್ರೇಷ್ಠನೆನಿಸಿದ ನಿಮಿ

* ಈಗಲೂ ವಿವಾಹಸಂದರ್ಭದಲ್ಲಿ ವರನ ಮತ್ತು ವಧುವಿನ ತಂದೆ, ತಾತ, ಮುತ್ತಾತರ ಹೆಸರನ್ನೂ ಮತ್ತು ಗೋತ್ರಗಳನ್ನೂ ಹೇಳುವ ಸಂಪ್ರದಾಯವಿದೆ. ಇದಕ್ಕೆ ‘ಪ್ರವರ ಹೇಳುವುದು’ ಎನ್ನುತ್ತಾರೆ.

ಯೆಂಬ ರಾಜನಿದ್ದನು. ನಿಮಿರಾಜನ ಪುತ್ರನ ಹೆಸರು ಮಿಥಿ. ಅವನಿಂದಲೇ ಮಿಥಿಲಾಪಟ್ಟಣದ ನಿರ್ಮಾಣವಾಯಿತು. ಅವನನ್ನೇ ಮೊದಲನೆಯ ಜನಕ ನೆಂದೂ ಕರೆಯುತ್ತಿದ್ದರು. ಜನಕನಿಗೆ ಉದಾವಸುವೆಂಬ ಮಗನು ಹುಟ್ಟಿದನು. ಉದಾವಸುವಿಗೆ ಧರ್ಮಾತ್ಮನಾದ ನಂದಿವರ್ಧನನೆಂಬ ಮಗನು ಹುಟ್ಟಿದನು. ನಂದಿವರ್ಧನನ ಮಗ ಶೂರನಾದ ಸುಕೇತುವೆಂಬುವನು. ಸುಕೇತುವಿಗೆ ಧರ್ಮಾತ್ಮನಾಗಿಯೂ, ಮಹಾಬಲನಾಗಿಯೂ ಇದ್ದ ದೇವ ರಾತನೆಂಬ ಮಗನು ಹುಟ್ಟಿದನು. ಬೃಹದ್ರಥನೆಂಬುವನು ದೇವರಾತನ ಮಗನು. ಬೃಹದ್ರಥನಿಗೆ ಶೂರನಾಗಿಯೂ ಪ್ರತಾಪಶಾಲಿಯಾಗಿಯೂ ಇದ್ದ ಮಹಾವೀರನೆಂಬ ಮಗನು ಹುಟ್ಟಿದನು. ಧೈರ್ಯವಂತನೂ ಸತ್ಯಪರಾಕ್ರಮಿಯೂ ಆದ ಸುಧೃತಿಯು ಮಹಾವೀರನ ಮಗ. ಧರ್ಮಾತ್ಮನಾದ ಧೃಷ್ಟಕೇತುವು ಸುಧೃತಿಯ ಮಗ. ರಾಜರ್ಷಿಯಾದ ಧೃಷ್ಟಕೇತುವಿಗೆ ಹರ್ಯಶ್ವನೆಂಬ ಸುಪ್ರಸಿದ್ಧನಾದ ಮಗನು ಹುಟ್ಟಿದನು. ಮರು–ಎಂಬುವನು ಹರ್ಯಶ್ವನ ಪುತ್ರ. ಮರುವಿಗೆ ಪ್ರತೀಂಧಕನೆಂಬ ಮಗನು ಹುಟ್ಟಿದನು. ಮಹಾತ್ಮನಾದ ಕೀರ್ತಿರಥನು ಪ್ರತೀಂಧಕನ ಮಗ. ಕೀರ್ತಿರಥನಿಗೆ ದೇವಮೀಢನೆಂಬ ಮಗನು ಹುಟ್ಟಿದನು. ವಿಬುಧನೆಂಬುವನು ದೇವಮೀಢನ ಮಗ. ವಿಬುಧನಿಗೆ ಮಹೀಧ್ರಕನೆಂಬ ಮಗನು ಹುಟ್ಟಿದನು. ಮಹಾಬಲನಾದ ಕೀರ್ತಿರಾತನು ಮಹೀಧ್ರಕನ ಮಗ. ರಾಜರ್ಷಿಯಾದ ಕೀರ್ತಿರಾತನಿಗೆ ಮಹಾರೋಮನೆಂಬ ಮಗನು ಹುಟ್ಟಿದನು. ಹ್ರಸ್ವರೋಮನೆಂಬುವನು ಸ್ವರ್ಣರೋಮನೆಂಬ ಮಗನು ಹುಟ್ಟಿದನು. ಮಹಾರೋಮನಿಗೆ ಧರ್ಮಾತ್ಮನಾದ ಸ್ವರ್ಣ ರೋಮನ ಪುತ್ರ. ಧರ್ಮಜ್ಞನಾದ ಮಹಾತ್ಮನಾದ ಹ್ರಸ್ವರೋಮನಿಗೆ ನಾವಿ ಬ್ಬರು ಮಕ್ಕಳು ಹುಟ್ಟಿದೆವು. ಇಬ್ಬರಲ್ಲಿ ನಾನೇ ಹಿರಿಯವನು. ವೀರನಾದ ಕುಶಧ್ವಜನು ನನ್ನ ಅನುಜನು. ನಮ್ಮ ತಂದೆಯಾದ ಹ್ರಸ್ವರೋಮನು ಜ್ಯೇಷ್ಠನಾದ ನನಗೆ ಪಟ್ಟಗಟ್ಟಿ ರಾಜ್ಯಪಾಲನೆಯ ಭಾರವನ್ನೂ ಮತ್ತು ಕುಶಧ್ವಜನ ಪಾಲನೆಯನ್ನೂ ನನಗೊಪ್ಪಿಸಿ ಕಾಡಿಗೆ ಹೊರಟುಹೋದನು. ವೃದ್ಧನಾದ ನಮ್ಮ ತಂದೆಯು ಹಲವಾರು ವರ್ಷಗಳು ತಪಸ್ಸುಮಾಡುತ್ತಲಿದ್ದು ಸ್ವರ್ಗಸ್ಥ ನಾದನು. ನಾನು ರಾಜ್ಯವನ್ನು ಧರ್ಮದಿಂದ ಪರಿಪಾಲನೆಮಾಡುತ್ತಾ ತಮ್ಮ ನಾದ ಕುಶಧ್ವಜನನ್ನೂ ಪ್ರೀತಿಯಿಂದ ನೋಡಿಕೊಳ್ಳುತ್ತಿದ್ದೆನು. ಹಲವಾರು

ವರ್ಷಗಳು ಹೀಗೆಯೇ ಕಳೆದುವು. ಅನಂತರ ಸಾಂಕಾಶ್ಯಾ ಎಂಬ ಪಟ್ಟಣಕ್ಕೆ ಅಧಿಪತಿಯಾಗಿದ್ದ, ವೀರ್ಯವಂತನಾದ ಸುಧನ್ವನು ಸೇನಾಸಮೇತನಾಗಿ ಬಂದು ಮಿಥಿಲಾನಗರಕ್ಕೆ ಮುತ್ತಿಗೆ ಹಾಕಿ–"ಶೈವಧನುಸ್ಸನ್ನೂ ಮತ್ತು ಪದ್ಮಾಕ್ಷಿಯಾದ ಕನ್ಯಾಮಣಿಯಾದ ಸೀತೆಯನ್ನೂ ನನಗೆ ಈ ಕೂಡಲೇ ಒಪ್ಪಿಸಬೇಕು"–ಎಂದು ದೂತರ ಮೂಲಕ ಸಂದೇಶವನ್ನು ಕಳುಹಿಸಿದನು. ಅದಕ್ಕೆ ನಾನು ಒಪ್ಪದಿರಲು ನನಗೂ ಮತ್ತು ಸುಧನ್ವನಿಗೂ ಘೋರಯುದ್ಧ ವಾಯಿತು. ನನಗೆದುರಾಗಿ ಯುದ್ಧಮಾಡುತ್ತಿದ್ದ ಸುಧನ್ವನು ಕಟ್ಟಕಡೆಗೆ ನನ್ನಿಂದ ಹತನಾದನು. ಹೀಗೆ ಸುಧನ್ವನನ್ನು ಸಂಹಾರಮಾಡಿದನಂತರ, ಸಾಂಕಾಶ್ಯಾ ಪಟ್ಟಣಕ್ಕೆ ನನ್ನ ತಮ್ಮನಾದ ಕುಶಧ್ವಜನನ್ನು ರಾಜನನ್ನಾಗಿ ಮಾಡಿ ದೆನು. ಇಲ್ಲಿ ಕುಳಿತಿರುವ ಇವನೇ ನನ್ನ ತಮ್ಮನಾದ ಕುಶಧ್ವಜನು. ಇದು ನಮ್ಮ ವಂಶಚರಿತವಾಗಿದೆ. ರಘುವಂಶದವರ ವಂಶಾವಳಿಯನ್ನು ಕೇಳಿ ಪರಮಪ್ರೀತನಾಗಿರುವ ನಾನು ನನ್ನ ಇಬ್ಬರು ಹೆಣ್ಣುಮಕ್ಕಳನ್ನೂ ರಾಮ-ಲಕ್ಷ್ಮಣರೊಡನೆ ವಿವಾಹಾರ್ಥವಾಗಿ ನಿಮಗೆ (ವಸಿಷ್ಠರಿಗೆ) ಒಪ್ಪಿಸುತ್ತೇನೆ. ಮಹರ್ಷಿಗಳೇ! ನಿಮಗೆ ಮಂಗಳವಾಗಲಿ. ಸೀತೆಯನ್ನು ರಾಮನಿಗೂ, ಊರ್ಮಿಳೆಯನ್ನು ಲಕ್ಷ್ಮಣನಿಗೂ ವಿವಾಹಮಾಡಿಕೊಡುತ್ತೇನೆ. ವೀರ್ಯ ಶುಲ್ಕಳಾದ, ದೇವಕನ್ಯೆಯಂತಿರುವ ಸೀತೆಯನ್ನೂ, ನನ್ನ ಎರಡನೆಯ ಮಗಳಾದ (ಔರಸಪುತ್ರಿಯಾದ) ಊರ್ಮಿಳೆಯನ್ನೂ ವಿವಾಹಮಾಡಿಕೊಡು ತ್ತೇನೆ. ಇದನ್ನು ಮೂರು ಬಾರಿ ಹೇಳುತ್ತೇನೆ.* ಇದರಲ್ಲಿ ಸಂಶಯವಿಲ್ಲ. ಬ್ರಹ್ಮರ್ಷಿಗಳೇ! ರಾಮ-ಲಕ್ಷ್ಮಣರ ವಿಷಯದಲ್ಲಿ ಪರಮಪ್ರೀತನಾಗಿರುವ

---

* ತ್ರಿರ್ವದಾಮಿ ಅಥವಾ ತ್ರಿರ್ದದಾಮಿ ಎಂಬುದಕ್ಕೆ ಹೀಗೆ ಅರ್ಥಮಾಡಬಹು ದಾಗಿದೆ. ಯಾವುದನ್ನೂ ಮೂರು ಬಾರಿ ಹೇಳಿದರೆ ಪೂರ್ಣ ಒಪ್ಪಿಗೆಯಾಯಿತೆಂದರ್ಥ. ಜನಕನು ಇದನ್ನೇ ಹೇಳುತ್ತಾನೆ 'ನನ್ನ ಸುತೆಯರನ್ನು ಮದುವೆ ಮಾಡಿಕೊಡುವೆ ನೆಂದು ಮೂರು ಬಾರಿ ಹೇಳುತ್ತೇನೆ ಅಥವಾ ದದಾಮಿ-ದದಾಮಿ-ದದಾಮಿ ಎಂದು ಮೂರು ಬಾರಿ ಹೇಳುತ್ತೇನೆ. ಆದುದರಿಂದ ಈ ವಿಷಯದಲ್ಲಿ ಸಂಶಯಪಡುವ ಕಾರಣವಿಲ್ಲ' ತ್ರಿಕರಣಪೂರ್ವಕವಾಗಿ ಕೊಡುತ್ತೇನೆ ಎಂದು ಒಬ್ಬ ವ್ಯಾಖ್ಯಾನಕಾರರು ಅರ್ಥ ಮಾಡಿರುವುದೂ ಸಮಂಜಸವಾಗಿ ಕಾಣುತ್ತದೆ. ತ್ರಿಕರಣಗಳು = ಶರೀರ, ಮಾತು, ಮನಸ್ಸು.

ನಾನು ಇವರಿಗೆ ವಿವಾಹಮಾಡಿಕೊಡುವ ಸಲುವಾಗಿ ಈ ಇಬ್ಬರು ವಧುಗಳನ್ನೂ ನಿಮಗೊಪ್ಪಿಸುತ್ತೇನೆ. ವಿವಾಹದ ಮೊದಲು ಮಾಡಬೇಕಾಗಿರುವ ಗೋದಾನ-* ನಾಂದೀ-ಅಭ್ಯುದಯಾದಿಗಳನ್ನು ಮಾಡಿಸಿರಿ. ದಶರಥ ಮಹಾರಾಜ! ಇಂದು ಮಘಾನಕ್ಷತ್ರವಿದೆ. ಇಂದಿನಿಂದ ಎರಡು ದಿನಗಳು ಕಳೆದನಂತರ ಬರುವ ವಿವಾಹಯೋಗ್ಯವಾದ ಉತ್ತರಫಲ್ಗುನೀನಕ್ಷತ್ರದಲ್ಲಿ ವಿವಾಹವನ್ನು ಮಾಡುವವನಾಗು. ರಾಮ-ಲಕ್ಷ್ಮಣರ ಸಲುವಾಗಿ ಇವರ ಸುಖೋದಯಕ್ಕೆ ಕಾರಣವಾದ ಗೋದಾನ-ಭೂದಾನಾದಿ ದಾನಗಳನ್ನೂ ಮಾಡಿಸಬೇಕಾಗಿದೆ.”

ಏ೧ನೆಯ ಸರ್ಗವು ಮುಗಿಯಿತು.

ಬಾಲಕಾಂಡ ೭೨ನೆಯ ಸರ್ಗ

ವಿಶ್ವಾಮಿತ್ರರು ಭರತ-ಶತ್ರುಘ್ನರಿಗೆ ಕನ್ಯೆಯರನ್ನು ವರಣ ಮಾಡಿದುದು : ಜನಕನ ಸಮ್ಮತಿ : ದಶರಥನು ತನ್ನ ಮಕ್ಕಳ ಕಲ್ಯಾಣಕ್ಕಾಗಿ ನಾಂದೀಶ್ರಾದ್ಧ-ಸಮಾವರ್ತನೆ ಮುಂತಾದ ಕರ್ಮಗಳನ್ನು ಮಾಡಿದುದು

ತಮುಕ್ತವನ್ತಂ ವೈದೇಹಂ ವಿಶ್ವಾಮಿತ್ರೋ ಮಹಾಮುನಿಃ ।
ಉವಾಚ ವಚನಂ ವೀರಂ ವಸಿಷ್ಠಸಹಿತೋ ನೃಪಮ್ ॥೧॥

ಜನಕನು ತನ್ನ ವಂಶಾವಳಿಯನ್ನು ಹೇಳಿದನಂತರ ವಸಿಷ್ಠಸಹಿತರಾದ ಮಹಾಮುನಿಗಳಾದ ವಿಶ್ವಾಮಿತ್ರರು ಹೇಳಿದರು : “ನರಪುಂಗವ! ಇಕ್ಷ್ವಾಕುಗಳ ಮತ್ತು ವಿದೇಹರ ವಂಶಗಳು ಅಚಿಂತ್ಯವಾದ, ಅಪ್ರಮೇಯವಾದ ಗುಣಗಳಿಂದ ಕೂಡಿವೆ. ಈ ಎರಡು ವಂಶಗಳಿಗೆ ಸದೃಶವಾದ ಮತ್ತೊಂದು ವಂಶವಿಲ್ಲ. ಸೀತಾ-ಊರ್ಮಿಳೆಯರನ್ನು ರಾಮ-ಲಕ್ಷ್ಮಣರಿಗೆ ಕೊಟ್ಟು ವಿವಾಹ ಮಾಡುವ ಈ ಶುಭಕಾರ್ಯವು ಧರ್ಮದ ಹಿನ್ನೆಲೆಯಲ್ಲಿಯೂ ಅನುರೂಪವಾಗಿದೆ.

* ಗೋದಾನವೆಂದರೆ ಹದಿನಾರನೆಯ ವರ್ಷದಲ್ಲಿ ಮಾಡಬೇಕಾದ ಸರ್ವಕೇಶವಪನವನ್ನು ಒಳಗೊಂಡ ಕರ್ಮ. ಇಲ್ಲಿ ಸಮಾವರ್ತನದಲ್ಲಿ ಮಾಡುವ ಕ್ಷುರಕರ್ಮವೆಂದು ಒಬ್ಬ ವ್ಯಾಖ್ಯಾನಕಾರರು ಹೇಳಿದ್ದಾರೆ. **ಗಾವಃ = ಕೇಶಾಃ, ದೋಃ ಪಾದಮೂಲ ರೋಮಾಣಿ ಚ ಯತ್ರ ದೀಯಂತೇ = ಖಣ್ಡ್ಯನ್ತೇ ತದೇತತ್ ಗೋದಾನಂ ನಾಮ ಸಮಾವರ್ತನಾಖ್ಯಂ ಕರ್ಮ ।**

ರಾಮ-ಲಕ್ಷ್ಮಣ, ಸೀತಾ-ಊರ್ಮಿಳೆಯರ ಪರಸ್ಪರರೂಪಸಂಪತ್ತಿನಿಂದಲೂ ಅನುರೂಪವಾಗಿದೆ. ನರಶ್ರೇಷ್ಠನೇ! ನಿನ್ನೊಡನೆ ಇನ್ನೂ ಕೆಲವು ಮಾತುಗಳನ್ನಾಡುವುದಿದೆ. ನಿನ್ನ ಅನುಜನಾದ ಈ ಕುಶಧ್ವಜರಾಜನು ಧರ್ಮಜ್ಞನಾಗಿರುವನು. ಇವನಿಗೂ ಅಪ್ರತಿಮಲಾವಣ್ಯದಿಂದ ಕೂಡಿರುವ ಇಬ್ಬರು ಕನ್ಯೆಯರಿದ್ದಾರೆ. ಆ ಹೆಣ್ಣುಮಕ್ಕಳನ್ನು ಕುಮಾರನಾದ ಭರತನಿಗೂ ಮತ್ತು ಬುದ್ಧಿಮಂತನಾದ ಶತ್ರುಘ್ನನಿಗೂ ಪತ್ನ್ಯರ್ಥವಾಗಿ ಅಪೇಕ್ಷಿಸುತ್ತೇನೆ. ಮಹಾತ್ಮನಾದ ದಶರಥನ ಮಕ್ಕಳಾದ ಈ ನಾಲ್ವರೂ ರೂಪ-ಯೌವನಶಾಲಿಗಳಾಗಿರುತ್ತಾರೆ. ಲೋಕಪಾಲಕರಿಗೆ ಸಮಾನರಾಗಿದ್ದಾರೆ. ದೇವತೆಗಳಿಗೆ ಸದೃಶವಾದ ಪರಾಕ್ರಮವುಳ್ಳವರಾಗಿದ್ದಾರೆ. ಜನಕರಾಜೇಂದ್ರ! ನೀವಿಬ್ಬರೂ ಇಕ್ಷ್ವಾಕುಕುಲದೊಡನೆ ಸಂಬಂಧವನ್ನು ಬೆಳೆಸಿರಿ. ಪುಣ್ಯಶೀಲನಾದ ನಿನ್ನ ಮನಸ್ಸು ಈ ಸಂಬಂಧದ ವಿಷಯವಾಗಿ ಚಂಚಲವಾಗದಿರಲಿ."

ವಸಿಷ್ಠರ ಅನುಮತಿಯನ್ನು ಪಡೆದು ವಿಶ್ವಾಮಿತ್ರರು ಹೇಳಿದ ಆ ಮಾತುಗಳನ್ನು ಕೇಳಿ, ಜನಕರಾಜನು ಬದ್ಧಾಂಜಲಿಯಾಗಿ ಹೇಳಿದನು :

"ಉತ್ತಮೋತ್ತಮವಾದ ಇಕ್ಷ್ವಾಕುವಂಶದೊಡನೆ ನಾವು ಮಾಡುವ ಸಂಬಂಧವು ಅನುರೂಪವಾಗಿರುವುದೆಂದು ಮಹಾಮಹಿಮರಾದ ನೀವಿಬ್ಬರೂ ಆಜ್ಞಾಪಿಸಿರುವುದರಿಂದ ನಿಶ್ಚಯವಾಗಿಯೂ ನಮ್ಮ ಕುಲವು ಧನ್ಯವಾಯಿತೆಂದು ನಾನು ತಿಳಿಯುತ್ತೇನೆ. ಮಹಾಮಹಿಮರೇ! ನಿಮಗೆ ಮಂಗಳವಾಗಲಿ. ನಿಮ್ಮ ಇಚ್ಛೆಯಂತೆಯೇ ಸಕಲವೂ ನಡೆಯಲಿ. ಕುಶಧ್ವಜನ ಸುತೆಯರಿಬ್ಬರೂ ಯಾವಾಗಲೂ ಜೊತೆಯಲ್ಲಿಯೇ ಇರುವ ಭರತ-ಶತ್ರುಘ್ನರ ಪತ್ನಿಯರಾಗಿ ಅವರನ್ನು ಸೇವಿಸಲಿ. ಮಹರ್ಷಿಗಳೇ! ಮಹಾಬಲರಾದ ನಾಲ್ವರು ರಾಜಪುತ್ರರೂ ನಾಲ್ಕು ಮಂದಿ ರಾಜಕುಮಾರಿಯರ ಪಾಣಿಗ್ರಹಣವನ್ನು ಒಂದೇ ದಿನ ಮಾಡಿಕೊಳ್ಳಲಿ. ವಿದ್ವಾಂಸರು ಫಲ್ಗುನೀನಕ್ಷತ್ರಗಳ ಎರಡನೆಯ ದಿವಸ ವಿವಾಹವನ್ನು ಮಾಡುವುದು ಪ್ರಶಸ್ತವೆಂದು ಹೇಳುತ್ತಾರೆ. ಏಕೆಂದರೆ : ಪ್ರಜೋತ್ಪತ್ತಿಸ್ಥಾನದೇವತೆಯಾದ ಭಗದೇವನು ಈ ನಕ್ಷತ್ರಕ್ಕೆ ಅಧಿಪತಿಯಾಗಿರುತ್ತಾನೆ."

ಈ ರೀತಿಯಾಗಿ ಜನಕನು ವಿನಯಪೂರ್ವಕವಾದ ಮಾತುಗಳನ್ನು

ಹೇಳಿ ವಸಿಷ್ಠ-ವಿಶ್ವಾಮಿತ್ರರಿಗೆ ಪುನಃ ಹೇಳಿದನು : "ಮಹಾಮಹಿಮರಾದ ವಸಿಷ್ಠರೇ! ಮಹಾತಪಸ್ವಿಗಳಾದ ವಿಶ್ವಾಮಿತ್ರರೇ! ಈ ಕನ್ಯಾದಾನರೂಪ ವಾದ ಶ್ರೇಷ್ಠಧರ್ಮವು ನನಗೋಸ್ಕರ ತಮ್ಮಿಂದ ಉಪದಿಷ್ಟವಾಯಿತು. ನಾನು ನಿಮ್ಮ ಶಿಷ್ಯನಾಗಿದ್ದೇನೆ. ಇಷ್ಟುಮಾತ್ರವಲ್ಲ. ಮೂರು ರಾಜ್ಯಗಳ (ಅಯೋಧ್ಯಾ, ಮಿಥಿಲಾ, ಸಾಂಕಾಶ್ಯಾ) ಸಿಂಹಾಸನಗಳನ್ನೂ ತಮಗರ್ಪಿ ಸುತ್ತೇನೆ. ಈ ದಿವ್ಯವಾದ ಸಿಂಹಾಸನಗಳಲ್ಲಿ ಕುಳಿತು, ನಾನೇನು ಮಾಡ ಬೇಕೆಂಬುದನ್ನು ತಾವು ನಿರ್ದೇಶಮಾಡಿರಿ. ನಿಮ್ಮ ಆಜ್ಞಾನುಸಾರವಾಗಿ ನಡೆಯಲು ಸಿದ್ಧನಿದ್ದೇನೆ. ಈ ಮಿಥಿಲೆಯು ದಶರಥನದಾಗಿರುವಂತೆ–ಆ ಅಯೋಧ್ಯೆಯು ನನ್ನದೂ ಆಗಿರುವುದು. ಆದುದರಿಂದ ನಾನರ್ಪಿಸಲಿರುವ ಈ ಮೂರು ರಾಜ್ಯಸಿಂಹಾಸನಗಳನ್ನೂ ಸ್ವೀಕರಿಸಿ ತಮ್ಮ ಪ್ರಭುತ್ವದ ವಿಷಯವಾಗಿ ಸ್ವಲ್ಪವಾದರೂ ಸಂದೇಹಗೊಳ್ಳದೇ ತಮಗೆ ಸೂಕ್ತ ತೋರಿದ ರೀತಿಯಲ್ಲಿ ಆಜ್ಞೆಮಾಡಲು ಅರ್ಹರಾಗಿರುವಿರಿ."

ವಿದೇಹಾಧಿಪತಿಯಾದ ಜನಕರಾಜನು ವಸಿಷ್ಠ-ವಿಶ್ವಾಮಿತ್ರರಿಗೆ ಹೀಗೆ ಹೇಳಲು ರಘುನಂದನನಾದ ದಶರಥರಾಜನು ಪರಮಸಂತುಷ್ಟನಾಗಿ ಮಹೀಪತಿಗೆ ಹೇಳಿದನು :

"ಮಿಥಿಲೇಶ್ವರರಾದ ನೀವಿಬ್ಬರು ಸಹೋದರರೂ ಅಪಾರವಾದ ಗುಣಗಳಿಂದ ಕೂಡಿರುವಿರಿ. ಋಷಿಗಳೂ ಮತ್ತು ಅನೇಕರಾಜರೂ ನಿಮ್ಮಿಂದ ಸತ್ಕೃತರಾಗಿರುವರು. ಜನಕರಾಜ! ನೀನು ನಿಶ್ಚಯವಾಗಿಯೂ ಈ ಕನ್ಯೆಯರ ದಾನದಿಂದ ಶ್ರೇಯಸ್ಸನ್ನು ಪಡೆಯುವೆ. ನಿನಗೆ ಮಂಗಳವಾಗಲಿ. ನಾನಿನ್ನು ನಮ್ಮ ಮನೆಗೆ ಹೋಗಿಬರುತ್ತೇನೆ. ಅಲ್ಲಿ ವಿವಾಹಪೂರ್ವದಲ್ಲಿ ಮಾಡಬೇಕಾದ ನಾಂದೀ-ಅಭ್ಯುದಯಾದಿ ವಿಧ್ಯುಕ್ತಕರ್ಮಗಳನ್ನು ಯಥಾ ವಿಧಿಯಾಗಿ ಮಾಡುತ್ತೇನೆ."

ಯಶೋವಂತನಾದ ದಶರಥರಾಜನು ಹೀಗೆ ಹೇಳಿ ಜನಕನ ಅನು ಮತಿಯನ್ನು ಪಡೆದು, ಮುನೀಂದ್ರರಾದ ವಸಿಷ್ಠ-ವಿಶ್ವಾಮಿತ್ರರೊಡನೆ ತನ್ನ ಭವನಕ್ಕೆ ತೆರಳಿದನು. ಆ ದಿನ ನಾಂದೀಶ್ರಾದ್ಧವನ್ನು ಯಥಾವಿಧಿಯಾಗಿ ಆಚ ರಿಸಿ ಮಾರನೆಯ ದಿನ ಬೆಳಿಗ್ಗೆ ಗೋದಾನಕರ್ಮವನ್ನು (ಸಮಾವರ್ತನವನ್ನು) ಮಾಡಿದನು. ತನ್ನ ಮಕ್ಕಳಿಗೆ ಮಂಗಳವಾಗಲೆಂದಾಶಿಸಿ ಬ್ರಾಹ್ಮಣರಿಗೆ

ಒಬ್ಬೊಬ್ಬರಿಗೂ ಒಂದೊಂದು ಹಸುವಿನಂತೆ ಒಂದು ಲಕ್ಷ ಹಸುಗಳನ್ನು ಯಥಾವಿಧಿಯಾಗಿ ದಾನಮಾಡಿದನು. ಸುವರ್ಣಾಭರಣಗಳಿಂದ ಅಲಂಕರಿಸಿದ್ದ ಕೊಂಬುಗಳಿಂದ ಕೂಡಿದ, ಹಾಲುಕೊಡುವ, ಕರುಗಳುಳ್ಳ, ಕರೆಯುವ ಕಂಚಿನ ಪಾತ್ರೆಗಳಿಂದೊಡಗೂಡಿರುವ ನಾಲ್ಕು ಲಕ್ಷ ಹಸುಗಳನ್ನು ನಾಲ್ವರು ಮಕ್ಕಳ ಸಲುವಾಗಿ ಬ್ರಾಹ್ಮಣರಿಗೆ ದಾನಮಾಡಿದನು. ಪುತ್ರವತ್ಸಲನಾದ ದಶರಥನು ಮಾಡಿದ ಗೋದಾನದೊಡನೆ ಇನ್ನೂ ಅನೇಕಾನೇಕ ಸಂಪತ್ತುಗಳನ್ನೂ ಬ್ರಾಹ್ಮಣರಿಗೆ ದಾನವಾಗಿ ಕೊಟ್ಟನು. ಯಥಾವಿಧಿಯಾಗಿ ದಶರಥನ ಮಕ್ಕಳು ಗೋದಾನಕರ್ಮವನ್ನು (ಸಮಾವರ್ತನವನ್ನು) ಮುಗಿಸಿದನಂತರ, ನಾಲ್ವರು ಮಕ್ಕಳಿಂದಲೂ ಪರಿವೃತನಾದ ದಶರಥರಾಜನು–ಲೋಕಪಾಲಕರುಗಳಿಂದ ಪರಿವೃತನಾದ ಪ್ರಸನ್ನಚಿತ್ತನಾದ ಪ್ರಜಾಪತಿಯಂತೆಯೇ ಕಂಗೊಳಿಸಿದನು.

೭೨ನೆಯ ಸರ್ಗವು ಮುಗಿಯಿತು.

ಬಾಲಕಾಂಡ ೭೩ನೆಯ ಸರ್ಗ

ಶ್ರೀರಾಮ-ಲಕ್ಷ್ಮಣ-ಭರತ-ಶತ್ರುಘ್ನರ ವಿವಾಹ

ಯಸ್ಮಿಂಸ್ತು ದಿವಸೇ ರಾಜಾ ಚಕ್ರೇ ಗೋದಾನಮುತ್ತಮಮ್ ।
ತಸ್ಮಿಂಸ್ತು ದಿವಸೇ ವೀರೋ ಯುಧಾಜಿತ್ಸಮುಪೇಯಿವಾನ್ ॥೧॥

ದಶರಥರಾಜನು ತನ್ನ ಮಕ್ಕಳ ಗೋದಾನ-ವ್ರತ-ಸಮಾವರ್ತನಾದಿ ವಿವಾಹಪೂರ್ವಕರ್ಮಗಳನ್ನು ಮಾಡಿ ಮುಗಿಸಿದ ದಿನವೇ ಕೇಕಯರಾಜನ ಪುತ್ರನೂ, ಭರತನ ಸೋದರಮಾವನೂ, ವೀರನೂ ಆದ ಯುಧಾಜಿತನು ಮಿಥಿಲಾಪಟ್ಟಣಕ್ಕೆ ಬಂದು ದಶರಥನನ್ನು ಕಂಡು ಪರಸ್ಪರಕುಶಲಪ್ರಶ್ನೆಗಳಾದನಂತರ ಈ ಮಾತನ್ನು ಹೇಳಿದನು :

"ಮಹಾರಾಜ! ನಮ್ಮ ತಂದೆಯಾದ ಕೇಕಯರಾಜನು ನಿಮ್ಮ ಮೇಲಿನ ಪ್ರೀತ್ಯತಿಶಯದಿಂದ ನಿಮ್ಮ ಕುಶಲವನ್ನು ಕೇಳುವಂತೆ ಹೇಳಿರುತ್ತಾನೆ. ನೀನು ಯಾರ ಕುಶಲವನ್ನು ಕೇಳಿ ತಿಳಿಯುವುದರಲ್ಲಿ ಆಸಕ್ತನಾಗಿರುವೆಯೋ–ಅವರೆಲ್ಲರೂ ಕ್ಷೇಮದಿಂದಿದ್ದಾರೆ. (ನಾವೆಲ್ಲರೂ ಯೋಗಕ್ಷೇಮದಿಂದಿದ್ದೇವೆ.) ನನ್ನ ತಂದೆಯ ನನ್ನ ತಂಗಿಯು ಮಗನಾದ ಭರತನನ್ನು

ನೋಡುವ ಆಶಯದಿಂದಿರುತ್ತಾನೆ. ಭರತನನ್ನು ಕರೆದುಕೊಂಡು ಹೋಗುವ ಸಲುವಾಗಿ ನಾನು ಅಯೋಧ್ಯಾಪಟ್ಟಣಕ್ಕೆ ಹೋದೆನು. ನೀನು ಪುತ್ರರ ವಿವಾಹಾರ್ಥವಾಗಿ ಪುತ್ರ-ಪರಿವಾರಸಮೇತನಾಗಿ ಮಿಥಿಲಾಪಟ್ಟಣಕ್ಕೆ ಪ್ರಯಾಣ ಮಾಡಿದ ವಾರ್ತೆಯನ್ನು ಅಯೋಧ್ಯೆಯಲ್ಲಿ ಕೇಳಿ, ನನ್ನ ತಂಗಿಯ ಮಗನನ್ನು ನೋಡುವ ಆತುರದಿಂದ ಒಡನೆಯೇ ಅಲ್ಲಿಂದ ಹೊರಟು ಇಲ್ಲಿಗೆ ಬಂದೆನು.'*

ಯುಧಾಜಿತನು ಹೀಗೆ ಹೇಳಿದನಂತರ ದಶರಥರಾಜನು ಪೂಜಾರ್ಹನಾದ, ಪರಮಪ್ರೀತನಾದ, ಅತಿಥಿಯಾದ ಮತ್ತು ಬಂಧುವಾದ ಯುಧಾಜಿತನನ್ನು ಯಥೋಚಿತವಾಗಿ ಸತ್ಕರಿಸಿದನು. ದಶರಥರಾಜನು ಆ ರಾತ್ರಿಯನ್ನು ಮಹಾತ್ಮರಾದ ತನ್ನ ಪುತ್ರರೊಡನೆ ಸುಖದಿಂದ ಕಳೆದು ಮುಂಜಾನೆ ಎದ್ದು ಸ್ನಾನಸಂಧ್ಯಾದಿ ನಿತ್ಯಕರ್ಮಗಳನ್ನೂ ವಿವಾಹಾಂಗವಾಗಿ ಮಾಡಬೇಕಾಗಿದ್ದ ಕರ್ಮಗಳನ್ನೂ ಮುಗಿಸಿಕೊಂಡು, ಋಷಿಪುರಸ್ಸರನಾಗಿ ಯಜ್ಞಶಾಲೆಗೆ ಆಗಮಿಸಿದನು. ರಾಮನು ವಿಜಯಪ್ರದವಾದ ಮುಹೂರ್ತದಲ್ಲಿ ಸರ್ವಾಭರಣಭೂಷಿತರಾದ ಮೂವರು ಅನುಜರೊಡಗೂಡಿ, ತಾನೂ ಸರ್ವಾಭರಣಭೂಷಿತನಾಗಿ ಮತ್ತು ರಕ್ಷಾಬಂಧನಕರ್ಮವನ್ನು ಮುಗಿಸಿಕೊಂಡವ ನಾಗಿ ವಸಿಷ್ಠರನ್ನೂ ಮತ್ತು ಇತರ ಮಹರ್ಷಿಗಳನ್ನೂ ಮುಂದುಮಾಡಿ ಕೊಂಡು, ತಂದೆಯಾದ ದಶರಥನ ಸಮೀಪಕ್ಕೆ ಆಗಮಿಸಿದನು. ದಶರಥನು ಪರಿವಾರಸಮೇತನಾಗಿ ಯಜ್ಞಶಾಲೆಗೆ ಬಂದನಂತರ ವಸಿಷ್ಠರು ಅರಮನೆಗೆ ಹೋಗಿ ಜನಕನಿಗೆ ಹೇಳಿದರು :

"ಜನಕರಾಜ! ವಿವಾಹಪೂರ್ವದ ರಕ್ಷಾಬಂಧನಾದಿ ಮಂಗಳಕಾರ್ಯಗಳೆಲ್ಲವನ್ನೂ ಮುಗಿಸಿ ಮಕ್ಕಳೊಡನೆ ದಶರಥನು ಕನ್ಯಾದಾತೃವಾದ ನಿನ್ನನ್ನು ನೋಡಲು ಬಯಸುತ್ತಾನೆ. ದಾನಮಾಡುವವನಿಗೂ ಮತ್ತು ಪ್ರತಿಗ್ರಹ ಮಾಡುವವನಿಗೂ ಎಲ್ಲ ಇಷ್ಟಾರ್ಥಗಳೂ ಪ್ರಾಪ್ತವಾಗುತ್ತವೆ.

---

* ಈ ಶ್ಲೋಕದಲ್ಲಿ ಎರಡು ಬಾರಿ 'ಅಹಂ' ಶಬ್ದಪ್ರಯೋಗವಿರುವುದರಿಂದ ಪುನರುಕ್ತಿಯ ದೋಷನಿವಾರಣೆಗಾಗಿ ಒಂದು ಅಹಂ ಶಬ್ದಕ್ಕೆ ಒಬ್ಬ ವ್ಯಾಖ್ಯಾನಕಾರರು ಹೀಗೆ ಅರ್ಥಮಾಡಿರುತ್ತಾರೆ. ನ ಹೀಯತೇ = ಚಿತ್ತೇನ ತ್ಯಜ್ಯತೇ ಅಸೌ ಇತಿ ಅಹಃ (ಕರ್ಮಣಿಕ್ತಃ) ಮನಸ್ಸಿನಿಂದ ತೊರೆಯಲು ಸಾಧ್ಯವಿಲ್ಲದವನು. ಇದು ಭರತನಿಗೆ ವಿಶೇಷಣ.

ಉತ್ತಮೋತ್ತಮವಾದ ಈ ವಿವಾಹವನ್ನು ಮಾಡಿ ನಿನ್ನ ಪ್ರತಿಜ್ಞೆಯನ್ನು ಪೂರ್ಣಗೊಳಿಸು."

ಮಹಾತ್ಮರಾದ ವಸಿಷ್ಠರಿಂದ ಹೀಗೆ ನಿರ್ದೇಶಿತನಾದ, ಪರಮೋದಾರನಾದ, ಮಹಾತೇಜಸ್ವಿಯಾದ ಧರ್ಮವಿದನಾದ ಜನಕನು ಉತ್ತರಿಸಿದನು :

"ಪೂಜ್ಯರೇ! ತಮ್ಮನ್ನು ತಡೆಯುವ ನನ್ನ ದ್ವಾರಪಾಲಕನು ಇಲ್ಲಿ ಯಾವನಿದ್ದಾನೆ? ಒಳಗೆ ಬರಲು ತಾವು ಯಾರ ಅಪ್ಪಣೆಯನ್ನು ನಿರೀಕ್ಷಿಸಬೇಕಾಗಿದೆ? ಇದು ನಿಮ್ಮ ಮನೆಯೇ ಆಗಿರುವಾಗ ವಿಚಾರಮಾಡುವುದೇನಿದೆ? ಈ ರಾಜ್ಯವು ನನ್ನದು ಹೇಗೋ ಹಾಗೆ ನಿಮ್ಮದೂ ಆಗಿದೆ. ದಶರಥನು ನನ್ನನ್ನು ನೋಡಲಿಚ್ಛಿಸಿ ಯಜ್ಞಶಾಲೆಯಲ್ಲಿ ಕಾಯುವ ಕಾರಣವಿಲ್ಲ. ತನ್ನದೇ ಆಗಿರುವ ಈ ಅರಮನೆಗೆ ಯಾವ ವಿಧವಾದ ಸಂಕೋಚವೂ ಇಲ್ಲದೇ ಈ ಕೂಡಲೇ ದಯಮಾಡಿಸಬಹುದು. ನನ್ನ ಹೆಣ್ಣುಮಕ್ಕಳಿಗೂ ರಕ್ಷಾಬಂಧನಾದಿ ಮಂಗಳಕಾರ್ಯಗಳು ಮುಗಿದಿವೆ. ಎಲ್ಲವನ್ನೂ ಮುಗಿಸಿಕೊಂಡು ಯಜ್ಞೇಶ್ವರನ ಜ್ವಾಲೆಗಳಂತೆ ಪ್ರಕಾಶಮಾನರಾಗಿರುವ ನನ್ನ ಹೆಣ್ಣುಮಕ್ಕಳು ಈಗಾಗಲೇ ವಿವಾಹಮಂಟಪಕ್ಕೆ ಬಂದಿರುತ್ತಾರೆ. ನಾನೂ ನಿಮ್ಮ ಪ್ರತೀಕ್ಷೆ ಮಾಡುತ್ತಾ ಸಿದ್ಧನಾಗಿ ಈ ವಿವಾಹಮಂಟಪದಲ್ಲಿ ಕುಳಿತಿದ್ದೇನೆ. ವಿವಾಹ ಶುಭಕಾರ್ಯವು ನಿರ್ವಿಘ್ನವಾಗಿ ನೆರವೇರುವಂತೆ ಪ್ರಾರಂಭಮಾಡೋಣವಾಗಲಿ. ಏಕೆ ಸಾವಕಾಶಮಾಡುತ್ತಿರುವಿರಿ?"

ದಶರಥರಾಜನು ಜನಕನ ಮಾತುಗಳನ್ನು ವಸಿಷ್ಠರಿಂದ ಕೇಳಿ, ಋಷಿ-ಮಹರ್ಷಿಗಳನ್ನೂ, ತನ್ನ ನಾಲ್ವರು ಪುತ್ರರನ್ನೂ ವಿವಾಹವೇದಿಕೆಯ ಬಳಿಗೆ ಕರೆದೊಯ್ದನು. ದಶರಥನು ಸಪರಿವಾರನಾಗಿ ಅರಮನೆಯೊಳಗೆ ಬಂದನಂತರ ವಿದೇಹಾಧಿಪತಿಯಾದ ಜನಕರಾಜನು ಎಲ್ಲರನ್ನೂ ಸುಖಾಸನಗಳಲ್ಲಿ ಕುಳ್ಳಿರಿಸಿ, ಪೂಜ್ಯರಾದ ವಸಿಷ್ಠರಿಗೆ ಹೇಳಿದನು : "ಮಹರ್ಷಿಗಳೇ! ಈ ಲೋಕವು ಯಾವ ಮಹಾಪುರುಷನ ದರ್ಶನಮಾತ್ರದಿಂದಲೇ ಆನಂದಿಸುವುದೋ–ಅಂತಹ ಲೋಕಾಭಿರಾಮನಾದ ರಾಮನ ವಿವಾಹಶುಭಕಾರ್ಯವನ್ನು ಇಲ್ಲಿ ನೆರೆದಿರುವ ಧಾರ್ಮಿಕರಾದ ಋಷಿ-ಮಹರ್ಷಿಗಳೊಡನೆ ಯಥಾವಿಧಿಯಾಗಿ ನಡೆಸಿಕೊಡಿರಿ."

ಮಹಾತಪಸ್ವಿಗಳಾದ ಪೂಜ್ಯರಾದ ವಸಿಷ್ಠರು ಮಂದಹಾಸದೊಡನೆ ಜನಕನಿಗೆ–'ತಥಾಸ್ತು–ಹಾಗೆಯೇ ಆಗಲಿ'–ಎಂದು ಹೇಳಿ ವಿಶ್ವಾಮಿತ್ರ-ಶತಾನಂದರನ್ನು ಮುಂದುಮಾಡಿಕೊಂಡು ಯಜ್ಞಶಾಲೆಯ ಮಧ್ಯದಲ್ಲಿ ವಿಧಿವತ್ತಾಗಿ ವಿವಾಹವೇದಿಯನ್ನು ಸ್ಥಾಪಿಸಿ ಅದನ್ನು ಗಂಧ-ಪುಷ್ಪಾದಿಗಳಿಂದಲೂ, ಅಂಕುರಗಳಿಂದ ಕೂಡಿದ ಸುವರ್ಣಪಾಲಿಕೆಗಳಿಂದಲೂ, ಅಂಕುರಗಳಿಂದ ಕೂಡಿದ ವಿಚಿತ್ರವಾದ ಕುಂಭಗಳಿಂದಲೂ, ಅಂಕುರಪೂರ್ಣವಾದ ಶರಾವೆಗಳಿಂದಲೂ, ಧೂಪಸಹಿತವಾದ ಧೂಪಪಾತ್ರೆಗಳಿಂದಲೂ, ಶಂಖಪಾತ್ರೆಗಳಿಂದಲೂ, ಸ್ರುಕ್-ಸ್ರುವಗಳಿಂದಲೂ, ಅರ್ಘ್ಯಪಾತ್ರೆಗಳಿಂದಲೂ, ಅರಳು ತುಂಬಿರುವ ಪಾತ್ರೆಗಳಿಂದಲೂ, ಅಕ್ಷತೆಯಿಂದ ತುಂಬಿದ ಪಾತ್ರೆಗಳಿಂದಲೂ ಅಲಂಕರಿಸಿದರು. ಮಹಾತೇಜಸ್ವಿಗಳಾದ ಮುನಿಪುಂಗವರಾದ ವಸಿಷ್ಠರು ಒಂದೇ ಸಮನಾಗಿದ್ದ ಮತ್ತು ಶಾಸ್ತ್ರೋಕ್ತವಾದ ಪರಿಮಾಣದಿಂದ ಕೂಡಿದ್ದ ದರ್ಭೆಗಳ ಆಸ್ತರಣವನ್ನು ವಿಧ್ಯುಕ್ತವಾಗಿ ಮತ್ತು ಮಂತ್ರಪೂರ್ವಕವಾಗಿ ವೇದಿಯ ಸುತ್ತಲೂ ಹಾಕಿ ಅನಂತರ ಅಗ್ನ್ಯಾಹರಣಮಾಡಿ, ಯಥಾವಿಧಿಯಾಗಿ, ಮಂತ್ರಪೂರ್ವಕವಾಗಿ ಪಾಣಿಗ್ರಹಣಕ್ಕೆ ಮೊದಲು ಮಾಡಬೇಕಾದ ಅಭ್ಯುದಯಹೋಮವನ್ನು ಮಾಡಿದರು.

ಅನಂತರ ಸರ್ವಾಭರಣಭೂಷಿತೆಯಾದ ಸೀತೆಯನ್ನು ವಿವಾಹವೇದಿಯ ಬಳಿಗೆ ಕರೆತಂದು, ಯಜ್ಞೇಶ್ವರನ ಸಮ್ಮುಖದಲ್ಲಿ ರಾಘವನಿಗೆ ಎದುರಾಗಿ ಕುಳ್ಳಿರಿಸಿ, ಕೌಸಲ್ಯಾನಂದವರ್ಧನನಾದ ಶ್ರೀರಾಮನಿಗೆ ಜನಕರಾಜನು ಹೇಳಿದನು :

ಇಯಂ ಸೀತಾ ಮಮ ಸುತಾ ಸಹಧರ್ಮಚರೀ ತವ ।
ಪ್ರತೀಚ್ಛ ಚೈನಾಂ ಭದ್ರಂ ತೇ ಪಾಣಿಂ ಗೃಹ್ಣೀಷ್ವ ಪಾಣಿನಾ ॥೨೫॥

ಪತಿವ್ರತಾ ಮಹಾಭಾಗಾ ಛಾಯೇವಾನುಗತಾ ಸದಾ ।
ಇತ್ಯುಕ್ತ್ವಾ ಪ್ರಾಕ್ಷಿಪದ್ರಾಜಾ ಮನ್ತ್ರಪೂತಂ ಜಲಂ ತದಾ ॥೨೬॥

"ನನ್ನ ಮಗಳಾದ ಈ ಸೀತೆಯು ನಿನ್ನ ಸಹಧರ್ಮಿಣಿಯಾಗುವಳು. ಆದುದರಿಂದ ಇವಳನ್ನು ಸ್ವೀಕಾರಮಾಡು. ನಿನ್ನ ಕೈಯಿಂದ ಇವಳ ಕೈಯನ್ನು ಹಿಡಿದುಕೊ. (ಪಾಣಿಗ್ರಹಣಮಾಡು). ನಿನಗೆ ಮಂಗಳವಾಗಲಿ. ಇವಳು ಪತಿವ್ರತೆಯಾಗಿರುವಳು. ನಿನ್ನ ನೆರಳಿನಂತೆಯೇ ನಿನ್ನನ್ನು ಸರ್ವದಾ

ಅನುಸರಿಸುವಳು.[1] ಹೀಗೆಂದು ಹೇಳಿ, ಸೀತೆಯ ಕೈಯನ್ನು ಶ್ರೀರಾಮನ ಕೈಯಲ್ಲಿಟ್ಟು ಕನ್ಯಾದಾನಮಂತ್ರಪುನಶ್ಚರಣೆಮಾಡಿ, ಮಂತ್ರಪೂತವಾದ ತೀರ್ಥವನ್ನು ಶ್ರೀರಾಮನ ಕೈಯಲ್ಲಿ ಬಿಟ್ಟು ಧಾರೆಯೆರೆದನು. ಜನಕನು ವಿಧಿಪೂರ್ವಕವಾಗಿ ಸೀತೆಯನ್ನು ರಾಮನಿಗೆ ಧಾರೆಯೆರೆದು ಕೊಟ್ಟೊಡನೆಯೇ ವಿವಾಹಮಹೋತ್ಸವದಲ್ಲಿ ಉಪಸ್ಥಿತರಾಗಿದ್ದ, ಮಹರ್ಷಿಗಳೂ, ದೇವತೆಗಳೂ–" ಸಾಧು-ಸಾಧು "–ಎಂದು ಹೇಳುತ್ತಾ ಹರ್ಷಧ್ವನಿಗಳನ್ನು ಮಾಡಿದರು. ದೇವದುಂದುಭಿಗಳು ಮೊಳಗಿದುವು. ಪುಷ್ಪವೃಷ್ಟಿಯಾಯಿತು. ಹೀಗೆ ಮಂತ್ರೋದಕಪೂರ್ವಕವಾಗಿ ಸೀತೆಯನ್ನು ರಾಮನಿಗೆ ಧಾರೆಯೆರೆದು ಕೊಟ್ಟನಂತರ–ಹರ್ಷದಿಂದ ರೋಮಾಂಚಿತನಾದ ಜನಕನು ಲಕ್ಷ್ಮಣನಿಗೆ ಹೇಳಿದನು : "ಲಕ್ಷ್ಮಣ! ವಿವಾಹಮಂಟಪಕ್ಕೆ ಆಗಮಿಸು. ನನ್ನ ಔರಸಪುತ್ರಿಯಾದ ಈ ಊರ್ಮಿಳಾದೇವಿಯ ಪಾಣಿಗ್ರಹಣಮಾಡು. ಮುಹೂರ್ತಕಾಲವು ಅತಿಕ್ರಮಿಸಿಹೋದೀತು. ಕಾಲವಿಳಂಬ ಮಾಡಬೇಡ."* ಲಕ್ಷ್ಮಣನಿಗೆ ಹೀಗೆ ಹೇಳಿ, ಜನಕರಾಜನು ಭರತನ ಕಡೆಗೆ ತಿರುಗಿ ಹೇಳಿದನು :

"ರಘುನಂದನ! ನೀನು ನನ್ನ ತಮ್ಮನ ಮಗಳಾದ ಮಾಂಡವಿಯ ಪಾಣಿಗ್ರಹಣವನ್ನು ಮಾಡುವವನಾಗು." ಶತ್ರುಘ್ನನಿಗೂ ಜನಕರಾಜನು ಇದೇ ಮಾತುಗಳನ್ನು ಹೇಳಿದನು : "ಮಹಾಬಾಹುವೇ! ನೀನು ನನ್ನ ತಮ್ಮನ ಮತ್ತೊಬ್ಬ ಮಗಳಾದ ಶ್ರುತಕೀರ್ತಿಯ ಪಾಣಿಗ್ರಹಣವನ್ನು ಮಾಡುವವ

---

1 ಸಮಾನಃ ಧರ್ಮಃ, ಸಹಧರ್ಮಃ, ತಂ ಚರತೀತಿ ಸಹಧರ್ಮಚರೀ–ಗಂಡನು ಮಾಡುವ ಧರ್ಮಕಾರ್ಯಗಳಲ್ಲಿ ಪೂರ್ಣವಾಗಿ ಸಹಕರಿಸುವವಳು.

* ಕ್ಷತ್ರಿಯರಿಗೆ ವಿವಾಹದಲ್ಲಿ ಶರಗ್ರಹಣವು ಪಾಣಿಗ್ರಹಣದ ಸ್ಥಾನದಲ್ಲಿ ಉಕ್ತವಾಗಿದೆ. ಆದರೆ ಯಾವ ವರ್ಣದವರೇ ಆಗಲೀ ಸವರ್ಣೀಯರಲ್ಲಿ ಪಾಣಿಗ್ರಹಣಮಾಡಿಕೊಳ್ಳಲು ಅವಕಾಶವಿದೆ. ಪಾಣಿಗ್ರಹಣಸಂಸ್ಕಾರಃ ಸವರ್ಣಾಸು ಪ್ರದೃಶ್ಯತೇ । ಅಸ-ವರ್ಣಾಸ್ವಯಂ ಜ್ಞೇಯೋ ವಿಧಿರುದ್ವಾಹಕರ್ಮಣಿ ॥ ಶರಃ ಕ್ಷತ್ರಿಯಯಾ ಗ್ರಾಹ್ಯಃ ಪ್ರತೋದೋ ವೈಶ್ಯಕನ್ಯಯಾ । ವಾಸೋದಶಾ ಶೂದ್ರಯಾ ತು ವರ್ಣೋತ್ಕೃಷ್ಟಸ್ಯ ವೇದನೇ ॥ [ಮನುಃ] ಎಲ್ಲ ವರ್ಣದವರಿಗೂ ಸವರ್ಣಸ್ತ್ರೀಯರೊಡನೆ ಪಾಣಿಗ್ರಹಣಸಂಸ್ಕಾರ ವುಂಟು. ಉತ್ತಮವರ್ಣದವರೊಡನೆ ಮದುವೆಯಾಗುವಾಗ ಕ್ಷತ್ರಿಯಸ್ತ್ರೀಯು ಬಾಣವನ್ನೂ, ವೈಶ್ಯಸ್ತ್ರೀಯು ಚಾವಟಿಯನ್ನೂ, ಶೂದ್ರಸ್ತ್ರೀಯು ವರನ ಬಟ್ಟೆಯ ಸೆರಗನ್ನೂ ಹಿಡಿಯಬೇಕು.

ನಾಗು." (ಜನಕನು ದಶರಥನ ಮಕ್ಕಳೆಲ್ಲರಿಗೂ ಹೇಳುತ್ತಾನೆ.) "ನೀವೆಲ್ಲರೂ ವಿನಯಶೀಲರು. ಶಾಂತಸ್ವಭಾವದವರು. ಸುಚರಿತ್ರರು. ಇಂತಹ ಸಕಲ ಸದ್ಗುಣಪರಿಪೂರ್ಣರಾದ, ಕಕುತ್ಥವಂಶೋತ್ಪನ್ನರಾದ ರಾಜಕುಮಾರರು ಪತ್ನೀವಂತರಾಗಿರಿ. ಕಾಲವಿಳಂಬವಾಗುವುದು ಬೇಡ." ಜನಕರಾಜನ ಮಾತುಗಳನ್ನು ಕೇಳಿ ಲಕ್ಷ್ಮಣ-ಭರತ-ಶತ್ರುಘ್ನರು ಅನುಕ್ರಮವಾಗಿ ಊರ್ಮಿಳಾ-ಮಾಂಡವೀ-ಶ್ರುತಕೀರ್ತಿಯರ ಪಾಣಿಗ್ರಹಣಮಾಡಿದರು. ಪಾಣಿಗ್ರಹಣಾನಂತರದಲ್ಲಿ ಪತ್ನೀಸಮೇತರಾದ ರಾಜಕುಮಾರರು ಅಗ್ನಿಯನ್ನೂ, ವಿವಾಹವೇದಿಯನ್ನೂ, ಜನಕರಾಜನನ್ನೂ, ಋಷಿಗಳನ್ನೂ ಯಥಾವಿಧಿಯಾಗಿ ಪ್ರದಕ್ಷಿಣಪೂರ್ವಕವಾಗಿ ನಮಸ್ಕರಿಸಿ ವಿಧಿಪೂರ್ವಕವಾಗಿ ವಿವಾಹಹೋಮವನ್ನು ಮಾಡಿದರು. ದೇವದುಂದುಭಿಘೋಷಗಳೊಡನೆಯೂ, ಗಾಯನ-ವೀಣಾವಾದನಾದಿಗಳೊಡನೆಯೂ ಅಂತರಿಕ್ಷದಿಂದ ಪ್ರಕಾಶಮಾನವಾದ ಪುಷ್ಪವೃಷ್ಟಿಯಾಯಿತು. ಅಪ್ಸರೆಯರು ಸಂತೋಷಾಧಿಕ್ಯದಿಂದ ಗುಂಪು-ಗುಂಪುಗಳಾಗಿ ಸೇರಿಕೊಂಡು ನರ್ತನಮಾಡಿದರು. ಗಂಧರ್ವರು ಸುಶ್ರಾವ್ಯವಾಗಿ ಗಾಯನಮಾಡಿದರು. ರಾಘವರ ವಿವಾಹಕಾಲದಲ್ಲಿ ನಡೆದ ಈ ಕ್ರಿಯೆಯು ಎಲ್ಲರಿಗೂ ಅದ್ಭುತವಾಗಿ ಪರಮಾಶ್ಚರ್ಯವಾಗಿ ಕಂಡಿತು. ಈ ರೀತಿಯಲ್ಲಿ ನೃತ್ಯ-ಗೀತ-ವಾದ್ಯಗಳ ಉದ್ಘೋಷಣೆಯಾಗುತ್ತಿರಲಾಗಿ, ಓಜಸ್ವಿಗಳಾದ ರಾಜಕುಮಾರರು ವಿವಾಹದಲ್ಲಿ ಮಾಡುವ ಲಾಜಾಹೋಮವನ್ನೂ ಮಾಡಿ, ಯಜ್ಞೇಶ್ವರನನ್ನು ವಿಧ್ಯುಕ್ತವಾಗಿ ಮೂರು ಬಾರಿ ಪ್ರದಕ್ಷಿಣೆಮಾಡಿ ವಿವಾಹಕಾರ್ಯವನ್ನು ಪೂರೈಸಿ, ಪತ್ನಿಯರನ್ನು ಪಡೆದರು. ಅನಂತರ ರಘುನಂದನರು, ತಮ್ಮ-ತಮ್ಮ ಭಾರ್ಯೆಯರ ಸಮೇತರಾಗಿ ಶಿಬಿರಗಳಿಗೆ ತೆರಳಿದರು. ದಶರಥರಾಜನೂ ಬಂಧುವರ್ಗದವರೊಡನೆಯೂ, ಋಷಿಗಳೊಡನೆಯೂ ರಾಜಪುತ್ರರನ್ನನುಸರಿಸಿದನು.

೭೩ನೆಯ ಸರ್ಗವು ಮುಗಿಯಿತು.

ವಿಶ್ವಾಮಿತ್ರರು ಆಶ್ರಮಕ್ಕೆ ತೆರಳಿದುದು: ಜನಕನು ಹೆಣ್ಣು ಮಕ್ಕಳಿಗೆ ಅಪಾರವಾದ ಬಳುವಳಿಗಳನ್ನು ಕೊಟ್ಟು ದಶರಥನೊಡನೆ ಕಳುಹಿಸಿಕೊಟ್ಟುದು : ಮಾರ್ಗದಲ್ಲಿ ಶುಭಾಶುಭಶಕುನಗಳು : ಪರಶುರಾಮನ ಆಗಮನ

ಅಥ ರಾತ್ರ್ಯಾಂ ವ್ಯತೀತಾಯಾಂ ವಿಶ್ವಾಮಿತ್ರೋ ಮಹಾಮುನಿಃ ।
ಆಪೃಚ್ಛ್ಯ ತೌ ಚ ರಾಜಾನೌ ಜಗಾಮೋತ್ತರಪರ್ವತಮ್ ॥೧॥

ರಾತ್ರಿಯು ಕಳೆದು ಪ್ರಾತಃಕಾಲವಾಯಿತು. ಮಹಾಮುನಿಗಳಾದ ವಿಶ್ವಾಮಿತ್ರರು ಜನಕ-ದಶರಥರ ಅನುಮತಿಯನ್ನು ಪಡೆದು ಹಿಮವತ್ಪರ್ವತಕ್ಕೆ ಹೊರಟುಹೋದರು. ವಿಶ್ವಾಮಿತ್ರರು ಹೊರಟುಹೋದನಂತರ, ದಶರಥ ರಾಜನೂ ಜನಕರಾಜನ ಅನುಮತಿಯನ್ನು ಪಡೆದು ಅಯೋಧ್ಯಾಪಟ್ಟಣಕ್ಕೆ ಪ್ರಯಾಣಹೊರಟನು. ವಿದೇಹಾಧಿಪತಿಯಾದ ಜನಕನು ತನ್ನ ಹೆಣ್ಣುಮಕ್ಕಳಿಗೆ ಹೇರಳವಾದ ಕನ್ಯಾಧನವನ್ನು ಕೊಟ್ಟು ಕಳುಹಿಸಿದನು. ಲಕ್ಷೋಪಲಕ್ಷ ಗೋವುಗಳನ್ನೂ, ರತ್ನಗಂಬಳಿಗಳನ್ನೂ, ನವುರಾದ ರೇಷ್ಮೆಯ ಪೀತಾಂಬರಗಳನ್ನೂ, ಅಲಂಕರಿಸಲ್ಪಟ್ಟ ದಿವ್ಯವಾದ ರೂಪಗಳುಳ್ಳ ಆನೆ, ಕುದುರೆ, ರಥ, ಪದಾತಿಗಳನ್ನೂ ಬಳುವಳಿಯಾಗಿ ಕೊಟ್ಟನು. ಕನ್ಯಾಪಿತೃವಾದ ಜನಕನು ತನ್ನ ಹೆಣ್ಣುಮಕ್ಕಳೊಡನೆ ನೂರು ಮಂದಿ ಸಖಿಯರನ್ನೂ, ಅನೇಕ ಮಂದಿ ದಾಸರನ್ನೂ ಕಳುಹಿಸಿಕೊಟ್ಟನು. ಅನೇಕ ಲಕ್ಷ ಬೆಳ್ಳಿಯ ನಾಣ್ಯಗಳನ್ನೂ, ಸುವರ್ಣ ನಾಣ್ಯಗಳನ್ನೂ, ಹವಳಗಳನ್ನೂ ಹೆಣ್ಣುಮಕ್ಕಳಿಗೆ ಬಳುವಳಿಯಾಗಿಕೊಟ್ಟನು. ಆನಂದತುಂದಿಲನಾದ ಜನಕರಾಜನು ಇನ್ನೂ ಅನೇಕ ಉತ್ತಮೋತ್ತಮವಸ್ತುಗಳನ್ನೂ ಹೆಣ್ಣುಮಕ್ಕಳಿಗೆ ಬಳುವಳಿಯಾಗಿ ಕೊಟ್ಟುಕಳುಹಿಸಿದನು. ಮಿಥಿಲೇಶ್ವರನಾದ ಜನಕನು ಈ ರೀತಿಯಾಗಿ ಅನೇಕವಿಧಗಳಾದ ಬಳುವಳಿಗಳನ್ನು ಕೊಟ್ಟು, ದಶರಥನೊಡನೆ ಸ್ವಲ್ಪದೂರ ಪ್ರಯಾಣಮಾಡಿ, ಅನಂತರ ಅವನ ಅನುಮತಿಯನ್ನು ಪಡೆದು ತನ್ನ ಅರಮನೆಯನ್ನು ಸೇರಿದನು. ಅಯೋಧ್ಯಾಧಿಪತಿಯಾದ ದಶರಥರಾಜನು ಜನಕರಾಜನಿಗೆ ಯಥೋಚಿತವಾದ ಸವಿ

ಮಾತುಗಳನ್ನು ಹೇಳಿ ಕಳುಹಿಸಿಕೊಟ್ಟನಂತರ, ಮಹರ್ಷಿಗಳನ್ನು ಮುಂದೆ ಮಾಡಿಕೊಂಡು, ಚತುರಂಗಬಲಸಮೇತನಾಗಿ, ಮಹಾತ್ಮರಾದ ತನ್ನ ಮಕ್ಕಳೊಡನೆ ಅಯೋಧ್ಯೆಗೆ ಪ್ರಯಾಣಮಾಡಿದನು. ಹಾಗೆ ಪ್ರಯಾಣ ಮಾಡುತ್ತಿದ್ದಾಗ–ದಾರಿಯಲ್ಲಿ ಪಕ್ಷಿಗಳು ಅಲ್ಲಲ್ಲಿ ಘೋರವಾಗಿ ಅಪಸ್ವರದಿಂದ ಚೀರುತ್ತಿದ್ದುವು. ಭೂಮಿಯಲ್ಲಿ ಓಡಾಡುತ್ತಿದ್ದ ಮೃಗಗಳು ದಶರಥರಾಜ ನನ್ನು ಬಲಭಾಗದಲ್ಲಿ ಬಿಟ್ಟುಕೊಂಡು ಮುಂದೆ ಹೋಗುತ್ತಿದ್ದುವು. ಅದನ್ನು ಕಂಡು ರಾಜಸಿಂಹನಾದ ದಶರಥನು ವಸಿಷ್ಠರನ್ನು ಕೇಳಿದನು :

"ಮಹರ್ಷಿಗಳೇ! ಮೃಗಗಳು ನನ್ನನ್ನು ಪ್ರದಕ್ಷಿಣೆಮಾಡಿ ಹೋಗುತ್ತಿವೆ. ಆದರೆ ನನ್ನ ಸುತ್ತಲೂ ಭಯಂಕರವಾದ ಪಕ್ಷಿಗಳು ಚೀರಾಡುತ್ತಿವೆ. ಇದಕ್ಕೆ ಕಾರಣವೇನು? ಇವೆಲ್ಲವನ್ನೂ ನೋಡಿ ನನ್ನ ಹೃದಯವು ಕಂಪಿಸುತ್ತಿದೆ. ಮನಸ್ಸು ಕಳವಳಗೊಂಡಿದೆ."

ದಶರಥರಾಜನ ಮಾತುಗಳನ್ನು ಕೇಳಿ ಮಹರ್ಷಿಗಳಾದ ವಸಿಷ್ಠರು ಸುಮಧುರವಾದ ಈ ಮಾತುಗಳನ್ನಾಡಿದರು :

"ಮಹಾರಾಜ! ಪಕ್ಷಿಗಳ ಘೋರನಿನಾದ ; ಪ್ರಾಣಿಗಳು ಪ್ರದಕ್ಷಿಣೆ ಮಾಡಿ ಮುಂದೆ ಹೋಗುವುದು–ಈ ಎರಡಕ್ಕೂ ಫಲಗಳನ್ನು ಹೇಳುವೆನು, ಕೇಳು. ಅಂತರಿಕ್ಷದಲ್ಲಿ ಪಕ್ಷಿಗಳ ಮುಖದಿಂದ ಹೊರಟಿರುವ ಘೋರ ನಿನಾದವು ಮುಂದೊದಗಲಿರುವ ಭಯಕ್ಕೆ ಸೂಚಕವಾಗಿದೆ. ಆದರೆ ಈ ಮೃಗಗಳು ಪ್ರದಕ್ಷಿಣೆಮಾಡಿ ಹೋಗುತ್ತಿರುವುದರಿಂದ ಪ್ರಾಪ್ತವಾಗಲಿರುವ ವಿಪತ್ತು ಒಡನೆಯೇ ನಿವಾರಣೆಯಾಗುವುದೆಂದು ಸೂಚಿತವಾಗುತ್ತದೆ. ಆದುದರಿಂದ ನೀನು ಭಯಪಡುವ ಕಾರಣವಿಲ್ಲ. ನಿರಾತಂಕವಾಗಿರ ಬಹುದು."

ವಸಿಷ್ಠರು ದಶರಥನೊಡನೆ ಹೀಗೆ ಸಂಭಾಷಣೆಮಾಡುತ್ತಿದ್ದಾಗಲೇ ಸುಂಟರಗಾಳಿಯು ರಭಸದಿಂದ ಬೀಸತೊಡಗಿತು. ಅದು ಭೂಮಿಯನ್ನೇ ನಡುಗಿಸುತ್ತಿದ್ದಿತು. ಅನೇಕ ಮಹಾವೃಕ್ಷಗಳನ್ನು ಬುಡಮೇಲಾಗಿ ಮಾಡಿತು. ಆ ಸುಂಟರಗಾಳಿಯಿಂದೆದ್ದ ಧೂಳಿನಿಂದ ಸೂರ್ಯನೂ ಮುಚ್ಚಿಹೋದನು. ಸರ್ವವೂ ಅಂಧಕಾರಮಯವಾಯಿತು. ದಶರಥನ ಪರಿವಾರದವರಿಗೆ ದಿಕ್ಕು

ಗಳೇ ಕಾಣದಾದವು. ದಿಕ್ಕುಗಳೆಲ್ಲವೂ ಕಾಂತಿಹೀನವಾದುವು. ಭಸ್ಮದಿಂದ (ಧೂಳಿನಿಂದ) ಮುಚ್ಚಿಹೋದ ದಶರಥನ ಚತುರಂಗಬಲಕ್ಕೆ ಮುಂದೇನು ಮಾಡಬೇಕೆಂಬುದೇ ತಿಳಿಯದಾಯಿತು. ವಸಿಷ್ಠರು, ಅವರೊಡನಿದ್ದ ಇತರ ಋಷಿ-ಮಹರ್ಷಿಗಳು, ದಶರಥರಾಜ ಮತ್ತು ಅವನ ಮಕ್ಕಳು–ಇವರು ಮಾತ್ರ ಸುಂಟರಗಾಳಿಯಿಂದ ಭ್ರಾಂತರಾಗದೇ ಸಚೇತನರಾಗಿದ್ದರು. ಉಳಿದವರೆಲ್ಲರೂ ಪ್ರಜ್ಞಾಹೀನರಾದರು. ಆ ಘೋರವಾದ ಅಂಧಕಾರದಲ್ಲಿ ಚತುರಂಗಬಲವು–ಭಯಂಕರಪ್ರಕಾಶದಿಂದ ಕೂಡಿದ್ದ, ಜಟಾಮಂಡಲಧಾರಿಯಾದ, ಜಮದಗ್ನಿಯ ಮಗನಾದ, ಕ್ಷತ್ರಿಯಕುಲವಿಧ್ವಂಸಕನಾದ ಪರಶುರಾಮನನ್ನು ಕಂಡಿತು. ಕೈಲಾಸಪರ್ವತದಂತೆ ಅತಿಕ್ರಮಣಮಾಡಲು ದುಸ್ಸಾಧ್ಯನಾದ, ಕಾಲಾಗ್ನಿಯಂತೆ ಸಹಿಸಲಶಕ್ಯನಾದ ಮಹಾತೇಜಸ್ಸಿನಿಂದ ಪ್ರಜ್ವಲಿಸುತ್ತಲಿದ್ದ, ಪ್ರಾಕೃತಜನರಿಂದ ನೋಡಲೂ ಅಶಕ್ಯನಾಗಿ ಹೆಗಲಿನ ಮೇಲೆ ಗಂಡುಗೊಡಲಿಯನ್ನು ಸಜ್ಜುಮಾಡಿ ಇಟ್ಟುಕೊಂಡಿದ್ದ, ವಿದ್ಯುತ್ತಿನಂತೆ ಪ್ರಕಾಶಿಸುತ್ತಿರುವ ಧನುಸ್ಸನ್ನೂ ಮತ್ತು ಉಗ್ರವಾದ ಬಾಣವನ್ನೂ ಹಿಡಿದು ತ್ರಿಪುರಹಂತಕನಾದ ಶಿವನೋಪಾದಿಯಲ್ಲಿದ್ದ ಪರಶುರಾಮನನ್ನು ದಶರಥನೇ ಮೊದಲಾದವರು ಕಂಡರು. ಭಯಂಕರಪ್ರಕಾಶವಿಶಿಷ್ಟನಾದ, ಅಗ್ನಿಯಂತೆ ತೇಜಸ್ಸಿನಿಂದ ಪ್ರಜ್ವಲಿಸುತ್ತಿದ್ದ ಪರಶುರಾಮನನ್ನು ಕಂಡು ಜಪ-ಹೋಮಪರಾಯಣರಾದ, ವಸಿಷ್ಠಪ್ರಮುಖರಾದ ಬ್ರಾಹ್ಮಣರು ಒಂದೆಡೆಯಲ್ಲಿ ಸೇರಿ ತಮ್ಮ ತಮ್ಮಲ್ಲಿಯೇ ಮಾತನಾಡಿಕೊಂಡರು :

“ಹಿಂದೊಮ್ಮೆ ಈ ಪರಶುರಾಮನು, ಕ್ಷತ್ರಿಯನೊಬ್ಬನಿಂದಾದ ತನ್ನ ತಂದೆಯ ವಧೆಯಿಂದಾಗಿ ಬಹಳ ಕುಪಿತನಾಗಿದ್ದನಾದರೂ ಈಗ ಕ್ಷತ್ರಿಯರನ್ನು ವಿನಾಶಮಾಡಲಾರನು. ಏಕೆಂದರೆ : ಪೂರ್ವದಲ್ಲಿಯೇ ಇವನು ಭೂಮಿಯಲ್ಲಿನ ಸರ್ವಕ್ಷತ್ರಿಯರನ್ನೂ ವಧೆಮಾಡಿ ಕೋಪರಹಿತನೂ–ಚಿಂತಾರಹಿತನೂ ಆಗಿದ್ದನು. ಆದುದರಿಂದ ಕ್ಷತ್ರಿಯವಂಶವನ್ನು ವಿನಾಶಮಾಡುವುದು ಇವನ ಇಂದಿನ ಆಶಯವಾಗಿರಲಾರದು.” ಹೀಗೆಂಬುದಾಗಿ ಪರಸ್ಪರವಾಗಿ ಮಾತನಾಡಿಕೊಂಡು, ತತ್ಕಾಲದಲ್ಲಿ ಮಾಡಬೇಕಾದ ತಮ್ಮ ಕರ್ತವ್ಯವನ್ನು ನೆನೆದು, ಅರ್ಘ್ಯ-ಪಾದ್ಯಾದಿಗಳನ್ನು ತೆಗೆದುಕೊಂಡು ಭಯಂಕರನಾಗಿ ಕಾಣುತ್ತಿದ್ದ ಪರಶುರಾಮನನ್ನು ಆದರದಿಂದ ಸ್ವಾಗತಿಸಿ–

"ಭಾರ್ಗವ! ನಿನಗೆ ಸ್ವಾಗತವು. ನಾವು ಕೊಡಲಿರುವ ಈ ಅರ್ಘ್ಯ-ಪಾದ್ಯಾದಿಗಳನ್ನು ಸ್ವೀಕರಿಸು"–ಇದೇ ಮುಂತಾದ ಸವಿಮಾತುಗಳಿಂದ ಓಲೈಸಿದರು. ಪ್ರತಾಪಶಾಲಿಯಾದ, ಜಮದಗ್ನಿಯ ಮಗನಾದ ಪರಶುರಾಮನು ಋಷಿ-

ಮಹರ್ಷಿಗಳಿಂದೊಡಗೂಡಿ ಆದರಪೂರ್ವಕವಾಗಿ ಕೊಡಲ್ಪಟ್ಟ ಅರ್ಘ್ಯ-ಪಾದ್ಯಾದಿಗಳಿಂದೊಡಗೂಡಿದ ಪೂಜೆಯನ್ನು ಸ್ವೀಕರಿಸಿ ದಶರಥಪುತ್ರನಾದ ಶ್ರೀರಾಮನಿಗೆ ಹೇಳಿದನು.

೭೪ನೆಯ ಸರ್ಗವು ಮುಗಿಯಿತು.

ಬಾಲಕಾಂಡ ೭೫ನೆಯ ಸರ್ಗ

ದಶರಥನ ಮಾತನ್ನು ತಿರಸ್ಕರಿಸುತ್ತಾ ಪರಶುರಾಮನು ಶ್ರೀರಾಮನಿಗೆ ವೈಷ್ಣವಧನುಸ್ಸಿಗೆ ಹೆದೆಯೇರಿಸಲು ಹೇಳಿದುದು

ರಾಮ ದಾಶರಥೇ ವೀರ ವೀರ್ಯಂ ತೇ ಶ್ರೂಯತೇಽದ್ಭುತಮ್ ।
ಧನುಷೋ ಭೇದನಂ ಚೈವ ನಿಖಿಲೇನ ಮಯಾ ಶ್ರುತಮ್ ॥೧॥

"ರಾಮ! ದಾಶರಥೇ! ವೀರ! ನಿನ್ನ ಪರಮಾದ್ಭುತವಾದ

ಪರಾಕ್ರಮವು ಎಲ್ಲೆಲ್ಲಿಯೂ ಕೇಳಿಬರುತ್ತಿದೆ. ತಾಟಕಾವಧೆಯ ಮೊದಲ್ಗೊಂಡು ಇತ್ತೀಚೆಗೆ ಮಾಡಿದ ಶಿವಧನುರ್ಭಂಗದವರೆಗೂ ನೀನು ಮಾಡಿರುವ ಸಕಲಕಾರ್ಯಗಳನ್ನೂ ನಾನು ಕೇಳಿದ್ದೇನೆ.

ರಾಮ! ಅದ್ಭುತವಾದ, ಇತರರಿಂದ ಊಹಿಸಲೂ ಕೂಡ ಅಶಕ್ಯವಾದ ಶೈವಧನುಸ್ಸನ್ನು ನೀನು ಮುರಿದಿರುವೆ. ಅದನ್ನು ಕೇಳಿ ಮತ್ತೊಂದು ಶುಭಕರವಾದ ಮಹಾಧನುಸ್ಸನ್ನು ತೆಗೆದುಕೊಂಡು ನಿನ್ನ ಬಳಿಗೆ ಬಂದಿರುವೆನು. ಇದು ಘೋರರೂಪವಾಗಿರುವ ಮಹಾಧನುಸ್ಸು. ಮಹಾಮಹಿಮನಾದ ಜಮದಗ್ನಿಯಿಂದ ಪ್ರಾಪ್ತವಾದುದು. ಈ ಮಹಾಧನುಸ್ಸಿನ ಮೌರ್ವಿಯನ್ನು ಬಿಗಿದು, ಈ ಮಹಾಧನುಸ್ಸಿನಲ್ಲಿ ಬಾಣವನ್ನು ಸಂಯೋಜಿಸು. ಈ ಮೂಲಕವಾಗಿ ನಿನ್ನಲ್ಲಿರಬಹುದಾದ ಪರಾಕ್ರಮವನ್ನು ತೋರಿಸು. ನೀನು ಈ ಮಹಾಧನುಸ್ಸಿನ ತೋಲನ-ಪೂರಣ-ಶರಸಂಧಾನಾದಿಗಳನ್ನು ಮಾಡಿ, ನಿನ್ನ ಅದ್ಭುತ ಬಲ ವನ್ನು ತೋರಿದೆಯಾದರೆ–ಅನಂತರ ನಾನು ನಿನಗೆ ವೀರ್ಯಶ್ಲಾಘ್ಯವಾದ ದ್ವಂದ್ವಯುದ್ಧವನ್ನು ಕೊಡುತ್ತೇನೆ."

ಪರಶುರಾಮನ ಆ ಮಾತುಗಳನ್ನು ಕೇಳಿ ದಶರಥರಾಜನು ಅತಿದೀನನಾಗಿ ವಿಷಣ್ಣಮುಖಭಾವದಿಂದ ಕೂಡಿದವನಾಗಿ ಪರಶುರಾಮನಿಗೆ ಕೈಮುಗಿದು ಹೇಳಿದನು :

"ಭಾರ್ಗವರಾಮ! ನಿನ್ನ ತಂದೆಯ ವಧೆಯನ್ನು ಕ್ಷತ್ರಿಯರು ಮಾಡಿದುದಕ್ಕಾಗಿ ಕೋಪಾವೇಶದಿಂದ ಇಪ್ಪತ್ತೊಂದು ಬಾರಿ ಕ್ಷತ್ರಿಯರನ್ನು ನಿಗ್ರಹಿಸಿ ಪ್ರಶಾಂತನಾಗಿರುವ, ಮಹಾತಪಸ್ವಿಯಾದ, ಬ್ರಾಹ್ಮಣನಾದ ನೀನು ನನ್ನ ಮಕ್ಕಳಿಗೆ ಅಭಯಪ್ರದಾನಮಾಡುವುದು ಉಚಿತವಾಗಿದೆ. ಅಧ್ಯಯನ ಮತ್ತು ವ್ರತಗಳಿಂದ ಪ್ರಕಾಶಿತರಾದ ಮಹಾಮಹಿಮರಾದ ಭಾರ್ಗವರ ವಂಶದಲ್ಲಿ ಹುಟ್ಟಿರುವ ನೀನು–'ಇನ್ನು ಮುಂದೆ ಶಸ್ತ್ರಧಾರಣೆಮಾಡುವುದಿಲ್ಲ'–ಎಂದು ಇಂದ್ರನ ಮುಂದೆ ಪ್ರತಿಜ್ಞೆಮಾಡಿ ನಿನ್ನ ಶಸ್ತ್ರಾಸ್ತ್ರಗಳೆಲ್ಲವನ್ನೂ ಅವನಲ್ಲಿಯೇ ಬಿಟ್ಟುಬಂದಿರುವೆ. ಅಂತಹ ಧರ್ಮಪರನಾದ ನೀನು ಕ್ಷತ್ರಿಯರನ್ನು ಧ್ವಂಸಮಾಡಿ ಸಂಪಾದಿಸಿದ್ದ ಈ ಭೂಮಂಡಲವನ್ನು ಕಶ್ಯಪನಿಗೆ ದಾನವಾಗಿ ಕೊಟ್ಟು, ಕಾಡಿಗೆ ಹೋಗಿ ಅಲ್ಲಿಂದ ಮುಂದೆ ಬಹುದೂರ ಪ್ರಯಾಣ

ಮಾಡಿ ಮಹೇಂದ್ರಪರ್ವತಕ್ಕೆ ಹೋಗಿ ಅಲ್ಲಿ ವಾಸಮಾಡಿಕೊಂಡಿರುವೆ. ಆದರೆ ಶಾಂತಮನಸ್ಕನಾಗಿ ತಪಶ್ಚರಣೆಯಲ್ಲಿಯೇ ಆಸಕ್ತನಾಗಿದ್ದ ನೀನು ಇಂದ್ರನ ಸಮ್ಮುಖದಲ್ಲಿ ಮಾಡಿದ್ದ ಪ್ರತಿಜ್ಞೆಯನ್ನೂ ಕಡೆಗಾಣಿಸಿ, ಶಸ್ತ್ರಪಾಣಿ ಯಾಗಿ ನನ್ನ ಸರ್ವವಿನಾಶಕ್ಕೆಂದೇ ಇಲ್ಲಿಗೆ ಆಗಮಿಸಿರುವೆ. ಏಕೆಂದರೆ : ನೀನು ದ್ವಂದ್ವಯುದ್ಧಕ್ಕೆ ಕರೆದಿರುವ ರಾಮನೊಬ್ಬನು ಹತನಾದರೂ ನಾವುಗಳಾರೂ ಬದುಕಿರುವುದಿಲ್ಲ. ಇದು ಸತ್ಯ."

ದಶರಥರಾಜನು ಹೀಗೆ ಹೇಳುತ್ತಿರಲಾಗಿ ಪ್ರತಾಪಶಾಲಿಯಾದ ಪರಶುರಾಮನು ಅವನ ಮಾತನ್ನು ಗಣನೆಗೇ ತಂದುಕೊಳ್ಳದೇ, ತಿರಸ್ಕರಿಸುತ್ತಾ ರಾಮನ ಕಡೆಗೆ ತಿರುಗಿ ಹೇಳಿದನು :

"ರಾಮ! ನೀನು ಮುರಿದ ಶೈವಧನುಸ್ಸು ಮತ್ತು ಈಗ ನನ್ನಲ್ಲಿರುವ ವೈಷ್ಣವಧನುಸ್ಸು–ಇವೆರಡೂ ದೇವಲೋಕದಲ್ಲಿ ಪ್ರಾಪ್ತವಾದುವುಗಳು. ಮೂರು ಲೋಕಗಳಲ್ಲಿಯೂ ಪ್ರಸಿದ್ಧವಾದುವುಗಳು ಮತ್ತು ಮೂರು ಲೋಕಗಳ ಜನರಿಂದಲೂ ಪೂಜಿಸಲ್ಪಡತಕ್ಕುವುಗಳು. ದೃಢವಾದುವುಗಳು. ಬಹಳ ಬಲವಾದುವುಗಳು. ಬಹುಬಲಶಾಲಿಗಳಿಂದಲೇ ಧಾರಣ-ತೋಲನ-ಶರಸಂಧಾನಗಳಿಗೆ ಸಾಧ್ಯವಾದುವುಗಳು. ಧನುಸ್ಸುಗಳಲ್ಲಿ ಬಹುಮುಖ್ಯ ವಾದುವುಗಳು ಮತ್ತು ವಿಶ್ವಕರ್ಮನಿಂದ ಬಹುಪ್ರಯತ್ನಪೂರ್ವಕವಾಗಿ ನಿರ್ಮಿತವಾದುವುಗಳು. ತ್ರಿಪುರಾಸುರನೊಡನೆ ಯುದ್ಧಮಾಡಲಿಚ್ಛಿಸಿದ ತ್ರ್ಯಂಬಕನಿಗೆ ಈ ಎರಡು ಮಹಾಧನುಸ್ಸುಗಳಲ್ಲಿ ಒಂದು ಧನುಸ್ಸು ಕೊಡಲ್ಪ ಟ್ಟಿತು. ತ್ರಿಪುರಾಸುರನನ್ನು ಸಂಹಾರಮಾಡಿದ ಶಿವನ ಆ ಮಹಾಧನುಸ್ಸನ್ನೇ ನೀನು ಭಂಗಮಾಡಿರುವೆ. ದುರ್ಧರ್ಷವಾದ ಎರಡನೆಯ ಈ ಧನುಸ್ಸು ದೇವತೆಗಳಿಂದ ಶ್ರೀವಿಷ್ಣುವಿಗೆ ಕೊಡಲ್ಪಟ್ಟಿತು. ನನ್ನ ಕೈಯಲ್ಲಿರುವ ತೇಜೋ ವಿಶಿಷ್ಟವಾದ ಈ ಧನುಸ್ಸೇ ದೇವತೆಗಳು ವಿಷ್ಣುವಿಗೆ ಕೊಟ್ಟ ವೈಷ್ಣವಧನುಸ್ಸಾ ಗಿರುವುದು. ರಾಘವ! ಈ ವೈಷ್ಣವಧನುಸ್ಸು ಶಿವಧನುಸ್ಸಿಗೆ ಸಮಾನವಾದ ಬಲವುಳ್ಳದ್ದಾಗಿದೆ. ಆದರೆ ತ್ರಿಪುರಸಂಹಾರಕಾಲದಲ್ಲಿ ವಿಷ್ಣುವು ಈಶ್ವರನಿಗೆ ಬಾಣರೂಪನಾಗಿ ತ್ರಿಪುರಸಂಹಾರಕ್ಕೆ ನೆರವಾದ್ದರಿಂದ ಶಿತಿಕಂಠ ಮತ್ತು ವಿಷ್ಣು–ಈ ಇಬ್ಬರಲ್ಲಿ ಬಲಶಾಲಿಗಳು ಯಾರೆಂಬುದನ್ನು ತಿಳಿಯುವ

ಕುತೂಹಲದಿಂದ ಸರ್ವದೇವತೆಗಳೂ ಪಿತಾಮಹನ ಬಳಿಗೆ ಹೋಗಿ ಅವನನ್ನು ಈ ವಿಷಯವಾಗಿಯೇ ಪ್ರಶ್ನಿಸಿದರು :

"ಬ್ರಹ್ಮದೇವ! ಹರಿ-ಹರ ಈ ಇಬ್ಬರು ದೇವತೆಗಳಲ್ಲಿ ಬಲಿಷ್ಠರು ಯಾರು?"

ದೇವದೇವನಾದ ದೇವಪಿತಾಮಹನು ದೇವತೆಗಳ ಅಭಿಪ್ರಾಯವನ್ನು ತಿಳಿದು ಹರಿ-ಹರರಲ್ಲಿ ಪರಸ್ಪರವಿರೋಧವುಂಟಾಗುವಂತೆ ಮಾಡಿದನು. ಒಬ್ಬರು ಮತ್ತೊಬ್ಬರನ್ನು ಜಯಿಸಿ, ತಮ್ಮ ಬಲಾಧಿಕ್ಯವನ್ನು ತೋರ್ಪಡಿಸಬೇಕೆಂಬ ಆಕಾಂಕ್ಷೆಯುಳ್ಳ ಹರಿ-ಹರರಿಬ್ಬರಿಗೂ ರೋಮಾಂಚನವನ್ನುಂಟು ಮಾಡುವ, ಘೋರವಾದ ಯುದ್ಧವು ಪ್ರಾರಂಭವಾಯಿತು. ಆ ಸಮಯದಲ್ಲಿ ವಿಷ್ಣುವು ಕೋಪಾಧಿಕ್ಯದಿಂದ ಒಂದು ಬಾರಿ ಹುಂಕರಿಸಿದನು. ವಿಷ್ಣುವಿನ ಹುಂಕಾರಮಾತ್ರದಿಂದಲೇ ಶಿವನ ಕೈಲಿದ್ದ ಭಯಂಕರಪರಾಕ್ರಮವಿಶಿಷ್ಟವಾದ ಧನುಸ್ಸು ಶಿಥಿಲವಾಯಿತು. ತನ್ನ ಧನುಸ್ಸು ಶಿಥಿಲವಾದುದನ್ನು ಕಂಡು ತ್ರಿಲೋಚನನಾದ, ಮಹಾದೇವನಾದ ಪರಶಿವನು ಸ್ತಂಭೀಭೂತನಾದನು. ಆ ಸಮಯಕ್ಕೆ ಸರಿಯಾಗಿ ಋಷಿಗಳ ಸಮೂಹದೊಡನೆಯೂ ಸಿದ್ಧ-ಚಾರಣರೊಡನೆಯೂ ಕೂಡಿ ದೇವತೆಗಳು ಯುದ್ಧದ ನಿಲುಗಡೆಗಾಗಿ ಪ್ರಾರ್ಥಿಸಿದರು. ಸುರೋತ್ತಮರಾದ ಹರಿ-ಹರರು ದೇವಾನುಗ್ರಹಾರ್ಥವಾಗಿ ಯುದ್ಧವನ್ನು ನಿಲ್ಲಿಸಿ ಶಾಂತರಾದರು. ವಿಷ್ಣುವಿನ ಪರಾಕ್ರಮಗಳಿಂದ (ಹುಂಕಾರಮಾತ್ರದಿಂದ ಶಿವನ ಧನುಸ್ಸು ಶಿಥಿಲವಾದುದನ್ನು ಕಂಡು) ದೇವತೆಗಳು, ಸಿದ್ಧ-ಚಾರಣರು ಮತ್ತು ಋಷಿ-ಮಹರ್ಷಿಗಳು ವಿಷ್ಣುವನ್ನೇ ಶ್ರೇಷ್ಠನೆಂಬುದಾಗಿ ತಿಳಿದುಕೊಂಡರು. ಪರಮಕ್ರುದ್ಧನಾಗಿದ್ದ ರುದ್ರನು ದೇವತೆಗಳ ಪ್ರಾರ್ಥನೆಯಂತೆ ಶಾಂತನಾಗಿ, ತನ್ನಲ್ಲಿದ್ದ ಶೈವಧನುಸ್ಸನ್ನು ಬಾಣದೊಡನೆ ರಾಜರ್ಷಿಯಾದ, ನಿಮಿಕುಲೋತ್ಪನ್ನನಾದ ದೇವರಾತನ ಕೈಯಲ್ಲಿ ನಿಕ್ಷೇಪರೂಪವಾಗಿ ಕೊಟ್ಟನು.* ರಾಮ! ಶತ್ರುಗಳ ಪಟ್ಟಣವನ್ನು

---

* ತ್ರಿಪುರಸಂಹಾರಕಾಲದಲ್ಲಿ ಶಿವನು ಮೇರುಪರ್ವತವನ್ನೇ ಧನುಸ್ಸನ್ನಾಗಿ ಮಾಡಿಕೊಂಡಿದ್ದನೆಂಬ ಪುರಾಣೋಕ್ತಿಯಿದೆ. ಶಿವಧನುಸ್ಸಿನ ಪ್ರಾಪ್ತಿ ಮತ್ತು ಈ ಧನುಸ್ಸು ಯಾರಿಂದ ಯಾರಿಗೆ ಯಾವಾಗ ಕೊಡಲ್ಪಟ್ಟಿತು ಎಂಬ ವಿಷಯವಾಗಿ ಕಥೆಗಳೆಲ್ಲವನ್ನೂ ಕ್ರೋಢೀಕರಿಸಿ ಹೀಗೆ ಹೇಳಬಹುದಾಗಿದೆ. "ದೇವತೆಗಳು ಶಿವಧನುಸ್ಸನ್ನು ವಿಶ್ವಕರ್ಮನಿಂದ ಮಾಡಿಸಿ ತ್ರಿಪುರಸಂಹಾರಕ್ಕಾಗಿ ಈಶ್ವರನಿಗೆ ಕೊಟ್ಟರು. ದಕ್ಷಯಜ್ಞದ

ಜಯಿಸಲು ಸಮರ್ಥವಾದ, ನನ್ನ ಕೈಯಲ್ಲಿರುವ, ಉತ್ತಮೋತ್ತಮವಾದ ಈ ವೈಷ್ಣವಧನುಸ್ಸನ್ನು ವಿಷ್ಣುವು ಭೃಗುವಂಶೋತ್ಪನ್ನನಾದ ಋಚೀಕನಿಗೆ ನ್ಯಾಸರೂಪವಾಗಿ ಕೊಟ್ಟನು. ಮಹಾತೇಜಸ್ವಿಯಾದ ಋಚೀಕನು ಈ ಧನೂ ರತ್ನವನ್ನು ತನ್ನ ಮಗನಾದ, ತನ್ನನ್ನು ಕೊಲ್ಲಲು ಬಂದವರ ವಿಷಯ ದಲ್ಲಿಯೂ ಯಾವ ವಿಧವಾದ ಪ್ರತಿಕ್ರಿಯೆಯನ್ನೂ ಕೈಗೊಳ್ಳದ, ನನ್ನ ತಂದೆಯಾದ, ಮಹಾತ್ಮನಾದ ಜಮದಗ್ನಿಗೆ ಕೊಟ್ಟನು. ಶಸ್ತ್ರಸಂನ್ಯಾಸವನ್ನು ಮಾಡಿದ್ದ, ತಪೋಬಲಸಮನ್ವಿತನಾದ ನನ್ನ ತಂದೆಯನ್ನು ಅಲ್ಪವಾದ ಬುದ್ಧಿ ಯನ್ನು ಹೊಂದಿದ್ದ ಕಾರ್ತವೀರ್ಯಾರ್ಜುನನು ಸಂಹರಿಸಿದನು.* ಅಮಾನುಷವಾದ, ನಿಷ್ಕಾರಣವಾದ, ಅತಿದಾರುಣವಾದ ನಮ್ಮ ತಂದೆಯ ಆ ವಧೆಯನ್ನು ಕೇಳಿದ ನಾನು ಕೋಪದಿಂದ ಕ್ಷತ್ರವಂಶವು ಹುಟ್ಟು-ಹುಟ್ಟು ತ್ತಿದ್ದಂತೆಯೇ ಇಪ್ಪತ್ತೊಂದು ಬಾರಿ ಸಂಹರಿಸಿ, ಕ್ಷತ್ರಿಯರ ವಧೆಯಿಂದ ಪ್ರಾಪ್ತವಾದ, ಅಖಂಡವಾದ ಈ ಪೃಥ್ವಿಯನ್ನು–ನಾನು ಮಾಡಿದ ಯಜ್ಞದ ಅಂತ್ಯದಲ್ಲಿ–ಪುಣ್ಯಶೀಲನಾದ, ಮಹಾತ್ಮನಾದ ಕಶ್ಯಪನಿಗೆ ದಕ್ಷಿಣಾರೂಪ ವಾಗಿ ಕೊಟ್ಟು, ತಪೋಬಲಸಮನ್ವಿತನಾಗಿ ಮಹೇಂದ್ರಪರ್ವತದಲ್ಲಿ ವಾಸ ಮಾಡುತ್ತಿದ್ದೆನು. ನೀನು ಮಾಡಿದ ಶೈವಧನುರ್ಭಂಗವನ್ನು ಕೇಳಿದೊಡ ನೆಯೇ ನಿನ್ನನ್ನು ನೋಡುವ ಸಲುವಾಗಿ ಇಲ್ಲಿಗೆ ಬಂದೆನು. ಪಿತೃ-ಪೈತಾಮಹ ರಿಂದ ನನಗೆ ಪ್ರಾಪ್ತವಾಗಿರುವ ಉತ್ತಮೋತ್ತಮವಾದ ಈ ಮಹಾವೈಷ್ಣವ ಧನುಸ್ಸನ್ನು ಕ್ಷತ್ರಧರ್ಮವನ್ನು ಗೌರವಿಸಿ ಪರಿಗ್ರಹಿಸು. ಕಾಕುತ್ಸ್ಥ! ನಿಶ್ಚಯ ವಾಗಿಯೂ ನೀನು ಶಕ್ತನೇ ಆಗಿರುವುದಾದರೆ ಈ ವೈಷ್ಣವಧನುಸ್ಸನ್ನು ಬಗ್ಗಿಸಿ ನಾಣನ್ನು ಎಳೆದು ಕಟ್ಟಿ, ಶತ್ರುಗಳ ಪಟ್ಟಣವನ್ನು ಜಯಿಸಲು ಸಮರ್ಥವಾದ ಬಾಣವನ್ನು ಹೂಡು. ನೀನು ಹಾಗೆ ಶರಸಂಧಾನಮಾಡಿದೆ

ಅಂತ್ಯದಲ್ಲಿ ಹರಿ-ಹರರಿಗೆ ಯುದ್ಧವುಂಟಾಗಿ ಆ ಶಿವಧನುಸ್ಸು ವಿಷ್ಣುವಿನ ಹುಂಕಾರದಿಂದ ಶಿಥಿಲವಾಯಿತು. ಅದೇ ಧನುಸ್ಸನ್ನು ಶಿವನು ದೇವತೆಗಳ ಪ್ರಾರ್ಥನೆಯಂತೆ ನಿಮಿವಂಶ ಸಂಭೂತನಾದ ದೇವರಾತನಲ್ಲಿ ನ್ಯಾಸಭೂತನಾಗಿ ಇಟ್ಟಿದ್ದನು. ಅನಂತರ ಆ ಧನುಸ್ಸು ಜನಕನ ಪ್ರಾರ್ಥನೆಯಂತೆ ದೇವತೆಗಳ ಇಚ್ಛಾನುಸಾರವಾಗಿ ವರುಣನಿಂದ ಜನಕನಿಗೆ ಯಜ್ಞದ ಫಲರೂಪವಾಗಿ ಕೊಡಲ್ಪಟ್ಟಿತು.

* ಕಾರ್ತವೀರ್ಯಾರ್ಜುನನ ಮಕ್ಕಳು ಜಮದಗ್ನಿಯನ್ನು ಸಂಹರಿಸಿದರೆಂದು ಪುರಾಣಾಂತರದಲ್ಲಿ ಉಕ್ತವಾಗಿದೆ.

ಯಾದರೆ ಅನಂತರ (ಶಕ್ತನೆಂದು ಒಪ್ಪಿ) ನಿನ್ನೊಡನೆ ದ್ವಂದ್ವಯುದ್ಧವನ್ನು ಮಾಡುತ್ತೇನೆ."

ಎಪ್ಪತ್ತೈದನೆಯ ಸರ್ಗವು ಮುಗಿಯಿತು.

ಶ್ರೀರಾಮನು ವೈಷ್ಣವಧನುಸ್ಸಿಗೆ ಹೆದೆಯೇರಿಸಿ ಬಾಣವನ್ನು ಅನುಸಂಧಾನಮಾಡಿ ಪರಶುರಾಮನ ತಪಃಫಲವನ್ನು ಲಕ್ಷ್ಯವಾಗಿಟ್ಟು ವಿನಾಶಗೊಳಿಸಿದುದು : ಪರಶುರಾಮನು ಮಹೇಂದ್ರಪರ್ವತಕ್ಕೆ ಹಿಂದಿರುಗಿದುದು

ಶ್ರುತ್ವಾ ತು ಜಾಮದಗ್ನ್ಯಸ್ಯ ವಾಕ್ಯಂ ದಾಶರಥಿಸ್ತದಾ ।
ಗೌರವಾದ್ಯನ್ತ್ರಿತಕಥಃ ಪಿತೂ ರಾಮಮಥಾಬ್ರವೀತ್ ॥೧॥

ಜಮದಗ್ನಿಯ ಮಗನಾದ ಪರಶುರಾಮನ ಮಾತುಗಳನ್ನು ಕೇಳಿ, ತಂದೆಯಾದ ದಶರಥನು ಸಮೀಪದಲ್ಲಿಯೇ ಇದ್ದುದರಿಂದ ತಂದೆಗೆ ಗೌರವ ಕೊಡುವ ಸಲುವಾಗಿ ಹೆಚ್ಚು ಮಾತನಾಡದೇ ದಾಶರಥಿಯು ಪರಶುರಾಮನಿಗೆ ಹೇಳಿದನು :

"ಭಾರ್ಗವ! ಪಿತೃವಿನ ವಧೆಯಿಂದ ಉಂಟಾದ ಕೋಪದ ಪ್ರಶಮನಕ್ಕಾಗಿ ನೀನು ಇಪ್ಪತ್ತೊಂದು ಬಾರಿ ಕ್ಷತ್ರಿಯಕುಲವನ್ನೇ ವಿನಾಶಮಾಡಿದ ಕಥೆಯನ್ನು ನಾನು ಕೇಳಿದ್ದೇನೆ. ವೈರಶುದ್ಧಿಗೆ ಅಥವಾ ಕೋಪಪ್ರಶಮನಕ್ಕೆ ಶೂರರು ಮಾಡಬೇಕಾದ ಕಾರ್ಯವೇ ಇದಾಗಿದೆಯೆಂಬುದನ್ನೂ ನಾನು ಅಂಗೀಕರಿಸುತ್ತೇನೆ. ಆದರೆ ನೀನು ವೀರ್ಯಹೀನರನ್ನೂ, ಅಶಕ್ತರನ್ನೂ ಮಾತನಾಡಿಸುವಂತೆ ಕ್ಷತ್ರಧರ್ಮದಲ್ಲಿ ನಿಯುಕ್ತನಾಗಿರುವ ನನ್ನನ್ನು '**ಕ್ಷತ್ರಧರ್ಮಂ ಪುರಸ್ಕೃತ್ಯ**' ಮುಂತಾಗಿ ಮಾತನಾಡಿ ಅವಮಾನಮಾಡುತ್ತಿರುವೆ. ನನ್ನ ಕ್ಷಾತ್ರತೇಜಸ್ಸನ್ನೂ ಮತ್ತು ನನ್ನ ಪರಾಕ್ರಮವನ್ನೂ ಈಗಲೇ ಕಾಣುವೆ." ಹೀಗೆ ಹೇಳಿ ಪರಮಕ್ರುದ್ಧನಾದ, ಶೀಘ್ರಪರಾಕ್ರಮಿಯಾದ ಶ್ರೀರಾಮನು ಪರಶುರಾಮನ ಕೈಯಿಂದ ಶ್ರೇಷ್ಠವಾದ ವೈಷ್ಣವಧನುಸ್ಸನ್ನೂ ಮತ್ತು ಬಾಣವನ್ನೂ ತೆಗೆದುಕೊಂಡು, ಕ್ಷಣಮಾತ್ರದಲ್ಲಿ ಧನುಸ್ಸನ್ನು ಬಗ್ಗಿಸಿ, ನಾಣನ್ನು ಕಟ್ಟಿ ಬಾಣವನ್ನು ಹೂಡಿದನು. ಈ ಕ್ರಿಯೆಗಳೆಲ್ಲವೂ ನಿಮಿಷಮಾತ್ರದಲ್ಲಿ

ನಡೆದುಹೋದುವು.* ಶರಸಂಧಾನಮಾಡಿದನಂತರ ಕ್ರುದ್ಧನಾದ ಶ್ರೀರಾಮನು ಪರಶುರಾಮನಿಗೆ ಹೇಳಿದನು : “ಭಾರ್ಗವರಾಮ! ನೀನು ಬ್ರಾಹ್ಮಣನಾಗಿರುವೆ. ಮೇಲಾಗಿ ನನ್ನ ಗುರುಗಳಾದ ವಿಶ್ವಾಮಿತ್ರರ ಭಗಿನಿಯಾದ ಸತ್ಯವತಿಯ ಪೌತ್ರನಾಗಿರುವೆ. ಈ ಎರಡು ಕಾರಣಗಳಿಂದಾಗಿ ನೀನು ನನಗೆ ಪೂಜ್ಯನಾಗಿರುವೆ. ಆದುದರಿಂದ ಸಜ್ಜುಗೊಳಿಸಿರುವ, ಪ್ರಾಣಾಪಹಾರ ಸಾಮರ್ಥ್ಯವುಳ್ಳ ಈ ಬಾಣವನ್ನು ನಿನ್ನ ಮೇಲೆ ಪ್ರಯೋಗಿಸಲು ನನಗೆ ಇಷ್ಟವಿಲ್ಲ. (ಆದರೆ ಸಂಧಾನಮಾಡಿರುವ ಶರವನ್ನು ಮಾತ್ರ ಕೆಳಗಿಳಿಸುವ ಸಾಧ್ಯತೆಯಿಲ್ಲ.) ನೀನು ತಪೋಬಲದಿಂದ ಸಾಧಿಸಿಕೊಂಡಿರುವ ಸ್ವೇಚ್ಛಾಗಮನವನ್ನಾದರೂ ಈ ಬಾಣಪ್ರಯೋಗದಿಂದ ವಿನಾಶಮಾಡುತ್ತೇನೆ. ಅಥವಾ ಅಪ್ರತಿಮವಾದ ಲೋಕವನ್ನು ಪಡೆಯಲು ಸಾಧಕವಾದ ನಿನ್ನ ತಪಃ ಫಲವನ್ನಾದರೂ ವಿನಾಶಗೊಳಿಸುತ್ತೇನೆ. ಈ ಎರಡರಲ್ಲಿ ನಿನಗೆ ಯಾವುದನ್ನು ಉಳಿಸಿಕೊಳ್ಳಬೇಕೆಂಬ ಆಶೆಯಿದೆಯೆಂಬುದನ್ನು ಕೂಡಲೇ ನಿರ್ಧರಿಸಿ ಹೇಳು. ಆದರೆ ದಿವ್ಯವಾದ, ಶತ್ರುಗಳ ದರ್ಪಧ್ವಂಸಕವಾದ, ಶತ್ರುಗಳನ್ನು ಜಯಿಸಲು ಸಮರ್ಥವಾಗಿರುವ, ವೈಷ್ಣವಧನುಸ್ಸಿನಿಂದ ಚ್ಯುತವಾಗಲಿರುವ ಈ ಬಾಣವು ಲಕ್ಷ್ಯವನ್ನು ಭೇದಿಸದೇ ವ್ಯರ್ಥವಾಗಿ ಕೆಳಗೆ ಬೀಳಲಾರದು.” ಶ್ರೇಷ್ಠವಾದ ವೈಷ್ಣವಧನುಸ್ಸನ್ನು ಧರಿಸಿ, ಶರಸಂಧಾನಮಾಡಿ, ಪರಶುರಾಮನಿಗೆ ಎದುರಾಗಿ ನಿಂತಿರುವ ಶ್ರೀರಾಮನನ್ನು ನೋಡುವ ಸಲುವಾಗಿ ಪಿತಾಮಹಪುರಸ್ಸರರಾಗಿ, ಋಷಿ-ಮಹರ್ಷಿಗಳಿಂದೊಡಗೂಡಿದ ದೇವತೆಗಳೂ ಅಲ್ಲಿಗೆ ಆಗಮಿಸಿದರು. ಗಂಧರ್ವಾಪ್ಸರೆಯರೂ, ಸಿದ್ಧ-ಚಾರಣ-ಕಿನ್ನರರೂ, ಯಕ್ಷ-ರಾಕ್ಷಸ-ಪನ್ನಗರೂ ಮಹಾದ್ಭುತವಾದ ಆ ದೃಶ್ಯವನ್ನು ನೋಡುವ ಸಲುವಾಗಿ ಆಗಮಿಸಿದರು. ಲೋಕಗಳೆಲ್ಲವೂ ಸ್ತಬ್ಧವಾಗಲಾಗಿ, ರಾಮನು ಶ್ರೇಷ್ಠವಾದ ವೈಷ್ಣವಧನುಸ್ಸನ್ನು ಧರಿಸಿರಲಾಗಿ, ಜಮದಗ್ನಿಯ ಮಗನಾದ

---

* ಆ ಧನುಸ್ಸಿನೊಡನೆಯೇ ಪರಶುರಾಮನಲ್ಲಿದ್ದ ವೈಷ್ಣವೀಶಕ್ತಿಯನ್ನೂ ರಾಮನು ಗ್ರಹಿಸಿದನೆಂದು ಪದ್ಮಪುರಾಣದಲ್ಲಿ ಹೇಳಿದೆ. ಇತ್ಯುಕ್ತ್ವಾ ದೇವಿ ವೈಷ್ಣವ್ಯಾ ಶಕ್ತ್ಯಾ ತದ್ಗತಯಾ ಸಹ । ಜಗ್ರಾಹ ವೈಷ್ಣವಂ ಚಾಪಂ ವಿನಯೇನ ಚ ಲೀಲಯಾ ॥ “ದೇವಿ! ಶ್ರೀರಾಮನು ಪರಶುರಾಮನಿಗೆ ಹೀಗೆ ಹೇಳಿ, ಅವನಲ್ಲಿದ್ದ ವೈಷ್ಣವೀಶಕ್ತಿಯೊಡನೆ ವೈಷ್ಣವಚಾಪವನ್ನು ನಮ್ರತೆಯಿಂದಲೂ ಮತ್ತು ಲೀಲೆಯಿಂದಲೂ (ಆಯಾಸವಿಲ್ಲದೇ) ಗ್ರಹಿಸಿದನು.”

ಪರಶುರಾಮನು ನಿರ್ವೀರ್ಯನಾಗಿ–ವಿಹ್ವಲನಾಗಿ ಶ್ರೀರಾಮನನ್ನು ನೋಡಿದನು.[1] ರಾಮನ ದಿವ್ಯತೇಜಸ್ಸಿನಿಂದಾಗಿ ಗತವೀರ್ಯನಾದ, ಜಡನಾದ, ಪರಶುರಾಮನು ಕಮಲಲೋಚನನಾದ ರಾಮನಿಗೆ ಮಂದವಾದ ದನಿಯಲ್ಲಿ ಹೇಳಿದನು :

"ರಾಮ! ನಾನು ವಿಶ್ವದ ಕ್ಷತ್ರಿಯರೆಲ್ಲರನ್ನೂ ಇಪ್ಪತ್ತೊಂದು ಬಾರಿ ಸಂಹರಿಸಿ ಗಳಿಸಿದ ಈ ಭೂಮಿಯನ್ನು ಯಜ್ಞದ ದಕ್ಷಿಣಾರೂಪವಾಗಿ ಕಶ್ಯಪರಿಗೆ ದಾನಮಾಡಿದಾಗ–ಕಶ್ಯಪರು ಈ ನನ್ನ ಭೂಮಿಯಲ್ಲಿ ನೀನು ಕ್ಷಣಮಾತ್ರವೂ ಇರಕೂಡದೆಂದು ಹೇಳಿದರು. ಗುರುಗಳಾದ ಮಹಾತ್ಮರಾದ ಕಶ್ಯಪರಿಂದ ಹೀಗೆ ಆಜ್ಞಪ್ತನಾದ ನಾನು ಒಡನೆಯೇ ಅವರ ಮುಂದೆ ರಾತ್ರಿಯ ವೇಳೆಯಲ್ಲಿ ಭೂಮಿಯಲ್ಲಿ ವಾಸಮಾಡುವುದಿಲ್ಲವೆಂದು ಪ್ರತಿಜ್ಞೆ ಮಾಡಿದೆನು. ಅಂದು ಮೊದಲ್ಗೊಂಡು ನಾನು ರಾತ್ರಿಯ ಕಾಲದಲ್ಲಿ ಭೂಮಿಯ ಮೇಲೆ ವಾಸಮಾಡುವುದಿಲ್ಲ. ಏಕೆಂದರೆ : ಪೃಥ್ವಿಯು ಕಶ್ಯಪರ ಸ್ವತ್ತಾಯಿತು. ಆದುದರಿಂದ ನಾನು ನನ್ನ ಪ್ರತಿಜ್ಞೆಯಂತೆ ಮನಸ್ಸಿನ ವೇಗದಿಂದ ಉತ್ತಮೋತ್ತಮವಾದ ಮಹೇಂದ್ರಪರ್ವತಕ್ಕೆ ಹೋಗಲೇಬೇಕಾಗಿರುವುದರಿಂದ ನನ್ನ ಮನೋಗತಿಗೆ ಸಾಧಕವಾದ ತಪಸ್ಸನ್ನು ನೀನು ಧ್ವಂಸ ಮಾಡುವುದು ಬೇಡ. ಆದರೆ ನಾನು ನನ್ನ ತಪಸ್ಸಿನಿಂದ ಉತ್ತಮೋತ್ತಮ ವಾದ ಅನೇಕಲೋಕಗಳನ್ನು ಜಯಿಸಿದ್ದೇನೆ. ಉತ್ತಮೋತ್ತಮಲೋಕ ಪ್ರಾಪಕವಾದ ಆ ತಪಃಫಲವನ್ನೇ ನಿನ್ನ ಶರಕ್ಕೆ ಲಕ್ಷ್ಯವಾಗಿಡುವೆನು. ನೀನು ಅದರ ಮೇಲೆ ನಿನ್ನ ಬಾಣವನ್ನು ಪ್ರಯೋಗಿಸು.* ಕಾಲವಿಳಂಬವಾಗದಿರಲಿ. ಈ ವೈಷ್ಣವಮಹಾಧನುಸ್ಸಿನ ತೋಲನ-ಧಾರಣ-ಶರಸಂಧಾನಗಳನ್ನು ಮಾಡಿರುವ ನಿನ್ನನ್ನು ನಾನು ಜನ್ಮ-ಮೃತ್ಯು-ಜರಾರಹಿತನೆಂದೂ, ಮಧುಹಂತಕನಾದ ಸುರೇಶ್ವರನಾದ ವಿಷ್ಣುವೆಂದೂ ತಿಳಿಯುತ್ತೇನೆ. ಅಪ್ರತಿಮಕರ್ಮನಾದ,

---

[1] ತತಃ ಪರಶುರಾಮಸ್ಯ ದೇಹಾನ್ನಿರ್ಗತ್ಯ ವೈಷ್ಣವಮ್ । ಪಶ್ಯತಾಂ ಸರ್ವದೇವಾನಾಂ ತೇಜೋ ರಾಮಮುಪಾಗಮತ್ ॥ (ನೃಸಿಂಹ ಪುರಾಣ) ಬಳಿಕ ವೈಷ್ಣವ ತೇಜಸ್ಸು ಪರಶುರಾಮನ ದೇಹದಿಂದ ಹೊರಹೊರಟು ಎಲ್ಲ ದೇವತೆಗಳೂ ನೋಡುತ್ತಿರುವಂತೆಯೇ ರಾಮನನ್ನು ಸೇರಿತು.

* ಪದ್ಮಪುರಾಣದಲ್ಲಿ ಪರಶುರಾಮನು ರಾಮನ ಬಾಣಕ್ಕೆ ಲಕ್ಷ್ಯವಾಗಿಟ್ಟ ತಪಃಫಲದ

ಯುದ್ಧದಲ್ಲಿ ಅದ್ವಿತೀಯನಾದ ನಿನ್ನನ್ನು–ದೇವಲೋಕದಿಂದ ಆಗಮಿಸಿರುವ ಈ ದೇವತೆಗಳೆಲ್ಲರೂ ನೋಡುತ್ತಿದ್ದಾರೆ. ನಿನ್ನಿಂದಾದ ಪರಾಭವದಿಂದ ನಾನು ನಾಚಿಕೆಪಡುವ ಕಾರಣವಿಲ್ಲ. ಏಕೆಂದರೆ : ನಾನು ಪರಾಜಿತನಾಗಿರು ವುದು ತ್ರೈಲೋಕ್ಯನಾಥನಾದ, ಪೂರ್ಣತೇಜೋವಿಶಿಷ್ಟನಾದ

ವಿಷ್ಣುವಿನಿಂದ. ನೀನಿನ್ನು ತಡಮಾಡದೇ ಲಕ್ಷ್ಯರೂಪವಾಗಿಟ್ಟಿರುವ ನನ್ನ ಅಪಾರಪುಣ್ಯರಾಶಿಯನ್ನುದ್ದೇಶಿಸಿ ಅಪ್ರತಿಮವಾದ ಬಾಣವನ್ನು ಪ್ರಯೋಗಿಸು. ನೀನು ಬಾಣ ಪ್ರಯೋಗಮಾಡಿದನಂತರ ನಾನು ಪರ್ವತೋಮತ್ತಮವಾದ ಮಹೇಂದ್ರ ಪರ್ವತಕ್ಕೆ ಹೋಗುವೆನು."

ಪರಿಮಿತಿಯನ್ನೂ ಹೇಳಿದ್ದಾರೆ. ಶತಯಜ್ಞಕೃತಂ ಪುಣ್ಯಂ ತದಸ್ತ್ರಾಯ ನ್ಯವೇದಯತ್ ।

ಪರಶುರಾಮನು ಹೀಗೆ ಹೇಳುತ್ತಿರಲಾಗಿ ಶ್ರೀಮಂತನಾದ ದಶರಥ ಪುತ್ರನಾದ ರಾಮನು ಪರಶುರಾಮನ ಅಪಾರಪುಣ್ಯಫಲವನ್ನುದ್ದೇಶಿಸಿ, ವೈಷ್ಣವಧನುಸ್ಸಿಗೆ ಸಂಯೋಜಿಸಿದ್ದ ಬಾಣವನ್ನು ಪ್ರಯೋಗಿಸಿದನು. ರಾಮನು ಪರಶುರಾಮನ ಪುಣ್ಯರಾಶಿಯನ್ನು ಅನುಲಕ್ಷಿಸಿ ಬಾಣಪ್ರಯೋಗಮಾಡಿ ದೊಡನೆಯೇ ಕಠಿನವಾದ ತಪಶ್ಚರಣೆಯಿಂದ ಬಹುಪ್ರಯಾಸದಿಂದ ಆರ್ಜಿ ಸಿದ್ದ ಪರಶುರಾಮನ ಪುಣ್ಯರಾಶಿಯು ಲುಪ್ತವಾಗಿ ಹೋಯಿತು. ಪರಶು ರಾಮನು ತಾನು ಆರ್ಜಿಸಿದ್ದ ಪುಣ್ಯರಾಶಿಯು ವಿನಾಶಹೊಂದಿದುದನ್ನು ಮನಗಂಡು, ಒಡನೆಯೇ ಮಹೇಂದ್ರಪರ್ವತವನ್ನು ಸೇರಿದನು. ದಿಕ್ಕುಗಳೂ ಉಪದಿಕ್ಕುಗಳೂ ಬೆಳಗಿದುವು. ಕತ್ತಲು ದೂರವಾಯಿತು. ಋಷಿ-ಮಹರ್ಷಿ ಗಳಿಂದೊಡಗೂಡಿದ ದೇವತೆಗಳು ಸಂತೋಷಭರಿತರಾಗಿ ರಾಮನನ್ನು ನಾನಾಪ್ರಕಾರವಾಗಿ ಪ್ರಶಂಸೆಮಾಡಿದರು. ಹೀಗೆ ಜಮದಗ್ನಿಯ ಪುತ್ರನಾದ ಪ್ರಭುವಾದ ಪರಶುರಾಮನು ಶ್ರೀರಾಮನನ್ನು ಪ್ರಶಂಸೆಮಾಡಿ ಪ್ರದಕ್ಷಿಣೆ ಮಾಡಿ ತನ್ನ ಮಾರ್ಗವನ್ನು ಹಿಡಿದು ಹೊರಟುಹೋದನು.*

೭೬ನೆಯ ಸರ್ಗವು ಮುಗಿಯಿತು.

ಬಾಲಕಾಂಡ ೭೭ನೆಯ ಸರ್ಗ

ದಶರಥರಾಜನು ಮಕ್ಕಳೊಡನೆಯೂ, ವಧುಗಳೊಡನೆಯೂ ಅಯೋಧ್ಯಾಪಟ್ಟಣವನ್ನು ಸೇರಿದುದು : ಭರತನು ಶತ್ರುಘ್ನನೊಡನೆ ತನ್ನ ಸೋದರಮಾವನ ಊರಿಗೆ ಪ್ರಯಾಣಮಾಡಿದುದು : ಶ್ರೀರಾಮನ ಸದ್ವ್ಯವಹಾರಗಳಿಂದ ನಾಗರಿಕರ ಸಂತೋಷ : ಸೀತಾ-ರಾಮರ ಪರಸ್ಪರಪ್ರೇಮ

ಗತೇ ರಾಮೇ ಪ್ರಶಾನ್ತಾತ್ಮಾ ರಾಮೋ ದಾಶರಥಿರ್ಧನುಃ ।
ವರುಣಾಯಾಪ್ರಮೇಯಾಯ ದದೌ ಹಸ್ತೇ ಸಸಾಯಕಮ್ ॥೧॥

ನೂರು ಯಜ್ಞಗಳಿಂದ ಪಡೆದ ಪುಣ್ಯರಾಶಿಯನ್ನು ರಾಮನ ಬಾಣಕ್ಕೆ ಲಕ್ಷ್ಯವನ್ನಾಗಿಟ್ಟನು.

* ಈ ವಿಷಯವು ಹಿಂದೆಯೇ ಬಂದಿರುವುದರಿಂದ ಪುನರುಕ್ತಿಯಾಗದಂತೆ ಒಬ್ಬ ವ್ಯಾಖ್ಯಾನಕಾರರು ಹೀಗೆ ಅರ್ಥಮಾಡಿದ್ದಾರೆ. ಪರಶುರಾಮನು ತನ್ನ ಸ್ವಸ್ಥಾನವಾದ

ಪರಶುರಾಮನು ಮಹೇಂದ್ರಪರ್ವತಕ್ಕೆ ಹೊರಟುಹೋದನಂತರ ಪ್ರಶಾಂತಾತ್ಮನಾದ, ದಶರಥಪುತ್ರನಾದ ರಾಮನು ತನ್ನಲ್ಲಿದ್ದ ಬಾಣಸಹಿತವಾದ ವೈಷ್ಣವಧನುಸ್ಸನ್ನು ಅಪ್ರಮೇಯನಾದ ವರುಣನಿಗೆ ನಿಕ್ಷೇಪರೂಪವಾಗಿ ಕೊಟ್ಟನು. (ಪರಶುರಾಮ-ದಾಶರಥಿರಾಮರ ದ್ವಂದ್ವಯುದ್ಧವನ್ನು ನೋಡುವ ಕುತೂಹಲದಿಂದ ದೇವತೆಗಳೊಡನೆ ವರುಣನೂ ಆಗಮಿಸಿದ್ದನು.) ಅನಂತರ ಶ್ರೀರಾಮನು ವಸಿಷ್ಠಪ್ರಮುಖರಾದ ಋಷಿ-ಮಹರ್ಷಿಗಳಿಗೆ ಅಭಿವಾದನಪೂರ್ವಕವಾಗಿ ನಮಸ್ಕರಿಸಿ, ತಂದೆಯು ಖಿನ್ನನಾಗಿರುವುದನ್ನು ಕಂಡು ಹೇಳಿದನು :*

"ತಂದೆಯೇ! ಜಮದಗ್ನಿಯ ಪುತ್ರನಾದ ರಾಮನು ಹೊರಟುಹೋದನು. ನಿನ್ನಿಂದ ಪರಿಪಾಲಿತವಾದ ಚತುರಂಗಸೇನೆಯು ಅಯೋಧ್ಯಾಭಿಮುಖವಾಗಿ ಪ್ರಯಾಣಮಾಡಲಿ."

ಶ್ರೀರಾಮನ ಆ ಮಾತನ್ನು ಕೇಳಿ ದಶರಥರಾಜನು ಮಹತ್ತಾದ ಆನಂದದಿಂದ ಎರಡು ಕೈಗಳಿಂದಲೂ ಮಗನನ್ನು ಬಾಚಿ ತಬ್ಬಿಕೊಂಡು ನೆತ್ತಿಯನ್ನು ಪ್ರೇಮಪುರಸ್ಸರವಾಗಿ ಆಘ್ರಾಣಿಸಿದನು. "ಪರಶುರಾಮನು ಹೊರಟುಹೋದ" ನೆಂಬ ವಾರ್ತೆಯನ್ನು ಮಗನ ಮುಖಾರವಿಂದದಿಂದ

ಮಹೇಂದ್ರಪರ್ವತಕ್ಕೆ ತೆರಳಿದನಂತರ ಶ್ರೀರಾಮನ ದಯಾಳುತ್ವವನ್ನು ಪ್ರಶಂಸೆಮಾಡಿ ತ್ರೈಲೋಕ್ಯನಾಥನಾದ ಮಹಾವಿಷ್ಣುವಾದ ರಾಮನಲ್ಲಿ ಆತ್ಮಸಮರ್ಪಣೆಮಾಡಿ ಬ್ರಹ್ಮಸಾಕ್ಷಾತ್ಕಾರದ ಮಾರ್ಗವನ್ನು ಹಿಡಿದನು. **ಪ್ರದಕ್ಷಿಣಂ ಕೃತ್ವಾ-ಪ್ರಕೃಷ್ಟಾ = ಸರ್ವೋತ್ತಮಾ, ದಕ್ಷಿಣಾ = ಆತ್ಮಸಮರ್ಪಣರೂಪಾ ಯಸ್ಮಿನ್ ತತ್ ಕರ್ಮ ಕೃತ್ವಾ.** ಸರ್ವೋತ್ತಮವಾದ ಆತ್ಮಸಮರ್ಪಣವೆಂಬ ಕರ್ಮವು ಯಾವುದುಂಟೋ ಅದನ್ನು ಮಾಡಿ.

* ಪರಶುರಾಮನು ಪರಾಜಿತನಾಗಿ ಹೋದನಂತರವೂ ದಶರಥನು ಖಿನ್ನನಾಗಿದ್ದುದೇಕೆ? ಪರಶುರಾಮನು ದಾಶರಥಿಯಿಂದ ಪರಾಜಿತನಾಗಿ ತನ್ನ ತಪಃಫಲವನ್ನೂ ಕಳೆದುಕೊಂಡು ಹೊರಟುಹೋದುದು ; ಶ್ರೀರಾಮನು ವೈಷ್ಣವಧನುಸ್ಸನ್ನು ವರುಣನಿಗೆ ಕೊಟ್ಟುದು–ಈ ವಿಷಯಗಳಾವುವೂ ದಶರಥನಿಗೆ ತಿಳಿಯಲಿಲ್ಲವೇ? ಈ ಪ್ರಶ್ನೆಗಳಿಗೆ ಇಲ್ಲಿ ಹೇಳಿರುವ ಪ್ರಕಾರ ದಶರಥನಿಗೆ ಯಾವ ವಿಷಯವೂ ತಿಳಿದಿರಲಿಲ್ಲವೆಂದೇ ಉತ್ತರ ಹೇಳಬೇಕಾಗುತ್ತದೆ. ಆದರೆ ತಿಳಿಯದೇ ಇದ್ದುದು ಹೇಗೆಂಬುದಕ್ಕೆ :– ತನ್ನ ಪ್ರಾರ್ಥನೆಯನ್ನು ಗಮನಿಸದೇ ಪರಶುರಾಮನು ಶ್ರೀರಾಮನನ್ನು ದ್ವಂದ್ವಯುದ್ಧಕ್ಕೆ ಕರೆದುದನ್ನು ನೋಡಿ ದಶರಥನು ಮೂರ್ಛಾಕ್ರಾಂತನಾಗಿದ್ದರಿಂದ ಅವನಿಗೆ ಯಾವುದೂ ತಿಳಿಯಲಿಲ್ಲ

ಕೇಳಿದೊಡನೆಯೇ ದಶರಥನ ಶರೀರವು ಆನಂದದಿಂದ ಪುಲಕಿತವಾಯಿತು. ತಾನೂ ಮತ್ತು ತನ್ನ ಮಗನೂ ಪುನರ್ಜನ್ಮವನ್ನೇ ಪಡೆದುದಾಗಿ ದಶರಥನು ಭಾವಿಸಿ, ಪ್ರಯಾಣವನ್ನು ಮುಂದುವರಿಸುವಂತೆ ಚತುರಂಗಬಲಕ್ಕೆ ಆಜ್ಞೆ ಯನ್ನಿತ್ತನು. ಚತುರಂಗಬಲಸಮೇತನಾದ ದಶರಥನು ಶೀಘ್ರವಾಗಿ ಅಯೋಧ್ಯಾನಗರಿಯನ್ನು ಸೇರಿದನು. ಅಯೋಧ್ಯೆಯು ತಳಿರುತೋರಣ ಗಳಿಂದಲೂ, ಧ್ವಜಪತಾಕೆಗಳಿಂದಲೂ ಅಲಂಕೃತವಾಗಿದ್ದಿತು. ನಾನಾವಿಧ ವಾದ ಜಯಘೋಷಗಳಿಂದ ತುಂಬಿತ್ತು. ದಶರಥನು ಮಕ್ಕಳೊಡನೆ ಬರು ತ್ತಿರುವನೆಂಬ ಸುದ್ದಿಯನ್ನು ಕೇಳಿದೊಡನೆಯೇ ಪಟ್ಟಣಿಗರು ಸಡಗರದಿಂದ ಹರ್ಷೋದ್ಗಾರಮಾಡಿದರು. ರಾಜಬೀದಿಗಳಲ್ಲಿ ಧೂಳು ಏಳದ ರೀತಿಯಲ್ಲಿ ನೀರನ್ನು ಚುಮುಕಿಸಿದರು. ರಾಜಮಾರ್ಗದುದ್ದಕ್ಕೂ ನಯನಮನೋಹರ ವಾದ, ಸುವಾಸನೆಯಿಂದ ಕೂಡಿದ ಹೂಗಳನ್ನೆರಚಿದರು. ರಾಜನನ್ನೂ ಮತ್ತು ರಾಜಕುಮಾರರನ್ನೂ ಎದುರ್ಗೊಳ್ಳಲು ಮಂಗಳಾಶಾಸನ ಮಾಡುತ್ತಾ, ಪುಷ್ಪಮಾಲಿಕೆಗಳನ್ನು ಹಿಡಿದು ವಿಕಸಿತಮುಖಾರವಿಂದಗಳಿಂದ ರಾಜನ ಆಗಮನವನ್ನು ನಿರೀಕ್ಷಿಸುತ್ತಿದ್ದ ಪಟ್ಟಣಿಗರಿಂದ ರಾಜಮಾರ್ಗವು ತುಂಬಿಹೋಯಿತು. ಹೀಗೆ ಸಂಭ್ರಮದಲ್ಲಿದ್ದ ಅಯೋಧ್ಯಾನಗರಿಯನ್ನು ದಶರಥರಾಜನು ಪರಿವಾರಸಮೇತನಾಗಿ ಪ್ರವೇಶಿಸಿದನು. ನಗರವನ್ನು ಪ್ರವೇಶಿಸಿದೊಡನೆಯೇ ಬ್ರಾಹ್ಮಣಪುರಸ್ಸರರಾದ ಪ್ರಜೆಗಳು ರಾಜನಿಗೂ ರಾಜಕುಮಾರರಿಗೂ ಪುಷ್ಪಹಾರಗಳನ್ನು ಹಾಕಿ, ಆದರದಿಂದ ಸ್ವಾಗತಿಸಿದರು. ಶ್ರೀಮಂತನಾದ ದಶರಥನು ಶ್ರೀಮಂತರಾದ ತನ್ನ ಮಕ್ಕಳಿಂದ ಅನುಸೃತನಾಗಿ ಹಿಮವತ್ಪರ್ವತಸದೃಶವಾದ, ಅತ್ಯುನ್ನತವಾಗಿಯೂ–ವಿಶಾಲವಾಗಿಯೂ ಇದ್ದ ಅರಮನೆಯನ್ನು ಸೇರಿದನು. ಮಿಥಿಲೆಯಿಂದ ಆಗಮಿಸಿದ ದಶರಥ

ವೆಂದು ಉತ್ತರಕೊಡಬಹುದು. ವಿಹ್ವಲಂ ಎಂಬ ಪಾಠಾಂತರದ ಪ್ರಕಾರ ದಶರಥನು ವಿಹ್ವಲ ನಾಗಿದ್ದನು ಅಥವಾ ಮೂರ್ಛೆಹೋಗಿದ್ದನೆಂಬ ಸ್ಪಷ್ಟಾರ್ಥವನ್ನೇ ಕೊಡುತ್ತದೆ. ಒಬ್ಬ ವ್ಯಾಖ್ಯಾನಕಾರರು ವಿಕಲಃ = ಕಲಾರಹಿತನು, ನಿಸ್ತೇಜನು ಎಂಬುದಕ್ಕೆ ಬದಲಾಗಿ ಸಾಯಂಕಾಲವೆಂದು ಅರ್ಥಮಾಡಿದ್ದಾರೆ. ವಿಕಲಂ, ವೀನಾಂ = ಪಕ್ಷಿಣಾಂ, ಕಲಂ = ಸ್ವಸ್ವ ನೀಡಗಮನಂ ಯಸ್ಮಿನ್ ತಂ. ಸಾಯಂ ದೃಷ್ಟ್ವಾ = ಸಾಯಂಕಾಲವಾದದ್ದನ್ನು ಕಂಡು ಹೇಳಿದನು–ಎಂದು ಅರ್ಥಮಾಡಿದ್ದಾರೆ.

ನನ್ನೂ ಮತ್ತು ಅವನ ಪರಿವಾರದವರನ್ನೂ ಅರಮನೆಯ ಪರಿವಾರದವರು ವಿಷಯಭೋಗಸಾಮಗ್ರಿಗಳಿಂದ ಯಥಾಯೋಗ್ಯವಾಗಿ ಸತ್ಕರಿಸಿದರು. ಅದರಿಂದ ದಶರಥನು ಆನಂದಭರಿತನಾದನು. ರಾಜಮಹಿಷಿಯರಾದ ಕೌಸಲ್ಯಾ-ಸುಮಿತ್ರಾ-ಕೈಕೇಯಿಯರು ಮತ್ತು ರಾಜನ ಅಂತಃಪುರದಲ್ಲಿದ್ದ ಇತರ ರಾಜಮಹಿಳೆಯರು ನೂತನವಧುಗಳಾದ ಸೀತಾ-ಊರ್ಮಿಳಾ-ಮಾಂಡವೀ-ಶ್ರುತಕೀರ್ತಿಯರನ್ನು ಮನೆತುಂಬಿಸಿಕೊಳ್ಳುವ ಮಂಗಳ ಕಾರ್ಯಕ್ಕೆ ಸಿದ್ಧಮಾಡಿಕೊಂಡರು. ಸಂಪ್ರದಾಯಾನುಸಾರವಾದ ಮಂಗಳ ಕಾರ್ಯಗಳು ಮುಗಿದನಂತರ ದಶರಥನ ಪತ್ನಿಯರು ಮಹಾಭಾಗಳಾದ ಸೀತಾದೇವಿಗೂ, ಯಶಸ್ವಿನಿಯಾದ ಊರ್ಮಿಳೆಗೂ ಮತ್ತು ಕುಶಧ್ವಜನ ಮಕ್ಕಳಾದ, ಭರತ-ಶತ್ರುಘ್ನರ ಪತ್ನಿಯರಾದ ಮಾಂಡವೀ-ಶ್ರುತಕೀರ್ತಿಯರಿಗೂ ಕುಂಕುಮವನ್ನಿಟ್ಟು ಆರತಿಮಾಡಿ ಮನೆದುಂಬಿಸಿಕೊಂಡರು. ಸ್ವಸ್ತಿವಾಚನಗಳಿಂದಲೂ, ಗೃಹಪ್ರವೇಶಹೋಮದಿಂದಲೂ ಸುಶೋಭಿತರಾದ, ಪಟ್ಟವಸ್ತ್ರಗಳನ್ನು ಧರಿಸಿದ್ದ ನಾಲ್ವರು ರಾಜಕುಮಾರಿಯರೂ ದೇವಮಂದಿರಕ್ಕೆ ಹೋಗಿ ಗೃಹದೇವತೆಗಳನ್ನು ಗಂಧ-ಪುಷ್ಪಾದಿಗಳಿಂದ ಪೂಜಿಸಿದರು. ಬಳಿಕ ರಾಜಕುಮಾರಿಯರು ನಮಸ್ಕಾರಕ್ಕೆ ಅರ್ಹರಾದವರೆಲ್ಲರಿಗೂ ನಮಸ್ಕಾರಮಾಡಿ, ಆಶೀರ್ವಚನಗಳನ್ನು ಪಡೆದು ಶ್ರೀರಾಮ-ಲಕ್ಷ್ಮಣ-ಭರತ-ಶತ್ರುಘ್ನರಿಗೆ ಪ್ರತ್ಯೇಕ-ಪ್ರತ್ಯೇಕವಾಗಿ ಸಿದ್ಧವಾಗಿದ್ದ ಅರಮನೆಗಳನ್ನು ಸೀತಾ, ಊರ್ಮಿಳಾ, ಮಾಂಡವೀ, ಶ್ರುತಕೀರ್ತಿಯರು ಅನುಕ್ರಮವಾಗಿ ಪ್ರವೇಶಿಸಿ, ತಮ್ಮ ಪತಿಗಳೊಡನೆ ಮಹಾನಂದದಿಂದ ವಿಹರಿಸುತ್ತಿದ್ದರು.

ಹೀಗೆ ಶ್ರೀರಾಮ-ಲಕ್ಷ್ಮಣ-ಭರತ-ಶತ್ರುಘ್ನರಿಗೆ ವಿವಾಹವಾಗಿ ಅವರು ಗೃಹಸ್ಥಾಶ್ರಮವನ್ನು ಪ್ರವೇಶಿಸಿದರು. ಆ ವೇಳೆಗೆ ಧನುರ್ವಿದ್ಯಾಭ್ಯಾಸವೂ ಮುಗಿದು ನಾಲ್ವರೂ ಧನುರ್ವಿದ್ಯೆಯಲ್ಲಿ ನಿಷ್ಣಾತರಾಗಿದ್ದರು. ಭೂಮಿಯಲ್ಲಿಯೇ ಅಪ್ರತಿಮವಾದ ಪರಾಕ್ರಮವುಳ್ಳವರಾಗಿದ್ದರು. ಅನೇಕಾನೇಕ ಅಸ್ತ್ರಗಳನ್ನೂ ಪಡೆದಿದ್ದರು. ಶ್ರೀಮಂತರಾಗಿದ್ದರು. ಸುಹೃಜ್ಜನರಿಂದ ಕೂಡಿದವರಾಗಿದ್ದರು. ಸಕಲವಿಧಗಳಲ್ಲಿಯೂ ಪರಿಪೂರ್ಣರಾಗಿದ್ದ ಆ ರಾಜಕುಮಾರರು ತಂದೆಯ ಶುಶ್ರೂಷೆಮಾಡುತ್ತಾ ಆನಂದದಿಂದ ಕಾಲಕಳೆಯುತ್ತಿದ್ದರು.

ಕೆಲವು ದಿನಗಳು ಕಳೆದನಂತರ ದಶರಥರಾಜನು ಕೈಕೇಯಿಯ ಮಗನಾದ ಭರತನಿಗೆ ಹೇಳಿದನು :

"ಪುತ್ರಕ! ಕೇಕಯರಾಜನ ಮಗನಾದ ಮತ್ತು ನಿನ್ನ ಸೋದರಮಾವನಾದ ಯುಧಾಜಿತನು ನಿನ್ನನ್ನು ತನ್ನ ತಂದೆಯ ಬಳಿಗೆ ಕರೆದೊಯ್ಯುವ ಆಶಯದಿಂದಾಗಿ ನಮ್ಮಲ್ಲಿಯೇ ತಂಗಿದ್ದಾನೆ."

ತಂದೆಯಾದ ದಶರಥನ ಮಾತುಗಳನ್ನು ಕೇಳಿ ಭರತನು ಶತ್ರುಘ್ನನೊಡನೆ ತನ್ನ ತಾತನ ಮನೆಗೆ ಪ್ರಯಾಣಮಾಡಲು ನಿಶ್ಚಯಿಸಿದನು. ತಂದೆಯಾದ ದಶರಥನನ್ನೂ, ಸರ್ವಸುಖದಾಯಕನಾದ ಶ್ರೀರಾಮನನ್ನೂ, ತಾಯಿಯರಾದ ಕೌಸಲ್ಯಾ-ಸುಮಿತ್ರಾ-ಕೈಕೇಯಿ ಇವರುಗಳನ್ನೂ ಕೇಳಿ ಅವರ ಅನುಮತಿಯನ್ನು ಪಡೆದು ಶತ್ರುಘ್ನನೊಡಗೂಡಿ ಪ್ರಯಾಣಮಾಡಿದನು. ಭರತನ ಸೋದರಮಾವನಾದ ಯುಧಾಜಿತನು ತನ್ನ ಮನೋಭೀಷ್ಟದಂತೆ ಭರತ-ಶತ್ರುಘ್ನರನ್ನು ಕರೆದುಕೊಂಡು ಪರಮಸಂತುಷ್ಟನಾಗಿ ರಾಜಪುತ್ರರೊಡನೆ ತನ್ನ ಪಟ್ಟಣವನ್ನು ಸೇರಿದನು. ಮೊಮ್ಮಗನನ್ನು ಕಂಡು ಕೇಕಯರಾಜನೂ ಆನಂದಭರಿತನಾದನು. ಭರತ-ಶತ್ರುಘ್ನರು ಕೇಕಯರಾಜ್ಯಕ್ಕೆ ಹೊರಟುಹೋದನಂತರ ರಾಮ-ಲಕ್ಷ್ಮಣರು ದೇವಸದೃಶನಾದ ತಂದೆಯನ್ನು ಕಾಲ-ಕಾಲಗಳಲ್ಲಿ ಶುಶ್ರೂಷೆಮಾಡುತ್ತಿದ್ದರು. ತಂದೆಯ ಆಜ್ಞಾನುಸಾರವಾಗಿ ಸರ್ವರಿಗೂ ಪ್ರಿಯವಾಗಿಯೂ ಮತ್ತು ಹಿತವಾಗಿಯೂ ಇರುವಂತೆ ಪೌರಾಡಳಿತದ ಕಾರ್ಯಗಳನ್ನು ಧರ್ಮಾತ್ಮನಾದ ರಾಮನು ನಿರ್ವಹಿಸುತ್ತಿದ್ದನು. ಶ್ರುತಿ-ಸ್ಮೃತಿಗಳಿಂದಲೂ, ನೀತಿಶಾಸ್ತ್ರದಿಂದಲೂ ನಿಯಂತ್ರಿತನಾಗಿದ್ದ ಶ್ರೀರಾಮನು ತನ್ನ ತಾಯಂದಿರಿಗೆ ಮಾಡಬೇಕಾದ ಶುಶ್ರೂಷೆಯನ್ನೂ ಸಕಾಲದಲ್ಲಿ ಅವರವರ ಅಭಿಲಾಷೆಯಂತೆ ನಿರ್ವಹಿಸುತ್ತಿದ್ದನು. ಗುರುಗಳಿಗೆ ಮಾಡಬೇಕಾದ ಗುರುಶುಶ್ರೂಷಾಕಾರ್ಯವನ್ನೂ ಕಾಲ-ಕಾಲದಲ್ಲಿ ಮಾಡಿ ಮುಗಿಸುತ್ತಿದ್ದನು. ಯಾರ ವಿಷಯದಲ್ಲಿಯೂ ಔದಾಸೀನ್ಯವನ್ನು ತೋರದೇ ಮಾತಾ-ಪಿತೃ-ಆಚಾರ್ಯರುಗಳ ಯೋಗ-ಕ್ಷೇಮಗಳನ್ನೂ ವಿಚಕ್ಷಣೆಯಿಂದ ನೋಡಿಕೊಳ್ಳುತ್ತಿದ್ದನು.* ಈ ವಿಧವಾದ ರಾಮನ ಸೌಶೀಲ್ಯದಿಂದಲೂ,

---

* **ಗುರೂಣಾಂ ಗುರುಕಾರ್ಯಾಣಿ** ಎಂಬುದಕ್ಕೆ ಬಹುಜಟಿಲವಾದ ಮಹಾಕಾರ್ಯಗಳನ್ನೂ ಸಾವಧಾನವಾಗಿ ವಿಚಾರಮಾಡಿ ಮಾಡುತ್ತಿದ್ದನು—ಎಂದು ವ್ಯಾಖ್ಯಾನಕಾರರು ಹೇಳಿರುತ್ತಾರೆ.

ಸದ್ವೃತ್ತಿಯಿಂದಲೂ ದಶರಥನು ಸುಪ್ರೀತನಾದನು. ಬ್ರಾಹ್ಮಣ-ವೈಶ್ಯರೂ ಮತ್ತು ಕೋಸಲದೇಶದ ಪ್ರಜೆಗಳೂ ಶ್ರೀರಾಮನ ಧರ್ಮಮೂಲವಾದ ರಾಜ್ಯಾಡಳಿತದಿಂದಾಗಿ ಪರಮಪ್ರೀತರಾದರು. ದಶರಥನ ಪುತ್ರರಾದ ನಾಲ್ವರಲ್ಲಿ ಶ್ರೀರಾಮನು ಮಹಾಯಶಸ್ವಿಯಾದನು. ಸತ್ಯಪರಾಕ್ರಮಿಯಾದ ಅವನು ಲೋಕದಲ್ಲಿಯೇ ಅತ್ಯಂತಗುಣಶಾಲಿಯೆಂದೂ, ಜೀವಕೋಟಿಯ ಮಧ್ಯದಲ್ಲಿರುವ ಅಥವಾ ಜೀವಕೋಟಿಗೆ ಆಧಾರಭೂತನಾಗಿರುವ ಬ್ರಹ್ಮನಿಗೆ ಸಮಾನನೆಂದೂ ವಿಖ್ಯಾತನಾದನು. ಶ್ರೀರಾಮನು ಸೀತೆಯೊಡನೆ ಅನೇಕ ಋತುಗಳ ಪರ್ಯಂತವಾಗಿ ಸುಖೋಪಭೋಗಗಳನ್ನನುಭವಿಸುತ್ತಾ ಕಾಲ ಕಳೆದನು. ನಿಶ್ಚಲಮನಸ್ಸುಳ್ಳವನಾಗಿದ್ದ ಶ್ರೀರಾಮನು ಸೀತೆಯಲ್ಲಿಯೇ ನೆಟ್ಟ ಮನಸ್ಸುಳ್ಳವನಾಗಿದ್ದನು. ಸೀತೆಯ ಹೃದಯದಲ್ಲಿ ಮೂರ್ತಿಮತ್ತಾಗಿ ನೆಲೆಸಿದ್ದನು. ಕನ್ಯಾಪಿತೃವಿನಿಂದ ಧಾರೆಯೆರೆಯಲ್ಪಟ್ಟು, ತನ್ನ ತಂದೆಯೂ ಸಮ್ಮತಿಸಿ, ಸೀತೆಯು ತನ್ನ ಮಡದಿಯಾದ ಕಾರಣದಿಂದಾಗಿ ಶ್ರೀರಾಮನಿಗೆ ಸೀತೆಯಲ್ಲಿ ವಿಶೇಷವಾದ ಅನುರಾಗವಿದ್ದಿತು. ಶ್ರೀರಾಮನಿಗೆ ಸೀತೆಯು ಪರಮಪ್ರಿಯಳಾಗಿದ್ದಳು. ಸೀತೆಗಿದ್ದ ಪಾತಿವ್ರತ್ಯಾದಿಗುಣಾತಿಶಯದಿಂದಲೂ ಮತ್ತು ರೂಪಸಂಪತ್ತಿನಿಂದಲೂ ಶ್ರೀರಾಮನ ಹೃದಯದಲ್ಲಿ ಸೀತೆಯ ಮೇಲಿನ ಪ್ರೀತಿಯು ಕ್ಷಣ-ಕ್ಷಣಕ್ಕೂ ವೃದ್ಧಿಹೊಂದುತ್ತಿದ್ದಿತು. ಅದೇ ರೀತಿ ಯಲ್ಲಿ ಶ್ರೀರಾಮನ ಗುಣಾತಿಶಯದಿಂದಲೂ ಮತ್ತು ರೂಪ-ಲಾವಣ್ಯ ಗಳಿಂದಲೂ ಸೀತೆಯ ಹೃದಯದಲ್ಲಿ ಶ್ರೀರಾಮನು ದ್ವಿಗುಣಿತವಾಗಿ ಪ್ರಕಾಶಿಸಿದನು. ಶ್ರೀರಾಮನ ಹೃದಯದಲ್ಲಿ ಸೀತೆಯೂ–ಸೀತೆಯ ಹೃದಯ ದಲ್ಲಿ ಶ್ರೀರಾಮನೂ ಮೂರ್ತಿಮತ್ತಾಗಿ ನೆಲೆಸಿಬಿಟ್ಟಿದ್ದರು. ಅದರಿಂದಾಗಿ ಶ್ರೀರಾಮನು ಯಾವುದಾದರೂ ವಿಷಯವನ್ನು ಕುರಿತು ಯೋಚಿಸಿದ ನೆಂದರೆ– ಶ್ರೀರಾಮನ ಹೃದಯದಲ್ಲಿ ವಿರಾಜಿಸುತ್ತಿದ್ದ ಸೀತೆಗೆ ಅದು ತಿಳಿದು, ಆ ಮೂಲಕವಾಗಿ ಸೀತೆಯ ಮನಸ್ಸಿಗೂ ಶ್ರೀರಾಮನ ವಿಚಾರಲಹರಿಯು ತಿಳಿಯುತ್ತಿದ್ದಿತು. ಅಂತೆಯೇ ಸೀತೆಯೂ ಕೂಡ ಯಾವುದಾದರೂ ವಿಷಯವನ್ನು ಕುರಿತು ಯೋಚಿಸಿದರೂ ಸೀತೆಯ ಹೃದಯಸ್ಥನಾಗಿದ್ದ ರಾಮಮೂರ್ತಿಗೆ ಅದು ತಿಳಿದು, ಆ ಮೂಲಕವಾಗಿ ಶ್ರೀರಾಮನ ಮನಸ್ಸಿಗೆ ಸೀತೆಯ ವಿಚಾರಲಹರಿಯು ತಿಳಿಯುತ್ತಿದ್ದಿತು. ದೇವತೆಗಳಿಗೆ ಸದೃಶ ವಾದ ರೂಪ-ಲಾವಣ್ಯಗಳಿಂದ ಕೂಡಿದ್ದ, ಮಹಾಲಕ್ಷ್ಮಿಗೆ ಅನುರೂಪವಾದ

ರೂಪವುಳ್ಳ ಸೀತೆಯು ರಾಮನ ಹೃದಯದಲ್ಲಿ ಸರ್ವದಾ ವಿರಾಜಿಸುತ್ತಿದ್ದಳು. ರಾಜರ್ಷಿಯಾದ, ದಶರಥನ ಮಗನಾದ ಶ್ರೀರಾಮನು ತನ್ನ ಮನಸ್ಸಿನ ಇಚ್ಛೆಗೆ ಅನುಗುಣವಾಗಿ ವರ್ತಿಸುತ್ತಿದ್ದ, ಉತ್ತಮವಾದ ರಾಜವಂಶದಲ್ಲಿ ಹುಟ್ಟಿದ ಸೀತೆಯೊಡಗೂಡಿ ಪರಮಸಂತುಷ್ಟನಾಗಿ–ಅಮರೇಶ್ವರನಾದ ಮಹಾ ವಿಷ್ಣುವು ಮಹಾಲಕ್ಷ್ಮಿಯೊಡಗೂಡಿ ವಿರಾಜಿಸುವಂತೆ–ವಿರಾಜಿಸಿದನು.*

ಲಲನೆಯ ಸರ್ಗವು ಮುಗಿಯಿತು.

ಬಾಲಕಾಂಡವು ಸಮಾಪ್ತವಾಯಿತು.

ಒಂದನೆಯ ಸಂಪುಟವು ಮುಗಿಯಿತು.

ಶ್ರೀಕೃಷ್ಣಾರ್ಪಣಮಸ್ತು ಶ್ರೀಸದ್ಗುರುಚರಣಾರವಿನ್ದಾರ್ಪಣಮಸ್ತು
ಓಂ ತತ್ಸತ್

ಗಚ್ಛತಾ ಮಾತುಲಕುಲಂ ಭರತೇನ ತದಾನಘ ।
ಶತ್ರುಘ್ನೋ ನಿತ್ಯಶತ್ರುಘ್ನೋ ನೀತಃ ಪ್ರೀತಿಪುರಸ್ಕೃತಃ ॥೧॥

---

* ತತ್ರ ದ್ವಾದಶವರ್ಷಾಣಿ ರಾಘವಃ ಸಹ ಸೀತಯಾ ।
ರಮಯಾಮಾಸ ಧರ್ಮಾತ್ಮಾ ನಾರಾಯಣ ಇವ ಶ್ರಿಯಾ ॥ [ಪದ್ಮಪುರಾಣ]

ಅಯೋಧ್ಯೆಯಲ್ಲಿ ಶ್ರೀರಾಮನು ಸೀತೆಯೊಡನೆ ಹನ್ನೆರಡು ವರ್ಷಗಳ ಕಾಲ ನಾರಾಯಣನು ಲಕ್ಷ್ಮಿಯೊಡನೆ ಸುಖಿಸುವಂತೆ ಸುಖಿಸಿದನು.

ಪ್ರಿಯಳಾದವಳು ಹೀಗಿರುವಳೆಂಬುದನ್ನು ಒಬ್ಬ ವ್ಯಾಖ್ಯಾನಕಾರರು ಹೇಳಿದ್ದಾರೆ.

ಲೀನೇವ ಪ್ರತಿಬಿಮ್ಬಿತೇವ ಲಿಖಿತೇವೋತ್ಕೀರ್ಣರೂಪೇವ ಚ
ಪ್ರತ್ಯುಪ್ತೇವ ಚ ವಜ್ರಲೇಪಘಟಿತೇಪಾನ್ತರ್ನಿಖಾತೇವ ಚ ॥
ಸಾ ನಶ್ಚೇತಸಿ ಕೀಲಿತೇವ ವಿಶಿಖೈಶ್ಚೇತೋಭುವಃ ಪಞ್ಚಭಿಃ
ಚಿನ್ತಾಸಂತತಿತನ್ತುಜಾಲನಿಬಿಡಸ್ಯೂತೇವ ಲಗ್ನಾ ಪ್ರಿಯಾ ॥

ಪ್ರಿಯೆಯು ಮನಸ್ಸಿನಲ್ಲಿ ಅಡಗಿಕೊಂಡವಳಂತೆಯೂ, ಎರಕ ಹೊಯ್ಯಲ್ಪಟ್ಟವಳಂತೆಯೂ, ವಜ್ರದ ಲೇಪನದಿಂದ ಸೇರಿಸಲ್ಪಟ್ಟವಳಂತೆಯೂ, ಆಳವಾಗಿ ನೆಡಲ್ಪಟ್ಟವಳಂತೆಯೂ, ಮನ್ಮಥನ ಐದು ಬಾಣಗಳಿಂದ ಕೂಡಿಸಲ್ಪಟ್ಟವಳಂತೆಯೂ, ಸದಾ ಚಿಂತಿಸುವಿಕೆಯೆಂಬ ದಾರಗಳ ಜಾಲದಿಂದ ನಿಬಿಡವಾಗಿ ನೇಯಲ್ಪಟ್ಟವಳಂತೆಯೂ ಸೇರಿಕೊಂಡವಳಾಗಿರುತ್ತಾಳೆ.

ಪರಿಶಿಷ್ಟ

ಮಾ ನಿಷಾದ ಪ್ರತಿಷ್ಠಾಂ ತ್ವಮಗಮಃ ಶಾಶ್ವತೀಃ ಸಮಾಃ ।
ಯತೌ ಞ್ಚಮಿಥುನಾದೇಕಮವಧೀಃ ಕಾಮಮೋಹಿತಮ್ ॥೧೫॥

'ಶಾಶ್ವತೀಃ ಸಮಾಃ (ಏಕತ್ರ) ಪ್ರತಿಷ್ಠಾಂ ತ್ವಂ ಮಾಗಮಃ– ಅನವರತವಾಗಿ ನೀನು ಒಂದೆಡೆಯಲ್ಲಿಯೇ ನಿವಾಸವನ್ನು ಹೊಂದಬೇಡ' ಇದು ನೇರವಾದ ಅರ್ಥವಾಗಿರುತ್ತದೆ. "ಪಕ್ಷಿಗಳ ಮಿಥುನದಲ್ಲಿ ಒಂದನ್ನು ಕೊಂದದ್ದರಿಂದ ಸಾಂಸಾರಿಕಸುಖಪ್ರಾಪ್ತಿಯಾಗದಿರಲಿ"ಎಂಬ ಪರ್ಯಾಯಾರ್ಥವನ್ನೂ ವ್ಯಾಖ್ಯಾನಕಾರರು ಮಾಡಿರುತ್ತಾರೆ. ಅವರ ಶಾಪದ ಪ್ರಭಾವವೋ ಎಂಬಂತೆ ಇಂದೂ ಸಹ ಕಾಡುಜನರು ನಿಂತಲ್ಲಿ ನಿಲ್ಲದೇ ಯಾವಾಗಲೂ ಕಾಡು-ಮೇಡುಗಳನ್ನಲೆಯುತ್ತಿರುವರು. ವಿದ್ವಾಂಸರಾದ ಕೆಲವು ವ್ಯಾಖ್ಯಾನಕಾರರು ಈ ಶ್ಲೋಕವನ್ನು ರಾಮಾಯಣದ ಮಂಗಳ ಶ್ಲೋಕವೆಂದು ಕರೆದು ಬಹಳ ಕಷ್ಟಪಟ್ಟು ಅರ್ಥಮಾಡಿರುತ್ತಾರೆ. ರಾಮಾಯಣದ ಮೊದಲನೆಯ ಶ್ಲೋಕವೆಂದು ಭಾವಿಸಬಹುದಾದ ಮತ್ತು ರಾಮಾಯಣದ ರಚನೆಗೆ ಕಾರಣವಾದ ವಾಲ್ಮೀಕಿಮಹರ್ಷಿಗಳ ಮುಖದಿಂದ ಹೊರಹೊಮ್ಮಿದ ಶ್ಲೋಕವು ಕೇವಲ ಶಾಪರೂಪವೆಂದು ಭಾವಿಸುವುದು ಉಚಿತವಲ್ಲವೆಂದು ಭಾವಿಸಿ ಹೀಗೆ ಅರ್ಥಮಾಡುತ್ತಾರೆ. "**ಮಾಯಾಃ** = ಲಕ್ಷ್ಮಿಗೆ, **ನಿಷಾದಃ** = ನಿವಾಸಸ್ಥಾನನಾದ ಶ್ರೀಮನ್ನಾರಾಯಣನು. **ಹೇ ಮಾ ನಿಷಾದ ತ್ವಂ ಶಾಶ್ವತೀಃ ಸಮಾಃ ಪ್ರತಿಷ್ಠಾಂ ಆಗಮಃ** = ಹೇ ಶ್ರೀನಿವಾಸ! ನೀನು ಸರ್ವಕಾಲವೂ ಕೀರ್ತಿಯನ್ನು ಪಡೆಯುವವನಾಗು. ಏಕೆಂದರೆ– **ಕ್ರೌಂಚಮಿಥುನಾದೇಕಂ ಕಾಮಮೋಹಿತಂ ಅವಧೀಃ** = ಮಂಡೋದರೀ-ರಾವಣರೆಂಬ ರಾಕ್ಷಸಯುಗ್ಮದಲ್ಲಿ ಕುಟಿಲಕಾಮಮೋಹಿತನಾದ (ಸೀತೆಯನ್ನು ಕಾಮಿಸಿದ) ಒಬ್ಬನನ್ನು ಎಂದರೆ ರಾವಣನನ್ನು ಕೊಂದಿರುವೆ." ಪದ್ಮಪುರಾಣದಲ್ಲಿ ಶಿವಾ-ಶಿವ ಸಂವಾದದಲ್ಲಿ ಹೀಗೆ ರೂಪಿತವಾಗಿದೆ : ಶ್ರೀರಾಮನು ಸೀತಾಪರಿತ್ಯಾಗಮಾಡುವಾಗ ಲಕ್ಷ್ಮಣನಿಗೆ "**ಶೃಣು ಮೇ ವಚನಂ ಗುಹ್ಯಂ ಸೀತಾ ಸಂತ್ಯಾಗಕಾರಣಮ್ । ವಾಲ್ಮೀಕಿನಾಥ ಭೃಗುಣಾ ಶಪ್ತೋಽಸ್ಮಿ** ಕಿಲ ಲಕ್ಷ್ಮಣ । **ತಸ್ಮಾದೇನಾಂ ತ್ಯಜಾಮ್ಯದ್ಯ ಜನೋ ನೈವಾತ್ರ ಕಾರಣಮ್ ॥**"– ಎಂದು ಹೇಳುತ್ತಾನೆ. ರಾಮಾಯಣಕಥೆಯನ್ನು

ರಚಿಸಲು ಶ್ರೀರಾಮನು ಬೇಡನ ರೂಪದಿಂದ ಕ್ರೌಂಚಪಕ್ಷಿಗಳಲ್ಲಿ ಒಂದನ್ನು ಕೊಂದಂತೆಯೂ, ರಾಮನು ಬೇಡನೆಂಬುದನ್ನು ತಿಳಿಯದ ವಾಲ್ಮೀಕಿಗಳು "**ಮಾ ನಿಷಾದ.... ಕಾಮಮೋಹಿತಂ**" ಎಂದು ಶಪಿಸಿದರೆಂದೂ, ಶ್ರೀರಾಮನು ಮುಂದೆ ಸೀತಾಪರಿತ್ಯಾಗಮಾಡಲು ಇದು ಕಾರಣವಾಯಿತೆಂದೂ ಕೆಲವರು ವ್ಯಾಖ್ಯಾನಮಾಡಿರುತ್ತಾರೆ. ಇದಲ್ಲದೇ ಇನ್ನೂ ಅನೇಕ ಚಮತ್ಕಾರಪೂರ್ಣವಾದ ವ್ಯಾಖ್ಯಾನಗಳನ್ನು ವಿದ್ವಾಂಸರು ಇದಕ್ಕೆ ಮಾಡಿದ್ದಾರೆ. ಈ ಶ್ಲೋಕದಲ್ಲಿ ಇಡೀ ರಾಮಾಯಣದ ಮುಂದಿನ ಕಥೆಗಳೆಲ್ಲವೂ ಸೂಚಿತವಾಗಿವೆ. '**ಮಾ ನಿಷಾದ**'–ಎಂಬುದು ಶ್ರೀರಾಮನು ಲಕ್ಷ್ಮೀ ಸ್ವರೂಪಿಣಿಯಾದ ಸೀತೆಯನ್ನು ವಿವಾಹವಾದನು–ಎಂಬ ಬಾಲಕಾಂಡದ ಕಥೆಯನ್ನು ಸೂಚಿಸುತ್ತದೆ. **ತ್ವಂ ಪ್ರತಿಷ್ಠಾಂ ಅಗಮಃ** –ಎಂಬುದರಿಂದ ಶ್ರೀರಾಮನು ತಂದೆಯ ಮಾತನ್ನು ಪಾಲಿಸಿ ಖ್ಯಾತಿಯನ್ನು ಗಳಿಸಿದನು–ಎಂಬ ಅಯೋಧ್ಯಾಕಾಂಡದ ಕಥೆಯು ಧ್ವನಿತವಾಗುತ್ತದೆ. **ಶಾಶ್ವತೀಃ ಸಮಾಃ**–ಎಂಬುದು ಅವನು ಚಿರಕಾಲ ಅರಣ್ಯವಾಸಮಾಡಿದ ಅರಣ್ಯಕಾಂಡದ ಕಥೆಯನ್ನು ಸೂಚಿಸುತ್ತದೆ. **ಕ್ರೌಂಚಮಿಥುನಾದೇಕಂ ಕಾಮಮೋಹಿತಂ ಅವಧೀಃ** –ಕಾಮಾಂಧನಾಗಿ ಕುಟಿಲನಾಗಿ ಸಹೋದರನ ಪತ್ನಿಯನ್ನು ಅಪಹರಿ ಸಿದ ವಾಲಿಯನ್ನು ಶ್ರೀರಾಮನು ಸಂಹಾರಮಾಡಿದನೆಂಬ ಕಿಷ್ಕಿಂಧಾಕಾಂಡದ ಕಥೆಯು ಇದರಿಂದ ಧ್ವನಿತವಾಗಿದೆ. ರಾವಣನು ಕೃಶರಾಗಿದ್ದ ಸೀತಾ-ರಾಮ ದಂಪತಿಗಳಲ್ಲಿ ಒಬ್ಬಳಾದ ಸೀತೆಗೆ ಹಿಂಸೆಮಾಡಿದನೆಂಬ ಸುಂದರಕಾಂಡದ ಕಥೆಯು ಇದರಲ್ಲಿ ಸೂಚಿತವಾಗಿದೆ. ಹಾಗೆಯೇ ಶ್ರೀರಾಮನು ರಾಕ್ಷಸದಂಪತಿಗಳಾದ ರಾವಣ-ಮಂಡೋದರಿಯರಲ್ಲಿ ಕಾಮಾಂಧನಾಗಿದ್ದ ರಾವಣನನ್ನು ಸಂಹರಿಸಿದನು–ಎಂಬ ಯುದ್ಧಕಾಂಡದ ಕಥೆಯೂ ಇದರಿಂದ ಧ್ವನಿತವಾಗುತ್ತದೆ. ಋಷಿಪತ್ನಿಯರನ್ನು ನೋಡುವ ಕಾಮನೆಯಿಂದ ಕೂಡಿದ್ದ ಸೀತಾದೇವಿಯನ್ನು ಪರಿತ್ಯಾಗಮಾಡಿ ಆಕೆಗೆ ಶ್ರೀರಾಮನು ಹಿಂಸೆಮಾಡಿದನು– ಎಂಬ ಉತ್ತರಕಾಂಡದ ಅರ್ಥವೂ ಸೂಚಿತವಾಗಿದೆ.

ಕೆಲವರು ವ್ಯಾಖ್ಯಾನಕಾರರು ಹೀಗೂ ಅರ್ಥಗಳನ್ನು ಮಾಡಿದ್ದಾರೆ.

1) 'ಎಲೈ ರಾವಣನೇ! ಕೃಶರಾಗಿದ್ದ ಸೀತಾ-ರಾಮದಂಪತಿಗಳಲ್ಲಿ ಒಬ್ಬ

ಳಾದ ಸೀತಾದೇವಿಯನ್ನು ಹಿಂಸೆಮಾಡಿದ್ದರಿಂದ ನೀನು ಬ್ರಹ್ಮದತ್ತವಾದ ವೈಭವಗಳನ್ನು ಚಿರಕಾಲ ಅನುಭವಿಸದಿರು.'

2) "ಎಲೈ ಬೇಡನೇ! ನೀನು ವಯೋವೃದ್ಧನು ; ಬಹಳ ಕಾಲ ಬಾಳಿದವನು. ಇನ್ನು ಮುಂದೆ ನೀನು ಇಂತಹ ಪ್ರಾಣಿಹಿಂಸೆಯನ್ನು ಮಾಡ ಬೇಡ.'

ನಮ್ಮ ಅಭಿಪ್ರಾಯದಂತೆ :–

"ಎಲೈ ಬೇಡನೇ! ನೀನು ನಿರ್ದಯನಾಗಿ ಈ ಕ್ರೌಂಚದಂಪತಿಗಳಲ್ಲಿ ಕಾಮಮೋಹಿತವಾಗಿದ್ದ ಗಂಡುಹಕ್ಕಿಯನ್ನು ಕೊಂದುಹಾಕಿದೆಯಲ್ಲ! ಆದ್ದ ರಿಂದ ನೀನು ಬಹುಕಾಲ ಬಾಳಬೇಡ"–ಎಂದು ಬೇಡನಿಗೆ ಕರುಣಾಪೂರ್ಣ ರಾದ ವಾಲ್ಮೀಕಿಗಳು ಶಾಪಕೊಟ್ಟಿದ್ದೇ ಸರಿಯಾದ ಅಭಿಪ್ರಾಯ. ಕಷ್ಟಪಟ್ಟು ಶ್ಲೋಕಕ್ಕೆ ಬೇರೆ-ಬೇರೆ ಅರ್ಥಗಳನ್ನು ಕಲ್ಪಿಸಬಾರದು.

ಈ ಶಾಪವಾಕ್ಯರೂಪವಾದ ಶ್ಲೋಕವು ಮುಂದಿನ ರಾಮಾಯಣದ ರಚನೆಗೆ ಹೇಗೆ ಆದರ್ಶವಾಗುತ್ತದೆ? ಎಂದರೆ : ಈ ಶ್ಲೋಕದಂತೆಯೇ ಇಡೀ ರಾಮಾಯಣವು ಮುಖ್ಯವಾಗಿ ಅನುಷ್ಟುಪ್ ಛಂದಸ್ಸಿನಲ್ಲಿ ರಚಿಸಲ್ಪಡಬೇಕು; ಪ್ರಸಾದ-ಮಾಧುರ್ಯಗುಣಗಳಿಂದ ಕೂಡಿರಬೇಕು ; ಕರುಣರಸಪ್ರಧಾನ ವಾಗಿರಬೇಕು ಎಂಬುದು ಬ್ರಹ್ಮದೇವರ ಆಶಯ. ಅದರಂತೆಯೇ ವಾಲ್ಮೀಕಿ ಮಹರ್ಷಿಗಳಿಂದ ಆದಿಕಾವ್ಯದ ರಚನೆ ಆಗುತ್ತದೆ.

ಶ್ರೀಪೆರಿಯವಾಚಾನ್ ಪಿಳ್ಳೈ ಅವರು ಬರೆದಿರುವ ತನಿಶ್ಲೋಕ ಎಂಬ ಗ್ರಂಥದಲ್ಲಿ ಶ್ರೀಮದ್ರಾಮಾಯಣದ ಕೆಲವು ಆರಿಸಿದ ಶ್ಲೋಕಗಳಿಗೆ ವಿಶೇಷವಾದ ವ್ಯಾಖ್ಯಾನಮಾಡಲಾಗಿದೆ. ಅವುಗಳಲ್ಲಿ ಕೆಲವು ವಿಶೇಷಭಾಗ ಗಳನ್ನು ಇಲ್ಲಿ ಅಳವಡಿಸಿದೆ.

ಕೌಸಲ್ಯಾಸುಪ್ರಜಾ ರಾಮ ಪೂರ್ವಾ ಸಂಧ್ಯಾ ಪ್ರವರ್ತತೇ ।

ಅರಣ್ಯದಲ್ಲಿ ಮಹರ್ಷಿ ವಿಶ್ವಾಮಿತ್ರರು ಶ್ರೀರಾಮನಿಗೆ ಹೇಳುವ ಸುಪ್ರಭಾತ ಶ್ಲೋಕವಿದು.

1) ಶ್ರೀರಾಮನು ದಶರಥಸಾರ್ವಭೌಮ ಮತ್ತು ಕೌಸಲ್ಯಾದೇವಿ ಇಬ್ಬರ

ತಪಸ್ಸಿನ ಫಲವಾದ ಸುಪುತ್ರ. ಆದರೆ ವಿಶ್ವಾಮಿತ್ರರು ಅವನನ್ನು 'ಕೌಸಲ್ಯೆಯ ಸುಪುತ್ರ' ಎಂದು ತಾಯಿಯ ಹೆಸರಿನ ಮೂಲಕವೇ ಏಕೆ ಕರೆಯುತ್ತಾರೆ? ಎಂದರೆ–'**ಮಾತಾ ಪುತ್ರಸ್ಯ ಭೂಯಾಂಸಿ ಕರ್ಮಾಣ್ಯಾ-ರಭತೇ**'–ಎಂಬಂತೆ ಪುತ್ರನ ವಿಷಯವಾದ ಕರ್ಮಗಳು ತಂದೆಗಿಂತ ತಾಯಿಗೆ ಹೆಚ್ಚಾಗಿರುತ್ತವೆ. '**ಮಾತೃ ದೇವೋ ಭವ**' ಎಂದು ಶ್ರುತಿಯು ತಾಯಿಗೇ ಮೊದಲನೆಯ ಸ್ಥಾನವನ್ನು ಕೊಡುತ್ತದೆ. '**ಕೈಕೇಯ್ಯಾಃ ಪ್ರಿಯಕಾರಣಾತ್**' ಎಂಬಂತೆ ಶ್ರೀರಾಮನಿಗೆ ಬಲತಾಯಿಯಾದ ಕೈಕೇಯಿಯಲ್ಲೂ ಭಕ್ತಿ. ಅವನಿಗೆ ಮಾತೃವೃತ್ತಿಯು ಅಧಿಕ. ಇದಲ್ಲದೇ ಮಾತೃತ್ವಪ್ರಯುಕ್ತವಾದ ವಾತ್ಸಲ್ಯವನ್ನೂ ಮರೆತು ಯಜ್ಞಸಂರಕ್ಷಣೆಗಾಗಿ ಕೌಸಲ್ಯೆಯು ಶ್ರೀರಾಮಭದ್ರನನ್ನು ಕಾಡಿಗೆ ಕಳುಹಿಸಿಕೊಟ್ಟಿರುವಳಲ್ಲಾ! ಎಂದು ಕೌಸಲ್ಯೆಯಲ್ಲಿ ವಿಶ್ವಾಮಿತ್ರರಿಗೆ ಉಪಕಾರಸ್ಮರಣೆಯೂ ಇದೆ. ಆದ್ದರಿಂದ ಕೌಸಲ್ಯಾಸುಪುತ್ರ ಎಂದು ಸಂಬೋಧನೆ ಮಾಡಿರುವುದು ಉಚಿತವಾಗಿದೆ.

2) **ಸುಪ್ರಜಾಃ :–** ಮಾತೃ-ಪಿತೃವಾಕ್ಯಪರಿಪಾಲನೆ ಮಾಡುವಿಕೆ, ಅವರಿಗೆ ಪ್ರಿಯಹಿತಗಳನ್ನಾಚರಿಸುವಿಕೆ–ಇವು ಸತ್ಪುತ್ರಲಕ್ಷಣಗಳು. '**ಮದ್ವಿಧೋ ವಾ ಪಿತುಃ ಪುತ್ರಃ**'–ಎಂದು ಶ್ರೀರಾಮನೇ ಮುಂದೆ ಹೇಳುತ್ತಾನೆ. '**ಕೌಸಲ್ಯಾ ಶುಶುಭೇ ತೇನ ಪುತ್ರೇಣಾಮಿತತೇಜಸಾ**'–ಎಂಬಂತೆ ತಾಯಿಯ ಗರ್ಭವನ್ನೂ ತಾಯಿಯನ್ನೂ ಬೆಳಗಿಸಿದ ಜ್ಯೋತಿ ಶ್ರೀರಾಮಭದ್ರ.

3) **ರಾಮ :–** ರೂಪೌದಾರ್ಯಗುಣಚೇಷ್ಟಿತಗಳಿಂದ ಮನಸ್ಸಿಗೆ ಇನಿಯನಾಗಿ ಎಲ್ಲ ಪ್ರಾಣಿಗಳನ್ನೂ ವಶೀಕರಿಸುವ ಸೌಂದರ್ಯವುಳ್ಳವನು. ದೇವೋ ನಾಮ ಸಹಸ್ರವಾನ್ ಎಂಬ ಭಗವಂತನ ಸಾವಿರ ನಾಮಗಳಿಗೂ ಸದೃಶವಾದ ಏಕೈಕನಾಮ, ಜಗನ್ಮಂಗಲನಾಮವುಳ್ಳವನು.

4) **ಪೂರ್ವಾ ಸಂಧ್ಯಾ :–** ಪರಮಾತ್ಮನ ಪ್ರಥಮಕಟಾಕ್ಷಕ್ಕೆ ಯೋಗ್ಯವಾಗಿ, ಅವನ ಅನುಗ್ರಹದಿಂದ ವಿರೋಧಿಗಳನ್ನು ನೀಗಿಕೊಳ್ಳಲು ಯೋಗ್ಯವಾಗಿ, ಜ್ಞಾನೋದ್ಬೋಧಕವೂ ಆಗಿರುವ ಕಾಲ ಇದು. ವಿಶ್ವಾಮಿತ್ರರು

ಆಚಾರಪ್ರಧಾನರಾದವರು. ಶ್ರೀರಾಮನಿಗೂ ಆ ಸದಾಚಾರವನ್ನೇ ಉಪ ದೇಶಿಸುತ್ತಾರೆ.

5) **ಕರ್ತವ್ಯಂ ದೈವಮಾಹ್ನಿಕಂ** :– ಭಗವಂತನು ವಿಧಿಸಿರುವ ನಿತ್ಯ-ನೈಮಿತ್ತಿಕ ಆಹ್ನಿಕಾದಿ ಸಕಲಧರ್ಮಗಳನ್ನೂ ಎಲ್ಲರೂ ಅನುಷ್ಠಾನ ಮಾಡಲೇಬೇಕು. ಸ್ವಾಮಿಯೂ ಲೋಕದ ಆದರ್ಶಕ್ಕಾಗಿ ಅದನ್ನು ಮಾಡಲೇ ಬೇಕಲ್ಲವೇ ?

ಇಯಂ ಸೀತಾ ಮಮ ಸುತಾ (ಬಾಲ 73-26)

ಸೀತೆಯ ಪಾಣಿಗ್ರಹಣಮಾಡಿಕೊಳ್ಳಲು ಶ್ರೀರಾಮನಲ್ಲಿ ಜನಕಮಹಾ ರಾಜನು ಮಾಡುವ ಪ್ರಾರ್ಥನೆ :

1) ಭಗವಂತನು ಧನುರ್ಭಂಗಮಾಡಿ ಅತ್ಯಂತವಿನಯದಿಂದ ಮೌನ ವಾಗಿರುತ್ತಾನೆ. ಆದರೆ ಆತನೊಡನೆ ಸೀತೆಯ ವಿವಾಹಮಾಡಿ ಕೃತಾರ್ಥ ನಾಗುವ ಉತ್ಕಟೇಚ್ಛೆ ಜನಕಮಹಾರಾಜನದು. ಚಿಂತಾರ್ಣವವನ್ನು ದಾಟಿ ತೀರವನ್ನು ತಲುಪಿದ ಹರ್ಷಾತಿಶಯ ಅವನಿಗೆ. ದಿವ್ಯದಂಪತಿಗಳನ್ನು ಸೇರಿಸಿ ನೋಡಿದ ಹೊರತು ಅವನಿಗೆ ತೃಪ್ತಿಯಿಲ್ಲ. ಅವರನ್ನು ಸೇರಿಸುವುದೇ ಅವನ ಪರಮೋದ್ದೇಶ. ಘಟಕಕೃತ್ಯವನ್ನು ಮೊದಲೇ ಮಾಡಬೇಕು. ಶೇಷಿಯಾದ ಭಗವಂತನ ಇಚ್ಛೆಯನ್ನು ಅವನು ಹೇಳುವುದಕ್ಕೆ ಮೊದಲೇ ನೆರವೇರಿಸುವುದು ಭೃತ್ಯನ ಕರ್ತವ್ಯ. ಆದ್ದರಿಂದ ಭಗವಂತನ ಕೈಯಲ್ಲಿ ಸೀತಾದೇವಿಯನ್ನು ಸಮರ್ಪಿಸಿ ಕೃತಕೃತ್ಯನಾಗುತ್ತಾನೆ ಮಹಾತ್ಮನಾದ ಜನಕಮಹಾರಾಜ. ಅವನು ಪುರುಷಕಾರಕ್ಕೂ ಪುರುಷಕಾರನಾಗುತ್ತಾನೆ. ಪರಮಾತ್ಮನನ್ನು ಹೊಂದಲು ಪುರುಷಕಾರಮಾಡುವವಳು ಸೀತಾಶ್ರೀಲಕ್ಷ್ಮೀ. ಅದಕ್ಕೂ ಪುರುಷಕಾರವೆಂಬ ಉಪಾಯ ಆಗುವವನು ಜನಕಮಹಾರಾಜ.

"ಓ ಸ್ವಾಮಿಯೇ! ನೀನು–

ಚಂದ್ರಕಾನ್ತಾನನಂ ರಾಮಂ ಅತೀವ ಪ್ರಿಯದರ್ಶನಮ್ ।
ರೂಪೌದಾರ್ಯಗುಣೈಃ ಪುಂಸಾಂ ದೃಷ್ಟಿಚಿತ್ತಾಪಹಾರಿಣಮ್ ॥

ಎಂಬಂತೆ ಅತ್ಯಂತಪ್ರಿಯದರ್ಶನ, ದೃಷ್ಟಿಚಿತ್ತಾಪಹಾರಕನಾಗಿರುವ

ನಿನ್ನನ್ನೇ ನೋಡುತ್ತಿರುವ ಭಕ್ತರ ಮೇಲೆ ಅನುಗ್ರಹದೃಷ್ಟಿಯನ್ನು ಬೀರುತ್ತಿರುವೆ. ಆದರೆ '**ತುಲ್ಯಶೀಲವಯೋವೃತ್ತಂ**' ಎಂಬಂತೆ ನಿನಗೆ ಪೂರ್ಣವಾಗಿ ಅನುರೂಪಳಾಗಿರುವ ಈಕೆಯನ್ನು ನೋಡು.

ಸೀತಾ :– ಈಕೆಯು ಅತ್ಯಂತಪರಿಶುದ್ಧಳು. ಗರ್ಭವಾಸವನ್ನೇ ಮಾಡದೇ ಹುಟ್ಟಿದ ಪವಿತ್ರಳು. ಭೂದೇವಿಯಿಂದ ಹೊರಹೊಮ್ಮಿದ ಹೊನ್ನಿನ ಕುಡಿ. ಹಿರಣ್ಯವರ್ಣೆ. **ಮಮ ಸುತಾ :–** ದೇಹಾಭಿಮಾನವನ್ನು ತೊರೆದ ಮಹಾಯೋಗಿಯಾದ ನನ್ನಿಂದ ಪೋಷಿಸಲ್ಪಟ್ಟವಳು. '**ಜನಕಾನಾಂ ಕುಲೇ ಕೀರ್ತಿಮಾಹರಿಷ್ಯತಿ ಮೇ ಸುತಾ**' ಎಂಬಂತೆ ನನ್ನ ವಂಶಕ್ಕೆ ಕೀರ್ತಿ ತರುತ್ತಾಳೆ. ಈಕೆ ನಿನ್ನೊಡನೆ ಎಲ್ಲ ಧರ್ಮಗಳಲ್ಲಿಯೂ ಒಂದಾಗಿ ಸಹಧರ್ಮಚಾರಿಣಿಯಾಗುತ್ತಾಳೆ. ಶರಣಾಗತರನ್ನು ನಾನು ಎಂದಿಗೂ ಬಿಡುವುದಿಲ್ಲ. 'ನ ತ್ಯಜೇಯಂ' 'ಏತದ್ವ್ರತಂ ಮಮ' ಎಂಬುದು ನಿನ್ನ ವ್ರತ. ಅಂತೆಯೇ ಇವಳು '**ಭವೇಯಂ ಶರಣಂ ಹಿ ವಃ**' '**ನ ಕಶ್ಚಿನ್ನಾಪರಾಧ್ಯತಿ**' '**ಅಲಮೇಷಾ**' '**ಕ್ಷಾನ್ತಿಸ್ತವಾಕಸ್ಮಿಕಂ**' ಎಂಬಂತೆ ಶರಣಾಗತಸಂರಕ್ಷಣವ್ರತದಲ್ಲೂ ನಿನ್ನ ಸಹಧರ್ಮಚಾರಿಣಿಯಾಗಿರುವ ಮಹಾಲಕ್ಷ್ಮಿ ಈಕೆ. ವಾಸ್ತವವಾಗಿ ನಿನ್ನನ್ನು ಎಂದಿಗೂ ಅಗಲದ (**ನ ಜೀವೇಯಂ ಕ್ಷಣಮಪಿ**) ನಿತ್ಯಯೋಗವುಳ್ಳ ದೇವದೇವಿಯೇ ಈಕೆ.

3) **ಪ್ರತೀಚ್ಛ ಚೈನಾಂ :–** ಒದಗಿಬಂದಿರುವ ಲಕ್ಷ್ಮಿಯನ್ನು ದೂರ ಮಾಡಬಾರದು.

4) **ಭದ್ರಂ ತೇ :–** ದಿವ್ಯದಂಪತಿಗಳಿಗೆ ನಿತ್ಯಮಂಗಳಾಶಾಸನ.

(ಮುಂದುವರಿಯುವುದು)

License No. WPP-13 Licensed to Post without pre-payment of postage
Posted at Thayagaraja Nagar Post Office

Reg. No. K.R.N.U. 86, BHARATHA DARSHANA R.N. 13245/57



Edited by : "Viswamitra", Printed & Published by
K. S. Kowshik at Bharatha Darshana Press, Bangalore - 560 028.